ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ನಂ—೧೦

ಶ್ರೀ ವ್ಯಾಸಮಹರ್ಷಿಪ್ರಣೀತಂ

ಶ್ರೀ ಕಾಲಿಕಾಪುರಾಣಂ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದವಿವರಣೆಗಳೊಡನೆ)

ಎರಡನೆಯ ಭಾಗ

(೩೦—೫೨ ಅಧ್ಯಾಯಗಳು)

ಅನುವಾದಕ:

ಹಾಸನದ ಪಂಡಿತ್ ವೆಂಕಟರಾವ್

ಮೈಸೂರು

ಶ್ರೀ ಬಸವೇಶ್ವರ ಎಲೆಕ್ಟ್ರಿಕ್ ಪ್ರೆಸ್

೧೯೪೪

ಪೀಠಿಕೆ

ಪ್ರಪಂಚಸೃಷ್ಟಿಕ್ರಮವನ್ನು ವಿವರಿಸುವುದು ಪುರಾಣಗಳ ಪಂಚಲಕ್ಷಣಗಳಲ್ಲಿ ಒಂದಾಗಿದೆ. ಸೃಷ್ಟಿಗೆ ಪೂರ್ವದಲ್ಲಿ ಯಾವ ಸ್ಥಿತಿ ಇದ್ದಿತೆಂದೂ, ಪರಬ್ರಹ್ಮವಸ್ತು ಒಂದು ಹೊರತು ಮತ್ತೇನೂ ಇರಲಿಲ್ಲವೆಂದೂ, ನಾಮರೂಪಭೇದಗಳಿಲ್ಲದ ಆ ಬ್ರಹ್ಮನಿಂದ ಕ್ರಮಕ್ರಮವಾಗಿ ಸೂಕ್ಷ್ಮತತ್ವಗಳೂ, ಬಳಿಕ ಅವುಗಳಿಂದ ಸ್ಥೂಲವಾದ ಪಂಚಭೂತಗಳೂ, ಅವುಗಳಿಂದ ಚರಾಚರಾತ್ಮಕವಾದ ಈ ಪ್ರಪಂಚವೂ ಹೇಗೆ ಉತ್ಪನ್ನವಾಯಿತೆಂದು ವೇದಗಳಲ್ಲಿಯೂ, ಉಪನಿಷತ್ತುಗಳಲ್ಲಿಯೂ ಸಂಗ್ರಹರೂಪವಾಗಿ ಹೇಳಿರುವುದನ್ನು ಪುರಾಣಗಳಲ್ಲಿ ವಿಸ್ತಾರವಾಗಿ ವಿವರಿಸಿರುವುದು. ಋಗ್ವೇದದ **ನಾಸಾದಾಸೀನ್ನೋಸದಾಸೀತ್ತದಾನೀಂ** ಎಂಬ ಸೂಕ್ತವೂ, ತೈತ್ತಿರೀಯ ಉಪನಿಷತ್ತಿನ **ಅಸದ್ವಾ ಇದಮಗ್ರ ಆಸೀತ್ । ತತೋ ವೈ ಸದಜಾಯತ** ಎಂಬ ವಾಕ್ಯಗಳೂ ಸೃಷ್ಟಿಗೆ ಪೂರ್ವದಲ್ಲಿದ್ದ ಸ್ಥಿತಿಯನ್ನು ವಿವರಿಸುವವು. ಬಳಿಕ, **ಆತ್ಮನ ಆಕಾಶಃ ಸಂಭೂತಃ । ಆಕಾಶಾದ್ವಾಯುಃ । ವಾಯೋರಗ್ನಿಃ । ಆಗ್ನೇರಾಪಃ । ಅದ್ಭ್ಯಃ ಪೃಥಿವೀ** ಎಂದು ಪರಮಾತ್ಮನಿಂದ ಪಂಚಭೂತಗಳು ಉತ್ಪತ್ತಿಯಾದ ವಿಧಾನವು ಉಪನಿಷತ್ತಿನಲ್ಲಿಯೇ ಹೇಳಿರುವುದು. ಈ ಪ್ರಪಂಚ ಸೃಷ್ಟಿಕ್ರಮವನ್ನು ತಿಳಿಯುವುದರಿಂದ ಪರಬ್ರಹ್ಮಸ್ವರೂಪವನ್ನು ತಿಳಿಯಲು ಬಹುಮಟ್ಟಿಗೆ ಸಹಾಯವಾಗುವುದು. ಪರಬ್ರಹ್ಮಸ್ವರೂಪವನ್ನು ತಿಳಿಯುವುದರಿಂದ ಸಮಸ್ತಭೇದಭಾವಗಳೂ ಹೋಗಿ ಪರಬ್ರಹ್ಮನಲ್ಲಿ ಐಕ್ಯನಾಗಿ ಪರಮಪದಪ್ರಾಪ್ತಿಯಾಗಿ ಬ್ರಹ್ಮಾನಂದವನ್ನು ಪುರುಷನು ಅನುಭವಿಸುವನೆಂದು ಆ ತೈತ್ತಿರೀಯ ಉಪನಿಷತ್ತಿನಲ್ಲಿ ಹೇಳಿದೆ. **ಸತ್ಯಂ ಜ್ಞಾನಮನಂತಂ ಬ್ರಹ್ಮ । ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ । ಸೋಽಶ್ನುತೇ ಸರ್ವಾನ್ ಕಾಮಾನ್ ಸಹ । ಬ್ರಹ್ಮಣಾ ವಿಪಶ್ಚಿತೇತಿ** ಸರ್ವವ್ಯಾಪಕನಾಗಿಯೂ, ಸತ್ಯಜ್ಞಾನಸುಖಸ್ವರೂಪನಾಗಿಯೂ ಇರುವ ಅತಿ ರಹಸ್ಯವಾದ ಪರಬ್ರಹ್ಮನಸ್ವರೂಪವನ್ನು ತಿಳಿದವನು ಬ್ರಹ್ಮನಲ್ಲೇ ಐಕ್ಯವಾಗಿ ಸಮಸ್ತಸುಖಗಳನ್ನೂ ಅನುಭವಿಸುವನೆಂದು ಈ ವಾಕ್ಯಗಳ ಸೂಕ್ಷ್ಮಾರ್ಥವು.

ಪಂಚಭೂತಗಳ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವುದು ಅಪ್ರಕೃತವೆನಿಸಲಾರದು. ಪಂಚಭೂತಗಳೆಂದರೆ, ಆಕಾಶ, ವಾಯು, ಅಗ್ನಿ, ಜಲ,

ಪೃಥ್ವೀ ಎಂಬ ಐದು ವಸ್ತುಗಳು. ನಮ್ಮ ದೃಷ್ಟಿಗೆ ಗೋಚರವಾಗುವ ಈ ಐದು ವಸ್ತುಗಳೂ ಈ ಪಂಚಭೂತಗಳನ್ನು ಸ್ವಲ್ಪಮಟ್ಟಿಗೆ ತಿಳಿಸುವುವಾದರೂ ಸೃಷ್ಟಿಕ್ರಮದಲ್ಲಿ ಅವುಗಳಿಗೆ ಸ್ವಲ್ಪಮಟ್ಟಿಗೆ ಬೇರೆ ಅರ್ಥವನ್ನು ಕಲ್ಪಿಸಬೇಕು. ಎಂದರೆ ಈ ಐದು ವಸ್ತುಗಳಿಗೆ ಇರುವ ಗುಣಗಳೇ ಪಂಚಭೂತಗಳೆನಿಸುವುವು. ಪೃಥಿವಿ ಎಂದರೆ ಗಟ್ಟಿಯಾದ ಘನಪದಾರ್ಥ; ಜಲವೆಂದರೆ ದ್ರವಪದಾರ್ಥ; ಅಗ್ನಿಯೆಂದರೆ ತೇಜಸ್ಸು; ವಾಯುವೆಂದರೆ ದ್ರವಕ್ಕಿಂತಲೂ ಸೂಕ್ಷ್ಮವಾಗಿ ಹೊಗೆಯಂತಿರುವ ವಸ್ತುವಿನ ಸೂಕ್ಷ್ಮರೂಪವು; ಆಕಾಶವೆಂದರೆ ಅದಕ್ಕಿಂತಲೂ ಸೂಕ್ಷ್ಮವಾಗಿರುವ ವಸ್ತುವು. ಈ ಐದು ವಸ್ತುಗಳೂ ಐದು ಪ್ರತ್ಯೇಕವಾದ ಸ್ಥಿತ್ಯಂತರಗಳು. ಒಂದೇ ವಸ್ತುವು ಈ ಐದು ರೂಪಗಳಲ್ಲಿಯೂ ಇರಬಲ್ಲುದು.

ವಿಜ್ಞಾನಿಗಳು, ಸಮಸ್ತವಸ್ತುಗಳೂ ಪೃಥಿವಿ, ನೀರು, ವಾಯುಗಳೆಂಬ (solid, liquid and gas) ಸ್ಥಿತಿಗಳಲ್ಲಿ ಇರಬಲ್ಲವೆಂದು ಹೇಳುವರು. ಅಗ್ನಿ ಅಥವಾ ತೇಜಸ್ಸನ್ನು ಶಕ್ತಿಯೆಂದು (energy) ಹೇಳುವರು. ಆದರೆ ಈಜೆಗೆ ಅವರು ಮಾಡಿರುವ ಪರಿಶೋಧನೆಗಳಿಂದ ವಸ್ತುಗಳಿಗೆ ಮೂರು ಸ್ಥಿತಿಗಳಿಲ್ಲದೆ ಇನ್ನೂ ಕೆಲವು ಸ್ಥಿತಿಗಳುಂಟೆಂದು ಸಿದ್ಧಾಂತಮಾಡಿರುವರು. The matter can exist not only as solid, liquid and gas, but in other states as well, only the matter will lose its physical properties as matter in other states. What we call energy is merely matter in different subtle forms. In other words matter and energy are one and the same thing i.e. matter can become energy and energy can exist as physical matter. The atom, the smallest physical division of the matter was considered as the basic element from which the Universe was created but the reseach by the modern scientists has shattered all this belief. It is now firmly established that all the different elements have been composed from one

single element and only the structure in their atoms make them different elements. ಈ ಕಾರಣಗಳಿಂದ ಒಂದೇ ವಸ್ತು ವಿನಿಂದ ಸಮಸ್ತ ಪ್ರಪಂಚವೂ ಸೃಷ್ಟಿಸಲ್ಪಟ್ಟಿರುವುದೆಂದೂ ಆ ವಸ್ತುವೇ ಸರ್ವಶಕ್ತಿ ಯಿಂದ ಕೂಡಿರುವ ಪ್ರರಬ್ರಹ್ಮವಸ್ತುವೆಂದೂ ವಿಜ್ಞಾನರೀತಿಯಿಂದಲೂ ನಿರ್ಧರಿಸಲು ಸಾಕಾದಷ್ಟು ಕಾರಣಗಳು ಇರುವವು.

ಪುರಾಣಗಳ ಮತ್ತೊಂದು ವೈಶಿಷ್ಟ್ಯವೇನೆಂದರೆ, ಮನುಷ್ಯರಲ್ಲಿ ಅವರವರ ತಿಳುವಳಿಕೆಯ ಅಂತಸ್ತಿಗೆ ತಕ್ಕಂತೆ ನಾನಾ ವಿಷಯಗಳು ಹೇಳಲ್ಪಟ್ಟಿರುವವು. ಸಾಧಾರಣ ಜನರಿಗೆ ಮನರಂಜಕವಾದ ಕಥೆಗಳೂ, ದೈವಭಕ್ತರಿಗೆ ಪರಮೇಶ್ವರನಾದ ಭಗವಂತನನ್ನು ಆರಾಧಿಸುವ ಕ್ರಮಗಳೂ, ತತ್ವಜಿಜ್ಞಾಸುಗಳಿಗೆ ಗಹನವಾದ ತತ್ವ ನಿರೂಪಣೆಯೂ, ಜನರು ಆಚರಿಸಬೇಕಾದ ಸದಾಚಾರ ಸದ್ವರ್ತನೆಗಳೂ ಸಹ ನಾನಾ ವಿಧರೀತಿಯಿಂದ ಉಕ್ತವಾಗಿರುವವು. ಇಂತಹ ಪುರಾಣಗಳನ್ನು ಓದಿ, ಮನನಮಾಡುವುದರಿಂದ ಮನುಷ್ಯರ ಬುದ್ಧಿಯು ವಿಕಸಿತವಾಗಿ ಅವರು ಸದಾಚಾರಪ್ರವರ್ತಕರೂ. ದೈವಭಕ್ತರೂ ಆಗುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಈ ಗ್ರಂಥಗಳೆಲ್ಲವೂ ಸಂಸ್ಕೃತಭಾಷೆಯಲ್ಲಿರುವವು. ಈ ಕಾಲದಲ್ಲಿ ಸಂಸ್ಕೃತಭಾಷೆಯನ್ನು ಬಲ್ಲವರು ಕೇವಲ ವಿರಳವಾಗಿರುವುದರಿಂದ ಈ ಗ್ರಂಥಗಳ ಉಪಯೋಗವು ಸಾಮಾನ್ಯಜನರಿಗೆ ಲಭಿಸುತ್ತಿಲ್ಲ. ಈ ಕೊರತೆಯನ್ನು ನಿವಾರಣೆಮಾಡುವುದಕ್ಕಾಗಿ ಪ್ರಜಾವತ್ಸಲರೂ, ದೈವ ಭಕ್ತರೂ ಆದ ನಮ್ಮನ್ನಾಳುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಈ ಉತ್ಕೃಷ್ಟ ಗ್ರಂಥಗಳನ್ನು ಓದಿ ಜನರು ಸತ್ಪ್ರಜೆಗಳಾಗಲೆಂಬ ಘನವಾದ ಉದ್ದೇಶದಿಂದ ಈ ಗ್ರಂಥಗಳನ್ನು ಕನ್ನಡದಲ್ಲಿ ಪರಿವರ್ತಿಸಿ ಪ್ರಜಾವರ್ಗಕ್ಕೆ ಸುಲಭವಾಗಿ ದೊರೆಯುವಂತೆ ಮುದ್ರಣ ಮಾಡಿಸಲು ಅಪ್ಪಣೆ ಮಾಡಿರುವ ಮೇರೆಗೆ ಈ ಗ್ರಂಥವನ್ನು ಯಥಾಮತಿ ಬರೆದಿರುತ್ತೇನೆ ನಾಲ್ಕು ಭಾಗಗಳಾಗಿ ವಿಂಗಡಿಸಿರುವ ಈ ಗ್ರಂಥದಲ್ಲಿ ಮೊದಲಿನೆರಡು ಭಾಗಗಳಲ್ಲಿ ಜಗನ್ಮಾತೆಯು ಸತೀ ಮತ್ತು ಪಾರ್ವತೀರೂಪಗಳನ್ನು ಕೈಕೊಂಡು ಜಗತ್ಕಲ್ಯಾಣಕ್ಕಾಗಿಸಗಿದ ಅದ್ಭುತ ಚರಿತ್ರೆಗಳೂ, ಉಪಾಖ್ಯಾನಗಳೂ, ಮೂರು ಮತ್ತು ನಾಲ್ಕನೆಯ ಭಾಗಗಳಲ್ಲಿ ಆ ಜಗನ್ಮಾತೆಯನ್ನು ನಾನಾರೂಪದಿಂದ ಆರಾಧಿಸುವ ಕ್ರಮಗಳೂ, ಮಂತ್ರಗಳೂ, ರಾಜನೀತಿಗಳೂ ವಿಶೇಷರೀತಿಯಿಂದ ವರ್ಣಿಸಲ್ಪಟ್ಟಿರುವವು. ಇವರಲ್ಲಿರುವ ಲೋಪದೋಷ

ಗಳನ್ನು ಗುಣಗ್ರಾಹಿಗಳಾದ ಸಜ್ಜನರು ಮನ್ನಿಸಬೇಕಾಗಿ ವಿನಯದಿಂದ ಪ್ರಾರ್ಥಿಸುವೆನು.

ಮೈಸೂರು
ತಾರಣಸಂವತ್ಸರದ ಜ್ಯೇಷ್ಠ ಶುದ್ಧ ಸಪ್ತಮಿ
28—5—44

ಹಾಸನದ ಪಂಡಿತ್ ವೆಂಕಟರಾವ್.

ಶ್ರೀ ಕಾಲಿಕಾಪುರಾಣದಲ್ಲಿ ಎರಡನೆಯ ಭಾಗದ

ವಿಷಯಾನುಕ್ರಮಣಿಕೆ.

ಪುಟ ಸಂಖ್ಯೆ

ಮೂವತ್ತನೆಯ ಅಧ್ಯಾಯ—

ಪರಮೇಶ್ವರನ ಅನೇಕರೂಪವುಳ್ಳ ಪ್ರಮಥಗಣಗಳ ಉತ್ಪತ್ತಿಯು—ತನ್ನ ಶರೀರತ್ಯಾಗಮಾಡೆಂದು ಯಜ್ಞವರಾಹನಿಗೆ ಶಿವನು ಹೇಳಿದುದು—ಭೂದೇವಿಯೊಡನೆ ಕ್ರೀಡಿಸುತ್ತಿರುವ ಯಜ್ಞವರಾಹನಿಗೆ ಮೂವರು ಪುತ್ರರು ಜನಿಸುವುದು—ಈ ಪುತ್ರರಿಂದ ಜಗತ್ತಿಗೆ ಉಂಟಾದ ಬಾಧೆಯು. 1-9

ಮೂವತ್ತೊಂದನೆಯ ಅಧ್ಯಾಯ—

ಬ್ರಹ್ಮ ವಿಷ್ಣು ಮೊದಲಾದ ಸಮಸ್ತ ವೇದತೆಗಳ ತೇಜಸ್ಸನ್ನು ಧರಿಸಿ ಶಂಕರನು ಶರಭರೂಪವನ್ನು ಕೈಗೊಂಡು ವರಾಹನೊಡನೆ ಯುದ್ಧ ಮಾಡುವುದು—ಯುದ್ಧವರ್ಣನೆ—ಯು ದ್ಧ ಮಾ ಡು ತ್ತಿ ರು ವ ಶರಭನ ಶರೀರದಿಂದ ಅನೇಕ ರೂಪಗಳನ್ನು ಧರಿಸಿದ ಗಣಗಳ ಉತ್ಪತ್ತಿ—ಶರಭನು ವರಾಹನನ್ನೂ ಅವನ ಪುತ್ರರನ್ನೂ ಸಂಹರಿಸುವುದು. 10-41

ಮೂವತ್ತೆರಡನೆಯ ಅಧ್ಯಾಯ—

ಯಜ್ಞವರಾಹನ ಶರೀರದಿಂದ ಯಜ್ಞೋತ್ಪತ್ತಿ—ವರಾಹಪುತ್ರರ ಶರೀರದಿಂದ ದಕ್ಷಿಣಾಗ್ನಿ, ಗಾರ್ಹಪತ್ಯ, ಅಹವನೀಯವೆಂಬ ಮೂರು ಯಜ್ಞಾಗ್ನಿಗಳ ಉತ್ಪತ್ತಿ. 52-61

ಮೂವತ್ತಮೂರನೆಯ ಅಧ್ಯಾಯ—

ಕಪಿಲಋಷಿಯ ಶಾಪದಿಂದ ಖಿನ್ನನಾದ ಸ್ವಾಯಂಭುವಮನುವು ಗಂಗಾದ್ವಾರದ ಸಮೀಪದಲ್ಲಿರುವ ಬದರಿಯಲ್ಲಿ ತಪಸ್ಸನ್ನು ಮಾಡುತ್ತಿರುವುದು—ಈ ಸ್ವಾಯಂಭುವಮನುವು ಸಂಧ್ಯಾರ್ಘ್ಯವನ್ನು

ಪುಟ ಸಂಖ್ಯೆ

ಕೊಡುತ್ತಿರುವಾಗ ಇವನ ಹಸ್ತಜಲದಲ್ಲಿ ವಿಷ್ಣುವು ಮತ್ಸ್ಯಾವತಾರವನ್ನು ಕೈಕೊಂಡು ಪ್ರಾದುರ್ಭವಿಸುವುದು. 62-73

ಮೂವತ್ತನಾಲ್ಕನೆಯ ಅಧ್ಯಾಯ—

ಪ್ರಳಯಕಾಲದಲ್ಲಿ ಸ್ವಾಯಂಭುವಮನುವನ್ನೂ, ವೇದಗಳನ್ನೂ ಸಹ ಮತ್ಸ್ಯಾವತಾರಿಯಾದ ಭಗವಂತನು ರಕ್ಷಿಸಿದ ಕಥಾವಿವರಣೆಯು. 74-89

ಮೂವತ್ತೈದನೆಯ ಅಧ್ಯಾಯ—

ಪ್ರಲಯಜಲದಲ್ಲಿ ಮುಳುಗಿಹೋದ ಭೂಮಿಯನ್ನು ಭಗವಂತನು ಕೂರ್ಮರೂಪದಿಂದ ಮೇಲಕ್ಕೆತ್ತಿ ತಂದು, ಪುನಃ ನರನಾರಾಯಣರೂಪದಿಂದ ಭೂಮಿಯಲ್ಲಿ ಪೂರ್ವದಂತೆ ಸೃಷ್ಟಿಮಾಡಿದ ವಿವರಣೆಯು. 85-106

ಮೂವತ್ತಾರನೆಯ ಅಧ್ಯಾಯ—

ಬ್ರಹ್ಮನ ಮಾತಿನಂತೆ ಶಿವನು ತನ್ನ ಶರಭಶರೀರವನ್ನು ತ್ಯಜಿಸುವುದು—ಶರಭನ ಎಂಟು ಪಾದಗಳೂ ಅಷ್ಟಮೂರ್ತಿಗಳಲ್ಲಿ ಲಯವಾಗುವುದು—ಶರಭನ ಮಧ್ಯದೇಹದಿಂದ ಕಪಾಲಿಭೈರವನ ಉತ್ಪತ್ತಿಯು—ಕಪಾಲಿಭೈರವನನ್ನು ಆರಾಧಿಸುವ ಕ್ರಮ. 107-112

ಮೂವತ್ತೇಳನೆಯ ಅಧ್ಯಾಯ—

ವರಾಹಪುತ್ರನಾದ ನರಕಾಸುರನ ಚರಿತ್ರೆ—ಇವನ ಉತ್ಪತ್ತಿಕಾಲದಲ್ಲಿ ಗರ್ಭವನ್ನು ಧರಿಸಿದ್ದ ಭೂದೇವಿಯು ಗರ್ಭಪೀಡೆಯ ನಿವಾರಣೆಗಾಗಿ ವಿಷ್ಣುವನ್ನು ಸ್ತುತಿಸುವುದು—ವಿಷ್ಣುವು ತನ್ನ ಶಂಖಸ್ಪರ್ಶದಿಂದ ಭೂದೇವಿಯ ಗರ್ಭಪೀಡೆಯನ್ನು ಪರಿಹರಿಸಿ, ಅವಳನ್ನು ಸಂತೈಸುವುದು. 113-121

ಮೂವತ್ತೆಂಟನೆಯ ಅಧ್ಯಾಯ—

ವಿದೇಹರಾಜನು ಯಜ್ಞಾರ್ಥವಾಗಿ ಭೂಮಿಯನ್ನು ಅಗಿದು ಶೋಧನೆ ಮಾಡುತ್ತಿರುವಾಗ ಭೂಮಿಯಲ್ಲಿ ಸೀತೆಯ ಉತ್ಪತ್ತಿಯು—ವಿದೇಹರಾಜನ ಮತ್ತು ಭೂದೇವಿಯರ ಸಂಭಾಷಣೆ—ಸೀತೆಯು

ಪುಟ ಸಂಖ್ಯೆ

ಸಿಕ್ಕಿದ ಸ್ಥಳದಲ್ಲಿಯೇ ಪುತ್ರನೊಬ್ಬನೂ ದೊರೆಯುವನು. ಅವನನ್ನು ಬಾಲ್ಯದಲ್ಲಿ ಸಂರಕ್ಷಿಸಬೇಕೆಂದೂ ಬಳಿಕ ತಾನೇ ಅವನನ್ನು ಸಲಹುವನೆಂದೂ ಭೂದೇವಿಯು ಜನಕರಾಜನನ್ನು ಕೇಳಿಕೊಳ್ಳುವುದು—ನರಕಾಸುರನ ಉತ್ಪತ್ತಿ ಕಥನವು—ಜನಕರಾಜನ ಗೃಹದಲ್ಲಿ ಅವನು ಬೆಳೆಯುವುದು. 125-137

ಮೂವತ್ತೊಂಭತ್ತನೆಯ ಅಧ್ಯಾಯ—

ಜನಕರಾಜನ ಅರಮನೆಯಲ್ಲಿ ನರಕನು ವೃದ್ಧಿಗೊಂಡ ವಿಚಾರ—ಗಂಗೆಯಲ್ಲಿ ನರಕನಿಗೆ ಅವನ ಉತ್ಪತ್ತಿ ವಿಷಯವನ್ನು ಭೂದೇವಿಯು ತಿಳಿಸುವುದು—ತಂದೆಯಾದ ವಿಷ್ಣುವಿನ ಮಾತಿನಂತೆ ನರಕನು ಪ್ರಾಗ್ಜ್ಯೋತಿಷಪುರಕ್ಕೆ ರಾಜನಾಗಿ ಅಲ್ಲಿ ರಾಜ್ಯಭಾರ ಮಾಡುವುದು—ಕಾಮಾಖ್ಯಾದೇವಿಯ ಪೂಜೆಯನ್ನು ತ್ಯಜಿಸಿ ಇತರ ದೇವತೆಯನ್ನು ಪೂಜಿಸಿದ್ದಾದರೆ ನಿನಗೆ ಮರಣವುಂಟಾಗುವುದೆಂದು ವಿಷ್ಣುವು ನರಕನಿಗೆ ಹೇಳುವುದು—ಅದರಂತೆ ನಡೆಯುವೆನೆಂದು ಹೇಳಿ ನರಕನು ರಾಜ್ಯಭಾರಮಾಡುತ್ತಿರುವುದು. 138-172

ನಲವತ್ತನೆಯ ಅಧ್ಯಾಯ—

ನರಕನಿಗೂ ಬಾಣಾಸುರನಿಗೂ ಸ್ನೇಹವಾಗುವುದು—ವಿಷ್ಣುವಿನ ಕೈಯಿಂದ ಮರಣವಾಗುವುದೆಂದು ನರಕನಿಗೆ ಶಾಪವುಂಟಾಗುವುದು—ಬಾಣಾಸುರನ ಮಾತಿನಂತೆ ನರಕನು ಬ್ರಹ್ಮನನ್ನು ತಪಸ್ಸಿನಿಂದ ಆರಾಧಿಸಿ ವರಗಳನ್ನು ಪಡೆಯುವುದು. 173-194

ನಲವತ್ತೊಂದನೆಯ ಅಧ್ಯಾಯ—

ದೈತ್ಯಸ್ವಭಾವವನ್ನಾಶ್ರಯಿಸಿ ದ್ವಿಜರನ್ನು ಹಿಂಸಿಸುತ್ತಿರುವ ನರಕನನ್ನು ಕೃಷ್ಣನು ಸಂಹಾರಮಾಡಿದ ವಿವರವು. 195-223

ನಲವತ್ತೆರಡನೆಯ ಅಧ್ಯಾಯ—

ಪರ್ವತರಾಜನಾದ ಹಿಮವಂತನಿಂದ ಮೇನಕೆಯಲ್ಲಿ ದೇವಿಯು ಅಪ

ಪುಟ ಸಂಖ್ಯೆ

ತರಿಸಿದ ವರ್ಣನೆಯು—ಹಿಮವತ್ಪುತ್ರಿಯಾಗಿ ಅವತರಿಸಿದ ದೇವಿಗೆ ಕಾಲೀ ಎಂದು ಹೆಸರು ಉಂಟಾದ ಬಗೆ. 224-243

ನಲವತ್ತಮೂರನೆಯ ಅಧ್ಯಾಯ—

ಹಿಮವತ್ಪರ್ವತಕ್ಕೆ ಶಿವನು ತಪಸ್ಸಿಗಾಗಿ ಹೋಗುವುದು—ನಾರದ ಮುನಿಯ ಮಾತಿನಂತೆ ಹಿಮವಂತನು ತನ್ನ ಪುತ್ರಿಯಾದ ಕಾಲಿಯನ್ನು ತಪಸ್ಸನ್ನಾಚರಿಸುತ್ತಿರುವ ಶಿವನ ಶಿಶ್ರೂಷೆಗಾಗಿ ನಿಯಮಿಸುವುದು. 244-255

ನಲವತ್ತನಾಲ್ಕನೆಯ ಅಧ್ಯಾಯ—

ತಾರಕಾಸುರನ ಬಾಧೆಯನ್ನು ತಾಳಲಾರದೆ ದೇವತೆಗಳು ಬ್ರಹ್ಮನಲ್ಲಿ ಮೊರೆಯಿಟ್ಟದುದು—ಬ್ರಹ್ಮನು ಅವರನ್ನು ಸಂತೈಸಿ, ಶಿವನ ರೇತಸ್ಸಿನಿಂದ ಕಾಲಿಯಲ್ಲಿ ಜನಿಸಿದ ಶಿವಪುತ್ರನೇ ಈ ತಾರಕಾಸುರನನ್ನು ಸಂಹರಿಸಲು ಸಮರ್ಥನೆಂದು ಹೇಳುವುದು—ಶಿವನು ಕಾಲಿಯಲ್ಲಿ ಅನುರುಕ್ತನಾಗುವಂತೆ ಮೋಹಗೊಳಿಸಲು ಕಾಮನ ಪ್ರಯತ್ನವು—ಕೋಪಗೊಂಡ ಶಿವನ ಫಾಲನೇತ್ರಾಗ್ನಿಯಿಂದ ಕಾಮದಹನವು—ಶಿವನ ವಿಷಯವಾಗಿ ಕಾಲಿಯು ಚಿಂತಿಸುತ್ತಿರುವುದು. 256-285.

ನಲವತ್ತೈದನೆಯ ಅಧ್ಯಾಯ—

ಹರನನ್ನು ಪತಿಯಾಗಿ ಪಡೆಯಬೇಕೆಂದು ಕಾಲಿಯು ತಪಸ್ಸನ್ನಾಚರಿಸುವುದು—ಹರನು ಬ್ರಹ್ಮಚಾರಿವೇಷದಿಂದ ಕಾಲಿಗೆ ಗೋಚರನಾಗಿ ಅವಳೊಡನೆ ನಡೆಸುವ ಸಂವಾದ—ಕಾಲಿಗೆ ತನ್ನಲ್ಲಿ ದೃಢವಾದ ಅನುರಾಗವಿರುವುದನ್ನು ತಿಳಿದು ಹರನು ಅವಳಿಗೆ ಪ್ರತ್ಯಕ್ಷನಾಗುವುದು. 286-310

ನಲವತ್ತಾರನೆಯ ಅಧ್ಯಾಯ—

ಹರನಿಗೂ ಕಾಲಿಗೂ ಮಹಾಸಂಭ್ರಮದಿಂದ ವಿವಾಹವು ನೆರವೇರಿದ ವರ್ಣನೆಯು. 311-324

ಪುಟ ಸಂಖ್ಯೆ

ನಲವತ್ತೇಳನೆಯ ಅಧ್ಯಾಯ—

ಸಗರರಾಜನಿಗೂ ಔರ್ವಮುನಿಗೂ ನಡೆದ ಸಂಭಾಷಣೆ—ಕಾಲೀ ಎಂದು ಹರನು ಸಂಬೋಧಿಸಿದುದರಿಂದ ಕೋಪಾವಿಷ್ಟಳಾಗಿ ಕಾಲಿಯು ಗೌರವರ್ಣಪ್ರಾಪ್ತಿಗಾಗಿ ತಪಸ್ಸನ್ನಾಚರಿಸುವುದು—ಕಾಲಿಯು ಶಿವನನ್ನು ಸ್ತೋತ್ರಮಾಡುವುದು—ಶಿವನ ಮಾತಿನಂತೆ ಕಾಲಿಯು ಗಂಗೆಯಲ್ಲಿ ಸ್ನಾನಮಾಡಿ ಗೌರವರ್ಣದ ಶರೀರವನ್ನು ಪಡೆಯುವುದು—ಹರನ ಅರ್ಧಶರೀರದಲ್ಲಿ ಗೌರಿಯು ಪ್ರವೇಶಿಸಿ ಅರ್ಧಾಂಗಿಯಾಗುವುದು—ಹರನ ಅರ್ಧನಾರೀಶ್ವರ ರೂಪವರ್ಣನೆಯು. 325-365

ನಲವತ್ತೆಂಟನೆಯ ಅಧ್ಯಾಯ—

ಕುಮಾರಕಾರ್ತಿಕೇಯರ ಉತ್ಪತ್ತಿಕಥನವು. 366-384

ನಲವತ್ತೊಂಭತ್ತನೆಯ ಅಧ್ಯಾಯ—

ಗಣನಾಯಕರಾದ ಭೃಂಗಿಮಹಾಕಾಲರನ್ನು ಗೌರಿಯು ಶಪಿಸಿದ ವಿಚಾರ—ಭೃಂಗಿಮಹಾಕಾಲರು ಗೌರೀಹರರಿಗೆ ಪ್ರತಿಶಾಪವನ್ನು ಕೊಡುವುದು—ಹರನು ಪೌಷ್ಯರಾಜನ ಪುತ್ರನಾಗಿ ಚಂದ್ರಶೇಖರನೆಂದು ಜನಿಸುವುದು. 385-403

ಐವತ್ತನೆಯ ಅಧ್ಯಾಯ—

ಭೋಗವತೀಪುರಿಯಲ್ಲಿ ರಾಜ್ಯವಾಳುತ್ತಿರುವ ಇಕ್ಷ್ವಾಕುವಂಶದ ಕಕುತ್ಸ್ಥನೆಂಬ ರಾಜನ ಭಾರ್ಯೆಯಾದ ಮನೋನ್ಮಥಿನೀದೇವಿಯಲ್ಲಿ ಗೌರಿಯು ತಾರಾವತಿಯೆಂಬ ಹೆಸರಿನಿಂದ ಅವತರಿಸಿದ ವಿವರ—ತಾರಾವತಿಯ ಬಾಲ್ಯವರ್ಣನೆಯು—ತಾರಾವತಿಯು ಸ್ವಯಂವರದಲ್ಲಿ ಚಂದ್ರಶೇಖರರಾಜನನ್ನು ವರಿಸುವುದು—ವಿವಾಹವರ್ಣನೆ. 404-419

ಪುಟ ಸಂಖ್ಯೆ

ಐವತ್ತೊಂದನೆಯ ಅಧ್ಯಾಯ--

ದೃಷದ್ವತೀನದಿಯಲ್ಲಿ ಸ್ನಾನಮಾಡಲು ಬಂದ ತಾರಾವತಿಯನ್ನು ನೋಡಿ ಕಾಪ್ಯೋತನೆಂಬ ಮುನಿವರನು ಕಾಮಪರವಶನಾಗುವುದು —ಮುನಿಯ ಅಭಿಪ್ರಾಯವನ್ನು ತಿಳಿದು ತಾರಾವತಿಯು ತನ್ನ ಪಾತಿವ್ರತ್ಯರಕ್ಷಣೆಗಾಗಿ ಉಪಾಯವನ್ನು ಆಲೋಚಿಸಿ ತನ್ನ ತಂಗಿಯಾದ ಚಿತ್ರಾಂಗದೆಯನ್ನು ತನ್ನ ವೇಷಭೂಷಣಾದಿಗಳಿಂದ ಅಲಂಕರಿಸಿ ಕಾಪ್ಯೋತಮುನಿಯ ಬಳಿಗೆ ಕಳುಹಿಸುವುದು— ಕಾಪ್ಯೋತಮುನಿಯಿಂದ ಚಿತ್ರಾಂಗದೆಯಲ್ಲಿ ಈರ್ವರು ಪುತ್ರರು ಜನಿಸುವುದು—ಚಿತ್ರಾಂಗದೆಯು ಊರ್ವಶಿಯಲ್ಲಿ ಹೇಗೆ ಜನಿಸಿದಳೆಂಬ ಪೂರ್ವವೃತ್ತಾಂತವು—ಚಿತ್ರಾಂಗದೆಯ ಪುತ್ರರಿಗೆ ಕಾಪ್ಯೋತಮುನಿಯು ಜನ್ಮಸಂಸ್ಕಾರಾದಿಗಳನ್ನು ಮಾಡಿದ ವಿವರಣೆಯು. 420-435

ಐವತ್ತೆರಡನೆಯ ಅಧ್ಯಾಯ—

ತಾರಾವತಿಯು ಮತ್ತೊಮ್ಮೆ ಸ್ನಾನಮಾಡಲು ದೃಷದ್ವತೀನದಿಗೆ ಹೋಗಿರುವಾಗ ಕಾಪ್ಯೋತಮುನಿಯು ಅವಳನ್ನು ನೋಡಿ ಹಿಂದೆ ಮಾಡಿದ ವಂಚನೆಯನ್ನು ಚಿತ್ರಾಂಗದೆಯಿಂದ ತಿಳಿದು ತಾರಾವತಿಯನ್ನು ಶಪಿಸುವುದು—ಪ್ರಾಸಾದದಲ್ಲಿ ವಿಹರಿಸುತ್ತಿರುವ ತಾರಾವತಿಯನ್ನು ನೋಡಿ ಹರನು, ಭೃಂಗೀಮಹಾಕಾಲರ ಉತ್ಪತ್ತಿಗಾಗಿ ತಾರಾವತಿಯಲ್ಲಿ ಪ್ರವೇಶಿಸುವಂತೆ ಪಾರ್ವತಿಯನ್ನು ಪ್ರೇರಿಸುವುದು—ಕಾಪ್ಯೋತಮುನಿಯ ಶಾಪದಂತೆ ತಾರಾವತಿಯಲ್ಲಿ ಕಪಾಲವೇಷಧಾರಿಯಾದ ಹನರ ರತಿಕ್ರೀಡೆಯು—ಕಪಿಮುಖವುಳ್ಳ ಪುತ್ರರೀರ್ವರ ಜನನ—ಪಾತಿವ್ರತ್ಯಭಂಗವಾಯಿತೆಂದು ಶೋಕಿಸುತ್ತಿರುವ ಚಂದ್ರಶೇಖರತಾರಾವತಿಯರಿಗೆ, ಹರ ಪಾರ್ವತಿಯರಿಗೂ, ತಮಗೂ ಅಭೇದವೆಂಬುದನ್ನು ನಾರದ ಮುನಿಯು ಪ್ರತ್ಯಕ್ಷವಾಗಿ ದೃಷ್ಟಾಂತಪಡಿಸುವುದು. 436-466

॥ ಶ್ರೀಃ ॥

॥ ಅಥ ಶ್ರೀ ಕಾಲಿಕಾಪುರಾಣೇ ತ್ರಿಂಶೋಽಧ್ಯಾಯಃ ॥

॥ ಋಷಯ ಊಚುಃ ॥

ಯೇ ಸೃಷ್ಟಾಃ ಶಂಭುನಾ ಪೂರ್ವಂ ಭೂತಗ್ರಾಮಾಶ್ಚತುರ್ವಿಧಾಃ ।
ಕಿಮರ್ಥಂ ತೇ ಸಮುತ್ಪನ್ನಾಃ ಕಥಂ ವಾಽನೇಕರೂಪತಾ. ॥ ೧ ॥

ಶರೀರಮರ್ಧಂ ವಾರಾಹಮರ್ಧಂ ಪಂತಾವಲಂ ತಥಾ ।
ಸಿಂಹವ್ಯಾಘ್ರಶರೀರಾಶ್ಚ ಕೇಚಿತ್ಕೇಚಿದ್ಗಣಾಧಿಪಾಃ ॥ ೨ ॥

ಕಥಂ ತೇ ವಾ ಗಣಾಃ ಕ್ರೂರಾಃ ಕಿಂ ಭೋಗಾಸ್ತೇ ಮಹೌಜಸಃ ।
ಏತತ್ಸರ್ವಂ ವಯಂ ಶ್ರೋತುಮಿಚ್ಛಾಮೋ ದ್ವಿಜಸತ್ತಮ ॥ ೩ ॥

॥ ಮೂವತ್ತನೆಯ ಅಧ್ಯಾಯವು ॥

೧. ಋಷಿಗಳು ಕೇಳಿದರು:- ಓ ಮಾರ್ಕಂಡೇಯ ಮುನಿಯೆ! ಹಿಂದೆ ಶಂಕರನು ನಾಲ್ಕುಪ್ರಕಾರವಾಗಿ ಭೂತಗಣಗಳನ್ನು ಏತಕ್ಕಾಗಿ ಸೃಷ್ಟಿಸಿದನು? ಅವುಗಳಿಗೆ ಅನೇಕರೂಪಗಳು ಹೇಗೆ?

೨. ಹಂದಿಯಂತೆ ಅರ್ಧಶರೀರವುಳ್ಳವುಗಳೂ, ಆನೆಯಂತಿರುವ ಅರ್ಧಶರೀರವುಳ್ಳವುಗಳೂ, ಮತ್ತು ಸಿಂಹ ಹುಲಿಗಳಂತಿರುವ ಶರೀರವುಳ್ಳವುಗಳೂ ಆದ ಗಣಶ್ರೇಷ್ಠರೂ ಆ ಶಂಕರನಿಂದ ಜನಿಸಿರುವರು.

೩. ಹೀಗೆ ಈ ಕ್ರೂರವಾದ ಈ ಗಣಗಳು ಹೇಗೆ ಜನಿಸಿದರು? ಮತ್ತು ಮಹಾವೀರರಾದ ಈ ಗಣಗಳು ಎಂತಹ ಭೋಗವುಳ್ಳವು? ಓ ಬ್ರಾಹ್ಮಣೋತ್ತಮನಾದ ಮಾರ್ಕಂಡೇಯನೇ! ಇದೆಲ್ಲವನ್ನೂ ನಾವು ಕೇಳಲಿಚ್ಛಿಸುವೆವು.

॥ ಮಾರ್ಕಂಡೇಯ ಉವಾಚ ॥

ಶೃಣ್ವಂತು ಮುನಯಃ ಸರ್ವೇ ಯಥಾ ಶಂಭುಗಣಾಭವನ್ ।
ಯದರ್ಥಂ ತೇ ಸಮುತ್ಪನ್ನಾ ಯಸ್ಮಾತ್ತ್ವೇಽನ್ಯೇಕರೂಪಿಣಃ ॥ ೪ ॥

ಏತದ್ಗುಃ ಪರಮಂ ಗುಹ್ಯಮಿದಂ ಧರ್ಮಾರ್ಥಕಾಮದಂ ।
ಏತದ್ಧಿ ಪರಮಂ ತೇಜಃ ಸತತಂ ಪರಮಂ ತಪಃ ॥ ೫ ॥

ಇದಂ ಶ್ರುತ್ವಾ ಮಹಾಖ್ಯಾನಂ ಪರತ್ರೇಹ ನ ಸೀದತಿ ।
ಯಶಸ್ಯಂ ಧರ್ಮ್ಯಮಾಯುಷ್ಯಂ ತುಷ್ಟಿಪುಷ್ಟಿಪ್ರದಂ ಪರಂ ॥ ೬ ॥

ಆದಿಸರ್ಗೇಽಥ ವಾರಾಹೇ ಸಂಪೂರ್ಣೇ ಮುನಿಸತ್ತಮಾಃ !
ಶಂಕರಃ ಪ್ರಾಹ ಸರ್ವೇಶಂ ವಾರಾಹಂ ಜಗತಾಂ ಪತಿಂ ॥ ೭ ॥

॥ ಈಶ್ವರ ಉವಾಚ ॥

ಯದರ್ಥಂ ಭವತಾ ರೂಪಂ ವಾರಾಹಂ ಕಲ್ಪಿತಂ ವಿಭೋ ।
ತತ್ತೇ ಪೂರ್ಣಂ ಕೃತಂ ಪೃಥ್ವೀ ಯಥಾವತ್ಸ್ಥಾಪಿತಾ ತ್ವಯಾ ॥ ೮ ॥

---

೪. ಮಾರ್ಕಂಡೇಯನು ಹೇಳಿದನು:- ಎಲೈ ಮುನಿಗಳೇ, ಶಂಕರನ ಗಣಗಳು ಹೇಗೆ ಜನಿಸಿದವು? ಅವುಗಳು ಅನೇಕ ರೂಪಗಳಾಗಿ ಯಾವ ಕಾರಣದಿಂದ ಆದವೆಂಬುದನ್ನು ಹೇಳುವೆನು ಕೇಳಿರಿ.

೫. ಈಗ ನಾನು ಹೇಳುವುದು ಅತಿ ರಹಸ್ಯವಾದುದು, ಧರ್ಮ, ಅರ್ಥ, ಕಾಮಗಳನ್ನು ನೀಡಬಲ್ಲದು. ಇದೇ ಶ್ರೇಷ್ಠವಾದ ತೇಜಸ್ಸು. ಇದೇ ಶ್ರೇಷ್ಠವಾದ ತಪಸ್ಸು.

೬. ಈ ಶ್ರೇಷ್ಠವಾದ ಇತಿಹಾಸವನ್ನು ಕೇಳಿದವನು ಈ ಜನ್ಮದಲ್ಲಿಯೂ ಜನ್ಮಾಂತರದಲ್ಲಿಯೂ ಕೆಟ್ಟದನ್ನು ಹೊಂದುವುದಿಲ್ಲವು. ಈ ಇತಿಹಾಸವು ಯಶಸ್ಸು, ಧರ್ಮ, ಆಯಸ್ಸು, ಸಂತೋಷ, ಬಲಗಳನ್ನು ಕೊಡುವುದು.

೭. ಎಲೈ ಮುನಿಶ್ರೇಷ್ಠರೇ! ಆದಿ ಸೃಷ್ಟಿಯಾದ ವಾರಾಹ ಸೃಷ್ಟಿಯು ಸಂಪೂರ್ಣವಾಗಲು ಶಂಕರನು ಎಲ್ಲಾ ಜಗತ್ತಿಗೂ ಒಡೆಯನಾದ ವರಾಹ ಮೂರ್ತಿಯನ್ನು ಕುರಿತು ಹೀಗೆ ಹೇಳಿದನು.

೮. ಓ ಸ್ವಾಮಿಯೆ! ನೀನು ಯಾವ ಕಾರ್ಯಕ್ಕಾಗಿ ವರಾಹರೂಪವನ್ನು ತಾಳಿದ್ದಿಯೋ, ಆ ಕಾರ್ಯವು ಸಂಪೂರ್ಣವಾಯಿತು. ನೀರಿನಲ್ಲಿ ಮುಳುಗಿದ್ದ ಭೂಮಿಯು ಮೊದಲಿನಂತೆ ನಿನ್ನಿಂದ ಸ್ಥಾಪಿತವಾಯಿತು.

ಸಾಗರಾಣಾಂ ಚ ಸಂಸ್ಥಾನಂ ನದೀನಾಂ ಚ ತಥಾ ಕ್ಷಿತೇಃ ।
ಸೃಷ್ಟಿರ್ಬ್ರಹ್ಮಕೃತಾ ಚಾಪಿ ಸಂಜಾತಾ ತ್ವತ್ಪ್ರಸಾದತಃ ॥ ೯ ॥

ತ್ವಂ ಹಿ ಸರ್ವಮಯೋ ಯಜ್ಞಮಯಸ್ತೇಜೋಮಯಸ್ತಥಾ ।
ಗುರೂಣಾಮಪಿ ಸರ್ವೇಷಾಂ ತ್ವಂ ಗುರುಸ್ತ್ವಂ ಪರಾತ್ಪರಃ ॥ ೧೦ ॥

ತ್ವಾಂ ವೋಢುಂ ನ ಕ್ಷಮಾ ಪೃಥ್ವೀ ಯತೀರ್ಣೇವ ಜಗತ್ಪತೇ ।
ಯಂತ್ರಿತಾ ಶೈಲಸಂಘಾತೈರ್ಭವತಾ ಸ್ಥಾಪಿತೈಃ ಪುರಾ ॥ ೧೧ ॥

ತಸ್ಮಾತ್ತ್ವಂ ತ್ಯಜ ಪಾರಾಹಂ ಶರೀರಂ ಜಗತಾಂ ಪತೇ ।
ಜಗನ್ಮಯಂ ಜಗದ್ರೂಪಂ ಜಗತ್ಕಾರಣಕಾರಣಂ ॥ ೧೨ ॥

ಕಸ್ತ್ವಾಂ ಚಾನ್ಯಃ ಕ್ಷಮೋ ವೋಢುಂ ವಾರಾಹಂ ತೇ ವಪುರ್ವಿಭೋ ।
ವಿಶೇಷತಸ್ತ್ವಯಾ ಪೃಥ್ವೀ ಸಕಾಮಾ ಧರ್ಷಿತಾ ಜಲೇ ॥ ೧೩ ॥

---

೯. ಸಮುದ್ರಗಳೂ, ನದಿಗಳೂ, ಭೂಮಿಯೂ ಪೂರ್ವದಲ್ಲಿದ್ದಂತೆ ನಿನ್ನಿಂದ ಸ್ಥಾಪಿಸಲ್ಪಟ್ಟುವು. ನಿನ್ನ ಅನುಗ್ರಹದಿಂದ ಬ್ರಹ್ಮನ ಸೃಷ್ಟಿಯು ಬೆಳೆಯಿತು.

೧೦. ನೀನು ಸರ್ವವಸ್ತುಸ್ವರೂಪನು, ಯಜ್ಞಸ್ವರೂಪನು, ತೇಜಸ್ಸ್ವರೂಪನು, ಅತಿ ದೊಡ್ಡದಾದ ವಸ್ತುಗಳಿಗಿಂತಲೂ ದೊಡ್ಡವನು ಮತ್ತು ಸರ್ವೋತ್ಕೃಷ್ಟನು.

೧೧. ಓ ಜಗದೂಡೆಯನೆ! ಚೂರು ಚೂರಾಗಿರುವಂತೆ ಈ ಭೂಮಿಯು ನಿನ್ನನ್ನು ಧರಿಸಲಾರಳು ಈ ಭೂಮಿಯನ್ನು ನೀನು ಹಿಂದೆ ಬೆಟ್ಟಗಳನ್ನು ಸುತ್ತಲೂ ಇಟ್ಟು ದೃಢವಾಗಿ ನಿಲ್ಲಿಸಿರುವೆ.

೧೨. ಆದಕಾರಣ ವರಾಹರೂಪನಾದ ಈ ಶರೀರವನ್ನು ತ್ಯಜಿಸು ಓ ಜಗದೊಡೆಯನೆ! ಜಗದ್ರೂಪವೂ, ಜಗತ್ತಿಗೆ ಕಾರಣವಾದ ಬ್ರಹ್ಮವಸ್ತುವಿಗೆ ಕಾರಣವೂ ಆದ ಈ ನಿನ್ನ ವರಾಹ ಶರೀರವನ್ನು ಯಾರು ಧರಿಸಲು ಸಮರ್ಥರು.?

೧೩. ಹಿಂದೆ ನೀರಿನಲ್ಲಿ ತುಂಬಾ ಪೀಡಿಸಲ್ಪಟ್ಟ ಸ್ತ್ರೀ ಸ್ವಭಾವವುಳ್ಳ ಆ ಭೂಮಿಯು ನಿನ್ನ ತೇಜಸ್ಸಿನ್ನಿಂದ ಗರ್ಭವನ್ನು ಧರಿಸಿದಳು.

ಸ್ಥೀಧರ್ಮಿಣೀ ತ್ವತ್ತೋಜೋಭಃ ಸಾಽಧಾದ್ಗರ್ಭಂ ಚ ದಾರುಣಂ ।
ರಜಸ್ವಲಾ ಕ್ಷಮಾ ಗರ್ಭಂ ಯಾಮಾಧತ್ತ ಜಗತ್ಪತೇ ॥ ೧೪ ॥

ತಸ್ಮಾದ್ಯಸ್ತನಯೋ ಭಾವೀ ಸೋಽಹ್ಯಾದಾಸ್ಯತಿ ದುರ್ಧರಃ ।
ಏಷ ಪ್ರಾಪ್ಯಾಸುರಂ ಭಾವಂ ದೇವಗಂಧರ್ವಹಿಂಸಕಃ ॥ ೧೫ ॥

ಭವಿಷ್ಯತೀತಿ ಲೋಕೇಶಃ ಸ್ಮಾಹ ಮಾಂ ದಕ್ಷಸನ್ನಿಧೌ ।
ಮಲಿನೀರತಿಸಂಜಾತಂ ದುಷ್ಟಂ ತೇಽನಿಷ್ಟಕಾರಕಂ ॥ ೧೬ ॥

ತಾಮುಕಂ ತ್ಯಜ ಲೋಕೇಶ ವಾರಾಹಂ ತಾಯಮಾಪೃಶಂ ।
ತ್ವಮೇವ ಸೃಷ್ಟಿಸ್ಥಿತ್ಯಂತಕಾರಕೋ ಲೋಕಭಾವನಃ ॥ ೧೭ ॥

ಕಾಲೇ ಪ್ರಾಪ್ತೇ ಸ್ಥಿತಿಂ ಸೃಷ್ಟಿಂ ಸಂಹಾರಂ ಚ ಕರಿಷ್ಯತಿ ।
ತಸ್ಮಾಲ್ಲೋಕಹಿತಾರ್ಥಾಯ ತ್ಯಕ್ತ್ವಾ ತಾಯಂ ಬಲಾಬಲ ॥ ೧೮ ॥

---

೧೪. ಓ ಜಗದೊಡೆಯನೇ! ರಜಸ್ವಲೆಯಾದ ಭೂಮಿಯು ಆಗ ಧರಿಸಿದ ಗರ್ಭದಿಂದ ಧರಿಸಲು ಅಸಾಧ್ಯವಾದ ಪುತ್ರನು ಜನಿಸುವನು.

೧೫. ಆ ಪುತ್ರನು ರಾಕ್ಷಸ ಸ್ವಭಾವವನ್ನು ಹೊಂದಿ ದೇವತೆಗಳನ್ನೂ ಗಂಧರ್ವರನ್ನೂ ಹಿಂಸಿಸುವವನಾಗುವನೆಂದು ಬ್ರಹ್ಮನು ಹಿಂದೆ ದಕ್ಷಬ್ರಹ್ಮನ ಸನ್ನಿಧಿಯಲ್ಲಿ ನನ್ನನ್ನು ಕುರಿತು ಹೇಳಿರುವನು.

೧೬. ಜಗದೊಡೆಯನೆ! ರಜಸ್ವಲೆಯಾದ ಭೂಮಿಯೊಡನೆ ಸಂಬಂಧವನ್ನು ಹೊಂದಿ ಜನಿಸಿದ ಕಾರಣ ದುಷ್ಟವೂ, ಅನಿಷ್ಟಕ್ಕೆ ಕಾರಣವಾದುದೂ ಆದ ಈ ವರಾಹ ಶರೀರವನ್ನು ಬಿಡುವವನಾಗು.

೧೭. ನೀನೇ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ನಡೆಸುವವನು ನೀನೇ ಜಗತ್ತಿಗೆ ಕಾರಣವು. ಆಯಾಯ ಕಾಲಗಳಲ್ಲಿ ಸೃಷ್ಟಿಯನ್ನೂ ಪಾಲನೆಯನ್ನೂ ಸಂಹಾರವನ್ನೂ ನೀನು ಮಾಡುತ್ತೀಯೆ.

೧೮. ಆದುದರಿಂದ ಬಲಶಾಲಿಯಾದ ಓ! ವಿಷ್ಣುವೇ! ಲೋಕಕ್ಷೇಮಕ್ಕಾಗಿ ಈ ಶರೀರವನ್ನು ಬಿಡು. ತಿರುಗಿ ಈ ಶರೀರವನ್ನು ಧರಿಸುವ ಕಾಲಬಂದರೆ ಬೇರೆ ವರಾಹ ಶರೀರವನ್ನು ಧರಿಸುವೆಯಂತೆ.

ಕಾಲೇ ಪ್ರಾಪ್ತೇ ಪುನಸ್ತ್ವನ್ಯಂ ಕಾಯಂ ಪೌತ್ರಂ ಕರಿಷ್ಯಸಿ ।

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ಶಂಕರಸ್ಯ ಮಹಾತ್ಮನಃ ॥ ೧೯ ॥

ವಾರಾಹಮೂರ್ತಿರ್ಭಗವಾನ್ಮಹಾದೇವಮುವಾಚ ಹ ।

॥ ಶ್ರೀಭಗವಾನುವಾಚ ॥

ಕರಿಷ್ಯೇಽಹಂ ತವ ವಚಸ್ತ್ವಂ ಯಥಾತ್ಥ ಮಹೇಶ್ವರ ॥ ೨೦ ॥

ಇಮಂ ತು ಯಜ್ಞವಾರಾಹಂ ಕಾಯಂ ತ್ಯಕ್ಷ್ಯೇ ನ ಸಂಶಯಃ ।
ಕಾಲೇ ಪ್ರಾಪ್ತೇ ಪುನಸ್ತ್ವನ್ಯಂ ಕಾಯಂ ವಾರಾಹಮುದ್ಧೃತಂ ॥ ೨೧ ॥

ಕರಿಷ್ಯೇಽಹಂ ದುರಾಧರ್ಷಂ ಲೋಕಾನಾಂ ಭಾವನಾಯ ವೈ ।
ಇತ್ಯುಕ್ತ್ವಾ ಸ ಮಹಾಕಾಯಸ್ತತ್ರೈವಾಂತರಧೀಯತ ॥ ೨೨ ॥

---

೧೯. ಮಾರ್ಕಂಡೇಯನು ಹೇಳಿದನು:– ಹೀಗೆ ಮಹಾತ್ಮನಾದ ಶಂಕರನ ಮಾತುಗಳನ್ನು ಕೇಳಿ ಭಗವಂತನಾದ ವರಾಹಮೂರ್ತಿಯು ಆ ಶಂಕರನನ್ನು ಕುರಿತು ಹೀಗೆ ಹೇಳಿದನು.

೨೦. ಭಗವಂತನಾದ ವರಾಹಮೂರ್ತಿಯು ಹೇಳಿದನು:– ಎಲೈ! ಮಹೇಶ್ವರನೇ! ನೀನು ಹೇಳಿದಂತೆಯೇ ಮಾಡುವೆನು. ಈ ಯಜ್ಞಸ್ವರೂಪವುಳ್ಳ ವರಾಹ ಶರೀರವನ್ನು ಬಿಡುವೆನು ಇದರಲ್ಲಿ ಸಂಶಯವಿಲ್ಲವು.

೨೧. ತಿರುಗಿ ಅಂತಃಕಲಹವು ಬಂದರೆ ಲೋಕವನ್ನು ಸಲಹುವುದಕ್ಕಾಗಿ ಆಶ್ಚರ್ಯಕರವೂ ಸಹಸಲಸಾಧ್ಯವಾದುದೂ ಆದ ಇಂತಹ ವರಾಹ ಶರೀರವನ್ನು ಧರಿಸುವೆನು.

೨೨. ಹೀಗೆ ಹೇಳಿ ದೊಡ್ಡಶರೀರವುಳ್ಳ ಜಗತ್ತಿಗೆ ಗುರುವೂ, ಜಗತ್ತನ್ನು ಸೃಷ್ಟಿಸುವವನೂ, ಜಗತ್ತನ್ನು ಧರಿಸುವವನೂ, ಮತ್ತು ಜಗದೊಡೆಯನೂ ಆದ ಆದಿ ವರಾಹಮೂರ್ತಿಯು ಅಲ್ಲಿಯೇ ಅಂತರ್ಧಾನನಾದನು.

ಜಗದ್ಗುರುರ್ಜಗತ್ಸ್ರಷ್ಟಾ ಜಗಪ್ಪಾತಾ ಜಗತ್ಪತಿಃ ।
ತಸ್ಮಿನ್ನಂತರ್ಹಿತೇ ದೇವೇ ದೇವದೇವೋ ಮಹೇಶ್ವರಃ ॥ ೨೩ ॥

ನಿಜಂ ಸ್ಥಾನಂ ದೇವಗಣೈಃ ಸ್ವಗಣೈಶ್ಚ ಜಗಾಮ ಹ ।
ವರಾಹೋಽಪಿ ಸ್ವಯಂ ಗತ್ವಾ ಲೋಕಾಲೋಕಾಭ್ವಯಂ ಗಿರಿಂ ॥ ೨೪ ॥

ವಾರಾಹ್ಯಾ ಸಹ ರೇಮೇ ಸ ಪೃಥಿವ್ಯಾ ಚಾರುರೂಪಯಾ ।
ಸ ತಯಾ ರಮಮಾಣಸ್ತು ಸುಚಿರಂ ಪರ್ವತೋತ್ತಮೇ ॥ ೨೫ ॥

ನಾವಾಪ ತೋಷಂ ಲೋಕೇಶಃ ಪೋತ್ರೀ ಪರಮಕಾಮುಕಃ ।
ಪೃಥಿವ್ಯಾಃ ಪೋತ್ರಿರೂಪಾಯಾ ರಮಯಂತ್ಯಾಸ್ತತಃ ಸುತಾಃ ॥ ೨೬ ॥

ತ್ರಯೋ ಜಾತಾ ದ್ವಿಜಶ್ರೇಷ್ಠಾಸ್ತೇಷಾಂ ನಾಮಾನಿ ಮೇ ಶೃಣು ।
ಸುವೃತ್ತಃ ಕನಕೋ ಘೋರಃ ಸರ್ವ ಏವ ಮಹಾಬಲಾಃ ॥ ೨೭ ॥

ಶಿಶವಸ್ತೇ ಮೇರುಪೃಷ್ಠೇ ಕಾಂಚನೇ ವಪ್ರಸಂಸ್ಥರೇ ।
ರೇಮಿರೇಽನ್ಯೋನ್ಯಸಂಸಕ್ತಾ ಗಙ್ಗಾರೇಷು ಸರಸ್ಸು ಚ ॥ ೨೮ ॥

---

೨೩. ಆ ಆದಿವರಾಹನು ಅಂತರ್ಧಾನನಾಗಲು ದೇವದೇವನಾದ ಶಂಕರನು ದೇವತೆಗಳೊಡನೆಯೂ ತನ್ನ ಗಣಗಳೊಡನೆಯೂ ತನ್ನ ಸ್ಥಾನಕ್ಕೆ ತೆರಳಿದನು.

೨೪. ಅಂತರ್ಧಾನನಾದ ಆ ಆದಿವರಾಹನೂ ಸಹ ಲೋಕಾಲೋಕಪರ್ವತಕ್ಕೆ ಹೋಗಿ ಅಲ್ಲಿ ಸುಂದರವಾದ ರೂಪವುಳ್ಳ ಭೂದೇವಿಯೊಡನೆ ಕ್ರೀಡಿಸುತ್ತಿದ್ದನು.

೨೫. ಅತಿ ಕಾಮುಕನಾದ ಆ ಆದಿವರಾಹನು, ಆ ಭೂದೇವಿಯೊಂದಿಗೆ ಬಹು ಕಾಲ ಆ ಲೋಕಾಲೋಕಪರ್ವತದಲ್ಲಿ ಕ್ರೀಡಿಸಿದರೂ ಸಂತೋಷವನ್ನು ಹೊಂದಲಿಲ್ಲವು.

೨೬. ಹೀಗೆ ಹೆಣ್ಣುಹಂದಿಯ ರೂಪದಿಂದ ಕ್ರೀಡಿಸುತ್ತಿರುವ ಭೂದೇವಿಯಿಂದ ಮೂರು ಜನ ಮಕ್ಕಳು ಜನಿಸಿದರು. ಎಲೈ! ಬ್ರಾಹ್ಮಣೋತ್ತಮರೆ! ಅವರ ಹೆಸರನ್ನು ಹೇಳುವೆನು ಕೇಳಿರಿ.

೨೭-೨೮. ಸುವೃತ್ತ, ಕನಕ, ಘೋರ, ಎಂದು ಆ ಮೂರು ಮಕ್ಕಳ ಹೆಸರು. ಬಲಿಷ್ಠರಾದ ಆ ಮಕ್ಕಳು ಮೇರುಪರ್ವತದ ಸುವರ್ಣಮಯವಾದ ತಪ್ಪಲುಗಳಲ್ಲಿಯೂ ಗುಹೆಗಳಲ್ಲಿಯೂ, ಸರೋವರಗಳಲ್ಲಿಯೂ ಪರಸ್ಪರ ಸೇರಿ ಕ್ರೀಡಿಸುತ್ತಿದ್ದರು.

ಸ ತೈಃ ಪುತ್ರೈಃ ಪರಿವೃತೋ ವರಾಹೋ ಭಾರ್ಯಯಾ ಸ್ವಯಾ ।
ರಮಮಾಣಸ್ತದಾ ಕಾಯತ್ಯಾಗಂ ನೈವಾಗಣದ್ದ್ವಿಜಾಃ ॥ ೨೯ ॥

ಕದಾಚಿಚ್ಛುಭಿಸ್ತೈಸ್ತು ಸಂಶ್ಲಿಷ್ಟಃ ಕರ್ದಮಾಂತರೇ ।
ಚಕಾರ ಕರ್ದಮಕ್ರೀಡಾಂ ಭಾರ್ಯಯಾ ಚ ಮಹಾಬಲಃ ॥ ೩೦ ॥

ಸಪಂಕಲೇಪಃ ಶುಶುಭೇ ವರಾಹೋ ಮಧುಪಿಂಗಲಃ ।
ಸಂಧ್ಯಾಘನೋ ಯಥಾ ತೋಯಂ ಕ್ಷರಂಸ್ತೋಯಂ ತಥಾವಿಧಃ ॥ ೩೧ ॥

ಸ ಪುತ್ರೈಃ ಪರಮಪ್ರೀತೋ ಭಾರ್ಯಯಾ ಚ ಪೃಥಿವ್ಯಯಾ ।
ವಿರುಜನ್ಧರಣೀಂ ರೇಮೇ ಮಧ್ಯನಿಮ್ನಾಥ ಸಾಽಭವತ್ ॥ ೩೨ ॥

ಅನಂತೋಽಪಿ ಸಮಾಕ್ರಮ್ಯ ಕೂರ್ಮಂ ಸ ಪೃಥಿವೀತಲೇ ।
ಹರಿಂ ವಹನ್ಭಗ್ನಶಿರಾಃ ಸಾತಂಕೋಽಭೂತ್ಪ್ರಪೀಡಯಾ ॥ ೩೩ ॥

---

೨೯. ಎಲೈ! ಬ್ರಾಹ್ಮಣರೇ! ಆ ಮಕ್ಕಳೊಂದಿಗೂ ಪತ್ನಿಯೊಂದಿಗೂ ವಿಹರಿಸುತ್ತಾ ಇದ್ದು ಆದಿವರಾಹನು ತನ್ನ ಶರೀರಪರಿತ್ಯಾಗವನ್ನು ಗಮನಕ್ಕೇ ತರಲಿಲ್ಲವು.

೩೦. ಬಲಶಾಲಿಯಾದ ಆ ಆದಿವರಾಹನು ಒಂದು ದಿನ ಆ ಮಕ್ಕಳೊಡನೆ ಕೆಸರಿನಲ್ಲಿ ವಿಹರಿಸುತ್ತಿದ್ದನು.

೩೧. ಕೆಸರಿನ ಲೇಪದಿಂದ ಜೇನುತುಪ್ಪದಂತೆ ಪಿಂಗಳವಾದ ಬಣ್ಣವುಳ್ಳ ಆ ಆದಿವರಾಹನು ಸಂಧ್ಯಾಕಾಲದಲ್ಲಿ ನೀರನ್ನು ಸುರಿಸುತ್ತಿರುವ ಮೇಘದಂತೆ ಪ್ರಕಾಶಿಸುತ್ತಲಿದ್ದನು.

೩೨. ಭೂಮಿಯನ್ನು ವಪ್ರಕೇಳಿಯಿಂದ ಪ್ರಹರಿಸುತ್ತಾ ಪುತ್ರರೊಡನೆಯೂ ಪತ್ನಿಯಾದ ಭೂದೇವಿಯೊಡನೆಯೂ ವಿಹರಿಸುತ್ತಿದ್ದನು. ಆಗ ಆದಿವರಾಹನ ಪ್ರಹಾರದಿಂದ ಭೂಮಿಯು ಮಧ್ಯದಲ್ಲಿ ಹಳ್ಳವಾಯಿತು.

೩೩. ಕೂರ್ಮದ ಮೇಲೆ ಆಕ್ರಮಿಸಿ ನಿಂತು ಭೂಮಿಯನ್ನೂ ಹರಿಯನ್ನೂ ಶಿರಸ್ಸಿನಿಂದ ಧರಿಸುವ ಆ ಆದಿಶೇಷನೂ ಸಹ ವರಾಹಮೂರ್ತಿಯ ಹೊಡೆತದಿಂದ ತಲೆಯಲ್ಲಿ ಘಾಯವನ್ನು ಹೊಂದಿ ಆ ಪೀಡೆಯಿಂದ ತುಂಬಾ ದುಃಖಕ್ಕೊಳಗಾದನು.

ಸುವೃತ್ತೇನ ಸ್ವರ್ಣವಪ್ರಂ ಘೋರೇಣ ಕನಕೇನ ಚ ।
ವಿದಾರಿತಂ ಪೋತ್ರಘಾತೈಃ ಸ್ವರ್ಣಭಗ್ನಾತ್ಕೃತಂ ಸಮಂ ॥ ೩೪ ॥

ಮೇರುಪೃಷ್ಠೇ ಯಾನಿ ಯಾನಿ ಸೌವರ್ಣಾನಿ ದ್ವಿಜೋತ್ತಮಾಃ ।
ರಚಿತಾನಿ ಸುರೈರ್ಯತ್ನಾತ್ತಾನಿ ಭಗ್ನಾನಿ ತತ್ಸುತೈಃ ॥ ೩೫ ॥

ಮಾನಸಾದೀನಿ ದೇವಾನಾಂ ಸರಾಂಸಿ ಶಿಶವೋಽಥ ತೇ ।
ಆವಿಲಾನಿ ತದಾ ಚಕ್ರುಃ ಪೋತ್ರಘಾತೈಃ ಸಮಂತತಃ ॥ ೩೬ ॥

ಪೃಥಿವೀ ವನಿತಾರೂಪಾ ರಮಯಾಮಾಸ ಪೋತ್ರಿಣಂ ।
ಸ್ಥಾವರೇಣ ತು ರೂಪೇಣ ದುಃಖಮಾಪ್ನೋತಿ ವೈ ಧೃಷಂ ॥ ೩೭ ॥

ಸಾಗರಾಶ್ಚ ಸುವೃತ್ತಾದ್ಯೈರವಗಾಹ್ಯ ಸಮಂತತಃ ।
ವಿಕೀರ್ಣರತ್ನಾಃ ಪೋತೌಘೈಃ ಸರ್ವ ಏವಾಕುಲೀಕೃತಾಃ ॥ ೩೮ ॥

---

೩೪. ವರಾಹನ ಮಕ್ಕಳಾದ ಸುವೃತ್ತ, ಘೋರ, ಮತ್ತು ಕನಕ, ಇವರುಗಳು ತಮ್ಮ ಮೂತಿಗಳ ಹೊಡೆತದಿಂದ ಮೇರುಪರ್ವತದ ಸುವರ್ಣಮಯವಾದ ತಪ್ಪಲನ್ನು ಚೂರು ಚೂರು ಮಾಡಿ ಎಲ್ಲವನ್ನೂ ಒಂದೇ ಮಟ್ಟವಾಗಿ ಮಾಡಿದರು.

೩೫. ಮೇರು ಪರ್ವತದ ತಪ್ಪಲಲ್ಲಿ ದೇವತೆಗಳು ಸುವರ್ಣದಿಂದ ಯಾವ ವಸ್ತುಗಳನ್ನು ರಚಿಸಿದ್ದರೋ ಅದೆಲ್ಲವನ್ನೂ ಆ ವರಾಹನ ಮಕ್ಕಳು ಚೂರುಚೂರು ಮಾಡಿದರು.

೩೬. ಮಾನಸವೇ ಮೊದಲಾದ ದೇವಸರಸ್ಸುಗಳನ್ನು ಆ ವರಾಹ ಪುತ್ರರು ತಮ್ಮ ಮೂತಿಗಳ ಹೊಡೆತದಿಂದ ಮಲಿನವಾದವುಗಳನ್ನಾಗಿ ಮಾಡಿದರು.

೩೭. ಭೂಮಿಯು ಸ್ತ್ರೀರೂಪವನ್ನು ಧರಿಸಿ ಆದಿವರಾಹನೊಡನೆ ವಿಹರಿಸುತ್ತಿದ್ದಳು, ಆದರೆ ಚಲಿಸದಿರುವ ತನ್ನ ಪೃಥಿನೀರೂಪದಿಂದ ನಿತ್ಯವೂ ವರಾಹದ ದಂಷ್ಟ್ರಗಳ ಪ್ರಹಾರದಿಂದ ಉಂಟಾದ ದುಃಖವನ್ನು ಅನುಭವಿಸುತ್ತಿದ್ದಳು.

೩೮. ಆ ಸುವೃತ್ತನೇ ಮೊದಲಾದ ಮಕ್ಕಳು ಸಮುದ್ರಗಳನ್ನು ಪ್ರವೇಶಿಸಿ ಅವುಗಳಲ್ಲಿ ಆಟವಾಡುತ್ತಾ ಅಲ್ಲಿರುವ ರತ್ನಗಳನ್ನೆಲ್ಲಾ ಸಿಕ್ಕಿದಲ್ಲಿ ಎರಚಿ ಅವುಗಳನ್ನು ತಮ್ಮ ಮೂತಿಗಳ ಹೊಡೆತದಿಂದ ಕ್ಷೋಭಗೊಳಿಸಿದರು.

ಇತಸ್ತತಶ್ಚ ಶಿಶುಭಿಃ ಕ್ರೀಡದ್ಭಿಃ ಪೌತ್ರಿಭಿಸ್ತದಾ ।
ಜಗಂತಿ ತತ್ರ ಭಗ್ನಾನಿ ನದ್ಯಃ ಕಲ್ಪದ್ರುಮಾಸ್ತಥಾ ॥ ೩೯ ॥

ಜಾನನ್ನಪಿ ಜಗದ್ಧರ್ತಾ ವರಾಹಃ ಸ್ವಯಮೇವ ಹಿ ।
ಜಗತ್ಪೀಡಾಂ ಸುತಸ್ನೇಹಾದ್ವಾರಯಾಮಾಸ ನೈವ ತಾನ್ ॥ ೪೦ ॥

ಸುವೃತ್ತಃ ಕನಕೋ ಘೋರೋ ಯದಾ ಗಚ್ಛತಿ ವೈ ದಿವಂ ।
ತದಾ ದೇವಗಣಾ ಭೀತಾಃ ಪ್ರಾದ್ರವಂತಿ ದಿಶೋ ದಶ ॥ ೪೧ ॥

ಏವಂ ಸುತೈರ್ಭಾರ್ಯಯಾ ಯಜ್ಞಪೌತ್ರೀ
ಕ್ರೀಡಂಸ್ತುಷ್ಟಿಂ ನಾಪ ಕಾಂಚಿತ್ಕದಾಚಿತ್ ।
ನಿತ್ಯಂ ನಿತ್ಯಂ ವರ್ಧತೇ ತಸ್ಯ ಕಾಮಃ
ಕಾಯಂ ತ್ಯಕ್ತುಂ ನೈಚ್ಛದೇಷ ಪ್ರದಿಷ್ಟಃ ॥ ೪೨ ॥

॥ ಇತಿ ಶ್ರೀ ಕಾಲಿಕಾಪುರಾಣೇ ತ್ರಿಂಶೋಽಧ್ಯಾಯಃ ॥

---

೩೯. ಎಲ್ಲೆಡೆಯಲ್ಲಿಯೂ ವಿಹರಿಸುತ್ತಿರುವ ಆ ಆದಿವರಾಹನ ಪುತ್ರರಿಂದ ಜಗತ್ತು ತೊಂದರೆಗೊಳಗಾಯಿತು. ನದಿಗಳೂ ಕಲ್ಪವೃಕ್ಷಗಳೂ ಭಗ್ನವಾದುವು.

೪೦. ತನ್ನ ಮಕ್ಕಳಿಂದಾಗುತ್ತಿರುವ ಈ ಜಗತ್ತಿನ ಪೀಡೆಯನ್ನು ತಿಳಿದಿದ್ದರೂ ಜಗತ್ತನ್ನು ಧರಿಸುವ ಆದಿವರಾಹನು ಮಕ್ಕಳಮೇಲಿನ ವಾತ್ಸಲ್ಯದಿಂದ ಅವರನ್ನು ತಡೆಯಲಿಲ್ಲವು.

೪೧. ಆ ವರಾಹನ ಮಕ್ಕಳಾದ ಸುವೃತ್ತ, ಘೋರ, ಮತ್ತು ಕನಕರು, ಸ್ವರ್ಗಕ್ಕೆ ಹೋದುದೇ ಆದರೆ, ದೇವತೆಗಳು ಹೆದರಿಕೊಂಡು ದಿಕ್ಕುದಿಕ್ಕಿಗೂ ಓಡುವರು.

೪೨. ಹೀಗೆ ಮಕ್ಕಳೊಡನೆಯೂ, ಪತ್ನಿಯೊಡನೆಯೂ, ವಿಹರಿಸುತ್ತಾ ಆದಿ ವರಾಹಮೂರ್ತಿಯು ತೃಪ್ತಿಯನ್ನೇ ಹೊಂದಲಿಲ್ಲವು. ನಿತ್ಯನಿತ್ಯವೂ ಅವನ ಕಾಮವು ಬೆಳೆಯುತ್ತಲೇ ಇದ್ದಿತು. ಹೀಗಾಗಿ ತಾನು ಶಂಕರನಿಗೆ ಹೇಳಿದಂತೆ ತನ್ನ ಶರೀರವನ್ನು ತ್ಯಜಿಸುವ ಇಚ್ಛೆಯೇ ಇಲ್ಲದವನಾದನು.

ಇಲ್ಲಿಗೆ ಮೂವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀ ಕಾಲಿಕಾಪುರಾಣೇ ಏಕತ್ರಿಂಶೋಧ್ಯಾಯಃ ॥

ಮಾರ್ಕಂಡೇಯ ಉವಾಚ

ತತೋ ದೇವಗಣಾಃ ಸರ್ವೇ ಸಹಿತಾ ದೇವಯೋನಿಭಿಃ ।
ಶಕ್ರೇಣ ಸಹಿತಾ ಮಂತ್ರಂ ಚಕ್ರುಃ ಸಮ್ಯಗ್ವಗದ್ಧಿತಂ ॥ ೧ ॥

ತತೋ ನಿಶ್ಚಿತ್ಯ ತೇ ಸರ್ವೇ ಶಕ್ರಾದ್ಯಾ ಮುನಿಭಿಃ ಸಹ ।
ಶರಣ್ಯಂ ಶರಣಂ ಜಗ್ಮುರ್ನಾರಾಯಣಮಜಂ ವಿಭುಂ ॥ ೨ ॥

ತಂ ಸಮಾಸಾದ್ಯ ಗೋವಿಂದಂ ವಾಸುದೇವಂ ಜಗತ್ಪತಿಂ ।
ಪ್ರಣಮ್ಯ ಸರ್ವೇ ತ್ರಿದಶಾಸ್ತುಷ್ಟುವೈರ್ಗರುಡಧ್ವಜಂ ॥ ೩ ॥

॥ ಮೂವತ್ತೊಂದನೆಯ ಅಧ್ಯಾಯವು ॥

೧. ಮಾರ್ಕಂಡೇಯ ಮುನಿಯು ಹೇಳಿದನು—ಅನಂತರದಲ್ಲಿ ದೇವತೆಗಳೆಲ್ಲರೂ, ಇಂದ್ರನಿಂದಲೂ, ದೇವಸಂಭೂತರಾದ ಗಂಧರ್ವರೇ ಮೊದಲಾದವರಿಂದಲೂ ಕೂಡಿ, ಪ್ರಪಂಚಕಲ್ಯಾಣಕ್ಕೆ ಅನುಕೂಲವಾಗುವ ಮಂತ್ರಾಲೋಚನೆಯನ್ನು ಈ ರೀತಿ ಮಾಡಿದರು.

೨. ಹೀಗೆ ಇಂದ್ರನೇ ಮೊದಲಾದ ದೇವತೆಗಳೂ, ಮುನಿಗಳೂ ಸಹ ಒಟ್ಟು ಸೇರಿ ತಮ್ಮ ತಮ್ಮಲ್ಲಿ ತೀರ್ಮಾನಮಾಡಿಕೊಂಡು, ಜನ್ಮರಹಿತನಾಗಿಯೂ, ಮರೆ ಹೊಕ್ಕವರನ್ನು ಕಾಪಾಡುವವನಾಗಿಯೂ, ಇರುವ ನಾರಾಯಣನನ್ನು ಮರೆಹೊಕ್ಕರು.

೩. ಜಗತ್ತಿಗೆ ಒಡೆಯನಾಗಿಯೂ, ಎಲ್ಲರಲ್ಲಿಯೂ ವಾಸಿಸುವವನಾಗಿಯೂ, ಇರುವ ಆ ನಾರಾಯಣನ ಸಮೀಪವನ್ನೈದಿ ದೇವತೆಗಳೆಲ್ಲರೂ ಗರುಡಧ್ವಜನಾದ ಅವನನ್ನು ನಮಸ್ಕಾರ ಮಾಡಿ ಹೀಗೆ ಸ್ತೋತ್ರಮಾಡಿದರು.

॥ ದೇವಾ ಊಚುಃ ॥

ನಮಸ್ತೇ ದೇವದೇವೇಶ ಜಗತ್ಕಾರಣಕಾರಕ ।
ಕಾಲಸ್ವರೂಪಿನ್ ಭಗವನ್ ಪ್ರಧಾನಪುರುಷಾತ್ಮಕ ॥ ೪ ॥

ಸ್ಥೂಲಸೂಕ್ಷ್ಮಜಗದ್ವ್ಯಾಪಿನ್ ಪರೇಶ ಪುರುಷೋತ್ತಮ ।
ತ್ವಂ ಕರ್ತಾ ಸರ್ವಭೂತಾನಾಂ ತ್ವಂ ಪಾತಾ ತ್ವಂ ವಿನಾಶಕೃತ್ ॥ ೫ ॥

ತ್ವಂ ಹಿ ಮಾಯಾಸ್ವರೂಪೇಣ ಸಂಮೋಹಯಸಿ ವೈ ಜಗತ್ ।
ಯದ್ಭೂತಂ ಯಚ್ಚ ವೈ ಭಾವ್ಯಂ ಯದಿದಾನೀಂ ಪ್ರವರ್ತತೇ ॥ ೬ ॥

ತತ್ಸರ್ವಂ ಪರಮೇಶ ತ್ವಂ ಸ್ಥಾವರಂ ಜಂಗಮಂ ತಥಾ ।
ಅರ್ಥಾರ್ಥಿನಾಂ ತ್ವಮರ್ಥಸ್ತು ಕಾಮಿನಃ ಕಾಮಾರ್ಥಿನಾಂ ತಥಾ ॥ ೭ ॥

---

೪. ದೇವತೆಗಳು ಹೇಳಿದರು—ಎಲೈ ಷಡ್ಗುಣೈಶ್ವರ್ಯ ಸಂಪನ್ನನಾದ ನಾರಾಯಣನೇ! ನೀನು ದೇವತೆಗಳಿಗೂ ದೇವನೆನಿಸಿದವನು. ಜಗತ್ತಿಗೆ ಕಾರಣಭೂತನಾದವನು. ಭೂತಭವಿಷ್ಯದ್ವರ್ತಮಾನ ಕಾಲಗಳ ಸ್ವರೂಪನು. ಮತ್ತು ಪ್ರಕೃತಿ, ಪುರುಷಗಳೆಂಬ ತತ್ತ್ವಗಳಲ್ಲಿ ಮುಖ್ಯನಾದ ಪುರುಷನೆನಿಸಿದವನು. ಇಂತಹ ನಿನಗೆ ನಮಸ್ಕಾರವು.

೫. ಎಲೈ ಪುರುಷರಲ್ಲಿ ಶ್ರೇಷ್ಠನಾದ ನಾರಾಯಣನೇ! ನೀನು ಸ್ಥೂಲಸೂಕ್ಷ್ಮವೆಂಬ ಕಣ್ಣಿಗೆ ಕಾಣಿಸುವ ಮತ್ತು ಕಾಣಿಸದಿರುವ ಚರಾಚರಾತ್ಮಕವಾದ ಸಮಸ್ತ ಪದಾರ್ಥಗಳಲ್ಲಿಯೂ ಚೈತನ್ಯಸ್ವರೂಪದಿಂದ ವ್ಯಾಪಿಸಿರುವೆ. ನೀನು ಪರಬ್ರಹ್ಮಸ್ವರೂಪನು ಈ ಸಮಸ್ತ ಪ್ರಾಣಿಗಳನ್ನು ಸೃಷ್ಟಿಸುವವನೂ, ಕಾಪಾಡುವವನೂ, ಅಂತ್ಯದಲ್ಲಿ ಅವುಗಳನ್ನು ನಾಶಮಾಡುವವನೂ ನೀನೇ ಆಗಿರುವೆ.

೬. ಎಲೈ ಪರಮೇಶ್ವರನೇ! ನೀನೇ ನಿನ್ನ ಮಾಯಾಸ್ವರೂಪದಿಂದ ಈ ಪ್ರಪಂಚವನ್ನು ಎಂದರೆ, ಪೂರ್ವಕಲ್ಪಗಳಲ್ಲಿ ಸೃಷ್ಟಿಸಿದ್ದ, ಮುಂದೂ ಸೃಷ್ಟಿಸಲ್ಪಡುವ ಮತ್ತು ಈಗ ನಡೆಯುತ್ತಿರುವ ಚರಾಚರಾತ್ಮಕವಾದ ಸಮಸ್ತ ಪ್ರಪಂಚವನ್ನೂ ಮೋಹಗೊಳಿಸುತ್ತಿರುವೆ.

೭-೮. ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಅಪೇಕ್ಷಿಸುವ ಪುರುಷರು ಆ ಪುರುಷಾರ್ಥಗಳನ್ನೊಡಗೊಂಡು ಅವುಗಳ ಸ್ವರೂಪವೇ

ತ್ವಂ ಹಿ ಧರ್ಮಾರ್ಥಿನಾಂ ಧರ್ಮೋ ಮೋಕ್ಷೋ ನಿರ್ವಾಣಮಿಚ್ಛತಾಂ ।
ತ್ವಂ ಕಾಮುಕಸ್ತ್ವಮೇವಾರ್ಥೋ ಧಾರ್ಮಿಕಸ್ತ್ವಂ ಸದಾ ಗತಿಃ ॥ ೮ ॥

ತ್ವದ್ವಕ್ತ್ರಾದ್ಬ್ರಾಹ್ಮಣಾ ಜಾತಾ ಬಾಹುಜಾಃ ಕ್ಷತ್ರಿಯಾಸ್ತವ ।
ಊರ್ವೋರ್ವೈಶ್ಯಾಸ್ತಥಾ ಶೂದ್ರಾಃ ಪಾದಾಭ್ಯಾಂ ತವ ನಿರ್ಗತಾಃ ॥ ೯ ॥

ಸೂರ್ಯೋ ನೇತ್ರಾತ್ತವ ವಿಭೋ ಮನಸೋಜಶ್ಚಂದ್ರಮಾಸ್ತಥಾ ।
ಶ್ರವಣಾತ್ಪವನೋ ಜಾತೋ ದಶ ಪ್ರಾಣಾಸ್ತಥಾ ಪರೇ ॥ ೧೦ ॥

ಊರ್ಧ್ವಂ ಸ್ವರ್ಗಾದಿಭುವನಂ ತವ ಶೀರ್ಷಾದಜಾಯತ ।
ತವ ನಾಭೇಸ್ತಥಾಽಽಕಾಶಂ ಕ್ಷಿತಿಃ ಪಾದತಲಾದಭೂತ್ ॥ ೧೧ ॥

ಆಗಿರುವ ನಿನ್ನನ್ನು ಪಡೆದದ್ದೇ ಆದರೆ, ಅವರುಗಳಿಗೆ ಆಯಾಯ ಪುರುಷಾರ್ಥಗಳು ಲಭಿಸುವುವು. ಎಂದರೆ ಧರ್ಮಾರ್ಥಕಾಮಮೋಕ್ಷಗಳಲ್ಲಿ ಯಾರು ಯಾರು ಯಾವುದನ್ನು ಅಪೇಕ್ಷಿಸುವರೋ ಅದನ್ನು ಅವರುಗಳಿಗೆ ನೀನು ಕೊಡುವಿ ಎಂದು ಅರ್ಥವು. ಆಲ್ಲದೇ ಹಿಂದೆ ಹೇಳಿದಂತೆ, ಪ್ರಾಣಿಗಳಿಗೆ ಯಾವಯಾವ ಇಷ್ಟಾರ್ಥಗಳು ಬೇಕೆಂದು ಬಯಸುವಂತೆ ಅವರನ್ನು ನಿನ್ನ ಮಾಯಾಸ್ವರೂಪದಿಂದ ಮೋಹಗೊಳಿಸುವವನೂ, ನೀನೇ ಆಗಿರುವಿಯಲ್ಲದೆ, ಅವರ ಇಷ್ಟಾರ್ಥಗಳನ್ನು ನೆರವೇರಿಸುವವನೂ, ಸಹ ನೀನೇ ಆಗಿರುವೆ. ಆದುದರಿಂದ, ನೀನೇ ಕಾಮುಕನೆಂದೂ, ಕಾಮುಕನಿಗೆ ಬೇಕಾದ ವಸ್ತುವೂ ನೀನೇ ಎಂದೂ, ಮುಂತಾಗಿ ಹೇಳಿರುತ್ತದೆ. ಆದುದರಿಂದ, ಎಲ್ಲಾ ಪ್ರಾಣಿಗಳಿಗೂ ಸರ್ವಕಾಲದಲ್ಲಿಯೂ ನೀನೇ ಗತಿಯು.

೯. ಎಲೈ ಪರಮಪುರುಷನೇ! ನಿನ್ನ ಮುಖದಿಂದ ಬ್ರಾಹ್ಮಣರೂ, ಬಾಹುಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ, ಪಾದಗಳಿಂದ ಶೂದ್ರರೂ, ಉತ್ಪನ್ನರಾದರು.

೧೦. ಎಲೈ ಸ್ವಾಮಿಯೇ! ನಿನ್ನ ಕಣ್ಣಿನಿಂದ ಸೂರ್ಯನೂ, ಮನಸ್ಸಿನಿಂದ ಚಂದ್ರನೂ, ಉದಯಿಸಿದರು. ಹಾಗೆಯೇ, ನಿನ್ನ ಶ್ರವಣೇಂದ್ರಿಯದಿಂದ ವಾಯುವೂ, ಮತ್ತು, ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ, ಎಂಬ ಹತ್ತು ಪ್ರಾಣಗಳೂ, ಹುಟ್ಟಿದವು.

೧೧. ನಿನ್ನ ಶಿರಸ್ಸಿನಿಂದ ಸ್ವರ್ಗಾದಿ ಊರ್ಧ್ವಲೋಕಗಳೂ, ನಾಭಿಪ್ರದೇಶದಿಂದ ಆಕಾಶವೂ, ಪಾದತಲದಿಂದ ಭೂಮಿಯೂ ಉಂಟಾದುವು.

ಕರ್ಣಾಭ್ಯಾಂ ತೇ ದಿಶೋ ಜಾತಾ ಜಠರಾತ್ಸಕಲಂ ಜಗತ್ ।
ತ್ವಂ ಹಿ ಮಾಯಾಸ್ವರೂಪೇಣ ಸಂಮೋಹಯಸಿ ವೈ ಜಗತ್ ॥ ೧೨ ॥

ನಿರ್ಗುಣೋ ಗುಣವಾಂಸ್ತ್ವಂ ಹಿ ಶುದ್ಧ ಏಕಃ ಪರಾತ್ಪರಃ ।
ಉತ್ಪತ್ತಿಸ್ಥಿತಿಹೀನಸ್ತ್ವಂ ತ್ವಮಚ್ಯುತ ಗುಣಾಧಿಕಃ ॥ ೧೩ ॥

ಆದಿತ್ಯೈರ್ವಸುಭಿರ್ದೇವೈಃ ಸಾಧ್ಯೈರ್ಯಕ್ಷೈರ್ಮರುದ್ಗಣೈಃ ।
ತ್ವಂ ಚಿಂತ್ಯಸೇ ಜಗನ್ನಾಥ ಮುನಿಭಿಶ್ಚ ಮುಮುಕ್ಷುಭಿಃ ॥ ೧೪ ॥

---

೧೨. ನಿನ್ನ ಕಿವಿಗಳಿಂದ ದಿಕ್ಕುಗಳೂ, ಉದರದಿಂದ ಸಮಸ್ತ ಪ್ರಪಂಚಗಳೂ ಉತ್ಪನ್ನವಾದವು. ಈ ರೀತಿಯಾಗಿ ಉಂಟಾದ ಈ ಜಗತ್ತನ್ನು ನೀನು ನಿನ್ನ ಮಾಯಾಸ್ವರೂಪದಿಂದ ಮೋಹಗೊಳಿಸುತ್ತಿರುವೆ.

೧೩. ಎಲೈ ನಾಶರಹಿತನಾದ ಪರಮಪುರುಷನೇ! ನೀನು ಗುಣರಹಿತನು. ಎಂದರೆ—ಸತ್ತ್ವರಜಸ್ತಮೋಗುಣಗಳ ಸಂಪರ್ಕವಿಲ್ಲದವನು. ಅವುಗಳ ಕ್ರಿಯೆಗಳಿಗೆ ಮೀರಿದವನು. ಅಥವಾ ನಿನ್ನ ಸೂಕ್ಷ್ಮರೂಪವಾದ ಅವ್ಯಕ್ತವಾದ ಪರಬ್ರಹ್ಮಸ್ವರೂಪದಲ್ಲಿ ಈ ಸತ್ತ್ವರಜಸ್ತಮೋಗುಣಗಳು ಮಟ್ಟು ಕಡಮೆ ಇಲ್ಲದೇ ಸಾಮ್ಯಾವಸ್ಥೆಯಲ್ಲಿರುವುದರಿಂದ ಯಾವ ಗುಣವೂ ಇಲ್ಲದವನೆಂದು ಹೇಳಲ್ಪಡುವೆ. ಆದರೆ ವ್ಯಕ್ತಸ್ವರೂಪವನ್ನು ಹೊಂದಿರುವಾಗ ನಿನಗೆ ಗುಣಗಳ ಸಂಪರ್ಕವು ಇರುವುದು. ನೀನು ಶುದ್ಧನಾದವನು. ಸಾತ್ತ್ವಿಕಪ್ರಕೃತಿಯುಳ್ಳವನು. ಸತ್ತ್ವಗುಣವೇ ಪ್ರಧಾನವಾಗಿ ಉಳ್ಳವನು. ನಿನಗೆ ಉತ್ಪತ್ತಿಯಾಗಲೀ, ಕೆಲವು ಕಾಲ ಇದ್ದು ಅನಂತರ ನಾಶವಾಗಲೀ ಉಂಟಾಗುವುದಿಲ್ಲ. ಏಕೆಂದರೆ— ಪ್ರಳಯಕಾಲದಲ್ಲಿಯೂ, ಸೃಷ್ಟಿಗೆ ಪೂರ್ವದಲ್ಲಿಯೂ, ಪರತತ್ತ್ವವೆಂದು ಹೇಳಲ್ಪಡುವ ನೀನು ಹೊರತು ಮತ್ತೆ ಬೇರೆ ಯಾವ ವಸ್ತುವೂ ಇರುವುದಿಲ್ಲ. ಆದುದರಿಂದ ನೀನು ಸನಾತನನೆಂದೂ, ಆದಿಪುರುಷನೆಂದೂ ಪ್ರಸಿದ್ಧನು. ಮತ್ತು, ಈ ಜಗತ್ತಿನಲ್ಲಿ ಇರುವ ಎಲ್ಲಾ ದೇವಮನುಷ್ಯರಲ್ಲಿಯೂ, ಮೇಚ್ಚಾದ ಗುಣಗಳುಳ್ಳವನು.

೧೪. ಎಲೈ ಜಗದೊಡೆಯನೇ! ದ್ವಾದಶಾದಿತ್ಯರೂ, ಅಷ್ಟವಸುಗಳೂ, ಸಾಧ್ಯರೂ, ಯಕ್ಷರೂ, ಮರುದ್ಗಣಗಳೂ, ಮೋಕ್ಷಾಭಿಲಾಷಿಗಳಾದ ಋಷಿಗಳೂ, ಇವರೆಲ್ಲರೂ, ನಿನ್ನನ್ನು ಧ್ಯಾನಮಾಡುವರು.

ತ್ವಾಂ ವೈ ಚಿದಾನಂದಮಯಾ ವದಂತಿ
ವಿಶೇಷವಿಜ್ಞಾನ ಮುನಯೋ ವಿಭೋಗಾಃ ।
ತ್ವಮೇವ ಸಂಸಾರಮಹೀರುಹಸ್ಯ
ಬೀಜಂ ಜಲಂ ಸ್ಥಾನಮಥೋ ಫಲಂ ಚ ॥ ೧೫ ॥

ತ್ವಂ ಪದ್ಮಯಾ ಪದ್ಮಕರೋ ವಿಭಾಸಿ
ವರಾಸಿಚಕ್ರಾಬ್ಜಧನುರ್ಧರಸ್ತ್ವಂ ।
ತ್ವಮೇವ ತಾರ್ಕ್ಷ್ಯೇ ಪ್ರತಿಭಾಸಿ ನಿತ್ಯಂ
ಸ್ವರ್ಣಾಚಲೇ ತೋಯಯುತೋ ಯಥಾಬ್ದಃ ॥ ೧೬ ॥

ತ್ವಮೇವ ಪೀತಾಂಬರಶಂಕರಾಜ್ಞಾ-
ಸ್ತ್ವಂ ಸರ್ವಮೇತನ್ನ ಚ ಕಿಂಚಿದನ್ಯತ್ ।

---

೧೫. ಭೋಗಗಳನ್ನು ತೊರೆದು ಕಾಯಕ್ಲೇಶಗಳಿಂದ ತಪಸ್ಸನ್ನಾಚರಿಸುವ ಜ್ಞಾನಿಗಳಾದ ಋಷಿಗಳು ನಿನ್ನನ್ನು ಜ್ಞಾನ ಮತ್ತು, ಆನಂದಸ್ವರೂಪವೆಂದು ತಿಳಿಯುತ್ತಾರೆ. ಈ ಸಂಸಾರವೆಂಬ ವೃಕ್ಷಕ್ಕೆ ನೀನೇ ಬೀಜವಾಗಿರುವೆ. ಅದು ಬೆಳೆಯುವಂತೆ ಸಹಾಯವಸ್ತುವಾದ ನೀರೂ, ನೀನೇ. ಅದಕ್ಕೆ ಉತ್ಪತ್ತಿಸ್ಥಾನವಾದ ಭೂಮಿಯೂ, ನೀನೇ. ನುತ್ತು, ಅದರಲ್ಲಿ ಬಿಡುವ ಫಲವೂ, ನೀನೇ. ಈ ಉಪಮಾನದಿಂದ ತಿಳಿಯಬರುವುದೇನೆಂದರೆ—ಸಮಸ್ತ ಪ್ರಾಣಿಗಳನ್ನೂ, ಅವರಿಗೆ ಸ್ಥಾನವಾದ ಜಗತ್ತನ್ನೂ ನೀನೇ ಸೃಷ್ಟಿಸಿ ಅವರಿಗೆ ಆಹಾರ ಮೊದಲಾದ ಭೋಗವಸ್ತುಗಳನ್ನು ಪದಗಿಸಿ ಕಾಪಾಡುತ್ತಾ, ಅವರವರ ಕರ್ಮಾನುಸಾರವಾಗಿ ಅಂತ್ಯದಲ್ಲಿ, ಅವರಿಗೆ ಒಳ್ಳೆಯ ಅಥವಾ ಕೆಟ್ಟಫಲವನ್ನು ಕೊಡುವವನು. ಎಂದರೆ, ಈ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಕರ್ತೃವು ನೀನೇ ಎಂದು ತಾತ್ಪರ್ಯವು.

೧೬. ನೀನು ನಿನ್ನ ಪತ್ನಿಯಾದ ಲಕ್ಷ್ಮಿಯಿಂದ ಕೂಡಿ ಹಸ್ತಗಳಲ್ಲಿ ಉತ್ತಮವಾದ ಖಡ್ಗ, ಚಕ್ರ, ಕಮಲ, ಧನಸ್ಸು ಇವುಗಳನ್ನು ಧರಿಸಿ ಪ್ರಕಾಶಿಸುವೆ. ಅಲ್ಲದೇ ಚಿನ್ನದ ಪರ್ವತವಾದ ಮೇರುಪರ್ವತದ ಮೇಲೆ ನೀರಿನಿಂದ ನಿಬಿಡವಾದ ಮೇಘದಂತೆ ನೀನು ಗರುಡನ ಮೇಲೆ ಕುಳಿತು ಪ್ರಕಾಶಿಸುವೆ.

೧೭. ಎಲೈ ಪರಮಾತ್ಮನೇ! ನೀನು ಬ್ರಹ್ಮ ವಿಷ್ಣು ಮಹೇಶ್ವರರುಗಳ ಸ್ವರೂಪನಾಗಿರುವೆ. ಈ ಸಮಸ್ತ ವಿಶ್ವವೂ, ನೀನಾಗಿರುವೆ. ನಿನ್ನನ್ನು ಬಿಟ್ಟು

ನ ತೇ ಗುಣಾ ನ ಪರಿಚಿಂತನೀಯಾ
ವಿಧೇರ್ಹರಸ್ಯಾಪಿ ದಿಶಾಂ ಪತೀನಾಂ ॥ ೧೭ ॥

ಭೀತೇನ ಭಕ್ತ್ಯಾ ಶರಣಂ ಪ್ರಪನ್ನಾಃ
ಗತಾ ವಯಂ ನಃ ಪರಿರಕ್ಷ ವಿಷ್ಣೋ ।

॥ ಮಾರ್ಕಂಡೇಯ ಉವಾಚ ॥

ಇತಿ ಸ್ತುತೋ ದೇವದೇವೋ ಭೂತಭಾವನಭಾವನಃ ॥ ೧೮ ॥
ಸೇಂದ್ರೈರ್ದೇವಗಣೈರೂಚೇ ತಾನ್ಸರ್ವಾನ್ಮೇಘನಿಸ್ವನಃ ।

॥ ಶ್ರೀ ಭಗವಾನುವಾಚ ॥

ಯದರ್ಥಮಾಗತಾ ಯೂಯಂ ಯದ್ವಾ ಭಯಮುಪಸ್ಥಿತಂ ॥ ೧೯ ॥
ತತ್ರ ಯದ್ವಾ ಮಯಾ ಕಾರ್ಯಂ ತದ್ದೇವಾಸ್ತೂರ್ಣಮುಚ್ಯತಾಂ ।

ಬೇರೊಂದು ವಸ್ತುವು ಇರುವುದಿಲ್ಲವು. ನಿನ್ನ ಗುಣಗಳು ಇಷ್ಟು ಎಂದು ತಿಳಿಯಲು ನಮ್ಮಗಳಿಗಾಗಲೀ, ಬ್ರಹ್ಮ ಈಶ್ವರ, ದಿಕ್ಪಾಲಕರುಗಳಿಗಾಗಲೀ, ಸಾಧ್ಯವಾಗುವುದಿಲ್ಲವು.

೧೮. ಎಲೈ ವಿಷ್ಣುವೇ! ನಾವೆಲ್ಲರೂ ಈಗ ಭಯದಿಂದ ಇಲ್ಲಿಗೆ ಬಂದು ನಿನ್ನನ್ನು ಭಕ್ತಿಭಾವದಿಂದ ಮರೆಹೊಕ್ಕಿರುತ್ತೇವೆ. ನೀನು ನಮ್ಮನ್ನು ಕಾಪಾಡ ಬೇಕು.

ಮಾರ್ಕಂಡೇಯ ಮುನಿಯು ಹೇಳಿದನು—ಇಂದ್ರನೇ ಮೊದಲಾದ ದೇವತೆಗಳ ಸಮೂಹದಿಂದ ಸ್ತೋತ್ರ ಮಾಡಲ್ಪಟ್ಟವನಾಗಿ, ದೇವತೆಗಳಿಗೂ ದೇವನಾದ, ಸಮಸ್ತ ಪ್ರಾಣಿಗಳನ್ನೂ ಚತುರ್ಮುಖ ಬ್ರಹ್ಮನನ್ನೂ ಸೃಷ್ಟಿ ಮಾಡುವ ಆ ಭಗವಂತನು, ಆ ದೇವತೆಗಳನ್ನು ಕುರಿತು ಮೇಘಸ್ವನದಂತೆ ಗಂಭೀರವಾದ ಧ್ವನಿಯಿಂದ ಈ ರೀತಿಯಾಗಿ ಹೇಳಿದನು.

೧೯ ಭಗವಂತನು ಹೇಳಿದನು—ಎಲೈ ದೇವತೆಗಳಿರಾ! ನೀವು ಇಲ್ಲಿಗೆ ಏತಕ್ಕಾಗಿ ಬಂದಿರುವಿರಿ? ನಿಮಗೆ ಭಯವೇನಾದರೂ ಉಂಟಾಗಿರುವುದೇ? ನನ್ನಿಂದ ಆಗ ಬೇಕಾದ ಕಾರ್ಯವೇನಾದರೂ ಉಂಟೇ? ಇದೆಲ್ಲವನ್ನೂ ಜಾಗ್ರತೆಯಾಗಿ ಹೇಳಿರಿ.

॥ ದೇವಾ ಊಚುಃ ॥

ಶೀರ್ಯತೇ ವಸುಧಾ ನಿತ್ಯಂ ಕ್ರೀಡಯಾ ಯಜ್ಞಪೋತ್ರಿಣಃ ॥ ೨೦ ॥

ಲೋಕಾಶ್ಚ ಸರ್ವೇ ಸಂಕ್ಷುಬ್ಧಾ ನಾಪ್ನುವನ್ನಿ ಪಶಾಂತತಾಂ ।
ಶುಷ್ಕಂ ತುಂಬೀಫಲಂ ಘಾತೈರ್ಯಥಾ ಜರ್ಜರತಾಂ ಗತಂ ॥ ೨೧ ॥

ವರಾಹಕ್ಷುದ್ರಘಾತೇನ ತಥಾ ಜರ್ಜರಿತಾ ಕ್ಷಿತಿಃ ।
ತಸ್ಯ ಯೇ ವಾ ತ್ರಯಃ ಪುತ್ರಾಃ ಕಾಲಾಗ್ನಿಸಮತೇಜಸಃ ॥ ೨೨ ॥

ಸುವೃತ್ತಃ ಕನಕೋ ಘೋರಸ್ತೈಶ್ಚಾಪ್ಯಾಘಾತಿತಂ ಜಗತ್ ।
ತೇಷಾಂ ಕರ್ದಮಲೀಲಾಭಿಃ ಸರಾಂಸಿ ಜಗತಾಂ ಪತೇ ॥ ೨೩ ॥

ಮಾನಸಾದೀನಿ ಭಗ್ನಾನಿ ಪ್ರಕೃತಿಂ ಯಾಂತಿ ನಾಧುನಾ ।

---

೨೦. ದೇವತೆಗಳು ಹೇಳಿದರು— ಯಜ್ಞವರಾಹನ ವಿಹಾರದಿಂದ ಈ ಭೂಮಿಯು ಪ್ರತಿದಿನವೂ ತುಳಿಯಲ್ಪಟ್ಟು, ಛಿನ್ನಭಿನ್ನವಾಗುತ್ತಿದೆ. ಸಮಸ್ತ ಜನ ಗಳಿಗೂ ಈ ಕ್ರೀಡೆಯಿಂದುಟಾಗುವ ಭೀತಿಯ ಕಳವಳದಿಂದ ನೆಮ್ಮದಿಯೆಂಬುವುದೇ ಇಲ್ಲವು.

೨೧, ಚೆನ್ನಾಗಿ ಒಣಗಿದ ತುಂಬೀಫಲವನ್ನು ಕಾಲಿನಿಂದ ತುಳಿದರೆ, ಪುಡಿ ಪುಡಿಯಾಗುವಂತೆ ಈ ಯಜ್ಞವರಾಹನ ಗೊರಸಿನ ತುಳಿತದಿಂದ ಈ ಭೂಮಿಯು ಛಿನ್ನಭಿನ್ನವಾಗುತ್ತಿದೆ.

೨೨. ಪ್ರಳಯಾಗ್ನಿಯಂತೆ ಭಯಂಕರವಾದ ಪರಾಕ್ರಮ ಉಳ್ಳ ಸುವೃತ್ತ, ಕನಕ, ಮತ್ತು ಘೋರ ಎಂಬ ಆ ವರಾಹನ ಮಕ್ಕಳಿಂದಲೂ ಸಹ ಈ ಭೂಮಿಯು ಧ್ವಂಸಮಾಡಲ್ಪಡುತ್ತಿದೆ.

೨೩. ಎಲೈ ಜಗತ್ಪತಿಯೇ! ಆ ಸುವೃತ್ತನೇ ಮೊದಲಾದವರ ಜಲಕ್ರೀಡೆಯ ವಿಹಾರದಿಂದ ಮಾನಸ ಸರೋವರವೇ ಮೊದಲಾದವರ ದೇವಲೋಕದ ಸರೋವರ ಗಳೂ ಸಹ ನಾಶಗೊಳಿಸಲ್ಪಟ್ಟವು. ಅವುಗಳು ತಮ್ಮ ಪೂರ್ವದ ಉತ್ತಮಸ್ಥಿತಿ ಯನ್ನು ಹೊಂದಲವಕಾಶವಾಗಲಿಲ್ಲವು.

ಭಗ್ನಾಸ್ತೈರ್ದೇವತರವೋ ನುಂದಾರಾದ್ಯಾ ಮಹಾಬಲೈಃ ॥ ೨೪ ॥

ದೇವನದ್ಯೋ ನ ರೋಹಂತಿ ಫಲಂ ಪುಷ್ಪಂ ದಲಂ ಚ ವಾ ।
ಯದಾ ತ್ರಿಕೂಟಮಾರುಹ್ಯ ತೇ ಸುವೃತ್ತಾದಯಸ್ತ್ರಯಃ ॥ ೨೫ ॥

ಪ್ಲುತಂ ಕೃತ್ವಾ ಮಹಾಬಾಹೋ ಪತಂತಿ ಲವಣಾರ್ಣವೇ ।
ತದಾ ತತ್ಕ್ಲುಬ್ಧತೋಯೋಘೈಃ ಪ್ಲಾವ್ಯತೇ ಸಕಲಾ ಮಹೀ ॥ ೨೬ ॥

ಉತ್ಪ್ಲವಂತಿ ಜನಾಃ ಸರ್ವೇ ಪ್ರಯಾಂತಿ ಚ ದಿಶೋ ದಶ ।
ಜೀವಿತಂ ರಕ್ಷಮಾಣಾಸ್ತೇ ಪ್ರಯಾಂತಿ ಚ ದಿಶೋ ದಶ ॥ ೨೭ ॥

ಯದಾ ತ್ರಿವಿಷ್ಟಪಂ ಯಾಂತಿ ಯಜ್ಞವಾರಾಹಪುತ್ರಕಾಃ ।
ಇತಸ್ತತಸ್ತದಾ ಭಗ್ನಾ ದೇವಾಃ ಶಾಂತಿಂ ನ ಲೇಭಿರೇ ॥ ೨೮ ॥

---

೨೪. ಬಲಿಷ್ಠರಾದ ಆ ವರಾಹನ ಮಕ್ಕಳು ಸ್ವರ್ಗದಲ್ಲಿ ನಂದನವನದಲ್ಲಿದ್ದ ಮಂದಾರವೇ ಮೊದಲಾದ ದೇವವೃಕ್ಷಗಳನ್ನು ಧ್ವಂಸಮಾಡಿದರು. ಅವುಗಳು ಈ ರೀತಿಯಾಗಿ ಧ್ವಂಸವಾಗಿರುವುದರಿಂದ ಫಲಪುಷ್ಪಾದಿಗಳನ್ನು ಬಿಡುತ್ತಿಲ್ಲವು. ದೇವ ನದಿಗಳೂ ಕೂಡಾ ಅವರಿಂದ ಅಲ್ಲೋಲಕಲ್ಲೋಲ ಮಾಡಲ್ಪಟ್ಟುವು.

೨೫-೨೬. ಎಲ್ಲಿ ಪರಾಕ್ರಮಶಾಲಿಯೇ! ಆ ಸುವೃತ್ತನೇ ಮೊದಲಾದ ಮೂವರೂ ತ್ರಿಕೂಟಪರ್ವತವನ್ನು ಏರಿ ಅಲ್ಲಿಂದ ಲವಣಸಮುದ್ರಕ್ಕೆ ಹಾರಿ, ಧುಮುಕಿ ದಾಗ ಅದರಿಂದ ಅಲ್ಲೋಲಕಲ್ಲೋಲವಾದ ನೀರಿನ ಅಲೆಗಳಿಂದ ಈ ಭೂಮಿಯೆಲ್ಲವೂ ನೆನೆದು ಮುಳುಗಿದಂತಾಗಿರುತ್ತದೆ.

೨೭. ಈ ರೀತಿ ಭೂಮಿಯು ನೀರಿನಿಂದ ಆವರಿಸಲ್ಪಟ್ಟುದುದರಿಂದ ಜನರೆ ಲ್ಲರೂ, ನೀರಿನಲ್ಲಿ ಮುಳುಗುವಂತಾಗಿ ತಮ್ಮ ಪ್ರಾಣಗಳನ್ನು ಸಂರಕ್ಷಣೆ ಮಾಡಿಕೊ ಳ್ಳಲು ದಿಕ್ಕುದಿಕ್ಕಿಗೆ ಓಡಿಹೋಗುತ್ತಿರುವರು.

೨೮. ಈ ಯಜ್ಞವರಾಹನ ಮಕ್ಕಳಾದ ಸುವೃತ್ತನೇ ಮೊದಲಾದವರು ಸ್ವರ್ಗಕ್ಕೆ ಹೋದರೆಂದರೆ ದೇವತೆಗಳೆಲ್ಲರೂ ಇವರ ಪ್ರಹಾರಗಳನ್ನು ತಡೆಯಲಾರದೆ ಇಲ್ಲಿಂದಲ್ಲಿಗೆ ಓಡಿಹೋಗುತ್ತಾ. ನೆಮ್ಮದಿಯಿಂದಿರಲು ಅವಕಾಶವನ್ನೇ ಕೊಡುತ್ತಿಲ್ಲವು.

ಸರ್ವೇ ತೈಃ ಪರ್ವತಾಃ ಪುತ್ರೈರ್ವರಾಹಸ್ಯ ಜಗತ್ಪತೇ ।
ಕ್ರೀಡಬ್ಭಿಃ ಶಿಖರೇ ನೀತಾ ಭೂರಿಭಾಗಮಧೋಗತಿಂ ॥ ೨೯ ॥

ಏವಂ ಕ್ರೀಡತಾಂ ತೇಷಾಂ ಕ್ರೀಡಾಭಿಃ ಸಕಲಂ ಜಗತ್ ।
ನಾಶಮಾಯಾತಿ ವೈಕುಂಠ ತಸ್ಮಾದ್ರಕ್ಷ ಜಗತ್ಪ್ರಭೋ ॥ ೩೦ ॥

॥ ಮಾರ್ಕಂಡೇಯ ಉವಾಚ ॥

ಇತಿ ತೇಷಾಂ ನಿಗದತಾಂ ಶ್ರುತ್ವಾ ವಾಕ್ಯಂ ಜನಾರ್ದನಃ ।
ಉವಾಚ ಶಂಕರಂ ದೇವಂ ಬ್ರಹ್ಮಾಣಂ ಚ ವಿಶೇಷತಃ ॥ ೩೧ ॥

ಯತ್ಕೃತೇ ದೇವತಾಃ ಸರ್ವಾಃ ಪ್ರಜಾಶ್ಚ ಸಕಲಾ ಇಮಾಃ ।
ಪ್ರಾಪ್ನುವಂತಿ ಮಹದ್ದುಃಖಂ ಶೀರ್ಯತೇ ಸಕಲಂ ಜಗತ್ ॥ ೩೨ ॥

ವಾರಾಹಂ ತದಹಂ ಕಾಯಂ ತ್ಯಕ್ತುಮಿಚ್ಛಾಮಿ ಶಂಕರ ॥ ೩೩ ॥

---

೨೯. ಎಲೈ ಜಗತ್ತಿಗೆ ಸ್ವಾಮಿಯಾದ ಭಗವಂತನೇ! ಈ ಯಜ್ಞವರಾಹನ ಮಕ್ಕಳು ಆಟವಾಡುತ್ತಿರುವಾಗ ಪರ್ವತ ಶಿಖರಗಳನ್ನು ಕೆತ್ತು ಕೆಳಕ್ಕೆ ಉರುಳಿಸುತ್ತಿದ್ದರು.

೩೦. ಎಲೈ ವೈಕುಂಠಾಧಿಪತಿಯೇ! ಇವರ ಈ ರೀತಿಯಾದ ಆಟಪಾಟಗಳಿಂದ ಪ್ರಪಂಚವೆಲ್ಲವೂ ನಾಶವಾಗುತ್ತಿದೆ. ಆದುದರಿಂದ ಎಲೈ ಜಗದೊಡೆಯನೇ! ನೀನು ನಮ್ಮಗಳನ್ನು ರಕ್ಷಿಸಬೇಕು.

೩೧. ಮಾರ್ಕಂಡೇಯ ಮಹರ್ಷಿಯು ಹೇಳಿದನು:—ಈ ರೀತಿ ಹೇಳಿದ ಆ ದೇವತೆಗಳ ಮಾತನ್ನು ಕೇಳಿ ನಾರಾಯಣನು ಈಶ್ವರನನ್ನೂ ಮತ್ತು ಬ್ರಹ್ಮನನ್ನೂ ಕುರಿತು ಹೀಗೆ ಹೇಳಿದನು.

೩೨-೩೩. ಎಲೈ ಶಂಕರನೇ! ಯಜ್ಞವರಾಹನ ಈ ರೀತಿಯಾದ ಕಾರ್ಯಗಳಿಂದ ಸಮಸ್ತ ಜನರೂ ಮತ್ತು ಪ್ರಪಂಚವೂ ಸಹ ತಲ್ಲಣಿಸಿ ಮಹಾದುಃಖವನ್ನು ಅನುಭವಿಸುವಂತಾಗಿದೆ. ಆದುದರಿಂದ ನನ್ನ ಅಂಶಭೂತವಾದ ವರಾಹ ಶರೀರವನ್ನು ತ್ಯಜಿಸಲು ಬಯಸುವೆನು.

ನಿರ್ವೇಶಶಕ್ತಂ ತಂ ತ್ಯಕ್ತುಂ ಸ್ವೇಚ್ಛಯಾ ನ ಹಿ ಶಕ್ಯತೇ ।
ತ್ವಂ ತ್ಯಾಜಯಸ್ವ ತಂ ಕಾಯಂ ಯತ್ನಾನ್ಮಾಂ ಶಂಕರಾಧುನಾ ॥ ೩೪ ॥

ತ್ವಮಾಪ್ಯಾಯಸ್ವ ತೇಜೋಭಿರ್ಬ್ರಹ್ಮನ್ ಸ್ಮರಹರಂ ಮುಹುಃ ।
ಆಪ್ಯಾಯಂತು ತಥಾ ದೇವಾಃ ಶಂಕರೋ ಹಂತು ಪೋತ್ರಿಣಂ ॥ ೩೫ ॥

ರಜಸ್ವಲಾಯಾಃ ಸಂಸರ್ಗಾದ್ವಿಪ್ರಾಣಾಂ ಮಾರಣಂ ತಥಾ ।
ಕಾಯಃ ಪಾಪಕರೋ ಭೂತಸ್ತಂ ತ್ಯಕ್ತುಂ ಯುಜ್ಯತೇಽಧುನಾ ॥ ೩೬ ॥

ಪ್ರಾಯಶ್ಚಿತ್ತೈರಪೈತ್ಯೇನಃಪ್ರಾಯಶ್ಚಿತ್ತಮಹಂ ತತಃ ।
ಚರಿಷ್ಯಾಮಿ ತದರ್ಥಂ ಮೇ ತನುರ್ಯತ್ನೇನ ಶಾಮ್ಯತಾಂ ॥ ೩೭ ॥

ಪ್ರಜಾಃ ಪಾಲ್ಯಾ ಮಮ ಸದಾ ಸಾ ಹಿ ಸೀದತಿ ನಿತ್ಯಶಃ ।
ಮತ್ಕೃತೇ ಪ್ರತ್ಯಹಂ ತಸ್ಮಾತ್ಯಕ್ಷ್ಯೇ ಕಾಯಂ ಪ್ರಜಾಪತೇ ॥ ೩೮ ॥

---

೩೪. ಎಲ್ಲಿ ಶಂಕರನೇ! ಆ ಅಂಶಶರೀರವನ್ನು ನನ್ನ ಸ್ವಂತವಾದ ಇಚ್ಛೆಯಿಂದ ಬಿಟ್ಟುಬಿಡಲು ಸಾಧ್ಯವಿಲ್ಲ. ಆದುದರಿಂದ ಈಗ ನೀನು ಪ್ರಯತ್ನ ಮಾಡಿ ನನ್ನ ಆ ಶರೀರವನ್ನು ಬಿಡಿಸುವವನಾಗು.

೩೫. ಎಲೈ ಬ್ರಹ್ಮನೇ! ನೀನು ನಿನ್ನ ತೇಜಸ್ಸನ್ನು ಎಂದರೆ ಶಕ್ತಿಯನ್ನು ಈ ಕಾಮರಿಪುವಾದ ಶಂಕರನಿಗೆ ಕೊಟ್ಟು ಇವನ ಶಕ್ತಿಯನ್ನು ಅಭಿವೃದ್ಧಿಗೊಳಿಸು. ಅದರಂತೆಯೇ ದೇವತೆಗಳೂ ಸಹ ತಮ್ಮ ತಮ್ಮ ಶಕ್ತಿಗಳನ್ನು ಈ ಶಂಕರನಿಗೆ ಕೊಟ್ಟು ಈ ವರಾಹನನ್ನು ಸಂಹರಿಸಲು ಸಹಾಯ ಮಾಡಲಿ.

೩೬. ರಜಸ್ವಲೆಯಾದ ಸ್ತ್ರೀಯ ಸಂಭೋಗದಿಂದಲೂ, ಬ್ರಾಹ್ಮಣರನ್ನು ಕೊಂದ ಪಾಪದಿಂದಲೂ, ಈ ವರಾಹ ಶರೀರವು ಪಾಪಕರವಾಗಿ ಪರಿಣಮಿಸಿರುವುದು. ಆದುದರಿಂದ ಇದನ್ನು ಈಗ ತ್ಯಜಿಸುವುದು ಯುಕ್ತವು.

೩೭. ಈ ಪಾಪಗಳ ಪ್ರಾಯಶ್ಚಿತ್ತಕ್ಕೋಸ್ಕರ ನಾನು ಪ್ರಾಯಶ್ಚಿತ್ತರೂಪವಾದ ಈ ದೇಹತ್ಯಾಗವನ್ನು ಆಚರಿಸುತ್ತೇನೆ. ಆದುದರಿಂದ ಈ ನನ್ನ ಶರೀರವು ಪ್ರಯತ್ನ ಪೂರ್ವಕವಾಗಿ ಕೊನೆಗಾಣುವಂತಾಗಲಿ.

೩೮. ಎಲ್ಲೈ ಬ್ರಹ್ಮನೇ! ಪ್ರಜೆಗಳನ್ನು ಕಾಪಾಡುವುದೇ ನನ್ನ ಕರ್ತವ್ಯವು. ಈಗ ಆ ಪ್ರಜಾವರ್ಗವು ನನ್ನಿಂದಲೇ ಪ್ರತಿದಿನವೂ ನಾಶವನ್ನೈದುತ್ತಿದೆ. ಆದುದರಿಂದ ಇದಕ್ಕೆ ಕಾರಣಭೂತವಾದ ವರಾಹ ಶರೀರವನ್ನು ನಾನು ತ್ಯಜಿಸುತ್ತೇನೆ.

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತೌ ವಾಸುದೇವೇನ ತದಾ ತೌ ಬ್ರಹ್ಮಶಂಕರೌ ।
ತ್ವಯಾ ಯಥೋಕ್ತಂ ತತ್ಕಾರ್ಯಮಿತಿ ಗೋವಿಂದಮೂಚತುಃ ॥ ೩೯ ॥

ವಾಸುದೇವೋಽಪಿ ತಾನ್ಸರ್ವಾನ್ವಿಸೃಜ್ಯ ತ್ರಿದಶಾಂಸ್ತಥಾ ।
ವಾರಾಹಂ ತೇಜ ಆಹರ್ತುಂ ಸ್ವಯಂ ಧ್ಯಾನಪರೋಽಭವತ್ ॥ ೪೦ ॥

ಶನೈಃ ಶನೈರ್ಯದಾ ತೇಜ ಆಹರತ್ಯೇಷ ಮಾಧವಃ ।
ತದಾ ದೇಹಂ ತು ವಾರಾಹಂ ಸತ್ತ್ವಹೀನಮಜಾಯತ ॥ ೪೧ ॥

ತೇಜೋಹೀನಂ ಯದಾ ದೇಹಂ ಜ್ಞಾತಂ ಸರ್ವೈಸ್ತದಾಮರೈಃ ।
ಅಸಸಾದ ತದಾ ದೇವೋ ಯಜ್ಞವಾರಾಹಮದ್ಭುತಂ ॥ ೪೨ ॥

ಬ್ರಹ್ಮಾದ್ಯಾಸ್ತ್ರಿದಶಾಃ ಸರ್ವೇ ಮಹಾದೇವಮುಮಾಪತಿಂ ।
ಅನುಜಗ್ಮುಸ್ತದಾ ತೇಜ ಆಧಾತುಂ ಸ್ಮರಶಾಸನೇ ॥ ೪೩ ॥

---

೩೯. ಮಾರ್ಕಂಡೇಯ ಮುನಿಯು ಹೇಳಿದನು:—ನಾರಾಯಣನು ಬ್ರಹ್ಮ ಶಂಕರರಿಗೆ ಹೀಗೆ ಹೇಳಲು ಅವರು ನೀನು ಹೇಳಿದಂತೆ ಮಾಡುವುದೇ ಸರಿ ಎಂದು ಆ ನಾರಾಯಣನಿಗೆ ಹೇಳಿದರು.

೪೦. ಅನಂತರದಲ್ಲಿ ಆ ನಾರಾಯಣನೂ ಸಹ ಆ ದೇವತೆಗಳನ್ನು ಕಳುಹಿಸಿ, ವರಾಹರೂಪವಾದ ತನ್ನ ತೇಜಸ್ಸನ್ನು ಶಾಂತಿಗೊಳಿಸಲು ತಾನು ಸ್ವಲ್ಪಕಾಲ ಧ್ಯಾನಾಸಕ್ತನಾಗಿದ್ದನು.

೪೧. ಹೀಗೆ ವಿಷ್ಣುವು ಆ ವರಾಹ ತೇಜಸ್ಸನ್ನು ಮೆಲ್ಲಮೆಲ್ಲನೆ, ಸ್ವಲ್ಪಸ್ವಲ್ಪವಾಗಿ ಆಕರ್ಷಣೆ ಮಾಡಿ ಹಿಂದಕ್ಕೆ ತೆಗೆದುಕೊಳ್ಳಲು ಪ್ರಾರಂಭಿಸಿದೊಡನೆಯೇ ಆ ವರಾಹಶರೀರವು ತನ್ನ ಸಾಮರ್ಥ್ಯವನ್ನು ಕಳೆದುಕೊಂಡು ನಿಶ್ಯಕ್ತಿಯುಳ್ಳದ್ದಾಯಿತು.

೪೨. ಹೀಗೆ ಕ್ರಮಕ್ರಮವಾಗಿ ಆ ಶರೀರವು ಶಕ್ತಿರಹಿತವಾದುದನ್ನು ದೇವತೆಗಳೆಲ್ಲರೂ ಅರಿತುಕೊಂಡರು. ಆಗ ಪರಮೇಶ್ವರನು ಅದ್ಭುತಾಕಾರವುಳ್ಳ ಆ ಯಜ್ಞವರಾಹದ ಸಮೀಪವನ್ನೈದಿದನು.

೪೩. ಆ ಬಳಿಕ ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ, ಹಿಂದೆ ವಿಷ್ಣುವು ತಮಗೆ ತಿಳಿಸಿದ್ದಂತೆ ತಮ್ಮ ತಮ್ಮ ತೇಜಸ್ಸನ್ನು ಪಾರ್ವತೀಪತಿಯಾದ ಆ ಪರಮೇಶ್ವರನಿಗೆ ಕೊಟ್ಟು ಅಭಿವೃದ್ಧಿಗೊಳಿಸಲು ಅವನ ಸಮೀಪಕ್ಕೆ ಬಂದರು.

ತತಃ ಸರ್ವೈರ್ದೇವಗಣೈಃ ಸ್ವಂ ಸ್ವಂ ತೇಜೋ ವೃಷಧ್ವಜೇ ।
ಆದಧೇ ತೇನ ಬಲವಾನ್ಸೋಽತೀವ ಸಮುಜಾಯತ ॥ ೪೪ ॥

ತತಃ ಶರಭರೂಪೀ ಸ ತತ್ಕ್ಷಣಾದ್ಗಿರಿಶೋಽಭವತ್ ।
ಊರ್ಧ್ವಾಧೋಭಾಗತಶ್ಚಾಷ್ಟಪಾದಯುಕ್ತಃ ಸುಭೈರವಃ ॥ ೪೫ ॥

ದ್ವಿಲಕ್ಷಯೋಜನೋಚ್ಛ್ರಾಯಃ ಸಾರ್ಧಲಕ್ಷೈಕವಿಸ್ತೃತಃ ।
ಊರ್ಧ್ವಂ ವಾರಾಹಕಾಯಸ್ತು ಲಕ್ಷಯೋಜನವಿಸ್ತೃತಃ ॥ ೪೬ ॥

ಲಕ್ಷಾರ್ಧವಿಸ್ತೃತಃ ಪಾರ್ಶ್ವೇ ವರ್ಧಮಾನಸ್ತದಾಭವತ್ ।
ತತಃ ಶರಭರೂಪಂ ತಂ ಮಹಾದೇವಮುಮಾಪತಿಂ ॥ ೪೭ ॥

ದದರ್ಶ ಯಜ್ಞಪೋತ್ರೀ ಸ ಸ್ಪೃಶಂತಂ ಶಿರಸಾ ವಿಧುಂ ।
ಸುಧೀರ್ಘನಾಸಾನಖರಂ ಕೃಷ್ಣಾಂಗಾರಸಮಪ್ರಭಂ ॥ ೪೮ ॥

---

೪೪. ಆಮೇಲೆ ಆ ದೇವಸಮೂಹವೆಲ್ಲವೂ ತಮ್ಮ ತಮ್ಮ ತೇಜಸ್ಸನ್ನು ಆ ಶಂಕರನಲ್ಲಿ ನೆಲೆಸುವಂತೆ ಮಾಡಿದರು. ಅದರಿಂದ ಶಂಕರನು ಬಹಳವಾಗಿ ಬಲವ್ಯಕ್ತನಾದನು.

೪೫. ತತ್ಕ್ಷಣವೇ ಆ ಶಂಕರನು ಹಿಂಭಾಗದಲ್ಲಿಯೂ, ಮತ್ತು ಮುಂದುಗಡೆಯಲ್ಲಿಯೂ ಎಂಟು ಕಾಲುಗಳಿಂದ ಕೂಡಿ ಭಯಂಕರಾಕಾರವಾದ ಶರಭರೂಪವನ್ನು ಕೈಗೊಂಡನು.

೪೬. ಆ ಶರಭರೂಪವು ಎರಡು ಲಕ್ಷ ಯೋಜನ ಎತ್ತರವಾಗಿಯೂ, ಒಂದೂವರೆ ಲಕ್ಷ ಯೋಜನ ಅಗಲವಾಗಿಯೂ, ಮೇಲುಭಾಗದಲ್ಲಿ ಒಂದು ಲಕ್ಷ ಯೋಜನ ವರಾಹದ ಶರೀರವುಳ್ಳದ್ದಾಗಿಯೂ, ಇತ್ತು. ಮತ್ತು ಎಡಬಲ ಪಾರ್ಶ್ವಗಳಲ್ಲಿ ಅರ್ಧ ಲಕ್ಷ ವಿಸ್ತೀರ್ಣವುಳ್ಳದ್ದಾಗಿಯೂ ಇತ್ತು.

೪೭—೫೦. ಪಾರ್ವತೀಪತಿಯಾದ ಶಂಕರನು ತಾಳಿದ ಆ ಶರಭರೂಪವು ಅತ್ಯಂತ ಎತ್ತರ ಆಕಾರವುಳ್ಳದ್ದಾಗಿ ಚಂದ್ರಮಂಡಲವನ್ನು ತನ್ನ ಶಿರಸ್ಸಿನಿಂದ ಮುಟ್ಟುವಂತಿತ್ತು. ಮತ್ತು ಅದರ ನಾಸಾಗ್ರವು ಉದ್ದವಾಗಿಯೂ, ಇಜ್ಜಲಿನಂತೆ ಕಪ್ಪುಬಣ್ಣವುಳ್ಳದ್ದಾಗಿಯೂ, ಇತ್ತು. ಉದ್ದವಾದ ಮೂತಿ, ದೊಡ್ಡವಾದ ಶರೀರ, ಎಂಟು

ದೀರ್ಘವಕ್ತ್ರಂ ಮಹಾಕಾಯಮುಷ್ಟದಂಷ್ಟ್ರಾಸಮನ್ವಿತಂ ।
ಬಿಭ್ರತಂ ಸಸಟಂ ಪುಚ್ಛಂ ದೀರ್ಘಕರ್ಣಂ ಭಯಾನಕಂ ॥ ೪೯ ॥

ಚತುರಃ ಪೃಷ್ಠತಃ ಪಾದಾನಧರೇ ಚತುರಸ್ತಥಾ ।
ಕುರ್ವಂತಂ ಘೋರಮಾರಾವಮುತ್ಪತಂತಂ ಪುನಃ ಪುನಃ ॥ ೫೦ ॥

ತಮಾಯಾಂತಂ ತತೋ ದೃಷ್ಟ್ವಾ ಕ್ರೋಧಾದ್ಧಾವಂತಮಂಜಸಾ ।
ಸುವೃತ್ತಃ ಕನಕೋ ಘೋರ ಆಸೇದುಃ ಕ್ರೋಧಮೂರ್ಛಿತಾಃ ॥ ೫೧ ॥

ತಮಾಸಾದ್ಯ ಮಹಾಕಾಯಂ ಶರಭಂ ಭ್ರಾತರಸ್ತ್ರಯಃ ।
ಉಚ್ಚಿಕ್ಷಿಪುಸ್ತೇ ಯುಗಪತ್ಪೋತ್ರಕೈರ್ಮಹಾಬಲಾಃ ॥ ೫೨ ॥

ಯಾವತ್ಪ್ರಮಾಣಃ ಶರಭಸ್ತತ್ಪ್ರಮಾಣಾಸ್ತಯಾಭವನ್ ।
ಶರಭೋಽಪ್ಯಪಸಮಯೇ ಮಾಯಯಾ ಪೋತ್ರಿಣಸ್ತದಾ ॥ ೫೩ ॥

ಕೋರೆಹಲ್ಲುಗಳು, ಕೂದಲಿನಿಂದ ಕೂಡಿದ ಬಾಲ, ಉದ್ದವಾದ ಕಿವಿಗಳು, ಇವುಗಳಿಂದ ಕೂಡಿ ಆ ಶರಭವು ಬಹಳ ಭಯಂಕರವಾಗಿ ಕಾಣಿಸುತ್ತಿತ್ತು. ಅದಕ್ಕೆ ಹಿಂದೆ ನಾಲ್ಕು ಮುಂದೆ ನಾಲ್ಕು ಕಾಲುಗಳು. ಈ ರೀತಿಯಾಗಿರುವ ಆ ಶರಭವು ಮಹಾ ಭಯಂಕರವಾದ ಗರ್ಜನೆಯನ್ನು ಸೂಡುತ್ತಾ, ಮುಂದೆ ಮುತ್ತೆ ಮುತ್ತೆ ನುಗ್ಗಿ ಬರುತ್ತಿರುವುದನ್ನು ಆ ಯಜ್ಞವರಾಹನು ನೋಡಿದನು.

೫೦. ಈ ರೀತಿ ಕೋಪದಿಂದ ಮುಂದೆ ನುಗ್ಗಿ ಓಡಿಬರುತ್ತಾ ಇರುವ ಶರಭನನ್ನು ಯಜ್ಞವರಾಹನ ಮಕ್ಕಳಾದ ಸುವೃತ್ತ, ಕನಕ, ಘೋರ ಇವರುಗಳು ನೋಡಿ ಮಹಾಕೋಪಾವಿಷ್ಟರಾಗಿ ಅದರ ಸಮೀಪಕ್ಕೆ ಬಂದರು.

೫೨. ಮಹಾಬಲಾಢ್ಯರಾದ ಆ ಮೂರು ಜನ ಸಹೋದರರೂ, ದೊಡ್ಡ ಶರೀರವುಳ್ಳ ಆ ಶರಭದ ಸಮೀಪಕ್ಕೆ ಬಂದು ಅವನ್ನು ಮೂವರೂ ಸೇರಿ, ಏಕಕಾಲದಲ್ಲಿ ತಮ್ಮ ಮೂತಿಗಳಿಂದ ಎತ್ತಿ ಬಿಸಾಡಿದರು.

೫೩. ಆ ಮೂರುಜನ ವರಾಹನ ಮಕ್ಕಳೂ, ಶರಭನನ್ನು ಎತ್ತಿಬಿಸಾಕುವ ಸಮಯದಲ್ಲಿ ತಮ್ಮ ಮಾಯಾಪ್ರಭಾವದಿಂದ ಆ ಶರಭವು ಎಷ್ಟು ದೊಡ್ಡದಾಗಿತ್ತೋ ಅಷ್ಟೇ ದೊಡ್ಡದಾದ ಆಕಾರವನ್ನು ತಾಳಿದರು.

ತೇಷಾಂ ಪೋತ್ರಪ್ರಹಾರೇಣ ಪ್ರೋತ್ಕ್ಷಿಪ್ತಃ ಶರಭಸ್ತದಾ ।
ಪಪಾತ ಪೃಥಿವೀಪ್ರಾಂತೇ ಗಂಭೀರೇ ತೋಯಸಾಗರೇ ॥ ೫೪ ॥

ತಸ್ಮಿನ್ನಿಪತಿತೇ ತತ್ರ ಸಾಗರೇ ಮಕರಾಲಯೇ ।
ಉತ್ಪತ್ಯ ತೇ ತ್ರಯಃ ಪೇತುಃ ಕ್ರೋಧಾತ್ತಸ್ಮಿನ್ಮಹೋದಧೌ ॥ ೫೫ ॥

ಸುವೃತ್ತೇ ಕನಕೇ ಘೋರೇ ಪತಿತೇ ಸಾಗರಾಂಭಸಿ ।
ವರಾಹೋಪಿ ಸುತಸ್ನೇಹಾತ್ಕ್ರೋಧಾಚ್ಚ ದ್ವಿಜಸತ್ತಮಾಃ ॥ ೫೬ ॥

ಉತ್ಪತ್ಯ ಸಹಸಾ ತಸ್ಮಿಂಸ್ತೋಯರಾಶೌ ಪಪಾತ ಹ ।
ಉತ್ಪತಂತಸ್ತದಾ ತೇ ವೈ ವಾರಾಹಾಃ ಶರಭಸ್ತಥಾ ॥ ೫೭ ॥

ಬಭುಜುರ್ದಿವಿ ದೇವಾಂಸ್ತು ನಕ್ಷತ್ರಾಣಿ ಗ್ರಹಾಂಸ್ತಥಾ ।
ಕೇಚಿತ್ತು ನಿಪತಾ ದೇವಾ ಭೂಮೌ ಪೇತುಶ್ಚ ಕೇಚನ ।
ಕೇಚಿಚ್ಚ ಜ್ಞಾನಿನೋ ದೇವಾ ಮಹರ್ಲೋಕಮುಪಾಶ್ರಿತಾಃ ॥ ೫೮ ॥

---

೫೪. ಅವರುಗಳ ಮೂತಿಯಿಂದ ಎತ್ತಿಹಾಕಲ್ಪಟ್ಟ, ಶರಭನು ಭೂಮಿಯ ಕೊನೆಯಲ್ಲಿರುವ ಆಳವಾದ ಸಮುದ್ರದ ನೀರಿನಲ್ಲಿ ಬಿದ್ದನು.

೫೫. ಶರಭನು ಜಲಚರ ಪ್ರಾಣಿಗಳಿಂದ ಕೂಡಿದ ಸಮುದ್ರದಲ್ಲಿ ಬೀಳಲಾಗಿ ಆ ಮೂವರೂ ಕೋಪಗೊಂಡು ಅಲ್ಲಿಂದ ಹಾರಿ ಆ ಮಹಾಸಮುದ್ರದಲ್ಲಿ ತಾವೂ ಧುಮುಕಿದರು.

೫೬. ಎಲೈ ವಿಪ್ರೋತ್ತಮನೇ ! ಕೇಳು ವರಾಹನ ಮಕ್ಕಳಾದ ಸುವೃತ್ತನೂ, ಕನಕನೂ, ಘೋರನೂ, ಹೀಗೆ ಸಮುದ್ರದ ನೀರಿನಲ್ಲಿ ಧುಮುಕಲಾಗಿ ಅವರ ತಂದೆಯಾದ ವರಾಹನೂ, ತನ್ನ ಪುತ್ರನ ಮೇಲಿನ ಪ್ರೀತಿಯಿಂದಲೂ, ಶರಭನ ಮೇಲಿನ ಕೋಪದಿಂದಲೂ ಕೂಡಿ ಆ ಸಮುದ್ರದಲ್ಲಿ ತಾನೂ ಕೂಡಲೇ ಹಾರಿ ಧುಮುಕಿದನು.

೫೭. ವರಾಹನೂ, ಅವನ ಮಕ್ಕಳೂ, ಶರಭವೂ, ಹಾರಿ ಸಮುದ್ರದಲ್ಲಿ ಬೀಳುವಕಾಲದಲ್ಲಿ ಅವರು ಧುಮಿಕಿದ ವೇಗದಿಂದ ನೀರು ಮೇಲಕ್ಕೆ ಹಾರಿ ಸ್ವರ್ಗದಲ್ಲಿರುವ ದೇವತೆಗಳೂ, ನಕ್ಷತ್ರಗಳೂ ಮತ್ತು ಗ್ರಹಗಳೂ ಸಹ ನೆನೆದು ತಲ್ಲಣಿಸಿ ಹೋದರು.

೫೮. ಕೆಲವು ದೇವತೆಗಳು ಸತ್ತುಹೋದರು. ಕೆಲವರು ಸ್ವರ್ಗದಿಂದ ಭೂಮಿಯಮೇಲೆ ಬಿದ್ದರು. ಬುದ್ಧಿವಂತರಾದ ಕೆಲವರು ಮಹರ್ಲೋಕಕ್ಕೆ ಓಡಿ ಹೋದರು.

ನಕ್ಷತ್ರಾಣಿ ವಿಮಾನಾತ್ತು ಪತಿತಾನಿ ಮಹೀತಲೇ ॥ ೫೯ ॥

ಅದೃಶ್ಯಂತ ದ್ವಿಜಶ್ರೇಷ್ಠಾ ಜ್ವಾಲಾಮಾಲಾಕುಲಾನಿ ವೈ ।
ತೇಷಾಮುತ್ಪತನೇ ವೇಗೋ ಯೋಽಭೂತ್ಪರಮದಾರುಣಃ ॥ ೬೦ ॥

ತೇನಾತಿವೇಗೋ ಜನಿತೋ ವಾಯುಃ ಪರಮದಾರುಣಃ ।
ವಾಯುನಾ ತೇನ ಸುನ್ನಾಸ್ತೇ ಪರ್ವತಾಃ ಪೃಥಿವೀತಲೇ ॥ ೬೧ ॥

ಕೇಚಿಚ್ಛೈಲಾಃ ಪರ್ವತೇಷು ಪತಿತಾಃ ಪುನರೇವ ತು ।
ವಿಮೃದ್ಯ ವೃಕ್ಷಾನ್ ಜಂತೂಂಶ್ಚ ನಿಪೇತುಶ್ಚ ಪುನಃ ಪುನಃ ॥ ೬೨ ॥

ಕೇಚಿತ್ತು ಪರ್ವತಾಶ್ಶೈರ್ನೃತ್ಯಮಾನಾ ಮಹೀತಲೇ ।
ಬಭುಜ್ಜುರಚಲಾಶ್ಚಾಪಿ ವ್ರಜಂತೋ ಬಹುಶಃ ಪ್ರಜಾಃ ॥ ೬೩ ॥

ಪರ್ವತಾಃ ಸಮದೃಶ್ಯಂತ ವಾತವೇಗೇನ ಭೂತಲೇ ॥ ೬೪ ॥

---

೫೯. ಎಲೈ ಬ್ರಾಹ್ಮಣಶ್ರೇಷ್ಠರೇ! ಆಕಾಶದಿಂದ ಭೂಮಿಯಮೇಲೆ ಬಿದ್ದ ನಕ್ಷತ್ರಗಳು ಬೆಂಕಿಯ ಜ್ವಾಲೆಗಳ ಮಾಲೆಯಂತೆ ಶೋಭಿಸುತ್ತಿದ್ದುವು.

೬೦. ಅವರುಗಳು ಸಮುದ್ರದಲ್ಲಿ ಬೀಳುವ ರಭಸದಿಂದ ಭಯಂಕರವಾದ ಬಿರುಗಾಳಿಯು ಹುಟ್ಟಿತು. ಆ ಬಿರುಗಾಳಿಯು ಅತಿ ವೇಗವುಳ್ಳದ್ದಾಗಿಯೂ, ಭಯಂಕರವಾಗಿಯೂ ಇತ್ತು.

೬೧-೬೨. ಆ ಬಿರುಗಾಳಿಯ ಹೊಡೆತದಿಂದ ಭೂಮಿಯಮೇಲಿದ್ದ ಕೆಲವು ಪರ್ವತಗಳು ಮತ್ತೆ ಬೇರೆ ಪರ್ವತಗಳಮೇಲೆ ಬಿದ್ದು ಅವುಗಳಲ್ಲಿರುವ ವೃಕ್ಷಗಳನ್ನೂ ಪ್ರಾಣಿಗಳನ್ನೂ ಮರ್ದಿಸಿ ಮತ್ತೆಮತ್ತೆ ಒಂದಕ್ಕೊಂದು ಘರ್ಷಣೆಯನ್ನುಂಟುಮಾಡುತ್ತಿದ್ದುವು.

೬೩. ಕೆಲವು ಪರ್ವತಗಳು ಒಂದರಮೇಲೊಂದು ಬಿದ್ದು ಪುಟಿಹಾರಿ ಭೂಮಿಯಮೇಲಿದ್ದ ಪರ್ವತಗಳನ್ನೂ, ಭಯದಿಂದ ಓಡಿಹೋಗುತ್ತಿದ್ದ ಜನಗಳನ್ನೂ ನುಜ್ಜುಗುಜ್ಜು ಮಾಡುತ್ತಿದ್ದುವು.

೬೪. ಬಿರುಗಾಳಿಯ ವೇಗದಿಂದ ಒಂದಕ್ಕೊಂದು ತಗಲಿ ತಿಕ್ಕಾಡುತ್ತಾ ಇದ್ದ ಪರ್ವತಗಳು ಭೂಮಿಯಮೇಲೆ ಮುಂದೆಮುಂದೆ ನಡೆದುಹೋಗುತ್ತಿರುವಂತೆ ಕಾಣುತ್ತಿದ್ದುವು.

ಸಂಘಟ್ಟ್ಯಮಾನಾಸ್ತೇಭ್ಯೋಽನ್ಯೇ ವ್ರಜಂತ ಇವ ತೇಽಚಲಾಃ ।
ಅಂಭೋನಿಧೌ ಸತದ್ಭಿಸ್ತೈರ್ವಾರಾಹೈಃ ಶರಭೇಣ ಚ ॥ ೬೫ ॥

ಪರ್ವತೈಶ್ಚ ಮಹಾತುಂಗೈರುತ್ಕ್ಷಿಪ್ತಾಸ್ತೋಯರಾಶಯಃ ॥ ೬೬ ॥

ತೇಷಾಂ ಪ್ರಪಾತವೇಗೇನ ಕ್ಷಿಪ್ತೇಷು ಜಲರಾಶಿಷು ।
ನಿಸ್ತೋಯಾ ಇವ ಸಂಜಾತಾಃ ಕ್ಷಣಂ ವೈ ಸರ್ವಸಾಗರಾಃ ॥ ೬೭ ॥

ತೈಃ ಸರ್ವೈಃರುದಕೈಃ ಕ್ಷಿಪ್ತೈಃ ಪೃಥಿವೀತಲಮಾಗತೈಃ ।
ಉತ್ಪ್ಲಾವಿತಾಃ ಪ್ರಜಾಃ ಸರ್ವಾಃ ಕ್ಷಣಾಚ್ಚಗ್ಮುಃ ಕ್ಷಯಂ ತತಃ ॥ ೬೮ ॥

ಪ್ಲವಮಾನಾಃ ಪ್ರಜಾಸ್ತೋಯೇ ಮ್ರಿಯಮಾಣಾಃ ಸಮಂತತಃ ।
ಹಾ ಪಿತಸ್ತ್ವಿಹ ಹಾ ತಾತ ಹಾ ಮಾತರ್ಹಾ ಸುತೇತಿ ಚ ॥ ೬೯ ॥

೬೫-೬೬. ಸರಾಹನ ಮಕ್ಕಳೂ, ಶರಭನೂ ಸಮುದ್ರದಲ್ಲಿ ಧುಮುಕುವ ಕಾಲದಲ್ಲಿಯೂ ಮಹೋನ್ನತಗಳಾದ ಪರ್ವತಗಳು ಸಮುದ್ರದಲ್ಲಿ ಬೀಳುವ ಸಮಯದಲ್ಲಿಯೂ ಅವರ ಬೀಳುವ ರಭಸದಿಂದ ಸಮುದ್ರದ ನೀರೆಲ್ಲವೂ ಮೇಲಕ್ಕೆ ಎಸೆಯಲ್ಪಟ್ಟಿತು.

೬೭. ಹೀಗೆ ಅವರು ಧುಮುಕಿದ ವೇಗದಿಂದ ಸಮುದ್ರದ ನೀರೆಲ್ಲವೂ ಮೇಲಕ್ಕೆ ಹಾರಲು ಆ ಎಲ್ಲಾ ಸಮುದ್ರಗಳೂ ಒಂದು ಕ್ಷಣಕಾಲ ಪರ್ಯಂತರ ಸ್ವಲ್ಪವೂ ನೀರಿಲ್ಲದಂತೆ ಕಾಣುತ್ತಿದ್ದವು.

೬೮. ಮೇಲಕ್ಕೆ ಎಸೆಯಲ್ಪಟ್ಟ ನೀರೆಲ್ಲವೂ ಪುನಃ ಭೂಮಿಯ ಮೇಲೆ ಬಿದ್ದು ಭೂಮಿ ಎಲ್ಲವೂ ನೀರಿನಿಂದ ಆವರಿಸಲ್ಪಟ್ಟಿದ್ದರಿಂದ ಜನಗಳೆಲ್ಲರೂ ನೀರಿನಲ್ಲಿ ಮುಳುಗಿ ಹೋಗಿ ಸತ್ತುಹೋದರು.

೬೯. ನೀರಿನಲ್ಲಿ ಮುಳುಗಿಹೋಗುತ್ತಿರುವ ಜನಗಳು ಸಾಯುವ ಸಮಯದಲ್ಲಿ ತಮ್ಮ ಸ್ವಜನರನ್ನು ನೆನೆದು ಹಾ! ತಂದೆಯೇ! ಹಾ! ತಾಯಿಯೇ! ಹಾ! ಮಗನೇ! ಎಂಬ ಕರುಣಾಜನಕವಾದ ಆರ್ತನಾದದಿಂದಲೂ, ಮರಣದ ಭಯದಿಂದಲೂ ಗೋಳಿಡುತ್ತಲಿದ್ದರು.

ವಿಲಪಂತಿ ಸ್ಮ ಕರುಣಂ ಭೀತಾಶ್ಚಾರ್ತಾ ಸುಮೂರ್ಛವಃ ।
ಯಸ್ಮಿನ್ದೇಶೇ ನಿಪತಿತೋ ವಾರಾಹ್ಯೈಃ ಶರಭಃ ಸಹ ॥ ೭೦ ॥

ತತ್ರೈವಾಧೋ ಗತಾ ಭೂಮಿಃ ಪಾದವೇಗೇನ ದಾರಿತಾ ।
ಅಪರಃ ಪೃಥಿವೀಪ್ರಾಂತ ಉತ್ಥಿತಃ ಪರ್ವತೈಃ ಸಹ ॥ ೭೧ ॥

ಸಸರ್ಜ ಜನಲೋಕೇಷು ಚಲಾಂತೇಷಾಂ ಪ್ರಭಂಜನೈಃ ।
ಜನಲೋಕೇಷು ಸಂಯುಕ್ತಾಂ ಪೃಥಿವೀಂ ಶರಭಸ್ತದಾ ॥ ೭೨ ॥

ನಿಃಶ್ರೇಣೀಮಿವ ಸಂಬದ್ಧಾಮಚಲಾಮಪಿ ಪೋತ್ರಿಭಿಃ ।
ದದರ್ಶ ವಿಸ್ಮಯಾವಿಷ್ಟಃ ಸಭೀತಃ ಶ್ರಾಂತಪೀಡಿತಃ ॥ ೭೩ ॥

ತತಸ್ತೇ ಯುಯುಧುಃ ಸರ್ವೇ ಪೋತ್ರಘಾತೇನ ಪೋತ್ರಿಣಃ ।
ಖುರಪ್ರಹಾರೈರ್ದಂಷ್ಟ್ರಾಘಗಾರ್ತಾಸ್ತ್ರಜ್ಞೈಶ್ಚ ಚಾರುಣೈಃ ॥ ೭೪ ॥

ಶರಭೋಽಪ್ಯಥ ದಂಷ್ಟ್ರಾಗ್ರೈರ್ನಖೈಸ್ತೀಕ್ಷ್ಣೈಃ ಖುರೈಸ್ತಥಾ ।
ಲಾಂಗೂಲಸ್ಯ ಪ್ರಹಾರೈಸ್ತು ತುಂಡಘಾತೈರ್ಮಹಾಸ್ವನೈಃ ॥ ೭೫ ॥

೭೦-೭೧. ವರಾಹನ ಮಕ್ಕಳು ಶರಭನನ್ನು ಕೆಡವಿದ ಪ್ರದೇಶದಲ್ಲಿ ಅವರ ಪಾದಘಟ್ಟನೆಯಿಂದ ಭೂಮಿಯು ಕುಗ್ಗಿ ಕೆಳಕ್ಕೆ ಇಳಿಯಿತು. ಹೀಗೆ ಒಂದುಕಡೆ ಭೂಮಿಯು ಕುಗ್ಗಿದ್ದರಿಂದ ಮತ್ತೊಂದುಕಡೆ ಭೂಮಿಯು ಪರ್ವತಗಳೊಡನೆ ಮೇಲಕ್ಕೆ ಎದ್ದಿತು. ಹೀಗೆ ಭೂಮಿಯು ಮೇಲಕ್ಕೆ ಎದ್ದಾಗ ಅದರ ಸಂಘರ್ಷಣೆಯಿಂದ ಭೂಮಿಯಲ್ಲಿರುವ ಪರ್ವತಗಳಲ್ಲಿ ಚಲನೆಯನ್ನುಂಟುಮಾಡಿತು.

೭೨-೭೩. ಈ ವಿಧವಾದ ಚಲನೆಯಿಂದ ಭೂಮಿಯಲ್ಲಿದ್ದ ಪರ್ವತಗಳು ಒಂದರಮೇಲೊಂದು ದಟ್ಟನಾಗಿ ಬಿದ್ದು ಪರ್ವತಗಳಿಂದ ಚನ್ನಾಗಿ ಕಟ್ಟಲ್ಪಟ್ಟ ಸೋಪಾನಗಳಂತೆ ತೋರಿದುವು. ವರಾಹನ ಮಕ್ಕಳಿಂದ ನಡೆದ ಈ ವಿಧವಾದ ಕಾರ್ಯವನ್ನು ನೋಡಿ ಭಯದಿಂದಲೂ, ಬಳಲಿಕೆಯಿಂದಲೂ ಕೂಡಿದ ಆ ಶರಭನು ಆಶ್ಚರ್ಯಪಟ್ಟನು.

೭೪. ಆಮೇಲೆ ವರಾಹನ ಮಕ್ಕಳೆಲ್ಲರೂ, ಶರಭನೊಡನೆ ತಮ್ಮತಮ್ಮ ಮೂತಿಗಳಿಂದಲೂ, ಕಾಲುಗೊರಸಿನ ಪ್ರಹಾರಗಳಿಂದಲೂ, ದೊಡ್ಡದಾದ ತಮ್ಮ ಶರೀರದ ಚಲನದಿಂದಲೂ, ಭಯಂಕರವಾಗಿ ಯುದ್ಧಮಾಡಿದರು.

೭೫. ಶರಭನೂ ಕೂಡ ತನ್ನ ಹೊನಚಾದ ಕೋರೆಹಲ್ಲುಗಳಿಂದಲೂ, ಹರಿತವಾದ ಉಗುರುಗಳಿಂದಲೂ, ಕಾಲಿನ ಗೊರಸುಗಳಿಂದಲೂ, ಬಾಲದ ಹೊಡೆತಗಳಿಂ

ಚತುರ್ಭಿಃ ಪೋತ್ರಿಭಿಸ್ತ್ವೇಸ್ತು ಸ ಏಕಃ ಶರಭೋ ಮಹಾನ್ ।
ಏಕಾಂತಂ ಯೋಧಾಯಮಾಸ ಸಹಸ್ರಂ ಪರಿವತ್ಸರಾನ್ ॥ ೭೬ ॥

ತೇಷಾಂ ಪ್ರಹಾರೈರ್ವೇಗೈಶ್ಚ ಭ್ರಮಣೈಶ್ಚ ಗತಾಗತೈಃ ।
ಅಸ್ಪೋಟಯೈಸ್ತಥಾಽನ್ಯೈರ್ದೇಹಪಾತೈಃ ಪೃಥಕ್ ಪೃಥಕ್ ॥ ೭೭ ॥

ಪಾತಾಲೇ ಪನ್ನಗಾಃ ಸರ್ವೇ ವಿನೇಶುಃ ಕದ್ರುಜೈಃ ಸಹ ।
ತತಸ್ತೇ ಸಾಗರಂ ತ್ಯಕ್ತ್ವಾ ಪೃಥಿವೀಮಧ್ಯಮಾಗತಾಃ ॥ ೭೮ ॥

ಪರಸ್ಪರಂ ಯುಧ್ಯಮಾನಾ ತತೋಽಭೂತ್ಪೃಥಿವೀ ಸಮಾ ।
ಶೇಷೋಽಪಿ ಮಹತಾ ಯತ್ನಾದ್ಬಾಲೇನಾಸ್ತ್ಯ ಕಚ್ಛಪಂ ॥ ೭೯ ॥

ವಲೂ, ಬಾಯಿಯ ಕಚ್ಚುವಿಕೆಯಿಂದಲೂ, ಮಹಾ ಭಯಂಕರವಾಗಿ ಗರ್ಜನೆ ಮಾಡುತ್ತಾ ಅವರೊಡನೆ ಯುದ್ಧಮಾಡಿದನು.

೭೬. ಯಜ್ಞವರಾಹನೂ, ಅವನ ಮೂರುಜನ ಮಕ್ಕಳೂ ಈ ನಾಲ್ಕುಮಂದಿ ಯೊಡನೆ ಶರಭನೊಬ್ಬನೇ ಸಾವಿರವರ್ಷಗಳವರೆವಿಗೂ ಯುದ್ಧಮಾಡಿದನು.

೭೭. ಇವರುಗಳು ಯುದ್ಧಮಾಡುವಾಗ ಒಬ್ಬರನ್ನೊಬ್ಬರು ವೇಗವಾಗಿ ಹೊಡೆಯುತ್ತಲೂ, ಪಟ್ಟುಗಳಿಗೆ ಸಿಕ್ಕದೆ ನಾನಾವಿಧವಾದ ಪಟ್ಟುಗಳಿಂದಲೂ, ವರಸೆಗಳಿಂದಲೂ ತಪ್ಪಿಸಿಕೊಳ್ಳುತ್ತಲೂ, ತಮ್ಮ ದೊಡ್ಡದಾದ ಶರೀರಗಳಿಂದ ಮೇಲೆ ಬಿದ್ದು ಮರ್ದಿಸುತ್ತಲೂ, ಭಯಂಕರವಾದ ಸಿಂಹನಾದನನ್ನು ಮಾಡುತ್ತಲೂ ಒಬ್ಬರಿಗೊಬ್ಬರು ಯುದ್ಧ ಮಾಡಿದರು.

೭೮. ಹೀಗೆ ಇವರು ಮಾಡುವ ಯುದ್ಧದ ರಭಸದಿಂದ ಪಾತಾಳ ಲೋಕದಲ್ಲಿದ್ದ ಸರ್ಪಗಳೆಲ್ಲವೂ ಕದ್ರುವಿನ ಮಕ್ಕಳೊಡನೆ ಸಮುದ್ರತಳವನ್ನು ಬಿಟ್ಟು ಭೂಮಿಯ ಮೇಲಕ್ಕೆ ಬಂದವು. ಇವರುಗಳು ಪರಸ್ಪರವಾಗಿ ಯುದ್ಧಮಾಡುತ್ತಿರುವಾಗ ಇವರುಗಳ ಕಾಲುಗಳ ತುಳಿತದಿಂದ ಹಳ್ಳತಿಟ್ಟುಗಳಿಂದ ಕೂಡಿದ ಭೂಮಿಯೆಲ್ಲವೂ ಸಮವಾಯಿತು.

೭೯. ಇವರ ಯುದ್ಧವೇಗದಿಂದ ಭೂಮಿಯನ್ನು ಹೊತ್ತಿರುವ ಆದಿಶೇಷನು ಬಹಳಪ್ರಯತ್ನದಿಂದ ಆದಿಕೂರ್ಮನನ್ನು ಅಲುಗಾಡದಂತೆ ಸಿಲ್ಲಿಸಿ ಅತಿಕಷ್ಟದಿಂದ

ದಧಾರ ಪೃಥಿವೀಂ ದುಃಖೈರ್ಭಗ್ನಶೀರ್ಷಃ ಪ್ರತಾಪಿತಃ ।
ಅನಂತೇ ವಾಮನೀಭೂತೇ ಸಮತ್ವಂ ಪೃಥಿವೀತಲೇ ॥ ೮೦ ॥

ಗತೇಽಭೋಭಿಶ್ಚ ಲಬ್ಧಿಶ್ಚ ಪರ್ವತಃ ಸರ್ವಜಂತುಷು ।
ನಷ್ಟೇಷು ಯುಧ್ಯಮಾನೇಷು ತ್ರಿಪೋತ್ರಿಶರಭೇಷುಚ ॥ ೮೮ ॥

ಸಾಗರೈರಾಪ್ಲುತೇ ಸರ್ವಜಗತ್ಯಾಪೋಮಯೇ ಹರಿಂ ।
ಚಿಂತಾವಿಷ್ಟಃ ಸುರಜ್ಯೇಷ್ಠ ಉವಾಚಾಥ ಪಿತಾಮಹಃ ॥ ೮೨ ॥

ಭಗವನ್ಭುವನಂ ಸರ್ವಂ ಸಸುರಾಸುರಮಾನುಷಂ ।
ವಿಧ್ವಸ್ತಂ ಪೃಥಿವೀ ಶೀರ್ಣಾ ನಷ್ಟಾಃ ಸ್ಥಾವರಜಂಗಮಾಃ ॥ ೮೩ ॥

ದೇವದಾನವಗಂಧರ್ವಾ ದೈತ್ಯಾಶ್ಚಾಪಿ ಸರೀಸೃಪಾಃ ।
ವಿಧ್ವಸ್ತಾ ಜಗತಾಂ ನಾಥ ಮುನಯಶ್ಚ ತಪೋಧನಾಃ ॥ ೮೪ ॥

ಭೂಮಿಯನ್ನು ಹೊರಬೇಕಾಯಿತು. ಈ ರೀತಿ ಕಷ್ಟದಿಂದ ಭೂಮಿಯನ್ನು ಹೊರ ಬೇಕಾದುದರಿಂದ ಅವನ ತಲೆಯು ಭಾರದಿಂದ ಕುಗ್ಗಿ ಮುರಿಯುವಂತಾಗಿ ಅತಿ ದುಃಖವನ್ನು ಅನುಭವಿಸಿದನು.

೮೦-೮೧. ವರಾಹನ ಮಕ್ಕಳೂ, ಶರಭನೂ, ಪರಸ್ಪರವಾಗಿ ಯುದ್ಧಮಾಡು ತ್ತಿರುವ ಕಾಲದಲ್ಲಿ ಭೂಮಿಯನ್ನು ಹೊತ್ತಿರುವ ಅನಂತನು ಭಾರದಿಂದ ಕುಗ್ಗಲು ಭೂಮಿಯು ಸಮುದ್ರಮಟ್ಟಕ್ಕೆ ಇಳಿದುದರಿಂದ ಸಮುದ್ರದ ನೀರು ಹರಿದುಬಂದು ಎಲ್ಲಾ ಕಡೆಯಲ್ಲಿಯೂ, ತುಂಬಿಕೊಂಡು ಸಮಸ್ತ ಪ್ರಾಣಿಗಳೂ ನಾಶವನ್ನೈದಿದವು.

೮೨. ಈ ರೀತಿ ಜಗತ್ತೆಲ್ಲವೂ ಸಮುದ್ರಗಳ ನೀರಿನಿಂದ ಮುಳುಗಿ ಎಲ್ಲೆಲ್ಲಿಯೂ, ನೀರಿನ ಮಯವಾಗಲು ದೇವತೆಗಳಿಗೆಲ್ಲಾ ಹೆಚ್ಚಿನವನಾದ ಬ್ರಹ್ಮನು ಚಿಂತೆಯಿಂದ ವ್ಯಾಕುಲಗೊಂಡು ಈ ರೀತಿ ಹೇಳಿದನು.

೮೩. ಎಲೈ ಭಗವಂತನೇ ! ದೇವಾಸುರ ಮಾನುಷರಿಂದ ತುಂಬಿದ ಈ ಲೋಕ ವೆಲ್ಲವೂ ನಾಶವನ್ನೈದುತ್ತಿದೆ. ಭೂಮಿಯು ಸೀಳಿಹೋಯಿತು. ಚರಾಚರಾತ್ಮಕವಾದ ಸಮಸ್ತ ಪದಾರ್ಥಗಳೂ ನಾಶವನ್ನೈದಿದವು.

೮೪. ಎಲೈ ಜಗದೊಡೆಯನೇ ! ದೇವತೆಗಳೂ, ಗಂಧರ್ವರೂ, ರಾಕ್ಷಸರೂ, ದೈತ್ಯರೂ ಸರ್ಪಾದಿಗಳೂ, ತಪಸ್ಸಿನಲ್ಲಿ ಮಗ್ನರಾದ ಋಷಿಗಳೂ, ಎಲ್ಲರೂ ಕಂಗೆಟ್ಟು ಪರಿತಪಿಸುತ್ತಿರುವರು.

ತ್ವಂ ಹಾಲಕೋಽಸಿ ಸರ್ವೇಷಾಂ ತ್ವಮೇವ ಜಗತಃ ಪ್ರಭುಃ ।
ತಸ್ಮಾತ್ಪಾಲಯ ನಃ ಸರ್ವಾನ್ಪೃಥಿವೀಂ ಚ ಜಗತಃ ಪತೇ ॥ ೮೫ ॥

ತ್ವಮೇವ ಕಾಯಂ ವಾರಾಹಂ ಸ್ವಯಮೇವೋಪಸಂಹರ ।
ಸಂಸ್ಥಾಪಯ ಮಹಾಬಾಹೋ ಪೃಥಿವೀಂ ಚ ಚರಾಚರೈಃ ॥ ೮೬ ॥

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ಬ್ರಹ್ಮಣೋಽಥ ಜನಾರ್ದನಃ ।
ಯತ್ನಂ ಚಕ್ರೇ ತದಾ ಸರ್ವಂ ಸಂಸ್ಥಾಪಯಿತುಮಚ್ಯುತಃ ॥ ೮೭ ॥

ತತೋ ಹರೀ ರೋಹಿತಮತ್ಸ್ಯರೂಪೀ
ಭೂತ್ವಾ ಮುನೀನ್ಸಪ್ತ ತದಾ ಸದೇವಾನ್ ।
ಅನಾಪ್ಯುಪಾಯೇ ರಕ್ಷಣತತ್ಪರೋ ಜಗ—
ದ್ಧಿತಾಯ ಸರ್ವಶ್ರುತಿಕೋಽಣಾನ್ ವರಾನ್ ॥ ೮೮ ॥

---

೮೫. ಲೋಕಕ್ಕೆ ಅಧಿಪತಿಯಾದ ನಾರಾಯಣನೇ ! ನೀನು ಎಲ್ಲರಿಗೂ ರಕ್ಷಕನಾಗಿರುವೆ. ನೀನೇ ಪ್ರಪಂಚಕ್ಕೆ ಸ್ವಾಮಿಯು. ಆದುದರಿಂದ ನಮ್ಮಗಳನ್ನೂ ಈ ಭೂಮಿಯನ್ನೂ ನೀನು ಕಾಪಾಡಬೇಕು.

೮೬. ಎಲೈ ಪರಾಕ್ರಮಶಾಲಿಯೇ ! ಆದುದರಿಂದ ನೀನು ನಿನ್ನ ವರಾಹರೂಪದ ಶರೀರವನ್ನು ನೀನೇ ಶಾಂತಿಗೊಳಿಸಿ ಚರಾಚರಾತ್ಮಕವಾದ ಈ ಭೂಮಿಯನ್ನು ಮುಂಚಿನಂತೆ ನೆಲೆಗೊಳಿಸು.

೮೭. ಮಾರ್ಕಂಡೇಯ ಋಷಿಯು ಹೇಳಿದನು :—ಈರೀತಿ ಹೇಳಿದ ಬ್ರಹ್ಮನ ಮಾತನ್ನು ಕೇಳಿ ನಾಶರಹಿತನಾದ ಆ ವಿಷ್ಣುವು ಪ್ರಪಂಚವೆಲ್ಲವನ್ನೂ ಮುಂಚಿನಂತೆಯೇ ಸ್ಥಿರಗೊಳಿಸಲು ಪ್ರಯತ್ನಮಾಡಿದನು.

೮೮. ಅನಂತರ ಹರಿಯು ಕೆಂಪುಮಿಶ್ರಿತವಾದ ರೂಪವನ್ನು ಧರಿಸಿ ಅಂದರೆ ಮತ್ಸ್ಯಾವತಾರವನ್ನು ಮಾಡಿ ಜಗತ್ತಿನ ಕ್ಷೇಮಕ್ಕಾಗಿ ವೇದವನ್ನು ರಕ್ಷಿಸಲೋಸುಗ ವೇದವಿದ್ವಾಂಸರಾದ ಸಪ್ತಮುನಿಗಳನ್ನೂ ದೇವತೆಗಳನ್ನೂ ತಾನು ಧರಿಸಿದನು.

ವಸಿಷ್ಠಮತ್ರಿಂ ತ್ವಥ ಕಾಶ್ಯಪಂ ಚ
ವಿಶ್ವಾಮಿತ್ರಂ ಚ ಸಗೌತಮಂ ಮುನಿಂ ।
ಮಹಾತಪಃಸ್ಥಂ ಜಮದಗ್ನಿಮುಖ್ಯಂ
ತಥಾ ಭರದ್ವಾಜಮುನಿಂ ತಪೋನಿಧಿಂ ॥ ೮೯ ॥

ನಿಧಾಯ ಪೃಷ್ಠೇ ಸ ಹಿ ತೋಯಮಧ್ಯೇ
ಸ್ಥಿತೋ ಮಹಾನೌಪ್ರವರೇ ಮುನೀಂದ್ರಾನ್ ।
ತತಃ ಶಿವಂ ಸಾಂತ್ವಯಿತುಂ ಜನಾರ್ದನೋ
ಜಗಾಮ ಯಸ್ಮಿನ್ ಯುಯುಧೇ ಸ ಪೋತ್ರಿಭಿಃ ॥ ೯೦ ॥

ಶ್ರಾಂತಂ ವರಾಹೈರತಿಪೋತ್ರಘಟ್ಟನೈಃ
ನಿಪೀಡಿತಂ ವ್ಯಾಪ್ತಮುಖಂ ಶ್ವಸಂತಂ ।
ಅಥಾssಗತಂ ವೀಕ್ಷ್ಯ ಹರಿಂ ವರಾಹಃ
ಸಸ್ಮಾರ ಪೂರ್ವಾಂ ನರಸಿಂಹಮೂರ್ತಿಂ ॥ ೯೧ ॥

ಸ್ಮೃತಸ್ತದಾ ತೇನ ತದಾ ಜಗಾಮ
ಸಖಾ ವರಾಹಸ್ಯ ಹಿತೇ ನೃಸಿಂಹಃ ।

---

೮೯. ವಸಿಷ್ಠಮುನಿ, ಅತ್ರಿಋಷಿ, ಕಾಶ್ಯಪಋಷಿ, ವಿಶ್ವಾಮಿತ್ರ, ಗೌತಮ ಮುನಿ, ಮಹಾತಪಸ್ವಿಯಾದ ಜಮದಗ್ನಿ, ಭರದ್ವಾಜಋಷಿ ಈ ಏಳುಜನ ಋಷಿಶ್ರೇಷ್ಠರನ್ನು ತನ್ನ ಬೆನ್ನಿನ ಮೇಲೆ ಧರಿಸಿ ಮತ್ಸ್ಯರೂಪಿಯಾದ ಹರಿಯು ಆ ಜಲರಾಶಿಯಲ್ಲಿ ಒಂದು ದೊಡ್ಡ ಹಡಗಿನಲ್ಲಿ ಅವರನ್ನು ಬಿಟ್ಟನು.

೯೦. ಅನಂತರ ಆ ಹರಿಯು ವರಾಹಪುತ್ರರೊಡನೆ ಯುದ್ಧಮಾಡುತ್ತಾ, ವರಾಹಪುತ್ರರ ನಾನಾದಂಡಗಳ ಹೊಡೆತಗಳಿಂದ ಪೀಡಿಸಲ್ಪಟ್ಟು ಬಳಲಿ ಮುಖವನ್ನು ತೆರೆದು ದೊಡ್ಡದಾಗಿ ನಿಟ್ಟುಸುರನ್ನು ಬಿಡುತ್ತಿರುವ ಶರಭರೂಪಿಯಾವ ಶಂಕರನನ್ನು ಸಮಾಧಾನಗೊಳಿಸಲು ಅವನಿರುವಲ್ಲಿಗೆ ಹೊರಟುಹೋದನು.

೯೧. ಆಗ ಹರಿಯು ಬಂದುವನ್ನು ನೋಡಿ ವರಾಹಮೂರ್ತಿಯು ಹಿಂದಿನ ತನ್ನ ನೃಸಿಂಹಮೂರ್ತಿಯನ್ನು ಸ್ಮರಿಸಿದನು. ಸ್ಮರಿಸಿದೊಡನೆಯೇ ನೃಸಿಂಹನು ತನ್ನ ಸ್ನೇಹಿತನಾದ ವರಾಹನ ಸಹಾಯಕ್ಕಾಗಿ ಬಂದನು.

ಸಮಾಗತಂ ವೀಕ್ಷ್ಯ ತದಾ ನೃಸಿಂಹಂ
ತವೀಯ ಕಾಯಾನ್ನಿಜತೇಜ ಆದಾತ್ ॥ ೮೨ ॥

ದೃಷ್ಟಂ ವರಾಹೈಃ ಶರಭೇಣ ತೇಜಃ
ಯತ್ಸೂರ್ಯತುಲ್ಯಂ ಪ್ರವಿವೇಶ ವಿಷ್ಣೌ ।
ವಿಜ್ಞಾಯ ತೇಜೋರಹಿತಂ ನೃಸಿಂಹ
ಸಸರ್ಜ ನಿಃಶ್ವಾಸಜಯಾನ್ನೃಸಿಂಹಃ ॥ ೮೩ ॥

ತತಸ್ತು ಜಾತಾ ಬಹವೋ ವರಾಹಾಃ
ಬಹುಪ್ರಮಾಣಾದ್ಭುತತೀಕ್ಷ್ಣದಂಷ್ಟ್ರಾಃ ।
ತೇ ವೈ ವರಾಹಾಃ ಶರಭಂ ಗಿರೀಶಂ
ಮಾಯಾವಿನೋ ವೀತಭಯಾಸ್ತುದಂತಃ ॥ ೮೪ ॥

ಸಮಂ ನೃಸಿಂಹೇನ ತದಾಪಿ ಯುದ್ಧಂ
ಚಕ್ರುರ್ಮಮರ್ದುಶ್ಚ ಭೃಶಂ ಗಿರೀಶಂ ।
ಕ್ಷಣಂ ಮಹಾಪಕ್ಷಿಸಮಾನರೂಪಾಃ
ಕ್ಷಣಂ ತು ಗಾವಸ್ತುರಗಾ ನರಾಶ್ಚ ॥ ೮೫ ॥

೮೨-೮೩. ನರಸಿಂಹನು ಬಂದುದನ್ನು ನೋಡಿ ಅವನ ಶರೀರದಿಂದ ತನ್ನ ತೇಜಸ್ಸನ್ನು ಸ್ವೀಕರಿಸಿದನು. ಆಗ ನೃಸಿಂಹಶರೀರದಿಂದ ಸೂರ್ಯನಂತೆ ಪ್ರಕಾಶಿಸುವ ತೇಜಸ್ಸು ಹೊರಹೊರಟು ವರಾಹಶರೀರವನ್ನೂ ಪ್ರವೇಶಿಸಿದುದನ್ನು ವರಾಹಪುತ್ರರೂ ಶರಭನೂ ನೋಡಿದರು. ಹೀಗೆ ನೃಸಿಂಹನು ತೇಜೋರಹಿತನಾದುದನ್ನು ನೋಡಿ ವರಾಹನು ತುಂಬಾ ನಿಟ್ಟುಸುರನ್ನು ಬಿಟ್ಟನು.

೮೪. ಅನಂತರ ಆ ವರಾಹನ ನಿಟ್ಟುಸುರಿನಿಂದ ದೊಡ್ಡ ಆಕಾರವುಳ್ಳ, ಅದ್ಭುತವೂ, ಹರಿತವೂ, ಆದ ಕೋರೆದಾಡೆಗಳುಳ್ಳ ಅನೇಕ ವರಾಹಗಳು ಜನಿಸಿದುವು. ಅವುಗಳು ಶರಭರೂಪಿಯಾದ ಶಂಕರನನ್ನು ಯಾವ ಭಯವೂ ಇಲ್ಲದೆ ಹಿಡಿಸಿದುವು.

೮೫. ಮತ್ತು ಆ ವರಾಹಗಳು ನೃಸಿಂಹನೊಡನೆ ಸೇರಿಕೊಂಡು ಸ್ವಲ್ಪಹೊತ್ತು ಪಕ್ಷಿಯ ರೂಪದಿಂದಲೂ, ಸ್ವಲ್ಪಕಾಲ ಎತ್ತಿನ ರೂಪದಿಂದಲೂ, ಕೆಲವುಹೊತ್ತು ಕುದುರೆಯ ಮತ್ತು ಮನುಷ್ಯನ ರೂಪದಿಂದಲೂ ಯುದ್ಧಮಾಡುತ್ತಾ ಶರಭರೂಪಿಯಾದ ಶಂಕರನನ್ನು ತುಂಬಾ ಘಾಸಿಗೊಳಿಸಿದವು.

ಕ್ಷಣಂ ನೃಸಿಂಹಾಶ್ಚ ವರಾಹರೂಪಾಃ
ಗೋಮಾಯವೋ ವೈಕೃತಿಕಾಃ ಕ್ಷಣಂ ತೇ ।
ಅನೇಕರೂಪಾಣಿ ಭಯಂಕರಾಣಿ
ವಿತನ್ಯಮಾನಾನಿ ರಣೇ ವರಾಹೈಃ ॥ ೯೬ ॥

ನಿರೀಕ್ಷ್ಯ ಭರ್ಗಂ ಚ ನಿಪೀಡಿತಂ ತೈ
ರಥಾಸದನ್ಮಾಧವಸ್ತಂ ಗಿರೀಶಂ ।
ಪಸ್ಪರ್ಶ ವಿಷ್ಣುರ್ಗಿರಿಶಂ ಕರೇಣ
ತೇಜೋ ನ್ಯಧಾತ್ತತ್ರ ನಿಜಂ ಪುನಃ ಸಃ ॥ ೯೭ ॥

ಅಥ ಸಂಸ್ಪೃಷ್ಟಮಾತ್ರಃ ಸ ವಿಷ್ಣುನಾ ಪ್ರಭವಿಷ್ಣುನಾ ।
ಅತೀವ ಮುದಿತೋ ಹೃಷ್ಟೋ ಬಲವಾನ್ಸಮಜಾಯತ ॥ ೯೮ ॥

ಅಥೋಚ್ಚೈಃ ಶರಭೋ ನಾದಂ ನನಾದ ಬಲವದ್ಧೃಥಂ ।
ಆಪೂರಿತಾನಿ ಯೇನೈತದ್ಭುವನಾನಿ ಚತುರ್ದಶ ॥ ೯೯ ॥

---

೯೬. ಮತ್ತು ಆ ವರಾಹಗಳು ಸ್ವಲ್ಪಹೊತ್ತು ವರಾಹರೂಪಿನಿಂದಲೂ, ಸ್ವಲ್ಪ ಕಾಲ ನರಿಯ ರೂಪದಿಂದಲೂ ಮತ್ತು ವಿಕಾರವಾದ ಇನ್ನೂ ಅನೇಕ ರೂಪಗಳಿಂದಲೂ ಯುದ್ಧಮಾಡಿ ಶಂಕರನನ್ನು ಪೀಡಿಸಿದುವು.

೯೭. ಶರಭರೂಪಿಯಾದ ಶಂಕರನು ಹೀಗೆ ವರಾಹಗಳಿಂದ ಪೀಡಿಸಲ್ಪಟ್ಟುದನ್ನು ನೋಡಿ ವಿಷ್ಣುವು ಅವನ ಬಳಿಗೆ ಬಂದು ತನ್ನ ಕೈಯಿಂದ ಆ ಶಂಕರನನ್ನು ನೇವರಿಸಿದನು. ಮತ್ತು ತನ್ನ ತೇಜಸ್ಸನ್ನು ಶರಭರೂಪಿಯಾದ ಶಂಕರನಲ್ಲಿ ಇರಿಸಿದನು.

೯೮. ಅನಂತರ ಆ ಶಂಕರನು ಸರ್ವಸಮರ್ಥನಾದ ವಿಷ್ಣುವು ತನ್ನನ್ನು ಸ್ಪರ್ಶಿಸಿದೊಡನೆಯೇ ತುಂಬಾ ಸಂತೋಷವನ್ನು ಹೊಂದಿ ಹೆಚ್ಚು ಬಲವುಳ್ಳವನಾದನು.

೯೯. ಅನಂತರ ಆ ಶರಭವು ದೊಡ್ಡದಾಗಿ ಸಿಂಹನಾದವನ್ನು ಮಾಡಿತು. ಆ ಧ್ವನಿಯಿಂದ ಹದಿನಾಲ್ಕು ಲೋಕಗಳೂ ತುಂಬಿಹೋಯಿತು.

ನದತಸ್ತಸ್ಯ ವದನಾಚ್ಛೀಕರಾ ಯೇ ವಿನಿರ್ಗತಾಃ ।
ತತೋ ಗಣಾಃ ಸಮಭವನ್ಮಹಾಕಾಯಾ ಮಹೌಜಸಃ ॥ ೧೦೦ ॥

ಯಥಾ ವರಾಹನಿಃಶ್ವಾಸಾನ್ನಾನಾರೂಪಧರಾ ಗಣಾಃ ।
ವರಾಹಾಸ್ತಾದೃಶಾ ಏತೇ ತತೋಽಪ್ಯತಿ ಬಲಾಃ ಪುನಃ ॥ ೧೦೧ ॥

ಶ್ವವರಾಹೋಷ್ಟ್ರರೂಪಾಶ್ಚ ಪ್ಲವಗೋಮಾಯುಗೋಮುಖಾಃ ।
ಋಕ್ಷಮಾರ್ಜಾರಮಾತಂಗಶಿಶುಮಾರಸ್ವರೂಪಿಣಃ ॥ ೧೦೨ ॥

ಸಿಂಹವ್ಯಾಘ್ರಮುಖಾಃ ಕೇಚಿತ್ಕೇಚಿತ್ಸರ್ಪಾಖುಮೂರ್ತಯಃ ।
ಹಯಗ್ರೀವಾ ಹಯಮುಖಾ ಮಹಿಷಾಕೃತಯಃ ಪರೇ ॥ ೧೦೩ ॥

ಅನ್ಯೇತು ಮನುಜಾಕಾರಾಃ ಮೃಗವೇಷಮುಖಾಃ ಪುನಃ ।
ಕಬಂಧಾ ಹೀನಪಾದಾಶ್ಚ ವಿಹಸ್ತಾ ಬಹುಪಾಣಯಃ ॥ ೧೦೪ ॥

---

೧೦೦. ಘರ್ಜನೆಯನ್ನು ಮಾಡುತ್ತಲಿರುವಾಗ ಆ ಶರಭದ ಮುಖದಿಂದ ಹೊರಟ ತುಂತುರುಗಳಿಂದ ದೊಡ್ಡ ಶರೀರಗಳುಳ್ಳ, ತುಂಬಾ ಬಲಶಾಲಿಗಳಾದ ಅನೇಕ ಗಣಗಳು ಜನಿಸಿದುವು.

೧೦೧. ಹಿಂದೆ ವರಾಹನ ನಿಟ್ಟುಸುರಿನಿಂದ ಅನೇಕ ರೂಪಗಳುಳ್ಳ ವರಾಹಗಳು ಹೇಗೆ ಜನಿಸಿದುವೋ ಅದರಂತೆ ಅನೇಕ ರೂಪಗಳುಳ್ಳ, ಆ ವರಾಹಗಳಿಗಿಂತಲೂ ಬಲಶಾಲಿಗಳಾದ ಗಣಗಳು ಆ ತುಂತುರುಗಳಿಂದ ಜನಿಸಿದುವು.

೧೦೨. ಆ ಗಣಗಳು, ಕುದುರೆ, ವರಾಹ, ಒಂಟೆ, ಕಪಿ, ನರಿ, ಹಸು, ಎಮ್ಮೆ ಗಳ ರೂಪವುಳ್ಳವುಗಳೂ, ಕರಡಿ, ಬೆಕ್ಕು, ಆನೆ, ತಿಮಿಂಗಿಲಗಳ ರೂಪವುಳ್ಳವುಗಳೂ ಆಗಿದ್ದುವು.

೧೦೩. ಕೆಲವು ಸಿಂಹ, ಹುಲಿಗಳಂತೆ ಮುಖವುಳ್ಳವುಗಳೂ, ಕೆಲವು ಸರ್ಪ, ಇಲಿಗಳಂತೆ ರೂಪವುಳ್ಳವುಗಳೂ, ಕೆಲವು ಕುದುರೆಯಂತೆ ಕತ್ತು ಮತ್ತು ಮುಖವುಳ್ಳವುಗಳೂ, ಕೆಲವು ಕೋಣಗಳ ಆಕಾರವುಳ್ಳವುಗಳೂ ಆಗಿದ್ದುವು.

೧೦೪. ಇನ್ನು ಕೆಲವು ಗಣಗಳು ಮನುಷ್ಯರಂತೆ ಆಕಾರವುಳ್ಳವುಗಳೂ, ಕೆಲವು ಮೃಗ (ಹರಿಣ) ಆದಿ ಕುರಿಗಳಂತೆ ಮುಖವುಳ್ಳವುಗಳೂ ಆಗಿದ್ದುವು. ಕೆಲವು ತಲೆ

ಕೇಚಿತ್ತು ಶರಭಾಕಾರಾಃ ಕೃಕಲಾಸಮುಖಾಃ ಪರೇ ॥
ಮತ್ಸ್ಯವಕ್ತ್ರಾ ಗ್ರಾಹವಕ್ತ್ರಾ ಹ್ರಸ್ವಾ ದೀರ್ಘಾ ಬಲಾಃ ಕೃಶಾಃ ॥ ೧೦೫ ॥

ಚತುಷ್ಪಾದಾಷ್ಟಪಾದಾಶ್ಚ ದ್ವಿಪಾದಾಸ್ತ್ರಿಪದಾಃ ಪರೇ ।
ಏಕಪಾದಾ ಭೂರಿಪದಾಸ್ತಾ ಯಕ್ಷಕಿಂಪುರುಷೋಪಮಾಃ ॥ ೧೦೬ ॥

ಪಶ್ವಾಕಾರಾಃ ಪಕ್ಷಯುಕ್ತಾ ಲಂಬೋದರಮಹೋದರಾಃ ।
ದೀರ್ಘೋದರಾಃ ಸ್ಥೂಲಕೇಶಾ ಬಹುಕರ್ಣಾ ವಿಕರ್ಣಕಾಃ ॥ ೧೦೭ ॥

ಸ್ಥೂಲಾಧರಾ ದೀರ್ಘದಂತಾ ದೀರ್ಘಶ್ಮಶ್ರುಧರಾಶ್ಚ ತೇ ।
ಯೇ ಸಂತಿ ಪ್ರಾಣಿನೋ ವಿಪ್ರಾ ಭುವನೇಷು ಸಮಂತತಃ ॥ ೧೦೮ ॥

ಯಿಲ್ಲದವುಗಳೂ, ಕೆಲವು ಕೈಕಾಲುಗಳಿಲ್ಲದವುಗಳೂ, ಕೆಲವು ಅನೇಕ ಕೈಗಳುಳ್ಳವುಗಳೂ ಆಗಿದ್ದುವು.

೧೦೫. ಕೆಲವು ಗಣಗಳು ಶರಭದ ಆಕಾರವುಳ್ಳವುಗಳೂ ಕೆಲವು ಹೆಂಟೆಗೊವ್ವ ದಂತಹ ಮುಖವುಳ್ಳವುಗಳೂ, ಕೆಲವು ಮೀನಿನಂತೆ ಮುಖವುಳ್ಳವುಗಳೂ ಮತ್ತೆ ಕೆಲವು ಮೊಸಳೆಯಂತೆ ಮುಖವುಳ್ಳವುಗಳೂ ಆಗಿದ್ದುವು. ಮತ್ತೆ ಕೆಲವು ಗಣಗಳು ಕುಳ್ಳಗೂ, ಉದ್ದವಾದುವುಗಳೂ, ಬಲಶಾಲಿಗಳೂ, ಕೃಶವಾದವುಗಳೂ ಆಗಿದ್ದುವು.

೧೦೬. ಕೆಲವು ಗಣಗಳು ನಾಲ್ಕು ಕಾಲುಗಳುಳ್ಳವುಗಳೂ, ಎಂಟು ಕಾಲುಗಳುಳ್ಳವುಗಳೂ ಆಗಿದ್ದವು. ಕೆಲವು ಗಣಗಳಿಗೆ ಎರಡು ಕಾಲುಗಳೂ, ಮೂರು ಕಾಲುಗಳೂ, ಒಂದು ಪಾದವೂ ಇದ್ದುವು. ಕೆಲವಕ್ಕೆ ಅನೇಕ ಕೈಗಳಿದ್ದವು. ಕೆಲವು ಯಕ್ಷ, ಕಿನ್ನರರಂತೆಯೇ ಇದ್ದುವು.

೧೦೭. ಕೆಲವು ಗಣಗಳು ಪಶುಗಳಂತೆ ಆಕಾರವುಳ್ಳವುಗಳು. ಕೆಲವು ರೆಕ್ಕೆಯುಳ್ಳವುಗಳು, ಕೆಲವು ಜೋಲಾಡುವ ಹೊಟ್ಟೆಯುಳ್ಳವುಗಳು, ಕೆಲವು ದೊಡ್ಡ ಮತ್ತು ಉದ್ದವಾದ ಹೊಟ್ಟೆಯುಳ್ಳವುಗಳು, ಕೆಲವಕ್ಕೆ ಉದ್ದವಾದ ತಲೆಕೂದಲುಗಳೂ, ಅನೇಕ ಕಿವಿಗಳೂ ಇದ್ದವು. ಕೆಲವಕ್ಕೆ ಕಿವಿಗಳೇ ಇಲ್ಲವು, ಕೆಲವು ದಪ್ಪವಾದ ತುಟಿಯುಳ್ಳವುಗಳು, ಕೆಲವು ಗಣಗಳಿಗೆ ಉದ್ದವಾದ ಹಲ್ಲುಗಳೂ, ಗಡ್ಡಮೀಸೆಗಳೂ ಇದ್ದುವು.

೧೦೮. ಹದಿನಾಲ್ಕು ಲೋಕಗಳಲ್ಲಿ ಯಾವಯಾವ ಪ್ರಾಣಿಗಳಿರುವುವೋ ಆ ಎಲ್ಲಾ ಪ್ರಾಣಿಗಳಂತೆ ರೂಪವುಳ್ಳ ಗಣಗಳೂ ಅಲ್ಲಿದ್ದುವು.

ಚತುರ್ದಶಸು ತೇಷಾಂ ತು ರೂಪೇಣ ಸದೃಶಾಂ ಗತಾಃ ।
ನೇಹಾಸ್ತಿ ಭುವನೇ ಜಂತುಃ ಸ್ಥಾವರೋ ವಾ ಜಗತ್ಪುನಃ ॥ ೧೦೯ ॥

ಯತ್ತುಲ್ಯರೂಪೇಣ ಗಣೋ ನ ಜಾತಃ ಶಂಕರಸ್ಯ ಚ ।
ತೇ ಭಿಂಡಿಪಾಲೈಃ ಖಡ್ಗೈಶ್ಚ ಪರಿಘೈಸ್ತೋಮರೈಸ್ತಥಾ ॥ ೧೧೦ ॥

ಖಂಕುಲಾಸಿಗದಾಭಿಶ್ಚ ಪಾಶೈಃ ಶಂಕುಭಿರೇವಚ ।
ದಾತ್ರೈಃ ಸೃಣೀಭಿರೀಷಾಗ್ನೈರ್ಯಷ್ಟಿಭಿಶ್ಚಿತ್ರಕಂಟಕೈ ॥ ೧೧೧ ॥

ಖಟ್ವಾಂಗೈಶ್ಚ ತ್ರಿಶೂಲೈಶ್ಚ ಕಪಾಲೈಃ ಶಕ್ತಿಭಿಸ್ತಥಾ ।
ಪ್ರಾಸೈಃ ಪರಶುಭಿರ್ಬಾಣೈಃ ಕೋದಂಡೈರತಿಭೀಷಣಾಃ ॥ ೧೧೨ ॥

ಜಟಾಚಂದ್ರಕಲಾಯುಕ್ತಾಃ ಸರ್ವ ಏವ ಮಹಾಬಲಾಃ ।
ಕೇಚಿದ್ಭರ್ಗಸ್ಯ ರೂಪೇಣ ವಾಹನೇನಾಥ ಭೂಷಣೈಃ ॥ ೧೧೩ ॥

---

೧೦೯. ಆ ಶಂಕರನ ಗಣಗಳು ಧರಿಸಿದಂತಹ ರೂಪವುಳ್ಳ ಯಾವುದೊಂದು ವಸ್ತುವೂ, ಈ ಜಗತ್ತಿನಲ್ಲಿರಲಿಲ್ಲವು.

೧೧೦. ಆಲ್ಲದೇ ಆ ಗಣಗಳು ಭಂಡಿವಾಲ ಖಡ್ಗ ಪರಿಘ (ದೊಣ್ಣೆ) ತೋಮರ ಕುಂತಲಾಯುಧ, ಕತ್ತಿ, ಗದೆ, ಪಾಶ, ಶಂಕು ಈ ಆಯುಧಗಳನ್ನು ಹಿಡಿದಿದ್ದರು.

೧೧೧. ಮಚ್ಚುಗತ್ತಿ, ಅಂಕುಶ, ನೇಗಿಲುದಂಡ, ದೊಣ್ಣೆ, ಚಿತ್ರಕಂಟಕವೆಂಬ ಆಯುಧ, ಖಟ್ವಾಂಗ (ಮಂಚದ ಕಾಲು) ತ್ರಿಶೂಲ, ಕಪಾಲ, ಶಕ್ತ್ಯಾಯುಧ ಇವುಗಳನ್ನು ಕೆಲವು ಗಣಗಳೂ ಧರಿಸಿದ್ದವು.

೧೧೨. ಈಟಿ, ಕೋಲು, ಕೊಡಲಿ, ಬಿಲ್ಲು, ಬಾಣಗಳು, ಇವುಗಳನ್ನು ಧರಿಸಿ ಆ ಗಣಗಳು ತುಂಬಾ ಭಯಂಕರವಾಗಿಯೂ ಜಡೆಯಲ್ಲಿ ಚಂದ್ರಕಲೆಯುಳ್ಳವರಾಗಿಯೂ, ಬಲಿಷ್ಠರಾಗಿಯೂ ಇದ್ದರು.

೧೧೩. ಕೆಲವು ಈಶ್ವರನಂತೆ ರೂಪ ವಾಹನ ಮತ್ತು ಅಲಂಕಾರವುಳ್ಳವುಗಳೂ. ಜಡೆಯಲ್ಲಿ ಚಂದ್ರನಿಂದ ಶೋಭಿಸುತ್ತಲಿರುವ ಶಿರಸ್ಸುಗಳುಳ್ಳವುಗಳೂ ಆಗಿದ್ದವು.

ತುಲ್ಯಾ ಜಟಾರ್ಧಶುಭ್ರಾಂಶುಶುಭ್ರಶೀರ್ಷಾ ಮಹಾಬಲಾಃ ।
ಅರ್ಧನಾರೀಶ್ವರಾಃ ಕೇಚಿದ್ಯಥಾ ರುದ್ರಸ್ತಥೈವ ಚ ॥ ೧೧೪ ॥

ಕೇಚಿತ್ತು ಚಾರುರೂಪೇಣ ಮೋಹನೇನ ಮನೋಭುವಃ ।
ತುಲ್ಯೇನ ವನಿತಾಸಂಘೈಃ ಸಮಂ ಜಾತಾ ರತೋತ್ಸುಕಾಃ ॥ ೧೧೫ ॥

ಆಕಾಶಚಾರಿಣಃ ಸರ್ವೇ ಸರ್ವೇ ಸ್ವಚ್ಛಂದಗಾಮಿನಃ ।
ನೀಲೋತ್ಪಲದಲಶ್ಯಾಮಾಃ ಶುಕ್ಲಾಃ ಕೇಚಿಚ್ಚ ಲೋಹಿತಾಃ ॥ ೧೧೬ ॥

ರಕ್ತಾಃ ಪೀತಾಸ್ತಥಾ ಚಿತ್ರಾ ಹರಿತಾಃ ಕಪಿಲಾಃ ಪರೇ ।
ಅರ್ಧಪೀತಾ ಹ್ಯರ್ಧರಕ್ತಾ ನೀಲಾರ್ಧಾ ಧವಳಾಃ ಪರೇ ॥ ೧೧೭ ॥

ಸಕೃಷ್ಣಪೀತಾಃ ಶುಕ್ಲೇನ ಕೃಷ್ಣೇನಾರ್ಧೇನ ರಂಜಿತಾಃ ।
ಏಕವರ್ಣಾ ದ್ವಿವರ್ಣಾಶ್ಚ ತ್ರಿವರ್ಣಾಶ್ಚ ತಥಾ ಪರೇ ॥ ೧೧೮ ॥

೧೧೪-೧೧೫. ಕೆಲವು ಅರ್ಧ ಹೆಂಗಸಾಗಿರುವ ಎಂದರೆ ಅರ್ಧನಾರೀಶ್ವರರೂಪವುಳ್ಳ ಶಂಕರನ ರೂಪವುಳ್ಳವುಗಳು. ಕೆಲವು ರುದ್ರನಂತೆಯೇ ಇದ್ದುವು. ಕೆಲವು ಮನ್ಮಥನಂತೆ ಮೋಹಕರವಾದ ರೂಪವುಳ್ಳವುಗಳಾಗಿ ಜನಿಸಿ ವನಿತೆಯರೊಡನೆ ಕ್ರೀಡೆಯಲ್ಲಿ ಆಸಕ್ತವಾಗಿದ್ದವು.

೧೧೬. ಆ ಗಣಗಳೆಲ್ಲವೂ ಆಕಾಶದಲ್ಲಿ ಸಂಚರಿಸುವಂತಹವುಗಳೂ, ಯಥೇಚ್ಛವಾಗಿ ವಿಹರಿಸುವಂತಹವುಗಳೂ ಆಗಿದ್ದವು. ಕೆಲವು ಕನ್ನೈದಿಲೆಯಂತೆ ನೀಲವರ್ಣವುಳ್ಳವುಗಳು ಮತ್ತೆ ಕೆಲವರು ಬಿಳಿಯಬಣ್ಣದವರೂ, ಕೆಂಪುಬಣ್ಣದವರೂ ಆಗಿದ್ದರು.

೧೧೭. ಮತ್ತು ಆ ಗಣಗಳಲ್ಲಿ ಕೆಲವರು ರಕ್ತ ಮತ್ತು ಹಳದಿವರ್ಣದವರೂ, ಚಿತ್ರವರ್ಣದವರೂ, ಹಸುರುಬಣ್ಣದವರೂ, ಕಪಿಲ (ಬೂದು) ಬಣ್ಣದವರೂ ಆಗಿದ್ದರು. ಅಲ್ಲದೆ ಕೆಲವರು ಶರೀರದಲ್ಲಿ ಅರ್ಧ ಹಳದಿಬಣ್ಣವುಳ್ಳವರೂ, ಅರ್ಧಭಾಗ ಕೆಂಪುಬಣ್ಣ ಉಳ್ಳವರೂ ಮತ್ತೆ ಕೆಲವರು ಅರ್ಧ ನೀಲ, ಅರ್ಧ ಬಿಳಿಯಬಣ್ಣವುಳ್ಳವರೂ ಆಗಿದ್ದರು.

೧೧೮. ಕಪ್ಪು ಮತ್ತು ಹಳದಿ ಮಿಶ್ರವಾದ ಬಣ್ಣವುಳ್ಳವರು ಕೆಲವರು. ಕೆಲವರು ಅರ್ಧ ಕಪ್ಪು ಅರ್ಧ ಬಿಳುಪಾದ ವರ್ಣವುಳ್ಳವರು. ಒಂದು ವರ್ಣವುಳ್ಳವರೂ ಎರಡು ಬಣ್ಣದವರೂ ಮೂರು ವರ್ಣದವರೂ ಕೆಲವರು ಇವ್ವರು.

ಚತುಃಷಟ್ಪಂಚವರ್ಣಾಶ್ಚ ದಶವರ್ಣಾ ಗಣಾ ದ್ವಿಜಾಃ ।
ಡಿಂಡಿಮಾನ್ಪಟಹಾನ್ ಶಂಖಾನ್ ಭೇರ್ಯಾನಕಕಸಕಾಹಲಾನ್ ೧೧೯ ॥

ಮಡ್ಡೂಕಾನ್ ಝುರ್ಝುರಾಂಶ್ಚೈವ ಝುರ್ಝುರೀಶ್ಚ ಸಮರ್ದಲಾಃ ।
ವೀಣಾಸ್ತಂತ್ರೀಃ ಪಂಚತಂತ್ರೀಃ ಶಕಟಾನ್ ದರ್ದುರಾಂಸ್ತಥಾ ॥ ೧೨೦ ॥

ಗೋಮುಖಾನಾನಕಾನ್ ಕುಂಡಾನ್ ಸತಾಳಕರತಾಳಿಕಾನ್ ।
ವಾದಯಂತೋ ಗಣಾಃ ಸರ್ವೇ ಪಸಂತಶ್ಚ ಮುಹುರ್ಮುಹುಃ ॥ ೧೨೧ ॥

ವರಾಹಾಭಿಮುಖಾ ಭೂತ್ವಾ ತಸ್ಥುಸ್ತೇ ಹೃಷ್ಟಮಾನಸಾಃ ।
ತಾನ್ಸರ್ವಾನಾಹ ಶರಭೋ ಭಗವಾನ್ವೃಷಭಧ್ವಜಃ ॥ ೧೨೨ ॥

ನಿಘ್ನತೈತಾನ್ವರಾಹಸ್ಯ ಗಣಾನ್ವೈ ಕ್ರೂರಕರ್ಮಭಿಃ ।
ಕ್ರೂರದೃಷ್ಟ್ಯಾ ಕ್ರೂರಯುದ್ಧೈಃ ಕ್ರೂರಾ ಭೂತ್ವಾ ಮಹಾಬಲಾಃ ॥೧೨೩॥

---

೧೧೯. ನಾಲ್ಕು, ಐದು, ಆರು ವರ್ಣಗಳುಳ್ಳವರೂ, ಹತ್ತುವರ್ಣಗಳುಳ್ಳವರೂ ಕೆಲವರು ಅಲ್ಲಿದ್ದರು. ಇಂತಹ ಆ ಗಣಗಳು ಡಿಂಡಿಮ (ಢಿಮಕೆ) ಪಟಹ (ತಮಟೆ) ಶಂಖ, ಭೇರಿ, ಕಹಳೆ, ಮದ್ದಳೆ ಮುಂತಾದ ವಾದ್ಯಗಳನ್ನು ಬಾರಿಸುತ್ತಿದ್ದರು.

೧೨೦. ಢಿಕ್ಕಿ, ಝೂಯಿ, ಝುರ್ಝುರಿ, (ವಾದ್ಯವಿಶೇಷ) ಮದ್ದಳೆ, ಐದು ತಂತಿಯುಳ್ಳ ವೀಣೆ, ಗಾಡಿಯ ಆಕಾರವಾದ ವಾದ್ಯ, ದರ್ದುರ ಎಂಬ ವಾದ್ಯ ಇವುಗಳನ್ನು ಬಾರಿಸುತ್ತಿದ್ದರು.

೧೨೧. ಕೆಲವರು ಹಸುವಿನ ಮುಖದ ಆಕಾರವಾಗಿರುವ ವಾದ್ಯವನ್ನೂ, ತಮ್ಮಟಿಗಳನ್ನೂ ಕುಂಡವೆಂಬ ವಾದ್ಯಗಳನ್ನೂ ಬಾರಿಸುತ್ತಿದ್ದರು. ಕೆಲವರು ಚಪ್ಪಾಳೆಗಳನ್ನು ಹೊಡೆಯುತ್ತಿದ್ದರು. ಹೀಗೆ ವಾದ್ಯಗಳನ್ನು ಬಾರಿಸುತ್ತಾ ಸಂತೋಷದಿಂದ ಬಾರಿಬಾರಿಗೂ ನಗುತ್ತಾ ಆ ಗಣಗಳು ವರಾಹಮೂರ್ತಿಗೆ ಎದುರಾಗಿ ಬಂದುನಿಂತವು.

೧೨೨. ಆ ಗಣಗಳನ್ನು ಕುರಿತು ಶರಭರೂಪಿಯಾದ ಭಗವಾನ್ ಶಂಕರನು ಎಲೈ ಗಣಗಳಿರಾ! ನಿರ್ದಯೆಯಿಂದ ವರಾಹನ ಗಣಗಳೆಲ್ಲವನ್ನೂ ಸಂಹರಿಸಿರಿ ಎಂದು ಹೇಳಿದನು.

೧೨೩-೧೨೪. ಅನಂತರ ಅನೇಕವಾದ ಆಕಾರವುಳ್ಳವುಗಳೂ ಅನೇಕ ಬಗ್ಗದ ಆಯುಧವುಳ್ಳವುಗಳೂ ಮತ್ತು ತುಂಬಾ ಬಲಶಾಲಿಗಳೂ ಆದ ಆ ಗಣಗಳು

ತತಸ್ತೇ ವೈ ಗಣಾಃ ಸರ್ವೇ ನಾನಾಕಾರಾ ವರಾಯುಧಾಃ ।
ಸಾರ್ಧಂ ವರಾಹಸ್ಯ ಗಣೈರ್ಯುಯುಧುಃ ಕ್ರೂರದರ್ಶನಾಃ ॥ ೧೨೪ ॥

ಆಕಾಶಚಾರಿಣಃ ಸರ್ವೇ ಜಲಪೂರ್ಣಂ ಜಗತ್ತ್ರಯಂ ।
ತೇ ಪರಿತ್ಯಜ್ಯ ಯುಯುಧುರ್ವಿಯತ್ಯೇವೋಭಯೇ ಗಣಾಃ ॥ ೧೨೫ ॥

ತತಃ ಕ್ಷಣಾದ್ವರಾಹಸ್ಯ ಗಣಾನ್ಸರ್ವಾನ್ಮಹಾಬಲಾನ್ ।
ಹರಸ್ಯ ಪ್ರಮಥಾ ಜಘ್ನುರ್ಮಹಾವಾತಾ ಇವಾಂಬುದಾನ್ ॥ ೧೨೬ ॥

ಹತೇಷು ತೇಷು ವೀರೇಷು ವರಾಹೇಷು ಗಣೇಷ್ವಥ ।
ದಧೌ ವರಾಡಃ ಕಿಮಿತಿ ಪ್ರಾಕ್ಪಶ್ಚಾದ್ವೃತ್ತಮಾಸ್ಥಿತಂ ॥ ೧೨೭ ॥

ಅಥ ಚಿಂತಯತಸ್ತಸ್ಯ ಸ್ವಾಂತಂ ಗತ್ವಾ ಜನಾರ್ದನಃ ।
ತತ್ಸರ್ವಂ ಜ್ಞಾಪಯಾಮಾಸ ವರಾಹವಪುಷೋ ಹಿತಂ ॥ ೧೨೮ ॥

ಭಯಂಕರವಾದ ನೋಟದಿಂದಲೂ, ಭಯಂಕರವಾದ ಯುದ್ಧಗಳಿಂದಲೂ, ಕ್ರೂರವಾಗಿ ವರಾಹದ ಗಣಗಳೊಂದಿಗೆ ಯುದ್ಧಮಾಡಿದವು.

೧೨೫. ಶರಭನ ಮತ್ತು ವರಾಹನ ಎರಡು ಪಕ್ಷಗಳ ಗಣಗಳೂ ಜಲಮಯವಾದ ಜಗತ್ತನ್ನು ಬಿಟ್ಟು ಆಕಾಶದಲ್ಲಿ ಸಂಚರಿಸುತ್ತಾ, ಅಲ್ಲಿಯೇ ಯುದ್ಧವನ್ನು ಮಾಡಿದವು.

೧೨೬. ಅನಂತರ ಹರನ ಆ ಪ್ರಮಥ ಗಣಗಳು ಸ್ವಲ್ಪಕಾಲದಲ್ಲಿಯೇ ತುಂಬಾ ಬಲಶಾಲಿಗಳಾದ ವರಾಹನ ಗಣಗಳೆಲ್ಲವನ್ನೂ ವೇಗವಾಗಿ ಬೀಸುವ ಗಾಳಿಯು ಮೇಘವನ್ನು ಚದರಿಸುವಂತೆ ಸಂಹರಿಸಿದುವು.

೧೨೭. ಹೀಗೆ ವೀರರಾದ ವರಾಹ ಗಣಗಳೆಲ್ಲರೂ ಹತರಾಗಲು ವರಾಹ ಮೂರ್ತಿಯು ಹಿಂದೆ ನಡೆದ ವೃತ್ತಾಂತವನ್ನು ತಿಳಿಯಲೋಸುಗ ಧ್ಯಾನನಿರತನಾದನು.

೧೨೮. ಹೀಗೆ ಧ್ಯಾನಿಸುತ್ತಲಿರುವ ವರಾಹಮೂರ್ತಿಯ ಶರೀರವನ್ನು ಹೊಕ್ಕು ವಿಷ್ಣುವು ಹಿಂದೆ ನಡೆದ ವೃತ್ತಾಂತವೆಲ್ಲವನ್ನೂ ಮತ್ತು ವರಾಹ ಶರೀರವನ್ನು ಬಿಡುವೆನೆಂದು ಮಾಡಿದ ಪ್ರತಿಜ್ಞೆಯನ್ನೂ ತಿಳಿಯುವಂತೆ ಮಾಡಿದನು.

ತತೋ ದೇಹಪರಿತ್ಯಾಗಂ ಕರ್ತುಂ ಸಮುಯತಸ್ತದಾ ।
ತತೋ ದಂಷ್ಟ್ರಾಗ್ರಘಾತೇನ ನರಸಿಂಹಂ ಮಹಾಬಲಃ ॥ ೧೩೯ ॥

ಶರಭೋ ಭಗವಾನ್ಭಗ್ನೋ ದ್ವಿಧಾ ಮಧ್ಯೇ ಚಕಾರ ಹ ॥
ನರಸಿಂಹೇ ದ್ವಿಧಾ ಭೂತೇ ನರಭಾಗೇನ ತಸ್ಯಚ ॥ ೧೪೦ ॥

ನರ ಏವ ಸಮುತ್ಪನ್ನೋ ದಿವ್ಯರೂಪೀ ಮಹಾನೃಷಿಃ ।
ತಸ್ಯ ಪಂಚಾಸ್ಯಭಾಗೇನ ನಾರಾಯಣ ಇತಿ ಶ್ರುತಃ ॥ ೧೪೧ ॥

ಅಭವತ್ಸುಮಹಾತೇಜಾ ಮುನಿರೂಪೀ ಜನಾರ್ದನಃ ।
ನರೋ ನಾರಾಯಣಶ್ಚೋಭೌ ಸೃಷ್ಟಿಹೇತೂ ಮಹಾಮತೀ ॥ ೧೪೨ ॥

ದ್ವಯೋಃ ಪ್ರಭಾವೋ ದುರ್ಧರ್ಷಃ ಶಾಸ್ತ್ರೇ ವೇದೇ ತಪಸ್ಸುಚ ।
ತೌ ನಾವಿ ವಿದಧಾಯಾಥ ಮತ್ಸ್ಯಮೂರ್ತ್ಯವಿತಾತ್ಮನಿ ॥ ೧೪೩ ॥

ಆಸಸಾದ ಪುನರ್ದೇವೋ ವರಾಹಃ ಶರಭಂ ಪ್ರತಿ ।
ವಪುಸ್ತ್ಯಾಗೋ ಮಯಾವಶ್ಯಂ ಕರ್ತವ್ಯೋ ಜಗತಾಂ ಹಿತೇ ॥ ೧೪೪ ॥

---

೧೩೯. ಆಮೇಲೆ ಬಲಿಷ್ಠನೂ ಶರಭರೂಪಿಯೂ ಆದ ಭಗವಾನ್ ಶಂಕರನು ತನ್ನ ಕೋರದಾಡೆಗಳ ಹೊಡೆತಗಳಿಂದ ನೃಸಿಂಹನನ್ನು ಎರಡುಭಾಗವಾಗಿ ಸೀಳಿದನು.

೧೪೦. ಹೀಗೆ ಎರಡು ಭಾಗವಾಗಿ ಮಾಡಿದ ನರಸಿಂಹಶರೀರದ ನರ (ಮನುಷ್ಯ) ಭಾಗದಿಂದ "ನರ" ನೆಂದು ಹೆಸರುಳ್ಳ ತೇಜಸ್ವಿಯಾದ ಮತ್ತು ರೂಪಶಾಲಿಯಾದ ಒಬ್ಬ ದೊಡ್ಡ ಋಷಿಯು ಜನಿಸಿದನು.

೧೪೧. ಆ ಶರೀರದ ಸಿಂಹಾಕಾರವಾದ ಭಾಗದಿಂದ ನಾರಾಯಣನೆಂಬ ಪ್ರಸಿದ್ಧನೂ ಮಹಾತೇಜಸ್ವಿಯೂ ವಿಷ್ಣುವಿನ ಅವತಾರಿಯೂ ಆದ ಮತ್ತೊಬ್ಬ ಮುನಿಯು ಜನಿಸಿದನು.

೧೪೨. ಈ ನರನಾರಾಯಣರೆಂಬ ಮಹಾ ಬುದ್ಧಿಶಾಲಿಗಳಾದ ಋಷಿಗಳು ಸೃಷ್ಟಿಗೆ ಕಾರಣರು. ಶಾಸ್ತ್ರಗಳಲ್ಲಿಯೂ ವೇದಗಳಲ್ಲಿಯೂ ತಪಸ್ಸಿನಲ್ಲಿಯೂ ಇವರ ಪ್ರಭಾವವು ಅಪ್ರತಿಹತವಾದುದು.

೧೪೩-೧೪೪. ಆ ನರನಾರಾಯಣರನ್ನು ಆ ವರಾಹಮೂರ್ತಿಯು ಮತ್ಸ್ಯ ಮೂರ್ತಿಯು ಹೊತ್ತಿರುವ ಹಡಗಿನಲ್ಲಿಟ್ಟು ತಿರುಗಿ ಶರಭಸಿರುವಲ್ಲಿಗೆ ಬಂದನು.

ಇತಿ ಪೂರ್ವಂ ಪ್ರತಿಜ್ಞಾತಂ ತದರ್ಥೋಽಯಂ ಸಮುದ್ಯಮಃ ।
ಕ್ರಿಯತೇ ಪರಿಣಾ ಸಾರ್ಧಂ ಶಂಭುನಾ ಬ್ರಹ್ಮಣಾಪಿ ಚ ॥ ೧೩೫ ॥

ಇತಿ ಸಂಚಿತ್ಯ ಸ ತದಾ ಸೂಕರಃ ಪರಮೇಶ್ವರಃ ।
ಜಗಾದ ಶರಭಂ ದೇವಂ ಮಹಾದೇವಂ ಮಹಾಬಲಂ ॥ ೧೩೬ ॥

ಜಹಿ ಮಾಂ ತ್ವಂ ಮಹಾದೇವ ತ್ಯಕ್ಷ್ಯೇ ಕಾಯಮಸಂಶಯಂ ।
ಹಿತಾಯ ಸರ್ವಜಗತಾಂ ದೇವಾನಾಮಪಿ ಸದ್ವಿಷಾಂ ॥ ೧೩೭ ॥

ಮಮ ದೇಹಪ್ರತೀಕಾಶೈರ್ಯಜ್ಞಾಂ ಯೂಯಂ ಪ್ರಕಲ್ಪ್ಯ ಚ ।
ಪೃಥಕ್ ಪೃಥಙ್ಮಹಾಭಾಗಾ ಸಶಾಮಿತ್ರಸ್ರುವಾದಿಕಂ ॥ ೧೩೮ ॥

ತತಸ್ತ್ರೀತಾನ್ ತ್ರಿಭಿಃ ಪುತ್ರೈರ್ವಿದಧ್ವಂ ಜಗತಾಂ ಪತೇ ।
ಕನಕೇನ ಸುವೃತ್ತೇನ ಘೋರೇಣ ಚ ಜಗನ್ಮಯಾಂ ॥ ೧೩೯ ॥

---

೧೩೫. ಈ ವರಾಹ ಶರೀರವದ್ದನ್ನು ಜಗತ್ತಿನ ಹಿತಕ್ಕಾಗಿ ಬಿಡುವೆನೆಂದು ಹಿಂದೆ ಪ್ರತಿಜ್ಞೆಮಾಡಿರುವೆನು. ಆ ಪ್ರತಿಜ್ಞೆಯನ್ನು ಪೂರೈಸುವುದಕ್ಕಾಗಿಯೇ ಹರಿಯೂ, ಬ್ರಹ್ಮನೂ, ಶಂಕರನೂ ಪ್ರಯತ್ನಿಸುತ್ತಿರುವರು.

೧೩೬. ಹೀಗೆ ಯೋಚಿಸಿ ನಾರಾಯಣಸ್ವರೂಪಿಯಾದ ವರಾಹನು ಶರಭ ರೂಪಿಯಾದ ಶಂಕರನನ್ನು ಕುರಿತು ಈರೀತಿಯಾಗಿ ಹೇಳಿದನು.

೧೩೭. ಓ ಮಹಾದೇವನೇ! ನೀನು ನನ್ನನ್ನು ಸಂಹರಿಸು. ನಿಶ್ಚಯವಾಗಿಯೂ ಈ ವರಾಹ ಶರೀರವನ್ನು ಜಗತ್ತಿನ ಮತ್ತು ದೇವಾಸುರರ ಕ್ಷೇಮಕ್ಕಾಗಿ ಬಿಡುವೆನು.

೧೩೮. ನನ್ನ ಶರೀರದ ಅವಯವಗಳಿಂದ ಬೇರೆಬೇರೆಯಾಗಿ ಯಜ್ಞಗಳನ್ನೂ ಮತ್ತು ಯಜ್ಞಸಾಮಗ್ರಿಗಳಾದ ಶಾಮಿತ್ರ (ಪಶುವಧ) ಸ್ರುಕ್ಕುಗಳು ಮುಂತಾದುವುಗಳನ್ನೂ ಕಲ್ಪಿಸಿಕೊಳ್ಳಿರಿ.

೧೩೯. ಕನಕ, ಸುವೃತ್ತ ಮತ್ತು ಘೋರವೆಂಬ ನನ್ನ ಮೂರು ಮಕ್ಕಳ ಶರೀರಗಳಿಂದ ಆಹವನೀಯ, ದಕ್ಷಿಣಾಗ್ನಿ, ಗಾರ್ಹಪತ್ಯಗಳೆಂಬ ಮೂರು ಅಗ್ನಿಗಳನ್ನು ಜಗತ್ತಿನ ಕ್ಷೇಮಕ್ಕಾಗಿ ಕಲ್ಪಿಸಿರಿ.

ಯಜ್ಞಾದ್ದೇವಾಃ ಪ್ರಜಾಶ್ಚೈವ ಯಜ್ಞಾದನ್ನಾನಿ ಯೋಗಿನಃ ।
ಸರ್ವಂ ಯಜ್ಞಾತ್ಸದಾ ಭಾವಿ ಸರ್ವಂ ಯಜ್ಞಮಯಂ ಜಗತ್ ॥ ೧೪೦ ॥

ಯಮಿಯಂ ಪೃಥಿವೀ ಗರ್ಭಮಧತ್ತ ಮಲನೀ ಪುನಃ ।
ಸಮುತ್ಪನ್ನಂ ಸ್ವಯಂ ದೇವೀ ಚಿರಂ ಸಂಗೋಪಯಿಷ್ಯತಿ ॥ ೧೪೧ ॥

ಪ್ರಾಪ್ತೇ ಕಾಲೇ ಯದಾ ದೇವೀ ತದಾ ಯುಷ್ಮಾನ್ಸುಭಾಷತೇ ।
ವಧಸ್ತಸ್ಯಾತಿಭಾರಾರ್ತಾ ತದೈವೈನಂ ಹನಿಷ್ಯಥ ॥ ೧೪೨ ॥

ಭಾರಾರ್ತಾ ಪೃಥಿವೀ ಮಗ್ನಾ ಯದಾಧಃ ಶತಯೋಜನಂ ।
ಶೃಂಗೀ ವರಾಹರೂಪೇಣ ಪ್ರೋದ್ಧರಿಷ್ಯೇ ತದಾ ತ್ವಿಮಾಂ ॥ ೧೪೩ ॥

ಕೃತಕೃತ್ಯಂ ತು ತಂ ಕಾಯಂ ತ್ಯಾಜಯಿಷ್ಯತಿ ತೇ ಸುತಃ ।
ಯೋ ಭಾವೀ ದೇವಸೇನಾನೀ ರುದ್ರಾತ್ ಷಾಣ್ಮಾತುರಾಹ್ವಯಃ ॥ ೧೪೪ ॥

---

೧೪೦. ಯಜ್ಞಗಳಿಂದ ದೇವತೆಗಳೂ ಪ್ರಜೆಗಳೂ ಜನಿಸುವರು. ಯಜ್ಞದಿಂದಲೇ ಆಹಾರಪದಾರ್ಥಗಳೂ, ಯೋಗಿಗಳೂ, ಆಗುವರು. ಹೆಚ್ಚೇನು? ಎಲ್ಲವೂ ಯಜ್ಞದಿಂದಲೇ ಆಗತಕ್ಕದ್ದು. ಆ ಕಾರಣ ಜಗತ್ತೆಲ್ಲವೂ ಯಜ್ಞಮಯವಾಯಿತು.

೧೪೧. ಈಗ ತಿರುಗಿ ರಜಸ್ವಲೆಯಾದಾಗ ಧರಿಸಿರುವ ಗರ್ಭದಿಂದ ಜನಿಸುವ ಪುತ್ರನನ್ನು ಭೂದೇವಿಯು ಬಹಳಕಾಲ ಸಲಹುವಳು.

೧೪೨. ಮುಂದೊಂದು ಕಾಲವು ಬರಲು, ಯಾವಾಗ ಭೂದೇವಿಯು ನರಕನ ಭಾರವನ್ನು ಸಹಿಸಲಾರದೆ ನಿಮ್ಮಲ್ಲಿ ದೂರುಹೇಳಿಕೊಳ್ಳುವಳೋ ಆಗ ಆ ಗರ್ಭದಿಂದ ಜನಿಸಿದ ನರಕನನ್ನು ಸಂಹರಿಸಿರಿ.

೧೪೩. ಅತಿ ಭಾರದಿಂದ ಪೀಡಿಸಲ್ಪಟ್ಟು ಭೂಮಿಯು ಯಾವಾಗ ನೂರು ಯೋಜನ ಕೆಳಗೆ ಹೋಗುವಳೋ ಆಗ ನಾನು ಒಂದು ಶೃಂಗ (ಕೋಡು) ಸ್ಥಳ ವರಾಹರೂಪವನ್ನು ಧರಿಸಿ ಈ ಭೂಮಿಯನ್ನು ಉದ್ಧರಿಸುವೆನು.

೧೪೪. ಭೂಮಿಯು ಉದ್ಧಾರವಾದ ಬಳಿಕ ಆ ಶೃಂಗವುಳ್ಳ, ವರಾಹ ಶರೀರವನ್ನು ಮುಂದೆ ಜನಿಸಿ ದೇವಸೇನಾನಿಯಾಗುವ ನಿನ್ನ ಪುತ್ರನಾದ ಷಣ್ಮಾತುರನು ಸಂಹರಿಸುವನು.

ಏವಂ ಯಜ್ಞವರಾಹೇ ತು ಭಾಷಮಾಣೇ ಮಹಾಬಲೇ ।
ನಿಸ್ಸೃತ್ಯ ಸುಮಹತ್ತೇಜೋ ಜ್ವಾಲಾಮಾಲಾತಿದೀಪಿತಂ ॥ ೧೪೫ ॥

ಸೂರ್ಯಕೋಟಿಪ್ರತೀಕಾಶಂ ವರಾಹವಪುಷಸ್ತದಾ ।
ಹರೇರ್ಭಗವತೋ ದೇಹೇ ವಿವೇಶ ಮಹದದ್ಭುತಂ ॥ ೧೪೬ ॥

ತಸ್ಮಿನ್ವಿಷ್ಣೌ ಪ್ರವಿಷ್ಟೇ ತು ವಾರಾಹೇ ತೇಜಸಿ ದ್ವಿಜಾಃ ।
ಸುವೃತ್ತಾತ್ಕನಕಾದ್ಘೋರಾತ್ತೇಜ ಆದಾತ್ಸ್ವಯಂ ಹರಿಃ ॥ ೧೪೭ ॥

ತೇಷಾಮಪಿ ಶರೀರೇಭ್ಯ ಸ್ತೇಜೋಭಾಗಃ ಪೃಥಕ್ ಪೃಥಕ್ ।
ವಿನಿಸ್ಸೃತ್ಯ ವಿನಿಸ್ಸೃತ್ಯ ಜ್ವಾಲಾಮಾಲಾತಿದೀಪಿತಃ ॥ ೧೪೮ ॥

ಪ್ರವಿವೇಶ ಹರೇಃ ಕಾಯೇ ಯಥಾ ತೇಷಾಂ ಪಿತುಸ್ತಥಾ ।
ತತೋ ಹರಿಶ್ಚ ಬ್ರಹ್ಮಾಚ ಮಹಾದೇವಶ್ಚ ತದ್ವಚಃ ॥ ೧೪೯ ॥

೧೪೫-೧೪೬. ಈರೀತಿಯಾಗಿ ಮಹಾಬಲಶಾಲಿಯಾದ ಯಜ್ಞವರಾಹವು ಹೇಳುತ್ತಲಿರಲು ಅದರ ಶರೀರದಿಂದ ಜ್ವಾಲೆಗಳ ಮಾಲೆಗಳುಳ್ಳದ್ದೂ ಕೋಟಿಸೂರ್ಯರಂತೆ ಪ್ರಕಾಶಮಾನವಾದುದೂ, ತುಂಬಾ ಆಶ್ಚರ್ಯಕರವಾದುದೂ ಆದ ದೊಡ್ಡದೊಂದು ತೇಜಸ್ಸು ಹೊರಟು ಭಗವಂತನಾದ ನಾರಾಯಣನ ಶರೀರವನ್ನು ಪ್ರವೇಶಿಸಿತು.

೧೪೭. ಈರೀತಿಯಾಗಿ ವರಾಹಮೂರ್ತಿಯ ತೇಜಸ್ಸು ವಿಷ್ಣುವಿನಲ್ಲಿ ಸೇರಲು ವಿಷ್ಣುವು ತಿರುಗಿ ಸುವೃತ್ತ, ಕನಕ ಮತ್ತು ಘೋರರೆಂಬ ವರಾಹಪುತ್ರರಿಂದಲೂ ಸಹ ತೇಜಸ್ಸುಗಳನ್ನು ತಾನೇ ಸ್ವೀಕರಿಸಿದನು.

೧೪೮. ವರಾಹನ ತೇಜಸ್ಸು ಪ್ರವೇಶಿಸಿದಂತೆ ಆ ವರಾಹಪುತ್ರರ ತೇಜಸ್ಸೂ ಸಹ ಜ್ವಾಲೆಗಳ ಮಾಲೆಯುಳ್ಳವುಗಳಾಗಿ ಆಯಾಯ ಶರೀರದಿಂದ ಹೊರಟು ಬೇರೆ ಬೇರೆಯಾಗಿ ನಾರಾಯಣನ ಶರೀರವನ್ನು ಪ್ರವೇಶಿಸಿದವು.

೧೪೯-೧೫೦. ಅನಂತರ ಹರಿಯೂ, ಬ್ರಹ್ಮನೂ, ಮಹಾದೇವನೂ ಸಹ ವರಾಹಮೂರ್ತಿಯ ಮಾತುಗಳನ್ನು ಕೇಳಿ ಅದರಂತೆ ಅಂಗೀಕರಿಸಿ ಆ ವರಾಹ ಮತ್ತು ವರಾಹಪುತ್ರರ ಶರೀರಸಂಹಾರನಲ್ಲಿ ಯತ್ನಿಸತೊಡಗಿದರು.

ವರಾಹಸ್ಯ ಪ್ರತಿಶ್ರುತ್ಯ ಓಮಿತ್ಯುಕ್ತ್ವಾ ಪುನಃ ಪುನಃ ।
ತೇಷಾಂ ಕಾಯಪರಿತ್ಯಾಗೇ ಆಕಾರ್ಷುರ್ಯತ್ನಮುತ್ತಮಂ ॥ ೧೫೦ ॥

ತತಸ್ತುಂಡಪ್ರಹಾರೇಣ ಶರಭಃ ಕಂಠಮಧ್ಯತಃ ।
ಭಿತ್ವಾ ವಪುರ್ವರಾಹಸ್ಯ ಸಾತಯಾಮಾಸ ಭೂತಲೇ ॥ ೧೫೧ ॥

ತಂ ಸಾತಯಿತ್ವಾ ಪ್ರಥಮಂ ಸುವೃತ್ತಂ ಕನಕಂ ತಥಾ ।
ಘೋರಂ ಚ ಕಂಠದೇಶೇಷು ಭಿತ್ವಾ ಭಿತ್ವಾ ಜಘಾನ ಹ ॥ ೧೫೨ ॥

ತ್ಯಕ್ತೈಪ್ರಾಣಾಸ್ತು ತೇ ಸರ್ವೇ ಪೇತುಸ್ತೋಯೇ ಮಹಾರ್ಣವೇ ।
ಜಲಶಬ್ದಂ ವಿತನ್ವಾನಾಃ ಕಾಲಾನಲಸಮತ್ವಿಷಃ ॥ ೧೫೩ ॥

ಪತಿತೇಷು ವರಾಹೇಷು ಬ್ರಹ್ಮಾ ವಿಷ್ಣುರ್ಹರಸ್ತಥಾ ।
ಸೃಷ್ಟ್ಯರ್ಥಂ ಚಿಂತಯಾಮಾಸುಃ ಪುನರೇವ ಸಮಾಗತಾಃ ॥ ೧೫೪ ॥

ಹರಸ್ಯ ತು ಗಣಾಃ ಸರ್ವೇ ತದಾ ಭರ್ಗಂ ಸಮಾಗತಾಃ ।
ಉಪತಸ್ಥುರ್ಮಹಾಭಾಗಾಃ ಚತುರ್ಭಾಗೇನ ಭಾಜಿತಾಃ ॥ ೧೫೫ ॥

---

೧೫೦. ಆಮೇಲೆ ಶರಭವು ತನ್ನ ಮೂತಿಯ ಹೊಡೆತದಿಂದ ವರಾಹನ ಕತ್ತನ್ನು ಸೀಳಿ ಅದರ ಶರೀರವನ್ನು ಜಲದಲ್ಲಿ ಬೀಳಿಸಿತು.

೧೫೨. ಹೀಗೆ ಆದಿವರಾಹನನ್ನು ಮೊದಲು ಸಂಹರಿಸಿ ಸುವೃತ್ತನನ್ನೂ ಕನಕನನ್ನೂ ಘೋರನನ್ನೂ ಸಹ ಕತ್ತಿನ ಪ್ರದೇಶದಲ್ಲಿ ಸೀಳಿ ಸಂಹರಿಸಿತು.

೧೫೩. ಆಗ ಪ್ರಳಯಾಗ್ನಿಯಂತೆ ಇರುವ ಆ ವರಾಹನ ಪುತ್ರರು ಪ್ರಾಣವನ್ನು ಬಿಟ್ಟು ಆ ಜಲರಾಶಿಯಲ್ಲಿ ದೊಡ್ಡ ಶಬ್ದದೊಡನೆ ಬಿದ್ದರು.

೧೫೪. ಹೀಗೆ ಆ ವರಾಹ ಅವನ ಪುತ್ರರೂ ಸಹ ಮೃತರಾಗಿ ಜಲರಾಶಿಯನ್ನು ಬೀಳಲು ಬ್ರಹ್ಮ ವಿಷ್ಣು ಮಹೇಶ್ವರರು ಒಂದೆಡೆಯಲ್ಲಿ ಸೇರಿ ಪುನಃ ಸೃಷ್ಟಿಗಾಗಿ ಆಲೋಚಿಸಿದರು.

೧೫೫. ಅಲ್ಲವೆ ಅಲ್ಲಿರುವ ಶಂಕರನ ಪ್ರಮಥಗಣಗಳು ಅವನ ಬಳಿಗೆ ಬಂದು ನಾಲ್ಕುಭಾಗಗಳಲ್ಲಿಯೂ ನಿಂತು ಶಂಕರನನ್ನು ಸೇವಿಸಿದವು.

ಷಟ್ತ್ರಿಂಶತ್ತು ಸಹಸ್ರಾಣಿ ಪ್ರಮುಥಾ ದ್ವಿಜಸತ್ತಮಾಃ ।
ತಥೈಕತ್ರ ಸಹಸ್ರಾಣಿ ಭಾಗೇ ಷೋಡಶ ಸಂಸ್ಥಿತಾಃ ॥ ೧೫೬ ॥

ನಾನಾರೂಪಧರಾ ಯೇ ವೈ ಜಟಾಚಂದ್ರಾರ್ಧಮಂಡಿತಾಃ ।
ತೇ ಸರ್ವೇ ಸಕಲೈಶ್ವರ್ಯಯುಕ್ತಾ ಧ್ಯಾನಪರಾಯಣಾಃ ॥ ೧೫೭ ॥

ಯೋಗಿನೋ ಮದಮಾತ್ಸರ್ಯದಂಭಾಹಂಕಾರವರ್ಜಿತಾಃ ।
ಕ್ಷೀಣಪಾಪಾ ಮಹಾಭಾಗಾಃ ಶಂಭೋಃ ಪ್ರೀತಿಕರಾಃ ಶುಭಾಃ ॥ ೧೫೮ ॥

ನ ತೇ ಪರಿಗ್ರಹಂ ರಾಗಂ ಕಾಂಕ್ಷಂತಿ ಸ್ಮ ಕದಾಚನ ।
ಸಂಸಾರವಿಮುಖಾಃ ಸರ್ವೇ ಯತಯೋ ಯೋಗತತ್ಪರಾಃ ॥ ೧೫೯ ॥

ಧ್ಯಾನಾವಸ್ಥಂ ಮಹಾದೇವಂ ಪರಿವಾರ್ಯ ಧೃತವ್ರತಾಃ ।
ಕೃತ್ವಾ ಪರಿಷದಂ ರುಚ್ಯಾ ತಿಷ್ಠಂತಿ ವಿಗತಕ್ಲಮಾಃ ॥ ೧೬೦ ॥

---

೧೫೬. ಎಲೈ ಬ್ರಾಹ್ಮಣೋತ್ತಮರೇ! ಒಟ್ಟು ಮೂವತ್ತಾರುಸಾವಿರ ಪ್ರಮಥ ಗಣಗಳು, ಅವುಗಳಲ್ಲಿ ಹದಿನಾರುಸಾವಿರ ಗಣಗಳು ಒಂದು ಭಾಗದಲ್ಲಿ ನಿಂತವು.

೧೫೭. ಇವುಗಳಲ್ಲಿ ಯಾವ ಗಣಗಳು ಅನೇಕ ರೂಪವುಳ್ಳವುಗಳಾಗಿ, ಜಟೆಯಲ್ಲಿ ಚಂದ್ರಕಲೆಯುಳ್ಳವರೋ ಅವರು ಅಣಿಮವೇ ಮೊದಲಾದ ಅಷ್ಟಸಿದ್ಧಿಯುಳ್ಳವರು ಮತ್ತು ಧ್ಯಾನಾಸಕ್ತರು.

೧೫೮. ಅವರೆಲ್ಲರೂ ಯೋಗಿಗಳು, ಮದ ಅಸೂಯೆ ಗರ್ವ ಅಹಂಕಾರ ಇವುಗಳಿಲ್ಲದವರು, ಪಾಪವಿಲ್ಲದೆ ಪವಿತ್ರರಾದವರು, ಮಹಾಭಾಗ್ಯವಂತರು, ಶಂಕರನಿಗೆ ಯಾವಾಗಲೂ ಪ್ರೀತಿಯನ್ನುಂಟುಮಾಡುವವರು.

೧೫೯. ಅವರು ಪತ್ನೀಪರಿಗ್ರಹವನ್ನೂ ರಾಗವನ್ನೂ ಎಂದಿಗೂ ಅಪೇಕ್ಷಿಸುವರಲ್ಲವು. ಎಲ್ಲರೂ ಸಂಸಾರದಲ್ಲಿ ವಿರಕ್ತಿಯುಳ್ಳವರು, ಯತಿಗಳು, ಯೋಗನಿಷ್ಠರು.

೧೬೦. ಮಹಾದೇವನು ಧ್ಯಾನಮಗ್ನನಾಗಿರಲು, ತಾವೂ ನಿಯಮದಿಂದ ಗುಂಪಾಗಿ ಅವನ ಸುತ್ತಲೂ ವಿಶ್ರಾಂತಿಯಿಂದ ಕುಳಿತುಕೊಳ್ಳುವರು.

ಯದೈವ ಹರಮುಂ ಜ್ಯೋತಿಶ್ಚಿಂತಯಂತ್ಯಂಬಿಕಾಪತಿಃ ।
ತದೈವ ತೇ ಪಾರಿಷದಾಃ ಸರ್ವೇ ಸಂವೇಷ್ಟಯಂತಿ ತಂ ॥ ೧೬೧ ॥

ತೇ ಷೋಡಶ ಸಮಾಖ್ಯಾತಾಃ ಕೋಟಯೋ ಯೇ ಯತವ್ರತಾಃ ।
ಸಿಂಹವ್ಯಾಘ್ರಾದಿಸಾರೂಪ್ಯಾ ಅಣಿಮಾದಿಸಮನ್ವಿತಾಃ ॥ ೧೬೨ ॥

ಅಪರೇ ಕಾಮಿನಃ ಶಂಭೋಃ ಸುನರ್ಮಸಚಿವಾಃ ಸ್ಮೃತಾಃ ।
ವಿಚಿತ್ರರೂಪಾಭರಣಾ ಜಟಾಚಂದ್ರಾರ್ಧಮಂಡಿತಾಃ ॥ ೧೬೩ ॥

ಹರಸ್ಯ ತುಲ್ಯರೂಪೇಣ ವಿಹರಾ ವೃಷಭಧ್ವಜಾಃ ।
ಉಮಾಸದೃಶರೂಪಾಭಿಃ ಪ್ರಮದಾಭಿಃ ಸಮಾಗತಾಃ ॥ ೧೬೪ ॥

ವಿಚಿತ್ರಮಾಲ್ಯಾಭರಣಾ ದಿವ್ಯಸ್ರಗ್ಗಂಧಭೂಷಿತಾಃ ।
ಉಮಾಸಹಾಯಂ ಕ್ರೀಡಂತಮನುಗಚ್ಛಂತಿ ಭೂಷಿತಾಃ ॥ ೧೬೫ ॥

---

೧೬೧. ಮಹಾದೇವನು ಪರಂಜ್ಯೋತಿಸ್ವರೂಪವನ್ನು ಧ್ಯಾನಿಸುವಾಗ ಈ ಗಣಗಳು ಅವನ ಸುತ್ತಲೂ ಕುಳಿತುಕೊಳ್ಳುವರು.

೧೬೨. ಜಿತೇಂದ್ರಿಯರೂ ಸಿಂಹ ಮತ್ತು ಹುಲಿ ಮೊದಲಾದವುಗಳಂತೆ ರೂಪ ವುಳ್ಳವರೂ ಅಣಿಮಾದಿ ಐಶ್ವರ್ಯ ಸಂಪನ್ನರೂ ಆದ ಈ ಗಣಗಳು ಹದಿನಾರು ಕೋಟಿಯಿರುವುವು.

೧೬೩. ಮಿಕ್ಕ ಕೆಲವರು ವಿಚಿತ್ರವಾದ ರೂಪ ಮತ್ತು ಆಭರಣಗಳುಳ್ಳವರು, ಜಟೆಯಲ್ಲಿ ಚಂದ್ರಕಲೆಯುಳ್ಳವರು, ಮಿಕ್ಕ ಕೆಲವರು ಕಾಮುಕನಾದ ಶಂಕರನಿಗೆ ನರ್ಮಸಚಿವರು. (ವಿಲಾಸಕ್ಕೆ ಸಹಾಯರು ಅಥವಾ ವಿದೂಷಕರು.)

೧೬೪. ಕೆಲವರು ಶಂಕರನಂತೆ ಬಿಳುಪಾದ ರೂಪವುಳ್ಳವರಾಗಿಯೂ, ವೃಷಭ ವಾಹನವುಳ್ಳವರಾಗಿಯೂ ಇದ್ದು ಪಾರ್ವತಿಯಂತೆಯೇ ಇರುವ ತಮ್ಮ ವನಿತೆಯರೊಡನೆ ಸೇರಿ ವಿಹರಿಸುತ್ತಲಿರುವರು.

೧೬೫. ಅಲ್ಲದೆ ಅವರು ವಿಚಿತ್ರವಾದ ಪುಷ್ಪಾಲಂಕಾರಗಳಿಂದಲೂ ಮನೋಹರವಾದ ಹಾರಗಳಿಂದಲೂ, ಸುವಾಸಿತರಾಗಿ, ಪಾರ್ವತಿಯೊಡನೆ ವಿಹರಿಸುತ್ತಲಿರುವ ಶಂಕರನನ್ನು ಅನುಸರಿಸುತ್ತಲಿರುವರು. (ಶಂಕರನಿಗೆ ಸಹಾಯವನ್ನು ಮಾಡುತ್ತಲಿರುವರು.)

ಶೃಂಗಾರವೇಷಾಭರಣಾ ಅಷ್ಟೌ ತೇ ಕೋಟಯೋ ಗಣಾಃ ।
ಅರ್ಧನಾರೀಶ್ವರಾಶ್ಚಾನ್ಯೇ ಹ್ಯರ್ಧನಾರೀಶ್ವರಂ ಹರಂ ॥ ೧೬೬ ॥

ಧ್ಯಾನಸ್ಥಂ ಪ್ರವಿವಿಕ್ಷುಸ್ತೇ ತುಲ್ಯರೂಪಾ ಹರಸ್ಯ ಯೇ ।
ಉಮಾಸಹಾಯೋ ಹಿ ಯದಾ ರಮತೇ ಸಂಮುಖಂ ಹರಃ ॥ ೧೬೭ ॥

ಅರ್ಧನಾರೀಶರೀರಾಸ್ತು ದ್ವಾರಪಾಲಾ ಭವಂತಿ ತೇ ।
ಆಕಾಶಮಾರ್ಗೇಣ ಗಚ್ಛಂತಮನುಗಚ್ಛಂತಿ ನಿತ್ಯಶಃ ॥ ೧೬೮ ॥

ಧ್ಯಾನಸ್ಥಂ ಪರಿಚರ್ಯಂತಿ ಸಲಿಲಾದಿಭಿರೀಶ್ವರಂ ।
ನಾನಾಶಸ್ತ್ರಧರಾಃ ಶಂಭೋರ್ಗಣಾಸ್ತೇ ಪ್ರಮಥಾಃ ಸ್ಮೃತಾಃ ॥ ೧೬೯ ॥

ಪ್ರಮಥ್ನಂತಿ ಚ ಯುದ್ಧೇಷು ಯಧ್ಯಮಾನಾನ್ಮಹಾಬಲಾನ್ ।
ತೇ ವೈ ಮಹಾಬಲಾಃ ಶೂರಾಃ ಸಂಖ್ಯಯಾ ನವಕೋಟಯಃ ॥ ೧೭೦ ॥

---

೧೬೬. ಶೃಂಗಾರಮಯವಾದ ವೇಷ ಮತ್ತು ಆಭರಣಗಳುಳ್ಳ ಈ ಗಣಗಳು ಎಂಟು ಕೋಟಿಯಿರುವುವು.

೧೬೭. ಇನ್ನು ಕೆಲವರು ಈಶ್ವರನಂತೆ ಅರ್ಧಭಾಗ ಹೆಂಗಸಿನ ಶರೀರವುಳ್ಳವರಾಗಿ ಧ್ಯಾನಮಗ್ನನಾದ ಶಂಕರನ ಬಳಿಯಲ್ಲಿಯೇ ಇರುವರು.

೧೬೮. ಉಮೆಯೊಡನೆ ಸೇರಿ ಏಕಾಂತದಲ್ಲಿ ಹರನು ವಿಹರಿಸುವಾಗ ಈ ಅರ್ಧನಾರೀರೂಪವುಳ್ಳ ಗಣಗಳು ದ್ವಾರಪಾಲಕರು ಅಂದರೆ ಬಾಗಿಲುಕಾಯುವವರು ಆಗುವರು.

೧೬೯. ಶಂಕರನು ಆಕಾಶದಲ್ಲಿ ಸಂಚರಿಸುವಾಗ ಅವನನ್ನು ಈ ಗಣಗಳು ಅನುಸರಿಸುವರು. ಅವನು ಧ್ಯಾನಮಗ್ನನಾಗಿರುವಾಗ ನೀರು ಮೊದಲಾದುವುಗಳನ್ನು ತಂದುಕೊಡುತ್ತಾ ಅವನ ಸೇವೆಯನ್ನು ಮಾಡುವರು.

೧೭೦. ಇನ್ನು ಕೆಲವು ಗಣಗಳು ಶಂಕರನ ಅನೇಕ ಆಯುಧಗಳನ್ನು ಧರಿಸಿ ಯುದ್ಧಮಾಡುತ್ತಲಿರುವ ಮಹಾಬಲಶಾಲಿಗಳಾದ ಶತ್ರುಗಳನ್ನು ಸಂಹರಿಸುವುವು ಇಂತಹ ವೀರಗಣಗಳು ಒಂಭತ್ತುಕೋಟಿ ಇವೆ.

ಅಪರೇ ಗಾಯನಾಸ್ತಾಲಮೃದಂಗಪಣವಾದಿಭಿಃ ।
ನೃತ್ಯಂತಿ ವಾದ್ಯಂ ಕುರ್ವಂತಿ ಗಾಯಂತಿ ಮಧುರಸ್ವನಂ ॥ ೧೭೧ ॥

ನಾನಾರೂಪಧರಾಸ್ತೇ ವೈ ಸಂಖ್ಯಯಾ ಕೋಟಿಯಸ್ತ್ರಯಃ ।
ಸತತಂ ಚಾನುಗಚ್ಛಂತಿ ವಿಚರಂತಂ ಮಹೇಶ್ವರಂ ॥ ೧೭೨ ॥

ಸರ್ವೇ ಮಾಯಾವಿನಃ ಶೂರಾಃ ಸರ್ವೇ ಶಾಸ್ತ್ರಾರ್ಥಪಾರಗಾಃ ।
ಸರ್ವೇ ಸರ್ವತ್ರ ಸರ್ವಜ್ಞಾಃ ಸರ್ವೇ ಸರ್ವತ್ರಗಾಃ ಸದಾ ॥ ೧೭೩ ॥

ಮುಹೂರ್ತಾತ್ಸರ್ವಭುವನಂ ಗತ್ವಾ ಯಾಂತಿ ಪುನರ್ಭವಂ ।
ಅಣಿಮಾದ್ಯಷ್ಟಕೈಶ್ವರ್ಯಯುಕ್ತಾಸ್ತೇ ವೈ ಮಹಾಬಲಾಃ ॥ ೧೭೪ ॥

ಅಪರೇ ರುದ್ರನಾಮಾನೋ ಜಟಾಚಂದ್ರಾರ್ಧಮಂಡಿತಾಃ ।
ದೇವೇಂದ್ರಸ್ಯ ನಿಯೋಗೇನ ವರ್ತಂತೇ ತ್ರಿದಿವೇ ಸದಾ ॥ ೧೭೫ ॥

---

೧೭೧. ಇನ್ನು ಕೆಲವರು ಹಾಡುವರು. ತಾಳ, ಮೃದಂಗ, ಮದ್ದಳೆ ಮುಂತಾ ದುವುಗಳನ್ನು ಬಾರಿಸುತ್ತಾ ನರ್ತನ ಮಾಡುವರು, ವಾದ್ಯವನ್ನು ಬಾರಿಸುವರು ಮತ್ತು ಇಂಪಾದ ಧ್ವನಿಯಿಂದ ಹಾಡುವರು.

೧೭೨. ಅನೇಕ ರೂಪಗಳುಳ್ಳ ಆ ಗಣಗಳು ಮೂರು ಕೋಟಿಗಳಿರುವವು. ಇವರು ಸದಾ ಶಂಕರನು ಎಲ್ಲೆಲ್ಲಿ ಸಂಚರಿಸುವನೋ ಅಲ್ಲೆಲ್ಲಾ ಅವನನ್ನು ಅನುಸರಿಸುವರು.

೧೭೩. ಈ ಎಲ್ಲಾ ಗಣಗಳೂ ಮಾಯಾವಿಗಳು, ಶೂರರು, ಎಲ್ಲರೂ ಶಾಸ್ತ್ರಾರ್ಥವನ್ನು ಬಲ್ಲವರು, ಎಲ್ಲಾ ಕಡೆಯಲ್ಲಿಯ ವೃತ್ತಾಂತವನ್ನು ಬಲ್ಲವರು, ಎಲ್ಲೆಡೆಯಲ್ಲಿಯೂ ಸಂಚರಿಸುವವರು.

೧೭೪. ಮತ್ತು ಅವರು ಒಂದು ಮುಹೂರ್ತಕಾಲದಲ್ಲಿಯೇ ಸಕಲ ಜಗತ್ತನ್ನೂ ಸಂಚರಿಸಿ ತಿರುಗಿ ಶಂಕರನನ್ನು ಸೇರುವರು. ಅಲ್ಲದೇ ಅಣಿಮವೇ ಮೊದಲಾದ ಅಷ್ಟೈಶ್ವರ್ಯಸಂಪನ್ನರೂ, ಬಲಿಷ್ಠರೂ, ಆಗಿರುವರು.

೧೭೫. ಜಟೆಯಲ್ಲಿ ಚಂದ್ರನ ಕಲೆಯುಳ್ಳ ರುದ್ರ (ಏಕಾದಶ ರುದ್ರರು) ರೆಂಬ ಇನ್ನು ಕೆಲವು ಗಣಗಳು ದೇವೇಂದ್ರನ ಅಪ್ಪಣೆಯಂತೆ ಸ್ವರ್ಗದಲ್ಲಿ ಇರುವರು.

ತೇಷಾಂ ಸಂಖ್ಯಾ ಚೈಕಕೋಟಿಸ್ತೇ ಸರ್ವೇ ಬಲವತ್ತರಾಃ ।
ಕುರ್ವಂತಿ ಹಿ ಸದಾ ಸೇವಾಂ ಹರಸ್ಯ ಸತತಂ ಗಣಾಃ ॥ ೧೭೬ ॥

ವಿಸ್ಮಯಂತಿ ಚ ಪಾಪಿಷ್ಠಾನ್ಧರ್ಮಿಷ್ಠಾನ್ಪಾಲಯಂತಿ ಚ ।
ಅನುಗೃಹ್ಣಂತಿ ಸತತಂ ಧೃತಪಾಶುಪತವ್ರತಾನ್ ॥ ೧೭೭ ॥

ವಿಘ್ನಾಂಶ್ಚ ಸತತಂ ಘ್ನಂತಿ ಯೋಗಿನಾಂ ಪ್ರಯತಾತ್ಮನಾಂ ।
ಷಡ್ವಿಂಶತ್ಕೋಟಯಶ್ಚೈತೇ ಹರಸ್ಯ ಸಕಲಾ ಗಣಾಃ ॥ ೧೭೮ ॥

ವರಾಹಗಣನಾಶಾರ್ಥಂ ಹಿತಾಯ ಜಗತಾಂ ತಥಾ ।
ಶಂಕರಸ್ಯಾಥ ಸೇವಾಯೈ ಸಮುತ್ಪನ್ನಾ ಇಮೇ ಗಣಾಃ ॥ ೧೭೯ ॥

ವರಾಹಸ್ಯ ಗಣಾನ್ದೃಷ್ಟ್ವಾ ನರಸಿಂಹಂ ತಥಾ ಹರಿಂ ।
ಸ್ವಯಂ ಶರಭರೂಪಃ ಸನ್ ಧ್ಯಾಯನ್ನಾದಂ ಯದಾಕರೋತ್ ॥ ೧೮೦ ॥

---

೧೭೬. ಅವರು ಒಂದು ಕೋಟಿಗಳಿರುವರು. ಎಲ್ಲರೂ ಬಲಶಾಲಿಗಳು. ಈ ಪ್ರಮಥಗಣಗಳೆಲ್ಲವೂ ಶಂಕರನ ಸೇವೆಯನ್ನು ಯಾವಾಗಲೂ ಮಾಡುವುವು.

೧೭೭. ಮತ್ತು ಈ ಗಣಗಳು ಪಾಪಿಗಳನ್ನು ಶಿಕ್ಷಿಸುವರು, ಧರ್ಮಿಷ್ಠರನ್ನು ರಕ್ಷಿಸುವರು, ಸದಾ ಈಶ್ವರಪೂಜೆ ಮಾಡುವವರನ್ನು ಅನುಗ್ರಹಿಸುವರು.

೧೭೮. ಜಿತೇಂದ್ರಿಯರಾದ ಯೋಗಿಗಳಿಗೆ ಬರುವ ವಿಘ್ನಗಳನ್ನು ನಿವಾರಿಸುವರು. ಒಟ್ಟು ಇಪ್ಪತ್ತಾರುಕೋಟಿ ಶಂಕರನ ಪ್ರಮಥಗಣಗಳಿರುವುವು.

೧೭೯. ಶಂಕರನ ಪ್ರಮಥಗಣಗಳು ವರಾಹಗಣಗಳ ಸಂಹಾರಕ್ಕಾಗಿಯೂ, ಆ ಮೂಲಕ ಜಗತ್ತಿನ ಹಿತಕ್ಕಾಗಿಯೂ, ಶಂಕರನ ಸೇವೆಗೋಸ್ಕರವಾಗಿಯೂ ಜನಿಸಿರುವುವು.

೧೮೦. ಹಿಂದೆ ವರಾಹಗಳನ್ನೂ ಹರಿಸ್ವರೂಪಿಯಾದ ನರಸಿಂಹನನ್ನೂ ನೋಡಿ ಶರಭರೂಪಿಯಾದ ಶಂಕರನು ಧ್ಯಾನಿಸುತ್ತಾ ಗರ್ಜನೆಯನ್ನು ಮಾಡುವಾಗ ಅವನ ಮುಖದ ಜಲತುಂತುರುಗಳಿಂದ ಈ ಗಣಗಳು ಜನಿಸಿದುದರಿಂದ ಇವುಗಳಿಗೆ ಅನೇಕತನವು ಬಂದಿತು.

ತಚ್ಛ್ರೀಕೆರಾದ್ಯತೋ ಜಾತಾಸ್ತತ್ತ್ರೀಷಾಂ ಬಹುರೂಪತಾ ।
ಕ್ರೂರದೃಷ್ಟ್ಯಾ ಕ್ರೂರಕೃತ್ಯೈಃ ಕ್ರೂರಯುದ್ಧೈರಿಮಾನ್ಗಣಾನ್ ॥ ೧೪೧ ॥

ವರಾಹಸ್ಯ ಘ್ನತೇತ್ಯೇವಂ ಯತಃ ಪ್ರೋಕ್ತಂ ಪಿನಾಕಿನಾ ।
ಅತಸ್ತೇ ಕ್ರೂರಕರ್ಮಾಣಃ ಪ್ರಜಾತಾಶ್ಚ ಭಯಂಕರಾಃ ॥ ೧೪೨ ॥

ನ ಸದಾ ಕ್ರೂರಕರ್ಮಾಣಿ ತೇ ಕುರ್ವಂತಿ ಮಹೌಜಸಃ ।
ದೃಷ್ಟಿಮಾತ್ರಸ್ಯ ತೇ ಕ್ರೂರಾಃ ಕ್ರೂರಾಸ್ತೇ ನ ತು ಕಾರ್ಯತಃ ॥ ೧೪೩ ॥

ಫಲಂ ಜಲಂ ತಥಾ ಪುಷ್ಪಂ ಪತ್ರಂ ಮೂಲಂ ತಥೈವ ಚ ।
ನಿವೇದಿತಾನಿ ಭುಂಜಂತಿ ವನಪರ್ವತಸಾನುಷು ॥ ೧೪೪ ॥

ಆಹೃತ್ಯಾಪಿ ಚ ಭುಂಜಂತಿ ಪತ್ರಂ ಪುಷ್ಪಾದಿಕಂ ಚ ಯತ್ ।
ಭವೇದ್ಭರ್ಗಸ್ಯ ಯುದ್ಭೋಗ್ಯಂ ತದ್ಭೋಗ್ಯಾಸ್ತೇ ಮಹೌಜಸಃ ॥ ೧೪೫ ॥

೧೪೧-೪೨. ಅಲ್ಲದೆ ಕ್ರೂರವಾದ ದೃಷ್ಟಿಯಿಂದಲೂ, ಕೃತ್ಯಗಳಿಂದಲೂ, ಯುದ್ಧಗಳಿಂದಲೂ, ಈ ವರಾಹ ಗಣಗಳನ್ನು ಸಂಹರಿಸಿರಿ ಎಂದು ಶಂಕರನು ಈ ಗಣಗಳಿಗೆ ಹೇಳಿದುದರಿಂದ ಇವುಗಳು ಕ್ರೂರವಾದ ಕರ್ಮವುಳ್ಳವುಗಳೂ, ಭಯಂಕರವಾದುವುಗಳೂ ಆದವು.

೧೪೩. ವೀರರಾದ ಈ ಗಣಗಳು ಸದಾ ಕ್ರೂರಕರ್ಮಗಳನ್ನು ಮಾಡುವುದಿಲ್ಲವು. ನೋಡುವುದಕ್ಕೆ ಮಾತ್ರ ಇವರು ಕ್ರೂರರಾಗಿ ತೋರುವರು. ಸ್ವಭಾವದಿಂದ ಇವರು ಕ್ರೂರಕರ್ಮಿಗಳಲ್ಲವು.

೧೪೪. ಅರಣ್ಯ, ಬೆಟ್ಟದ ತೊಪ್ಪಲು ಮುಂತಾದುವುಗಳಲ್ಲಿ ನಿವೇದಿಸಿದ ಹಣ್ಣು, ಜಲ, ಹೂವುಗಳು, ಗೆಡ್ಡೆ ಗೆಣಸು ಮುಂತಾದುವುಗಳನ್ನು ಆಹಾರವನ್ನಾಗಿ ಸೇವಿಸುವರು.

೧೪೫. ಈಶ್ವರನು ಸೇವಿಸುವಂತಹ ಪತ್ರ ಪುಷ್ಪ ಮೊದಲಾದವುಗಳನ್ನು ತಾವೇ ಸಂಪಾದಿಸಿಯೂ ತಿನ್ನುವರು. ಈಶ್ವರನು ಏನನ್ನು ಸೇವಿಸುವನೋ ಅದನ್ನೇ ಸೇವಿಸುವರು.

ಆಮಿಷಾಣಿ ಚ ನಾಶ್ನಂತಿ ಹಿತ್ವಾ ಚೈತ್ರಚತುರ್ದಶೀಂ ।
ತತ್ರಾಮಿಷಂ ಹರೋ ಭುಂಕ್ತೇ ಚತುರ್ದಶ್ಯಾಂ ಮಧೌ ಸದಾ ॥ ೧೪೬ ॥

ತತಃ ಸರ್ವೇ ಗಣಾಸ್ತತ್ರ ಭುಂಜಂತಿ ಪಲಲಾನ್ಯ ಪಿ ।
ಹತೇ ವರಾಹಸ್ಯ ಗಣೇ ಭರ್ಗಮಾಸಾದ್ಯ ತೇ ಗಣಾಃ ॥ ೧೪೭ ॥

ಚತುರ್ಭಾಗಾಃ ಸ್ವಯಂ ಭೂತ್ವಾ ಭೂತಂ ಕರ್ಮೇತಿ ವೈ ಜಗುಃ ।
ಭೂತತ್ವಮಭವತ್ತೇಷಾಂ ಚತುರ್ಭಾಗವತಾಂ ತದಾ ।
ವಚನಾತ್ಪದ್ಮಯೋನೇಸ್ತು ಭೂತಗ್ರಾಮಾಸ್ತತೋ ಮತಾಃ ॥ ೧೪೮ ॥

ಯೋ ಲೋಕವಿದಿತಃ ಪೂರ್ವಂ ಭೂತಗ್ರಾಮಶ್ಚತುರ್ವಿಧಃ ॥ ೧೪೯ ॥

---

೧೪೬. ಚೈತ್ರ ಶುದ್ಧ ಚತುರ್ದಶೀ ಒಂದುಹೊರತು ಮಿಕ್ಕ ಯಾವ ದಿನ ಗಳಲ್ಲೂ ಮಾಂಸವನ್ನು ಈ ಗಣಗಳು ಸೇವಿಸುವುದಿಲ್ಲ. ಆ ಚೈತ್ರ ಶುದ್ಧ ಚತುರ್ದಶಿ ಯಲ್ಲಿ ಶಂಕರನು ಮಾಂಸವನ್ನು ಸೇವಿಸುವನು. ಆಗ ಗಣಗಳೂ ಸಹ ಮಾಂಸವನ್ನು ಸೇವಿಸುವುವು.

೧೪೭. ಹಿಂದೆ ಹೇಳಿದಂತೆ ವರಾಹ ಗಣಗಳು ಸಂಹರಿಸಲ್ಪಡಲು ಈ ಪ್ರಮಥ ಗಣಗಳು ಶಂಕರನ ಬಳಿಗೆ ಬಂದು ನಾಲ್ಕುಭಾಗವಾಗಿ ಅವನ ನಾಲ್ಕುಪಕ್ಕಗಳಲ್ಲಿಯೂ ಕುಳಿತು ಕರ್ಮ (ಕಾರ್ಯ) ವೆಲ್ಲವೂ ಭೂತಂ ಎಂದರೆ ಆಯಿತು ಸಾಧಿಸಲ್ಪಟ್ಟಿತೆಂದು ಹೇಳಿದುವು.

೧೪೮. ಆಗ ಅಂದರೆ ಕಾರ್ಯವೆಲ್ಲವೂ ಭೂತಂ (ಆಯಿತು) ಎಂದು ಹೇಳಿದು ದರಿಂದ ಬ್ರಹ್ಮನು ಈ ಗಣಗಳಿಗೆ ಭೂತಗಳೆಂದು ಹೆಸರಿಟ್ಟನು. ಆ ಕಾರಣದಿಂದ ಆ ಗಣಗಳಿಗೆ ಭೂತಗ್ರಾಮ (ಭೂತಸಮೂಹ) ಗಳೆಂದು ಪ್ರಸಿದ್ಧಿಯು.

೧೪೯. ಹಿಂದೆ ಲೋಕಪ್ರಸಿದ್ಧವಾದ ನಾಲ್ಕು ಪ್ರಕಾರವಾಗಿರುವ (ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ) ಗಳೆಂದು ಪ್ರಸಿದ್ಧವಾಗಿರುವ ಭೂತಗ್ರಾಮವು ಈ ಗಣ ಗಳಿಂದ ಬೇರೆಯಾದುದು.

ಯತಸ್ತೇಭ್ಯೋಽಧಿಕೋ ಯತ್ತದ್ಭೂತಗ್ರಾಮಃ ಸ ಉಚ್ಯತೇ ।
ಇತಿ ವಃ ಕಥಿತಂ ಸರ್ವಂ ಭೂತಾಃ ಶಂಭುಗಣಾ ಯಥಾ ॥ ೧೯೦ ॥

ಯದಾಹಾರಾ ಯದಾಕಾರಾ ಯತ್ಕೃತ್ಯಾಸ್ತೇ ಮಹೌಜಸಃ ।
ಯ ಇದಂ ಶೃಣುಯಾನ್ನಿತ್ಯಮಾಖ್ಯಾನಂ ಮಹದದ್ಭುತಂ ॥ ೧೯೧ ॥

ಸ ಧೀರ್ಘಾಯುಃ ಸದೋತ್ಸಾಹೀ ಯೋಗಯುಕ್ತೇಶ್ಚ ಜಾಯತೇ ।

॥ ಇತಿ ಶ್ರೀ ಕಾಲಿಕಾಪುರಾಣೇ ಏಕತ್ರಿಂಶೋಽಧ್ಯಾಯಃ ಸಮಾಪ್ತಃ ॥

---

೧೯೦. ಎಲ್ಲೆ ಮುನಿಗಳೇ! ಈರೀತಿಯಾಗಿ ಶಂಕರನ ವೀರರಾದ ಗಣಗಳ ಅವತಾರವನ್ನೂ ರೂಪವನ್ನೂ ಕರ್ಮವನ್ನೂ ಹೇಳಿದುದಾಯಿತು.

೧೯೧. ಈ ಅದ್ಭುತವಾದ ಇತಿಹಾಸವನ್ನು ಯಾವನು ನಿತ್ಯವೂ ಕೇಳುವನೋ ಅವನು ಬಹಳಕಾಲ ಬದುಕುವವನೂ ಸದಾ ಉತ್ಸಾಹವುಳ್ಳವನೂ ಯೋಗಿಯೂ ಆಗುವನು.

ಇಲ್ಲಿಗೆ ಮೂವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀ ಕಾಲಿಕಾಪುರಾಣೇ ದ್ವಾತ್ರಿಂಶೋಧ್ಯಾಯಃ ॥

॥ ಋಷಯ ಊಚುಃ ॥

ಕಥಂ ಯಜ್ಞವರಾಹಸ್ಯ ದೇಹೋ ಯಜ್ಞತ್ವಮಾಪ್ತವಾನ್ ।
ತ್ರೇತಾತ್ವಮಗಮನ್ ಪುತ್ರಾ ವರಾಹಸ್ಯ ಕಥಂ ತ್ರಯಃ ॥ ೧ ॥

ಅಕಾಲಿಕೋಽಯಂ ಪ್ರಳಯಃ ಕಸ್ಮಾದ್ಭಗವತಾ ಕೃತಃ ।
ಜನಕ್ಷಯೋ ಮಹಾಘೋರೋ ವರಾಹೇಣ ಮಹಾತ್ಮನಾ ॥ ೨ ॥

ಕಥಂ ವಾ ಮತ್ಸ್ಯರೂಪೇಣ ವೇದಾಸ್ತ್ರಾತಾಶ್ಚ ಶಾಙ್ರ್ಗಿಣಾ ।
ಕಥಂ ಪುನರಭೂತ್ಸೃಷ್ಟಿಃ ಕೇನ ಚೋರ್ವೀ ಸಮುದ್ಧೃತಾ । ॥ ೩ ॥

॥ ಮೂವತ್ತೆರಡನೆಯ ಅಧ್ಯಾಯವು ॥

೧. ಋಷಿಗಳು ಕೇಳಿದರು:—ಓ ಮಾರ್ಕಂಡೇಯನೆ! ಆದಿ ವರಾಹ ಮೂರ್ತಿಯ ಶರೀರವು ಯಜ್ಞಸ್ವರೂಪವನ್ನು ಹೇಗೆ ಹೊಂದಿತು? ಮತ್ತು ಅವನ ಮೂರುಜನ ಮಕ್ಕಳು ಮೂರು ಅಗ್ನಿಗಳ ಸ್ವರೂಪವನ್ನು ಹೇಗೆ ಹೊಂದಿದರು?

೨. ಅಕಾಲದಲ್ಲಿ ಭಗವಂತನಾದ ಆದಿವರಾಹನು ಅತಿ ಘೋರವಾಗಿ ಜನ ಕ್ಷಯವನ್ನು ಮಾಡಿ ಇಂಥಹ ಪ್ರಳಯವನ್ನು ಏತಕ್ಕೆ ಮಾಡಿದನು?

೩. ಮತ್ಸ್ಯಾವತಾರವನ್ನು ಮಾಡಿ ಹರಿಯು ವೇದಗಳನ್ನು ಹೇಗೆ ರಕ್ಷಿಸಿದನು? ತಿರುಗಿ ಸೃಷ್ಟಿಯು ಹೇಗಾಯಿತು? ನೀರಿನಲ್ಲಿ ಮುಳುಗಿದ ಭೂಮಿಯನ್ನು ಯಾರು ಉದ್ಧರಿಸಿದರು?

ಈಶ್ವರಃ ಶಾರಭಂ ಕಾಯಂ ತ್ಯಕ್ತವಾನ್ ವಾ ಕಥಂ ಗುರೋ।
ಕೀದೃಕ್ಪ್ರವೃತ್ತಂ ತದ್ದೇಹಂ ತನ್ನೋ ವದ ಮಹಾಮತೇ ॥ ೪ ॥

ಏತೇಷಾಂ ದ್ವಿಜಶಾರ್ದೂಲ ಭವಾನ್ ಪ್ರತ್ಯಕ್ಷದರ್ಶಿವಾನ್ ।
ತನ್ನೋಽದ್ಯ ಶ್ರೋತವ್ಯಮಾಣಾನಾಂ ಕಥಯಸ್ವ ಮಹಾಮತೇ ॥ ೫ ॥

॥ ಮಾರ್ಕಂಡೇಯ ಉವಾಚ ॥

ಶೃಣುಧ್ವಂ ದ್ವಿಜಶಾರ್ದೂಲಾ ಯತ್ಪೃಷ್ಟೋಽಹಮಿಹಾದ್ಭುತಂ ।
ಶೃಣ್ವಂತ್ವವಹಿತಾಃ ಸರ್ವೇ ಸರ್ವವೇದಫಲಪ್ರದಂ ॥ ೬ ॥

ಯಜ್ಞೇಷು ದೇವಾಸ್ತುಷ್ಯಂತಿ ಯಜ್ಞೇ ಸರ್ವಂ ಪ್ರತಿಷ್ಠಿತಂ ।
ಯಜ್ಞೇನ ಧ್ರಿಯತೇ ಪೃಥ್ವೀ ಯಜ್ಞಸ್ತಾರಯತಿ ಪ್ರಜಾಃ ॥ ೭ ॥

ಅನ್ನೇನ ಭೂತಾನಿ ಜೀವಂತಿ ಪರ್ಜನ್ಯಾದನ್ನಸಂಭವಃ ।
ಪರ್ಜನ್ಯೋ ಜಾಯತೇ ಯಜ್ಞಾತ್ಸರ್ವಂ ಯಜ್ಞಮಯಂ ತತಃ ॥ ೮ ॥

---

೪. ಓ ಗುರುವೇ! ಶಂಕರನು ಶರಭಶರೀರವನ್ನು ಹೇಗೆ ತ್ಯಜಿಸಿದನು? ಮುಂದೆ ಆ ಶರೀರವು ಏನಾಯಿತು? ಓ ಬುದ್ಧಿಶಾಲಿಯೆ! ಇವೆಲ್ಲವನ್ನೂ ನಮಗೆ ಹೇಳು.

೫. ಓ ಬ್ರಾಹ್ಮಣೋತ್ತಮನೆ! ನಾವು ಕೇಳಿರುವ ವಿಷಯಗಳೆಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿರುವೆ. ಆದಕಾರಣ ಎಲೈ ಬುದ್ಧಿಶಾಲಿಯೆ! ಇದೆಲ್ಲವನ್ನೂ ಕೇಳ ಬೇಕೆಂದಿರುವ ನಮಗೆ ಹೇಳು.

೬. ಮಾರ್ಕಂಡೇಯನು ಹೇಳಿದನು:— ಎಲೈ ಬ್ರಾಹ್ಮಣೋತ್ತಮರೆ! ನೀವಾವುದನ್ನು ಕೇಳಿರುವಿರೋ ಅವನ್ನು ಹೇಳುವೆನು. ವೇದವನ್ನೆಲ್ಲಾ ಓದಿದ ಫಲವನ್ನು ಕೊಡುವ ಆ ಇತಿಹಾಸವನ್ನು ಸಾವಧಾನದಿಂದ ಕೇಳಿರಿ.

೭. ಯಜ್ಞಗಳಲ್ಲಿ ದೇವತೆಗಳು ತೃಪ್ತಿಹೊಂದುವರು. ಯಜ್ಞದಲ್ಲಿಯೇ ಈ ಭೂಮಿಯು ನಿಂತಿರುವುದು. ಯಜ್ಞವು ಪ್ರಜೆಗಳನ್ನು ದುಃಖಸಾಗರದಿಂದ ದಾಟಿಸುವುದು.

೮. ಆಹಾರದಿಂದ ಪ್ರಾಣಿಗಳು ಬದುಕುವುವು. ಮಳೆಯಿಂದ ಆಹಾರವು ಜನಿಸುವುದು. ಮಳೆಯು ಯಜ್ಞದಿಂದ ಆಗುವುದು. ಆದುದರಿಂದ ಎಲ್ಲವೂ ಯಜ್ಞಮಯವಾದುದು.

ಸ ಯಜ್ಞೋಽಭೂದ್ವರಾಹಸ್ಯ ಕಾಯಾಚ್ಛಂಭುವಿದಾರಿತಾತ್ ।
ಯಥಾಪಂ ಕಥಯೇ ತದ್ವಃ ಶೃಣ್ವಂತ್ವವಹಿತಾ ದ್ವಿಜಾಃ ॥ ೯ ॥

ವಿದಾರಿತೇ ವರಾಹಸ್ಯ ಕಾಯೇ ಭಗೆರ್ಣ ತತ್ಕ್ಷಣಾತ್ ।
ಬ್ರಹ್ಮವಿಷ್ಣುಶಿವಾ ದೇವಾಃ ಸರ್ವೈಶ್ಚ ಪ್ರಮಥೈಃ ಸಹ ॥ ೧೦ ॥

ನಿಸ್ಸೃರ್ಜಲಾತ್ಸಮುದ್ಧೃತ್ಯ ತಚ್ಛರೀರಂ ನಭಃ ಪ್ರತಿ ।
ತದ್ವಿಭಿದುಃ ಶರೀರಂ ತೇ ವಿಷ್ಣೋಶ್ಚಕ್ರೇಣ ಖಂಡಶಃ ॥ ೧೧ ॥

ತಸ್ಯಾಂಗಸಂಧಯೋ ಯಜ್ಞಾ ಜಾತಾಸ್ತೇ ವೈ ಪೃಥಕ್ ಪೃಥಕ್ ।
ಯಸ್ಮಾದಂಗಾಚ್ಚ ಯೇ ಜಾತಾಸ್ತಚ್ಛೃಣ್ವಂತು ಮಹರ್ಷಯಃ ॥ ೧೨ ॥

ಭ್ರೂನಾಸಾಸಂಧಿತೋ ಜಾತೋ ಜ್ಯೋತಿಷ್ಟೋಮೋ ಮಹಾಧ್ವರಃ ।
ಹನುಶ್ರವಣಸಂಧ್ಯೋಸ್ತು ವನ್ಹಿಷ್ಟೋಮೋ ವ್ಯಚಾಯತ ॥ ೧೩ ॥

---

೯. ಶರಭರೂಪಿಯಾದ ಶಂಕರನಿಂದ ಸೀಳಲ್ಪಟ್ಟ ಆದಿವರಾಹಶರೀರದಿಂದ ಯಜ್ಞವು ಹೇಗಾಯಿತೆಂಬುದನ್ನು ಹೇಳುವೆನು, ಎಲೈ ಬ್ರಾಹ್ಮಣರೆ! ಕೇಳಿರಿ.

೧೦. ಶರಭರೂಪಿಯಾದ ಶಂಕರನಿಂದ ಆದಿವರಾಹಶರೀರವು ಸೀಳಲ್ಪಡಲು ಬ್ರಹ್ಮವಿಷ್ಣುಶಿವರೂ ಪ್ರಮಥಗಣಗಳೂ ಇತರ ದೇವತೆಗಳೂ ಸಹ ಒಟ್ಟುಗೂಡಿ ಆ ಶರೀರವನ್ನು ಜಲದಿಂದ ಮೇಲಕ್ಕೆ ಎತ್ತಿ ತಂದರು.

೧೧. ಅನಂತರ ಆ ಶರೀರವನ್ನು ವಿಷ್ಣುಚಕ್ರದಿಂದ ಖಂಡಖಂಡವಾಗಿ ಭೇದಿಸಿದರು. ಆ ಶರೀರದ ಸಂಧಿಗಳೇನೆ ಬೇರೆಬೇರೆಯಾಗಿ ಯಜ್ಞಗಳಾದುವು.

೧೨. ಎಲೈ ಮಹರ್ಷಿಗಳೆ! ಯಾವಯಾವ ಅಂಗದಿಂದ ಯಾವಯಾವ ಯಜ್ಞವು ಜನಿಸಿತೆಂಬುದನ್ನು ಹೇಳುವೆನು ಕೇಳಿ. ಹುಬ್ಬು ಮತ್ತು ಮೂಗು ಇವುಗಳ ಮಧ್ಯದಿಂದ ಜ್ಯೋತಿಷ್ಟೋಮವೆಂಬ ಮಹಾಯಜ್ಞವು ಜನಿಸಿತು.

೧೩. ಕಪೋಲ ಕಿವಿಗಳ ಸಂಧಿ (ಸೇರುವಸ್ಥಳ) ಯಿಂದ ಅಗ್ನಿಷ್ಟೋಮ ಯಾಗವು ಜನಿಸಿತು. ಕಣ್ಣುಹುಬ್ಬುಗಳ ಸಂಧಿಯಿಂದ ವಾತ್ಯಷ್ಟೋಮವೆಂಬ ಯಜ್ಞವು ಆಯಿತು.

ಚಕ್ಷುಭ್ರ್ಯುವೋಃ ಸಂಧಿನಾ ತು ವ್ಯಾತ್ಯಷ್ಟ್ಯೀಮೋ ವ್ಯಜಾಯುತ ।
ಜಾತಃ ಪೌನರ್ಭವಷ್ಟ್ಯೀಮುಸ್ತಸ್ಯ ಪೋತ್ರೌಷ್ಣಸಂಧಿತಃ ॥ ೧೪ ॥

ವೃದ್ಧಷ್ಟ್ಯೀಮುಬೃಹತ್ಷ್ಟ್ಯೀಮೌ ಜಿಹ್ವಾಮೂಲಾದಜಾಯತಾಂ ।
ಅತಿರಾತ್ರಂ ಸವೈರಾಜಮಧೋಜಿಹ್ವಾಂತರಾದಭೂತ್ ॥ ೧೫ ॥

ಅಧ್ಯಾಪನಂ ಬ್ರಹ್ಮಯಜ್ಞಃ ಪಿತೃಯಜ್ಞಸ್ತು ತರ್ಪಣಂ ।
ಹೋಮೋ ದೈವಬಲಿರ್ಭೌತೋ ನೃಯಜ್ಞೋಽತಿಥಿಪೂಜನಂ ॥ ೧೬ ॥

ಸ್ನಾನಂ ತರ್ಪಣಪರ್ಯಂತಂ ನಿತ್ಯಯಜ್ಞಶ್ಚ ಸರ್ವಶಃ ।
ಕಂಠಸಂಧೇಃ ಸಮುತ್ಪನ್ನಾ ಜಿಹ್ವಾತೋ ವಿಧಯಸ್ತಥಾ ॥ ೧೭ ॥

ವಾಜಿಮೇಧಮಹಾಮೇಧೌ ನರಮೇಧಸ್ತಥೈವಚ ।
ಪ್ರಾಣಿಹಿಂಸಾಕರಾ ಯೇಽನ್ಯೇ ತೇ ಜಾತಃ ಪಾದಸಂಧಿತಃ ॥ ೧೮ ॥

ರಾಜಸೂಯಾರ್ಥಕಾರೀ ಚ ವಾಜಪೇಯಸ್ತಥೈವ ಚ ।
ಪೃಷ್ಠಸಂಧೌ ಸಮುತ್ಪನ್ನಾ ಗ್ರಹಯಜ್ಞಾಸ್ತಥೈವ ಚ ॥ ೧೯ ॥

---

೧೪. ಆ ವರಾಹಶರೀರದ ಓಷ್ಠನಾಸಿಕ ಇವುಗಳ ಸಂಧಿಯಿಂದ ಪೌನರ್ಭವ ಷ್ಟ್ಯೀಮವೆಂಬ ಯಾಗವು ಜನಿಸಿತು. ನಾಲಿಗೆಯ ಮೂಲದಿಂದ ವೃದ್ಧಷ್ಟ್ಯೀಮ ಬೃಹತ್ಷ್ಟ್ಯೀಮಗಳೆಂಬ ಎರಡು ಯಾಗಗಳಾದುವು.

೧೫. ಅತಿರಾತ್ರ ವೈರಾಜಗಳೆಂಬ ಎರಡು ಯಾಗಗಳು ಒಳಗಿನ ತೆರುನಾ ಲಿಗೆಯ ಸಂಧಿಯಿಂದ ಜನಿಸಿದುವು.

೧೬-೧೭. ಅಧ್ಯಾಪನ (ಪಾಠಹೇಳಿಕೊಡುವುದು) ಬ್ರಹ್ಮಯಜ್ಞ ಪಿತೃಯಜ್ಞ (ಶ್ರಾದ್ಧಾದಿಗಳು) ತರ್ಪಣ ಹೋಮ ದೇವಬಲಿ ಭೂತಬಲಿ ಮನುಷ್ಯಯಜ್ಞ ಅತಿಥಿ ಸತ್ಕಾರ ಸ್ನಾನ ಮತ್ತು ನಿತ್ಯಕರ್ಮಗಳೆಲ್ಲವೂ ಆ ವರಾಹಶರೀರದ ಕಂಠ ಮತ್ತು ನಾಲಿಗೆಯ ಸಂಧಿಯಿಂದ ಜನಿಸಿದುವು.

೧೮. ಅಶ್ವಮೇಧ ಮಹಾಮೇಧ ನರಮೇಧಗಳೇ ಮೊದಲಾದ ಪ್ರಾಣಿಹಿಂಸೆ ಯಿಂದ ಮಾಡುವ ಯಾಗಗಳೆಲ್ಲವೂ ಕಾಲುಗಳ ಸಂಧಿಯಿಂದ ಜನಿಸಿದುವು.

೧೯. ತುಂಬ ಧನಸಂಪಾದನೆಯಾಗುವ ರಾಜಸೂಯಯಾಗವೂ ವಾಜಪೇ ಯಯಾಗವೂ ಗ್ರಹಯಜ್ಞಗಳೂ ವರಾಹಶರೀರದ ಬೆನ್ನುಸಂಧಿಯಿಂದ ಜನಿಸಿದುವು.

ಪ್ರತಿಷ್ಠೋತ್ಸರ್ಗಯಜ್ಞಾಶ್ಚ ದಾನಶ್ರಾದ್ಧಾದಯಸ್ತಥಾ ।
ಹೃತ್ಸಂಧಿತಃ ಸಮುತ್ಪನ್ನಾ ಸಾವಿತ್ರೀಯಜ್ಞ ಏವ ಚ ॥ ೨೦ ॥

ಸರ್ವೇ ಸಾಂಸ್ಕಾರಿಕಾ ಯಜ್ಞಾಃ ಪ್ರಾಯಶ್ಚಿತ್ತಕರಾಶ್ಚ ಯೇ ।
ತೇ ಮೇಢ್ರಸಂಧಿತೋ ಜಾತಾ ಯಜ್ಞಾಸ್ತಸ್ಯ ಮಹಾತ್ಮನಃ ॥ ೨೧ ॥

ರಕ್ಷಸ್ಸತ್ರಂ ಸರ್ಪಸತ್ರಂ ಸರ್ವಂ ಚೈವಾಭಿಚಾರಿಕಂ ।
ಗೋಮೇಧೋ ವೃಕ್ಷಯಾಗಶ್ಚ ಕ್ಷುರೇಭ್ಯೋ ಽಭವನ್ಮಮೇ ॥ ೨೨ ॥

ಮಾಯೇಷ್ಟಿಃ ಪರಮೇಷ್ಟಿಶ್ಚ ಗೀಷ್ಪತಿರ್ಭೋಗಸಂಭವಃ ।
ಲಾಂಗೂಲಸಂಧೌ ಸಂಜಾತಾ ಅಗ್ನಿಷ್ಟೋಮಸ್ತಥೈವ ಚ ॥ ೨೩ ॥

ನೈಮಿತ್ತಿಕಾಶ್ಚ ಯೇ ಯಜ್ಞಾಃ ಸಂಕ್ರಾಂತ್ಯಾದೌ ಪ್ರಕೀರ್ತಿತಾಃ ।
ಲಾಂಗೂಲಸಂಧೌ ತೇ ಜಾತಾಸ್ತಥಾ ದ್ವಾದಶವಾರ್ಷಿಕಂ ॥ ೨೪ ॥

---

೨೦. ದೇವಪ್ರತಿಷ್ಠೆಗಳು ಉತ್ಸರ್ಗಯಜ್ಞಗಳು ದಾನ ಶ್ರಾದ್ಧ ಮೊದಲಾದ ವುಗಳು ಸಾವಿತ್ರೀಯಾಗ ಇವೆಲ್ಲವೂ ಹೃದಯದ ಸಂಧಿಯಿಂದ ಜನಿಸಿದುವು.

೨೧. ಸಂಸ್ಕಾರಾರ್ಥವಾದ ಮತ್ತು ಪ್ರಾಯಶ್ಚಿತ್ತಗಳಾಗಿ ಮಾಡುವ ಯಜ್ಞ ಗಳೆಲ್ಲವೂ ಮಹಾತ್ಮನಾದ ಆ ಆದಿವರಾಹನ ಶರೀರದ ಮೇಢ್ರ (ಶಿಶ್ನ) ಸಂಧಿಯಿಂದ ಜನಿಸಿದುವು.

೨೨. ರಾಕ್ಷಸಸತ್ರ, ಸರ್ಪಯಾಗ, ಶತ್ರುಮರಣಕ್ಕಾಗಿ ಮಾಡುವ ಎಲ್ಲಾ ತರಹೆಯ ಕರ್ಮಗಳೂ, ಗೋಮೇಧಯಜ್ಞ, ವೃಕ್ಷಯಾಗ ಇವೆಲ್ಲವೂ ವರಾಹನ ಗೊರಸಿನಿಂದ ಜನಿಸಿದುವು.

೨೩. ಮಾಯೇಷ್ಟಿ ಪರಮೇಷ್ಟಿಗಳೆಂಬ ಯಜ್ಞಗಳೂ, ಬೇಕಾದಂತಹ ಭೋಗ ವನ್ನು ಕೊಡುವ ಗೀಷ್ಪತಿಯಾಗವೂ, ಜ್ಯೋತಿಷ್ಟೋಮಯಾಗವೂ ಸಹ ಬಾಲದ ಸಂಧಿಯಲ್ಲಿ ಜನಿಸಿದುವು.

೨೪. ಸಂಕ್ರಮಣ ಮೊದಲಾದವುಗಳಲ್ಲಿ ಮಾಡಬೇಕಾದ ನೈಮಿತ್ತಿಕ್ಕಯಜ್ಞ ಮತ್ತು ಹನ್ನೆರಡುವರ್ಷಗಳವರೆಗೆ ನಡೆಯುವ ಯಾಗ ಇವುಗಳೂ ಸಹ ಬಾಲದಸಂಧಿ ಯಿಂದ ಜನಿಸಿದುವು.

ತೀರ್ಥಪ್ರಯೋಗಮಾಶೌಚಂ ಯಜ್ಞಃ ಸಂಕರ್ಷಣಸ್ತಥಾ ।
ಅರ್ಕಮಾಥರ್ವಣಶ್ಚೈವ ನಾಡೀಸಂಧೇಃ ಸಮುದ್ಗತಾಃ ॥ ೨೫ ॥

ಋಚೋತ್ಕರ್ಷಃ ಕ್ಷೇತ್ರಯಜ್ಞಃ ಪಂಚಮಾರ್ಗಾತಿಯೋಜನಃ ।
ಲಿಂಗಸಂಸ್ಥಾನಹೇರಂಬ ಯಜ್ಞಾ ಜಾತಾಶ್ಚ ಜಾನುನಿ ॥ ೨೬ ॥

ಏವಮಷ್ಟಾಧಿಕಂ ಜಾತಂ ಸಹಸ್ರಂ ದ್ವಿಜಸತ್ತಮಾಃ ।
ಯಜ್ಞಾನಾಂ ಸತತಂ ಲೋಕಾ ಯೈರ್ಭಾವ್ಯಂತೇಽಧುನಾಪಿ ಚ ॥ ೨೭ ॥

ಸ್ರುಗಸ್ಯ ಪೋತ್ರಾತ್ಸಜಾತಾ ನಾಸಿಕಾಯಾಃ ಸ್ರುವಾಭವತ್ ।
ಅನ್ಯೇ ಸ್ರುಕ್ಸ್ರವಭೇದಾ ಯೇ ತೇಜಾತಾ ಪೋತ್ರನಾಸಯೋಃ ॥ ೨೮ ॥

ಗ್ರೀವಾಭಾಗೇನ ತಸ್ಯಾಭೂತ್ ಪ್ರಾಗ್ವಂಶೋ ಮುನಿಸತ್ತಮಾಃ ।
ಇಷ್ಟ್ಯಾಪೂರ್ತಂ ಯಜುರ್ಧರ್ಮಾ ಜಾತಃ ಶ್ರವಣಂರಂಧ್ರತಃ ॥ ೨೯ ॥

---

೨೫. ತೀರ್ಥಕ್ಷೇತ್ರಗಳಲ್ಲಿ ಮಾಡಬೇಕಾದ ಕರ್ಮ, ಆಶೌಚ, ಸಂಕರ್ಷಣ ಯಾಗ, ಅರ್ಕಯಾಗ, ಅಥರ್ವಣಯಾಗ ಇವೆಲ್ಲವೂ ವರಾಹಶರೀರದ ನಾಡೀಸಂಧಿ (ನರಗಳು ಸೇರುವಸ್ಥಳ) ಯಿಂದ ಜನಿಸಿದುವು.

೨೬. ಋಚೋತ್ಕರ್ಷಯಾಗ, ಕ್ಷೇತ್ರಯಜ್ಞ, ಪಂಚಮಾರ್ಗಾತಿಯೋಜನ ವೆಂಬ ಕರ್ಮ, ಲಿಂಗಸಂಸ್ಥಾನಯೋಗ ಮತ್ತು ಹೇರಂಬಯಾಗ, ಇವುಗಳು ಮೊಣ ಕಾಲುಗಳಿಂದ ಜನಿಸಿದುವು.

೨೭. ಎಲೈ ಬ್ರಾಹ್ಮಣಶ್ರೇಷ್ಠರೆ! ಹೀಗೆ ವರಾಹದ ಶರೀರದಿಂದ ಒಂದು ಸಾವಿರದ ಎಂಟು (1008) ಯಜ್ಞಗಳು ಜನಿಸಿದುವು. ಅವುಗಳಿಂದಲೇ ಈಗ ಜನ ಗಳು ಜೀವಿಸುತ್ತಿರುವರು.

೨೮. ಸ್ರುಕ್ಕು (ಹೋಮ ಮಾಡುವ ಸೌಟು) ವರಾಹದ ಕೋರೆದಾಡೆಯಿಂದ ಜನಿಸಿತು. ಸ್ರುವ ಎಂಬ ಮತ್ತೊಂದು ಸೌಟು ನಾಸಿಕೆಯಿಂದ ಜನಿಸಿತು. ಮಿಕ್ಕ ಇತರವಿಧವಾದ ಸ್ರುಕ್ಕು ಸ್ರುವಗಳೂ ಸಹ ವರಾಹದ ದಾಡೆ ಮತ್ತು ನಾಸಿಕೆಗಳಿಂದ ಜನಿಸಿದುವು.

೨೯. ಎಲೈ ಮುನಿಶ್ರೇಷ್ಠರೆ! ಆ ವರಾಹದ ಗ್ರೀವಾ (ಕತ್ತು) ಭಾಗದಿಂದ ಯಜ್ಞಶಾಲೆಯಲ್ಲಿಯ ಯಜಮಾನಗೃಹವು ಆಯಿತು. ಕಿವಿಯ ರಂಧ್ರದಿಂದ ಇಷ್ಟಾ

ದಂಷ್ಟ್ರಾಭ್ಯೋಽಹ್ಯಭವನ್ಯೂಪಾಃ ಕುಶಾ ರೋಮಾಣಿ ಚಾಭವನ್ ।
ಉದ್ಗಾತಾಚ ತಥಾಧ್ವರ್ಯುರ್ಹೋತಾ ಶಾಮಿತ್ರ ಏವ ಚ ॥ ೩೦ ॥

ಅಗ್ರದಕ್ಷಿಣವಾಮಾಂಗಪಶ್ಚಾತ್ಪಾದೇಷು ಸಂಗತಾಃ ।
ಪುರೋಡಾಶಾಃ ಸಚರವೋ ಚಾತಾ ಮುಸ್ತಿಷ್ಕ ಸಂಚಯಾತ್ ॥ ೩೧ ॥

ಕರ್ಷುರ್ನೇತ್ರದ್ವಯಾಜ್ಜಾತಾ ಯಜ್ಞಕೇತುಸ್ತಥಾ ಖುರಾತ್ ।
ಮಧ್ಯಭಾಗೋಽಭವದ್ವೇದೀ ಮೇಢ್ರಾತ್ಕುಂಡಮುದಾಯತ ॥ ೩೨ ॥

ರೇತೋಽಭಾಗಾತ್ತಥೈವಾಜ್ಯಂ ಸ್ವಧಾಮಂತ್ರಾಃ ಸಮುದ್ಗತಾಃ ।
ಯಜ್ಞಾಲಯಃ ಪೃಷ್ಠಭಾಗಾತ್ ಪೃಷ್ಪದಾಜ್ಯಜ್ಞ ಏವ ಚ ॥ ೩೩ ॥

ಪೂರ್ತನೆಂಬ ಯಾಗವೂ ಯಜುರ್ವೇದದಲ್ಲಿ ಹೇಳುವ ಮಿಕ್ಕ ಕರ್ಮಗಳೂ ಜನಿಸಿದುವು.

೩೦. ಕೋರೆದಾಡೆಗಳಿಂದ ಯೂಪಸ್ತಂಭಗಳೂ, ರೋಮಗಳಿಂದ ದರ್ಭೆಗಳೂ ಜನಿಸಿದುವು.

೩೧. ಉದ್ಗಾತ (ಸಾಮಗಾನ ಮಾಡುವವನು) ಅಧ್ವರ್ಯು (ಪ್ರಯೋಗ ನಡೆಸುವವನು) ಹೋತೃ (ಹೋಮ ಮಾಡಿಸುವವನು ಋಗ್ವೇದಿ) ಶಾಮಿತ್ರ (ಯಜ್ಞಪಶುವನ್ನು ಕೊಲ್ಲುವವನು) ಎಂಬ ಋತ್ವಿಕ್ಕುಗಳು ಆ ವರಾಹಶರೀರದ ಅಗ್ರಭಾಗ, ದಕ್ಷಿಣಭಾಗ, ಎಡಭಾಗ, ಹಿಂಭಾಗಗಳಿಂದ ಕ್ರಮವಾಗಿ ಜನಿಸಿದರು.

೩೨. ಚರು ಮತ್ತು ಪುರೋಡಾಶಗಳು ಮೆದುಳಿನಿಂದ ಜನಿಸಿದುವು. ನೇತ್ರಗಳೆರಡರಿಂದ ಕರ್ಷು (ಯಜ್ಞಕ್ಕೆ ಬೇಕಾದ ಬೆರಣಿ ಬೆಂಕಿ) ವು ಜನಿಸಿತು. ಯಜ್ಞಧ್ವಜವು ಗೊರಸಿನಿಂದ ಜನಿಸಿತು.

೩೩. ಆದಿವರಾಹಶರೀರದ ಮಧ್ಯಭಾಗವು ವೇದಿಕೆಯಾಯಿತು. ಮೇಢ್ರ (ಶಿಶ್ನ) ಸ್ಥಾನದಿಂದ ಕುಂಡವಾಯಿತು. ವೀರ್ಯವು ಆಜ್ಯ (ತುಪ್ಪ) ವಾಯಿತು ಮತ್ತು ಸ್ವಧಾಮಂತ್ರಗಳೂ ಆದುವು.

ತದಾತ್ಮಾ ಯಜ್ಞಪುರುಷೋ ಮುಂಜಾಃ ಕಕ್ಷಾತ್ಸಮುದ್ಗತಾಃ ।
ಏವಂ ಯಾವಂತಿ ಯಜ್ಞಾನಾಂ ಭಾಂಡಾನಿ ಚ ಹವೀಂಷಿ ಚ ॥ ೩೪ ॥

ತಾನಿ ಯಜ್ಞವರಾಹಸ್ಯ ಶರೀರಾದೇವ ಚಾಭವನ್ ।
ಏವಂ ಯಜ್ಞವರಾಹಸ್ಯ ಶರೀರಂ ಯಜ್ಞತಾಮಗಾತ್ ॥ ೩೫ ॥

ಯಜ್ಞರೂಪೇಣ ಸಕಲಮಾಪ್ಯಾಯಿತುಮಿದಂ ಜಗತ್ ।
ಏವಂ ವಿಧಾಯ ಯಜ್ಞಂತು ಬ್ರಹ್ಮವಿಷ್ಣುಮಹೇಶ್ವರಾಃ ॥ ೩೬ ॥

ಸುವೃತ್ತಂ ಕನಕಂ ಘೋರಮಾಸೇದುರ್ಯಜ್ಞತತ್ಪರಾಃ ।
ತತಸ್ತೇಷಾಂ ಶರೀರಾಣಿ ಪಿಂಡೀಕೃತ್ಯ ಪೃಥಕ್ ಪೃಥಕ್ ॥ ೩೭ ॥

ತ್ರಿದೇವಾಸ್ತ್ರಿಶರೀರಾಣಿ ವ್ಯಧಮನ್ಮುಖವಾಯುಭಿಃ ।
ಸುವೃತ್ತಸ್ಯ ಶರೀರಂತು ವ್ಯಧಮನ್ಮುಖವಾಯುನಾ ॥ ೩೮ ॥

---

೩೪. ಪೃಷ್ಠ (ಬೆನ್ನು) ಭಾಗದಿಂದ ಯಜ್ಞಶಾಲೆಯೂ, ಹೃದಯಕಮಲದಿಂದ ಯಜ್ಞವೂ ಆದುವು. ಆ ವರಾಹನ ಆತ್ಮನೇ ಯಜ್ಞಪುರುಷನು. ಕಕ್ಷ (ಕಂಕುಳು) ನಿಂದ ಮುಂಜ ಎಂಬ ದರ್ಭವಿಶೇಷಗಳು ಜನಿಸಿದವು.

೩೫ ಹೀಯೇ ಯಜ್ಞಗಳ ಎಲ್ಲಾ ಸೋಮಪಾತ್ರೆಗಳೂ, ಹವಿಸ್ಸುಗಳೂ ಸಹ ಆ ಯಜ್ಞವರಾಹ ಶರೀರದಿಂದಲೇ ಜನಿಸಿದುವು.

೩೬. ಹಿಂದೆ ಹೇಳಿದಂತೆ ಆದಿವರಾಹನ ಶರೀರವೆಲ್ಲವೂ ಯಜ್ಞದ ರೂಪದಿಂದ ಜಗತ್ತನ್ನು ಕಾಪಾಡಲು ಯಜ್ಞಸ್ವರೂಪವನ್ನು ಹೊಂದಿತು.

೩೭. ಹೀಗೆ ಯಜ್ಞಸ್ವರೂಪವನ್ನು ಮಾಡಿ ಬ್ರಹ್ಮವಿಷ್ಣುಮಹೇಶ್ವರರು (ಆದಿವರಾಹಪುತ್ರರಾದ) ಸುವೃತ್ತ, ಕನಕ ಮತ್ತು ಘೋರ ಇವರುಗಳ ಶರೀರವಿವ್ವಲ್ಲಿಗೆ ಹೊರಟುಹೋದರು.

೩೮. ಅಲ್ಲಿ ಅವರ ಶರೀರಗಳನ್ನು ಬೇರೆಬೇರೆ ಸೇರಿಸಿ ಆ ತ್ರಿಮೂರ್ತಿಗಳು ತಮ್ಮ ಮುಖಗಾಳಿಯಿಂದ ಆ ಮೂರು ಶರೀರಗಳನ್ನು ಊದಿದರು.

ಸ್ವಯಮೇವ ಜಗತ್ಸ್ರಷ್ಟಾ ದಕ್ಷಿಣಾಗ್ನಿಸ್ತತೋಽಭವತ್ ।
ಕನಕಸ್ಯ ಶರೀರಂತು ಧ್ಮಾಪಯಾಮಾಸ ಕೇಶವಃ ॥ ೬೯ ॥

ತತೋಽ ಭೂದ್ಗಾರ್ಹಪತ್ಯಾಗ್ನಿಃ ಪಂಚವೈತಾನಭೋಜನಃ
ಘೋರಸ್ಯ ತು ವಪುಃ ಶಂಭುಃ ಧ್ಮಾಪಯಾಮಾಸ ವೈ ಸ್ವಯಂ । ॥ ೪೦ ॥

ತತ ಆಹವನೀಯೋಗ್ನಿಸ್ತತ್ಕ್ಷಣಾತ್ಸಮಜಾಯತ
ಏತೈಸ್ತ್ರಿಭಿರ್ಜಗದ್ವ್ಯಾಪ್ತಂ ತ್ರಿಮೂಲಂ ಸಕಲಂ ಜಗತ್ । ॥ ೪೧ ॥

ಏತದ್ಯತ್ರ ತ್ರಯಂ ನಿತ್ಯಂ ತಿಷ್ಠಂತಿ ದ್ವಿಜಸತ್ತಮಾಃ ।
ಸಮಸ್ತಾ ದೇವತಾಸ್ತತ್ರ ವಸಂತ್ಯನುಚರೈಃ ಸಹ ॥ ೪೨ ॥

ಏತದ್ಭದ್ರಪದಂ ನಿತ್ಯಮೇತದೇವ ತ್ರಯಾತ್ಮಕಂ
ಏತತ್ತ್ರಯೀವಿಧಿಸ್ಥಾನಮೇತತ್ಪುಣ್ಯಕರಂ ಪರಂ ।
ಯಸ್ಮಿನ್ ಜನಪದೇ ಚೈತೇ ಹೂಯಂತೇ ವನ್ಹಯಸ್ತ್ರಯಃ ॥ ೪೩ ॥

---

೩೯. ಸುವೃತ್ತನ ಶರೀರವನ್ನು ಬ್ರಹ್ಮನೇ ತನ್ನ ಮುಖವಾಯುವಿನಿಂದ ಊದಿದನು. ಆಗ ಅದರಿಂದ ದಕ್ಷಿಣಾಗ್ನಿಯು ಜನಿಸಿತು.

೪೦. ಕನಕಶರೀರವನ್ನು ವಿಷ್ಣುವು ಮುಖವಾಯುವಿನಿಂದ ಊದಿದನು. ಆಗ ಪಂಚಯಜ್ಞಗಳಲ್ಲಿಯೂ ಹವಿಸ್ಸನ್ನು ಸ್ವೀಕರಿಸುವಂತಹ ಗಾರ್ಹಪತ್ಯವೆಂಬ ಅಗ್ನಿಯು ಜನಿಸಿತು.

೪೧. ಘೋರನ ಶರೀರಕ್ಕೆ ಶಂಕರನು ಮುಖದಿಂದ ಗಾಳಿಯಾಕೆದನು. ಆಗ ಅದರಿಂದ ಕೂಡಲೇ ಆಹವನೀಯವೆಂಬ ಅಗ್ನಿಯು ಜನಿಸಿತು.

೪೨. ಈ ಮೂರು ಅಗ್ನಿಗಳೂ ಜಗತ್ತನ್ನು ವ್ಯಾಪಿಸಿರುವವು ಈ ಅಗ್ನಿಗಳೇ ಜಗತ್ತಿಗೆ ಆಧಾರವು. ಎಲೈ ಬ್ರಾಹ್ಮಣೋತ್ತಮರೇ! ಈ ಮೂರು ಅಗ್ನಿಗಳು ಎಲ್ಲಿ ಯಾವಾಗಲೂ ಇರುವುವೋ ಅಲ್ಲಿ ದೇವತೆಗಳು ತಮ್ಮ ಪರಿವಾರದೊಡನೆ ನಿತ್ಯವೂ ನೆಲಸಿರುವರು.

೪೩. ಈ ಮೂರು ಅಗ್ನಿಗಳೂ, ವೇದತ್ರಯದಲ್ಲಿ ಹೇಳುವ ಕರ್ಮಗಳಿಗೆ ಮಂಗಳಸ್ಥಾನವು ಮತ್ತು ಅತ್ಯಂತ ಪುಣ್ಯದಾಯಕವಾದುವುಗಳು.

ತಸ್ಮಿನ್ ಜನಪದೇ ನಿತ್ಯಂ ಚತುರ್ವರ್ಗೋ ವಿವರ್ಧತೆ ।
ಏತದ್ವಃ ಕಥಿತಂ ಸರ್ವಂ ಯತ್ಪೃಷ್ಟೋಽಹಂ ದ್ವಿಜೋತ್ತಮಾಃ ॥ ೪೪ ॥

ಯಥಾ ಯಜ್ಞವರಾಹಸ್ಯ ದೇಹೋ ಯಜ್ಞತ್ವಮಾಪ್ತವಾನ್ ।
ಯಥಾ ಚ ತಸ್ಯ ಪುತ್ರಾಣಾಂ ದೇಹತೋ ವನ್ಹಯೋಽಭವನ್ ॥ ೪೫ ॥

॥ ಇತಿ ಶ್ರೀ ಕಾಲಿಕಾಪುರಾಣೇ ದ್ವಾತ್ರಿಂಶೋಽಧ್ಯಾಯಃ ॥



---

೪೪. ಈ ಮೂರು ಅಗ್ನಿಗಳನ್ನು ದ್ದೇಶಿಸಿ ಹೋಮವನ್ನು ಯಾವ ದೇಶದಲ್ಲಿ ಮಾಡುವರೋ ಆ ಸೇಶದಲ್ಲಿ ನಾಲ್ಕು ಪುರುಷಾರ್ಥಗಳು ನಿತ್ಯವೂ ವೃದ್ಧಿಹೊಂದುವುವು.

೪೫. ಎಲೈ ಬ್ರಾಹ್ಮಣಶ್ರೇಷ್ಠರೇ ! ಯಜ್ಞವರಾಹದ ಶರೀರವು ಯಜ್ಞಸ್ವರೂಪವನ್ನು ಹೇಗೆ ಹೊಂದಿತು ? ಆ ವರಾಹನ ಮಕ್ಕಳ ಶರೀರದಿಂದ ಮೂರು ಅಗ್ನಿಗಳು ಹೇಗೆ ಜನಿಸಿದುವೆಂದೂ ನೀವು ಕೇಳಿದುದೆಲ್ಲವನ್ನೂ ಹೇಳಿರುವೆನು.

ಇಲ್ಲಿಗೆ ಮೂವತ್ತೆರಡನೆಯ ಅಧ್ಯಾಯವು ಮುಗಿದುದು.



॥ ಶ್ರೀಃ ॥

॥ಅಥ ಶ್ರೀ ಕಾಲಿಕಾಪುರಾಣೇ ತ್ರಯಸ್ತ್ರಿಂಶೋಽಧ್ಯಾಯಃ॥

ಮಾರ್ಕಂಡೇಯ ಉವಾಚ

ಅಕಾಲಿಕೋಽಯಂ ಪ್ರಳಯೋ ಯತೋ ಭಗವತಾ ಕೃತಃ ।
ತಚ್ಛೃಣ್ವಂತು ಮಹಾಭಾಗಾ ವಾರಾಹಂ ಲೋಕಸಂಕ್ಷಯಂ ॥ ೧ ॥

ಯಥಾ ವಾ ಮತ್ಸ್ಯರೂಪೇಣ ವೇದಾಸ್ತ್ರಾತಾಶ್ಚ 'ಶಾಙ್ರ್ಗಿಣಾ ।
ತದಹಂ ಸಂಪ್ರವಕ್ಷ್ಯಾಮಿ ಸರ್ವಪಾಪಪ್ರಣಾಶನಂ ॥ ೨ ॥

ಪುರಾ ಮಹಾಮುನಿಃ ಸಿದ್ಧಃ ಕಪಿಲೋ ವಿಷ್ಣುರೀಶ್ವರಃ ।
ಸಾಕ್ಷಾತ್ಸ್ವಯಂ ಹರಿರ್ಯೋಽಸೌ ಸಿದ್ಧಾನಾಮುತ್ತಮೋ ಮುನಿಃ ॥ ೩ ॥

॥ ಮೂವತ್ತಮೂರನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು:—ಎಲೈ ಭಾಗ್ಯಶಾಲಿಗಳಾದ ಋಷಿಗಳೇ! ಭಗವಂತನಾದ ಆದಿವರಾಹನು ಅಕಾಲದಲ್ಲಿ ಪ್ರಳಯವನ್ನು ಮಾಡಿದುದೇಕೆಂಬುದನ್ನು ಹೇಳುವೆನು ಕೇಳಿರಿ.

೨. ಅಲ್ಲದೆ ಮತ್ಸ್ಯಾವತಾರವನ್ನು ಮಾಡಿ ವಿಷ್ಣುವು ವೇದಗಳನ್ನು ಹೇಗೆ ರಕ್ಷಿಸಿದನೆಂಬ, ಪಾಪನಾಶವನ್ನು ಮಾಡುವ ಸಮಾಚಾರವನ್ನು ಹೇಳುವೆನು.

೩. ಹಿಂದೆ ಸರ್ವಸಮರ್ಥನೂ, ಅಣಿಮಾದಿಸಕಲೈಶ್ವರ್ಯಸಂಪನ್ನನೂ ಆದ ಕಪಿಲನೆಂಬ ಮಹಾಮುನಿಯು ಇದ್ದನು. ಅವನು ಸಾಕ್ಷಾತ್ ವಿಷ್ಣುವು ಎಂದರೆ ವಿಷ್ಣುವಿನ ಅವತಾರವು ಮತ್ತು ಸಿದ್ಧರಲ್ಲಿ ಉತ್ತಮನಾದ ಮುನಿಯು.

ಧ್ಯಾಯತಃ ಸಿದ್ಧಮಿತ್ಯೇವಂ ಸರ್ವಂ ಜಗದಿದಂ ಸ್ವತಃ ।
ಯತೋ ಜಾತೋ ಪರೇಃ ಕಾಯಾತ್ಕಪಿಲಸ್ತೇನ ಸ ಸ್ಮೃತಃ ॥ ೪ ॥

ಸ ಏಕದಾ ಪುರಾ ಭೂತ್ವಾ ಮನೋಃ ಸ್ವಾಯಂಭುವೇಽಂತರೆ ।
ಸ್ವಾಯಂಭುವಂ ಮನುಂ ವಾಕ್ಯಂ ಮುನಿವರ್ಯೋಽಬ್ರವೀದಿದಂ ॥ ೫ ॥

॥ ಕಪಿಲ ಉವಾಚ ॥

ಸ್ವಾಯಂಭುವ ಮುನಿಶ್ರೇಷ್ಠ ಬ್ರಹ್ಮರೂಪ ಮಹಾಮತೇ ।
ಮನ್ಮೈವಮಿಷ್ಟಿತಾರ್ಥಂ ತ್ವಂ ದೇಹಿ ಪ್ರಾರ್ಥಯತೋಽಧುನಾ ॥ ೬ ॥

ಜಗತ್ಸರ್ವಂ ತವೈವೇದಂ ತ್ವಯಾ ಚ ಪರಿಪಾಲಿತಂ ।
ತ್ವಯಾ ಸರ್ವಂ ಜಗತ್ಸೃಷ್ಟಂ ತ್ವಮೇವ ಜಗತಾಂ ಪತಿಃ ॥ ೭ ॥

ಸ್ವರ್ಗೇ ಪೃಥಿವ್ಯಾಂ ಪಾತಾಳೇ ದೇವಮಾನುಷಜಂತುಷು ।
ತ್ವಂ ಪ್ರಭುರ್ವರದೋ ಗೋಪ್ತಾ ತ್ವಮೇವೈಕಃ ಸನಾತನಃ ॥ ೮ ॥

---

೪. ಧ್ಯಾನಿಸುತ್ತಿರುವ ಹರಿಯ ಶರೀರದಿಂದ ತಾನಾಗಿಯೇ ಜಗತ್ತು ಜನಿಸಿತು. ಅದರಂತೆ ಆ ವಿಷ್ಣುವಿನ ಶರೀರದಿಂದ ಕಪಿಲನು ಸ್ವತಃ ಸಿದ್ಧನಾದುದರಿಂದ ಅವನಿಗೆ ಸಿದ್ಧನೆಂದು ಹೆಸರು ಪ್ರಸಿದ್ಧಿಯಾಯಿತು. "ಅಥವಾ ಆ ಜಗತ್ತೆಲ್ಲವೂ ಸ್ವತಃ ಸಿದ್ಧವಾಯಿತು" ಎಂದು ಧ್ಯಾನಿಸುತ್ತಿರುವ ಹರಿಯ ಶರೀರದಿಂದ ಕಪಿಲಮುನಿಯು ಜನಿಸಿದುದರಿಂದ ಸಿದ್ಧನೆಂದು ಅವನಿಗೆ ಹೆಸರಾಯಿತು.

೫. ಆ ಮುನಿಶ್ರೇಷ್ಠನು ಹಿಂದೆ ಸ್ವಾಯಂಭುವಮನ್ವಂತರದಲ್ಲಿರುವವನಾಗಿ ಆ ಸ್ವಾಯಂಭುವಮನುವನ್ನು ಕುರಿತು ಹೀಗೆ ಹೇಳಿದನು.

೬. ಕಪಿಲನು ಹೇಳಿದನು :— ಬ್ರಹ್ಮರೂಪಿಯಾಗಿಯೂ, ಬುದ್ಧಿಶಾಲಿಯಾಗಿಯೂ, ಮುನಿಶ್ರೇಷ್ಠನೂ ಆದ ಓ ಸ್ವಾಯಂಭುವನೆ! ಈಗ ನಾನೊಂದು ಇಷ್ಟಾರ್ಥವನ್ನು ಪ್ರಾರ್ಥಿಸುವೆನು ಕೊಡುವವನಾಗು.

೭. ಈ ಜಗತ್ತೆಲ್ಲವೂ ನಿನ್ನದೇ ಆಗಿರುವುದು ನೀನೇ ಇದನ್ನು ರಕ್ಷಿಸುವವನು. ನೀನೇ ಇದನ್ನು ಸೃಷ್ಟಿಸಿದವನು ನೀನೇ ಈ ಜಗತ್ತಿಗೆ ಒಡೆಯನು.

೮. ಸ್ವರ್ಗ, ಭೂಲೋಕ ಮತ್ತು ಪಾತಾಳಗಳಲ್ಲಿರುವ ದೇವತೆಗಳು ಮನುಷ್ಯರು ಮತ್ತು ಮಿಕ್ಕ ಪ್ರಾಣಿಗಳನ್ನು ಸಲಹುವವನೂ ಅವರಿಗೆ ಬೇಕಾದ ವರಗಳನ್ನು ಕೊಡುವವನೂ ನೀನೇ ಆಗಿರುವೆ ಮತ್ತು ನೀನೇ ಅನಾದಿಪುರುಷನು.

ತ್ವಂ ವೈ ಧಾತಾ ವಿಧಾತಾ ಚ ತ್ವಂ ಹಿ ಸರ್ವೇಶ್ವರೇಶ್ವರಃ ।
ತ್ವಯಿ ಪ್ರತಿಷ್ಠಿತಂ ಸರ್ವಂ ಸತತಂ ಭುವನತ್ರಯಂ ॥ ೯ ॥

ತಪಸ್ಯತೋ ಯತ್ರ ಸಮಂ ಪ್ರತಿಭಾಸ್ಯತಿ ಸೋಽನುಗಂ ।
ಕಾರ್ಯಕಾರಣಸತ್ಕೃತ್ವಘಸಹಿತಾನಿ ಜಗಂತಿ ವೈ ॥ ೧೦ ॥

ತನ್ಮೇ ದೇಹಿ ರಹಃಸ್ಥಾನಂ ತ್ರಿಷು ಲೋಕೇಷು ದುರ್ಲಭಂ ।
ಪುಣ್ಯಂ ಪಾಪಹರಂ ರಮ್ಯಂ ಜ್ಞಾನಪ್ರಭವಮುತ್ತಮಂ ॥ ೧೧ ॥

ಅಹಂ ಹಿ ಸರ್ವಭೂತಾನಾಂ ಭೂತ್ವಾ ಪ್ರತ್ಯಕ್ಷದರ್ಶಿವಾನ್ ।
ಉದ್ಧರಿಷ್ಯೇ ಜಗಜ್ಜಾತಂ ನಿರ್ಮಾಯ ಜ್ಞಾನದೀಪಿಕಾಂ ॥ ೧೨ ॥

ಅಜ್ಞಾನಸಾಗರೇ ಮಗ್ನಮಧುನಾ ಸಕಲಂ ಜಗತ್ ।
ಜ್ಞಾನಪ್ಲವಂ ಪ್ರದಾಯಾಹಂ ಕಾರಯಿಷ್ಯೇ ಜಗತ್ತ್ರಯಂ ॥ ೧೩ ॥

---

೯. ನೀನು ಸೃಷ್ಟಿಕರ್ತನೂ ವಿಸೃಷ್ಟಿಯನ್ನು ಮಾಡುವವನೂ ಸರ್ವೇಶ್ವರರಿಗೂ, (ಚಕ್ರವರ್ತಿ ಅಥವಾ ಇಂದ್ರ) ಈಶ್ವರನು. ನಿನ್ನಲ್ಲಿಯೇ ಸಕಲ ಜಗತ್ತುಗಳೂ ಇರುವುವು.

೧೦. ತಪಸ್ಸಿನಲ್ಲಿ ನಿರತನಾದಾಗ ನಿನಗೆ ಕಾರ್ಯ ಮತ್ತು ಕಾರಣಪರಿವಾರಗಳಿಂದ ಸಹಿತವಾದ ಜಗತ್ತು (ತಪೋದೃಷ್ಟಿಯಿಂದ) ಗೋಚರಿಸುವುದು.

೧೧. ಆದಕಾರಣ ಓ ಮನುವೇ! ಮೂರು ಲೋಕಗಳಲ್ಲಿ ದುರ್ಲಭವೂ, ಪುಣ್ಯವೂ, ಪಾಪನಾಶಕವೂ, ಮನೋಹರವೂ, ಜ್ಞಾನಸಾಧನೆಗೆ ಅನುಕೂಲವೂ ಆದ ಏಕಾಂತಸ್ಥಳವೊಂದನ್ನು ತೋರಿಸಿಕೊಡು.

೧೨. ನಾನು ಎಲ್ಲಾ ಪ್ರಾಣಿಗಳನ್ನೂ ಜ್ಞಾನದೃಷ್ಟಿಯಿಂದ ಪ್ರತ್ಯಕ್ಷವಾಗಿ ನೋಡಿ ಜ್ಞಾನವೆಂಬ ದೀಪವನ್ನು ನಿರ್ಮಿಸಿ ಅಜ್ಞಾನವೆಂಬ ಕತ್ತಲೆಯಲ್ಲಿ ಮುಳುಗಿರುವ ಜಗತ್ತನ್ನು ಉದ್ಧರಿಸುವೆನು.

೧೩. ಅಜ್ಞಾನವೆಂಬ ಸಮುದ್ರದಲ್ಲಿ ಈ ಜಗತ್ತೆಲ್ಲವೂ ಮುಳುಗಿರುವುದು. ಜ್ಞಾನವೆಂಬ ತೆಪ್ಪ (ಹಡಗು) ವನ್ನು ನಿರ್ಮಿಸಿಕೊಟ್ಟು, ಆ ಸಮುದ್ರದಿಂದ ಜಗತ್ತನ್ನು ಉದ್ಧರಿಸುವೆನು.

ಏತಸ್ಮಿನ್ಕಾಂ ಭವಾನ್ ಸಮ್ಯಗುಪಪನ್ನಮಿಹೇಚ್ಛತಿ ।
ತ್ವಂ ನೋ ನಾಥಶ್ಚ ಪೂಜ್ಯಶ್ಚ ಪಾಲಕಶ್ಚ ಜಗತ್ಪ್ರಭೋ ॥ ೧೪ ॥

ಇತ್ಯೇವಮುಕ್ತಃ ಸ ಮನುಃ ಕಪಿಲೇನ ಮಹಾತ್ಮನಾ ।
ಪ್ರತ್ಯುವಾಚ ಮಹಾತ್ಮಾನಂ ಕಪಿಲಂ ಸಂಶಿತವ್ರತಂ ॥ ೧೫ ॥

॥ ಮನುರುವಾಚ ॥

ಯದಿ ತ್ವಯಾಖಿಲಜಗದ್ಧಿತಾರ್ಥಂ ಜ್ಞಾನದೀಪಿಕಾಂ ।
ಚಿಕೀರ್ಷುಣಾ ಯತಃ ಕಾರ್ಯಂ ಕಿಂ ಸ್ಥಾನಾರ್ಥನಯಾ ತವ ॥ ೧೬ ॥

ಹಿರಣ್ಯಗರ್ಭಃ ಸುಮಹತ್ತಪಸ್ತೇಪೇ ಪುರಾದ್ಭುತಂ ।
ಸ ಮೇ ಯಯಾಚೇ ತಪಸೇ ಸ್ಥಾನಂ ಕಸ್ಮೈನ ಚ ದ್ವಿಜ ॥ ೧೭ ॥

ಶಂಭುಃ ಸಂಭೋಗರಹಿತೋ ದೇವಮಾನೇನ ವತ್ಸರಾನ್ ।
ಅಯುತಾನಿ ತಪಸ್ತೇಪೇ ಸೋಽಪಿ ಸ್ಥಾನಂ ನ ಚೈಕ್ಷತ ॥ ೧೮ ॥

---

೧೪. ಈ ಜಗದುದ್ಧಾರಕಾರ್ಯದಲ್ಲಿ ನಾನು ಸಮರ್ಥನಾಗುವಂತೆ ಅನುಗ್ರಹಿಸು. ಓ ಪ್ರಭುವೇ! ನೀನು ನಮಗೆ ಒಡೆಯನೂ, ಪೂಜ್ಯನೂ, ನಮ್ಮನ್ನು ಸಲಹ ತಕ್ಕವನೂ ಆಗಿರುವೆ.

೧೫. ಹೀಗೆ ಆ ಕಪಿಲಮುನಿಯು ಹೇಳಿದುದನ್ನು ಕೇಳಿ ಮನುವು ತಪಸ್ವಿಯೂ, ಮಹಾತ್ಮನೂ ಆದ ಅವನನ್ನು ಕುರಿತು ಹೀಗೆ ಹೇಳಿದನು.

೧೬. ಮನುವು ಹೇಳಿದನು :—ಎಲೈ ಕಪಿಲನೇ! ಜಗತ್ತಿನ ಹಿತಕ್ಕಾಗಿ ಜ್ಞಾನ ಪ್ರಕಾಶವನ್ನು ಹರಡುವುದಕ್ಕೋಸುಗ ತಪಸ್ಸನ್ನು ಮಾಡುವ ನಿನಗೆ ಸ್ಥಾನಪ್ರಾರ್ಥನೆ ಏಕೆ?

೧೭. ಹಿಂದೆ ಬ್ರಹ್ಮನು ಬಹಳ ದಿನ ದೊಡ್ಡದಾದ ತಪಸ್ಸನ್ನು ಮಾಡಿದನು. ಆಗ ಆ ತಪಸ್ಸಿಗಾಗಿ ಯಾವುದೊಂದು ಸ್ಥಾನವನ್ನೂ ಅವನು ಕೇಳಲಿಲ್ಲವು.

೧೮. ಶಂಕರನು ಪತ್ನೀವಿಯೋಗವನ್ನು ಹೊಂದಿ ದೇವಮಾನದಿಂದ ಹತ್ತು ಸಾವಿರ ವರ್ಷಗಳವರೆಗೆ ತಪಸ್ಸನ್ನಾಚರಿಸಿದನು. ಆಗ ಅವನೂ ಸಹ ಸ್ಥಾನವನ್ನು ಅಪೇಕ್ಷಿಸಲಿಲ್ಲವು.

ದೇವೇಂದ್ರೋ ವೀತಿಹೋತ್ರಶ್ಚ ಶಮನೋ ರಕ್ಷಸಾಂ ಪತಿಃ ।
ಯಾದಃಪತಿರ್ಮಾತರಿಶ್ವಾ ಧನಾಧ್ಯಕ್ಷಸ್ತಥೈವ ಚ ॥ ೧೯ ॥

ಏತೇ ತೇಪುಸ್ತಪಸ್ತೀವ್ರಂ ದಿಕ್ಪಾಲತ್ವಮಭೀಪ್ಸವಃ ।
ಸ್ಥಾನಂ ನ ಮಾರ್ಗಯಾಮಾಸುಃ ಕಿಂಚಿನ್ನಾಪಿ ಮಹಾಮುನೇ ॥ ೨೦ ॥

ದೇವಾಗಾರಾಣಿ ತೀರ್ಥಾನಿ ಕ್ಷೇತ್ರಾಣಿ ಸರಿತಸ್ತಥಾ ।
ಬಹೂನಿಪುಣ್ಯಭಾಜ್ಯತ್ರ ತಿಷ್ಠಂತಿ ಕಪಿಲ ಕ್ಷಿತೌ ॥ ೨೧ ॥

ತೇಷಾಮೇಕತಮಂ ತ್ವಂ ಚೇದಾಸಾದ್ಯ ಕುರುಷೇ ತಪಃ ।
ಸ್ಥಾನಂ ಬ್ರಹ್ಮನ್ ತಪಸ್ಸಿದ್ಧಿರ್ನ ಭವಿಷ್ಯತಿ ತತ್ರ ಕಿಂ ॥ ೨೨ ॥

ಮತ್ತಃ ಸ್ಥಾನಾರ್ಥನಾ ತಾವತ್ಕೇವಲಂ ತೇ ವಿಕತ್ಥನಂ ।
ಅಯಂ ವಿಕತ್ಥನೋ ಧರ್ಮೋ ಯುಜ್ಯತೇ ನ ತಪಸ್ವಿನಾಂ ॥ ೨೩ ॥

॥ ಮಾರ್ಕಂಡೇಯ ಉವಾಚ ॥

ಏತಚ್ಛ್ರುತ್ವಾ ವಚಸ್ತಸ್ಯ ಮನೋಃ ಸ್ವಾಯಂಭುವಸ್ಯ ತು ।
ಚುಕೋಪ ಕಪಿಲಃ ಸಿದ್ಧಃ ಪ್ರೋವಾಚ ಚ ತದಾ ಮನುಂ ॥ ೨೪ ॥

೧೯-೨೦. ಅಲ್ಲದೆ ದೇವೇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ ಇವರೆಲ್ಲರೂ ದಿಕ್ಪಾಲಪದವಿಯನ್ನು ಪಡೆಯಲಿಚ್ಛೆಯಿಂದ ತಪಸ್ಸನ್ನಾಚರಿಸಿದರು. ಎಲೈ ಮಹಾಮುನಿಯೇ! ಅವರೂ ಆಗ ಸ್ಥಾನವನ್ನು ಅಪೇಕ್ಷಿಸಲಿಲ್ಲವೆ.

೨೧. ಎಲೈ ಕಪಿಲನೇ! ಪವಿತ್ರವಾದ ದೇವಾಲಯಗಳೂ, ತೀರ್ಥಕ್ಷೇತ್ರಗಳೂ ನದಿಗಳೂ ಮೊದಲಾದ ಅನೇಕಸ್ಥಳಗಳು ಭೂಲೋಕದಲ್ಲಿರುವುವು.

೨೨. ಈ ಸ್ಥಾನಗಳಲ್ಲಿ ಯಾವುದಾದರೊಂದು ಸ್ಥಾನದಲ್ಲಿ ತಪಸ್ಸನ್ನು ಆಚರಿಸಿದರೆ ಅಲ್ಲಿ ತಪಸ್ಸಿದ್ಧಿಯು ಆಗಲಾರದೇನು?

೨೩. ಹೀಗಿದ್ದೂ ನನ್ನೊಡನೆ ತಪಸ್ಸಿಗಾಗಿ ಸ್ಥಾನವನ್ನು ಕೇಳುವುದು ಡಂಭದ ಮಾತು. ಈ ಡಂಭ (ಹೊಗಳಿಕೊಳ್ಳುವಿಕೆಯು) ವು ತಪಸ್ವಿಗಳಿಗೆ ಯುಕ್ತವಾದುದಲ್ಲವು.

೨೪. ಮಾರ್ಕಂಡೇಯನು ಹೇಳಿದನು:—ಸ್ವಾಯಂಭುವಮನುವಿನ ಮಾತುಗಳನ್ನು ಕೇಳಿ ಸಿದ್ಧನಾದ ಕಪಿಲನು ತುಂಬಾ ಕೋಪಗೊಂಡು ಅವನನ್ನು ಕುರಿತು ಹೀಗೆ ಹೇಳಿದನು.

॥ ಕಪಿಲ ಉವಾಚ ॥

ತ್ವಯಿ ವಿಶ್ರಂಭಮಾಧಾಯ ತಪಸಃ ಸಿದ್ಧಯೇ ಚಿರಾತ್ ।
ಸ್ಥಾನಂ ಮಯಾ ಸ್ಪಾರ್ಥಿತಂ ತೇ ತನ್ಮಾಂ ಕ್ಷಿಪಸಿ ಹೇತುಭಿಃ ॥ ೨೫ ॥

ಅನೇನಾತ್ಯುಗ್ರವಚಸಾ ತವೈವಾಪಂ ನ ಚ ಕ್ಷಮೇ ।
ಸ್ವಯಂ ತ್ರಿಭುವನಾಧ್ಯಕ್ಷ ಇತಿ ತೇ ಗರ್ವ ಈದೃಶಃ ॥ ೨೬ ॥

ಅಕ್ಷಮ್ಯಂ ತೇ ವಚೋ ಮೋಽದ್ಯ ಸ್ಪಾರ್ಥನಾಯಾಂ ವಿಕತ್ಥನಂ ।
ಯುತ್ತ್ವಂ ವದಸಿ ತಸ್ಯ ತ್ವಂ ಫಲಮೇತದವಾಪ್ನುಹಿ ॥ ೨೭ ॥

ಇದಂ ತ್ರಿಭುವನಂ ಸರ್ವಂ ಸದೇವಾಸುರಮಾನುಷಂ ।
ಹತಪ್ರಹತವಿಧ್ವಸ್ತಮಚಿರೇಣ ಭವಿಷ್ಯತಿ ॥ ೨೮ ॥

ಯೇನೇಯಮುದ್ಧೃತಾ ಪೃಥ್ವೀ ಯೇನ ವಾ ಸ್ಥಾಪಿತಾ ಪುನಃ ।
ಯೋ ವಾಸ್ಯಾ ಅನ್ನಕರ್ತಾ ಸ್ಯಾದ್ಯೋವಾಸ್ಯಾಃ ಪರಿರಕ್ಷಕಃ ॥ ೨೯ ॥

---

೨೫. ಕಪಿಲನು ಹೀಗೆ ಹೇಳಿದನು:—ಎಲೈ ಮನುವೆ! ನಿನ್ನಲ್ಲಿ ನಂಬಿಕೆಯಿಂದ ಬಹಳದಿವಸ ತಪಸ್ಸಿದ್ಧಿಯನ್ನು ಪಡೆಯಲೋಸುಗ ಸ್ಥಾನವೊಂದನ್ನು ಕೇಳಿರುವೆನು. ಅದಕ್ಕೆ ನಲ್ಲದ ಕಾರಣಗಳಿಂದ ನನ್ನನ್ನು ನೀನು ನಿಂದಿಸುತ್ತಿರುವೆ.

೨೬. ನಿನ್ನ ಈ ಉಗ್ರವಾದ ಮಾತುಗಳನ್ನು ನಾನು ಸಹಿಸುವುದಿಲ್ಲ. ನಾನು ಮೂರುಲೋಕಗಳಿಗೂ ಅಧಿಪತಿ ಎಂದು ನಿನಗೆ ಇಂತಹ ಗರ್ವವು ಇರುವುದು.

೨೭. ನಾನು ನಿನ್ನನ್ನು ಸ್ಥಾನಕ್ಕಾಗಿ ಪ್ರಾರ್ಥಿಸಿದುದು ಡಂಭವೆಂದು ಇಲ್ಲದುದನ್ನು ಹೇಳಿರುವುದಕ್ಕೆ ತಕ್ಕ ಫಲವನ್ನು ಅನುಭವಿಸುವೆ.

೨೮. ಅದೇನೆಂದರೆ:—ದೇವತೆಗಳೂ, ಅಸುರರೂ, ಮನುಷ್ಯರೂ ಇರುವ ಈ ಮೂರುಲೋಕಗಳೂ ಸ್ವಲ್ಪಕಾಲದಲ್ಲಿಯೇ ನಾಶವಾಗುವುವು.

೨೯-೩೦. ಈ ಭೂಮಿಯನ್ನು ಉದ್ಧರಿಸಿದವನು, ಸ್ಥಾಪಿಸಿದವನು, ಆಹಾರವನ್ನು ಕೊಡುವವನು ಮತ್ತು ಈ ಭೂಮಿಯನ್ನು ಸಲಹುವವನು ಇವರೆಲ್ಲರೂ ಸೇರಿ ಸ್ಥಾವರಜಂಗಮರೂಪವಾದ ಈ ಭೂಮಿಯನ್ನೆಲ್ಲವನ್ನೂ ಹಿಂಸಿಸಲಿ.

ತ ಏವ ಸರ್ವೇ ಹಿಂಸಂತು ಸಕಲಂ ಸಚರಾಚರಂ ।
ನ ಚಿರಾದ್ದ್ರಕ್ಷ್ಯಸಿ ಮನೋ ಜಲಪೂರ್ಣಂ ಜಗತ್ತ್ರಯಂ ॥ ೩೦ ॥

ಹತಪ್ರಹತವಿಧ್ವಸ್ತಂ ತವ ಗರ್ವವಿಶಾತನಂ ।
ಏವಮುಕ್ತ್ವಾ ಮುನೀಂದ್ರೋಽಸೌ ಕಪಿಲಸ್ತಪಸಾಂ ನಿಧಿಃ ॥ ೩೧ ॥

ಅಂತರ್ದಧೇ ಜಗಾಮಾಪಿ ತದಾ ಬ್ರಹ್ಮಸದೋ ಮುನಿಃ ।
ಕಪಿಲಸ್ಯ ವಚಃ ಶ್ರುತ್ವಾ ವಿಷಣ್ಣವದನೋ ಮನುಃ ॥ ೩೨ ॥

ಭಾವೀತಿ ಪ್ರತಿಪದ್ಯಾಶು ಮನುರ್ನೋವಾಚ ಕಿಂಚನ ।
ತತಃ ಸ್ವಾಯಂಭುವೋ ಧೀಮಾಂಸ್ತಪಸೇ ಧೃತಮಾನಸಃ ॥ ೩೩ ॥

ಹಿತಾಯ ಸರ್ವಜಗತಾಂ ದಿದೃಕ್ಷುರ್ಗರುಡಧ್ವಜಂ ।
ವಿಶಾಲಾಂ ಬದರೀಂ ಯಾತೋ ಗಂಗಾದ್ವಾರಾಂತಿಕಂ ಖಲು ॥ ೩೪ ॥

ತತ್ರ ಗತ್ವಾ ಜಗದ್ಧರ್ತಾ ಮನುಃ ಸ್ವಾಯಂಭುವಃ ಸ್ವಯಂ
ದದರ್ಶ ಬದರೀಂ ತತ್ರ ಪುಣ್ಯಾಂ ಪಾಪಪ್ರಣಾಶಿನೀಂ ॥ ೩೫ ॥

---

೩೦. ಎಲೈ ಮನುವೇ! ಸ್ವಲ್ಪಕಾಲದಲ್ಲಿಯೇ ಈ ಮೂರುಲೋಕಗಳೂ ಧ್ವಂಸವಾಗಿ ನೀರಿನಲ್ಲಿ ಮುಳುಗಿಹೋಗುವುದನ್ನು ನೀನೇ ನೋಡುವೆ. ಆಗ ನಿನ್ನ ಗರ್ವವು ನಷ್ಟವಾಗುವುದು.

೩೨. ಹೀಗೆ ಹೇಳಿ ತಪೋನಿಧಿಯಾದ ಕಪಿಲಮುನಿಯು ಅಲ್ಲಿಯೇ ಅಂತರ್ಧಾನವನ್ನು ಹೊಂದಿ ಬ್ರಹ್ಮಲೋಕಕ್ಕೆ ಹೊರಟುಹೋದನು.

೩೩. ಕಪಿಲಮುನಿಯ ಮಾತನ್ನು ಕೇಳಿ ಸ್ವಾಯಂಭುವಮನುವು ಬಾಡಿದ ಮುಖವುಳ್ಳವನಾಗಿ ಮುಂದೆ ಹಾಗೆಯೇ ಆಗಬೇಕಾಗಿರುವುದೆಂದು ತಿಳಿದುಕೊಂಡು ಅದಕ್ಕುತ್ತರವಾಗಿ ಏನನ್ನೂ ಹೇಳಲಿಲ್ಲವು.

೩೪. ಅನಂತರ ಬುದ್ಧಿಶಾಲಿಯಾದ ಆ ಸ್ವಯಂಭುವಮನುವು ಜಗತ್ತಿನ ಕ್ಷೇಮಕ್ಕಾಗಿ ನಾರಾಯಣನನ್ನು ನೋಡಲೋಸುಗ ತಪಸ್ಸನ್ನು ಮಾಡುವ ಮನಸ್ಸುಳ್ಳವನಾಗಿ ಗಂಗಾದ್ವಾರದ ಸಮೀಪದಲ್ಲಿರುವ ವಿಶಾಲವಾದ ಬದರೀಕ್ಷೇತ್ರಕ್ಕೆ ಹೋದನು.

೩೫. ಅಲ್ಲಿಗೆ ಹೋಗಿ ಜಗತ್ತನ್ನು ಸಲಹುವ ಸ್ವಾಯಂಭುವಮನುವು ಪವಿತ್ರವೂ, ಪಾಪನಾಶಕವೂ ಆದ ಬದರೀಕ್ಷೇತ್ರವನ್ನು ನೋಡಿದನು.

ಸದಾ ಫಲವತೀಂ ನಿತ್ಯಂ ಮೃದುಶಾದ್ವಲಮಂಜರೀಂ ।
ಸಚ್ಛಾಯಾಂ ಮುಸೃಣಾಂ ಶೀರ್ಣಶುಷ್ಕಪತ್ರವಿವರ್ಜಿತಾಂ ॥ ೩೬ ॥

ಗಂಗಾತೋಯೌಘಸಂಸಕ್ತಶಿಖಾಮೂಲಾಂತರಾಖಿಲಾಂ ।
ಉಪಾಸ್ಯಮಾನಾಂ ಸತತಂ ನಾನಾಮುನಿತಪೋಧನೈಃ ॥ ೩೭ ॥

ತತ್ಥಾನಂ ಸರ್ವತೋ ಭದ್ರಂ ನಾನಾಮೃಗಗಣಾನ್ವಿತಂ ।
ಫುಲ್ಲಾರವಿಂದಸಲಿಲಂ ರಮಣೀಯಂ ವೃಷಪ್ರದಂ ॥ ೩೮ ॥

ಪ್ರವಿಶ್ಯ ತಪಸೇ ಯತ್ನಮಕರೋಲ್ಲೋಕಭಾವನಃ ।
ಸ ಭೂತ್ವಾ ನಿಯತಾಹಾರಃ ಪರಮೇಣ ಸಮಾಧಿನಾ ॥ ೩೯ ॥

ಆರಾಧಯಾಮಾಸ ಹರಿಂ ಜಗತ್ಕಾರಣಕಾರಣಂ ।
ಸರ್ವೇಷಾಂ ಜಗತಾಂ ನಾಥಂ ನೀಲಮೇಘಾಂಜನಪ್ರಭಂ ॥ ೪೦ ॥

---

೩೬. ಮತ್ತು ಆ ಬದರೀಕ್ಷೇತ್ರವು ಯಾವಾಗಲೂ ಫಲವುಳ್ಳದೂ, ಮೃದುವಾದ ಎಳೆಹುಲ್ಲುಗಳ ಪಚ್ಚನೆಯ ಪ್ರದೇಶಗಳುಳ್ಳದೂ ಮರದ ನೆರಳಿನಿಂದ ನಿಬಿಡವಾದುದೂ, ಒಣಗಿಬಿದ್ದ ಮರದ ಎಲೆಗಳಿಲ್ಲದಿರುವುದೂ ಆಗಿದ್ದಿತು.

೩೭. ಗಂಗಾನದಿಯ ನೀರಿನಿಂದ ಪವಿತ್ರವಾದ ಮಧ್ಯಭಾಗ, ಅಗ್ರಭಾಗ, ಮತ್ತು ಕೊನೆಯಭಾಗಗಳುಳ್ಳಂತದುದೂ, ಅನೇಕ ಮುನಿಗಳಿಂದಲೂ, ತಪಸ್ವಿಗಳಿಂದಲೂ ಸೇವಿಸಲ್ಪಡುವುದೂ ಆಗಿದ್ದಿತು. ಇಂತಹ ಬದರಿಯನ್ನು ಆ ಮನುವು ನೋಡಿದನು.

೩೮-೩೯. ಅತ್ಯಂತ ಮಂಗಳಕರವಾದುದೂ, ಅನೇಕ ಮೃಗಸಮೂಹಗಳುಳ್ಳದೂ, ಅರಳಿದ ಕಮಲಗಳುಳ್ಳ ಜಲ (ಸರಸ್ಸು, ನದಿ) ಗಳುಳ್ಳದೂ, ಮನೋಹರವೂ, ಧರ್ಮಸಾಧನವೂ ಆದ ಆ ಕ್ಷೇತ್ರಸ್ಥಾನವನ್ನು ಪ್ರವೇಶಿಸಿ ಸ್ವಾಯಂಭುವಮನುವು ತಪಸ್ಸಿಗಾಗಿ ಯತ್ನವನ್ನು ಮಾಡಿದನು.

೪೦. ಮಿತವಾದ ಆಹಾರವನ್ನು ಸೇವಿಸುತ್ತಾ ಆ ಮನುವು ಶ್ರೇಷ್ಠವಾದ ತಪಸ್ಸಮಾಧಿಯಿಂದ ಜಗತ್ತಿಗೂ ಮತ್ತು ಬ್ರಹ್ಮನಿಗೂ ಕಾರಣನೂ ಜಗದೊಡೆಯನೂ ನೀಲಮೇಘದಂತೆ ಕಪ್ಪಾದ ಕಾಂತಿಯುಳ್ಳವನೂ ಆದ ಹರಿಯನ್ನು ಆರಾಧಿಸಿದನು.

ಶಂಖಚಕ್ರಗದಾಪದ್ಮಧರಂ ಕಮಲಲೋಚನಂ ।
ಪೀತಾಂಬರಧರಂ ದೇವಂ ಗರುಡೋಪರಿ ಸಂಸ್ಥಿತಂ ॥ ೪೧ ॥

ಜಗನ್ಮಯಂ ಲೋಕನಾಥಂ ವ್ಯಕ್ತಾವ್ಯಕ್ತಸ್ವರೂಪಿಣಂ ।
ಜಗದ್ಬೀಜಂ ಸಹಸ್ರಾಕ್ಷಂ ಸಹಸ್ರಶಿರಸಂ ಪ್ರಭುಂ ॥ ೪೨ ॥

ಸರ್ವವ್ಯಾಪಿನಮಾಧಾರಂ ನಾರಾಯಣಮಜಂ ವಿಭುಂ ।
ಜಪನ್ನೇತತ್ಪರಂ ಮಂತ್ರಂ ಸರ್ವವೇದಮಯಂ ಮನುಃ ॥ ೪೩ ॥

ಹಿರಣ್ಯಗರ್ಭಪುರುಷಪ್ರಧಾನಾವ್ಯಕ್ತರೂಪಿಣೇ ।
ಓಂ ನಮೋ ವಾಸುದೇವಾಯ ಶುದ್ಧಜ್ಞಾನಸ್ವರೂಪಿಣೇ ॥ ೪೪ ॥

ಇತಿ ಜಪ್ಯಂ ಪ್ರಜಪತೋ ಮನೋಃ ಸ್ವಾಯಂಭುವಸ್ಯ ತು ।
ಪ್ರಸಸಾದ ಜಗನ್ನಾಥಃ ಕೇಶವೋ ನ ಚಿರಾದಥ ॥ ೪೫ ॥

---

೪೧. ಮತ್ತು ಶಂಖ, ಚಕ್ರ, ಗದೆ, ಪದ್ಮಗಳನ್ನು ಧರಿಸಿದವನೂ, ಕಮಲದಂತೆ ಕಣ್ಣುಳ್ಳವನೂ, ಪೀತಾಂಬರವನ್ನುಟ್ಟಿರುವವನೂ, ಗರುಡನ ಮೇಲೆ ಕುಳಿತಿರುವವನೂ ಆದ ಹರಿಯನ್ನು ಆರಾಧಿಸಿದನು.

೪೨. ಜಗದ್ರೂಪನೂ, ಜಗದೊಡೆಯನೂ, ಕಾಣುವ ಮತ್ತು ಕಾಣದಿರುವ ವಸ್ತುಗಳ ಸ್ವರೂಪನೂ, ಜಗತ್ತಿಗೆ ಕಾರಣನೂ, ಸಹಸ್ರ ಕಣ್ಣುಗಳು ಮತ್ತು ಶಿರಸ್ಸು ಗಳುಳ್ಳವನೂ ಆದ ಹರಿಯನ್ನು ಆ ಮನುವು ಆರಾಧಿಸಿದನು.

೪೩. ಎಲ್ಲೆಡೆಯಲ್ಲಿ ವ್ಯಾಪಿಸಿರುವವನೂ, ಎಲ್ಲಕ್ಕೂ ಆಧಾರನೂ, ಜೀವರಿಗೆ ಆಶ್ರಯನೂ. ಜಗದೊಡೆಯನೂ, ಸಕಲವೇದಸ್ವರೂಪನೂ ಆದ ಹರಿಯನ್ನು ಈ ಮುಂದೆ ಹೇಳುವ ಮಂತ್ರದಿಂದ ಜಪಿಸಿದನು.

೪೪. ಬ್ರಹ್ಮ, ಪುರುಷ, ಪ್ರಕೃತಿ, ಮಾಯೆ, ಇವುಗಳ ಸ್ವರೂಪಿಯೂ, ಶುದ್ಧನೂ, ಜ್ಞಾನಸ್ವರೂಪನೂ, ಸಕಲ ಪ್ರಾಣಿಗಳ ಹೃದಯದಲ್ಲಿ ನೆಲಸಿರುವನೂ ಆದ ವಾಸುದೇವನಿಗೆ ನಮಸ್ಕಾರವು.

೪೫. ಮೇಲೆ ಹೇಳಿದ ಮಂತ್ರದಿಂದ ಜಪಿಸುತ್ತಲಿರುವ ಸ್ವಾಯಂಭುವಮನು ವಿಗೆ ಜಗದೊಡೆಯನಾದ ಹರಿಯು ಜಾಗ್ರತೆ ಪ್ರಸನ್ನನಾದನು.

ತತಃ ಕ್ಷುದ್ರಝಷೋ ಭೂತ್ವಾ ದೂರ್ವಾದಲಸಮುಪ್ರಭಃ ।
ಕರ್ಪೂರಕಲಿಕಾಯುಗ್ಮತುಲ್ಯನೇತ್ರಯುಗೋಜ್ಜ್ವಲಃ ॥ ೪೬ ॥

ತಪಸ್ಯಂತಂ ಮಹಾತ್ಮಾನಂ ಮನುಂ ಸ್ವಾಯಂಭುವಂ ಮುನಿಂ ।
ಆಸಸಾದ ತದಾ ಕ್ಷುದ್ರಮತ್ಸ್ಯರೂಪೀ ಜನಾರ್ದನಃ ॥ ೪೭ ॥

ಉವಾಚ ಚ ಮಹಾತ್ಮಾನಂ ಮನುಂ ಸ್ವಾಯಂಭುವಂ ತದಾ ।
ಸುಸಂತ್ರಸ್ತಂ ಸ ಕಾರುಣ್ಯಯುಕ್ತಂ ಭೀತಿಸಗದ್ಗದಂ ॥ ೪೮ ॥

ತಪೋನಿಧೇ ಮಹಾಭಾಗ ಭೀತಂ ಮಾಂ ತ್ರಾತುಮರ್ಹಸಿ ।
ನಿತ್ಯಮುದ್ವೇಜಿತಂ ಮತ್ಸ್ಯೈರ್ವಿಶಾಲೈರ್ಭಕ್ಷಿತುಂ ಪ್ರತಿ ॥ ೪೯ ॥

ಪ್ರತ್ಯಹಂ ಮಾಂ ಮಹಾಭಾಗ ಮೀನಾ ಧಾವಂತಿ ಭಕ್ಷಿತುಂ ।
ಸಮಂತತೋಽಧಿಕಾಹಂತುಂ ತ್ವಂ ನಾಥೋ ಗೋಪಿತುಂ ಕ್ಷಮಃ ॥ ೫೦ ॥

೪೬-೪೭. ಅನಂತರ ಹರಿಯು ಗರಿಕೆಯ ಎಸಳಿನಂತೆ ಕಾಂತಿಯುಳ್ಳ ಮತ್ತು ಕರ್ಪೂರಮೊಗ್ಗೆಯಂತೆ ಇರುವ ಕಣ್ಣುಗಳುಳ್ಳ ಸಾಮಾನ್ಯ ಮತ್ಸ್ಯ (ಮೀನು) ರೂಪವನ್ನು ಧರಿಸಿ ತಪಸ್ಸನ್ನು ಮಾಡುತ್ತಲಿರುವ ಮಹಾತ್ಮನಾದ ಸ್ವಾಯಂಭುವಮನುವಿನ ಸಮೀಪಕ್ಕೆ ಬಂದನು.

೪೮. ಮತ್ತು ತುಂಬಾ ಹೆದರಿ ತೊದಲುತ್ತಿರುವಂತೆ ಮಾತನಾಡುತ್ತಾ ದೀನನಂತೆ ಬೇಡುತ್ತಾ ಆ ಮತ್ಸ್ಯರೂಪಿಯಾದ ಹರಿಯು ಆ ಮನುವನ್ನು ಕುರಿತು ಹೀಗೆ ಹೇಳಿದನು.

೪೯. ತುಂಬಾ ಪುಣ್ಯವಂತನೂ, ತಪಸ್ವಿಯೂ ಆದ ಓ ಮುನಿಯೆ! ನನ್ನನ್ನು ದೊಡ್ಡದೊಡ್ಡ ಮೀನುಗಳು ತಿನ್ನಬೇಕೆಂದು ಪೀಡಿಸುತ್ತಲಿವೆ. ಅವುಗಳ ಭಯದಿಂದ ನೀನು ನನ್ನನ್ನು ರಕ್ಷಿಸಬೇಕು.

೫೦. ಪ್ರತಿದಿನವೂ ಮೀನುಗಳು ನನ್ನನ್ನು ತಿನ್ನಲು ಬರುತ್ತಲಿವೆ. ಅವುಗಳಿಂದ ನನ್ನನ್ನು ರಕ್ಷಿಸಲು ನೀನು ಸಮರ್ಥನು.

ಅದ್ಯ ಪ್ರಭೂತೈರ್ವಿಪುಲೈರ್ದಾರಿತಃ ಪೃಥುರೋಮಭಿಃ ।
ವಿಶ್ರಾಂತೋಽಹಂ ಕ್ಷುದ್ರತರೋ ನ ಚ ಶಕ್ತಃ ಪಲಾಯನೇ ॥ ೫೧ ॥

ಪ್ರಾಣಾಕಾಂಕ್ಷೀ ಮಹಾತ್ಮಾನಂ ಭವಂತಂ ಶರಣಂ ಮುನಿಂ ।
ಪ್ರಾಪ್ತೋಽಹಂ ಚೇದನುಕ್ರೋಶಸ್ತೇಽಸ್ತಿ ಮಾಂ ಪ್ರತಿಪಾಲಯ ॥ ೫೨ ॥

ಭಯೋದ್ಭ್ರಾಂತಮನಾಶ್ಚಾಹಂ ವೃಕ್ಷಚ್ಛಾಯಾಂ ಚ ಚಂಚಲಾಂ ।
ವೃಷ್ಟ್ಯಾ ಚಲತ್ತರಂಗಾಂಶ್ಚ ಮತ್ಸ್ಯಾನಿವ ಬಿಭೇಮ್ಯಹಂ ॥ ೫೩ ॥

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ಮನುಃ ಸ್ವಾಯಂಭುವಃ ಸ್ತುತಃ ।
ಕೃಪಯಾ ಪರಯಾ ಯುಕ್ತಃ ಪ್ರೋಚೇಽಹಂ ರಕ್ಷಿತಾ ತವ ॥ ೫೪ ॥

ತತಃ ಕರೋದರೇ ತೋಯಮಾದಾಯಾಧಾಯ ತತ್ರ ತಂ ।
ಸಮುಕ್ಷಂ ಕ್ಷುದ್ರಮತ್ಸ್ಯಸ್ಯ ವಿಹಾರಂ ಸಮಲೋಕಯತ್ ॥ ೫೫ ॥

---

೫೧. ಇಂದು ಅನೇಕ ದೊಡ್ಡ ಮೀನುಗಳಿಂದ ಗಾಸಿಮಾಡಲ್ಪಟ್ಟಿರುವೆನು. ಶಕ್ತಿ ಇಲ್ಲದ ನಾನು ಆಯಾಸದಿಂದ ಓಡಲೂ ಅಸಮರ್ಥನಾಗಿರುವನು.

೫೨. ಬದುಕುವ ಆಶೆಯಿಂದ ಮಹಾತ್ಮನಾದ ನಿನ್ನನ್ನು ಮರೆಹೊಕ್ಕಿರುವೆನು. ನಿನಗೆ ಭೂತದಯೆ ಇದ್ದರೆ ನನ್ನನ್ನು ರಕ್ಷಿಸು.

೫೩. ಭಯದಿಂದ ಭ್ರಾತಿಗೊಂಡ ಮನಸ್ಸುಳ್ಳ ನಾನು ಚಲಿಸುತ್ತಿರುವ ಮರದ ನೆರಳನ್ನೂ, ನೀರಿನ ಅಲೆಗಳನ್ನೂ ನೋಡಿ ಮೀನುಗಳೆಂಬ ಭ್ರಾಂತಿಯಿಂದ ಹೆದರಿ ಕೊಳ್ಳುವೆನು.

೫೪. ಮಾರ್ಕಂಡೇಯನು ಹೇಳಿದನು:— ಹೀಗೆ ಆ ಮತ್ಸ್ಯದ ಮಾತು ಗಳನ್ನು ಕೇಳಿ ದಯೆಯುಳ್ಳವನಾಗಿ ಸ್ವಾಯಂಭುವಮನುವು ಆ ಮೀನನ್ನು ಕುರಿತು ನಿನ್ನನ್ನು ನಾನು ರಕ್ಷಿಸುವೆನು ಎಂದು ಹೇಳಿದನು.

೫೫. ಆಮೇಲೆ ಆ ಮನುವು ಕೈಯ್ಯಲ್ಲಿ ನೀರನ್ನು ತೆಗೆದುಕೊಂಡು ಅದರಲ್ಲಿ ಆ ಮೀನನ್ನು ಇರಿಸಿ ಅದು ವಿಹರಿಸುವುದನ್ನು ನೋಡಿದನು.

ತತೋ ದಯಾಲುಃ ಸ ಮನುಸ್ತಂ ಮತ್ಸ್ಯಂ ಚಾರುರೂಪಿಣಂ ।
ಆಲಿಂಜರೇ ತೋಯಪೂರ್ಣೇ ನ್ಯಧಾದ್ವಿಪುಲಭೋಗಿನಿ ॥ ೫೬ ॥

ಸ ತಸ್ಮಿನ್ ಮಣಿಕೇ ಮತ್ಸ್ಯೇ ವರ್ಧಮಾನೋ ದಿನೇದಿನೇ ।
ಸಾಮಾನ್ಯರೋಹಿತಪ್ರಾಯದೇಹೋಽಭೂನ್ನ ಚಿರಾದಥ ॥ ೫೭ ॥

ದಶಘಟಜಲಪೂರ್ಣಂ ಪ್ರತ್ಯಹಂ ಸ ಮಹಾತ್ಮಾ ।
ಮಣಿಕಕಮತಿಕುರ್ವನ್ವರ್ಧಯಾಮಾಸ ಮತ್ಸ್ಯಂ ।
ಸ ಚ ಸುವಿಶದನೇತ್ರೋ ಮತ್ಸ್ಯಬಾಲೋಽಚಿರೇಣ ।
ಮಣಿಕಸಲಿಲಮಧ್ಯೇ ಲೋಮಶಃ ಪೀನದೇಹಃ ॥ ೫೮ ॥

॥ ಇತಿ ಶ್ರೀ ಕಾಲಿಕಾಪುರಾಣೇ ತ್ರಯಸ್ತ್ರಿಂಶೋಽಧ್ಯಾಯಃ ॥

---

೫೬. ಆನಂತರ ಆ ಮನುವು ಸುಂದರವಾದ ರೂಪವುಳ್ಳ ಆ ಮೀನನ್ನು ನೀರು ತುಂಬಿದ ಒಂದು ದೊಡ್ಡ ಮಣ್ಣಿನ ಗುಡಾಣದಲ್ಲಿ ಬಿಟ್ಟನು.

೫೭. ಆ ಮತ್ಸ್ಯವು ಆ ಗುಡಾಣದಲ್ಲಿ ದಿನದಿನವೂ ಬೆಳೆಯುತ್ತ ಸ್ವಲ್ಪಕಾಲ ದಲ್ಲಿಯೇ ಸಾಮಾನ್ಯವಾದ ಮೀನಿನಂತಹ ದೇಹವುಳ್ಳದ್ದಾಯಿತು.

೫೮. ಆ ಮಹಾತ್ಮನಾದ ಮನುವು ಪ್ರತಿದಿವಸವೂ ಗುಡಾಣಕ್ಕೆ ಹತ್ತು ಕೊಡ ನೀರನ್ನು ತುಂಬಿ ಮತ್ಸ್ಯವನ್ನು ಬೆಳೆಸಿದನು. ಕೂದಲಿನಂತಿದ್ದ ಆ ಚಿಕ್ಕ ಮತ್ಸ್ಯವೂ ಸಹ ಸ್ವಲ್ಪಕಾಲದಲ್ಲಿ ವಿಶದವಾದ ಕಣ್ಣುಗಳುಳ್ಳದಾಗಿ ಆ ಗುಡಾಣದ ನೀರಿನಲ್ಲಿ ಬೆಳೆಯಿತು.

ಇಲ್ಲಿಗೆ ಮೂವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ಅಥ ಶ್ರೀ ಕಾಲಿಕಾಪುರಾಣೇ ಚತುಸ್ತ್ರಿಂಶೋಽಧ್ಯಾಯಃ॥

॥ ಮಾರ್ಕಂಡೇಯ ಉವಾಚ ॥

ತಂ ತಥಾ ಪೀವರತನುಂ ದೃಷ್ಟ್ವಾ ಮತ್ಸ್ಯಂ ಮನುಃ ಸ್ವಯಂ ।
ಗೃಹೀತ್ವಾ ಪಾಣಿನಾ ಫುಲ್ಲನಳಿನಾಂ ಸರಸೀಂ ಯಯೌ ॥ ೧ ॥

ತತ್ಸರಸ್ತತ್ರ ವಿಪುಲಂ ಪುಣ್ಯೇ ನಾರಾಯಣಾಶ್ರಮೇ ।
ಏಕಯೋಜನವಿಸ್ತೀರ್ಣಮೇಕಯೋಜನಮಾಯತಂ ॥ ೨ ॥

ನಾನಾವಿಮಾನಗಣೋಪೇತಂ ಶೀತಾಮಲಜಲೋತ್ಕರಂ ।
ತದಾಸಾದ್ಯ ಸರೋ ಮತ್ಸ್ಯಂ ವಿನಿಧಾಯ ಮನುಸ್ತದಾ ॥ ೩ ॥

ಪಾಲಯಾಮಾಸ ಸುತವತ್ಕೃಪಯಾ ಪರಯಾ ಯುತಃ ।
ಸೋಽಚಿರೇಣೈವ ಕಾಲೇನ ಪೀನೋ ವೈಸಾರಿಣೋಽಭವತ್ ॥ ೪ ॥

॥ ಮೂವತ್ತನಾಲ್ಕನೆಯ ಅಧ್ಯಾಯವು ॥

೧. ಮಾರ್ಕಂಡೇಯ ಮುನಿಯು ಹೇಳಿದನು:—ದೊಡ್ಡದಾಗಿ ಬೆಳೆದಿದ್ದ ಆ ಮೀನನ್ನು ನೋಡಿ ಮನುವು ಅದನ್ನು ತನ್ನ ಕೈಯ್ಯಲ್ಲಿ ತೆಗೆದುಕೊಂಡು ಅರಳಿದ ಕಮಲಗಳುಳ್ಳ ಒಂದು ಸರೋವರಕ್ಕೆ ಹೋದನು.

೨. ಆ ಸರೋವರವು ಪವಿತ್ರವಾದ ನಾರಾಯಣಮುನಿಯ ಆಶ್ರಮದಲ್ಲಿರುವುದು. ಅದು ಒಂದು ಯೋಜನ ಅಗಲವಾಗಿಯೂ, ಒಂದು ಯೋಜನ ಉದ್ದವಾಗಿಯೂ ಇದ್ದಿತು.

೩-೪. ಆ ಸರೋವರದ ಜಲವು ಶೀತಲವೂ ನಿರ್ಮಲವೂ ಆಗಿದ್ದಿತು. ಅದರಲ್ಲಿ ಅನೇಕ ಮೀನುಗಳಿದ್ದುವು. ಅಂತಹ ಸರೋವರಕ್ಕೆ ಹೋಗಿ ಮನುವು ಆ ಮತ್ಸ್ಯವನ್ನು ಅದರಲ್ಲಿ ಬಿಟ್ಟು ಅದನ್ನು ದಯೆಯಿಂದ ಪುತ್ರನಂತೆ ಕಾಪಾಡಿದನು.

ನ ಮನುರ್ಯೌ ತತ್ರ ಸರಸಿ ಬೃಹತ್ತ್ವಾದ್ವಿಜಸತ್ತಮಾಃ ।
ಸ ಏಕದಾ ಮಹಾಮತ್ಸ್ಯಃ ಪೂರ್ವಾಪರತಟದ್ವಯೇ ॥ ೫ ॥

ಶಿರಃಪುಚ್ಛೇ ನಿಧಾಯಾಶು ತುಂಗದೇಹಃ ಸಮುಚ್ಛ್ರಿತಃ ।
ಸ್ವಾಯಂಭುವಂ ಮಹಾತ್ಮಾನಂ ಚುಕ್ರೋಶ ತ್ರಾಹಿ ಮಾಮಿತಿ ॥ ೬ ॥

ತಂ ತಥಾ ಸ ಮನುಜ್ಞಾತ್ವಾ ಕ್ರೋಶಂತಂ ಸ್ಥೂಲಪುಚ್ಛಕಂ ।
ಆಸಾಸಾದ ತದಾ ಮತ್ಸ್ಯಂ ಜಗ್ರಾಹ ಚ ಕರೇಣ ತಂ ॥ ೭ ॥

ನ ಶಕ್ನೋಮ್ಯಹಮುದ್ಧರ್ತುಂ ಪೃಥುರೋಮಾಣಮದ್ಭುತಂ ।
ಇತಿ ಸಂಚಿತಯನ್ನೇವ ಪ್ರೋದ್ಧಧಾರ ಕರೇಣ ತಂ ॥ ೮ ॥

ಭಗವಾನಪಿ ವಿಶ್ವಾತ್ಮಾ ಮತ್ಸ್ಯರೂಪೀ ಜನಾರ್ದನಃ
ಸ್ವಾಯಂಭುವಕರಂ ಪ್ರಾಪ್ಯ ಲಘಿಮಾನಮುಪಾಶ್ರಯತ್ ॥ ೯ ॥

---

೫. ಆ ಮತ್ಸ್ಯವು ಸ್ವಲ್ಪಕಾಲದಲ್ಲೇಯೇ ಆ ಸರಸ್ಸಿನಲ್ಲಿ ಹಿಡಸದಿರುವಷ್ಟು ದೊಡ್ಡದಾಗಿ ಬೆಳೆಯಿತು.

೬. ಆ ದೊಡ್ಡ ಮತ್ಸ್ಯವು ಒಂದುದಿನ ಸರಸ್ಸಿನ ಒಂದು ದಡದಲ್ಲಿ ಶಿರಸ್ಸನ್ನೂ ಮತ್ತೊಂದು ದಡದಲ್ಲಿ ಬಾಲವನ್ನೂ ಇಟ್ಟುಕೊಂಡು ಮಹಾತ್ಮನಾದ ಸ್ವಾಯಂಭುವ ಮನುವನ್ನು ಕುರಿತು ನನ್ನನ್ನು ರಕ್ಷಿಸು ಎಂದು ಕೂಗಿಕೊಂಡಿತು.

೭. ಹೀಗೆ ಆ ಮೀನು ಕೂಗಿಕೊಳ್ಳುತ್ತಿರುವುದನ್ನು ಕೇಳಿ ಮನುವು ಆ ಮೀನಿನ ಬಳಿಗೆ ಬಂದು ಅದನ್ನು ತನ್ನ ಕೈಯ್ಯಲ್ಲಿ ತೆಗೆದುಕೊಂಡನು.

೮. ಆಗ ಮನುವು ಅತಿ ದೊಡ್ಡದಾಗಿಯೂ ಆಶ್ಚರ್ಯಕರವಾಗಿಯೂ ಇರುವ ಈ ಮತ್ಸ್ಯವನ್ನು ನಾನು ಎತ್ತಬಲ್ಲೆನೇ ಎಂದು ಚಿಂತಿಸುತ್ತಾ ಆ ಮೀನನ್ನು ಕೈಯ್ಯಿಂದ ಧರಿಸಿದನು.

೯. ಆಗ ಭಗವಾನ್ ನಾರಾಯಣನು ತಾನು ಜಗದ್ರೂಪಿಯಾಗಿದ್ದರೂ, ಮತ್ಸ್ಯ ರೂಪಿಯಾಗಿರುವಾಗ ಸ್ವಾಯಂಭುವಮನುವಿನ ಕೈಯ್ಯಲ್ಲಿ ಅತ್ಯಂತ ಹಗುರವಾಗಿರುವಂತೆ ತೋರಿದನು.

ತತಃ ಕರಾಭ್ಯಾ ಮುದ್ಧೃತ್ಯ ಸ್ಕಂಧೇ ಕೃತ್ವಾತು ತಂ ಮನುಃ ।
ನಿನಾಯ ಸಾಗರಂ ತತ್ರ ತೋಯೇ ಚ ನಿದಧೇ ತತಃ ॥ ೧೦ ॥

ಯಥೇಚ್ಛಮತ್ರ ವರ್ಧಸ್ವ ನ ಕೋಪಿ ತ್ವಾಂ ವಧಿಷ್ಯತಿ ।
ಅಚಿರೇಣೈವ ಸಂಪೂರ್ಣಂ ದೇಹಂ ತ್ವಂ ಸಮವಾಪ್ನುಹಿ ॥ ೧೧ ॥

ಇತ್ಯುಕ್ತ್ವಾ ಸ ಮಹಾಭಾಗಃ ಸರ್ವಪ್ರಾಣಭೃತಾಂ ವರಃ ।
ಲಘುತ್ವಂ ಚಿಂತಯಂಸ್ತಸ್ಯ ವಿಸ್ಮಯಂ ಪರಮಂ ಗತಃ ॥ ೧೨ ॥

ಮತ್ಸ್ಯೋಪಿ ನ ಚಿರಾದೇವ ಪೂರ್ಣಕಾಯಸ್ತದಾ ಮಹಾನ್ ।
ಸರ್ವತಃ ಪೂರಯಾಮಾಸ ದೇಹಭೋಗೇನ ಸಾಗರಂ ॥ ೧೩ ॥

ತಂ ಪೂರ್ಣಕಾಯಮಾಲೋಕ್ಯ ವ್ಯತೀತ್ಯಾಂಭಃಸಮುಚ್ಛ್ರಿತಂ ।
ಶಿಲಾಭಿರ್ನಿಚಿತಸ್ಫೀತಂ ಮಾನಸಾಚಲಸನ್ನಿಭಂ ॥ ೧೪ ॥

---

೧೦. ಅನಂತರ ಆ ಮೀನನ್ನು ಕೈಯ್ಯಿಂದ ಹಿಡಿದೆತ್ತಿ ಭುಜದಲ್ಲಿಟ್ಟುಕೊಂಡು ಮನುವು ಸಮುದ್ರಕ್ಕೆ ಬಂದು ಅದರ ನೀರಿನಲ್ಲಿ ತೇಲಿಬಿಟ್ಟನು.

೧೧. ಈ ಸಮುದ್ರದಲ್ಲಿ ಯಥೇಚ್ಛವಾಗಿ ಬೆಳೆಯುತ್ತಿರು. ಇಲ್ಲಾರೂ ನಿನ್ನನ್ನು ಕೊಲ್ಲುವುದಿಲ್ಲವು. ಸ್ವಲ್ಪಕಾಲದಲ್ಲಿಯೇ ಸಂಪೂರ್ಣವಾದ ದೇಹವುಳ್ಳವನಾಗು.

೧೨. ಹೀಗೆಂದು ಆ ಮೀನಿಗೆ ಹೇಳಿ ಪುರುಷಶ್ರೇಷ್ಠನಾದ ಆ ಮನುವು ಅಷ್ಟು ದೊಡ್ಡ ಶರೀರವುಳ್ಳ ಆ ಮೀನು ತನ್ನ ಕೈಯ್ಯಲ್ಲಿರುವಾಗ ಬಹಳ ಹಗುರವಾಗಿ ಹೇಗೆ ಆಗಿದ್ದಿತೆಂದು ಚಿಂತಿಸುತ್ತಾ ತುಂಬಾ ಆಶ್ಚರ್ಯಗೊಂಡನು.

೧೩. ಮುಂದೆ ಆ ಮತ್ಸ್ಯವು ಸ್ವಲ್ಪಕಾಲದಲ್ಲಿಯೇ ತುಂಬಾ ದೊಡ್ಡದಾಗಿ ಬೆಳೆದು ತನ್ನ ಶರೀರದ ವಿಸ್ತಾರದಿಂದ ಆ ಸಮುದ್ರವನ್ನೆಲ್ಲಾ ತುಂಬಿತು.

೧೪-೧೫. ದೊಡ್ಡದಾಗಿ ಬೆಳೆದು, ನೀರಿಗಿಂತಲೂ ಮೇಲೆ ಬಂದಿರುವುದೂ ಕಲ್ಲಿನಂತೆ ಕಠಿಣವಾದುದೂ ಮಾನಸಪರ್ವತದಂತೆ ದೊಡ್ಡದಾದುದೂ ತನ್ನ ವಿಶಾಲವಾದ ಶರೀರದಿಂದ ಸಮುದ್ರವನ್ನು ವ್ಯಾಪಿಸುತ್ತಲಿರುವುದೂ ಆದ ಆ ಮೀನನ್ನು

ರುಂಧಂತಂ ಸಾಗರಂ ಸರ್ವಂ ದೇಹಭೋಗಾಚಲೀಕೃತಂ ।
ಸ್ವಾಯಂಭುವೋ ಮನುರ್ಧೀಮಾನ್ನೈನೇ ಮತ್ಸ್ಯಂ ನ ತಂ ತದಾ ॥ ೧೫ ॥

ತತಃ ಪಪ್ರಚ್ಛ ತಂ ಸಾಮ್ನಾ ಮತ್ಸ್ಯಂ ಸ್ವಾಯಂಭುವೋ ಮನುಃ ।
ವಿಚಿಂತ್ಯ ಲಘಿಮಾನಂ ಚ ಪಶ್ಯನ್ಮೂರ್ತಿಂ ತದಾದ್ಭುತಾಂ ॥ ೧೬ ॥

॥ ಮನುರುವಾಚ ॥

ನ ತ್ವಾಂ ಮತ್ಸ್ಯಮಹಂ ಮನ್ಯೇ ಕಸ್ತ್ವಂ ಮೇ ವದ ಸತ್ತಮ ।
ಮಹತ್ತ್ವಂ ಲಘಿಮಾನಂ ತೇ ಚಿಂತಯನ್ ಸುಮಹತ್ತರ ॥ ೧೭ ॥

ತ್ವಂ ಬ್ರಹ್ಮಾ ಹ್ಯಥವಾ ವಿಷ್ಣುಃ ಶಂಭುರ್ವಾನಸ್ವರೂಪಧೃಕ್ ।
ನ ಚೇದ್ಗುಹ್ಯಂ ಮಹಾಭಾಗ ತನ್ಮೇ ವದ ಮಹಾಮತೇ ॥ ೧೮ ॥

॥ ಮತ್ಸ್ಯ ಉವಾಚ ॥

ಆರಾಧ್ಯೋಽಹಂ ತ್ವಯಾ ನಿತ್ಯಂ ಯೋ ಹರಿಃ ಸ ಸನಾತನಃ ।

ನೋಡಿ ಬುದ್ಧಿವಂತನಾದ ಸ್ವಾಯಂಭುವಮನುವು ಅದು ಮತ್ಸ್ಯವಲ್ಲವೆಂದು ತಿಳಿದನು.

೧೬. ಅನಂತರ ಮನುವು (ಹಿಂದೆ ತಾನು ಅನುಭವಿಸಿದ) ಅದರ ಲಘುತ್ವವನ್ನು ಸ್ಮರಿಸಿ ಮತ್ತು ಆಶ್ಚರ್ಯಕರವಾದ ಅದರ ಶರೀರವನ್ನು ನೋಡಿ ಮೃದುವಾದ ಮಾತಿನಿಂದ ಅವನ್ನು ಕುರಿತು ಹೀಗೆ ಕೇಳಿದನು.

೧೭. ಎಲೈ ಶ್ರೇಷ್ಠನೇ! ನಿನ್ನ ಲಘುತ್ವ (ಭಾರವಿಲ್ಲದಿರುವಿಕೆ) ವನ್ನೂ, ಈ ದೊಡ್ಡ ರೂಪವನ್ನೂ ಆಲೋಚಿಸಿದರೆ ನೀನು ಮತ್ಸ್ಯವಲ್ಲವೆಂಬುದು ತಿಳಿಯುವುದು. ಆದುದರಿಂದ ನೀನಾರು ಎಂಬುದನ್ನು ನನಗೆ ಹೇಳು.

೧೮. ನೀನು ಮಾನಿನ ಸ್ವರೂಪವನ್ನು ಧರಿಸಿದ ಬ್ರಹ್ಮನೋ? ಅಥವಾ ವಿಷ್ಣುವೋ? ಶಂಕರನೋ? ಎಲೈ ಬುದ್ಧಿಶಾಲಿಯೇ! ರಹಸ್ಯವಲ್ಲದಿದ್ದರೆ ಈ ಸಮಾಚಾರವನ್ನು ನನಗೆ ಹೇಳು.

ತವೇಷ್ಟಕಾಮಸಿದ್ಧ್ಯರ್ಥಂ ಪ್ರಾದುರ್ಭೂತಃ ಸಮಾಹಿತಃ ॥ ೧೯ ॥

ಯತ್ತ್ವಮಿಚ್ಛಸಿ ಭೂತೇಶ ಮತ್ತಸ್ತ್ವಂ ವಿಮಾನಮೂರ್ತಿತಃ ।
ತತ್ಕರಿಷ್ಯೇಽದ್ಯ ತಾಂ ಮೂರ್ತಿಮಿಮಾಂ ವಿದ್ಧಿ ಮನೋ ಮಮ ॥ ೨೦ ॥

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ವಿಷ್ಣೋರಮಿತತೇಜಸಃ ।
ಜ್ಞಾತ್ವಾ ಪ್ರತ್ಯಕ್ಷತೋ ವಿಷ್ಣುಂ ಮನುಸ್ತುಷ್ಟಾವ ಕೇಶವಂ ॥ ೨೧ ॥

॥ ಮನು ರುವಾಚ ॥

ನಮಸ್ತೇ ಜಗದದ್ಯವ್ಯಕ್ತ ಪರಾಪರಪತೇ ಹರೇ ।
ಪಾವಕಾದಿತ್ಯಶೀತಾಂಶುನೇತ್ರತ್ರಯಧರಾವ್ಯಯ ॥ ೨೨ ॥

---

೧೯. ಮತ್ಸ್ಯವು ಹೇಳಿತು :—ಎಲೈ ಮನುವೇ ! ನೀನು ನಿತ್ಯವೂ ಯಾರನ್ನು ಆರಾಧಿಸುತ್ತಲಿರುವೆಯೋ ಅಂತಹ ಪುರಾಣಪುರುಷನಾದ ಹರಿಯೇ ನಾನು. ನಿನ್ನ ಇಷ್ಟಾರ್ಥಸಿದ್ಧಿಗಾಗಿ ಈ ರೂಪವನ್ನು ಧರಿಸಿ ಅವತರಿಸಿರುವೆನು.

೨೦. ಪ್ರಾಣಿಗಳೊಡೆಯನಾದ ಎಲೈ ಮನುವೇ ! ಈ ನನ್ನ ಮತ್ಸ್ಯಶರೀರದಿಂದ ಯಾವ ಕಾರ್ಯವು ಆಗಬೇಕೆನ್ನುವಿಯೋ ಅದನ್ನು ಮಾಡಿಕೊಡುವೆನು. ಈ ಶರೀರವು ನನ್ನ ಅವತಾರವೆಂದು ತಿಳಿ.

೨೧. ಮಾರ್ಕಂಡೇಯನು ಹೇಳಿದನು :—ಹೀಗೆ ತೇಜಸ್ವಿಯಾದ ವಿಷ್ಣುವಿನ ಮಾತುಗಳನ್ನು ಕೇಳಿ ಮನುವು ಆ ಮತ್ಸ್ಯವೇ ಪ್ರತ್ಯಕ್ಷವಾದ ವಿಷ್ಣುವೆಂದು ತಿಳಿದು ಆ ನಾರಾಯಣನನ್ನು ಹೀಗೆ ಸ್ತುತಿಸಿದನು.

೨೨. ಮನುವು ಹೇಳಿದನು :— ಮಾಯೆಗೂ ಜಗತ್ತಿಗೂ ಉತ್ತಮವಾದ ವಸ್ತುಗಳಿಗೂ ಒಡೆಯನಾದ ಓ ಹರಿಯೇ ! ನಿನಗೆ ನಮಿಸುವೆನು. ಅಗ್ನಿ, ಸೂರ್ಯ, ಚಂದ್ರ ರೂಪಗಳಾದ ಮೂರು ಕಣ್ಣುಗಳನ್ನು ಧರಿಸಿದವನೂ, ನಾಶವಿಲ್ಲದವನೂ ಆದ ನಿನಗೆ ನಮಸ್ಕಾರವು.

ಜಗತ್ಕಾರಣ ಸರ್ವಜ್ಞ ಜಗದ್ಧಾಮ ಹರೇ ಪರ ।
ಪರಾಪರಾತ್ಮರೂಪಾತ್ಮನ್ ಪಾರಿಣಾಂ ಪಾರಕಾರಣ ॥ ೨೩ ॥

ಆತ್ಮಾನಮಾತ್ಮನಾ ಧೃತ್ವಾ ಧರಾರೂಪಧರೋ ಹರೇ ।
ಬಿಭರ್ಷಿ ಸಕಲಾನ್ ಲೋಕಾನಾಧಾರಾತ್ಮಂಸ್ತ್ರಿವಿಕ್ರಮ ॥ ೨೪ ॥

ಸರ್ವವೇದಮಯ ಶ್ರೇಷ್ಠಧಾಮ ಧಾರಣಕಾರಣ ।
ಸುರೌಘಪರಮೇಶಾನ ನಾರಾಯಣ ಸುರೇಶ್ವರ ॥ ೨೫ ॥

ಅಯೋನಿಸ್ತ್ವಂ ಜಗದ್ಯೋನಿರಪಾದಸ್ತ್ವಂ ಸದಾಗತಿಃ ।
ತ್ವಂ ತೇಜಃ ಸ್ಪರ್ಶಹೀನಶ್ಚ ಸರ್ವೇಶಸ್ತ್ವಮನೀಶ್ವರಃ ॥ ೨೬ ॥

---

೨೩. ಜಗತ್ತಿಗೆ ಕಾರಣನೂ ಸರ್ವಜ್ಞನೂ ಜಗತ್ತಿಗೆ ಆಧಾರನೂ ಉತ್ಕೃಷ್ಟನೂ ಆದ ಹರಿಯೇ ನಿನಗೆ ನಮಿಸುವೆನು. ಪುತ್ತು ಉತ್ಕೃಷ್ಟವೂ ನಿತ್ಯವೂ ಆದ ವಸ್ತುರೂಪನೂ ಸಂಸಾರಸಾಗರವನ್ನು ದಾಟಬೇಕೆಂದಿರುವವರನ್ನು ಆ ಸಾಗರದಿಂದ ದಾಟಿಸುವವನೂ ಆದ ಓ ಹರಿಯೇ ; ನಿನಗೆ ನಮಿಸುವೆನು.

೨೪. ಅವ್ಯಕ್ತಸ್ವರೂಪನಾದ ನೀನು ನಿನ್ನ ಸಾಮರ್ಥ್ಯದಿಂದ ವ್ಯಕ್ತರೂಪವಾದ ಅನೇಕ ಲೋಕಗಳಾಗಿಯೂ ಅವುಗಳಲ್ಲಿರುವ ಚರಾಚರಾತ್ಮಕವಾದ ವಸ್ತುಗಳಾಗಿಯೂ ಪರಿಣಮಿಸಿ ಅವುಗಳಿಗೆ ನೀನೇ ಆಧಾರಭೂತನಾಗಿರುವೆ, ಇಂತಹ ನಿನಗೆ ನಮಸ್ಕಾರವು.

೨೫. ಸಕಲ ವೇದರೂಪನೂ, ಶ್ರೇಷ್ಠವಾದ ಪರಮಪದವೆಂದು ಪ್ರಸಿದ್ಧನೂ, ಜಗತ್ತಿಗೆ ಆಧಾರಸ್ವರೂಪನೂ, ಜಗತ್ತನ್ನು ಧರಿಸುವ ಶಕ್ತಿಯಸ್ವರೂಪನೂ, ದೇವತೆಗಳಿಗೆ ಒಡೆಯನೂ ಆದ ಓ ನಾರಾಯಣನೇ ! ನಿನಗೆ ನಮಿಸುವೆನು.

೨೬. ಓ ದೇವನೇ ! ನಿನಗೆ ಯಾರೂ ಕಾರಣವಲ್ಲವು. ನೀನೇ ಎಲ್ಲದಕ್ಕೂ ಕಾರಣನು. ಕಾಲುಗಳಿಲ್ಲದವನಾದರೂ ನೀನು ಎಲ್ಲೆಡೆಯಲ್ಲಿಯೂ ಇರುವವನು ಎಂದರೆ ಸರ್ವವ್ಯಾಪಕನು. ನೀನು ಪ್ರಕಾಶಸ್ವರೂಪನು, ಸ್ಪರ್ಶವಿಲ್ಲದವನು ಎಂದರೆ ಇಂದ್ರಿಯಗಳಿಗೆ ಅಗೋಚರನು. ಎಲ್ಲರಿಗೂ ನೀನು ಒಡೆಯನು ಆದರೆ ನಿನಗಾರೂ ಒಡೆಯರಿಲ್ಲವು.

ತ್ವಮನಾದಿಃ ಸಮಸ್ತಾದಿಸ್ತ್ವಂ ನಿತ್ಯಾನಂತರೋಂತರಃ ।
ಯದ್ಧೈಮಮಂಡಂ ಜಗತಾಂ ಬೀಜಂ ಬ್ರಹ್ಮಾಂಡಸಂಜ್ಞಿತಂ ॥ ೨೭ ॥

ತದ್ಬೀಜಂ ಭವತಸ್ತೇಜಸ್ತ್ವಯೋಪ್ತಂ ಸಲಿಲೇಷು ಚ ।
ಸರ್ವಾಧಾರೋ ನಿರಾಧಾರೋ ನಿರ್ಹೇತುಃ ಸರ್ವಕಾರಣಂ ॥ ೨೮ ॥

ನಮೋ ನಮಸ್ತೇ ವಿಶ್ವೇಶ ಲೋಕಾನಾಂ ಪ್ರಭವ ಪ್ರಭೋ ।
ಸೃಷ್ಟಿಸ್ಥಿತ್ಯಂತಹೇತುಸ್ತ್ವಂ ವಿಧಿವಿಷ್ಣುಹರಾತ್ಮಧೃಕ್ ॥ ೨೯ ॥

ಯಸ್ಯ ತೇ ದಶಧಾ ಮೂರ್ತಿರೂರ್ಮಿಷಟ್ಕಾದಿವರ್ಜಿತಾ ।
ಜ್ಯೋತಿಃಪತಿಸ್ತ್ವಮಂಭೋಧಿಸ್ತಸ್ಮೈ ತುಭ್ಯಂ ನಮೋ ನಮಃ ॥ ೩೦ ॥

ಕಸ್ತೇ ಭಾವಂ ವಕ್ತುಮೀಶಃ ಪರೇಶ ।
ಸ್ಥೂಲಾತ್ಸ್ಥೂಲೋ ಯೋಽಣುರೂಪೋಽರ್ಥವರ್ಗಾತ್ ।
ತಸ್ಮೈ ನಿತ್ಯಂ ಮೇ ನಮೋಽಸ್ತ್ವದ್ಯ ಯೋಽಭೂ ।
ದಾದಿತ್ಯವರ್ಣಂ ತಮಸಃ ಪರಸ್ತಾತ್ ॥ ೩೧ ॥

೨೭-೨೮. ನೀನು ಆದಿ ಇಲ್ಲದವನು; ಆದರೆ ಸಕಲ ಪ್ರಪಂಚಗಳಿಗೂ ನೀನೇ ಆದಿಯು; ನೀನು ಸರ್ವಾಂತರ್ಯಾಮಿಯು; ನಿತ್ಯನು; ಜಗತ್ತಿಗೆ ಕಾರಣವಾದ ಬ್ರಹ್ಮಾಂಡವೆಂಬ ಸುವರ್ಣಮಯವಾದ ಗೋಳವು ನಿನ್ನ ತೇಜಸ್ಸು; ಅದನ್ನು ನೀನು ನೀರಿನಲ್ಲಿ ತೇಲಿಬಿಟ್ಟಿರುವೆ. ಮೇಲೆ ಹೇಳಿದಂತೆ ನೀನು ಎಲ್ಲಕ್ಕೂ ಆಧಾರನೂ, ಸ್ವಯಂ ಆಧಾರವಿಲ್ಲದವನೂ, ಕಾರಣವಿಲ್ಲದವನೂ, ಎಲ್ಲಕ್ಕೂ ಕಾರಣನೂ ಆಗಿರುವೆ.

೨೯. ಎಲೈ ಜಗದೊಡೆಯನೇ; ನೀನು ಸಮಸ್ತಲೋಕಗಳಿಗೂ ಕಾರಣನು ಮತ್ತು ಬ್ರಹ್ಮವಿಷ್ಣುಮಹೇಶ್ವರರೂಪಗಳನ್ನು ಧರಿಸಿ ಸೃಷ್ಟಿಸ್ಥಿತಿಸಂಹಾರಗಳನ್ನು ಮಾಡುವವನೂ ನೀನೆ.

೩೦. ನಿನ್ನ ಮೂರ್ತಿಯು ಷಡೂರ್ಮಿಗಳಿಲ್ಲದುದು ಮತ್ತು ಹತ್ತುಪ್ರಕಾರ ರೂಪವುಳ್ಳದ್ದು. ತೇಜಸ್ಸಿಗೆ ಒಡೆಯನೂ, ಸಮುದ್ರಸ್ವರೂಪನೂ ನೀನೇ ಆಗಿರುವೆ, ಇಂತಹ ನಿನಗೆ ನಮಸ್ಕಾರವು.

೩೧. ಓ ಮಹೇಶ್ವರನೇ! ದೊಡ್ಡದಾದ ವಸ್ತುವಿಗಿಂತ ದೊಡ್ಡವನೂ, ವ್ಯಾಪಕನೂ, ಸೂಕ್ಷ್ಮವಾದ ವಸ್ತುವಿಗಿಂತ ಅತಿ ಸೂಕ್ಷ್ಮವಾದವನೂ, ತಿಳಿಯಲಸಾಧ್ಯನೂ ಆದ ನಿನ್ನ ಸ್ವರೂಪವನ್ನು ಯಾರು ಹೇಳಲು ಸಮರ್ಥರು? ಸೂರ್ಯನಂತೆ

ಸಹಸ್ರಶೀರ್ಷಾ ಪುರುಷಃ ಸಹಸ್ರಪಾತ್ ।
ಸಹಸ್ರಚಕ್ಷುಃ ಪೃಥಿವೀಂ ಸಮಂತತಃ ॥
ದಶಾಂಗುಲಂ ಯೋ ಹಿ ಸಮೇತ್ಯ ತಿಷ್ಠ ।
ತ್ಸ ಮೇ ಪ್ರಸೀದತ್ವಿಹ ವಿಷ್ಣುರುಗ್ರಃ ॥ ೩೨ ॥

ನಮಸ್ತೇ ಮೀನಮೂರ್ತೇ ಹೇ ನಮಸ್ತೇ ಭಗವನ್ ಹರೇ ।
ನಮಸ್ತೇ ಜಗದಾನಂದ ನಮಸ್ತೇ ಭಕ್ತವತ್ಸಲ ॥ ೩೩ ॥

॥ ಮಾರ್ಕಂಡೇಯ ಉವಾಚ ॥

ಸ್ವಾಯಂಭುವೇನ ಮನುನಾ ಸಂಸ್ತುತೋ ಮತ್ಸ್ಯರೂಪಧೃಕ್ ।
ವಾಸುದೇವಸ್ತದಾ ಪ್ರಾಹ ಮೇಘಗಂಭೀರನಿಃಸ್ವನಃ ॥ ೩೪ ॥

ಪ್ರಕಾಶಸ್ವರೂಪನೂ, ಅಜ್ಞಾನವೆಂಬ ಕತ್ತಲೆಯ ಸಂಬಂಧವಿಲ್ಲದವನೂ ಆದ ನಿನಗೆ ನಮಸ್ಕಾರವು. " ಅಣೋರಣೀಯಾನ್ಮಹತೋಮಹೀಯಾನ್ " ಎಂದು ತೈತ್ತಿರೀಯ ಉಪನಿಷತ್ತಿನಲ್ಲಿ ಇದೇ ಅರ್ಥವು ಪ್ರತಿಪಾದಿಸಲ್ಪಟ್ಟಿರುವುದು.

೩೨. ಸಾವಿರಾರು (ಅನಂತವಾದ) ಶಿರಸ್ಸುಳ್ಳವನೂ, ಸಾವಿರಾರು ಕಾಲುಗಳುಳ್ಳವನೂ, ಸಾವಿರಾರು ಕಣ್ಣುಗಳುಳ್ಳವನೂ, ಭೂಮಿ (ಬ್ರಹ್ಮಾಂಡಗೋಳ) ವನ್ನು ವ್ಯಾಪಿಸಿ ಅದರಮೇಲೆ ಹತ್ತುಅಂಗುಲದವರೆಗೆ ಆಕ್ರಮಿಸಿ ಇರುವವನೂ (ಅಂದರೆ ಬ್ರಹ್ಮಾಂಡದ ಹೊರಭಾಗವನ್ನೆಲ್ಲಾ ಆಕ್ರಮಿಸಿರುವವನು ಎಂಬ ಅಭಿಪ್ರಾಯವು) ಆದ ಸರ್ವಪ್ರಾಣಿಗಳ ಸಮಷ್ಟಿರೂಪನಾದ ವಿರಾಟ್ಪುರುಷನು ನೀನು. ಇಂತಹವನಾದ ಎಲೈ ವಿಷ್ಣುವೇ ನೀನು ನನಗೆ ಪ್ರಸನ್ನನಾಗು. (ಈ ವಿವರವು ಪುರುಷಸೂಕ್ತದಲ್ಲಿ ಪ್ರತಿಪಾದಿತವಾಗಿದೆ.)

೩೩. ಮತ್ಸ್ಯರೂಪಿಯಾದ ಓ ಭಗವಂತನೇ! ನಿನಗೆ ನಮಸ್ಕಾರವು. ಜಗತ್ತಿಗೆ ಸುಖವನ್ನು ಉಂಟುಮಾಡುವ ಓ ಹರಿಯೇ! ನಿನಗೆ ನಮಿಸುವೆನು. ಭಕ್ತರಲ್ಲಿ ಪ್ರೀತಿಯುಳ್ಳ ಓ ನಾರಾಯಣನೇ! ಇಗೋ ನಿನಗೆ ನಮಸ್ಕಾರವು.

೩೪. ಮಾರ್ಕಂಡೇಯನು ಹೇಳಿದನು:—ಹೀಗೆ ಸ್ವಾಯಂಭುವಮನುವು ಸ್ತುತಿಸಲು ಮತ್ಸ್ಯರೂಪಧಾರಿಯಾದ ವಾಸುದೇವನು ಆಗ ಆ ಮನುವನ್ನು ಕುರಿತು ಮೇಘದ ಧ್ವನಿಯಂತೆ ಗಂಭೀರವಾದ ಧ್ವನಿಯಿಂದ ಹೀಗೆ ಹೇಳಿದನು.

॥ ಭಗವಾನುವಾಚ ॥

ತುಷ್ಟೋಽಸ್ಮಿ ತಪಸಾ ತೇಽದ್ಯ ಭಕ್ತ್ಯಾ ಚಾಪಿ ಸ್ತುತೋ ಮುಹುಃ ।
ಸಪರ್ಯಯಾ ಚ ದಾನೇನ ವರಂ ವರಯ ಸುವ್ರತ ॥ ೩೫ ॥

ಇಷ್ಟಾರ್ಥಂ ಸಂಪ್ರದಾಸ್ಯಾಮಿ ತುಭ್ಯಂ ನಾತ್ರ ವಿಚಾರಣಾ ।
ವರಯಸ್ವೇಪ್ಸಿತಾನ್ಕಾಮಾನ್ ಲೋಕಾನಾಂ ವಾ ಹಿತಂ ಚ ಯತ್ ॥೩೩॥

॥ ಮನುರುವಾಚ ॥

ಯದಿ ದೇಯೋ ವರೋ ಮೇಽದ್ಯ ಲೋಕಾನಾಂ ಯೋ ಹಿತೋ ಭವೇತ್ ।
ತನ್ಮೇ ದೇಹಿ ವರಂ ವಿಷ್ಣೋ ತಂ ವಕ್ಷ್ಯಾಮಿ ಶೃಣುಷ್ವ ಮೇ ॥ ೩೭ ॥

ಶಶಾಪ ಕಪಿಲಃ ಪೂರ್ವಂ ಮದರ್ಥೇ ಭುವನತ್ರಯಂ ।
ಹತಪ್ರಹತವಿಧ್ವಸ್ತಂ ಸಕಲಂ ತೇ ಭವೇದಿತಿ ॥ ೩೮ ॥

ಯೇನೇಯಮುದ್ಧೃತಾ ಪೃಥ್ವೀ ಯೇನೇಯಂ ಪರಿಪಾಲಿತಾ ।
ಸಂಹರಿಷ್ಯತಿ ಯಸ್ತ್ವೇನಾಂ ತೇಽಧುನಾ ಪ್ಲಾವಯಂತ್ವಿಮಾಂ ॥ ೩೯ ॥

---

೩೫. ಭಗವಂತನು ಹೇಳಿದನು :— ತಪಸ್ವಿಯಾದ ಎಲೈ ಮನುವೇ ! ನಿನ್ನ ತಪಸ್ಸಿನಿಂದಲೂ, ಭಕ್ತಿಪೂರ್ವಕವಾದ ಸ್ತ್ರೋತ್ರದಿಂದಲೂ, ಅರ್ಚನೆ ಮತ್ತು ದಾನಗಳಿಂದಲೂ ಸಂತುಷ್ಟನಾಗಿರುವೆನು, ಬೇಕಾದ ವರವನ್ನು ಕೇಳಿಕೋ.

೩೬. ಬೇಕಾದ ಇಷ್ಟಾರ್ಥವನ್ನು ಕೊಡುವೆನು. ಈ ವಿಷಯದಲ್ಲಿ ಸಂಶಯವಿಲ್ಲವು. ಆದುದರಿಂದ ನಿನಗೆ ಬೇಕಾದ ವರಗಳನ್ನಾಗಲೀ, ಲೋಕದ ಜನಗಳಿಗೆ ಹಿತವಾಗುವಂತಹ ವರಗಳನ್ನಾಗಲೀ ಕೇಳಿಕೋ.

೩೭. ಮನುವು ಹೇಳಿದನು :—ಲೋಕಗಳಿಗೆ ಹಿತವನ್ನುಂಟುಮಾಡುವಂತಹ ವರವನ್ನು ನನಗೆ ಕೊಡು. ಎಲೈ ವಿಷ್ಣುವೇ ! ಆ ವರವೇನೆಂಬುವುದನ್ನು ಹೇಳುವೆನು ಕೇಳು.

೩೮. ಹಿಂದೆ ಕಪಿಲಮುನಿಯು ನನ್ನ ನಿಮಿತ್ತವಾಗಿ ಮೂರು ಲೋಕಗಳೂ ಸಂಪೂರ್ಣ ಧ್ವಂಸವಾಗಿ ಜಲಮಯವಾಗಲಿ ಎಂದು ಶಪಿಸಿದನು.

೩೯. ಮತ್ತು ಈ ಭೂಮಿಯನ್ನು ಯಾವನು ಉದ್ಧರಿಸಿರುವನೋ, ಯಾವನು ಪಾಲಿಸುವವನೋ, ಮತ್ತು ಯಾವನು ಸಂಹರಿಸುವವನೋ ಅವನೇ ಈ ಭೂಮಿಯನ್ನು ನೀರಿನಲ್ಲಿ ಮುಳಿಗಿಸಲಿ ಎಂದು ಶಪಿಸಿದನು.

ತತೋಽಹಂ ದೀನಹೃದಯಸ್ತ್ವಾಮೇವ ಶರಣಂ ಗತಃ ।
ನ ಯಥೇದಂ ತ್ರಿಭುವನಂ ಭವಿಷ್ಯತಿ ಜಲಪ್ಲುತಂ ॥ ೪೦ ॥

ಪತಪ್ರಪತವಿಧ್ವಸ್ತಂ ತಥಾ ತ್ವಂ ದೇಹಿ ಮೇ ವರಂ ।

॥ ಭಗವಾನುವಾಚ ॥

ನ ಮತ್ತಃ ಕಪಿಲೋ ಭಿನ್ನಸ್ತಥಾ ನ ಕಪಿಲಾದಪಂ ॥ ೪೧ ॥

ಯದುಕ್ತಂ ತೇನ ಮುನಿನಾ ಮಯೋಕ್ತಂ ವಿದ್ಧಿ ತನ್ಮನೋ ।
ತಸ್ಮಾದ್ಯದುದಿತಂ ತೇನ ತತ್ಸತ್ಯಂ ನಾನ್ಯಥಾ ಭವೇತ್ ॥ ೪೨ ॥

ಕರಿಷ್ಯೇ ತತ್ರ ಸಾಹಾಯ್ಯಂ ಸ್ವಾಯಂಭುವ ನಿಬೋಧ ಮೇ ।
ಪತಪ್ರಪತವಿಧ್ವಸ್ತೇ ತೋಯಮುಗ್ರೇ ಜಗತ್ತ್ರಯೇ ॥ ೪೩ ॥

ನ ಚಿರಾದೇವ ತತ್ತೋಯಂ ಶೋಷಯಿಷ್ಯಾಮಿ ವೈ ಮನೋ ।
ಯಾವಜ್ಜಲಪ್ಲವಸ್ತಾವದ್ಯಥಾ ಕಾರ್ಯಂ ತ್ವಯಾ ಮನೋ ॥ ೪೪ ॥

---

೪೦. ಅನಂತರ ನಾನು ದುಃಖಗೊಂಡವನಾಗಿ ನಿನ್ನನ್ನೇ ಮರೆಹೊಕ್ಕಿರುವೆನು. ಈ ಮೂರು ಲೋಕಗಳೂ ಧ್ವಂಸವಾಗಿ ನೀರಿನಲ್ಲಿ ಮುಳುಗದಿರುವಂತೆ ವರವನ್ನು ಅನುಗ್ರಹಿಸು.

೪೧. ಭಗವಂತನು ಹೇಳಿದನು :-ಎಲೈ ಮನುವೇ! ಕಪಿಲನು ನನಗಿಂತಲೂ ಬೇರೆಯಲ್ಲವು. ಹಾಗೆಯೇ ನಾನೂ ಕಪಿಲನಿಗಿಂತಲೂ ಬೇರೆಯಲ್ಲವು ಎಂದರೆ ಕಪಿಲನಿಗೂ ನನಗೂ ಭೇದವಿಲ್ಲವು. ಆ ಕಪಿಲಮುನಿಯು ಹೇಳಿದುದು ನಾನೇ ಹೇಳಿದುದೆಂತ ತಿಳಿ.

೪೨. ಆದಕಾರಣ ಕಪಿಲನು ಹೇಳಿದುದು ಸತ್ಯವು. ಅದೆಂದಿಗೂ ವ್ಯತ್ಯಾಸವಾಗಲಾರದು. ಆ ವಿಷಯದಲ್ಲಿ ನಾನೂ ಸಹಾಯವನ್ನು ಮಾಡುವೆನು. ಎಲೈ ಸ್ವಾಯಂಭುವಮನುವೇ! ಅದನ್ನು ಹೇಳುವೆನು ಕೇಳು.

೪೩. ಎಲೈ ಮನುವೇ! ಮಹಾಪ್ರಹಾರಗಳಿಂದ ಧ್ವಂಸವಾಗಿ ಮೂರು ಲೋಕವೂ ಸ್ವಲ್ಪಕಾಲದಲ್ಲಿಯೇ ಜಲಮಯವಾಗುವುದು. ಮುಂದೆ ಆ ಜಲವನ್ನು ನಾನು ಶೋಷಿಸುವೆನು ಎಂದರೆ ಒಣಗಿಹೋಗುವಂತೆ ಮಾಡುವೆನು.

೪೪. ಆಗ ಜಗತ್ತೆಲ್ಲವೂ ಜಲಮಯವಾಗಲು ನೀನು ಮಾಡಬೇಕಾದುದನ್ನು ಹೇಳುವೆನು. ಹಿತವಾದ ನನ್ನ ಮಾತನ್ನು ಕೇಳು.

ತನ್ಮೇ ನಿಗದತಃ ಪಥ್ಯಂ ಶೃಣುಷ್ವಾವಹಿತೋಽಧುನಾ ।
ಸರ್ವಯಜ್ಞಿಯಕಾಷ್ಠೈಸ್ತೈರೇಕಾ ನೌಕಾ ವಿಧೀಯತಾಂ ॥ ೪೫ ॥

ತಾಮಹಂ ದೃಢಯಿಷ್ಯಾಮಿ ಯಥಾ ನೋ ಭಿದ್ಯತೇ ಜಲೈಃ ।
ದಶಯೋಜನವಿಸ್ತೀರ್ಣಾಂ ತ್ರಿಂಶದ್ಯೋಜನಮಾಯತಾಂ ॥ ೪೬ ॥

ಧರಣೀಂ ಸರ್ವಬೀಜಾನಾಂ ಭುವನತ್ರಯವರ್ಧಿನೀಂ ।
ಸರ್ವಯಜ್ಞಿಯವೃಕ್ಷಾಣಾಂ ಭೂರಿಬಲ್ವಲತಂತುಭಿಃ ॥ ೪೭ ॥

ನವಯೋಜನದೀರ್ಘಾಂ ತು ವ್ಯಾಮತ್ರಯಸುವಿಸ್ತೃತಾಂ ।
ಕುರುಷ್ವ ತ್ವಂ ಮನೋ ತೂರ್ಣಂ ಬೃಹತೀಮಾರಿಕಾಂ ವಟೀಂ ॥ ೪೮ ॥

ಜಗದ್ಧಾತ್ರೀ ಜಗನ್ಮಾಯಾ ಲೋಕಮಾತಾ ಜಗನ್ಮಯೀ ।
ದೃಢಯಿಷ್ಯತಿ ತಾಂ ರಜ್ಜುಂ ನ ತ್ರುಟ್ಯತಿ ಯಥಾ ತಥಾ ॥ ೪೯ ॥

ಸರ್ವಾಣಿ ಬೀಜಾನ್ಯಾದಾಯ ಸವೇದಾನ್ ಸಪ್ತ ವೈ ಋಷೀನ್ ।
ತಸ್ಯಾಂ ನಾವಿ ನಿಷಣ್ಣಸ್ತ್ವಂ ವರ್ತಮಾನೇ ಜಲಪ್ಲವೇ ॥ ೫೦ ॥

೪೫-೪೬ ಯಜ್ಞಕ್ಕಾಗಿ ಉಪಯೋಗಿಸುವ ಮರಗಳಿಂದ ಒಂದು ನೌಕೆಯನ್ನು ನಿರ್ಮಿಸಿ ಜಲದಲ್ಲಿ ಇರಿಸು. ಆ ನೌಕೆಯು ನೀರಿನ ಹೊಡೆತಗಳಿಂದ ಒಡೆದುಹೋಗದೆ ದೃಢವಾಗಿರುವಂತೆ ಮಾಡುವೆನು ಮತ್ತು ಆ ನೌಕೆಯು ಹತ್ತು ಯೋಜನ ಎತ್ತರವಾಗಿಯೂ, ಮೂವತ್ತುಯೋಜನ ಅಗಲವಾಗಿಯೂ ಇರಬೇಕು.

೪೭-೪೮. ಮತ್ತು ಆ ನೌಕೆಯು ಮೂರು ಲೋಕಗಳಲ್ಲಿರುವ ವೃಕ್ಷಾದಿಗಳ ಬೀಜಗಳನ್ನು ಧರಿಸುವಂತಹುದಾಗಿರಬೇಕು. ಅಲ್ಲದೆ, ಎಲೈ ಮನುವೇ! ಎಲ್ಲಾ ಯಜ್ಞವೃಕ್ಷಗಳ ತಂತುಗಳಿಂದ (ದಾರಗಳಿಂದ) ಒಂಭತ್ತುಯೋಜನ ಉದ್ದವಾಗಿಯೂ ಮೂರು ಮಾರು ದಪ್ಪವಾಗಿಯೂ ಇರುವಂತಹ ದೊಡ್ಡದಾದ ಒಂದು ಹಗ್ಗವನ್ನೂ ನಿರ್ಮಿಸು.

೪೯. ಜಗತ್ತನ್ನು ಸೃಷ್ಟಿಸುವವಳೂ, ಜಗತ್ತಿಗೆ ಮಾತೆಯೂ, ಜಗದ್ರೂಪಳೂ ಆದ, ಆದಿಮಾಯೆಯು ಆ ಹಗ್ಗವು ಕಡಿದುಹೋಗದಿರುವಂತೆ ಅದನ್ನು ದೃಢವಾಗಿರಿಸುವಳು.

೫೦. ಆಗ ನೀನು ಬೀಜಗಳೆಲ್ಲವನ್ನೂ ತೆಗೆದುಕೊಂಡು ವೇದಗಳನ್ನೂ, ಸಪ್ತ ಋಷಿಗಳನ್ನೂ ಸಹ ಆ ನೌಕೆಯಲ್ಲಿಟ್ಟುಕೊಂಡು ಆ ಜಲಪ್ರಳಯದಲ್ಲಿರುವವನಾಗು.

ದಕ್ಷೇಣ ಸಹ ಸಂಗಮ್ಯ ಸ್ಮರಿಷ್ಯಸಿ ಮನೋ ಮಮ ।
ಸ್ಮೃತೋಽಹಂ ತೂರ್ಣಮಾಯಾಸ್ಯೇ ಭವತೋ ನಿಕಟಂ ಪ್ರತಿ ॥ ೫೧ ॥

ಶ್ಯಾಮಲೇನಾಥ ಶೃಂಗೇಣ ತ್ವಂ ಮಾಂ ಜ್ಞಾಸ್ಯಸಿ ವೈ ತದಾ ।
ಯಾವತ್ಪ್ರಹತವಿಧ್ವಸ್ತಹತಂ ಸ್ಯಾದ್ಭುವನತ್ರಯಂ ॥ ೫೨ ॥

ಜಲಪ್ಲುತೇ ತು ಸಂಪೂರ್ಣೇ ಶೃಂಗೇ ಮಮ ಚ ತಾಂ ತರಿಂ ॥ ೫೩ ॥

ತ್ವಂ ತದಾ ವಟವೇರಿಕಯಾ ಸಂಧಾನಿಷ್ಯಸಿ ವೈ ದೃಢಂ ।
ಬದ್ಧಾಯಾಂ ನಾವಿ ಮೇ ಶೃಂಗೇ ದೇವಮಾನೇನ ವತ್ಸರಾನ್ ॥ ೫೪ ॥

ಸಹಸ್ರಂ ಪ್ರೇರಯಿಷ್ಯಾಮಿ ತಾಂ ನಾವಂ ಶೋಷಯನ್ ಜಲಂ ।
ತತಃ ಶುಷ್ಕೇಷು ತೋಯೇಷು ಪ್ರೋತ್ತುಂಗೇ ಶಿಖರೇ ಗಿರೇಃ ॥ ೫೫ ॥

ಹಿಮಾಲಯಸ್ಯ ಬದ್ಧ್ವಾಹಂ ತಸ್ಮಿನ್ನಾವಮಹಂ ಮನೋ ।
ತಾಂ ವೈ ಗೋಪಯಿತಾ ನಿತ್ಯಂ ಯಾವದ್ಭೂಃ ಶೋಷಯೇಜ್ಜಲಂ ॥ ೫೬ ॥

---

೫೧. ಮತ್ತು ಅಲ್ಲಿ ದಕ್ಷನೊಡನೆ ಸೇರಿ ನನ್ನನ್ನು ಸ್ಮರಿಸು. ಸ್ಮರಿಸಿದೊಡನೆಯೇ ನಾನು ನಿನ್ನ ಬಳಿಗೆ ಬರುವೆನು.

೫೨. ಆಗ ಕಪ್ಪಾದ ಶೃಂಗ (ಕೋಡು) ದಿಂದ ನನ್ನನ್ನು ನೀನು ತಿಳಿಯಬಹುದು. ಎಲ್ಲಿಯವರೆಗೆ ಮೂರುಲೋಕವೂ ಧ್ವಂಸವಾಗುವುದೋ, ಅಲ್ಲಿಯವರೆವಿಗೂ ಆ ನೌಕೆಯನ್ನು ಬೆನ್ನುಮೇಲೆ ಧರಿಸಿರುವೆನು, ಇದರಲ್ಲಿ ಸಂಶಯವಿಲ್ಲವು.

೫೩. ಮುಂದೆ ಜಗತ್ತೆಲ್ಲವೂ ಜಲಮಯವಾಗಲು ನನ್ನ ಶೃಂಗಕ್ಕೆ ಆ ನೌಕೆಯನ್ನು ನೀನು ನಿರ್ಮಿಸಿದ ರಜ್ಜುವಿನಿಂದ ದೃಢವಾಗಿ ಬಂಧಿಸು.

೫೪. ಹಾಗೆ ನನ್ನ ಶೃಂಗಕ್ಕೆ ನೌಕೆಯನ್ನು ಬಂಧಿಸಿದಮೇಲೆ ದೇವಗಣನೆಯಿಂದ ಒಂದುಸಾವಿರವರ್ಷಪರ್ಯಂತ ಜಲವನ್ನೆಲ್ಲಾ ಒಣಗಿಸುತ್ತಾ ಆ ನೌಕೆಯನ್ನು ಧರಿಸುವೆನು.

೫೫-೫೬. ಎಲೈ ಮನುವೇ ! ಅನಂತರ ಜಲವು ಶೋಷಿಸುತ್ತಿರಲು ಹಿಮಾಲಯದ ಉನ್ನತವಾದ ಶಿಖರದಲ್ಲಿ ಆ ನೌಕೆಯನ್ನು ಬಂಧಿಸಿ ಭೂಮಿಯು ಸಂಪೂರ್ಣವಾಗಿ ಜಲವನ್ನು ಶೋಷಿಸುವವರೆವಿಗೂ ಆ ನೌಕೆಯನ್ನು ರಕ್ಷಿಸುವೆನು.

ಚಿಂತಿತೋಽಹಂ ತ್ವಯಾ ಪ್ರಾಪ್ಸ್ಯೇ ಯದಾ ಹಿ ನಿಕಟಂ ತವ ।
ಶೃಂಗೇಣ ಶ್ಯಾಮಲೇನೈವ ತ್ವಂ ಮಾಂ ಜ್ಞಾಸ್ಯಸಿ ಪುಷ್ಕರೇ ॥ ೫೭ ॥

ಪುನಃ ಸೃಷ್ಟಿಂ ತತಃ ಕೃತ್ವಾ ಮತ್ಪ್ರಸಾದಾನ್ಮಹಾಮುನೇ ।
ತ್ರೈಲೋಕ್ಯೇದುರ್ಲಭಾಮೃದ್ಧಿಮವಾಪ್ಸ್ಯಸಿ ಸನಾತನೀಂ ॥ ೫೮ ॥

ಅಹಮಾರಾಧಿತೋ ಯೇನ ಜಪ್ಯೇನ ಭವತಾ ಮನೋ ।
ಸರ್ವಸಿದ್ಧಿರ್ಭವೇತ್ತಸ್ಯ ಯಸ್ಮಿತ್ತೋಷಯತಿ ತೇನ ಮಾಂ ॥ ೫೯ ॥

॥ ಮಾರ್ಕಂಡೇಯ ಉವಾಚ ॥

ಇತಿ ದತ್ತ್ವಾ ವರಂ ತಸ್ಮೈ ಮತ್ಸ್ಯಸ್ತೇನ ನಮಸ್ಕೃತಃ ।
ಅಂತರ್ದಧೇ ಜಗನ್ನಾಥೋ ಲೋಕಾನುಗ್ರಹಕಾರಕಃ ॥ ೬೦ ॥

---

೫೭. ನೀನು ತಿರುಗಿ ಯಾವಾಗ ನನ್ನನ್ನು ಚಿಂತಿಸುವಿಯೋ ಆಗ ನಾನು ನಿನ್ನ ಬಳಿಗೆ ಬರುವೆನು. ಆಗ ನೀನು ಕಪ್ಪಾದ ಶೃಂಗವುಳ್ಳ ನನ್ನನ್ನು ಪುಷ್ಕರದ್ವೀಪದಲ್ಲಿ ನೋಡುವೆ.

೫೮. ಎಲೈ ಬುದ್ಧಿಶಾಲಿಯಾದ ಮನುವೇ ! ಆಮೇಲೆ ನನ್ನ ಅನುಗ್ರಹದಿಂದ ನೀನು ಸೃಷ್ಟಿಯನ್ನು ಮಾಡಿ ಮೂರುಲೋಕಗಳಲ್ಲಿ ಯಾರಿಂದಲೂ ಪಡೆಯಲಸಾಧ್ಯವಾದ ಶಾಶ್ವತವಾದ ಅಭಿವೃದ್ಧಿಯನ್ನು ಹೊಂದುವೆ.

೫೯. ಅಲ್ಲದೆ ಎಲೈ ಮನುವೇ ! ನೀನು ಭಕ್ತಿಯಿಂದ ಉಚ್ಚರಿಸಿ ಜಪಿಸಿವ ಮಂತ್ರವನ್ನು ಯಾವನು ಜಪಿಸಿ ನನ್ನನ್ನು ಸಂತೋಷಗೊಳಿಸುವನೋ ಅವನಿಗೆ ಸಕಲ ಇಷ್ಟಾರ್ಥಸಿದ್ಧಿಯೂ ಆಗುವುದು.

೬೦. ಮಾರ್ಕಂಡೇಯನು ಹೇಳಿದನು :—ಹೀಗೆ ಮನುವಿಗೆ ವರವನ್ನಿತ್ತು ಲೋಕಕ್ಕೆ ಅನುಗ್ರಹವನ್ನು ಮಾಡುವ ಮತ್ಸ್ಯರೂಪಿಯಾದ ನಾರಾಯಣನು ಆ ಮನುವಿನಿಂದ ನಮಸ್ಕೃತನಾಗಿ ಅಲ್ಲಿಯೇ ಅಂತರ್ಧಾನನಾದನು.

ಸ್ವಾಯಂಭುವೋಽಪಿ ಭಗವಾನಂತರ್ಧಾನಂ ಗತೇ ಹರೌ ।
ಯಥೋಕ್ತಂ ಹರಿಣಾ ಪೂರ್ವಂ ನಾವಂ ರಜ್ಜುಂ ತಥಾಕರೋತ್ ॥ ೬೧ ॥

ಸರ್ವಾನ್ ಯಜ್ಞಿಯವೃಕ್ಷಾಘಾನ್ ಭಿತ್ವಾ ಸ್ವಾಯಂಭುವಸ್ತದಾ ।
ಉದ್ಧೃತ್ಯ ಕಾರಯಾಮಾಸ ವಾಸ್ಯಾದಿಭಿರಸೌ ತರಿಂ ॥ ೬೨ ॥

ತೇಷಾಂ ವಲ್ಕಲಮುದ್ಭೂತಸೂತ್ರಸಂಘೈರ್ವಟೀರಿಕಾಂ ।
ಪೂರ್ವೋಕ್ತೇನ ಪ್ರಮಾಣೇನ ಕಾರಯಾಮಾಸ ವೈ ಮನುಃ ॥ ೬೩ ॥

ತತಃ ಕಾಲೇನ ಮಹತಾ ವೃತ್ತಂ ಯುದ್ಧಂ ಮಹಾದ್ಭುತಂ ।
ವಿಷ್ಣೋರ್ಯಜ್ಞವರಾಹಸ್ಯ ಶರಭಸ್ಯ ಹರಸ್ಯ ಚ ॥ ೬೪ ॥

ತತೋ ಜಲಪ್ಲವೇ ಜಾತೇ ವಿಧ್ವಸ್ತೇ ಭುವನತ್ರಯೇ ।
ತಯಾ ರಜ್ಜ್ವಾ ತರಿಂ ಬಧ್ವಾ ಬೀಜಾನ್ಯಾದಾಯ ಸರ್ವಶಃ ॥ ೬೫ ॥

---

೬೧. ಸ್ವಾಯಂಭುವಮನುವೂ ಸಹ, ನಾರಾಯಣನು ಅಂತರ್ಧಾನನಾದ ಮೇಲೆ ಆ ಹರಿಯು ಹೇಳಿದಂತೆ ನೌಕೆಯನ್ನೂ ರಜ್ಜು (ಹಗ್ಗ) ವನ್ನೂ ನಿರ್ಮಿಸಿದನು.

೬೨. ಕೊಡಲಿ, ಗರಗಸ ಮೊದಲಾದ ಕಬ್ಬಿಣದ ಆಯುಧಗಳಿಂದ ಎಲ್ಲಾ ಯಜ್ಞಿಯ ವೃಕ್ಷಗಳನ್ನು ಕತ್ತರಿಸಿ ನೌಕೆಗೆ ಬೇಕಾಗುವಂತೆ ಮಾಡಿಸಿ ಅವರಿಂದ ನೌಕೆಯನ್ನು ಕಟ್ಟಿಸಿದನು.

೬೩. ಮತ್ತು ಆ ಯಜ್ಞವೃಕ್ಷಗಳ ನಾರನ್ನೂ ತೆಗೆದು ಅವುಗಳಿಂದ ಹರಿಯು ಹೇಳಿದ ಪ್ರಮಾಣವುಳ್ಳ ಹಗ್ಗವನ್ನೂ ಮನುವು ಮಾಡಿಸಿದನು.

೬೪. ಆಮೇಲೆ ಬಹಳ ಕಾಲಪರ್ಯಂತರ ಯಜ್ಞವರಾಹರೂಪಿಯಾದ ವಿಷ್ಣು ವಿಗೂ, ಶರಭರೂಪಿಯಾದ ಶಂಕರನಿಗೂ ಅತಿ ಭಯಂಕರವಾದ ಯುದ್ಧವು ನಡೆಯಿತು.

೬೫-೬೬. ಅನಂತರ ಜಲಪ್ರಳಯವಾಗಿ ಸಕಲ ಪ್ರಪಂಚವೂ ನಷ್ಟವಾಗಲು ಮನುವು ತಾನು ನಿರ್ಮಿಸಿದ ಆ ರಜ್ಜುವಿನಿಂದ ನೌಕೆಯನ್ನು ದೃಢವಾಗಿ ಬಂಧಿಸಿ,

ವೇದಾನೃಷೀಂಸ್ತದಾ ಸಪ್ತ ದಶಂ ಚಾದಾಯ ವೈ ಮನುಃ ।
ತಸ್ಯಾಂ ನಾವಿ ಸಮಾಧಾಯ ತೋಯಮುಗ್ರೇ ಚರಾಚರೇ ॥ ೬೬ ॥

ಸ್ವಾಯಂಭುವಸ್ತದಾ ಮತ್ಸ್ಯಂ ಹರಿಂ ಸಸ್ಮಾರ ನೌಗತಃ ।
ತತೋ ಜಲಾನಾಮುಪರಿ ಸಶೃಂಗ ಇವ ಪರ್ವತಃ ॥ ೬೭ ॥

ಉದಿತಶ್ಚೈಕಶೃಂಗೇಣ ವಿಷ್ಣುರ್ಮತ್ಸ್ಯಸ್ವರೂಪಧೃಕ್ ।
ಆಗತಸ್ತತ್ರ ನ ಚಿರಾದ್ಯತ್ರಾಸ್ತೇ ತರಿಣಾ ಮನುಃ ॥ ೬೮ ॥

ತರಿಮಾರುಹ್ಯ ವಿಪುಲೇ ತೋಯರಾಶೌ ಭಯಂಕರೇ ।
ಯಾವಚ್ಚಲಾಚಲಂ ತೋಯಂ ತಾವತ್ಪೃಷ್ಠೇ ತರಿಂ ನ್ಯಧಾತ್ ॥ ೬೯ ॥

ಜಲೇ ಪ್ರಕೃತಿಮಾಪನ್ನೇ ಶೃಂಗೇ ಬದ್ಧ್ವಾ ವಟೇರಿಕಾಂ ।
ತಾಂ ನಾವಂ ನೋದಯಾಮಾಸ ಸಹಸ್ರಂ ದೈವವತ್ಸರಾನ್ ॥ ೭೦ ॥

ಸ್ವಯಂ ನಾವಮವಷ್ಟಭ್ಯ ದಧಾರ ಪರಮೇಶ್ವರಃ ।
ಯೋಗನಿದ್ರಾ ಜಗದ್ಧಾತ್ರೀ ಸಮಾಸೀದದ್ವಟೇರಿಕಾಂ ॥ ೭೧ ॥

ವೇದಗಳನ್ನೂ, ಸಪ್ತಋಷಿಗಳನ್ನೂ, ಸಕಲ ಪ್ರಪಂಚದ ಬೀಜಗಳನ್ನೂ ಆ ನೌಕೆಯಲ್ಲಿರಿಸಿ ಅಲ್ಲಿಯೇ ಮತ್ಸ್ಯರೂಪಿಯಾದ ಹರಿಯನ್ನು ಸ್ಮರಿಸಿದನು.

೬೭. ಆಗ ಜಲರಾಶಿಯಮೇಲೆ ಮತ್ಸ್ಯರೂಪಿಯಾದ ವಿಷ್ಣುವು ಒಂದು ಶೃಂಗವುಳ್ಳವನಾಗಿ ಶಿಖರದೊಂದಿಗಿರುವ ಬೆಟ್ಟದಂತೆ ಗೋಚರಿಸಿದನು.

೬೮-೬೯. ಅನಂತರ ಆ ಮತ್ಸ್ಯರೂಪಿಯಾದ ವಿಷ್ಣುವು, ಮನುವು ಕುಳಿತಿರುವ ನೌಕೆಯ ಬಳಿಗೆ ಬಂದು ಭಯಂಕರವಾದ ಆ ಪ್ರಳಯ ಜಲರಾಶಿಯ ಮೇಲೆ ನೌಕೆಯು ತೇಲುವಂತೆ ಮಾಡಿ ಅಲೆಗಳ ಹೊಡೆತದಿಂದ ಅಲ್ಲೋಲಕಲ್ಲೋಲವಾಗಿರುವ ಆ ಜಲದಲ್ಲಿ ನೌಕೆಯು ಮುಳುಗದಂತೆ ಅದನ್ನು ತನ್ನ ಬೆನ್ನಿನಮೇಲೆ ಧರಿಸಿದನು.

೭೦. ಜಲವೆಲ್ಲವೂ ಚಂಚಲತೆ ಇಲ್ಲದೆ ಶಾಂತವಾಗಲು, ಮನುವು ಹಡಗಿಗೆ ಬಂಧಿಸಿದ ರಜ್ಜುವನ್ನು ತನ್ನ ಶೃಂಗ (ಕೋಡು) ದಲ್ಲಿ ಬಂಧಿಸಿಕೊಂಡು ಒಂದುಸಾವಿರ ದೇವವರ್ಷಗಳಪರ್ಯಂತ ಜಲರಾಶಿಯಲ್ಲಿ ಆ ನೌಕೆಯನ್ನು ನಡೆಸಿದನು.

೭೧. ಮತ್ತು ಆ ನೌಕೆಯನ್ನು ಆದಿನಾರಾಯಣನು ತಾನೇ ಅವಲಂಬನೆಯಾಗಿ ನಿಂತು ಧರಿಸಿದನು. ಜಗತ್ತನ್ನು ಸೃಷ್ಟಿಸುವ ಆದಿಮಾಯೆಯು ಆ ನೌಕೆಯ ಹಗ್ಗದಲ್ಲಿ ಸೇರಿ ಅದನ್ನು ದೃಢವಾಗಿ ಮಾಡಿದಳು.

ತತಃ ಶನೈಃ ಶನೈಸ್ತೋಯೇ ಶೋಷಂ ಗಚ್ಛತಿ ವೈ ಚಿರಾತ್ ।
ಪಶ್ಚಿಮಂ ಹಿಮವಚ್ಛೃಂಗಂ ಸುಮಗ್ನಂ ತೋಯಮಧ್ಯತಃ ॥ ೭೨ ॥

ದ್ವೇ ಸಹಸ್ರೇ ಯೋಜನಾನಾಮುಚ್ಛ್ರಿತಸ್ಯ ಹಿಮಪ್ರಭೋಃ ।
ಪಂಚಾಶತ್ತು ಸಹಸ್ರಾಣಿ ಶೃಂಗಂ ತತ್ತಸ್ಯ ಚೋಚ್ಛ್ರಿತಂ ॥ ೭೩ ॥

ತಸ್ಮಿನ್ ಶೃಂಗೇ ತತೋ ನಾವಂ ಬಧ್ವಾ ಮತ್ಸ್ಯಾತ್ಮಧೃಗ್ಘರಿಃ ।
ಜಗಾಮ ಶೋಷಣಾಯಾಶು ಜಲಾನಾಂ ಜಗತಾಂ ಪತಿಃ ॥ ೭೪ ॥

ಏವಂ ಹಿ ಮತ್ಸ್ಯರೂಪೇಣ ವೇದಾಸ್ತ್ರಾತಾಶ್ಚ ಶಾರ್ಙ್ಗಿಣಾ ।
ಕಪಿಲಸ್ಯ ತು ಶಾಪೇನ ಕೃತ ಅಕಾಲಿಕೋ ಲಯಃ ॥ ೭೫ ॥

ಅಕಾಲಿಕೋಽಯಂ ಪ್ರಳಯೋ ಯತೋ ಭಗವತಾ ಕೃತಃ ।
ಇತಿ ವಃ ಕಥಿತಂ ಸರ್ವಂ ಯಥಾವದ್ದ್ವಿಜಸತ್ತಮಾಃ ॥ ೭೬ ॥

॥ ಇತಿ ಶ್ರೀ ಕಾಲಿಕಾಪುರಾಣೇ ಚತುಸ್ತ್ರಿಂಶೋಽಧ್ಯಾಯಃ ॥

೭೨-೭೩. ಅನಂತರ ಕ್ರಮವಾಗಿ ಜಲವು ಒಣಗುತ್ತಿರಲು ಮತ್ಸ್ಯಮೂರ್ತಿಯಾದ ನಾರಾಯಣನು ಆ ನೌಕೆಯನ್ನು ಹಿಮಾಲಯದ ಪಶ್ಚಿಮಶಿಖರದ ಬಳಿಗೆ ತಂದನು. ಹಿಮಾಲಯಪರ್ವತವು ಸಮುದ್ರಮಟ್ಟದಿಂದ ಎರಡು ಸಾವಿರ ಯೋಜನ ಎತ್ತರವಾಗಿರುತ್ತದೆ. ಅದರಲ್ಲಿ ಐವತ್ತು ಸಾವಿರ ಶಿಖರಗಳಿರುವುವು. ಆ ಶಿಖರಗಳಲ್ಲೆಲ್ಲಾ ಈ ಪಶ್ಚಿಮಶಿಖರವೇ ಎತ್ತರವಾದುದು.

೭೪. ಆ ಹಿಮಾಲಯದ ಪಶ್ಚಿಮದ ಶಿಖರದಲ್ಲಿ ನೌಕೆಯನ್ನು ಬಂಧಿಸಿ ಜಗದೊಡೆಯನಾದ ಮತ್ಸ್ಯರೂಪೀ ವಿಷ್ಣುವು ಮೂರುಲೋಕಗಳಲ್ಲಿಯೂ ತುಂಬಿರುವ ಆ ಜಲವನ್ನು ಶೋಷಿಸಲು ಹೊರಟುಹೋದನು.

೭೫. ಹೀಗೆ ಮತ್ಸ್ಯರೂಪವನ್ನು ಧರಿಸಿ ನಾರಾಯಣನು ವೇದಗಳನ್ನು ರಕ್ಷಿಸಿದನು. ಕಪಿಲಮುನಿಯ ಶಾಪದಿಂದ ಅಕಾಲದಲ್ಲಿ ಪ್ರಳಯವು ಆಯಿತು.

೭೬. ಎಲೈ ಬ್ರಾಹ್ಮಣೋತ್ತಮರೇ! ಭಗವಂತನಾದ ಯಜ್ಞವರಾಹ ಮೂರ್ತಿಯು ಅಕಾಲದಲ್ಲಿ ಪ್ರಳಯವನ್ನೇಕೆ ಉಂಟುಮಾಡಿದನೆಂಬುದಕ್ಕೆ ಕಾರಣವನ್ನು ನಡೆದಂತೆ ಹೇಳಿರುವೆನು.

ಇಲ್ಲಿಗೆ ಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ಅಥ ಶ್ರೀ ಕಾಲಿಕಾಪುರಾಣೇ ಪಂಚತ್ರಿಂಶೋಧ್ಯಾಯಃ॥

॥ ಮಾರ್ಕಂಡೇಯ ಉವಾಚ ॥

ಯಥಾ ಪುನರಭೂತ್ಸೃಷ್ಟಿರಕಾಲಪ್ರಳಯೇ ಗತೇ ।
ಯೇನ ಚೈವೋದ್ಧೃತಾ ಪೃಥ್ವೀ ತಚ್ಛೃಣ್ವಂತು ದ್ವಿಜೋತ್ತಮಾಃ ॥ ೧ ॥

ವ್ಯತೀತೇ ಪ್ರಳಯೇ ವಿಷ್ಣುಃ ಕೂರ್ಮರೂಪೀ ಮಹಾಬಲಃ ।
ಪೃಷ್ಠೇ ನಿಧಾಯ ಪೃಥಿವೀಮುದ್ಧೃತ್ಯಾಥ ಸಪರ್ವತಾಂ ॥ ೨ ॥

ಸಮಾಂ ಚಕಾರ ಸಕಲಾಂ ಪೂರ್ವವತ್ಪರಮೇಶ್ವರಃ ।
ಶರಭಸ್ಯ ವರಾಹಸ್ಯ ತತ್ಸುತ್ರಾಣಾಂ ಪದಕ್ರಮೈಃ ॥ ೩ ॥

ಯತ್ರ ಭೂಮಿರ್ವಿಶೀರ್ಣಾಭೂತ್ತಾಂ ಸಮಾಂ ಕಮಠೋಽಕರೋತ್ ।
ಕೃತ್ವಾ ಸಮಂ ತತೋ ಭೂಮಿಂ ಪೂರ್ವತ್ಪರಮೇಶ್ವರಃ ॥ ೪ ॥

॥ ಮೂವತ್ತೈದನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು :-ಎಲೈ ಬ್ರಾಹ್ಮಣೋತ್ತಮರೇ ! ಹೀಗೆ ಅಕಾಲದಲ್ಲಿ ಪ್ರಳಯವಾದಮೇಲೆ ತಿರುಗಿ ಸೃಷ್ಟಿಯು ಹೇಗಾಯಿತು ? ಯಾರು ಭೂಮಿಯನ್ನು ಉದ್ಧರಿಸಿದರು ? ಎಂಬುದನ್ನು ಹೇಳುವೆನು ಕೇಳಿರಿ.

೨-೩. ಪ್ರಳಯವು ಕಳೆಯಲು ಪರಮೇಶ್ವರನೆಂದ ವಿಷ್ಣುವು ಬಲಿಷ್ಠವಾದ ಕೂರ್ಮ (ಆಮೆ) ರೂಪವನ್ನು ಧರಿಸಿ ನೀರಿನಲ್ಲಿ ಮುಳುಗಿರುವ ಬೆಟ್ಟಗಳೊಡನೆ ಭೂಮಿಯನ್ನು ತನ್ನ ಬೆನ್ನಿನಮೇಲಿಟ್ಟುಕೊಂಡು ಮೇಲಕ್ಕೆ ತಂದು ಅದು ಮೊದಲು ಯಾವ ರೀತಿಯಾಗಿದ್ದಿತೋ ಅದರಂತೆ ಸರಿಯಾಗಿ ಮಾಡಿದನು.

೪. ಯುದ್ಧಕಾಲದಲ್ಲಿ ಶರಭ, ಆದಿವರಾಹ, ಸುವೃತ್ತನೇ ಮೊದಲಾದ ಆದಿವರಾಹನ ಮಕ್ಕಳು ಇವರ ಪಾದಪ್ರಹಾರಗಳಿಂದ ಭೂಮಿಯು ಎಲ್ಲೆಲ್ಲಿ ಶೀರ್ಣ (ಹಳ್ಳ) ವಾಗಿತ್ತೋ ಅದನ್ನೆಲ್ಲಾ ಆ ಕೂರ್ಮರೂಪಿಯು ಸಮವಾಗಿ ಮಾಡಿದನು.

ಅನಂತಂ ಧಾರಯಾಮಾಸ ಪೃಥಿವೀತಲಸಂಶ್ರಿತಂ ।
ತತೋ ಬ್ರಹ್ಮಾ ಚ ವಿಷ್ಣುಶ್ಚ ಹರಶ್ಚ ಪರಮೇಶ್ವರಃ ॥ ೫ ॥

ನಾವೋದರಸ್ಥಾನ್ ಸಪ್ತ ಮುನೀನ್ ಮನುಂ ಸ್ವಾಯಂಭುವಂ ತದಾ ।
ನರನಾರಾಯಣೌ ಚೋಭೌ ದಕ್ಷಂ ಚೋಚುಃ ಸಮಾಗತಾಃ ॥ ೬ ॥

ಶೃಣ್ವಂತು ಮುನಯಃ ಸರ್ವೇ ನರನಾರಾಯಣೌ ತಥಾ ।
ದಕ್ಷ ಸ್ವಾಯಂಭುವಮನೋ ವಯಂ ಬ್ರೂಮೋಽಧುನಾ ಚ ಯತ್ ॥ ೭ ॥

ಸೃಷ್ಟಿರ್ನಷ್ಟಾ ವರಾಹಸ್ಯ ಶರಭಸ್ಯ ಚ ಸಂಗರಾತ್ ।
ಅತೋಽಸ್ಮಾಕಂ ಯಥಾ ಕಾರ್ಯಾ ಸೃಷ್ಟಿರಾಕರ್ಣಯಂತು ತತ್ ॥ ೮ ॥

ನರನಾರಾಯಣಾವೇತೌ ಸೃಷ್ಟ್ಯರ್ಥಂ ಸಮುಪಸ್ಥಿತೌ ।
ಸಂಸ್ಥಾಪನಾಯ ದೇವಾನಾಂ ಪರಮಂ ತಪ್ಯತಾಂ ತಪಃ ॥ ೯ ॥

---

೫. ಪರಮೇಶ್ವರನಾದ ಕೂರ್ಮರೂಪೀ ನಾರಾಯಣನು ಮೊದಲಿನಂತೆ ಭೂಮಿಯನ್ನು ಸಮವಾಗಿ ಮಾಡಿ ಭೂಮಿಯ ಕೆಳಗೆ ಭೂಮಿಯನ್ನು ಧರಿಸಿ ನಿಂತಿರುವ ಆದಿಶೇಷನನ್ನು ಧರಿಸಿದನು.

೬. ಅನಂತರ, ಬ್ರಹ್ಮ, ವಿಷ್ಣು ಮತ್ತು ಪರಮೇಶ್ವರನಾದ ಹರನೂ ಸಹ ಹಿಮಾಲಯದ ಶಿಖರದಲ್ಲಿ ಬಂಧಿಸಿದ್ದ ನೌಕೆಯಲ್ಲಿರುವ ಸಪ್ತಮುನಿಗಳನ್ನೂ, ಸ್ವಾಯಂಭುವಮನುವನ್ನೂ, ನರ ಮತ್ತು ನಾರಾಯಣಮುನಿ, ದಕ್ಷಬ್ರಹ್ಮ ಇವರುಗಳನ್ನು ಕುರಿತು ಹೀಗೆ ಹೇಳಿದರು.

೭. ಎಲೈ ನರನಾರಾಯಣರಾದಿಯಾದ ಮುನಿಗಳೇ, ದಕ್ಷಬ್ರಹ್ಮ ಮತ್ತು ಸ್ವಾಯಂಭುವಮನುವೆ, ನೀವೆಲ್ಲರೂ ತ್ರಿಮೂರ್ತಿಗಳಾದ ನಾವು ಈಗ ಹೇಳುವುದನ್ನು ಕೇಳಿರಿ.

೮. ಆದಿವರಾಹಮೂರ್ತಿ ಮತ್ತು ಶರಭರೂಪಿಯಾದ ಶಂಕರ ಇವರ ಯುದ್ಧದಿಂದ ಜಗತ್ತೆಲ್ಲವೂ ನಷ್ಟವಾಗಿರುವುದು. ಆದಕಾರಣ ಮುಂದೆ ಸೃಷ್ಟಿಯು ಹೇಗೆ ಆಗಬೇಕೆಂಬುದನ್ನು ನಾವು ಹೇಳುವೆವು ಕೇಳಿರಿ.

೯, ಎಲೈ ನರ ಮತ್ತು ನಾರಾಯಣಮುನಿಗಳೇ! ನೀವು ಸೃಷ್ಟಿಗಾಗಿಯೂ ದೇವತೆಗಳು ಸುಖವಾಗಿರುವುದಕ್ಕಾಗಿಯೂ ಮಹತ್ತಾದ ತಪಸ್ಸನ್ನಾಚರಿಸಿರಿ.

ಆಪ್ಯಾಯ್ಯ ತಪಸಾ ಚೋಭೌ ಜನಲೋಕಗತಾನ್ ಸುರಾನ್ ।
ಆನಯಂತ್ವಪರಾನ್ ಶಶ್ವತ್ಸಂಸೃಜಂತು ಗಣಾನ್ ಬಹೂನ್ ॥ ೧೦ ॥

ನಕ್ಷತ್ರಾಣಿ ಗ್ರಹಾಂಶ್ಚೈವ ತೇಷಾಂ ಸ್ಥಾನಾನಿ ವೈ ಮುನೇ ।
ಏತಯೋಸ್ತಪಸಾ ಯಾಂತು ಸ್ಥಿರತಾಂ ಪೂರ್ವವನ್ಮನೋ ॥ ೧೧ ॥

ಸೂರ್ಯಸ್ಯ ರಥಸಂಸ್ಥಾನಂ ತಥಾ ಚಂದ್ರರಥಸ್ಥಿತಿಂ ।
ಕರೋತ್ವಯಂ ಮಹಾಭಾಗಃ ಸ್ವಯಮೇವ ಜನಾರ್ದನಃ ॥ ೧೨ ॥

ಪೃಥಿವ್ಯಾಂ ಸರ್ವಬೀಜಾನಿ ಸ್ವಾಯಂಭುವಮನೋ ತ್ವಯಾ ।
ಉಪ್ಯತಾಂ ಸರ್ವತಃ ಸಸ್ಯಪೂರ್ಣಾ ಭವತು ಮೇದಿನೀ ॥ ೧೩ ॥

ಪ್ರರೋಹಯೌಷಧೀರ್ವೃಕ್ಷಾನ್ ಲತಾವಲ್ಲೀಶ್ಚ ಸರ್ವತಃ ।
ಸ್ವಾಯಂಭುವ ಮಹಾಂತ್ಯೇತತ್ಪ್ರಾಪ್ತಾನ್ಯೃತುಫಲಾನಿ ಚ ॥ ೧೪ ॥

---

೧೦. ನೀವೀರ್ವರೂ ತಪಸ್ಸಿನಿಂದ ಭೂಲೋಕದಲ್ಲಿರುವ ದೇವತೆಗಳನ್ನು ಸಂತೋಷಗೊಳಿಸಿ (ಸ್ವರ್ಗಕ್ಕೆ) ಕರೆದುಕೊಂಡುಬನ್ನಿರಿ. ಅಲ್ಲದೇ ಇನ್ನೂ ಕೆಲವು ದೇವತಾಗಣಗಳನ್ನು ಸೃಜಿಸಿರಿ.

೧೧. ಮತ್ತು ನಕ್ಷತ್ರಗಳನ್ನೂ, ಗ್ರಹಗಳನ್ನೂ, ಅವುಗಳಿಗೆ ಸ್ಥಾನಗಳನ್ನೂ ಮೊದಲಿನಂತೆ ಸೃಷ್ಟಿಸಿರಿ.

೧೨. ಅಲ್ಲದೆ ಎಲೈ ಮನುವೇ ! ಈ ನರನಾರಾಯಣರ ತಪಸ್ಸಿನಿಂನ ಸೂರ್ಯ ಚಂದ್ರರ ರಥಸ್ಥಿತಿಯು ಮೊದಲಿನಂತೆ ದೃಢವಾಗುವುದು.

೧೩. ಎಲೈ ಸ್ವಾಯಂಭುವಮನುವೇ ! ನೀನು ಭೂಮಿಯಲ್ಲಿ ಎಲ್ಲಾ ಸಸ್ಯಗಳ ಬೀಜಗಳನ್ನೂ ಬಿತ್ತುವವನಾಗು. ಅದರಿಂದ ಭೂಮಿಯ ಎಲ್ಲೆಡೆಯಲ್ಲಿಯೂ ಸಸ್ಯಪೂರ್ಣವಾಗಲಿ.

೧೪. ಮತ್ತು ವನಸ್ಪತಿಗಳನ್ನೂ, ಮರಗಳನ್ನೂ, ಲತೆಗಳನ್ನೂ ಎಲ್ಲೆಡೆಯಲ್ಲಿ ಬೆಳೆಯಿಸು. ಅದಕ್ಕನುಕೂಲವಾಗಿ ಈ ಋತುಫಲಗಳು ಸಿದ್ಧವಾಗಿರುವುವು.

ದಕ್ಷಃ ಸಪ್ತಮುನೀಂದ್ರೈಸ್ತು ಯಜ್ಞೇನ ಯಜತಾಂ ಹರಿಂ ।
ವರಾಹಪುತ್ರದೇಹೋತ್ಥಮಗ್ನಿತ್ರಯಮಿದಂ ಯಜನ್ ॥ ೧೫ ॥

ಅಸೌ ಯಜ್ಞೋ ವರಾಹಸ್ಯ ದೇಹಾಜ್ಜಾತಸ್ತು ಸೃಷ್ಟಯೇ ।
ಅನೇನೈವ ತು ಯಜ್ಞೇನ ದಕ್ಷಃ ಸೃಷ್ಟಿಂ ತನೋತ್ವಿಮಾಂ ॥ ೧೬ ॥

ನರನಾರಾಯಣಾಭ್ಯಾಂ ತು ಮುನಿಭಿಃ ಸಪ್ತಭಿಸ್ತಥಾ ।
ದಕ್ಷೇಣ ಭವತಾ ಚಾಽಪಿ ಯಜ್ಞೇನೈಭಿಸ್ತಥಾಗ್ನಿಭಿಃ ॥ ೧೭ ॥

ಸಂಪೂರ್ಯತಾಮಿಯಂ ಸೃಷ್ಟಿಃ ಸ್ವರ್ಗೇ ಭುವಿ ರಸಾತಲೇ ।
ವಯಂ ಚ ಸೃಷ್ಟಿಮಾಪ್ಯಾಯ್ಯ ಯಥಾ ಸಂಪಾದ್ಯತೇ ತ್ವಿಯಂ ॥ ೧೮ ॥

ಯತಿಷ್ಯಾಮಸ್ತಥಾ ನಿತ್ಯಂ ಯೂಯಂ ಕುರುತ ಸರ್ಜನಂ ।
ತತಃ ಸಂಪಾದ್ಯತಾಂ ಸೃಷ್ಟಿರ್ಯಥಾ ಪೂರ್ವಂ ತಥೈವ ಚ ॥ ೧೯ ॥

---

೧೫. ದಕ್ಷಬ್ರಹ್ಮನು ಸಪ್ತಋಷಿಗಳೊಡನೆ ಆದಿವರಾಹಪುತ್ರರ ಶರೀರಗಳಿಂದ ಜನಿಸಿದ ಆಹವನೀಯವೇ ಮೊದಲಾದ ಮೂರು ಅಗ್ನಿಗಳಲ್ಲಿ ಹರಿಯನ್ನು ದ್ವೇಶಿಸಿ ಯಾಗವನ್ನು ಮಾಡಲಿ.

೧೬. ಈ ಯಜ್ಞವು ಸೃಷ್ಟಿಗಾಗಿ ಆದಿವರಾಹನ ಶರೀರದಿಂದ ಜನಿಸಿದುದು. ಈ ಯಜ್ಞದಿಂದಲೇ ದಕ್ಷಬ್ರಹ್ಮನು ಸೃಷ್ಟಿಯನ್ನು ವೃದ್ಧಿಗೊಳಿಸಲಿ.

೧೭. ಎಲೈ ಮನುವೇ! ನರನಾರಾಯಣಮುನಿಗಳು, ಸಪ್ತಋಷಿಗಳು, ದಕ್ಷ ಬ್ರಹ್ಮ, ನೀನು, ಯಜ್ಞ ಮತ್ತು ಮೂರು ಅಗ್ನಿಗಳು, ಇವರೆಲ್ಲರೂ ಸ್ವರ್ಗದಲ್ಲಿಯೂ, ಭೂಲೋಕದಲ್ಲಿಯೂ, ಪಾತಾಳದಲ್ಲಿಯೂ ಸೃಷ್ಟಿಯನ್ನು ಬೆಳೆಯಿಸಿರಿ.

೧೮. ತ್ರಿಮೂರ್ತಿಗಳಾದ ನಾವೂ ಸಹ ಸೃಷ್ಟಿಯು ಸರಿಯಾಗಿ ನಡೆಯುವಂತೆ ಯತ್ನಿಸುವೆವು. ಆದಕಾರಣ ನೀವೆಲ್ಲರೂ ನಿತ್ಯವೂ ಸೃಷ್ಟಿಯನ್ನು ಮಾಡಿರಿ.

೧೯. ಎಲೈ ಮನುವೇ! ಮೊದಲು ನೀನು ಬೀಜಗಳನ್ನು ಭೂಮಿಯಲ್ಲಿ ಬಿತ್ತಿ ಬೆಳೆಸುವವನಾಗು. ಅನಂತರ ನೀವೆಲ್ಲರೂ ಮೊದಲಿನಂತೆ ಸೃಷ್ಟಿಯನ್ನು ಮಾಡಿರಿ.

ಪ್ರಥಮಂ ತ್ವಂ ತು ಬೀಜಾನಿ ಪ್ರರೋಪಯ ಮನೋಽಧುನಾ ।

॥ ಮಾರ್ಕಂಡೇಯ ಉವಾಚ ॥

ಇತ್ಯಾದಿಶ್ಯ ಮಹಾಭಾಗಾ ವಿಧಿವಿಷ್ಣುವೃಷಧ್ವಜಾಃ ॥ ೨೦ ॥

ಯಥಾಸ್ಥಾನಂ ಸ್ಥಾಪಯಿತುಂ ಪರ್ವತಾನ್ ಪ್ರಯಯುಸ್ತದಾ ।
ಮೇರುಮಂದರಕೈಲಾಸಹಿಮವತ್ಪ್ರಭೃತಿಷ್ವಥ ॥ ೨೧ ॥

ಪುರಾಣಿ ಸರ್ವದೇವಾನಾಂ ತೇ ವೈ ಚಕ್ರುಃ ಪೃಥಕ್ ಪೃಥಕ್ ।
ಪರಿತ್ಯಜ್ಯ ತತೋ ನಾವಮವಧೃತ್ಯ ವಸುಂಧರಾಂ ॥ ೨೨ ॥

ಸ್ವಾಯಂಭುವಃ ಕ್ಷಿತೌ ಬೀಜಾನ್ಯವಪತ್ಸರ್ವಸಂಪದೇ ।
ತತೋ ವೃಕ್ಷಲತಾವಲ್ಲೀಗುಲ್ಮಾನಿ ಚ ವನಾನಿ ಚ ॥ ೨೩ ॥

ಬಾಲಸಸ್ಯಾನಿ ಧಾನ್ಯಾನಿ ತಥೈವೌಷಧಯಃ ಸಮಾಃ ।
ಬೀಜಕಾಂಡಪ್ರರೋಹಾಶ್ಚ ಪ್ರತಾನಾ ಜಲಜಾನಿ ಚ ॥ ೨೪ ॥

ಪ್ರಸೂಲ್ಲಾನಿ ವಿಕೋಶಾನಿ ಫಲಕಂದದಲಾನಿ ಚ ।
ಬಭೂವುಃ ಶಾದ್ವಲಾನ್ಯೇವ ಸರ್ವೇಷಾಂ ಪ್ರಾಣವೃದ್ಧಯೇ ॥ ೨೫ ॥

---

೨೦. ಮಾರ್ಕಂಡೇಯನು ಹೇಳಿದನು :—ಹೀಗೆ ಅಪ್ಪಣೆಯನ್ನು ಮಾಡಿ, ಬ್ರಹ್ಮ, ವಿಷ್ಣು, ಮಹೇಶ್ವರರು ಬೆಟ್ಟಗಳನ್ನು ಆಯಾಯ ಸ್ಥಾನಗಳಲ್ಲಿ ಸ್ಥಾಪಿಸಲು ಹೊರಟುಹೋದರು.

೨೧. ಮೇರು, ಮಂದರ, ಕೈಲಾಸ, ಹಿಮಾಲಯ ಮೊದಲಾದ ಬೆಟ್ಟಗಳಲ್ಲಿ ದೇವತೆಗಳೆಲ್ಲರಿಗೂ ಬೇರೆಬೇರೆ ನಗರಗಳನ್ನು ಆ ತ್ರಿಮೂರ್ತಿಗಳು ಕಲ್ಪಿಸಿದರು.

೨೨. ಅನಂತರ ಸ್ವಾಯಂಭುವಮನುವು ನೌಕೆಯಿಂದ ಭೂಮಿಗಿಳಿದು ಆ ಭೂಮಿಯಲ್ಲಿ ಸರ್ವವಸ್ತುಸಮೃದ್ಧಿಗಾಗಿ ಬೀಜಗಳನ್ನು ಬಿತ್ತಿದನು.

೨೩—೨೫. ಆಮೇಲೆ ವೃಕ್ಷಗಳು, ಲತೆಗಳು, ಬಳ್ಳಿಗಳು, ವನಗಳು, ಎಳೆಯ ಸಸ್ಯಗಳು, ಧಾನ್ಯಗಳು ಮತ್ತು ಇತರ ಎಲ್ಲಾ ವನಸ್ಪತಿಗಳೂ ಸಹ ಬೀಜಗಳಿಂದ ಮೊಳಕೆಯಾಗಿ ಕಾಂಡ, ಕೊಂಬೆ, ಅಂಕುರ, ಪುಷ್ಪ, ಬೀಜ, ಫಲ, ಕಂದಮೂಲ ಇವುಗಳಿಂದಲೂ, ಎಳೆಯ ಹಸುರಾದ ಹುಲ್ಲುಗಳಿಂದಲೂ ಕಂಗೊಳಿಸುತ್ತಾ ಸಕಲ ಪ್ರಾಣಿಗಳ ಜೀವನಕ್ಕಾಗಿ ಅಭಿವೃದ್ಧಿಗೊಂಡವು.

ಪೃಥಿವೀ ಸಸ್ಯಸಂಪನ್ನಾ ವೃಕ್ಷಾಸ್ತೇ ಶಾದ್ವಲಾಃ ಶುಭಾಃ ।
ದೃಷ್ಟಾಃ ಪೂರ್ವಂ ಯಥಾ ತಸ್ಮಾನ್ಮನುನಾ ಚಿತ್ತಹರ್ಷಿಣಾ ॥ ೨೬ ॥

ತತೋ ನರೋ ಮಹಾಯೋಗೀ ತಪಸ್ತೇಪೇ ಮಹತ್ತಮಂ ।
ನಾರಾಯಣಶ್ಚ ದೇವಾನಾಂ ಭಾವನಾಯ ಮಹಾಮತಿಃ ॥ ೨೭ ॥

ನಾರಾಯಣೋ ನರಶ್ಚೋಭೌ ಪರಮಾವೃಷಿಸತ್ತಮೌ ।
ತಪಸಾರಾಧ್ಯ ಪರಮಂ ತೇಜೋಮಯಮನಾಮಯಂ ॥ ೨೮॥

ಅನಿನ್ಯಾತೇ ಜಲಗತಾನ್ ದೇವಾನ್ ದೇವರ್ಷಿಸತ್ತಮಾನ್ ।
ಯೇ ಮೃತಾ ಅಮರಾಃ ಪೂರ್ವಂ ಗಣಶಸ್ತಾನ್ ಪೃಥಕ್ ಪೃಥಕ್ ॥ ೨೯ ॥

ತಪೋಬಲೇನ ಮಹತಾ ಸರ್ಜಯಾಮಾಸತುರ್ಮುನೀ ।
ಸೂರ್ಯಾಚಂದ್ರಮಸೌ ದೇವೌ ದಿಕ್ಪಾಲಾಂಶ್ಚ ತಥಾ ದಶ ॥ ೩೦ ॥

---

೨೬. ಭೂಮಿಯು ಮೊದಲಿನಂತೆ ಸಸ್ಯಪೂರ್ಣವಾಯಿತು. ವೃಕ್ಷಗಳೂ, ಹಸರು ಹುಲ್ಲುಪ್ರದೇಶಗಳೂ ಸಮೃದ್ಧಿಯಾಗಿ ಮೊದಲಿನಂತೆ ಆದುವು. ಇದನ್ನೆಲ್ಲಾ ಮೊದಲಿನಂತೆ ಆದುದ್ದನ್ನು ನೋಡಿ ಮನುವು ತುಂಬಾ ಹರ್ಷಗೊಂಡನು.

೨೭. ಅನಂತರ ಮಹಾಯೋಗಿಯಾದ ನರನೂ, ತುಂಬಾ ಬುದ್ಧಿಶಾಲಿಯಾದ ನಾರಾಯಣಮುನಿಯೂ ಸಹ ದೇವತೆಗಳನ್ನು ಸೃಷ್ಟಿಸಲು ದೊಡ್ಡದಾದ ತಪಸ್ಸನ್ನಾ ಚರಿಸಿದರು.

೨೮. ಋಷಿಶ್ರೇಷ್ಠರಾದ ಆ ನರನಾರಾಯಣರು ತಪಸ್ಸಿನಿಂದ ನಾಶವಿಲ್ಲದುದೂ, ಪ್ರಕಾಶಸ್ವರೂಪವೂ, ಶ್ರೇಷ್ಠವೂ ಅದ ಬ್ರಹ್ಮವಸ್ತುವನ್ನು ಆರಾಧಿಸಿ ನೀರಿನಲ್ಲಿ ಮುಳುಗಿ ಹೋದ ದೇವತೆಗಳನ್ನೂ, ದೇವರ್ಷಿಶ್ರೇಷ್ಠರನ್ನೂ ಮೇಲಕ್ಕೆ ಕರೆತಂದರು.

೨೯. ಹಿಂದೆ ವರಾಹಶರಭಗಳ ಯುದ್ಧಕಾಲದಲ್ಲಿ ಮೃತರಾದ ದೇವತೆಗಳನ್ನು ಬೇರೆಬೇರೆಯಾಗಿಯೂ, ಗುಂಪಾಗಿಯೂ, ಆ ನರನಾರಾಯಣರು ತಮ್ಮ ಮಹತ್ತಾದ ತಪೋಬಲದಿಂದ ಸೃಜಿಸಿದರು.

೩೦. ಜನಾರ್ದನರೂಪಿಯಾದ ಆ ನಾರಾಯಣಮುನಿಯು ಸೂರ್ಯಚಂದ್ರರನ್ನೂ, ಹತ್ತುಜನ ದಿಕ್ಪಾಲಕರನ್ನೂ, ಪಾತಾಳದಲ್ಲಿ ವಾಸಿಸುವ ಕೆಲವು ದೇವತೆಗಳನ್ನೂ ಸೃಷ್ಟಿಮಾಡಿದನು.

ಜನಾರ್ದನಃ ಸ್ವಯಂ ಚಕ್ರೇ ಪಾತಾಲತಲವಾಸಿನಃ ।
ಸೂರ್ಯಾಚಂದ್ರಮಸೋಶ್ಚಕ್ರೇ ರಥಸಂಸ್ಥಾನಮಚ್ಯುತಃ ॥ ೩೧ ॥

ಪೂರ್ವವದ್ದ್ಯೌಜಯಾಮಾಸ ದಿವಾರಾತ್ರಸ್ಥಿತೌ ಚ ತೌ ।
ಓಷಧೀಷು ಚ ಜಾತಾಸು ಯಜ್ಞವೃಕ್ಷೇಷು ಸತ್ತಮಾಃ ॥ ೩೨ ॥

ಸಸ್ಯಬೀಜೇಷು ಜಾತೇಷು ದೇವೇಷು ಚ ಪೃಥಕ್ ಪೃಥಕ್ ।
ದಕ್ಷಃ ಕರ್ತುಂ ಸಮಾರೇಭೇ ಜ್ಯೋತಿಷ್ಟೋಮಂ ಮಹಾಧ್ವರಂ ॥ ೩೩ ॥

ಕಶ್ಯಪೋಽತ್ರಿರ್ವಸಿಷ್ಠಶ್ಚ ವಿಶ್ವಾಮಿತ್ರೋಽಥಗೌತಮಃ ।
ಜಮದಗ್ನಿರ್ಭರದ್ವಾಜ ಏತೇ ಸಪ್ತರ್ಷಯೋಽಮಲಾಃ ॥ ೩೪ ॥

ಏತೈಃ ಸಪ್ತಮುನೀಂದ್ರೈಸ್ತು ದಕ್ಷೋ ಬ್ರಹ್ಮಸುತಃ ಸ್ವಯಂ ।
ಮಹಾಯಜ್ಞಂ ತತಶ್ಚಕ್ರೇ ಯಾವದ್ದ್ವಾದಶ ವತ್ಸರಾನ್ ॥ ೩೫ ॥

ಹೂಯಮಾನೇಷು ತತ್ರೈವ ತ್ರಿಷ್ವಗ್ನಿಷು ಪುನಃ ಪುನಃ ।
ಇಜ್ಯಮಾನೇ ವರಾಹೇ ತು ಯಜ್ಞರೂಪೇ ತದಾ ದ್ವಿಜೈಃ ॥ ೩೬ ॥

---

೩೧. ಹಗಲೂ ಮತ್ತು ರಾತ್ರಿಯಲ್ಲಿ ಕ್ರಮವಾಗಿ ಸಂಚರಿಸುವಂತಹ ಸೂರ್ಯ ಚಂದ್ರರ ರಥಗಳ ಸ್ಥಿತಿಯನ್ನು ಆ ನಾರಾಯಣಮುನಿಯು ಮೊದಲಿನಂತೆ ಕ್ರಮಪಡಿಸಿದನು (ಸೇರಿಸಿದನು).

೩೨-೩೩. ಹೀಗೆ ವನಸ್ಪತಿಗಳೂ, ಯಜ್ಞವೃಕ್ಷಗಳೂ, ಸಸ್ಯ ಮತ್ತು ಬೀಜಗಳೂ, ದೇವತೆಗಳೂ ಸಹ ಬೇರೆಬೇರೆ ಜನಿಸಲಾಗಿ ದಕ್ಷಬ್ರಹ್ಮನು ಜ್ಯೋತಿಷ್ಟೋಮವೆಂಬ ದೊಡ್ಡ ಯಾಗವನ್ನು ಮಾಡಲು ಪ್ರಾರಂಭಿಸಿದನು.

೩೪. ಕಶ್ಯಪ, ಅತ್ರಿಮುನಿ, ವಸಿಷ್ಠಮುನಿ, ವಿಶ್ವಾಮಿತ್ರಋಷಿ, ಗೌತಮಮುನಿ, ಜಮದಗ್ನಿಋಷಿ, ಭರದ್ವಾಜಋಷಿ, ಈ ಏಳುಜನರೇ ಪವಿತ್ರರಾದ ಸಪ್ತಋಷಿಗಳು.

೩೫. ಈ ಏಳು ಋಷಿಗಳೊಡನೆ ಬ್ರಹ್ಮಮಾನಸಪುತ್ರನಾದ ದಕ್ಷಬ್ರಹ್ಮನು, ಹನ್ನೆರಡುವರ್ಷಗಳ ಪರ್ಯಂತರ ನಡೆಯುವ ಜ್ಯೋತಿಷ್ಟೋಮವೆಂಬ ಮಹಾಯಜ್ಞವನ್ನು ಮಾಡಿದನು.

೩೬. ಎಲೈ ಬ್ರಾಹ್ಮಣೋತ್ತಮರೇ! ಆಹವನೀಯವೇ ಮೊದಲಾದ ಮೂರು ಅಗ್ನಿಗಳಲ್ಲಿ ಬ್ರಾಹ್ಮಣರು ಶಾಸ್ತ್ರಕ್ರಮದಿಂದ ಆಹುತಿಯನ್ನು ಕೊಟ್ಟು ಆದಿವರಾಹರೂಪ

ಚತುರ್ವಿಧಾಃ ಪ್ರಜಾ ಜಾತಾ ಯಜ್ಞಾದೇವ ದ್ವಿಜೋತ್ತಮಾಃ ।
ತತೋ ದಕ್ಷಸ್ಯ ಸಂಜಾತಾಃ ಪುತ್ರ್ಯಃ ಪುಣ್ಯಾಸ್ತ್ರಯೋದಶ ॥ ೩೭ ॥

ಸುರೂಪಗಣಸಂಪನ್ನಾಃ ಸೃಷ್ಟ್ಯರ್ಥಮಮಿತಪ್ರಜಾಃ ।
ತಾಃ ಪುತ್ರೀಃ ಪ್ರದದೌ ದಕ್ಷಃ ಕಶ್ಯಪಾಯ ಮಹಾತ್ಮನೇ ॥ ೩೮ ॥

ತಾಭ್ಯೋ ಜಾತಾಶ್ಚ ಬಹವಃ ತೈರ್ವ್ಯಾಪ್ತಂ ಸಕಲಂಜಗತ್ ।
ಸ ಸರ್ವಾಸಾಂ ಪ್ರಜಾನಾಂತು ಕಶ್ಯಪೋ ಜನಕೋಽಭವತ್ ॥ ೩೯ ॥

ನಿಶ್ಚಿತಂ ಮುನಿಶಾರ್ದೂಲಾಃ ಕಶ್ಯಪಾತ್ಸಕಲಂ ಜಗತ್ ।
ತಾಸಾಂ ನಾಮಾನಿ ತಜ್ಜಾತಾಃ ಪ್ರಜಾಃ ಸರ್ವಾಃ ಪೃಥಕ್ ಪೃಥಕ್ ॥ ೪೦ ॥

ಶೃಣ್ವಂತು ಮುನಯಃ ಸರ್ವೇ ಸಮ್ಯಕ್ಕಥಯತೋ ಮಮ ।
ಅದಿತಿರ್ದಿತಿರ್ದನುಃ ಕಾಲಾ ದನಾಯುಃ ಸಿಂಹಿಕಾ ಮುನಿಃ ॥ ೪೧ ॥

ವಾದ ಯಜ್ಞವನ್ನು ನಡೆಸುತ್ತಿರಲು ಆ ಯಜ್ಞದಿಂದ ನಾಲ್ಕುವಿಧವಾದ ಪ್ರಜೆಗಳು ಜನಿಸಿದರು.

೩೭. ಆಗ ದಕ್ಷಬ್ರಹ್ಮನಿಗೆ ಸುಂದರವಾದ ರೂಪ ಮತ್ತು ಒಳ್ಳೆಯ ಗುಣಗಳುಳ್ಳ ಹದಿಮೂರುಜನ ಪುತ್ರಿಯರು ಸೃಷ್ಟಿಗಾಗಿ ಜನಿಸಿದರು.

೩೮. ಆ ಹದಿಮೂರು ಪುತ್ರಿಯರನ್ನು ದಕ್ಷನು ಮಹಾತ್ಮನಾದ ಕಶ್ಯಪಬ್ರಹ್ಮನಿಗೆ ಮದುವೆ ಮಾಡಿಕೊಟ್ಟನು. ಆ ಪುತ್ರಿಯರಿಂದ ಮುಂದೆ ಅನೇಕ ಪ್ರಜೆಗಳು ಜನಿಸಿ ಅವರಿಂದ ಜಗತ್ತೆಲ್ಲ ತುಂಬಿಹೋಯಿತು.

೩೯. ಆ ಎಲ್ಲಾ ಪ್ರಜೆಗಳಿಗೂ ಕಶ್ಯಪನು ಜನಕ (ತಂದೆ) ನಾದನು. ಎಲೈ ಮುನಿಶ್ರೇಷ್ಠರೇ! ಹೀಗೆ ಕಶ್ಯಪನಿಂದಲೇ ಸಕಲ ಜಗತ್ತೂ ಸೃಷ್ಟಿಯಾಯಿತು.

೪೦. ಆ ಕಶ್ಯಪ ಪತ್ನಿಯರ ಹೆಸರುಗಳನ್ನೂ, ಅವರಿಂದ ಜನಿಸಿದ ಪ್ರಜೆಗಳ ಹೆಸರುಗಳನ್ನೂ ಬೇರೆಬೇರೆಯಾಗಿ ಹೇಳುವೆನು. ಎಲೈ ಮುನಿಗಳೇ! ಸಾವಧಾನವಾಗಿ ಕೇಳಿರಿ.

೪೧-೪೨. ಅದಿತಿ, ದಿತಿ, ದನು, ಕಾಲಾ, ದನಾಯುಸ್ಸು, ಸಿಂಹಿಕಾ, ಮುನಿ, ಕಪಿಲೇ, ಕ್ರೋಧಾ, ಪ್ರಧಾ, ವರಿಷ್ಠಾ, ವಿನತಾ, ಕದ್ರೂ, ಈ ಹದಿಮೂರುಜನಗಳೇ ದಕ್ಷಬ್ರಹ್ಮನ ಪುತ್ರಿಯರು.

ಕ್ರೋಧಾ ಪ್ರಧಾ ವರಿಷ್ಠಾ ಚ ವಿನತಾ ಕಪಿಲಾ ತಥಾ ।
ಕದ್ರೂಸ್ತ್ವಂಯೋದಶಸುತಾ ಏತಾ ದಕ್ಷಸ್ಯ ಕೀರ್ತಿತಾಃ ॥ ೪೨ ॥

ಸಂಜಾತೋ ದಕ್ಷಿಣಾಂಗುಷ್ಠಾನ್ಮನಸಾ ಧ್ಯಾಯತೋ ವಿಧೇಃ ।
ತೇನ ದೇವಮನುಷ್ಯೇಷು ದಕ್ಷ ಇತ್ಯೇಷ ಕಥ್ಯತೇ ॥ ೪೩ ॥

ಬ್ರಹ್ಮಣೋ ಮಾನಸಾ ಪುತ್ರಾ ದಶ ಪೂರ್ವಂ ಪ್ರಕೀರ್ತಿತಾಃ ।
ತೇಷಾಂ ಷಟ್ ಸೃಷ್ಟಿಕರ್ತಾರೋ ವ್ಯತಿತೇಷ್ವಿನ್ ಜನಕ್ಷಯೇ ॥ ೪೪ ॥

ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ।
ಮರೀಚೇಸ್ತನಯೋ ಜಾತಃ ಕಶ್ಯಪೋ ಲೋಕಭಾವನಃ ॥ ೪೫ ॥

ಅಸ್ಯೈವ ದಕ್ಷಕನ್ಯಾಭ್ಯಃ ಪ್ರಜಾ ಜಜ್ಞೇಽಥ ಭೂರಿಶಃ ।
ಅಸ್ಯ ಜಾಯಾಪ್ರಜಾತಾನಾಂ ನಾಮತೋ ವಿನಿಬೋಧತ ॥ ೪೬ ॥

ಧಾತಾ ಮಿತ್ರೋಽರ್ಯಮಾ ಶಕ್ರೋ ವರುಣಃ ಸೋಮ ಏವಚ ।
ಭಗೋ ವಿವಸ್ವಾನ್ ಪೂಷಾ ಚ ಸವಿತೃತ್ವಷ್ಟೃವಿಷ್ಣವಃ ॥ ೪೭ ॥

---

೪೩. ಮನಸ್ಸಿನಲ್ಲಿ ಧ್ಯಾನಾಸಕ್ತನಾಗಿರುವಾಗ ಬ್ರಹ್ಮನ ದಕ್ಷಿಣ ಹೆಬ್ಬೆರಳಿನಿಂದ ಈ ದಕ್ಷನು ಜನಿಸಿದುದರಿಂದ ಅವನಿಗೆ ದೇವಮನುಷ್ಯರಲ್ಲಿ "ದಕ್ಷ"

೪೪. ಹತ್ತುಜನ ಬ್ರಹ್ಮಮಾನಸಪುತ್ರರನ್ನು ಹಿಂದೆ ಹೇಳಿರುವೆನು. ಅವರಲ್ಲಿ ಆರುಜನಗಳು ಕಳೆದ ಪ್ರಳಯದಲ್ಲಿ ಸೃಷ್ಟಿಕರ್ತೃಗಳು,

೪೫. ಮರೀಚಿ, ಅತ್ರಿಮುನಿ, ಅಂಗಿರಸ್ಸು, ಪುಲಸ್ತ್ಯ, ಪುಲಹ, ಕ್ರತು, ಈ ಆರುಜನ ಮಾನಸಪುತ್ರರೇ ಸೃಷ್ಟಿಕರ್ತೃಗಳು. ಅವರಲ್ಲಿ ಮರೀಚಿಯಿಂದ ಸಕಲ

೪೬. ಈ ಕಶ್ಯಪಬ್ರಹ್ಮನಿಗೇನೇ ಅವನ ಪತ್ನಿಯರಾದ ಹದಿಮೂರು ಜನ ದಕ್ಷಪುತ್ರಿಯರಿಂದ ಅನೇಕ ಪ್ರಜೆಗಳು ಜನಿಸಿದರು. ಈ ಕಶ್ಯಪನ ಪತ್ನಿಯರಿಂದ ಜನಿಸಿದವರ ಹೆಸರುಗಳನ್ನು ನಿರ್ದೇಶಿಸಿ ಹೇಳುವೆನು ಕೇಳಿ.

೪೭. ಧಾತೃ, ಮಿತ್ರ, ಆರ್ಯಮಾ, ಇಂದ್ರ, ವರುಣ, ಚಂದ್ರ, ಭಗ, ಸೂರ್ಯ, ಪೂಷಾ, ಸವಿತೃ, ತ್ವಷ್ಟೃ, ವಿಷ್ಣು, ಈ ಹನ್ನೆರಡುಜನಗಳು ಅದಿತಿಯಿಂದ ಜನಿಸಿದರು. ಆ ಕಾರಣ ಇವರಿಗೆ ಆದಿತ್ಯರೆಂದು ಹೆಸರು.

ಅದಿತೇರ್ದ್ವಾದಶ ಸುತಾ ಆದಿತ್ಯಾಸ್ತೇ ಪ್ರಕೀರ್ತಿತಾಃ ।
ತೇಷಾಂ ಕನೀಯಾನ್ ಗುಣವಾನ್ ಸದಾ ಯಸ್ತಪತಿ ಪ್ರಜಾಃ ॥ ೪೮ ॥

ಸ ವೈ ವಂಶಕರೋ ಮುಖ್ಯೋ ಗದ್ಯತೇ ವೋ ದಿವಾಕರಃ ।
ಏಕ ಏವ ದಿತೇಃ ಪುತ್ರೋ ಹಿರಣ್ಯಕಶಿಪುರ್ಬಲೀ ॥ ೪೯ ॥

ಚತ್ವಾರಸ್ತಸ್ಯ ತನಯಾ ಹೃಷ್ಟಾ ಮದಬಲಾನ್ವಿತಾಃ ।
ಪ್ರಹ್ಲಾದೋಽಸ್ಯಥ ಸಂಹ್ರಾದೋ ಬಾಷ್ಕಲಃ ಶಿಬಿರೇವಚ ॥ ೫೦ ॥

ಪ್ರಹ್ಲಾದಸ್ಯ ತ್ರಯಃ ಪುತ್ರಾಸ್ತೇಷಾಮಾದ್ಯೋ ವಿರೋಚನಃ ।
ಕುಂಭೋ ನಿಕುಂಭೋ ಬಲವಾಂಸ್ತ್ರಯಃ ಪ್ರಹ್ಲಾದಯಃ
[ಸ್ಮೃತಾಃ ॥ ೫೧ ॥

ವಿರೋಚನಸುತೋ ಜಾತೋ ದಾನಶೌಂಡೋ ಬಲಿರ್ಮಹಾನ್ ।
ಬಲೇಶ್ಚ ಪುತ್ರೋ ವಿದಿತೋ ಬಾಣೋ ನಾಮು ಮಹಾಬಲಃ ॥ ೫೨ ॥

---

೪೮. ಈ ಹನ್ನೆರಡು ಆದಿತ್ಯರುಗಳಿಗೆ ಕೊನೆಯವನೂ, ಪ್ರಾಣಿಗಳಿಗೆ ಶಾಖ ಬೆಳಕು ಇವುಗಳನ್ನು ನೀಡುವವನೂ, ಆದ ದಿವಾಕರನು (ಸೂರ್ಯ) ಮುಖ್ಯನು. ಅವನೇನೇ ಮುಂದೆ ಸೂರ್ಯವಂಶವನ್ನು ಸೃಷ್ಟಿಸುವನು.

೪೯-೫೦. ದಿತಿದೇವಿಗೆ ಬಲಿಷ್ಠನಾದ ಹಿರಣ್ಯಕಶಿಪುವೊಬ್ಬನೇ ಮಗನು. ಆ ಹಿರಣ್ಯಕಶಿಪುವಿಗೆ ಪ್ರಹ್ಲಾದ, ಸಂಹ್ರಾದ, ಬಾಷ್ಕಲ, ಶಿಬಿ ಎಂಬ ನಾಲ್ಕುಜನ ಬಲಿಷ್ಠರೂ ಹೃಷ್ಟರೂ ಆದ ಮಕ್ಕಳುಗಳು.

೫೧. ಪ್ರಹ್ಲಾದನಿಗೆ ವಿರೋಚನ, ಕುಂಭ, ನಿಕುಂಭರೆಂಬ ಬಲಿಷ್ಠರಾದ ಮೂವರು ಪುತ್ರರು. ಅವರಲ್ಲಿ ವಿರೋಚನನು ಹಿರಿಯವನು.

೫೨. ವಿರೋಚನನಿಗೆ ದಾನವೀರನೂ, ಬಲಿಷ್ಠನೂ ಸತ್ಪುರುಷನೂ ಆದ ಬಲಿಚಕ್ರವರ್ತಿಯು ಪುತ್ರನು. ಆ ಬಲಿಗೆ ತುಂಬಾ ಬಲಿಷ್ಠನೂ, ಪ್ರಸಿದ್ಧನೂ ಆದ ಬಾಣನು ಪುತ್ರನು.

ಶಂಭೋರನುಚರಃ ಶ್ರೀಮಾನ್ಮಹಾಕಾಲಾಹ್ವಯಸ್ಯಶ್ಚ ಸಃ ।
ಬಾಣಸ್ಯ ಚ ಶತಂ ಪುತ್ರಾಃ ಕುಸುಂಭಮಕರಾದಯಃ ॥ ೫೩ ॥

ಚತ್ವಾರಿಂಶದ್ದನೋಃ ಪುತ್ರಾ ವಿಪ್ರಚಿತ್ತಿಪುರಃಸರಾಃ ।
ಶಂಬರೋ ನಮುಚಿಶ್ಚೈವ ಪುಲೋಮಾ ಚ ತಥೈವ ಚ ॥ ೫೪ ॥

ಅಸಿಲೋಮಾ ತಥಾ ಕೇಶೀ ದುರ್ಜಯೋಽಯಃಶಿರಾಸ್ತಥಾ ।
ಅಶ್ವಶೀರ್ಷೋ ಹ್ಯಯಃಶಂಕುರ್ವಿಯನ್ಮೂರ್ಧಾ ಮಹಾಬಲಃ ॥ ೫೫ ॥

ವೇಗವಾನ್ ಕೇತುಮಾಂಶ್ಚೈವ ಅಯಃ ಸ್ವರ್ಭಾನುರೇವ ಚ ।
ಅಶ್ವೋ ಹ್ಯಶ್ವಪತಿಃ ಕುಂಡೋ ವೃಷಪರ್ವಾಽಜಕಸ್ತಥಾ ॥ ೫೬ ॥

ಅಶ್ವಗ್ರೀವಶ್ಚ ಸೂಕ್ಷ್ಮಶ್ಚ ತುರುಂಡುರ್ಮಾಂಡಲಸ್ತಥಾ ।
ಇಷುರ್ಬಾಹುಶ್ಚೈಕಚಕ್ರೋ ವಿರೂಪಾಕ್ಷೋ ಹರಾಹರೌ ॥ ೫೭ ॥

ನಿಯಂತ್ರಶ್ಚ ನಿಕುಂಭಶ್ಚ ಕೃಪಸುಶ್ಚ ಪಟಸ್ತಥಾ ।
ಸರಭಃ ಶೂಲಭಶ್ಚೈವ ಸೂರ್ಯಚಂದ್ರಮಸೌ ತಥಾ ॥ ೫೮ ॥

---

೫೩. ಆ ಬಾಣನು ಮಹಾಕಾಲನೆಂಬ ಹೆಸರುಳ್ಳ ಶಂಕರನಿಗೆ ಭಕ್ತನು. ಆ ಬಾಣನಿಗೆ ಕುಸುಂಭ ಮತ್ತು ಮಕರನೇ ಮೊದಲಾದ ನೂರು ಜನ ವ ಕ್ಕಳು.

೫೪—೫೮. ದನುದೇವಿಗೆ ವಿಪ್ರಚಿತ್ತಿಯೇ ಮೊದಲಾದ ನಲವತ್ತು ಜನ ಮಕ್ಕಳು, ಅವರಾರೆಂದರೆ:— ೧. ವಿಪ್ರಚಿತ್ತಿ, ೨. ಶಂಬರ, ೩. ನಮುಚಿ, ೪. ಪುಲೋಮಾ, ೫. ಅಸಿಲೋಮ, ೬. ಕೇಶೀ, ೭. ದುರ್ಜಯ, ೮. ಅಯಃಶಿರಾ, ೯. ಅಶ್ವಶೀರ್ಷ, ೧೦. ಅಯಃಶಂಕು, ೧೧. ವಿಯನ್ಮೂರ್ಧಾ, ೧೨. ಮಹಾಬಲ, ೧೩. ವೇಗವಂತ, ೧೪. ಕೇತುಮಂತ, ೧೫. ಅಯಸ್ಸು, ೧೬. ಸ್ವರ್ಭಾನು, ೧೭. ಅಶ್ವ, ೧೮. ಅಶ್ವಪತಿ, ೧೯. ಕುಂಡ, ೨೦. ವೃಷಪರ್ವ, ೨೧. ಅಜಕ, ೨೨. ಅಶ್ವಗ್ರೀವ, ೨೩. ಸೂಕ್ಷ್ಮಾಕ್ಷ, ೨೪. ಚತುರ, ೨೫. ಅಂಡ, ೨೬. ಮಾಂಡಲ, ೨೭. ಇಷು, ೨೮. ಬಾಹು, ೨೯. ಏಕಚಕ್ರ, ೩೦. ವಿರೂಪಾಕ್ಷ, ೩೧. ಹರ, ೩೨. ಆಹರ, ೩೩. ನಿಯಂತ್ರ, ೩೪. ನಿಕುಂಭ, ೩೫. ಕೃಪಸು, ೩೬. ಪಟ, ೩೭. ಸರಭ, ೩೮. ಶೂಲಭ, ೩೯. ಸೂರ್ಯ, ೪೦. ಚಂದ್ರ—ಈ ನಲವತ್ತು ಜನ ಮಕ್ಕಳು.

ಅನ್ಯಾವೇತೌ ದನೋಃ ಪುತ್ರೌ ಸೂರ್ಯಾಚಂದ್ರಮಸೌ ತಥಾ ।
ದಿವಾಕರನಿಶಾನಾಥೌ ತಾವನ್ಯೌ ದೇವಪುಂಗವೌ ॥ ೫೯ ॥

ಏಷಾಂ ಪುತ್ರೈಶ್ಚ ಪೌತ್ರೈಶ್ಚ ತತ್ಪುತ್ರೈಶ್ಚೈವ ಭೂರಿಭಿಃ ।
ಜಗದ್ವ್ಯಾಪ್ತಮಿದಂ ಸರ್ವಂ ಬಲವೀರ್ಯಸಮುನ್ವಿತೈಃ ॥ ೬೦ ॥

ದನಾಯುಷೋಽಭವನ್ಪುತ್ರಾಶ್ಚತ್ವಾರೋ ಬಲವತ್ತರಾಃ ।
ವೀರಭದ್ರೋ ವಿಕ್ಷರಶ್ಚ ವತ್ಸೋ ವೃತ್ತಸ್ತಥೈವ ಚ ॥ ೬೧ ॥

ಏಷಾಂ ಚತುರ್ಣಾಂ ಬಹವಃ ಪುತ್ರಾ ಜಾತಾ ದ್ವಿಜೋತ್ತಮಾಃ ।
ರೂಪಸತ್ತ್ವಬಲೋಪೇತಾ ಏಕೈಕಸ್ಯ ಶತಂ ಶತಂ ॥ ೬೨ ॥

ಕಾಲಾಯಾಸ್ತನಯಾ ಜಾತಾಃ ಕಾಲೇಯಾ ಇತಿ ವಿಶ್ರುತಾಃ ।
ವಿಖ್ಯಾತಾಸ್ತೇ ಮಹಾವೀರ್ಯಾಶ್ಚತ್ವಾರೋ ದಾನವಾಧಿಪಾಃ ॥ ೬೩ ॥

ವಿನಾಶನಶ್ಚ ಕ್ರೋಧಶ್ಚ ಕ್ರೋಧಹಂತಾ ತಥೈವ ಚ ।
ಕ್ರೋಧಶತ್ರುಸ್ತಥೈವೈತೇ ಕಾಲಪುತ್ರಾಃ ಪ್ರಕೀರ್ತಿತಾಃ ॥ ೬೪ ॥

---

೫೯. ದನುದೇವಿಯ ಈ ಸೂರ್ಯಾಚಂದ್ರರು ಬೇರೆ. ದೇವಶ್ರೇಷ್ಠರಾದ ಆ ಸೂರ್ಯಾಚಂದ್ರರು ಬೇರೆ. ಅವರು ಇವರಲ್ಲವು.

೬೦. ಈ ನಲವತ್ತುಜನ ದನುಪುತ್ರರ ಬಲಶಾಲಿಗಳಾದ ಅನೇಕ ಮಕ್ಕಳು ಮಮ್ಮಕ್ಕಳು ಮರಿಮಕ್ಕಳುಗಳಿಂದ ಸಕಲ ಜಗತ್ತೂ ವ್ಯಾಪಿಸಲ್ಪಟ್ಟಿತು.

೬೧. ದನಾಯುಸ್ಸುದೇವಿ (ಕಶ್ಯಪನ ಪತ್ನಿ) ಯಿಂದ ವೀರಭದ್ರ, ವಿಕ್ಷರ, ವತ್ಸ, ವೃತ್ತರೆಂಬ ನಾಲ್ಕುಜನ ಬಲಿಷ್ಠರಾದ ಮಕ್ಕಳು ಜನಿಸಿದರು.

೬೨. ಎಲೈ ಬ್ರಾಹ್ಮಣೋತ್ತರೇ ! ಆ ನಾಲ್ಕುಜನಗಳಲ್ಲಿ ಒಬ್ಬೊಬ್ಬರಿಗೆ ಬಲಿಷ್ಠರೂ, ರೂಪಶಾಲಿಗಳೂ ಆದ ನೂರು ನೂರು ಮಕ್ಕಳು ಜನಿಸಿದರು.

೬೩. ಕಾಲಾ ಎಂಬ ಕಶ್ಯಪನ ಪತ್ನಿಯಿಂದ ಕಾಲೇಯರೆಂದು ಪ್ರಸಿದ್ಧರಾದ ನಾಲ್ಕುಜನ ಬಲಿಷ್ಠರಾದ ದಾನವಾಧಿಪತಿ (ರಾಕ್ಷಸಾಧಿಪತಿ) ಗಳು ಜನಿಸಿದರು.

೬೪. ವಿನಾಶನ, ಕ್ರೋಧ, ಕ್ರೋಧಹಂತಾ, ಕ್ರೋಧಶತ್ರು, ಈ ನಾಲ್ವರೇ ಕಾಲಾದೇವಿಯ ಮಕ್ಕಳುಗಳು.

ಸಿಂಹಿಕಾಯಾಃ ಸುತೋ ಜಾತೋ ರಾಹುಶ್ಚಂದ್ರಾರ್ಕಮರ್ದನಃ ।
ಸುಚಂದ್ರಶ್ಚಂದ್ರಹಂತಾಚ ತಥಾ ಚಂದ್ರವಿಮರ್ದನಃ ॥ ೬೫ ॥

ಕ್ರೋಧಾಯಾಸ್ತನಯಾ ಜಾತಾಃ ಕ್ರೂರಕರ್ಮಕರಾಸ್ತಥಾ ।
ಸಿಂಹಿಕಾ ಚೈವ ಕ್ರೋಧಾ ಚ ದ್ವೇ ಸುತೇ ಕ್ರೂರಿಕೇ ಸದಾ ॥ ೬೬ ॥

ತಾಭ್ಯಾಂ ಚ ಪ್ರಭವೋ ವಂಶೋ ಹ್ಯತಿ ಕ್ರೂರತರಃ ಸ್ಮೃತಃ ।
ಏಕ ಏವ ಮುನೇಃ ಪುತ್ರೋ ಜಾತಃ ಶುಕ್ರಃ ಕವಿರ್ಮಹಾನ್ ॥ ೬೭ ॥

ದೈತ್ಯದಾನವಕಾಲೇಯಪ್ರಭೃತೀನಾಂ ಸದಾ ಗುರುಃ ।
ಚತ್ವಾರಸ್ತಸ್ಯ ತನಯಾ ಜಾತಾ ಅಸುರಯಾಜಕಾಃ ॥ ೬೮ ॥

ತ್ವಷ್ಟಾ ವರಸ್ತಥಾತ್ರಿಶ್ಚ ಸೌಕಲಶ್ಚೇತಿ ವಾಗ್ಮಿನಃ ।
ತೇಜಸಾ ಸೂರ್ಯಸದೃಶಾ ಬ್ರಹ್ಮಲೋಕಪ್ರಭಾವನಾಃ ॥ ೬೯ ॥

---

೬೫. ಸಿಂಹಿಕಾದೇವಿಯಿಂದ ಸೂರ್ಯಚಂದ್ರರನ್ನು ಹಿಂಸಿಸುವ ರಾಹುವೂ, ಸುಚಂದ್ರ, ಚಂದ್ರಹಂತಾ, ಚಂದ್ರವಿಮರ್ದನರೆಂಬುವವರೂ ಜನಿಸಿದರು.

೬೬. ಕ್ರೋಧಾದೇವಿಯಿಂದ ಮಹಾಕ್ರೂರರಾದ ಅನೇಕ ಮಕ್ಕಳು ಜನಿಸಿದರು ಕ್ರೋಧಾ ಮತ್ತು ಸಿಂಹಿಕೆಯರು ಕ್ರೂರವಾದ ಸ್ವಭಾವವುಳ್ಳವರು. ಆದ ಕಾರಣ ಅವರಿಂದ ಜನಿಸಿದ ವಂಶವು ಅತಿ ಕ್ರೂರವಾದ ಸ್ವಭಾವವುಳ್ಳದ್ದು.

೬೭. ಮುನಿದೇವಿಯಿಂದ ಕವಿಯೂ, ಮಹಾತ್ಮನೂ ಆದ ಶುಕ್ರಾಚಾರ್ಯನೊಬ್ಬನೇ ಜನಿಸಿದನು. ಅವನು ದೈತ್ಯ (ದಿತಿಯ ಪುತ್ರರು) ದಾನವ (ದನುಪುತ್ರರು) ಕಾಲೇಯ (ಕಾಲಾದೇವಿಯ ಪುತ್ರರು) ರೇ ಮೊದಲಾದ ರಾಕ್ಷಸರಿಗೆ ಯಾವಾಗಲೂ ಗುರುವು.

೬೮-೬೯. ಆ ಶುಕ್ರಾಚಾರ್ಯನಿಗೆ ತ್ವಷ್ಟಾ, ವರ, ಅತ್ರಿ, ಸೌಕಲರೆಂಬ ನಾಲ್ಕು ಜನ ವಾಗ್ಮಿಗಳೂ, ರಾಕ್ಷಸ ಪುರೋಹಿತರೂ ಆದ ಮಕ್ಕಳು ಜನಿಸಿದರು. ಅವರೆಲ್ಲರೂ ಸೂರ್ಯನಂತೆ ತೇಜಸ್ವಿಗಳೂ, ಬ್ರಹ್ಮಲೋಕದವರೆಗೆ ಹರಡಿರುವ ಪ್ರಭಾವವುಳ್ಳವರೂ ಆದವರು.

ಅಸುರಾಣಾಂ ಸದೈತ್ಯಾನಾಂ ಕಾಲೇಯಾನಾಂ ತಥೈವ ಚ ।
ಕ್ರೋಧಾತ್ಮಜಾನಾಂ ಚ ತಥಾ ಸಿಂಹಿಕಾತನಯಸ್ಯ ಚ ॥ ೭೦ ॥

ಸೂತಿಪ್ರಸೂತಿಭಿಃ ಸರ್ವಂ ಜಗದ್ವ್ಯಾಪ್ತಂ ಚರಾಚರಂ ।
ತೇಷಾಂ ತು ಯಾನ್ಯಪತ್ಯಾನಿ ವರ್ಧಿತಾನಿ ಕ್ರಮಾದ್ದ್ವಿಜಾಃ ॥ ೭೧ ॥

ತೇಷಾಂ ಬಹುತ್ವಾತ್ಸಂಖ್ಯಾತುಂ ಚಿರೇಣಾಪಿ ನ ಶಕ್ಯತೇ ।
ತಾರ್ಕ್ಷ್ಯಶ್ಚಾರಿಷ್ಟನೇಮಿಶ್ಚ ಅನೂರುರ್ಗರುಡಾಸ್ತಥಾ ॥ ೭೨ ॥

ಆರುಣಿರ್ವಾರುಣಿಶ್ಚೈವ ವಿನತಾತನಯಾಃ ಸ್ಮೃತಾಃ ।
ಶೇಷೋ ವಾಸುಕಿರಾಜಶ್ಚ ತಕ್ಷಕಃ ಕುಲಕಸ್ತಥಾ ॥ ೭೩ ॥

ಕೂರ್ಮಶ್ಚ ಸುಮನಾಶ್ಚೇತಿ ಕಾದ್ರವೇಯಾಃ ಪ್ರಕೀರ್ತಿತಾಃ ।
ಭೀಮಸೇನೋಗ್ರಸೇನೌಚ ಸುಪರ್ಣೋ ಗರುಡಸ್ತಥಾ ॥ ೭೪ ॥

---

೭೦. ದೈತ್ಯರು, ಕಾಲೇಯರು, ಕ್ರೋಧಾದೇವಿಯ ಪುತ್ರರು, ಮತ್ತು ಸಿಂಹಿಕೆಯ ಪುತ್ರನಾದ ರಾಹು, ಇವರುಗಳ ಮಕ್ಕಳು, ಮಮ್ಮಕ್ಕಳು, ಮರಿಮಕ್ಕಳು ಇವರುಗಳಿಂದ ಸ್ಥಾವರಜಂಗಮರೂಪ ಸಕಲ ಜಗತ್ತೂ ವ್ಯಾಪಿಸಲ್ಪಟ್ಟಿತು.

೭೧. ಎಲೈ ಬ್ರಾಹ್ಮಣಶ್ರೇಷ್ಠರೇ ! ಆ ರಾಕ್ಷಸ ಪ್ರಜೆಗಳು ಕ್ರಮವಾಗಿ ವೃದ್ಧಿಹೊಂದಿದವು. ಅವರು ಬಹುಜನಗಳಾದುದರಿಂದ ಅವರ ಸಂಖ್ಯೆ ಇಷ್ಟೆಂದು ಹೇಳಲು ಸಾಧ್ಯವೇ ಇಲ್ಲ.

೭೨. ತಾರ್ಕ್ಷ್ಯ, ಅರಿಷ್ಟನೇಮಿ, ಅರುಣ, ಗರುಡ, ಅರುಣಿ, ವಾರುಣಿ, ಈ ಆರುಜನರು ವಿನತಾದೇವಿಯ ಮಕ್ಕಳು.

೭೩, ಆದಿಶೇಷ, ಸರ್ಪರಾಜನಾದ ವಾಸುಕಿ, ತಕ್ಷಕ, ಕುಲಕ, ಕೂರ್ಮ, ಸುಮನಸ್ಸು, ಇವರು ಕದ್ರುದೇವಿಯ ಮಕ್ಕಳು. ಆದುದರಿಂದ ಇವರಿಗೆ ಕಾದ್ರವೇಯರೆಂದು ಹೆಸರು.

೭೪—೭೬. ಅಲ್ಲದೆ ಭೀಮಸೇನ, ಉಗ್ರಸೇನ, ಸುಪರ್ಣ, ಗರುಡ, ಗೋಪತಿ, ಧೃತರಾಷ್ಟ್ರ, ಸೂರ್ಯವರ್ಚಸ್ಸು, ವೀರ್ಯವಂತ, ಅರ್ಕಪೃಷ್ಠ, ಪ್ರಯುಕ್ತ, ವಿಶ್ರುತ,

ಗೋಪತಿರ್ಧೃತರಾಷ್ಟ್ರಶ್ಚ ಸೂರ್ಯವರ್ಚಾಶ್ಚ ವೀರ್ಯವಾನ್
ಅರ್ಕಪೃಷ್ಠಃ ಪ್ರಯುಕ್ತಶ್ಚ ವಿಶ್ರುತಃ ಸುಶ್ರುತಸ್ತಥಾ ॥ ೭೫ ॥

ಭೀಮಶ್ಚಿತ್ರರಥಶ್ಚೈವ ವಿಖ್ಯಾತಃ ಸರ್ವವಿದ್ವಶೀ ।
ಶಾಲಿಶೀರ್ಷಶ್ಚ ಪರ್ಜನ್ಯಃ ಕಲಿರ್ನಾರದ ಏವ ಚ ॥ ೭೬ ॥

ಇತ್ಯೇತೇ ದೇವಗಂಧರ್ವಾ ಮುನಿಪುತ್ರಾಃ ಪ್ರಕೀರ್ತಿತಾಃ ।
ಅನವದ್ಯಾಂ ಸಾನುರಾಗಾಂ ಸವರಾಂ ಮಾರ್ಗಣಾಂ ಪ್ರಿಯಾಂ ॥ ೭೭ ॥

ಅಸೂಯಾಂ ಸುಭಗಾಂ ಭಾಸೀಮಿತಿ ಕನ್ಯಾ ಅಸೂಯತ ।
ಪ್ರಾಧಾ ಸರ್ವಗುಣೋತ್ಥಾನಾತ್ಕಶ್ಯಪಾತ್ತು ತಪೋಧನಾತ್ ॥ ೭೮ ॥

ವಿಶ್ವಾವಸುಃ ಸುಚಂದ್ರಶ್ಚ ಸುಪರ್ಣಃ ಸಿದ್ಧ ಏವ ಚ ।
ಬರ್ಹಿಃ ಪೂರ್ಣಶ್ಚ ಪೂರ್ಣಾಂಗೋ ಬ್ರಹ್ಮಚಾರೀ ರತಿಪ್ರಿಯಃ ॥ ೭೯ ॥

ಭಾನುಶ್ಚ ದಶಮಶ್ಚೈತೇ ಪ್ರಾಧಾಪುತ್ರಾಃ ಪ್ರಕೀರ್ತಿತಾಃ ।
ಇತ್ಯೇತೇ ದೇವಗಂಧರ್ವಾಃ ಸತತಂ ಪುಣ್ಯಲಕ್ಷಣಾಃ ॥ ೮೦ ॥

ಸುಶ್ರುತ, ಭೀಮ, ಪ್ರಸಿದ್ಧನಾದ ಚಿತ್ರರಥ, ಸರ್ವವಿತ್ತು, ವಶೀ, ಶಾಲಿಶೀರ್ಷ, ಪರ್ಜನ್ಯ, ಕಲಿ, ನಾರದ, ಈ ದೇವ ಮತ್ತು ಗಂಧರ್ವರೂ ಮುನಿದೇವಿಯ ಮಕ್ಕಳುಗಳು.

೭೭. ಮತ್ತು ಅನವದ್ಯಾ, ಸಾನುರಾಗಾ, ಸವರಾದೇವೀ, ಮಾರ್ಗಣಾದೇವೀ, ಪ್ರಿಯಾದೇವೀ, ಅಸೂಯಾದೇವೀ, ಸುಭಗಾದೇವೀ, ಭಾಸೀದೇವೀಗಳೆಂಬ ಈ ಕನ್ಯೆಯರನ್ನು ಮುನಿದೇವಿಯು ಪಡೆದಳು.

೭೮-೭೯. ಪ್ರಾಧಾ ಎಂಬ ಸ್ತ್ರೀಯು ಸಕಲಗುಣಸಂಪನ್ನನಾದ ಕಶ್ಯಪನಿಂದ ವಿಶ್ವಾವಸು, ಸುಚಂದ್ರ, ಸುಪರ್ಣ, ಸಿದ್ಧ, ಬರ್ಹಿಸ್ಸು, ಪೂರ್ಣ, ಪೂರ್ಣಾಂಗ, ಬ್ರಹ್ಮಚಾರೀ, ರತಿಪ್ರಿಯ, ಭಾನುಗಳೆಂಬ ಹತ್ತುಮಂದಿ ಪುತ್ರರನ್ನು ಪಡೆದಳು.

೮೦. ಈರೀತಿ ಸದಾ ಪುಣ್ಯಶಾಲಿಗಳೇ ಆದ, ದೇವ ಮತ್ತು ಗಂಧರ್ವರನ್ನು ಪ್ರಾಧಾದೇವಿಯು ದೇವರ್ಷಿಶ್ರೇಷ್ಠನಾದ ಕಶ್ಯಪನಿಂದ ಪಡೆದಳು.

ಪ್ರಾಧಾಸೂತ ಮಹಾಭಾಗಾ ದೇವೀ ದೇವರ್ಷಿಸತ್ತಮಾತ್ ।
ಅಲಂಬುಸಾ ಮಿಶ್ರಕೇಶೀ ಗಾಮಿನೀ ಚ ಮನೋರಮಾ ॥ ೮೧ ॥

ವಿದ್ಯುತ್ಪರ್ಣಾನಘಾರಂಭಾ ಹ್ಯರುಣಾ ರಕ್ಷಿತಾ ತುಲಾ ।
ಸುಬಾಹುಃ ಸುರತಾ ಚೈವ ಮುರಜಾ ಸುಪ್ರಿಯಾ ತಥಾ ॥ ೮೨ ॥

ವಪುಸ್ತಿಲೋತ್ತಮಾ ಚೇತಿ ಮುಖ್ಯಾ ಅಪ್ಸರಸಃ ಸ್ಮೃತಾಃ ।
ಅತಿಬಾಹುಸ್ತುಂಬುರುಶ್ಚ ನಾರದೋ ಹಾಹಾಹೂಹೂಸ್ತಥೈವ ಚ ॥ ೮೩ ॥

ಅಮೃತಂ ಬ್ರಾಹ್ಮಣಾ ಗಾವೋ ಮುನಯೋಽಪ್ಸರಸಸ್ತಥಾ ॥ ೮೪ ॥

ಕಪಿಲಾತನಯಾಃ ಪ್ರೋಕ್ತಾಃ ಮಹಾಭಾಗಾ ಮಹೋತ್ಸವಾಃ ।
ಇತಿ ದಕ್ಷಸುತಾನಾಂ ಯೇ ಕಶ್ಯಪಾತ್ತನಯಾಃ ಸ್ಮೃತಾಃ ॥ ೮೫ ॥

ತೈರಿದಂ ಸಕಲಂ ವ್ಯಾಪ್ತಂ ಜಗತ್ಸ್ಥಾವರಜಂಗಮಂ ।
ಏವಂ ಯಜ್ಞವರಾಹಸ್ಯ ಯಜ್ಞರೂಪಸ್ಯ ಪಾತನಾತ್ ॥ ೮೬ ॥

೮೧-೮೬. ಅಲಂಬುಸಾ, ಮಿಶ್ರಕೇಶೀ, ಗಾಮಿನೀ, ಮನೋರಮಾ, ವಿದ್ಯುತ್ಪರ್ಣಾ, ಅನಘಾ, ರಂಭಾ, ಅರುಣಾ, ರಕ್ಷಿತಾ, ತುಲಾ, ಸುಬಾಹುದೇವೀ, ಸುರತಾ, ಮುರಜಾ, ಸುಪ್ರಿಯಾ, ವಪುದೇವೀ, ತಿಲೋತ್ತಮೆ, ಇವರು ಮುಖ್ಯರಾದ ಅಪ್ಸರ ಸ್ತ್ರೀಯರು.

೮೩. ಅತಿಬಾಹು, ತುಂಬುರು, ನಾರದ, ಹಾಹಾ ಮತ್ತು ಹೂಹೂ (ಗಾಯಕರು) ಇವರು ಮುಖ್ಯರಾದ ಗಂಧರ್ವರು ಮತ್ತು ಇವರು ದೇವತೆಗಳಿಗೆ ಸಮಾನರು.

೮೪. ಮತ್ತು ಅಮೃತ, ಬ್ರಾಹ್ಮಣರು, ಹಸುಗಳು, ಮುನಿಗಳು, ಮಿಕ್ಕ ಅಪ್ಸರ ಸ್ತ್ರೀಯರು. ಇವರೆಲ್ಲರೂ ಹಿಂದೆ ಹೇಳಿದ (ಅತಿಬಾಹು, ಅಲಂಬುಸಾ ಮೊದಲಾದ) ವರೂ ಸಹ ಕಪಿಲಾದೇವಿಯಿಂದ ಜನಿಸಿದವರು. ಇವರೆಲ್ಲರೂ ಭಾಗ್ಯಶಾಲಿಗಳು ಸದಾ ಸಂತೋಷವುಳ್ಳವರೂ ಆಗಿರುವರು.

೮೫. ಹೀಗೆ ಕಶ್ಯಪಬ್ರಹ್ಮನಿಂದ ದಕ್ಷಕನ್ಯೆಯರಲ್ಲಿ ಜನಿಸಿದ ಪ್ರಜೆಗಳಿಂದ ಚರಾಚರಾತ್ಮಕವಾದ ಈ ಜಗತ್ತೆಲ್ಲವೂ ವ್ಯಾಪಿಸಲ್ಪಟ್ಟಿತು.

೮೬—೮೮. ಹೀಗೆ ಯಜ್ಞವರಾಹರೂಪವಾದ ಯಜ್ಞವನ್ನು ಮೂರು ಅಗ್ನಿಗಳಲ್ಲಿ ಹವಿಸ್ಸನ್ನು ಕೊಟ್ಟು ನಿರ್ವಹಿಸಿದುದರಿಂದಲೂ, ಮಹಾತ್ಮನಾದ ಸ್ವಾಯಂಭುವ

ತ್ರಿಭ್ಯೋಽಗ್ನಿಭ್ಯೋ ಮನೋಸ್ತಸ್ಮಾತ್ತ್ವಾಯಂಭುವಮಹಾತ್ಮನಃ ।
ಮುನಿಭ್ಯಶ್ಚೈವ ಸಪ್ತಭ್ಯಃ ಕಶ್ಯಪಾದಿಭ್ಯ ಏವ ಚ ॥ ೮೭ ॥

ನರನಾರಾಯಣಾಭ್ಯಾಂ ತು ವ್ಯತೀತೇಽಕಾಲಿಕೇ ಲಯೇ ।
ಪುನಃ ಪ್ರಜಾಃ ಪುರಾ ಸೃಷ್ಟಾ ಹರಿಣಾನೇಕರೂಪಿಣಾ ॥ ೮೮ ॥

ಏವಂ ಪುನರಭೂತ್ಸೃಷ್ಟಿಃ ಸೃಷ್ಟಿಸ್ಥಿತ್ಯಂತಕಾರಿಣಃ ।
ಹರೇಸ್ತಸ್ಯ ಪ್ರಸಾದೇನ ನರನಾರಾಯಣಾತ್ಮನಃ ॥ ೮೯ ॥

॥ ಇತಿ ಶ್ರೀ ಕಾಲಿಕಾಪುರಾಣೇ ಪಂಚತ್ರಿಂಶೋಽಧ್ಯಾಯಃ ॥

ಮನುವಿನಿಂದಲೂ, ಸಪ್ತಋಷಿಗಳಿಂದಲೂ, ಕಶ್ಯಪನೇ ಮೊದಲಾದ ಬ್ರಹ್ಮರಿಂದಲೂ, ನರ ಮತ್ತು ನಾರಾಯಣರಿಂದಲೂ ಸಹ ಅಕಾಲದಲ್ಲಾದ ಆ ಪ್ರಳಯವಾದಮೇಲೆ ತಿರುಗಿ ಪ್ರಜೆಗಳು ಪೂರ್ವದಂತೆ ಸೃಷ್ಟಿಸಲ್ಪಟ್ಟರು.

೮೯. ಎಲೈ ಮುನಿಗಳೇ! ನರನಾರಾಯಣರೂಪನಾದ ಮತ್ತು ಸೃಷ್ಟಿಸ್ಥಿತಿಲಯಗಳನ್ನು ನಡೆಸುವ ಹರಿಯ ಅನುಗ್ರಹದಿಂದ ಹೀಗೆ ಪುನಃ ಪ್ರಜೆಗಳ ಸೃಷ್ಟಿಯು ಆಯಿತು.

ಇಲ್ಲಿಗೆ ಮೂವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀ ಕಾಲಿಕಾಪುರಾಣೇ ಷಟ್ತ್ರಿಂಶೋಽಧ್ಯಾಯಃ ॥

॥ ಮಾರ್ಕಂಡೇಯ ಉವಾಚ ॥

ಈಶ್ವರಃ ಶರಭಂ ಕಾಯಂ ಯಥಾ ತತ್ಯಾಜ ಯತ್ನತಃ ।
ತನ್ಮೇ ನಿಗದತೋ ಭೂಯಃ ಶೃಣುಧ್ವಂ ದ್ವಿಜಸತ್ತಮಾಃ ॥ ೧ ॥

ಹತೇ ಯಜ್ಞವರಾಹೇ ತು ಬ್ರಹ್ಮಾ ಲೋಕಪಿತಾಮಹಃ ।
ಉವಾಚ ಶರಭಂ ಗತ್ವಾ ಸಾಮಯುಕ್ತಂ ಜಗದ್ಧಿತಂ ॥ ೨ ॥

ದೇಹಾಭೋಗೇನ ಭವತಃ ಪೂರಿತಂ ಭೂರಿಯೋಜನಂ ।
ಉಪಸಂಹರ ತಸ್ಮಾತ್ತ್ವಂ ಕಾಯಂ ಲೋಕಭಯಂಕರಂ ॥ ೩ ॥

॥ ಮೂವತ್ತಾರನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು :-ಎಲೈ ಬ್ರಾಹ್ಮಣಶ್ರೇಷ್ಠರೇ ! ಶಂಕರನು ಶರಭಶರೀರವನ್ನು ಹೇಗೆ ತ್ಯಜಿಸಿದನೆಂಬುದನ್ನು ಹೇಳುವೆನು ಕೇಳಿರಿ.

೨. ಆ ಯಜ್ಞವರಾಹವು ಶಂಕರಸ್ವರೂಪಿಯಾದ ಶರಭದಿಂದ ಸಂಹರಿಸಲ್ಪಡಲು ಲೋಕನಾಥನಾದ ಬ್ರಹ್ಮನು ಆ ಶರಭನಿದ್ದಲ್ಲಿಗೆ ಹೋಗಿ ಜಗತ್ತಿಗೆ ಹಿತವಾಗುವಂತಹ ಮಾತನ್ನು ಸಮಾಧಾನಪೂರ್ವಕವಾಗಿ ಹೀಗೆ ಹೇಳಿದನು.

೩. ಓ ಶರಭಮೂರ್ತಿಯೇ ! ವಿಸ್ತಾರವಾದ ಈ ನಿನ್ನ ಶರೀರವು ಅನೇಕ ಯೋಜನಗಳವರೆಗೆ ವ್ಯಾಪಿಸಿರುವುದು. ಆದಕಾರಣ ನೀನು ಲೋಕಕ್ಕೆ ಭಯವನ್ನುಂಟು ಮಾಡುವ ಈ ಶರೀರವನ್ನು ಉಪಸಂಹರಿಸು.

ತವ ಯುದ್ಧೇನ ಸಕಲಂ ಪ್ರಣಷ್ಟಂ ಭುವನತ್ರಯಂ ।
ಆಕಾಶಗಂ ತು ತ್ವಾಂ ದೃಷ್ಟ್ವಾ ಬಿಭೇತ್ಯದ್ಯ ಜನಾರ್ದನಃ ॥ ೪ ॥

ತಸ್ಮಾತ್ತ್ವಮೂರ್ಧ್ವಲೋಕಾನಾಂ ಹಿತಾಯು ತ್ಯಜ ವೈ ತನುಂ ।

॥ ಮಾರ್ಕಂಡೇಯ ಉವಾಚ ॥

ತತಸ್ತಸ್ಯ ವಚಃ ಶ್ರುತ್ವಾ ಸುರಜ್ಯೇಷ್ಠಸ್ಯ ಶಂಕರಃ ॥ ೫ ॥

ತತ್ಯಾಜ ಶಾರಭಂ ಕಾಯಂ ತೋಯೋಪರ್ಯೇವ ತತ್ಕ್ಷಣಾತ್ ।
ತ್ಯಕ್ತಸ್ಯ ತಸ್ಯ ದೇಹಸ್ಯ ಶಂಕರೇಣ ಮಹಾತ್ಮನಾ ॥ ೬ ॥

ಅಷ್ಟೌ ಪಾದಾ ಅಷ್ಟಮೂರ್ತೀಸ್ತೇಷು ಚಾಷ್ಟಸು ಭೇಜಿರೇ ।
ಆದ್ಯಂ ತು ದಕ್ಷಿಣಂ ಪಾದಮಾಕಾಶಮಗಮದ್ಭೃತಂ ॥ ೭ ॥

ತದ್ವಾಮಂ ಮಿಹಿರಂ ಭೇಜೇ ಪಶ್ಚಾದ್ದಕ್ಷಿಣಜಂ ವಿಧೌ ।
ವಾಮಂ ತು ಜ್ವಲನಂ ಭೇಜೇ ಪೃಷ್ಠಾಗ್ರಂ ಪದ್ಗತಂ ಕ್ಷಿತಿಂ ॥ ೮ ॥

---

೪. ಆದಿವರಾಹದೊಡನೆ ನೀನು ಮಾಡಿದ ಯುದ್ಧದಿಂದ ಮೂರು ಲೋಕಗಳೂ ನಷ್ಟವಾದುವು. ನಿನ್ನ ಶರೀರವು ಆಕಾಶವನ್ನು ವ್ಯಾಪಿಸಿರುವುದನ್ನು ನೋಡಿ ಜನಾರ್ದನನು ಭಯಗೊಂಡಿರುವನು. ಆದಕಾರಣ ನೀನು ಸ್ವರ್ಗವೇ ಮೊದಲಾದ ಮೂರು ಲೋಕಗಳ ಕ್ಷೇಮಕ್ಕಾಗಿ ಈ ಶರೀರವನ್ನು ಉಪಸಂಹರಿಸು.

೫. ಮಾರ್ಕಂಡೇಯನು ಹೇಳಿದನು:—ಅನಂತರ ಶರಭರೂಪಿಯಾದ ಶಂಕರನು ಬ್ರಹ್ಮನ ಮಾತುಗಳನ್ನು ಕೇಳಿ ಕೂಡಲೇ ಶರಭಶರೀರವನ್ನು ಜಲದರಾಶಿಯಮೇಲೆ ತ್ಯಜಿಸಿದನು.

೬. ಮಹಾತ್ಮನಾದ ಶಂಕರನು ತ್ಯಜಿಸಿದ ಆ ಶರಭಶರೀರದ ಎಂಟು ಕಾಲುಗಳು ಎಂಟು ಮೂರ್ತಿಗಳು ಆದುವು.

೭. ಅದು ಹೇಗೆಂದರೆ:—ಆ ಶರಭಶರೀರದ ಬಲಗಾಲು ಆಕಾಶವಾಯಿತು, ಪಾದವು ಸೂರ್ಯನಾಯಿತು, ಇನ್ನೊಂದು ದಕ್ಷಿಣಪಾದವು ಶಂಕರನ ಚಂದ್ರರೂಪವಾದ ಮೂರ್ತಿಯಾಯಿತು.

೮. ಇನ್ನೊಂದು ಎಡಗಾಲು ಅಗ್ನಿಯಾಯಿತು, ಹಿಂಭಾಗದ ಒಂದು ಪಾದವು ಭೂಮಿಯಾಯಿತು.

ಪೃಷ್ಠಾಗ್ರವಾಮಂ ಸಲಿಲಂ ತತ್ಪಶ್ಚಾದ್ದಕ್ಷಿಣಂ ತಥಾ ।
ವಾಯೌ ವಾಮಪದಂ ಭೇಜೇ ಹೋತಾರಂ ಸರ್ವತೋಮುಖಂ ॥ ೯ ॥

ಏವಂ ತಸ್ಯಾಷ್ಟಮೂರ್ತೇಸ್ತು ಅಷ್ಟಮೂರ್ತಿಷು ತತ್ಕ್ಷಣಾತ್ ।
ಅಷ್ಟೌ ಪಾದಾ ಸ್ತಥಾ ಭೇಜುಃ ಸ್ವಂ ಸ್ವಂ ತೇಜೋ ಯಯುಃ
[ಪದಂ ॥ ೧೦ ॥

ಮಧ್ಯಂ ತು ಶಾರಭಂ ಕಾಯಂ ಶಂಕರಸ್ಯ ಮಹಾತ್ಮನಃ ।
ಕಪಾಲೀ ಭೈರವೋ ಭೂತಶ್ಚಂಡರೂಪೀ ಮುರಾಸದಃ ॥ ೧೧ ॥

ಮಸ್ತಿಷ್ಕಮೇದಸಾ ಯುಕ್ತಂ ಮಾಂಸಂ ಜುಹ್ವತಿ ಯೇ ಶುಚೌ ।
ಬ್ರಹ್ಮಕಪಾಲಪಾತ್ರಸ್ಥಂ ಸುರಾಭಿರ್ದೇವಪೂಜನಂ ॥ ೧೨ ॥

ಬಲಿರ್ಮನುಷ್ಯಮಾಂಸೇನ ಪಾನಂ ತು ರುಧಿರಂ ಸದಾ ।
ಸುರಯಾ ಪಾರಣಂ ಯಜ್ಞೇ ಕಪಾಲೋದ್ಭಟಧಾರಣಂ ॥ ೧೩ ॥

---

೯. ಪೃಷ್ಠ (ಹಿಂಭಾಗ) ದ ಅಗ್ರಭಾಗದಲ್ಲಿರುವ ವಾಮಪಾದವು ಜಲವಾಯಿತು, ಅದರ ಹಿಂದಿನ ದಕ್ಷಿಣಪಾದವು ವಾಯುವಾಯಿತು, ಮತ್ತೊಂದು ಎಡಪಾವನ್ನು ಹೋತೃ (ಯಜ್ಞದಲ್ಲಿ ಹೋಮ ಮಾಡುವವನು) ವಾಯಿತು.

೧೦. ಶರಭಶರೀರದ ಎಂಟು ಪಾದಗಳು ಹೀಗೆ ಆಕಾಶವೇ ಮೊದಲಾದ ಶಂಕರನ ಎಂಟು ಮೂರ್ತಿಗಳ ರೂಪವನ್ನು ಹೊಂದಿ ಮುಂದೆ ತಮ್ಮತಮ್ಮ ತೇಜಸ್ಸು ಮತ್ತು ಸ್ಥಾನಗಳನ್ನು ಪಡೆದುವು.

೧೧. ಮಹಾತ್ಮನಾದ ಶಂಕರನ ಶರಭಶರೀರದ ಮಧ್ಯಭಾಗವು ಕಪಾಲವನ್ನು ಹಿಡಿದು ಭಯಂಕರವಾದ ರೂಪವುಳ್ಳವನೂ, ತಡೆಯಿಲ್ಲದವನೂ ಆದ ಕಾಲಭೈರವನ ರೂಪವನ್ನು ಹೊಂದಿತು.

೧೨—೧೪. ಈ ಕಪಾಲಭೈರವನನ್ನು ಆರಾಧಿಸುವವರಿಗೆ ಕಾಪಾಲಿಕರೆಂದು ಹೆಸರು. ಇವರು ಮೆದುಳಿನ ಕೊಬ್ಬಿನಿಂದ ಕೂಡಿರುವ ಮಾಂಸವನ್ನು ಅಗ್ನಿಯಲ್ಲಿ ಹೋಮಮಾಡುವರು. ಬ್ರಾಹ್ಮಣರ ಶಿರಸ್ಸಿನ ಕಪಾಲದಲ್ಲಿ ಮದ್ಯವನ್ನು ತುಂಬಿ ದೇವ ಪೂಜೆಯನ್ನು ಮಾಡುವರು. ಮನುಷ್ಯರ ಮಾಂಸದ ಬಲಿಯನ್ನು ಕೊಡುವರು.

ವಾಘ್ರಚರ್ಮ ಪರೀಧಾನಂ ಸಮಲಂ ತ್ರಿವಳೀಯುತಂ ।
ಏವಂ ಕುರ್ವಂತಿ ಸತತಂ ಕಪಾಲವ್ರತಧಾರಿಣಃ ॥ ೧೪ ॥

ಕಪಾಲೀಭೈರವಸ್ತೇಷಾಂ ದೇವಃ ಪೂಜ್ಯಸ್ತು ನಿತ್ಯಶಃ ।
ಶ್ಮಶಾನಭೈರವೋ ಯೋಽಸೌ ಯೋ ಮಹಾಭೈರವಾಹ್ವಯಃ ॥ ೧೫ ॥

ಬಾಲಸೂರ್ಯಸಮೋದ್ಯೋತಃ ಸದಾಷ್ಟಾದಶಬಾಹುಭಿಃ ।
ವಿಭ್ರಾಜಮಾನೋ ರಕ್ತಾಕ್ಷಃ ಸರ್ವದಾ ನಾಯಿಕಾವೃಜೈಃ ॥ ೧೬ ॥

ಕಾಲೀಪ್ರಚಂಡಾಪ್ರಮುಖೈಃ ಕ್ರೀಡಮಾನಸ್ತು ನಿತ್ಯಶಃ ।
ಸದ್ಯೋದಗ್ಧನೃಮಾಂಸಾಶೀ ಗಲಲ್ಲೋಲಸದ್ಭುಜಃ ॥ ೧೭ ॥

ಲೋಹಿತಾಹಾರವಿಘಸಃ ಪ್ರೇತಾಶನಗತಃ ಸದಾ ।
ಸ್ಥೂಲವಕ್ತ್ರೋಽಥಲಂಬೋಷ್ಠೋ ಹ್ರಸ್ವಸ್ಥೂಲಪದಾಲಯಃ ॥ ೧೮ ॥

ರಕ್ತವನ್ನೂ ಮದ್ಯವನ್ನೂ ಪಾನಮಾಡುವರು. ಭಯಂಕರವಾದ ಶಿರಃಕಪಾಲವನ್ನು ಧಾರಣೆಮಾಡುವರು. ಮಲಿನವೂ, ಮೂರುಸುತ್ತುಗಳುಳ್ಳದ್ದೂ ಆದ ಹುಲಿಯ ಚರ್ಮವನ್ನು ಧರಿಸುವರು. ಇಂತಹ ಕಪಾಲವ್ರತಧಾರಿ (ಕಾಪಾಲಿಕರು) ಗಳಿಗೆ ನಿತ್ಯವೂ ಈ ಕಪಾಲಭೈರವನೇ ಆರಾಧ್ಯದೇವನು.

೧೫-೧೬. ಶ್ಮಶಾನಭೈರವನೆಂಬುವವನೂ, ಮಹಾಭೈರವನೆಂಬುವವನೂ, ಈ ಕಪಾಲಭೈರವನಿಂದ ಬೇರೆಯಲ್ಲವು. ಆ ಕಪಾಲಭೈರವನು ಆಗತಾನೇ ಉದಯಿಸಿದ ಸೂರ್ಯನಂತೆ ನಸುಗೆಂಪಾದ ಶರೀರಕಾಂತಿಯುಳ್ಳವನೂ, ಎಂಟುತೋಳುಳ್ಳವನೂ, ಕೆಂಪಾದ ಕಣ್ಣುಗಳುಳ್ಳವನೂ, ಕಾಲೀ ಪ್ರಚಂಡಾ ಮೊದಲಾದ ಪತ್ನಿಯರಿಂದ ನಿತ್ಯವೂ ಕೂಡಿ ಕ್ರೀಡಿಸುವನು.

೧೭. ಮತ್ತು ಅವನು ಆಗತಾನೇ ಸುಟ್ಟು (ಬೇಯಿಸಿದ) ಮನುಷ್ಯರ ಮಾಂಸವನ್ನು ತಿನ್ನುವವನು. ಅವನ ಬಾಯಿನಿಂದ ಯಾವಾಗಲೂ ಜೊಲ್ಲುಸುರಿಯುತ್ತಿರುವುದು. ಅವನ ಬಾಹುಗಳು ಚಲಿಸುತ್ತಿರುವವು. ಅವನಿಗೆ ರಕ್ತವೇ ಆಹಾರವು. ಯಾವಾಗಲೂ ಪಿಶಾಚಿಗಳು ತಿನ್ನುವ ಆಹಾರವನ್ನೇ ಸೇವಿಸುವನು.

೧೮. ಅಲ್ಲದೇ, ಅವನಿಗೆ ದೊಡ್ಡದಾದ ಮುಖವೂ, ದಪ್ಪವಾದ ತುಟಿಯೂ, ತುಂಡಾಗಿ ದಪ್ಪನಾಗಿರುವ ಕಾಲುಗಳೂ ಇರುವುವು ಮತ್ತು ಇವನು ಸದಾಸಂತೋ

ವಿನೋದೀ ವಾದನೋ ಲೋಕೇ ಸಾಟ್ಟಹಾಸಸ್ತು ಭೈರವಃ ।
ಏವಂ ಸ ಚ ಮಹಾದೇವೋ ಮಹಾಭೈರವರೂಪಧೃಕ್ ॥ ೧೯ ॥

ಮಧ್ಯಶಾರಭಕಾಯೇನ ಕಾಯಂ ದಧ್ರೇ ಮಹಾಭುಜಃ ।
ಸ ಜಗಾಮ ತತೋ ದೇವೋ ಹರಸ್ಯ ಪ್ರಮಥಾನ್ಪ್ರತಿ ॥ ೨೦ ॥

ಗಣೈಃ ಸಾರ್ಧಂ ತಥಾಕಾಶೇ ವಿಕ್ರೀಡತಿ ಸ ಭೈರವಃ ।
ಸ ಮಹಾಭೈರವೋ ದೇವಃ ಪೂಜ್ಯಮಾನೋ ಜಗಜ್ಜನೈಃ ॥ ೨೧ ॥

ಅದ್ಯಾಪಿ ಕುರುತೇ ನಿತ್ಯಮಿಷ್ಟಕಾಮಸ್ಯ ಸಾಧನಂ ।
ಚೈತ್ರಶುಕ್ಲಚತುರ್ದಶ್ಯಾಂ ಮಧ್ವಾಸವಪಯಃಫಲೈಃ ।
ಮಾಂಸೈರ್ಮತ್ಸ್ಯೈಃ ಸರುಧಿರೈಃ ಸಕೃದ್ಯೋ ಭೈರವಂ ಯಜೇತ್ ॥ ೨೨ ॥

ಸ ಸರ್ವಕಾಮಾನ್ ಸಂಸಾಧ್ಯ ಭೋಗಾನ್ ಭುಕ್ತ್ವಾ ಯಥೇಷ್ಟತಃ ।
ಪ್ರಯಾತಿ ಶಂಭುಭವನಮಾರುಹ್ಯ ವೃಷಭಂ ವರಂ ॥ ೨೩ ॥

ಷಿಯೂ, ನೃತ್ಯನರ್ತನಾದಿಗಳಲ್ಲಿ ಆಸಕ್ತನೂ, ಅಟ್ಟಹಾಸದಿಂದ ಕೂಡಿದವನೂ ಆಗಿರುವನು.

೧೯. ಹೀಗೆ ಆ ಮಹಾದೇವನು ಶರಭಶರೀರದ ಮಧ್ಯಭಾಗದಿಂದ ಎಂಟು ಭುಜಗಳುಳ್ಳ ಭೈರವರೂಪವನ್ನು ಧರಿಸಿದನು.

೨೦. ಅನಂತರ ಆ ಕಾಲಭೈರವನು ಹರನ ಪ್ರಮಥಗಣಗಳಿರುವಲ್ಲಿಗೆ ಹೋಗಿ ಅವರೊಡನೆ ಆಕಾಶದಲ್ಲಿ ಕ್ರೀಡಿಸತೊಡಗಿದನು.

೨೧. ಆ ಕಾಲಭೈರವದೇವನು ಈಗಲೂ ತನ್ನನ್ನು ಪೂಜಿಸುವ ಜನರಿಗೆ ಬೇಕಾದ ಇಷ್ಟಾರ್ಥಗಳನ್ನು ಕೊಡುವನು.

೨೨-೨೩. ಚೈತ್ರಮಾಸದ ಶುದ್ಧ ಚತುರ್ದಶಿಯಲ್ಲಿ, ಮದ್ಯ, ಹಾಲು, ಪಣ್ಣುಗಳು, ಮಾಂಸ, ಮೀನು, ರಕ್ತ, ಇವುಗಳಿಂದ ಕಾಲಭೈರವನನ್ನು ಆರಾಧಿಸಿದವನು ಎಲ್ಲಾ ಇಷ್ಟಾರ್ಥಗಳನ್ನು ಪಡೆದು ಈ ಜನ್ಮದಲ್ಲಿ ಬೇಕಾದ ಭೋಗಗಳನ್ನು ಯಥೇಷ್ಟವಾಗಿ ಅನುಭವಿಸಿ ಮೃತನಾದಮೇಲೆ ನಂದಿಕೇಶ್ವರನನ್ನು ಏರಿ ಕೈಲಾಸಕ್ಕೆ ಹೋಗುವನು.

ಏತದ್ವಃ ಕಥಿತಂ ಸರ್ವಂ ಯತ್ಪೃಷ್ಟೋಽಹಂ ದ್ವಿಜೋತ್ತಮಾಃ ।
ಭವದ್ಭಿರ್ಯಚ್ಚ ವೋಽನ್ಯದ್ವಾ ಪೃಚ್ಛ ನಾಂ ತು ತತ್ ॥ ೨೪ ॥

॥ ಇತಿ ಶ್ರೀ ಕಾಲಿಕಾಪುರಾಣೇ ಷಟ್ತ್ರಿಂಶೋಽಧ್ಯಾಯಃ ॥

---

೨೪. ಎಲ್ಲೈ ಮುನಿಗಳೇ ! ಹೀಗೆ ನೀವು ಕೇಳಿದುದೆಲ್ಲವನ್ನೂ ಹೇಳಿರುವೆನು. ಮತ್ತೇನನ್ನು ಕೇಳಬೇಕೆಂದಿರುವಿರೋ ಕೇಳಿರಿ, ಹೇಳುವೆನು.

ಇಲ್ಲಿಗೆ ಮೂವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀ ಕಾಲಿಕಾಪುರಾಣೇ ಸಪ್ತತ್ರಿಂಶೋಧ್ಯಾಯಃ ॥

॥ ಋಷಯ ಊಚುಃ ॥

ಕಥಂ ವರಾಹಪುತ್ರೋಽಸೌ ನರಕೋ ನಾಮ ವೀರ್ಯವಾನ್ ।
ಸಂಜಾತೋಽಸುರಸತ್ತ್ವಃ ಸ ದೇವದೇವೀಸುತೋಽಪಿ ಸನ್ ॥ ೧ ॥

ಚಿರಂಜೀವೀ ಕಥಂ ಸೋಽಭೂತ್ಕಿಮರ್ಥಮುದರೇ ಚಿರಂ ।
ಪೃಥಿವ್ಯಾಂ ನ್ಯವಸನ್ ಜಾತಃ ಕುತ್ರ ವಾ ಸ ಮಹಾಬಲಃ ॥ ೨ ॥

ಸೋಽಸುರಾಣಾಂ ಕಥಂ ರಾಜಾ ಪುರಂ ತಸ್ಯ ಕಿಮಾಹ್ವಯಂ ।
ಮುನಿನೀರತಿಸಂಜಾತಃ ಸ ಕ್ಷಿತೌ ಪ್ರೋತ್ರಿಣಸ್ತದಾ ॥ ೩ ॥

॥ ಮೂವತ್ತೇಳನೆಯ ಅಧ್ಯಾಯವು ॥

೧. ಋಷಿಗಳು ಹೇಳಿದರು:—ಓ ಮಾರ್ಕಂಡೇಯನೇ! ವೀರ್ಯವಂತನಾದ ಆದಿವರಾಹನ ಪುತ್ರನಾದ ನರಕನು ವರಾಹರೂಪಿಯಾದ ವಿಷ್ಣು ಮತ್ತು ಭೂದೇವಿ ಇವರುಗಳಿಂದ ಜನಿಸಿದವನಾದರೂ ರಾಕ್ಷಸಸ್ವಭಾವವುಳ್ಳವನು ಹೇಗಾದನು?

೨. ಆ ನರಕಾಸುರನು ಚಿರಂಜೀವಿಯಾದ ಬಗೆ ಹೇಗೆ? ಭೂಮಿಯ ಗರ್ಭದಲ್ಲಿ ಅವನು ಬಹಳದಿವಸ ಏಕೆ ವಾಸಿಸಿದನು? ಅವನು ಜನಿಸಿದುದೆಲ್ಲಿ?

೩. ಅಲ್ಲದೇ ಅವನು ಅಸುರರಿಗೆಲ್ಲಾ ರಾಜನು ಹೇಗಾದನು? ಅವನ ರಾಜಧಾನಿಯ ಹೆಸರೇನು? ಆ ಅಸುರನು ರಜಸ್ವಲೆಯಾಗಿರುವಾಗ ಭೂಮಿದೇವಿಯಲ್ಲಿ ಆದಿವರಾಹನಿಂದ ಜನಿಸಿದವನೆಂದು ಕೇಳಿದೆವು. ಓ ಮುನಿಶ್ರೇಷ್ಠನೇ! ಇಂತಹ ವಿಷ್ಣುಪುತ್ರನಾದ ಆ ಸುರನು ಆರೀತಿ ಅಸುರನು ಹೇಗೆ ಆದನು?

ಶ್ರೂಯತೇ ಮುನಿಶಾರ್ದೂಲ ಕಥಂ ಭೂತಸ್ತಥಾವಿಧಃ ।
ನಿತತ್ಸರ್ವಮಶೇಷೇಣ ಪೃಚ್ಛತಾಂ ತ್ವಂ ವದಸ್ವ ನಃ ॥ ೪ ॥

ತ್ವಂ ನೋ ಗುರುಶ್ಚ ಶಾಸ್ತಾ ಚ ಸರ್ವಪ್ರತ್ಯಕ್ಷದರ್ಶಿವಾನ್ ।
ಕಥಂ ಲಬ್ಧವರೋ ಭೂತೋ ಬ್ರಹ್ಮಣಾ ಪ್ರಭವಿಷ್ಣುನಾ ॥ ೫ ॥

॥ ಮಾರ್ಕಂಡೇಯ ಉವಾಚ ॥

ಶೃಣ್ವಂತು ಮುನಯಃ ಸರ್ವೇ ಯತ್ಪೃಷ್ಟೋಽಹಂ ದ್ವಿಜೋತ್ತಮಾಃ ।
ಯಥಾ ಸ ನರಕೋ ಜಾತೋ ಧರಾಗರ್ಭೇ ಮಹಾಸುರಃ ॥ ೬ ॥

ರಜಸ್ವಲಾಯಾ ಗೋತ್ರಾಯಾ ಗರ್ಭೇ ವೀರ್ಯೇಣ ಪೋತ್ರೀಣಃ ।
ಯತೋ ಜಾತಸ್ತತೋ ಭೂತೋ ದೇವಪುತ್ರೋಽಪಿ ಸೋಽಸುರಃ ॥ ೭ ॥

ಗರ್ಭಸಂಸ್ಥಂ ಮಹಾವೀರಂ ಜ್ಞಾತ್ವಾ ಬ್ರಹ್ಮಾದಯಃ ಸುರಾಃ ।
ವರಾಹಪುತ್ರಂ ದುರ್ಧರ್ಷಂ ಮಹಾಬಲಪರಾಕ್ರಮಂ

೪-೫. ನಾವು ಇವೆಲ್ಲವನ್ನೂ ಕೇಳಬೇಕೆಂದಿರುವೆವು. ನಮಗೆ ನೀನೇ ಗುರುವು ಮತ್ತು ಒಡೆಯನು. ನೀನು ಎಲ್ಲವನ್ನೂ (ಯೋಗದೃಷ್ಟಿಯಿಂದ) ಪ್ರತ್ಯಕ್ಷವಾಗಿ ನೋಡಿರುವೆ. ಆ ನರಕಾಸುರನು ಸಮರ್ಥನಾದ ಬ್ರಹ್ಮನಿಂದ ವರವನ್ನು ಹೇಗೆ ಪಡೆದನು ? ಇದೆಲ್ಲವನ್ನೂ ನಮಗೆ ಹೇಳು.

೬. ಮಾರ್ಕಂಡೇಯನು ಹೇಳಿದನು :—ಎಲೈ ಬ್ರಾಹ್ಮಣಶ್ರೇಷ್ಠರೇ ! ಭೂದೇವಿಯ ಗರ್ಭದಲ್ಲಿ ಜನಿಸಿದ ನರಕನು ದೊಡ್ಡ ಅಸುರನು ಹೇಗಾದನೆಂದು ಮೊದಲಾಗಿ ನೀವು ಏನನ್ನು ಕೇಳಿದಿರೋ ಅದನ್ನು ಹೇಳುವೆನು ಕೇಳಿರಿ.

೭. ಭೂದೇವಿಯು ರಜಸ್ವಲೆ (ಋತುಮತಿ) ಆದಾಗ ಆ ಆದಿವರಾಹನಿಂದ ಈ ನರಕನು ಭೂಮಿಯಲ್ಲಿ ಜನಿಸಿದುದರಿಂದ ಇವನು ದೇವಪುತ್ರನಾದರೂ ಅಸುರನಾದನು.

೮-೯. ಭೂದೇವಿಯ ಗರ್ಭದಲ್ಲಿರುವಾಗಲೇ ಈ ನರಕನನ್ನು ತುಂಬಾ ವೀರನೂ ಬಹುಬಲಪರಾಕ್ರಮವುಳ್ಳವನೂ, ಸಹಿಸಲಸಾಧ್ಯನೂ ಆಗುವನೆಂದು ತಿಳಿದು ಬ್ರಹ್ಮನೇ ಮೊದಲಾದ ದೇವತೆಗಳು ಅವನು ಗರ್ಭದಿಂದೀಚೆಗೆ ಬರುವ (ಜನನವಾಗುವ) ಕಾಲ

ಗರ್ಭ ಏವ ತದಾ ದೇವಾಃ ಶಕ್ತ್ಯಾ ದಧ್ರುಶ್ಚಿರಂ ದೃಢಂ ।
ಯಥಾ ಕಾಲೇಽಪಿ ಸಂಪ್ರಾಪ್ತೇ ನೋ ಗರ್ಭಾಜ್ಜಾಯತೇ ಸ ಚ ॥ ೯ ॥

ತತಸ್ತ್ಯಕ್ತಶರೀರಸ್ತು ವರಾಹಸ್ತನಯೈಃ ಸಹ ।
ಅತೀವ ಶೋಕಸಂತಪ್ತಾ ಜಗದ್ಧಾತ್ರ್ಯಭವತ್ಕ್ಷಿತಿಃ ॥ ೧೦ ॥

ಶೋಕಾಕುಲಾ ಸಾ ವ್ಯಲಪಚ್ಚಿರಕಾಲಂ ಮುಹುರ್ಮುಹುಃ
ಪ್ರಕೃತಿಸ್ಥಾ ಕ್ಷಿತಿರ್ಭೂತಾ ಮಾಧವೇನ ಪ್ರಬೋಧಿತಾ ॥ ೧೧ ॥

ತತಃ ಕಾಲೇಽಪಿ ಸಂಪ್ರಾಪ್ತೇ ದೇವಶಕ್ತ್ಯಾ ಯದಾ ಧೃತಃ ।
ನ ಗರ್ಭಃ ಪ್ರಸವಂ ಯಾತಿ ತದಾಭೂತ್ಪೀಡಿತಾ ಕ್ಷಿತಿಃ ॥ ೧೨ ॥

ಕಠೋರಗರ್ಭಾಸಾದೇವೀ ಗರ್ಭಭಾರಂ ನ ಚಾಶಕತ್ ।
ಯದಾ ವೋಢುಂ ತದಾ ದೇವಂ ಮಾಧವಂ ಶರಣಂ ಗತಾ ॥ ೧೩ ॥

ಬಂದರೂ ಜನನವಾಗದಿರುವಂತೆ ಬಹಳದಿವಸ ಗರ್ಭದಲ್ಲಿಯೇ ಅವರು ತಮ್ಮ ಶಕ್ತಿಯಿಂದ ತಡೆದರು.

೧೦. ಅನಂತರ ಆದಿವರಾಹನು ತನ್ನ ಮಿಕ್ಕ ಮುಕ್ಕಳೊಂದಿಗೆ ಶರೀರವನ್ನು ತ್ಯಜಿಸಿದನು. ಆಗ ಜಗತ್ತನ್ನು ಧರಿಸುವ ಭೂಮಿಯು ಅತ್ಯಂತ ದುಃಖದಿಂದ ಬಳಲಿದವಳಾದಳು.

೧೧. ಹೀಗೆ ತುಂಬಾ ಶೋಕಗೊಂಡವಳಾಗಿ ಭೂಮಿಯು ಮತ್ತೆಮತ್ತೆ ರೋಧಿಸಿದಳು. ಆಗ ವಿಷ್ಣುವು ಅವಳನ್ನು ನಯವಾದ ಮಾತುಗಳಿಂದ ಸಮಾಧಾನಗೊಳಿಸಿದನು.

೧೨. ಅನಂತರ ಜನನಕಾಲವು ಬಂದರೂ ದೇವತೆಗಳ ಶಕ್ತಿಯಿಂದ ತಡೆಯಲ್ಪಟ್ಟುಕಾರಣ ಭೂಮಿಯ ಗರ್ಭವು ಪ್ರಸವ (ಜನನ) ವನ್ನೇ ಹೊಂದಲಿಲ್ಲವು. ಆಗ ಭೂದೇವಿಯು ಅದರಿಂದ ತುಂಬಾ ದುಃಖಕ್ಕೊಳಗಾದಳು.

೧೩. ತುಂಬಿದ ಗರ್ಭವುಳ್ಳ ಭೂದೇವಿಯು ಆ ಗರ್ಭಭಾರವನ್ನು ಹೊರಲಾರದೇ ದೇವನಾದ ನಾರಾಯಣನನ್ನು ಮರೆಹೊಕ್ಕಳು.

ಶರಣ್ಯಂ ಶರಣಂ ಗತ್ವಾ ಮಾಧವಂ ಜಗತಾಂ ಪತಿಂ ।
ಪ್ರಣಮ್ಯ ಶಿರಸಾ ದೇವೀ ವಾಕ್ಯಮೇತದುವಾಚ ಹ ॥ ೧೪ ॥

॥ ಪೃಥಿವ್ಯುವಾಚ ॥

ನಮಸ್ತೇ ಜಗದವ್ಯಕ್ತರೂಪ ಕಾರಣಕಾರಣ ।
ಪ್ರಧಾನಪುರುಷಾತೀತ ಸ್ಥಿತ್ಯುತ್ಪತ್ತಿಲಯಾತ್ಮಕ ॥ ೧೫ ॥

ಜಗನ್ನಿಯೋಜನಪರ ಸ್ವಾಹಾ ಭೋಗಧರೋತ್ತಮ ।
ಜಗದಾನಂದ ನಂದಾತ್ಮನ್ ಭಗವನ್ ಜಗದೀಶ್ವರ ॥ ೧೬ ॥

ನಿಯೋಜಕೋ ನಿಯೋಜ್ಯಶ್ಚ ವಿಭ್ರಾಜನ್ವಿಷ್ಣುರವ್ಯಯ ।
ನಮಸ್ತುಭ್ಯಂ ಜಗದ್ಧಾತಸ್ತ್ರಿಲೋಕಾಲಯ ವಿಶ್ವಕೃತ್ ॥ ೧೭ ॥

---

೧೪. ರಕ್ಷಕನೂ, ಒಡೆಯನೂ ಆದ ಮಾಧವನನ್ನು ಪುರೆಹೊಕ್ಕು ಭೂದೇವಿಯು ಆತನನ್ನು ಕುರಿತು ಹೀಗೆ ಹೇಳಿದಳು.

೧೫. ಭೂದೇವಿಯು ಹೇಳಿದಳು:—ಜಗತ್ತಿನಲ್ಲಿ ಚರ್ಮಕ್ಷಚಸ್ಸುಗಳಿಗೆ ಕಾಣಿಸದ ರೂಪವುಳ್ಳವನೂ, ಎಲ್ಲಾ ಜಗತ್ತಿಗೂ ಕಾರಣನೂ, ಪ್ರಕೃತಿಪುರುಷರಿಗಿಂತಲೂ ಭಿನ್ನನೂ, ಸೃಷ್ಟಿಸ್ಥಿತಿಲಯಸ್ವರೂಪನೂ ಆದ ಓ ಮಾಧವನೇ! ನಿನಗೆ ನಮಸ್ಕಾರವು.

೧೬. ಎಲೈ ಜಗದೊಡೆಯನೇ! ನೀನು ಜಗತ್ತನ್ನು ಆಯಾಯ ಕರ್ಮದಲ್ಲಿ ನಿಯೋಗಿಸುವವನು, ಸ್ವಾಹಾದೇವಿಯಿಂದ ಯಾಗದಲ್ಲಿ ಹವಿಸ್ಸನ್ನು ಧರಿಸುವವನು, ಜಗತ್ತಿಗೆ ಆನಂದವನ್ನು ಕೊಡುವವನು, ಆನಂದಸ್ವರೂಪನು. ಇಂತಪ ನಿನಗೆ ನಮಿಸುವೆನು.

೧೭. ನಿಯೋಗಿಸುವವನೂ, ನಿಯೋಗವನ್ನು ಹೊಂದುವವನೂ ನೀನೇ ಆಗಿರುವೆ ಮತ್ತು ಪ್ರಕಾಶಸ್ವರೂಪನೂ, ವ್ಯಾಪಕನೂ, ನಾಶವಿಲ್ಲದವನೂ. ಮೂರು ಲೋಕಗಳಿಗೆ ಆಧಾರನೂ ಮತ್ತು ಜಗತ್ತನ್ನು ಸೃಷ್ಟಿಸುವವನೂ ಸಹ ಆದ ನಿನಗೆ ನಮಸ್ಕಾರವು.

ಯಃ ಪಾಲಯತಿ ನಿತ್ಯಾನಿ ಸ್ಥಾಪಯತ್ಯೇವ ತತ್ಪರಃ ।
ತಂ ತ್ವಾಂ ನಿಯಮರೂಪೇಣ ನಮಾಮಿ ಜಗದೀಶ್ವರ ॥ ೧೮ ॥

ತ್ವಂ ಮಾಧವಃ ಪ್ರವೇಕಶ್ಚ ಕಾಮುಃ ಕಾಮಾಲಯೋ ಲಯಃ ।
ಪ್ರಸೂತಿಚ್ಯುತಿಹೇತ್ವರ್ಥತ್ರಾಣಕಾರಣಮಿಶ್ವರ ॥ ೧೯ ॥

ನ ಯಸ್ಯ ತೇ ಕ್ಲೇದಾಯ ಸ್ಯುರಾಪೋ ನೋಷ್ಣಾ ತಥೋಷ್ಣತೇ ।
ನ ಶೀತಾಯ ಭವೇಚ್ಛೀತಂ ತಸ್ಮೈ ತುಭ್ಯಂ ನಮೋ ನಮಃ ॥ ೨೦ ॥

ನ ಸಮುದ್ರಃ ಕ್ಲಮಕರೋ ನ ಶೋಷಾಯ ದಹಾತ್ಮಕಃ ।
ನ ಮೃತ್ಯವೇ ಯಸ್ಯ ಯಮಸ್ತಸ್ಮೈ ತುಭ್ಯಂ ನಮೋ ನಮಃ ॥ ೨೧ ॥

ಯಚ್ಚಿದ್ಧಾರ್ಯಂ ಯೋಗಿಭಿಃ ಶಾಂತದೋಷೈ ।
ರುನ್ಮಾರ್ಗಾಣಾಂ ಯಾತ್ಯರಿಧ್ಯೇಯಕೃತ್ಯಂ ॥

---

೧೮. ನಿತ್ಯವಾದ ವಸ್ತುಗಳನ್ನು ಪಾಲಿಸುವವನೂ, ಕ್ರಮವಾಗಿ ಸ್ಥಾಪಿಸುವವನೂ ಆದ ಓ ಜಗದೀಶ್ವರನೇ! ನಿನ್ನನ್ನು ನಮಸ್ಕರಿಸುವೆನು.

೧೯. ನೀನು ಲಕ್ಷ್ಮೀಪತಿಯೂ, ಉತ್ತಮನೂ, ಸುಂದರನೂ, ಇಷ್ಟಾರ್ಥಗಳಿಗೆ ಆಶ್ರಯನೂ, ನಾಶಕನೂ ಆಗಿರುವೆ. ಓ ಪ್ರಭುವೇ ಇಂತಹ ನಿನ್ನನ್ನು ಗರ್ಭಧಾರಣ ನಿವೃತ್ತಿಗಾಗಿ ಶರಣುಹೊಂದಿರುವೆನು.

೨೦. ನಿನ್ನನ್ನು ಜಲಗಳು ಕ್ಲೇದಗೊಳಿಸಲಾರವು. ತೇಜಸ್ಸು ನಿನ್ನನ್ನು ಒಣಗಿಸಲಾರದು. ಶೀತವು ನಿನಗೆ ಶೀತವನ್ನುಂಟುಮಾಡಲಾರದು. ಇಂತಹ ನಿನಗೆ ನಮಸ್ಕಾರವು ಎಂದರೆ, ಪಂಚಭೂತಗಳಾದ ನೀರು, ಅಗ್ನಿ ಮುಂತಾದವು ನಿನ್ನಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಾರವು. ಅವುಗಳಿಗಿಂತ ಅತೀತನಾದನೆಂದು ತಾತ್ಪರ್ಯವು.

೨೧. ಸಮುದ್ರವು ನಿನ್ನನ್ನು ತರಂಗಗಳಿಂದ ಹೊಡೆದು ತೊಂದರೆಗೊಳಿಸಲು ಅಸಮರ್ಥವು. ಅಗ್ನಿಯು ನಿನ್ನನ್ನು ದಹಿಸಲಾರನು, ಯಮನು ನಿನ್ನನ್ನು ಕೊಲ್ಲಲಾರನು, ಇಂತಹ ನಿನಗೆ ನಮಿಸುವೆನು.

೨೨. ಜಿತೇಂದ್ರಿಯರಾದ ಯೋಗಿಗಳು ನಿನ್ನನ್ನು ಮನಸ್ಸಿನಲ್ಲಿ ಧ್ಯಾನಿಸುವರು. ನೀನು ದುಷ್ಪರನ್ನು ಶಿಕ್ಷಿಸಿ ಸನ್ಮಾರ್ಗವನ್ನು ವೃದ್ಧಿಗೊಳಿಸುವವನು. ಇಂತಹ ನೀನು ನನ್ನನ್ನು ರಕ್ಷಿಸು.

ನಿತ್ಯಂ ಯತ್ತದ್ರೂಪಮಾಗಾರ್ಹವಸಕ್ತಂ ।
ಸ ತ್ವಂ ತ್ರಾಹಿ ತ್ರಾಣಮಿಚ್ಛನ್ ಧರಿತ್ರೀಂ ॥ ೨೨ ॥

॥ ಮಾರ್ಕಂಡೇಯ ಉವಾಚ ॥

ಇತಿ ಸ್ತುತೋ ಹೃಷೀಕೇಶೋ ಜಗದ್ಧಾತ್ರ್ಯಾ ತದಾ ಹರಿಃ ।
ಪ್ರಾದುಭೂರ್ತಸ್ತದಾ ಪ್ರಾಪ ಧರಿತ್ರೀಂ ದೀನಮಾನಸಾಂ ॥ ೨೩ ॥

॥ ಶ್ರೀ ಭಗವಾನುವಾಚ ॥

ಕಥಂ ದೀನಮನಾ ದೇವಿ ಧರಿತ್ರಿ ಪರಿದೇವಸೇ ।
ತವ ವಾ ಕಂ ಕೃತಾ ಪೀಡಾ ವೇತ್ತುಮಿಚ್ಛಾಮಿ ತಾಮಹಂ ॥ ೨೪ ॥

ಮುಖಂ ತೇ ಪರಿಶುಷ್ಕಂ ತು ಶರೀರಂ ಕಾಂತಿವರ್ಜಿತಂ ।
ಆಕುಲಂ ನಯನದ್ವಂದ್ವಂ ಭ್ರೂವಿಭ್ರಮವಿವರ್ಜಿತಂ ॥ ೨೫ ॥

ಈದೃಶಂ ತವ ರೂಪಂ ತು ದೃಷ್ಟಪೂರ್ವಂ ಕದಾಪಿ ನ ।
ರೂಪಸ್ಯ ತು ವಿಪರ್ಯಾಸೇ ದುಃಖಬೀಜಂ ಚ ಭಾಷಯ ॥ ೨೬ ॥

---

೨೩. ಮಾರ್ಕಂಡೇಯನು ಹೇಳಿದನು :—ಹೀಗೆ ಭೂದೇವಿಯಿಂದ ಸ್ತುತಿಸಲ್ಪಡಲು ಹರಿಯು ಪ್ರತ್ಯಕ್ಷನಾಗಿ ದುಃಖಿತಳಾದ ಧರಿತ್ರಿಯನ್ನು ಕುರಿತು ಹೀಗೆ ಹೇಳಿದನು.

೨೪. ಶ್ರೀ ಭಗವಂತನು ಹೇಳಿದನು :—ಎಲೈ ಭೂದೇವಿಯೇ ! ದುಃಖದಿಂದ ಅದೇಕೆ ವ್ಯಥೆಪಡುತ್ತಿರುವೆ? ನಿನಗೆ ಯಾವುದರಿಂದ ಪೀಡೆಯುಂಟಾಗಿರುವುದು? ಅದನ್ನು ಹೇಳು, ನಾನು ಕೇಳಲಿಚ್ಛಿಸುತ್ತೇನೆ.

೨೫. ನಿನ್ನ ಮುಖವು ಒಣಗಿರುವುದು, ಶರೀರದಲ್ಲಿ ಕಾಂತಿಯಿಲ್ಲವು, ಕಣ್ಣುಗಳು ದುಃಖದಿಂದ ಭ್ರೂವಿಲಾಸರಹಿತವಾಗಿರುವುವು.

೨೬. ನಿನ್ನ ರೂಪವು ಇಷ್ಟು ವ್ಯತ್ಯಾಸವಾದುದನ್ನು ಹಿಂದೆ ಯಾವಾಗಲೂ ನೋಡಿಲ್ಲವು. ಈ ವ್ಯತ್ಯಾಸಕ್ಕೆ ಕಾರಣವಾದ ದುಃಖವೇನೆಂಬುದನ್ನು ಹೇಳು.

ಏತಚ್ಛ್ರುತ್ವಾ ವಚಸ್ತಸ್ಯ ಮಾಧವಸ್ಯ ಜಗತ್ಪತೇಃ ।
ವಿನಯಾವನತಾ ದೇವೀ ತದಾ ಪ್ರಾಹ ಸಗದ್ಗದಂ ॥ ೨೭ ॥

॥ ಪೃಥಿವ್ಯುವಾಚ ॥

ನ ಗರ್ಭಭಾರಂ ಸಂವೋಢುಂ ಮಾಧವಾಹಂ ಕ್ಷಮಾಧುನಾ ।
ಭೃಶಂ ನಿತ್ಯಂ ವಿಷೀದಾಮಿ ತಸ್ಮಾತ್ತ್ವಂ ತ್ರಾತುಮರ್ಹಸಿ ॥ ೨೮ ॥

ತ್ವಯಾ ವರಾಹರೂಪೇಣ ಮಲಿನೀ ಕಾಮಿತಾ ಪುರಾ ।
ತೇನ ಕಾಮೇನ ಕುಕ್ಷೌ ಮೇ ಯೋ ಗರ್ಭೋಽಯಂ ತ್ವಯಾಹಿತಃ ॥ ೨೯ ॥

ಕಾಲೇ ಪ್ರಾಪ್ತೇಽಪಿ ಗರ್ಭೋಽಯಂ ನ ಪ್ರಚ್ಯವತಿ ಮಾಧವ ।
ಕಠೋರಗರ್ಭಾ ತೇನಾಹಂ ಪೀಡಿತಾಸ್ಮಿ ದಿನೇ ದಿನೇ ॥ ೩೦ ॥

ಯದಿ ನ ತ್ರಾಹಿ ಮಾಂ ದೇವ ಗರ್ಭದುಃಖಾಚ್ಜಗತ್ಪತೇ ।
ನ ಚಿರಾದೇವ ಯಾಸ್ಯಾಮಿ ಮೃತ್ಯೋರ್ವಶಮಸಂಶಯಂ ॥ ೩೧ ॥

---

೨೭. ಜಗದೊಡೆಯನಾದ ಮಾಧವನ ಈರೀತಿಯಾದ ಮಾತುಗಳನ್ನು ಕೇಳಿ ಭೂದೇವಿಯು ವಿನಯದಿಂದ ಬಗ್ಗಿ ದುಃಖದಿಂದ ಕಂಠವು ಬಿಗಿದುಬರುತ್ತಿರಲು ಹೀಗೆ ಹೇಳಿದಳು.

೨೮. ಭೂದೇವಿಯು ಹೇಳಿದಳು:—ಓ ಮಾಧವನೇ! ಈ ಗರ್ಭಭಾರವನ್ನು ನಾನು ಹೊರಲಾರೆನು. ಆದಕಾರಣ ನಾನು ನಿತ್ಯವೂ ತುಂಬಾ ದುಃಖವನ್ನು ಅನುಭವಿಸುತ್ತಲಿರುವೆನು. ಆದುದರಿಂದ ನೀನು ನನ್ನನ್ನು ರಕ್ಷಿಸು.

೨೯. ಹಿಂದೆ ವರಾಹರೂಪದಿಂದ ನೀನು ಋತುಮತಿಯಾದ ನನ್ನನ್ನು ಕಾಮಿಸಿ ನನ್ನ ಉದರದಲ್ಲಿ ಗರ್ಭವನ್ನುಂಟುಮಾಡಿರುವೆ. ಜನನಕಾಲವು ಬಂದರೂ ಆ ಗರ್ಭವು ಇನ್ನೂ ಜನನವನ್ನು ಹೊಂದಲಿಲ್ಲವು.

೩೦-೩೧. ಅದರಿಂದ ಪೂರ್ಣಗರ್ಭಿಣಿಯಾದ ನಾನು ದಿನದಿನವೂ ಪೀಡೆಯನ್ನು ಅನುಭವಿಸುತ್ತಿರುವೆನು. ಓ ಜಗದೊಡೆಯನೇ! ಆ ದುಃಖದಿಂದ ನನ್ನನ್ನು ನೀನು ಕಾಪಾಡದಿದ್ದರೆ ಖಂಡಿತವಾಗಿ ಸ್ವಲ್ಪದಿವಸಗಳಲ್ಲಿಯೇ ನಾನು ಮೃತಳಾಗುವೆನು.

ಕಯಾ ಪಿ ನೇದೃಶೋ ಗರ್ಭಃ ಪೂರ್ವಂ ಮಾಧವ ವೈ ಧೃತಃ ।
ಯೋಽಚಲಾಂ ಚಾಲಯತಿ ಮಾಂ ಸರಸೀಮಿವಕುಂಜರಃ ॥ ೩೨ ॥

ಏತಚ್ಛ್ರುತ್ವಾ ವಚಸ್ತಸ್ಯಾಃ ಪೃಥಿವ್ಯಾಃ ಪೃಥಿವೀಧರಃ ।
ಆಹ್ಲಾದಯನ್ ಪ್ರತ್ಯುವಾಚ ಹರಿಸ್ತಪ್ತಾಂ ಲತಾಮಿವ ॥ ೩೩ ॥

॥ ಶ್ರೀ ಭಗವಾನುವಾಚ ॥

ನ ಧರೇ ತೇ ಮಹದ್ದುಃಖಂ ಚಿರಸ್ಥಾಯಿ ಭವಿಷ್ಯತಿ ।
ಶೃಣು ಯೇನ ಪ್ರಕಾರೇಣ ಚಾನುಭೂತಮಿದಂ ತ್ವಯಾ ॥ ೩೪ ॥

ಮಲಿನ್ಯಾ ಸಹ ಸಂಗೇನ ಯೋ ಗರ್ಭಃಸಂಧೃತಸ್ತ್ವಯಾ ।
ಸೋಽಭೂದಸುರಸತ್ತ್ವಸ್ತು ಘೃಷ್ಟೇಃ ಪುತ್ರೋಽಪಿ ದಾರುಣಃ ॥ ೩೫ ॥

ಜ್ಞಾತ್ವಾ ತಸ್ಯ ಚ ವೃತ್ತಾಂತಂ ಗರ್ಭಸ್ಯ ದ್ರುಹಿಣಾದಯಃ ।
ದೈವೀಭಿಃ ಶಕ್ತಿಭಿರ್ಬದ್ಧಸ್ತವ ಕುಕ್ಷೌ ತು ತತ್ಪರಃ ॥ ೩೬ ॥

---

೩೨. ಓ ಮಾಧವನೇ! ಆ ಗರ್ಭವು ಅಚಲಳಾದ ನನ್ನನ್ನು, ಆನೆಯು ಸರಸ್ಸನ್ನು ಗಳಹುವಂತೆ ಚಲಿಸುತ್ತಿರುವುದು. ಇಂತಹ ಗರ್ಭವನ್ನು ಯಾವಳೂ ಹಿಂದೆ ಧರಿಸಲಿಲ್ಲವು.

೩೩. ಭೂಮಿಯ ಈ ಮಾತುಗಳನ್ನು ಕೇಳಿ ಹರಿಯು ಒಣಗಿದ ಬಳ್ಳಿಯಂತೆ ಬಾಡಿದ ಮುಖವುಳ್ಳ ಅವಳನ್ನು ಸಂತೋಷಗೊಳಿಸುತ್ತಾ ಹೀಗೆ ಹೇಳಿದನು.

೩೪. ಶ್ರೀ ಭಗವಂತನು ಹೇಳಿದನು:—ಎಲೈ ಭೂದೇವಿಯೇ! ನಿನ್ನ ಈ ಮಹಾದುಃಖವು ಬಹಳದಿವಸವಿರುವುದಿಲ್ಲವು. ನೀನು ಈ ದುಃಖವನ್ನು ಯಾವ ನಿಮಿತ್ತವಾಗಿ ಅನುಭವಿಸುತ್ತಿರುವೆ, ಎಂಬುದನ್ನು ಹೇಳುವೆನು, ಕೇಳು.

೩೫. ಋತುಮತಿಯಾದ ನೀನು ನನ್ನೊಡನೆ ಸಂಗದಿಂದ ಯಾವ ಗರ್ಭವನ್ನು ಧರಿಸಿದೆಯೋ ಅದು ವರಾಹನಿಂದ ಜನಿಸಿದುದಾದರೂ ರಾಕ್ಷಸ ಸ್ವಭಾವವುಳ್ಳದು.

೩೬. ಈ ಗರ್ಭವು ಹೀಗೆ ರಾಕ್ಷಸ ಸ್ವಭಾವ ಮತ್ತು ಪರಾಕ್ರಮವುಳ್ಳವೆಂದು ತಿಳಿದು ಬ್ರಹ್ಮನೇ ಮೊದಲಾದ ದೇವತೆಗಳು ತಮ್ಮ ಶಕ್ತಿಯಿಂದ ಹೊರಗೆಬರದಂತೆ ಅದನ್ನು ನಿನ್ನ ಹೊಟ್ಟೆಯಲ್ಲಿಯೇ ತಡೆದು ಬಂಧಿಸಿರುವರು.

ಸರ್ಗಾದೌ ಯದಿ ಜಾಯೇತ ಭವತ್ಯಾಸ್ತಾದೃಶಃ ಸುತಃ ।
ಭ್ರಂಶಯೇತ್ಸಕಲಾನ್ ಲೋಕಾಂಸ್ತ್ರೀನಿಮಾನ್ ಸಸುರಾಸುರಾನ್ ॥ ೩೭ ॥

ಅತಸ್ತಸ್ಯ ಬಲಂ ವೀರ್ಯಂ ಜ್ಞಾತ್ವಾ ಬ್ರಹ್ಮಾದಯಃ ಸುರಾಃ ।
ಪ್ರಾಕ್ಸೃಷ್ಟಿಕಾಲೇ ತಂ ಗರ್ಭಂ ತಥಾಽಧುರ್ಜಗತಾಂ ಕೃತೇ ॥ ೩೮ ॥

ಅಷ್ಟಾವಿಂಶತಿಮೇ ಪ್ರಾಪ್ತೇ ಆದಿಸರ್ಗಾಚ್ಚತುರ್ಯುಗೇ ।
ತ್ರೇತಾಯುಗಸ್ಯ ಮಧ್ಯೇ ತು ಸುತಂ ತ್ವಂ ಜನಯಿಷ್ಯತಿ ॥ ೩೯ ॥

ಯಾವತ್ಸತ್ಯಯುಗಂ ಯಾತಿ ತ್ರೇತಾರ್ಧಂ ಚ ವರಾನನೇ ।
ತಾವದ್ವಿಭರ್ಮಿ ಮದ್ಗರ್ಭಂ ದತ್ತಃ ಕಾಲೋ ಮಯಾ ತವ ॥ ೪೦ ॥

ನ ಯಾವಜ್ಜಾಯತೇ ಧಾತ್ರಿ ಗರ್ಭಸ್ತೇ ದ್ಯುತಿದಾರುಣಃ ।
ತಾವದ್ಗರ್ಭವತೀ ದುಃಖಂ ನ ತ್ವಂ ಪ್ರಾಪ್ಸ್ಯಸಿ ಭಾಮಿನಿ ॥ ೪೧ ॥

---

೩೭. ಸೃಷ್ಟಿಗೆ ಮೊದಲು ಅಂತಹ ರಾಕ್ಷಸ ಸ್ವಭಾವವುಳ್ಳ ನಿನ್ನ ಮಗನು ಜನಿಸಿದರೆ ಅವನು ದೇವರಾಕ್ಷಸಸಹಿತ ಮೂರು ಲೋಕಗಳನ್ನು ನಾಶಮಾಡುವನು.

೩೮. ಆದಕಾರಣ ಬ್ರಹ್ಮನೇ ಮೊದಲಾದ ದೇವತೆಗಳು ಆ ಗರ್ಭದ ಬಲವನ್ನೂ, ಪರಾಕ್ರಮವನ್ನೂ, ತಿಳಿದು ಅದನ್ನು ಹಿಂದೆ ಸೃಷ್ಟಿಕಾಲದಲ್ಲಿ ಜಗತ್ತಿನ ಕ್ಷೇಮಕ್ಕಾಗಿ ತಮ್ಮ ಶಕ್ತಿಯಿಂದ ಬಂಧಿಸಿರುವರು.

೩೯. ಮುಂದೆ ಆದಿಸೃಷ್ಟಿಯಿಂದ ಇಪ್ಪತ್ತೆಂಟನೆಯ ಚತುರ್ಯುಗವು ಬರಲು ತ್ರೇತಾಯುಗದ ಮಧ್ಯದಲ್ಲಿ ನೀನು ಈ ಮಗನನ್ನು ಹಡೆಯುವೆ.

೪೦. ಸುಂದರವಾದ ಮುಖವುಳ್ಳ ಎಲೈ ಭೂದೇವಿಯೇ! ಸತ್ಯಯುಗವಾದ ತ್ರೇತಾಯುಗವು ಅರ್ಧಕಳೆಯುವವರೆಗೆ ಈ ಮಹಾಗರ್ಭವನ್ನು ಧರಿಸು. ಅಲ್ಲಿಯವರೆಗೆ ನಿನಗೆ ಅವಧಿಯನ್ನು ಕೊಟ್ಟಿರುವೆನು.

೪೧. ಎಲೈ ಭೂಮಿಯೇ! ನೀನು ಕ್ಲೇಶಕರವಾದ ಈ ಗರ್ಭದಿಂದ ಪುತ್ರನನ್ನು ಹಡೆಯುವವರೆವಿಗೂ ಗರ್ಭಭಾರದ ದುಃಖವನ್ನು ಹೊಂದುವುದಿಲ್ಲವು.

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಭಗವಾನ್ವಿಷ್ಣುಃ ಪೃಥಿವೀಂ ಗರ್ಭಿಣೀಂ ತದಾ ।
ನಾಭೌ ಪಸ್ಪರ್ಶ ದಯಿತಾಂ ಶಂಖಾಗ್ರೇಣಾತಿಪೀಡಿತಾಂ ॥ ೪೨ ॥

ಸಾ ಸ್ಪೃಷ್ಟಾ ವಿಷ್ಣುನಾ ಪೃಥ್ವೀ ಶರೀರಂ ಲಘು ಚಾಸದತ್ ।
ಗರ್ಭೋಽಪಿ ಲಘಿಮಾನಂ ಸಾ ಪ್ರಾಪಾತೀವ ಸುಖಪ್ರದಂ ॥ ೪೩ ॥

ಅಗರ್ಭಾ ಯಾದೃಶೀ ನಾರಿ ತಾದೃಶೀ ಸಮಜಾಯತ ।
ಧೃತಗರ್ಭಾಪಿ ಮುದಿತಾ ಸಾ ಬಭೂವ ಜಗತ್ಪ್ರಸೂಃ ॥ ೪೪ ॥

ತತಃ ಪುನರಿದಂ ವಾಕ್ಯಮುಕ್ತ್ವಾ ಸ ಭಗವಾನ್ ಕ್ಷಿತಿಂ ।
ಪುನಃ ಪ್ರಸಾದಯಾಮಾಸ ಸಾಮುಭಿರ್ಬಹುಭಿಶ್ಚ ತಾಂ ॥ ೪೫ ॥

ಜಗದ್ಧಾತ್ರಿ ಮಹಾಸತ್ತ್ವೇ ತ್ವಂ ಧೃತಿರ್ಧಾರಣಾತ್ಮಿಕಾ ।
ಸರ್ವೇಷಾಂ ಧಾರಣಾದ್ದೇವಿ ತ್ವಂ ಧಾತ್ರೀತಿ ಪ್ರಗೀಯಸೇ ॥ ೪೬ ॥

---

೪೨. ಮಾರ್ಕಂಡೇಯನು ಹೇಳಿದನು:—ಹೀಗೆ ಹೇಳಿ ಭಗವಂತನಾದ ವಿಷ್ಣುವು ಗರ್ಭಿಣಿಯೂ, ದುಃಖಿತಳೂ, ತನ್ನ ಪ್ರಿಯಮಡದಿಯೂ ಆದ ಭೂದೇವಿಯನ್ನು ಶಂಖದ ಅಗ್ರಭಾಗದಿಂದ ನಾಭಿಪ್ರದೇಶದಲ್ಲಿ ಸ್ಪರ್ಶಿಸಿದನು (ನೇವರಿಸಿದನು.)

೪೩. ಹೀಗೆ ವಿಷ್ಣುವಿನಿಂದ ಸ್ಪರ್ಶಿಸಲ್ಪಟ್ಟಮೇಲೆ ಆ ಭೂದೇವಿಯ ಶರೀರವೂ ಗರ್ಭವೂ ತುಂಬ ಹಗುರವನ್ನು ಹೊಂದಿದವು. ಅದರಿಂದ ಆ ಭೂಮಿಯು ತುಂಬಾ ಸುಖಿಗೊಂಡಳು.

೪೪. ಜಗನ್ಮಾತೆಯಾದ ಭೂದೇವಿಯು ಗರ್ಭವತಿಯಾದರೂ ಗರ್ಭಿಣಿಯಲ್ಲದ ಸ್ತ್ರೀಯಂತೆ ಅತ್ಯಂತ ಸುಖಿಯಾದಳು.

೪೫. ಅನಂತರ ತಿರುಗಿ ಭಗವಂತನು ಅನೇಕ ಮೃದುಮಧುರವಾದ ಮಾತುಗಳಿಂದ ಆ ಭೂದೇವಿಯನ್ನು ಸಂತೋಷಗೊಳಿಸಿದನು.

೪೬. ಜಗತ್ತನ್ನು ಧರಿಸುವವಳೂ, ಮಹಾಬಲಶಾಲಿನಿಯೂ ಆದ ಎಲ್ಲೆ ಭೂಮಿಯೇ! ನೀನು ಜಗತ್ತನ್ನು ಧರಿಸುವುದರಿಂದ ನೀನು "ಜಗದ್ಧಾತ್ರೀ" ಎಂದು ಪ್ರಸಿದ್ಧಳಾಗಿರುವೆ.

ಕ್ಷಮಾ ಯಸ್ಮಾಜ್ಜಗದ್ಧರ್ತುಂ ಶಕ್ತಾ ಕ್ಷಾಂತಿಯುತಾತ್ರ ಯತ್ ।
ಸರ್ವಂ ವಸು ತ್ವಯಿ ನ್ಯಸ್ತಂ ಯಸ್ಮಾದ್ವಸುಮತೀ ತತಃ ॥ ೪೭ ॥

ತದ್ದುಃಖಂ ತ್ಯಜ ಪುತ್ರಸ್ತೇ ಯದಾ ಸಂಜಾಯತೇ ತದಾ ।
ಮಾಂ ಸ್ಮರಿಷ್ಯಸಿ ದೇವಿ ತ್ವಂ ಪುತ್ರಂ ತೇ ಪಾಲಯಾಮ್ಯಹಂ ॥ ೪೮ ॥

ಇದಂ ರಹಸ್ಯಂ ಕುತ್ರಾಪಿ ನ ಪ್ರಕಾಶ್ಯಂ ತ್ವಯಾ ಧರೇ ।
ಯನ್ಮಯಾ ಕಥಿತಂ ದೇವಿ ರಹಸ್ಯಂ ಪರಮಂ ಪರಂ ॥ ೪೯ ॥

ಗರ್ಭಸ್ತ್ವಂ ಮಹಾಭಾಗೇ ತ್ರೇತಾಯಾ ಮಧ್ಯಭಾಗತಃ ।
ಉತ್ಪತ್ಸ್ಯತೇ ಹತೇ ವೀರೇ ರಾವಣೇ ರಾಮಸಂಜ್ಞಿನಾ ॥ ೫೦ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಭಗವಾನ್ವಿಷ್ಣುಸ್ತತ್ರೈವಾಂತರಧೀಯತ ।
ಆಜ್ಞಾಪ್ಯ ಪೃಥಿವೀಂ ದೇವೀಂ ಗರ್ಭಭಾರಪ್ರಪೀಡಿತಾಂ ॥ ೫೧ ॥

---

೪೭. ಸಕಲ ಜಗತ್ತುಗಳನ್ನೂ ಸಹನೆಯಿಂದ ಧರಿಸಲು ಸಮರ್ಥಳಾದುದರಿಂದ ನಿನಗೆ "ಕ್ಷಮಾ" (ಸಮರ್ಥಳು) ಎಂದೂ, ಸಕಲ ರತ್ನಗಳೂ ನಿನ್ನಲ್ಲಿ ಇರುವುದರಿಂದ "ವಸುಮತೀ" (ರತ್ನಗಳುಳ್ಳವಳು) ಎಂತಲೂ ಪೆಸರು.

೪೮. ಆದಕಾರಣ ಎಲೈ ಭೂದೇವಿಯೇ! ಈ ದುಃಖವನ್ನು ತ್ಯಜಿಸು. ನಿನ್ನ ಮಗನು ಯಾವಾಗ ಜನಿಸುವನೋ ಆಗ ನನ್ನನ್ನು ಸ್ಮರಿಸು, ನಾನು ನಿನ್ನ ಮಗನನ್ನು ಸಲಹುವೆನು.

೪೯. ಎಲೈ ಭೂದೇವಿಯೇ! ನಾನು ಹೇಳಿದ ಈ ಮಾತು ತುಂಬಾ ರಹಸ್ಯವಾದುದು. ಇದನ್ನು ನೀನು ಯಾರೊಡನೆಯೂ ಹೇಳಕೂಡದು.

೫೦. ಈ ನಿನ್ನ ಗರ್ಭವು ತ್ರೇತಾಯುಗದ ಮಧ್ಯದಲ್ಲಿ ರಾಮನೆಂಬುವವನಿಂದ ರಾವಣನೆಂಬ ವೀರನು ಹತನಾದಮೇಲೆ ಜನನವನ್ನು ಹೊಂದುವುದು.

೫೧. ಮಾರ್ಕಂಡೇಯನು ಹೇಳಿದನು:—ಹೀಗೆ ಗರ್ಭಭಾರದಿಂದ ಪೀಡಿತಳಾದ ಭೂದೇವಿಗೆ ಅಪ್ಪಣೆಯನ್ನು ಮಾಡಿ ಭಗವಂತನಾದ ವಿಷ್ಣುವು ಅಲ್ಲಿಯೇ ಅಂತರ್ಧಾನನಾದನು.

ಧರಾಪಿ ಕುಶಲಾ ಕ್ಷ್ಮಾ ಲಘುಕಾಯಾ ಬಲೈರ್ಯುತಾ ।
ಅಗರ್ಭೇವ ಯಯೌ ದೇವೀ ಮುದಾ ಪರಮಯಾ ಯುತಾ ॥ ೫೨ ॥

॥ ಇತಿ ಶ್ರೀ ಕಾಲಿಕಾಪುರಾಣೇ ಸಪ್ತತ್ರಿಂಶೋಽಧ್ಯಾಯಃ ॥

---

೫೨. ಹೀಗೆ ತನ್ನ ಶರೀರವು ಗರ್ಭಭಾರವಿಲ್ಲದೆ ಹಗುರವಾಗಿಯೂ, ಕೃಶವಾಗಿಯೂ ಆಗಲು ಭೂದೇವಿಯು ಗರ್ಭಿಣಿಯಲ್ಲದ ಸ್ತ್ರೀಯಂತೆ ಶಕ್ತಿಯುಳ್ಳವಳಾಗಿ ಸಂತೋಷದಿಂದ ಹೊರಟುಹೋದಳು.

ಇಲ್ಲಿಗೆ ಮೂವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

॥ ಅಥ ಶ್ರೀ ಕಾಲಿಕಾಪುರಾಣೇಽಷ್ಟತ್ರಿಂಶೋಽಧ್ಯಾಯಃ ॥

॥ ಮಾರ್ಕಂಡೇಯ ಉವಾಚ ॥

ಅಥ ಕಾಲೇ ಬಹುತಿಥೇ ವ್ಯತೀತೇ ದ್ವಿಜಸತ್ತಮಾಃ ।
ವಿದೇಹವಿಷಯೇ ರಾಜಾ ಜನಕೋ ನಾಮ ವೀರ್ಯವಾನ್ ॥ ೧ ॥

ಸರ್ವರಾಜಗುಣೈರ್ಯುಕ್ತೋ ರಾಜನೀತಿವಿವರ್ಧನಃ ।
ಸತ್ಯವಾಕ್ ಶೀಲವಾನ್ ದಕ್ಷೋ ಬ್ರಹ್ಮಣ್ಯಃ ಪ್ರಯತಃ ಶುಚಿಃ ॥ ೨ ॥

ದೇವದ್ವಿಜಗುರೂಣಾಂ ಚ ಪೂಜಾಸು ನಿರತಃ ಸದಾ ।
ಬಭೂವ ಸರ್ವಲೋಕಾನಾಂ ಪಿತೇವ ಪರಿಪಾಲಕಃ ॥ ೩ ॥

॥ ಮೂವತ್ತೆಂಟನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು :—ಎಲೈ ಬ್ರಾಹ್ಮಣೋತ್ತಮರೇ! ಅನಂತರ ಬಹಳಕಾಲವು ಕಳೆದಮೇಲೆ ವಿದೇಹದೇಶದಲ್ಲಿ ಬಹಳ ಪರಾಕ್ರಮಿಯಾದ ಜನಕನೆಂಬುವನು ರಾಜನಾದನು.

೨. ಆ ರಾಜನು ಎಲ್ಲಾ ರಾಜಗುಣಗಳಿಂದ ಕೂಡಿದವನೂ, ರಾಜನೀತಿಯಲ್ಲಿ ನಿಪುಣನೂ. ಸತ್ಯವಾದಿಯೂ, ಶೀಲವಂತನೂ, ಸಮರ್ಥನೂ, ಬ್ರಾಹ್ಮಣರಿಗೆ ಹಿತನಾದವನೂ, ಜಿತೇಂದ್ರಿಯನೂ, ಶುದ್ಧನೂ ಆಗಿದ್ದನು.

೩. ದೇವತೆಗಳು, ಬ್ರಾಹ್ಮಣರು, ಗುರುಗಳು, ಇವರ ಪೂಜೆಯಲ್ಲಿ ಆಸಕ್ತನಾಗಿ ಸಕಲ ಪ್ರಜೆಗಳನ್ನೂ ತಂದೆಯಂತೆ ಪಾಲಿಸುತ್ತಿದ್ದನು.

ತಸ್ಯ ರಾಜ್ಞಃ ಸುತೋ ನಾಭೂತ್ಪ್ರಾಪ್ತೇ ಕಾಲೇಽಪಿ ವೈ ಯದಾ ।
ತದಾ ಸ ನಿಮನಾ ಭೂತ್ವಾ ಚಿಂತಾಧ್ಯಾನಪರೋಽಭವತ್ ॥ ೪ ॥

ಏಕದಾ ಸೋಽಥ ಶುಶ್ರಾವ ನಾರದಸ್ಯ ಮುಖಾನ್ನೃಪಃ ।
ಅಪುತ್ರೋ ನೃಪತಿರ್ವೃದ್ಧೋ ನಾಮ್ನಾ ದಶರಥೋ ಮಹಾನ್ ॥ ೫ ॥

ಪುತ್ರಾನ್ ಲೇಭೇ ಮಹಾಸತ್ವಾನಧ್ವರೇಣ ಮಹಾಮತಿಃ ।
ಅಯೋಧ್ಯಾಯಾಂ ನಗರ್ಯಾಂ ತು ಋಷ್ಯಶೃಂಗಪುರೋಗಮೈಃ ॥ ೬ ॥

ಮುನಿಭಿರ್ವಿಹಿತೈರ್ಯಜ್ಞೈರ್ಲಬ್ಧವಾನ್ ಸ ನೃಪಃ ಸುತಾನ್ ।
ರಾಮಂ ಚ ಭರತಂ ಚೈವ ಶತ್ರುಘ್ನಂ ಲಕ್ಷ್ಮಣಂ ತಥಾ ॥ ೭ ॥

ಮಹಾಸತ್ತ್ವಾನ್ಮಹಾವೀರಾನ್ದೇವಗರ್ಭೋಪಮಾನ್ ಶುಭಾನ್ ।
ತಚ್ಛ್ರುತ್ವಾ ಜನಕೋ ರಾಜಾ ಪ್ರವಿಶ್ಯಾಂತಃಪುರಂ ಸ್ವಯಂ ॥ ೮ ॥

---

೪. ಆ ಜನಕರಾಜನಿಗೆ ಬಹಳದಿವಸವಾದರೂ ಮಕ್ಕಳೇ ಆಗಲಿಲ್ಲವು. ಆದರಿಂದ ಅವನು ತುಂಬಾ ದುಃಖಗೊಂಡವನಾಗಿ ಚಿಂತೆಗೊಳಗಾದನು.

೫. ಒಂದುದಿನ ಆ ಜನಕನು ನಾರದಮುನಿಯ ಮುಖದಿಂದ ಹೀಗೆ ಕೇಳಿದನು. ಪುತ್ರನಿಲ್ಲದವನೂ, ವೃದ್ಧನೂ, ಬುದ್ಧಿಶಾಲಿಯೂ ಆದ ದಶರಥಮಹಾರಾಜನು ಯಜ್ಞದಿಂದ ಪರಾಕ್ರಮಿಗಳಾದ ಪುತ್ರರನ್ನು ಪಡೆದನು.

೬-೭. ಅಯೋಧ್ಯಾನಗರಿಯಲ್ಲಿ ಋಷ್ಯಶೃಂಗನೇ ಮೊದಲಾದ ಋಷಿಗಳಿಂದ ಮಾಡಲ್ಪಟ್ಟ ಯಜ್ಞಗಳಿಂದ ರಾಮ, ಭರತ, ಲಕ್ಷ್ಮಣ, ಶತ್ರುಘ್ನರೆಂಬ ನಾಲ್ಕು ಜನ ಬಲಶಾಲಿಗಳೂ, ವೀರರೂ, ದೇವಪುತ್ರರಂತಿರುವವರೂ ಆದ ಮಕ್ಕಳನ್ನು ಆ ದಶರಥ ಮಹಾರಾಜನು ಪಡೆದನು ಎಂದು ನಾರದಮುನಿಯ ಮುಖದಿಂದ ಕೇಳಿದನು.

೮. ಅದನ್ನು ಕೇಳಿ ಜನಕರಾಜನು ತನ್ನ ಅಂತಃಪುರವನ್ನು ಪ್ರವೇಶಿಸಿ, ಅಲ್ಲಿ ಪುತ್ರರು ಜನಿಸುವುದಕ್ಕಾಗಿ ಯಜ್ಞವನ್ನು ತಾನೂ ಮಾಡಬೇಕೆಂದು ಪತ್ನಿಯರೊಡನೆ ಆಲೋಚಿಸಿದನು.

ಭಾರ್ಯಾಭಿರ್ಮಂತ್ರಯಾಮಾಸ ಯಜ್ಞಾರ್ಥಂ ಪುತ್ರಜನ್ಮನೇ ।
ಮಂತ್ರಯಿತ್ವಾ ತದಾ ರಾಜಾ ಮಹಿಷೀಪ್ರಮುಖೈಃ ಸ್ವಯಂ ॥ ೯ ॥

ಚತಸೃಭಿಸ್ತು ಭಾರ್ಯಾಭಿರ್ಯಜ್ಞಾರ್ಥಂ ದೀಕ್ಷಿತೋಽಭವತ್ ।
ತತಃ ಪುರೋಧಸಂ ರಾಜಾ ಗೌತಮಂ ಮುನಿಸತ್ತಮಂ ॥ ೧೦ ॥

ತತ್ಪುತ್ರಂಚ ಶತಾನಂದಂ ಪುರೋಧಾಯಾಽಕರೋನ್ಮಖಂ ।
ದ್ವೌ ಪುತ್ರೌ ತಸ್ಯ ಸಂಜಾತೌ ಯಜ್ಞಭೂಮೌ ಮನೋಹರೌ ॥ ೧೧ ॥

ಏಕಾ ಚ ದುಹಿತಾ ಸಾಧ್ವೀ ಭೂಮ್ಯಂತರಗತಾ ಶುಭಾ ।
ನಾರದಸ್ಯೋಪದೇಶೇನ ಯಜ್ಞಭೂಮಿಂ ತತೋ ನೃಪಃ ॥ ೧೨ ॥

ಹಲೇನ ದಾರಯಾಮಾಸ ಯಜ್ಞವಾಟಾವಧಿ ಸ್ವಯಂ ।
ತದ್ಭೂಮಿಜಾತಸೀತಾಯಾಂ ಶುಭಾಂ ಕನ್ಯಾಂ ಸಮುತ್ಥಿತಾಂ ॥ ೧೩ ॥

---

೯. ಹೀಗೆ ಆಲೋಚಿಸಿ ಜನಕನು ಪಟ್ಟದರಾಣಿಯೇ ಮೊದಲಾದವರೊಡನೆ ಯೋಚಿಸಿ ತನ್ನ ನಾಲ್ವರು ಪತ್ನಿಯರೊಡನೆ ಯಜ್ಞದೀಕ್ಷೆಯನ್ನು ಕೈಗೊಂಡನು.

೧೦. ಅನಂತರ ಗೌತಮಮುನಿಯನ್ನೂ, ಅವನ ಮಗ ಶತಾನಂದಮುನಿಯನ್ನೂ ಪುರೋಹಿತರನ್ನಾಗಿ ಮಾಡಿಕೊಂಡು ಯಜ್ಞವನ್ನು ಪ್ರಾರಂಭಿಸಿದನು.

೧೧. ಆ ಯಜ್ಞಭೂಮಿಯಲ್ಲಿ ಆ ಜನಕನಿಗೆ, ಮನೋಹರರಾದ ಈರ್ವರು ಪುತ್ರರು ಜನಿಸಿದರು. ಭೂಮಿಯ ಮಧ್ಯದಲ್ಲಿ ಸಾಧ್ವಿಯಾದ ಇನ್ನೊಬ್ಬ ಪುತ್ರಿಯು ಜನಿಸಿದಳು.

೧೨. ಅಲ್ಲದೇ, ನಾರದಮುನಿಯ ಉಪದೇಶದಂತೆ ಜನಕಮಹಾರಾಜನು ನೇಗಿಲಿನಿಂದ ಯಜ್ಞಭೂಮಿಯನ್ನು ಯಜ್ಞಶಾಲೆಯವರೆವಿಗೂ ಉಗೆಯಿಸಿದನು.

೧೩. ನೇಗಲಿನಿಂದ ಭೂಮಿಯನ್ನು ಉಳುತ್ತಿರುವಾಗ ಅದರ ತುದಿಗೆ ಭೂಮಿಯಲ್ಲಿ ಸುಂದರಳೂ, ಸರ್ವಲಕ್ಷಣಸಂಪನ್ನಳೂ ಆದ ಓರ್ವ ಕನ್ಯೆಯು ಲಭಿಸಿದಳು. ಜನಕರಾಜನು ಸಂತೋಷದಿಂದ ಆ ಕನ್ಯೆಯನ್ನು ಪುತ್ರಿಯನ್ನಾಗಿ ಸ್ವೀಕರಿಸಿದನು.

ಲೇಭೇ ರಾಜಾ ಮುದಾ ಯುಕ್ತಃ ಸರ್ವಲಕ್ಷಣಸಂಯುತಾಂ ।
ತಸ್ಯಾಂ ತು ಜಾತಮಾತ್ರಾಯಾಂ ಪೃಥಿವ್ಯಂತರ್ಹಿತಾ ಸ್ವಯಂ ॥ ೧೪ ॥

ಜಗಾದ ವಚನಂ ಚೇದಂ ಗೌತಮಂ ನಾರದಂ ನೃಪಂ ।

॥ ಪೃಥಿವ್ಯುವಾಚ ॥

ಏಷಾ ಸುತಾ ಮಯಾ ದತ್ತಾ ತವ ರಾಜನ್ಮನೋಹರಾ ॥ ೧೫ ॥

ಏನಾಂ ಗೃಹಾಣ ಸುಭಗಾಂ ಕುಲದ್ವಯಶುಭಾವಹಾಂ ।
ಅನಯಾ ಮೇ ಮಹಾಭಾರಸ್ತತ್ತ್ವತೋ ಹೇತುಭೂತಯಾ ॥ ೧೬ ॥

ಕ್ಷಯಂ ಯಾಸ್ಯತಿ ಭಾರಾರ್ತಿಂ ಮೋಚಯಿಷ್ಯಾಮಿ ದಾರುಣಾಂ ।
ರಾವಣಾದ್ಯಾ ಮಹಾವೀರಾಃ ಕುಂಭಕರ್ಣಾದಯಃ ಪರೇ ॥ ೧೭ ॥

---

೧೪. ಆ ಕನ್ಯೆಯು, ಜನಿಸಿದೊಡನೆಯೇ ಭೂದೇವಿಯು ಅದೃಶ್ಯರೂಪದಿಂದ ಅಂತರ್ಧಾನಳಾಗಿದ್ದು, ತಾನೇ ಗೌತಮಮುನಿಯನ್ನೂ, ನಾರದಮುನಿಯನ್ನೂ, ಜನಕ ರಾಜನನ್ನೂ ಕುರಿತು ಹೀಗೆ ಹೇಳಿದಳು.

೧೫. ಭೂದೇವಿಯು ಹೇಳಿದಳು :—ಎಲೈ ಜನಕರಾಜನೇ ! ಮನೋಹರಳಾದ ಈ ನನ್ನ ಪುತ್ರಿಯನ್ನು ನಿನಗೆ ಕೊಟ್ಟಿರುವೆನು. ಪಿತೃಕುಲಕ್ಕೂ, ಪತಿಕುಲಕ್ಕೂ, ಮಂಗಳವನ್ನುಂಟುಮಾಡುವವಳೂ, ಭಾಗ್ಯವಂತಳೂ ಆದ ಇವಳನ್ನು ಪುತ್ರಿಯನ್ನಾಗಿ ಸ್ವೀಕರಿಸು.

೧೬. ಈ ಕನ್ಯೆಯ ನಿಮಿತ್ತವಾಗಿ ಮುಂದೆ ನಾನು ಹೊತ್ತಿರುವ ದುಷ್ಟಜನರ ಭಾರವು ನಷ್ಟವಾಗುವುದು. ಆಗ ಆ ಭಾರದಿಂದುಂಟಾದ ಸಹಿಸಲಸಾಧ್ಯವಾದ ಪೀಡೆಯು ನಾಶವಾಗುವುದು.

೧೭. ರಾವಣ ಕುಂಭಕರ್ಣನೇ ಮೊದಲಾದ ಮಹಾವೀರರೂ, ಇನ್ನೂ ಖರ ದೂಷಣನೇ ಮೊದಲಾದವರೂ ಸಹ ಈ ಕನ್ಯೆಯ ನಿಮಿತ್ತವಾಗಿ ನಾಶಹೊಂದುವರು.

ನಾಶಂ ಯಾಸ್ಯಂತಿ ದುರ್ಧರ್ಷಾಃ ಕೃತೇಽಸ್ಯಾ ರಾಕ್ಷಸಾಃ ಪರೇ ।
ತ್ವಂ ಚ ಮೋದಂ ದುರಾಧರ್ಷಂ ದುಹಿತೃಕೃತಿಜಂ ನೃಪ ॥ ೧೮ ॥

ಅವಾಪ್ಸ್ಯಸಿ ಸುರಾಣಾಂ ಚ ಪಿತೃಣಾಮೃಣಶೋಧನಂ ।
ಕಿಂ ತ್ವೇಕಃ ಸಮಯಃ ಕಾರ್ಯಃ ತ್ವಯಾ ಮಮ ನರೋತ್ತಮ ॥ ೧೯ ॥

ತಮಹಂ ತೇ ಪ್ರವಕ್ಷ್ಯಾಮಿ ಪುರೋ ನಾರದಗೌತಮೇ ।
ನಿಹತೇ ರಾವಣೇ ವೀರೇ ಭಾರಾರ್ತಿರಹಿತಾ ಸುಖಂ ॥ ೨೦ ॥

ಸುಪುತ್ರಂ ಜನಯಿಷ್ಯಾಮಿ ಯಜ್ಞಭೂಮಾವಹಂ ತವ ।
ತಂ ಪುತ್ರವತ್ಪಾಲಯಿತಾ ಭವಾನ್ನೃಪತಿಸತ್ತಮ ॥ ೨೧ ॥

ಯಾವದ್ವ್ಯತೀತಬಾಲ್ಯಃ ಸನ್ ಭವಿತಾ ತನಯೋ ಮಮ ।
ವ್ಯತೀತಬಾಲ್ಯಂ ತಮಹಂ ಪಾಲಯಿಷ್ಯೇ ಸ್ವಯಂ ನೃಪ ॥ ೨೨ ॥

---

೧೮. ಎಲೈ ಜನಕರಾಜನೇ! ನೀನು ಸಹ ಈ ನಿನ್ನ ಮಗಳ ನಿಮಿತ್ತವಾಗಿ ತುಂಬಾ ಸಂತೋಷವನ್ನು ಹೊಂದುವೆ ಮತ್ತು ಇವಳಿಂದ ದೇವಪಿತೃಋಣಗಳಿಂದ ಮುಕ್ತನಾಗುವೆ.

೧೯. ಎಲೈ ರಾಜಶ್ರೇಷ್ಠನೇ! ಆದರೆ ನೀನು ನನಗಾಗಿ ಒಂದು ಶಪಥವನ್ನು ಅಂಗೀಕರಿಸಬೇಕು. ಆ ಶಪಥವನ್ನು ಈ ನಾರದ ಮತ್ತು ಗೌತಮರ ಎದುರಿಗೆ ನಿನಗೆ ಹೇಳುವೆನು.

೨೦. ಅದೇನೆಂದರೆ :—ವೀರನಾದ ರಾವಣನು ಹತನಾದಮೇಲೆ ದುರ್ಜನರನ್ನು ಹೊತ್ತಿದ್ದ ಭಾರವು ಕಮ್ಮಿಯಾಗಲು ಸುಖದಿಂದ ಓರ್ವ ಸುಪುತ್ರನನ್ನು ಈ ನಿನ್ನ ಯಜ್ಞಭೂಮಿಯಲ್ಲಿ ಪ್ರಸುವಿಸುವೆನು.

೨೧. ಎಲೈ ರಾಜನೇ! ಆ ನನ್ನ ಪುತ್ರನನ್ನು ನೀನು ನಿನ್ನ ಸ್ವಂತ ಪುತ್ರನಂತೆ ಬಾಲ್ಯವು ಕಳೆಯುವವರೆಗೆ ಸಲಹಬೇಕು.

೨೨. ಎಲೈ ರಾಜನೇ! ಬಾಲ್ಯವು ಕಳೆದಮೇಲೆ ನಾನೇ ಆ ಪುತ್ರನನ್ನು ಸಲಹುವೆನು. ಬಾಲ್ಯದಲ್ಲಿ ನೀನು ಅವನಿಗೆ ಮನುಷ್ಯಸ್ವಭಾವವು ಬರುವವರಾಗೆ ಸಲಹಬೇಕು.

ತಸ್ಯ ಸ್ಯಾನ್ಮಾನುಷೋ ಭಾವೋ ಯಥಾ ತ್ವಂ ತತ್ಕರಿಷ್ಯಸಿ ।

॥ ಮಾರ್ಕಂಡೇಯ ಉವಾಚ ॥

ಇತಿ ಪೃಥ್ವಿ್ಯಾ ವಚನಂ ಶ್ರುತ್ವಾ ರಾಜಾ ತದಾ ಮುದಾ ॥ ೨೩ ॥

ಪ್ರಣಮ್ಯ ಪೃಥ್ವೀಂ ಪ್ರಾಹ ಸಾಮ್ನಾ ಸ ಜನಕಾಹ್ವಯಃ ।

॥ ರಾಜೋವಾಚ ॥

ಯತ್ತ್ವಂ ಬ್ರೂಷೇ ಜಗದ್ಧಾತ್ರಿ ಕರಿಷ್ಯೇ ವಚನಂ ತವ ॥ ೨೪ ॥

ಮಮಾಪೀಷ್ಟಂ ಪ್ರಯಚ್ಛಸ್ವ ಪ್ರಸೀದ ಪರಮೇಶ್ವರಿ ।
ದೇವಿ ಪ್ರತ್ಯಕ್ಷತೋ ರೂಪಂ ದ್ರಷ್ಟುಮಿಚ್ಛಾಮ್ಯಹಂ ತವ ॥ ೨೫ ॥

ಶಕ್ತಿಸ್ತ್ವಂ ಲೋಕಜನನೀ ತ್ವಾಂ ನಮಾಮಿ ಪ್ರಸೀದ ಮೇ ।
ಇತಿ ತಸ್ಯ ವಚಃ ಶ್ರುತ್ವಾ ಜನಕಸ್ಯ ತದಾ ಕ್ಷಿತಿಃ ॥ ೨೬ ॥

---

೨೩. ಮಾರ್ಕಂಡೇಯನು ಹೇಳಿದನು:—ಹೀಗೆ ಭೂದೇವಿಯ ಮಾತು ಗಳನ್ನು ಕೇಳಿ, ಜನಕರಾಜನು ತುಂಬಾ ಸಂತೋಷಗೊಂಡು ಅವಳನ್ನು ನಮಸ್ಕರಿಸಿ ವಿನಯಪೂರ್ವಕವಾಗಿ ಹೀಗೆ ಹೇಳಿದನು.

೨೪. ಜನಕರಾಜನು ಹೇಳಿದನು:-ಜಗತ್ತನ್ನು ಧರಿಸಿರುವ ಓ ಭೂದೇವಿಯೆ! ನೀನಾಡಿದ ಮಾತನ್ನು ನಡೆಸಿಕೊಡುವೆನು. ಓ ಪರಮೇಶ್ವರಿಯೇ! ನೀನೂ ಸಹ ನನ್ನ ಇಷ್ಟಾರ್ಥವನ್ನು ಸಲ್ಲಿಸಬೇಕು.

೨೫. ಓ ಭೂದೇವಿಯೇ! ನಿನ್ನ ರೂಪವನ್ನು ಪ್ರತ್ಯಕ್ಷವಾಗಿ ನೋಡಲಿಚ್ಛಿಸುವೆನು. ನೀನು ಜಗತ್ತನ್ನು ಧರಿಸುವ ಶಕ್ತಿಯು, ಲೋಕಮಾತೆಯು. ಇಂತಹ ನಿನ್ನನ್ನು ನಮಸ್ಕರಿಸುವೆನು, ನನಗೆ ಅನುಗ್ರಹಮಾಡು.

೨೬. ಹೀಗೆ ಆ ಜನಕರಾಜನ ಮಾತನ್ನು ಕೇಳಿ ಭೂದೇವಿಯು, ಮುನಿಗಳ ಎದುರಿನಲ್ಲಿ ತನ್ನ ನಿಜರೂಪವನ್ನು ಆ ರಾಜನಿಗೆ ತೋರಿಸಿದಳು.

ಮುನೀನಾಂ ಸನ್ನಿಧೌ ರೂಪಂ ದರ್ಶಯಾಮಾಸ ಭೂಭೃತೇ ।
ನೀಲೋತ್ಪಲದಲಶ್ಯಾಮಾಮಕ್ಷಮಾಲಾಬ್ಜಧಾರಿಣೀಂ ॥ ೨೭ ॥

ಬಾಹುಯುಗ್ಮೇನ ಶುಭ್ರೇಣ ಮೃಣಾಲಾಯತಶೋಭಿನಾ ।
ಸುಂದರೀಂ ಲೋಕಧಾತ್ರೀಂ ತಾಂ ದೃಷ್ಟ್ವಾ ಶಶ್ವನ್ನೃಪೋಽನಮತ್ ॥ ೨೮ ॥

ತತಃ ಸಾ ಪೃಥಿವೀ ದೇವೀ ಸೀತಾಂ ಜಾತಾಂ ನೃಪಾತ್ಮಜಾಂ ।
ಕರೇಣ ಶಶ್ವತ್ಸಂಸ್ಪೃಶ್ಯ ವಚನಂ ಚೇದಮಬ್ರವೀತ್ ॥ ೨೯ ॥

ಇಯಂ ತೇ ಮಾನುಷಂ ಭಾವಮುವಾಸ್ಯತಿ ಜಗತ್ಪ್ರಸೂಃ ।
ತವ ಪುತ್ರೀ ನೃಪಶ್ರೇಷ್ಠ ಸಮುದಯಂ ಪ್ರತಿಪಾಲಯ ॥ ೩೦ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಪೃಥಿವೀ ದೇವೀ ರಾಜಾನಂ ಜನಕಾಹ್ವಯಂ ।
ಸಂಭಾಷ್ಯ ನಾರದಾದೀಂಶ್ಚ ತತ್ರೈವಾಂತರಧೀಯತ ॥ ೩೧ ॥

೨೭—೨೮. ಆ ಭೂದೇವಿಯ ಶರೀರಕಾಂತಿಯು ಕನ್ನೈದಿಲೆಯಂತೆ ನೀಲ ಕಾಂತಿಯಿಂದ ಕಂಗೊಳಿಸುತ್ತಿತ್ತು. ಅವಳು ಕೋಮಲವೂ, ಉದ್ದವೂ ಆದ ತನ್ನ ಕೈಗಳಲ್ಲಿ ಜಪಮಾಲೆಯನ್ನೂ, ಕಮಲವನ್ನೂ ಧರಿಸಿದ್ದಳು. ಸಮಸ್ತಲೋಕವನ್ನೂ ಧರಿಸಿರುವ ಸೌಂದರ್ಯಯುಕ್ತಳಾದ ಆ ಭೂದೇವಿಯನ್ನು ನೋಡಿ ಜನಕರಾಜನು ಅವಳನ್ನು ಅನೇಕಬಾರಿ ನಮಸ್ಕರಿಸಿದನು.

೨೯. ಅನಂತರ ಆ ಭೂದೇವಿಯು ರಾಜಪುತ್ರಿಯಾದ ಸೀತೆಯನ್ನು ಕೈಯಿಂದ ಪುನಃಪುನಃ ನೇವರಿಸಿ ಹೀಗೆ ಹೇಳಿದಳು.

೩೦. ಎಲೈ ರಾಜನೇ! ಸೀತೆಯು ಲೋಕಮಾತೆಯು. ಮನುಷ್ಯಭಾವವನ್ನು ಹೊಂದಿ ನಿನ್ನ ಮಗಳಾಗಿ ಜನಿಸಿರುವಳು. ಇವಳನ್ನು ನೀನು ಪ್ರಾಪ್ತವಯಸ್ಕಳಾಗುವವರಿಗೂ ಸಲಹು.

೩೧. ಮಾರ್ಕಂಡೇಯನು ಹೇಳಿದನು:—ಹೀಗೆ ಭೂದೇವಿಯು, ಜನಕರಾಜನಿಗೂ, ನಾರದನೇ ಮೊದಲಾದವರಿಗೂ ಹೇಳಿ ಅಲ್ಲಿಯೇ ಅಂತರ್ಧಾನಳಾದಳು.

ಜನಕೋಽಪಿ ಸುತಾಂ ಲಬ್ಧ್ವಾ ಸರ್ವಲಕ್ಷಣಶಾಲಿನೀಂ
ಸುತದ್ವಯಂ ತಥಾ ಪ್ರಾಪ್ಯ ಮುದಿತಃ ಸ್ವಗೃಹಂ ಯಯೌ ॥ ೩೨ ॥

ತತಃ ಕಾಲೇ ತು ಸಂಪ್ರಾಪ್ತೇ ರಾವಣೇ ರಾಕ್ಷಸೇ ಹತೇ ।
ಮನುಷ್ಯೇಣ ಸ್ವರೂಪೇಣ ವಿಷ್ಣುನಾ ಪ್ರಭವಿಷ್ಣುನಾ ॥ ೩೩ ॥

ಗತ್ವಾ ವಿದೇಹರಾಜಸ್ಯ ಯಜ್ಞಭೂಮಿಂ ತದಾ ಕ್ಷಿತಿಃ ।
ಸುಷುವೇ ತನಯಂ ವೀರಂ ಯತ್ರ ಸೀತಾ ಪುರಾ ಭವತ್ ॥ ೩೪ ॥

ಜಾತೇ ಪುತ್ರೇ ತದಾ ದೇವೀ ಜಗದ್ಧಾತ್ರೀ ಜಗತ್ಪ್ರಭುಂ ।
ಸಸ್ಮಾರ ಸಮಯೇ ವಿಷ್ಣುಂ ಸ್ಮರಂತೀ ಸಮಯಂ ಪುರಾ ॥ ೩೫ ॥

ಸ್ಮೃತಮಾತ್ರಸ್ತದಾ ದೇವಃ ಸಮಯಂ ಪ್ರತಿಪಾಲಯನ್ ।
ಕ್ಷಿತೇರ್ಯತ್ರ ಸುತೋ ಜಾತಸ್ತತ್ರ ಪ್ರಾದುರ್ಬಭೂವ ಹ ॥ ೩೬ ॥

ಪ್ರಾದುರ್ಭೂತಂ ತದಾ ದೇವೀ ಪ್ರಣಮ್ಯ ಪರಮೇಶ್ವರಂ ।
ಸಂಸ್ತುತ್ಯ ಸೂನೃತಂ ಶಶ್ವದಿದಮಾಹ ಜಗತ್ಪ್ರಭುಂ ॥ ೩೭ ॥

---

೩೨. ಜನಕರಾಜನೂ ಸಹ ಸಕಲ ಲಕ್ಷಣಗಳಿಂದ ಶೋಭಿಸುತ್ತಲಿರುವ ಮಗಳನ್ನೂ, ಈರ್ವರು ಪುತ್ರರನ್ನೂ ಪಡೆದು ಸಂತೋಷದಿಂದ ತನ್ನ ಅರಮನೆಗೆ ತೆರಳಿದನು.

೩೩. ಅನಂತರ ಕಾಲವು ಬರಲು, ವಿಷ್ಣುವು ಮನುಷ್ಯ (ರಾಮ) ರೂಪದಿಂದ ರಾಕ್ಷಸನಾದ ರಾವಣನನ್ನು ಸಂಹರಿಸಿದನು.

೩೪. ಆಗ ಭೂದೇವಿಯು, ಸೀತೆಯು ಹಿಂದೆ ಜನಿಸಿದ ಜನಕನ ಯಜ್ಞ ಭೂಮಿಗೆ ಹೋಗಿ ಅಲ್ಲಿ ವೀರನಾದ ಪುತ್ರನನ್ನು ಹಡೆದಳು.

೩೫. ಹೀಗೆ ಪುತ್ರನು ಜನಿಸಿದಮೇಲೆ ಜಗತ್ತನ್ನು ಧರಿಸಿರುವ ಭೂದೇವಿಯು ಹಿಂದಿನ ನಿಬಂಧನೆಯಂತೆ ಜಗದೊಡೆಯನಾದ ವಿಷ್ಣುವನ್ನು ಸ್ಮರಿಸಿದಳು.

೩೬. ಭೂದೇವಿಯು ಸ್ಮರಿಸಿದೊಡನೆಯೇ ನಾರಾಯಣನು ಹಿಂದಿನ ನಿಬಂಧನೆಯಂತೆ ಭೂದೇವಿಯು ಪುತ್ರನನ್ನು ಹಡೆದಸ್ಥಳದಲ್ಲಿ ಪ್ರತ್ಯಕ್ಷನಾದನು.

೩೭. ಆಗ ಪ್ರತ್ಯಕ್ಷನಾದ ಪರಮೇಶ್ವರನಾದ ಹರಿಯನ್ನು ನೋಡಿ ಭೂದೇವಿಯು ಜಗದೊಡೆಯನಾದ ಅವನನ್ನು ಪುನಃಪುನಃ ಸ್ತುತಿಸಿ ಹೀಗೆ ಹೇಳಿದಳು.

॥ ಪೃಥಿವ್ಯುವಾಚ ॥

ಏಷ ತೇ ತನಯೋ ಜಾತಃ ಸುಕುಮಾರೋ ಮಹಾಪ್ರಭಃ ।
ಸಂಸ್ಮರನ್ಸನುಯಂ ಪೂರ್ವಂ ತ್ವಮೇನಂ ಪ್ರತಿಪಾಲಯ ॥ ೩೮ ॥

॥ ಶ್ರೀ ಭಗವಾನುವಾಚ ॥

ಅಯಂ ತೇ ತನಯೋ ದೇವಿ ಮಹಾಬಲಪರಾಕ್ರಮಃ ।
ಭವಿತಾ ಮಾನುಷಂ ಭಾವಂ ತನ್ವಾನಃ ಸುಚಿರಂ ಬುಧಃ ॥ ೩೯ ॥

ಯಾವನ್ಮಾನುಷಭಾವಂ ತೇ ತನಯೋ ಭಾವಯಿಷ್ಯತಿ ।
ತಾವತ್ಕಲ್ಯಾಣಭಾಗ್ಭೂತ್ವಾ ಚಿರಂ ರಾಜ್ಯಂ ಕರಿಷ್ಯತಿ ॥ ೪೦ ॥

ತ್ಯಕ್ತೇಮಾನುಷಭಾವಸ್ತು ಯದಾ ಚಾಯಂ ವಿಚೇಷ್ಟತೆ ।
ತದಾ ತು ನಾಸ್ಯ ಸುಚಿರಂ ಜೀವಿತಂ ಸಂಭವಿಷ್ಯತಿ ॥ ೪೧ ॥

ಸಂಪ್ರಾಪ್ತೇ ಷೋಡಶೇ ವರ್ಷೇ ರಾಜ್ಯಮಾಸಾದಯಿಷ್ಯತಿ ।
ಧನರತ್ನಗಜೈಶ್ವರ್ಯಯುಕ್ತೋಽಯಂ ರಥಸಂಚಯೈಃ ॥ ೪೨ ॥

---

೩೮. ಭೂದೇವಿಯು ಹೇಳಿದಳು:—ಓ ಭಗವಂತನೇ ! ತುಂಬಾ ತೇಜಸ್ವಿಯೂ, ಸುಕುಮಾರನೂ ಆದ ನಿನ್ನ ಮಗನು ಜನಿಸಿರುವನು. ಹಿಂದಿನ ನಿಬಂಧನೆಯಂತೆ ಈ ಬಾಲಕನನ್ನು ನೀನು ಸಲಹು.

೩೯. ಭಗವಂತನು ಹೇಳಿದನು :—ಎಲ್ಲೆ ಭೂದೇವಿಯೇ ! ಈ ನಿನ್ನ ಮಗನು ತುಂಬಾ ಬಲಪರಾಕ್ರಮವುಳ್ಳವನೂ, ಪಂಡಿತನೂ ಆಗಿ, ಮನುಷ್ಯಸ್ವಭಾವದಿಂದ ಬಹಳಕಾಲವಿರುವನು.

೪೦. ಮತ್ತು ನಿನ್ನ ಈ ಮಗನು ಮನುಷ್ಯಸ್ವಭಾವದಿಂದಿರುವವರೆಗೆ ಸುಖವನ್ನು ಅನುಭವಿಸುತ್ತಾ ಬಹಳದಿವಸ ರಾಜ್ಯವನ್ನಾಳುವನು.

೪೧. ಆದರೆ ಮನುಷ್ಯಸ್ವಭಾವವನ್ನು ಬಿಟ್ಟು ಈ ನಿನ್ನ ಪುತ್ರನು ರಾಕ್ಷಸಸ್ವಭಾವದಿಂದ ಪ್ರವರ್ತಿಸಿದರೆ ಆಗ ಬಹಳದಿವಸ ಬದುಕಲಾರನು.

೪೨. ಹದಿನಾರನೆಯ ವರ್ಷದಲ್ಲಿಯೇ ಇವನು ಧನ, ರತ್ನ, ಆನೆ, ಕುದುರೆ, ರಥಗಳೊಡನೆ ರಾಜ್ಯವನ್ನು ಹೊಂದುವನು.

ಆಸಾದ್ಯ ಮಹತೀಂ ನಿತ್ಯಾಂ ಶ್ರಿಯಂ ಭೋಕ್ಷ್ಯತಿ ವೀರ್ಯವಾನ್ ।
ಯಸ್ಮಿನ್ಯಸ್ಮಿನ್ಯುಗೇ ಭಾವ್ಯೋ ಯೋ ಯೋ ಭವತಿ ವೈ ನೃಣಾಂ ॥ ೪೩ ॥

ತಂ ತಂ ಭಾವಂ ತಥೈವಾಯಂ ಕರಿಷ್ಯತಿ ತಥಾ ಕುರು ।
ಏತಸ್ಯ ನಿಭೃತಂ ರಾಜ್ಯಂ ಯತ್ಪ್ರಾಗ್ಜ್ಯೋತಿಷಸಂಜ್ಞಕಂ ॥ ೪೪ ॥

ಪುರಂ ತತ್ರ ಚಿರಂ ಶಾಸ್ತಾ ರಾಜ್ಯಮೇಷ ಸುತಸ್ತವ ।
ಇತ್ಯುಕ್ತ್ವಾ ಪೃಥಿವೀಂ ವಿಷ್ಣುಃ ಸಮಾಭಾಷ್ಯ ಜಗತ್ಪತಿಃ ॥ ೪೫ ॥

ದೃಶ್ಯಮಾನಸ್ತಯಾ ಕ್ಷಿಪ್ರಂ ತತ್ರೈವಾಂತರ್ದಧೇ ಪ್ರಭುಃ ।
ಪ್ರಸೂಯ ಪೃಥಿವೀ ಪುತ್ರಂ ಮಧ್ಯರಾತ್ರೇ ಮಹಾದ್ಯುತಿಂ ॥ ೪೬ ॥

ಜನಕಂ ಜ್ಞಾಪಯಾಮಾಸ ರಹಸ್ಯಂ ಪೂರ್ವಮೀರಿತಂ ।
ವಿದೇಹರಾಜೋ ಜ್ಞಾತ್ವೈವ ಪೃಥಿವೀ ಜನಿತಂ ಸುತಂ ॥ ೪೭ ॥

---

೪೩. ವೀರ್ಯಶಾಲಿಯಾದ ಈ ನಿನ್ನ ಪುತ್ರನು ಮಹದೈಶ್ವರ್ಯವನ್ನು ಅನುಭವಿಸುವನು. ಅಲ್ಲದೇ ಯಾವಯಾವ ಯುಗದಲ್ಲಿ ಮನುಷ್ಯರು ಯಾವಯಾವ ಸ್ವಭಾವ ಪುಳ್ಳವರಾಗುವರೋ ಇವನೂ ಅದೇ ಸ್ವಭಾವವುಳ್ಳವನಾಗಿರುವಹಾಗೆ ನೀನು ಇವನನ್ನು ಶಿಕ್ಷಿಸು.

೪೪ ಪ್ರಾಗ್ಜ್ಯೋತಿಷವೆಂಬ ಪುರವು ಇವನ ಸ್ಥಿರವಾದ ರಾಜ್ಯವು. ಅಲ್ಲಿ ಈ ನಿನ್ನ ಪುತ್ರನು ಬಹಳಕಾಲ ರಾಜ್ಯವಾಳುವನು.

೪೫. ಹೀಗೆ ಭೂಮಿದೇವಿಗೆ ಹೇಳಿ ಜಗದೊಡೆಯನಾದ ನಾರಾಯಣನು ಭೂದೇವಿಯು ನೋಡುತ್ತಿದ್ದಂತೆ ಅಲ್ಲಿಯೇ ಅಂತರ್ಧಾನನಾದನು.

೪೬. ಹೀಗೆ ಭೂದೇವಿಯು ತೇಜಸ್ವಿಯಾದ ಸುತನನ್ನು ಮಧ್ಯರಾತ್ರಿಯಲ್ಲಿ ಪಡೆದು ಮೊದಲು ತಾನು ಹೇಳಿದ ರಹಸ್ಯ (ನಿಬಂಧನೆ) ವನ್ನು ಜನಕನಿಗೆ ಜ್ಞಾಪಿಸಿದಳು.

೪೭. ಆಗ ಜನಕಮಹಾರಾಜನು, ಭೂದೇವಿಯು ಸುತನನ್ನು ಹಡೆದುದನ್ನು ತಿಳಿದು ಆ ರಾತ್ರಿಯಲ್ಲಿ ತನ್ನ ಅನುಷ್ಠಾನವನ್ನಾಚರಿಸಿ ಯಜ್ಞಶಾಲೆಗೆ ಬಂದನು.

ತಸ್ಮೈವ ಯಜ್ಞವಾಟಂ ಸ ರಾತ್ರಾ ವಾಗಾತ್ಕೃತಕ್ರಿಯಃ ।
ಗಚ್ಛಂತಂ ಯಜ್ಞವಾಟಂ ತಂ ದೃಷ್ಟ್ವಾ ಸರ್ವಂಸಹಾ ತದಾ ॥ ೪೮ ॥

ನೋಕ್ತ್ವಾ ಕಿಂಚನ ತಂ ಶತ್ವದಂತರ್ಧಾನಂ ಗತಾ ನೃಪಂ ।
ಅಥ ಗತ್ವಾ ತದಾ ತತ್ರ ವಿದೇಹಾಧಿಪತಿಃ ಸುತಂ ॥ ೪೯ ॥

ಧರಾಯಾಂ ದದೃಶೇ ಕಾಂತ್ಯಾ ಚಂದ್ರಾರ್ಕಜ್ವಲನೋಪಮಂ ।
ರುದಂತಂ ಬಹುಶಃ ಸ್ನಿಗ್ಧಂ ಚಲದ್ಧಸ್ತಪದದ್ವಯಂ । ॥ ೫೦ ॥

ವಪುಷ್ಮಂತಂ ಶ್ರಿಯಾ ದೀಪ್ತಂ ಕಾರ್ತಿಕೇಯಮಿವಾಪರಂ ।
ಉದ್ಗಚ್ಛನ್ನ ರುದನ್ಬಾಲೋ ಯಜ್ಞಭೂಮಿಂ ವ್ಯತೀತ್ಯ ಚ ॥ ೫೧ ॥

ಕಿಯದ್ದೂರಂ ಜಗಾಮಾಶೂತ್ತಾನಶಾಯೀ ಮಹಾದ್ಯುತಿಃ ।
ಮನುಷ್ಯಸ್ಯ ಶಿರಸ್ತತ್ರ ಮೃತಸ್ಯ ಪ್ರಾಪ್ಯ ಬಾಲಕಃ ॥ ೫೨ ॥

ಸ್ವಶಿರಸ್ತತ್ರ ವಿನ್ಯಸ್ಯ ರುದನ್ ತಸ್ಥೌ ಕ್ಷಣಂ ತದಾ ।
ತತೋ ವಿದೇಹರಾಜೋಽಪಿ ಮಾರ್ಗಮಾಣಃ ಕ್ಷಿತೇಃ ಸುತಂ ॥ ೫೩ ॥

---

೪೮. ಹೀಗೆ ಆ ಜನಕನು ಯಜ್ಞಶಾಲೆಗೆ ಹೋಗುತ್ತಿರುವುದನ್ನು ನೋಡಿ ಭೂದೇವಿಯು ಅವನಿಗೆ ಏನನ್ನೂ ಹೇಳದೆ ಅಂತರ್ಧಾನಳಾದಳು.

೪೯-೫೦. ಅನಂತರ ಜನಕರಾಜನು ಯಜ್ಞಶಾಲೆಗೆ ಹೋಗಿ ಅಲ್ಲಿ ಚಂದ್ರ ಸೂರ್ಯಾಗ್ನಿಗಳಂತೆ ಪ್ರಕಾಶಿಸುತ್ತಲಿರುವನೂ, ಸುಂದರನೂ, ಲಕ್ಷಣಸಂಪನ್ನನೂ ಆದ ಬಾಲಕನನ್ನು ನೋಡಿದನು. ಆ ಬಾಲಕನು ಬಾಲಸ್ವಭಾವದಂತೆ ಕೈಕಾಲುಗಳನ್ನು ಅಳ್ಳಾಡಿಸುತ್ತಾ ಅಳುತ್ತಲಿದ್ದನು. ಹೀಗೆ ಎರಡನೆಯ ಷಣ್ಮುಖನಂತೆ ಪ್ರಕಾಶಿಸುತ್ತಲಿರುವ ಆ ಬಾಲಕನನ್ನು ರಾಜನು ನೋಡಿದನು.

೫೧-೫೨. ಆ ತೇಜಸ್ವಿಯಾದ ಬಾಲಕನು ರೋದಿಸುತ್ತಾ ಬಹಳದೂರ ತೆವಳಿಕೊಂಡು ಯಜ್ಞಪ್ರದೇಶವನ್ನು ದಾಟಿ ಅಲ್ಲಿ ಮೃತನಾದ ಮನುಷ್ಯನ ಶಿರಸ್ಸಿನಮೇಲೆ ತನ್ನ ಶಿರಸ್ಸನ್ನು ಸ್ವಲ್ಪಹೊತ್ತು ಇಟ್ಟು ಆ ಬಾಲಕನು ರೋದಿಸುತ್ತಾ ಇದ್ದನು.

೫೩. ಅನಂತರ ಜನಕಮಹಾರಾಜನು ಆ ಭೂದೇವಿಯ ಬಾಲಕನನ್ನು ಹುಡುಕುತ್ತಾ ಆ ಕೂಡಲೆ ಯಜ್ಞಭೂಮಿಯನ್ನು ಬಿಟ್ಟು ಹೊರಗೆಬಂದನು.

ವ್ಯತೀತ್ಯ ಯಜ್ಞಭೂಮಿಂ ತಮಾಸಸಾದಾಂಜಸಾ ಬಹಿಃ ।
ಆಸಾದ್ಯ ಬಾಲಕಂ ದೀಪ್ತಂ ಪ್ರದೀಪ್ತಮಿವ ಪಾವಕಂ ॥ ೫೪ ॥

ಕಾಂತ್ಯಾ ಚಂದ್ರಮಸಮಸ್ತುಲ್ಯಂ ತೇಜೋಭಿರ್ಭಾಸ್ಕರೋಪಮಂ ।
ಶರಮಧ್ಯಗತಂ ಪೂರ್ವಂ ಪಾವಕಿಂ ಪಾವಕೋ ಯಥಾ ॥ ೫೫ ॥

ಸ್ವಯಂ ಜಗ್ರಾಹ ತಂ ರಾಜಾ ಪೃಥಿವ್ಯಾಃ ಸಮಯಂ ಸ್ಮರನ್ ।
ಉದ್ಗೃಣ್ಹನ್ ತಚ್ಛಿರೋದೇಶೇ ದದೃಶೇ ಮಾನುಷಂ ಶಿರಃ ॥ ೫೬ ॥

ಶಶಂಸ ಚಾಚಿರಂ ಶೀರ್ಷಂ ಮಾನುಷಂ ಗೌತಮಾಯ ಸಃ ।
ಅಥ ಬಾಲಂ ಸಮಾದಾಯ ಪ್ರವಿಶ್ಯಾಂತಃಪುರಂ ಸ್ವಕಂ ॥ ೫೭ ॥

ಮಹಿಷ್ಯೈ ಕಥಯಾಮಾಸ ಪ್ರಾಪ್ತಂ ಪುತ್ರಂ ಗುಹೋಪಮಂ ।
ಸಾ ತಂ ದೃಷ್ಟ್ವಾ ವಿಶಾಲಾಕ್ಷಂ ಸಿಂಹಸ್ಕಂಧಂ ಮಹಾಭುಜಂ ॥ ೫೮ ॥

ವಿಸ್ತೀರ್ಣಹೃದಯಂ ಕಾಂತಂ ನಿಲೋತ್ಪಲದಲಚ್ಛವಿಂ ।
ಮುಮೋದ ಪಾಲನೀಯೋಽಯಂ ಮಮೇತಿ ನ್ಯವದನ್ನೃಪಂ ॥ ೫೯ ॥

೫೪-೫೫. ಅಲ್ಲಿಬಂದು ಜ್ವಲಿಸುತ್ತಿರುವ ಅಗ್ನಿಯಂತೆ ಪ್ರಕಾಶಿಸುತ್ತಿರುವವನೂ, ಚಂದ್ರನಂತೆ ಕಾಂತಿಯುಳ್ಳವನೂ, ಸೂರ್ಯನಂತೆ ತೇಜಸ್ವಿಯೂ ಆದ ಬಾಲಕನನ್ನು ಭೂದೇವಿಯ ನಿಬಂಧನೆಯನ್ನು ಸ್ಮರಿಸುತ್ತಾ, ಶರ (ಜೊಂಡು) ಗಳ ಮಧ್ಯದಲ್ಲಿರುವ ಷಣ್ಮುಖನನ್ನು ಅಗ್ನಿಯು ಸ್ವೀಕರಿಸಿದಂತೆ ಆ ಜನಕರಾಜನು ಬಾಲಕನನ್ನು ಎತ್ತಿಕೊಂಡನು.

೫೬. ಆ ಬಾಲಕನನ್ನು ಸ್ವೀಕರಿಸುತ್ತಿರುವಾಗ ಅವನ ಶಿರಸ್ಸಿದ್ದ ಪ್ರದೇಶದಲ್ಲಿ ಮನುಷ್ಯನ ಶಿರಸ್ಸು ಇರುವುದನ್ನು ನೋಡಿ ಅದನ್ನು ಗೌತಮನಿಗೆ ರಾಜನು ಹೇಳಿದನು.

೫೭. ಅನಂತರ ಆ ಬಾಲಕನನ್ನು ಕರೆದುಕೊಂಡು ಆ ರಾಜನು ಅಂತಃಪುರಕ್ಕೆ ಹೋಗಿ ಅಲ್ಲಿ ತನ್ನ ರಾಣಿಗೆ ಷಣ್ಮುಖನಂತಹ ಬಾಲಕನು ಲಭಿಸಿರುವುದನ್ನು ಹೇಳಿದನು.

೫೮-೫೯. ವಿಶಾಲವಾದ ಕಣ್ಣುಗಳು, ಸಿಂಹದಂತೆ ಭುಜ ಶಿರಸ್ಸುಗಳೂ, ಅಗಲವಾದ ಎದೆ, ಮನೋಹರ ರೂಪ, ಕನ್ನೈದಿಲೆಯಂತೆ ನೀಲವಾದ ಶರೀರಕಾಂತಿ ಇವುಗಳಿಂದ ಒಪ್ಪುತ್ತಿರುವ ಆ ಬಾಲಕನನ್ನು ನೋಡಿ, ತುಂಬಾ ಸಂತೋಷಗೊಂಡು, ರಾಣಿಯು ತಾನು ಆ ಬಾಲಕನನ್ನು ಸಾಕುವೆನೆಂದಳು.

ತಾಂ ರಾಜಾಪಿ ತತಃ ಪ್ರಾಹ ಪುತ್ರೋಽಯಂ ಮಮ ಸುಂದರಿ ।
ಯಜ್ಞಭೂಮೌ ಸಮುತ್ಪನ್ನಃ ಸ್ವಚ್ಛಂದಂ ಪಾಲ್ಯತಾಮಯಂ ॥ ೬೦ ॥

ಯತ್ಪೃಥಿವ್ಯಾ ರಹಃಪ್ರೋಕ್ತಂ ನ ತದ್ದೇವ್ಯೈ ನ್ಯವೇದಯತ್ ।
ಸತ್ಯಸಂಧೋ ನೃಪಶ್ರೇಷ್ಠಃ ಪ್ರಿಯಾಯಾ ಅಪಿ ಭಾಷಿತಂ ॥ ೬೧ ॥

ಮಮ ಸುತಸುತವಂಶಾನ್ ಪಾಲಯಿತ್ರೀ ಧರೇಯ ।
ಮಿತಿ ನರಪತಿವರ್ಯೋ ಮೋದವಾಂಸ್ತದ್ದಿನೇ ಚ
ಸುರತನಯಸಮಾನಂ ಪುತ್ರಮಾಸಾದ್ಯ ದೇವೀ ।
ಜಿತರಿಪುರತಿಧೀಮಾನ್ಸ್ಯಾದಯಂ ಚೇತ್ಯಮೋದತ್ ॥ ೬೨ ॥

॥ ಇತಿ ಶ್ರೀ ಕಾಲಿಕಾಪುರಾಣೇಽಷ್ಟತ್ರಿಂಶೋಽಧ್ಯಾಯಃ ॥

---

೬೦. ಆಗ ರಾಜನು ರಾಣಿಯನ್ನು ಕುರಿತು, ಎಲೈ ಸುಂದರಿ! ಇವನು ನನ್ನ ಪುತ್ರನು, ಯಜ್ಞಭೂಮಿಯಲ್ಲಿ ಜನಿಸಿದವನು, ನಿನ್ನ ಇಚ್ಛೆಯಂತೆ ಇವನನ್ನು ಪಾಲಿಸು ಎಂದು ಹೇಳಿದನು.

೬೧. ಆದರೆ ಸತ್ಯಸಂಧನಾದ ಆ ರಾಜಶ್ರೇಷ್ಠನು ಭೂದೇವಿಯು ರಹಸ್ಯವಾಗಿ ಹೇಳಿದುದೊಂದನ್ನೂ ತನ್ನ ಪ್ರಿಯಮಡದಿಗೆ ತಿಳಿಸಲಿಲ್ಲವು.

೬೨. ಅಲ್ಲದೇ ಆದಿವಸದಲ್ಲಿ ಭೂದೇವಿಯು, ತನ್ನ ಮಕ್ಕಳು ಮಮ್ಮಕ್ಕಳ ವಂಶವನ್ನು ಕಾಪಾಡುವಳೆಂದು ಜನಕರಾಜನು ತುಂಬಾ ಸಂತೋಷಗೊಂಡನು. ಅವನ ರಾಣಿಯೂ ಸಹ ಆ ಬಾಲಕನು ಶತ್ರುಗಳನ್ನು ಜಯಿಸುವವನೂ, ಬುದ್ಧಿವಂತನೂ ಆಗುವನೆಂದು ತಿಳಿದು ತುಂಬಾ ಹರ್ಷಗೊಂಡಳು.

ಇಲ್ಲಿಗೆ ಮೂವತ್ತೆಂಟನೆಯ ಅಧ್ಯಾಯವು ಮುಗಿಯಿತು.

॥ ಶ್ರೀಃ ॥

ಅಥ ಶ್ರೀ
ಕಾಲಿಕಾಪುರಾಣ ಏಕೋನಚತ್ವಾರಿಂಶತ್ತಮೋಽಧ್ಯಾಯಃ

॥ ಮಾರ್ಕಂಡೇಯ ಉವಾಚ ॥

ಅಥ ತಸ್ಯ ನೃಪಶ್ರೇಷ್ಠೋ ಗೌತಮೇನ ಮಹರ್ಷಿಣಾ ।
ಸಂಸ್ಕಾರಂ ಕಾರಯಾಮಾಸ ವಿಧಿನಾ ಮಾನುಷೇಣ ತು ॥ ೧ ॥

ನರಸ್ಯ ಶೀರ್ಷೇ ಸ್ವಶಿರೋ ನಿಧಾಯ ಸ್ಥಿತವಾನ್ ಯತಃ ।
ತಸ್ಮಾತ್ತಸ್ಯ ಮುನಿಶ್ರೇಷ್ಠೋ ನರಕಂ ನಾಮ ವೈ ನ್ಯಧಾತ್ ॥ ೨ ॥

ಅಪರಾನ್ಬಾಲಸಂಸ್ಕಾರಾನ್ ಕ್ಷಾತ್ರೇಣ ವಿಧಿನಾ ಮುನಿಃ ।
ಕೇಶಾಂತಾವಧಿ ಸಂಚಕ್ರೇ ಋಗ್ಯಜುಸ್ಸಾಮಮಂತ್ರಕೈಃ ॥ ೩ ॥

॥ ಮೂವತ್ತೊಂಭತ್ತನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು :-ಅನಂತರ ಜನಕರಾಜನು ಆ ಬಾಲಕನಿಗೆ ಗೌತಮಮುನಿಯಿಂದ ಮನುಷ್ಯರಿಗೆ ಯೋಗ್ಯವಾದ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿಸಿದನು.

೨. ಆ ಬಾಲಕನು ತನ್ನ ಶಿರಸ್ಸನ್ನು ನರ (ಮನುಷ್ಯನ) ನ ಶಿರಸ್ಸಿನಲ್ಲಿ ಇಟ್ಟುಕೊಂಡಿದ್ದುದರಿಂದ ಅವನಿಗೆ " ನರಕ " ನೆಂದು ಗೌತಮಮುನಿಯು ಹೆಸರನ್ನಿಟ್ಟನು.

೩. ಬಾಲಕನಿಗೆ ಮಾಡಬೇಕಾದ ಚೂಡಾಕರ್ಮ ಪರ್ಯಂತವಾದ ಇತರ ಸಂಸ್ಕಾರಗಳನ್ನು, ಕ್ಷತ್ರಿಯರ ವಿಧಿಯಂತೆ ಋಗ್ವೇದ, ಯಜುರ್ವೇದ, ಸಾಮವೇದ ಮಂತ್ರಗಳಿಂದ ಆ ಮುನಿಯು ಮಾಡಿದನು.

ವವೃಧೇ ತಸ್ಯ ಸದನೇ ನರಕೋ ನಾಮ ಭೂಸುತಃ ।
ದಿನಂದಿನಂ ಧೃತಾನ್ಯಶ್ರೀಃ ಶರದೀವ ನಿಶಾಕರಃ ॥ ೪ ॥

ಸ ರಾಜಾ ತಂ ಸದಾ ಭಾವೈರ್ಮಾನುಷ್ಯೈರ್ಯೋಜಯನ್ಸ್ವಯಂ ।
ಗೌತಮಸ್ಯ ಸುತೇನಾಥ ತತಾನಂದೇನ ಧೀಮತಾ ॥ ೫ ॥

ಗ್ರಾಹಯಾಮಾಸ ತಂ ನಿತ್ಯಂ ಕ್ಷಾತ್ರಂ ಭಾವಂ ಚ ಮಾನುಷಂ ।
ತಥೈವ ಪೃಥಿವೀ ದೇವೀ ಧಾತ್ರೀವೇಷೇಣ ತಂ ಸುತಂ ॥ ೬ ॥

ನಿಯತಂ ಗ್ರಾಹಯಾಮಾಸ ಮಾನುಷಂ ಚರಿತಂ ಶುಭಂ ।
ಯದೈವ ಪುತ್ರ ಉತ್ಪನ್ನಸ್ತದೈವ ಪೃಥಿವೀ ಸ್ವಯಂ ॥ ೭ ॥

ಮಾಯಾಮಾನುಷರೂಪೇಣ ನೃಪಾಂತಃಪುರಮಾವಿಶತ್ ।
ಪ್ರವಿಶ್ಯ ತತ್ರ ಸಾ ದೇವೀ ನೃಪಸ್ಯಾನುಮತೇಽಭವತ್ ॥ ೮ ॥

---

೪. ಆ ಜನಕಮಹಾರಾಜನ ಅರಮನೆಯಲ್ಲಿ ಭೂದೇವಿಯ ಮಗನಾದ ನರಕನು ಶರತ್ಕಾಲದ ಚಂದ್ರನಂತೆ ದಿನದಿನವೂ ಹೊಸಹೊಸ ಕಾಂತಿಯಿಂದ ಬೆಳೆಯುತ್ತಿದ್ದನು.

೫. ಅಲ್ಲದೇ ಆ ರಾಜನು ಬಾಲಕನನ್ನು ಮನುಷ್ಯರಿಗೆ ಯೋಗ್ಯವಾದ ಸ್ವಭಾವದಲ್ಲಿಯೇ ಪ್ರೇರಿಸುತ್ತಾ ಬುದ್ಧಿವಂತನೂ, ಗೌತಮಪುತ್ರನೂ ಆದ ಶತಾನಂದನಿಂದ ಕ್ಷತ್ರಿಯರಿಗೂ, ಮನುಷ್ಯರಿಗೂ ಉಚಿತವಾದ ಭಾವವನ್ನು ಅವನು ತಿಳಿಯುವಂತೆ ಮಾಡಿದನು.

೬. ಭೂದೇವಿಯೂ ಸಹ ದಾದಿಯ ರೂಪದಿಂದಿದ್ದು, ಆ ಬಾಲಕನಿಗೆ ಒಳ್ಳೆಯದಾದ ಮನುಷ್ಯರ ಆಚರಣೆಯನ್ನು ಅನುಸರಿಸುವಂತೆ ಮಾಡಿದಳು.

೭. ಆ ಬಾಲಕ (ನರಕ) ನು ಜನಿಸಿದೊಡನೆಯೇ ಭೂದೇವಿಯು ತನ್ನ ಮಾಯಾಶಕ್ತಿಯಿಂದ ಮನುಷ್ಯರೂಪವನ್ನು ತಾಳಿ ಜನಕಮಹಾರಾಜನ ಅಂತಃಪುರವನ್ನು ಸೇರಿದಳು.

೮. ಎಲೈ ಬ್ರಾಹ್ಮಣಶ್ರೇಷ್ಠರೇ! ದಾದಿಯ ರೂಪದಿಂದ, ಆ ರಾಜನ ಅಂತಃಪುರವನ್ನು ಸೇರಿ ಅಲ್ಲಿ ರಾಜನ ಅನುಮತಿಯಂತೆ ಕಾತ್ಯಾಯನೀ ಎಂಬ ಹೆಸರಿನಿಂದ ಸಾಕುವ ತಾಯಿಯಾದಳು.

ಧಾತ್ರೀ ತಸ್ಯ ದ್ವಿಜಶ್ರೇಷ್ಠಾಃ ಕಾತ್ಯಾಯನ್ಯಾ ಪ್ಯವಸ್ಥಯಾ ।
ಯಾವತ್ ಷೋಡಶವರ್ಷಾಣಿ ತಸ್ಯ ಬಾಲಸ್ಯ ಭಾಮಿನೀ ॥ ೯ ॥

ತಾವತ್ಸ್ವಯಂ ಪಾಲಯಂತೀ ಗ್ರಾಹಯಾಮಾಸ ಸನ್ನಯಂ ।
ಸ ವರ್ಧಮಾನೋಽನುದಿನಂ ನರಕಃ ಪೃಥಿವೀಸುತಃ ॥ ೧೦ ॥

ಅತ್ಯಕ್ರಾಮತ್ಸುತಾನ್ಸರ್ವಾಜ್ಜನಕಸ್ಯ ಮಹಾತ್ಮನಃ ।
ಶರೀರೇಣಾಥ ವಿದ್ಯೇಣ ರೂಪೇಣ ಬಲವತ್ತಯಾ ॥ ೧೧ ॥

ಧನುಷಾ ಗದಯಾ ವೀರೋ ಹ್ಯತ್ಯಕ್ರಾಮನ್ನೃಪಾತ್ಮಜಾನ್ ।
ಸ ಶಾಸ್ತ್ರವಾದಕುಶಲೋ ಧನುರ್ವೇದೇ ಚ ಕೋವಿದಃ ॥ ೧೨ ॥

ವರ್ಷೈಃ ಷೋಡಷಭಿರ್ಭೂತೋ ವೀರೈರನ್ಯೈರ್ದುರಾಸದಃ ।
ವಿದೇಹಾಧಿಪತಿರ್ದೃಷ್ಟ್ವಾ ಮಹಾಬಲಪರಾಕ್ರಮಂ ॥ ೧೩ ॥

---

೯. ಹದಿನಾರುವರ್ಷಗಳವರೆಗೆ ತಾನೇ ಬಾಲಕನನ್ನು ಸಲಹುತ್ತಾ, ಒಳ್ಳೆಯ ನೀತಿಯನ್ನು ಅವನಿಗೆ ಉಪದೇಶಿಸಿದಳು.

೧೦. ದಿನದಿನವೂ ಬೆಳೆಯುತ್ತಾ ಭೂದೇವೀಸುತನಾದ ಆ ನರಕನು ಜನಕನ ಮಿಕ್ಕ ಮಕ್ಕಳೆಲ್ಲರನ್ನೂ (ಎಲ್ಲಾರೀತಿಯಿಂದಲೂ) ಮೀರಿಸಿದನು.

೧೧. ಶರೀರಸೌಷ್ಟವ, ಪರಾಕ್ರಮ, ರೂಪ, ಬಲ, ಧನುರ್ವಿದ್ಯೆ, ಗದಾ ಪ್ರಯೋಗ, ಇವುಗಳಲ್ಲಿ ಎಲ್ಲಾ ರಾಜಪುತ್ರರನ್ನೂ ಆ ನರಕನು ಮೀರಿಸಿದನು.

೧೨. ಆ ನರಕನು, ಹದಿನಾರು ವರ್ಷಗಳಲ್ಲಿ ಶಾಸ್ತ್ರವಾದದಲ್ಲಿ ನಿಪುಣನೂ, ಧನುರ್ವೇದ ಎಂದರೆ ಯುದ್ಧಕಲೆಯಲ್ಲಿ ಪಂಡಿತನೂ, ಮಿಕ್ಕ ವೀರರಿಗೆ ಸಗ್ಗದ ಪರಾಕ್ರಮಿಯೂ ಆದನು.

೧೩. ಆ ನರಕನು ತುಂಬಾ ಪರಾಕ್ರಮಿಯೂ, ಬಲಿಷ್ಠನೂ ಆಗಿರುವುದನ್ನೂ, ತನ್ನ ಮಕ್ಕಳು ಅವನಿಗಿಂತಲೂ ಕಮ್ಮಿಯಾದುದನ್ನೂ ನೋಡಿ ಜನಕರಾಜನು ಅಷ್ಟೊಂದು ಸಂತೋಷವುಳ್ಳವನಾಗಲಿಲ್ಲ,

ತತೋ ನ್ಯೂನಾನ್ಸ್ವಪುತ್ರಾಂಶ್ಚ ನಾತಿಹೃಷ್ಟಮನಾಭವತ್ ।
ನಿರಸ್ಯಾಽಸೌ ಚ ಮತ್ಪುತ್ರಾನ್ಮಮರಾಜ್ಯಂ ಗ್ರಹೀಷ್ಯತಿ ॥ ೧೪ ॥

ಕಾಲೇ ಪ್ರಾಪ್ತೇ ಮಹಾವೀರೋ ಮತಿಸ್ತಸ್ಯಾಭವತ್ಪುರಾ ।
ಅಂತಃ ಪುರೇ ಯದಾ ಪುತ್ರಾನ್ಸ್ವರ್ವಾನ್ರಮಯತೇ ನೃಪಃ ॥ ೧೫ ॥

ತದಾ ತು ನರಕಂ ವೀಕ್ಷ್ಯ ಹರ್ಷಂ ಚಾಪ್ನೋತಿ ನಾಧಿಕಂ ।
ತಸ್ಯ ತದ್ಬುಬುಧೇ ದೇವೀ ನೃಪಸ್ಯಾಥ ವಸುಂಧರಾ ॥ ೧೬ ॥

ಮಹಿಷೀ ವಿಸ್ಮಯಂ ಚಕ್ರೇ ತಸ್ಮಿನ್ಭಾವೇ ತು ಭೂಭೃತಃ ।
ಅಥೈಕದಾ ಮಹಾದೇವೀ ಜನಕಸ್ಯ ಮಹಾತ್ಮನಃ ॥ ೧೭ ॥

ಪಪ್ರಚ್ಛ ನೃಪತಿಶ್ರೇಷ್ಠಂ ವಿದೇಹಾಧಿಪತಿಂ ಪತಿಂ ।
ನಾಥ ಪೃಚ್ಛಾಮಿ ತೇ ಕಂಚಿದ್ರಹಸ್ಯಂ ಯದಿ ನೋ ತವ ॥ ೧೮ ॥

ತದಾ ಮಾಂ ತದ್ವದಸ್ವ ತ್ವಂ ಕೃಪಾ ಚೇದ್ವಿದ್ಯತೇ ಮಯಿ ।
ಯದೈವ ತನಯಾಃ ಸರ್ವೇ ವಿಹರಂತಿ ಪುರಸ್ತವ ॥ ೧೯ ॥

---

೧೪. ಮುಂದೆ ಈ ನರಕನು ನನ್ನ ಮಕ್ಕಳನ್ನು ಓಡಿಸಿ, ನನ್ನ ರಾಜ್ಯವನ್ನು ಮಹಾವೀರನಾದ ಅವನೇ ಆಕ್ರಮಿಸುವನು ಎಂದು ತುಂಬಾ ಚಿಂತೆಗೊಳಗಾದನು.

೧೫. ಅಂತಃಪುರದಲ್ಲಿ ಮಕ್ಕಳನ್ನು ಆಡಿಸುತ್ತಿರುವಾಗ ಆ ಜನಕನು ನರಕನನ್ನು ನೋಡಿ ಹೆಚ್ಚಾಗಿ ಸಂತೋಷವನ್ನೇ ಹೊಂದುತ್ತಿರಲಿಲ್ಲವು.

೧೬. ರಾಜನ ಈ ವಿಧವಾದ ಅಭಿಪ್ರಾಯವನ್ನು ಭೂದೇವಿಯು ತಿಳಿದಳು. ಅವನ ರಾಣಿಯು ಮಾತ್ರ ರಾಜನ ಅಂತಹ ಸ್ವಭಾವವನ್ನು ನೋಡಿ ಕಾರಣವನ್ನು ತಿಳಿಯದೆ ಆಶ್ಚರ್ಯಗೊಂಡಳು.

೧೭. ಅನಂತರ ಒಂದುದಿನ ಆ ರಾಣಿಯು ತನ್ನ ಪತಿಯೂ, ವಿದೇಹ ರಾಜನೂ, ರಾಜಶ್ರೇಷ್ಠನೂ, ಮಹಾತ್ಮನೂ ಆದ ಜನಕನನ್ನು ಹೀಗೆ ಕೇಳಿದಳು.

೧೮. ಓ ಸ್ವಾಮಿಯೇ! ನಿನ್ನನ್ನು ಒಂದು ವಿಷಯವನ್ನು ಕೇಳಬೇಕೆಂದಿರುವೆನು. ಅದು ರಹಸ್ಯವಲ್ಲದಿದ್ದರೆ ನನ್ನಲ್ಲಿ ದಯವಿಟ್ಟು ಅದನ್ನು ಹೇಳು.

೧೯. ಅದೇನೆಂದರೆ:—ಮಕ್ಕಳೆಲ್ಲರೂ ನಿನ್ನೆದುರಿನಲ್ಲಿ ವಿಹರಿಸುತ್ತಿರುವಾಗ ನರಕನನ್ನು ನೋಡಿ ನೀನು ಸಂತೋಷಗೊಳ್ಳದೆ ಚಿಂತೆಗೊಳಗಾದಂತೆ ತೋರುವೆ.

ತದೈನಂ ನರಕಂ ದೃಷ್ಟ್ವಾ ವಿಶೀರ್ಣ ಇವ ಲಕ್ಷ್ಯಸೇ ।
ತನ್ಮೇ ರಾತ್ರಿಂ ದಿವಂ ಬಾಢಂ ವಿಸ್ಮಯಃ ಪ್ರತಿವರ್ಧತೇ ॥ ೨೦ ॥

ಸಂಶಯಶ್ಚ ಭಯಂ ಚೈವ ನ ಜಹಾತಿ ಚ ಮಾಂ ಸದಾ ।
ರೂಪವಾನ್ವೀರ್ಯವಾನೇಷ ನಯೇ ಚ ವಿನಯೇ ತಥಾ ॥ ೨೧ ॥

ಕುಶಲಃ ಪ್ರತಿಬುದ್ಧಶ್ಚ ಪುತ್ರಸ್ತವ ಮಹಾಬಲಃ ।
ನ ಸಭಾಜಯತೇ ಕಸ್ಮಾತ್ಪುತ್ರಮನ್ಯೈರ್ದುರಾಸದಂ ॥ ೨೨ ॥

ತದಹಂ ಜ್ಞಾತುಮಿಚ್ಛಾಮಿ ಯದಿ ತಥ್ಯಂ ವದಸ್ವ ಮೇ ।

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯಾ ವಚಃ ಶ್ರುತ್ವಾ ಪ್ರಿಯಾಯಾಃ ಪೃಥಿವೀಪತಿಃ ॥ ೨೩ ॥

---

೨೦. ಆದಕಾರಣ ಇದನ್ನು ನೋಡಿ ನನಗೆ ಆಶ್ಚರ್ಯವುಂಟಾಗಿರುವುದು. ರಾತ್ರಿ, ಹಗಲೂ ಸಹ ಸಂಶಯವೂ, ಭಯವೂ ನನ್ನನ್ನಾವರಿಸುತ್ತಿರುವುದು.

೨೧. ನಿನ್ನ ಪುತ್ರನಾದ ಈ ನರಕನು ರೂಪವಂತನೂ, ವೀರ್ಯಶಾಲಿಯೂ ಆಗಿರುವನು. ನೀತಿ ಮತ್ತು ವಿನಯಗಳಿಂದ ತುಂಬಿರುವನು. ಒಳ್ಳೆ ತಿಳಿವಳಿಕೆ ಯುಳ್ಳವನೂ, ತುಂಬಾ ಬಲಶಾಲಿಯೂ ಆಗಿರುವನು.

೨೨. ಇನ್ನೊಬ್ಬರಿಗೆ ಬಗ್ಗದಂತಹ ವೀರನಾದ ನಿನ್ನ ಪುತ್ರನನ್ನು ಆದೇಕೆ ನೀನು ಪ್ರೀತಿಸುವುದಿಲ್ಲ? ಇದರ ನಿಜವಾದ ಕಾರಣವೇನೆಂಬುದನ್ನು ತಿಳಿಯಲಪೇಕ್ಷಿ ಸುವೆನು ದಯವಿಟ್ಟು ಪೇಳು.

೨೩. ಮಾರ್ಕಂಡೇಯನು ಹೇಳಿದನು:—ಹೀಗೆ ತನ್ನ ರಾಣಿಯ ಮಾತನ್ನು ಕೇಳಿ ಜನಕಮಹಾರಾಜನು ಸ್ವಲ್ಪಹೊತ್ತು ಸುಮ್ಮನಿದ್ದು ಮುಂದೆ ಅವಳನ್ನು ಕುರಿತು ಹೀಗೆ ಪೇಳಿದನು.

ತೂಷ್ಣೀಂ ಭೂತ್ವಾ ಕ್ಷಣಂ ದೇವೀಮಿದಂ ವಚನಮಬ್ರವೀತ್ ।

॥ ರಾಜೋವಾಚ ॥

ಕಥಯಿಷ್ಯೇ ಪ್ರಿಯೇ ತತ್ತ್ವಂ ಯತ್ಪೃಷ್ಟೋಽಹಂ ತ್ವಯಾಧುನಾ ॥ ೨೪ ॥

ಮಾಸತ್ರಯೇ ವ್ಯತೀತೇ ತು ಸಮಯಂ ಪ್ರತಿಪಾಲಯ ।
ನಿಗೂಢಃ ಕಶ್ಚಿದತ್ರಾಸ್ತಿ ದೇವಸ್ಯ ಸಮಯೋ ಮಮ ॥ ೨೫ ॥

ತೇನಾಧುನಾ ನ ಕಿಂಚಿತ್ತೇ ಕಥಯಿಷ್ಯಾಮಿ ತದ್ರಹಃ ।

॥ ಮಾರ್ಕಂಡೇಯ ಉವಾಚ ॥

ರಾಜ್ಞೋ ಹ್ಯಯಂ ಸಭಾರ್ಯಸ್ಯ ಸಂವಾದೋಽಭವದಂತಿಕೇ ॥ ೨೬ ॥

ಮಾನುಷೀ ಪೃಥಿವೀ ಧಾತ್ರೀ ತಂ ಶುಶ್ರಾವ ಯದಾ ತದಾ ।
ಶ್ರುತ್ವಾ ತಯೋಸ್ತು ಸಂವಾದಂ ಮಹಿಷೀಭೂಪಯೋಃ ಕ್ಷಿತಿಃ ॥ ೨೭ ॥

ಮಾಸತ್ರಯೇಣ ಸಮಯಂ ದತ್ತಂ ದೇವ್ಯೈ ಧರಾಭೃತಾ
ತತ್ಕಾಲೇ ವಿಮನಸ್ಕಂ ಚ ಭೂಪಂ ನರಕಸಂಜ್ಞಯಾ ॥ ೨೮ ॥

---

೨೪. ರಾಜನು ಹೇಳಿದನು:—ಎಲೌ ಪ್ರಿಯಳೇ! ನೀನು ಕೇಳಿದುದರ ರಹಸ್ಯವನ್ನು ಮೂರುತಿಂಗಳನಂತರ ಹೇಳುವೆನು, ಅಲ್ಲಿಯವರೆಗೆ ಸಮಯವನ್ನು ನಿರೀಕ್ಷಿಸು.

೨೫ ಈ ವಿಷಯದಲ್ಲಿ ಒಂದು ರಹಸ್ಯವಾದ ದೇವತಾನಿಯಮವಿರುವುದು ಆದಕಾರಣ ಆ ರಹಸ್ಯವನ್ನು ಈಗ ನಿನಗೆ ಹೇಳುವುದಿಲ್ಲವು.

೨೬. ಮಾರ್ಕಂಡೇಯನು ಹೇಳಿದನು:-ಹೀಗೆ ಜನಕರಾಜನಿಗೂ, ರಾಣಿಗೂ ನಡೆದ ಸಂಭಾಷಣೆಯನ್ನು ಮನುಷ್ಯರೂಪದಿಂದಿದ್ದ ಭೂದೇವಿಯು ಕೇಳಿದಳು.

೨೭-೨೮. ಆ ರಾಜ ರಾಣಿಯರ ಆ ಸಂವಾದವನ್ನೂ, ಅಲ್ಲಿ ಮೂರು ತಿಂಗಳು ರಾಣಿಗೆ ಅವಧಿಯನ್ನು ಕೊಟ್ಟುದುದನ್ನೂ, ನರಕಕುಮಾರನ ವಿಷಯದಲ್ಲಿ ರಾಜನು ಚಿಂತಾಯುಕ್ತನಾದುದನ್ನೂ, ತಿಳಿದು ಭೂದೇವಿಯು ಹೀಗೆ ಆಲೋಚಿಸಿದಳು.

ತ್ರಿಭಿರ್ಮಾಸೈರ್ವ್ಯತೀತೈಃ ಸ್ಯಾದಸ್ಯ ಷೋಡಶ ವತ್ಸರಃ ।
ತತೋ ನೃಪೋ ಮಹಿಷ್ಯಾಸ್ತು ಕಥಯಿಷ್ಯತಿ ತದ್ರಹಃ ॥ ೨೯ ॥

ತತೋ ಮಮ ರಹಸ್ಯಂತು ವಿದಿತಂ ಸಂ ಭವಿಷ್ಯತಿ ।
ಚಿಂತಯಿತ್ವೇತಿ ಸಾ ದೇವೀ ಜಗದ್ಧಾತ್ರೀ ಸುತಂ ಪ್ರತಿ ॥ ೩೦ ॥

ನಿಶ್ಚಿತ್ಯೇದಂ ತದಾ ಕೃತ್ಯಂ ಪಾಸ್ತಕಾಲಮುಚೇಷ್ಟತ ।
ತತೋ ರಹಸಿ ಭೂಪಂ ತಂ ಸಮಾಸಾದ್ಯ ಸಗೌತಮಂ ॥ ೩೧ ॥

ಇದಮಾಹ ಜಗದ್ಧಾತ್ರೀ ಸ್ವಪುತ್ರಾರ್ಥೇ ಯಶಸ್ವಿನೀ ।
ಯೋ ಮಯಾ ಸಮಯೋ ದತ್ತಃ ಪಾಲಿತಃ ಸ ತ್ವಯಾನಘ ॥ ೩೨ ॥

ಪುತ್ರಶ್ಚ ಪಾಲಿತೋ ಮೇಽಯಂ ನರಕೋ ವಿನಯೈರ್ಯುತಃ ।
ಸಂಪ್ರಾಪ್ತಯೌವನಃ ಪುತ್ರೋ ಯೋಜಿತಶ್ಚ ತ್ವಯಾ ನಯೈಃ ॥ ೩೩ ॥

---

೨೯. ಇನ್ನು ಮೂರುತಿಂಗಳು ಕಳೆದರೆ ನರಕನಿಗೆ ಹದಿನಾರು ವರ್ಷಗಳು ತುಂಬುವುವು. ಅನಂತರ ರಾಜನು ನಮ್ಮ ರಹಸ್ಯವನ್ನು ರಾಣಿಗೆ ಹೇಳುವನು.

೩೦. ಆಗ ನನ್ನ ಗುಟ್ಟು ಬಯಲಾಗುವುದು ಎಂದು ಆಲೋಚಿಸಿ ಆ ಭೂದೇವಿಯು ಮುಂದೆ ತನ್ನ ಮಗನ ವಿಷಯದಲ್ಲಿ ಏನುಮಾಡಬೇಕೆಂಬುದನ್ನು ನಿಶ್ಚಯಿಸಿ ಯುಕ್ತವಾದುದನ್ನು ಆಚರಿಸಿದಳು.

೩೧. ಅನಂತರ ಆ ಭೂದೇವಿಯು ಏಕಾಂತದಲ್ಲಿ ಗೌತಮನೊಡನಿರುವ ಜನಕ ರಾಜನಲ್ಲಿಗೆ ಬಂದು ತನ್ನ ಪುತ್ರನ ಹಿತಕ್ಕಾಗಿ ಈ ಮಾತನ್ನಾಡಿದಳು.

೩೨. ಎಲೈ ಸತ್ಪುರುಷನೇ! ನಾನು ನಿನ್ನಲ್ಲಿ ಯಾವ ನಿಬಂಧನೆಯನ್ನು ಮಾಡಿದ್ದನೋ ಅದನ್ನು ನೀನು ಪಾಲಿಸಿರುವೆ. ವಿನಯಶಾಲಿಯಾದ ನನ್ನ ಪುತ್ರನಾದ ನರಕನನ್ನೂ ಪಾಲಿಸಿರುವೆ,

೩೩. ಯೌವನವಂತನಾದ ಈ ನನ್ನ ಪುತ್ರನನ್ನು ನೀತಿವಂತನನ್ನಾಗಿ ಮಾಡಿರುವೆ. ನಿನ್ನ ಅನುಗ್ರಹದಿಂದ ನನ್ನ ಪುತ್ರನು ನಿನ್ನ ಅರಮನೆಯಲ್ಲಿ ಸುಖವಾಗಿ ಬೆಳೆದನು.

ತವ ಪ್ರಸಾದಾತ್ಪುತ್ರೋ ಮೇ ಸುಖೀ ವೈದ್ಯೋ ಗೃಹೇ ತವ ।
ತಮಹಂ ಪೂರ್ವಸಮಯಾನ್ನಯಿಷ್ಯಾಮಿ ಸ್ವಪಾತ್ಮಜಂ ॥ ೩೪ ॥

ಅನುಜಾನೀಹಿ ಭದ್ರಂ ತೇ ನರಕಸ್ಯ ಗತಿಂ ಪ್ರತಿ ।
ರಕ್ಷಿತವ್ಯಶ್ಚ ಭವತಾ ಸಮಯಃ ಸ ಪುರೋಧಸಾ ॥ ೩೫ ॥

ಭನ್ನಮೇವ ನಯಿಷ್ಯಾಮಿ ಭೂಪತೇ ಮಾಕೃಥಾ ವ್ಯಥಾಂ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಜಗತಾಂ ಧಾತ್ರೀ ವಿದೇಹಾಧಿಪತಿಂ ನೃಪಂ ॥ ೩೬ ॥

ತತ್ರೈವ ಪಶ್ಯತಾಂ ತೇಷಾಮಂತರ್ಧಾನಮುಪಾಗಮತ್ ।
ನೃಪೋಽಪಿ ತಸ್ಯಾಸ್ತದ್ವಾಕ್ಯಮಂಗೀಕೃತ್ಯ ಕ್ಷಿತಿಂ ಪ್ರತಿ ॥ ೩೭ ॥

ತಸ್ಯಾಃ ಪ್ರತ್ಯಕ್ಷತಃ ಸ್ಥಾನಂ ಜಗಾಮ ಸಪುರೋಹಿತಃ ।
ಅಥೈಕದಾ ಧರಾದೇವೀ ಮಾಯಾಮಾನುಷರೂಪಿಣೀ ॥ ೩೮ ॥

---

೩೪. ಎಲೈ ರಾಜನೇ! ಈಗ ಈ ನನ್ನ ಪುತ್ರನನ್ನು ಹಿಂದಿನ ನಿಬಂಧನೆಯಂತೆ ಕರೆದುಕೊಂಡುಹೋಗುವೆನು. ನಿನಗೆ ಮಂಗಳವಾಗಲಿ. ಇವನನ್ನು ಕರೆದುಕೊಂಡುಹೋಗುವುದಕ್ಕೆ ಅನುಮತಿಯನ್ನು ಕೊಡು.

೩೫. ಆದರೆ ಹಿಂದಿನ ನಿಬಂಧನೆಯನ್ನು ನೀನೂ ನಿನ್ನ ಪುರೋಹಿತನೂ ರಕ್ಷಿಸಬೇಕು. ಎಲೈ ರಾಜನೇ! ರಹಸ್ಯವಾಗಿಯೇ ನರಕನನ್ನು ಕರೆದುಕೊಂಡುಹೋಗುವೆನು ವ್ಯಥೆಗೊಳ್ಳಬೇಡ.

೩೬. ಮಾರ್ಕಂಡೇಯನು ಹೇಳಿದನು:—ಹೀಗೆ ವಿದೇಹರಾಜನಾದ ಜನಕನಿಗೆ ಹೇಳಿ ಭೂದೇವಿಯು ಅವರು ನೋಡುತ್ತಿರುವಂತೆ ಅಲ್ಲಿಯೇ ಅದೃಶ್ಯಳಾದಳು.

೩೭. ಜನಕಮಹಾರಾಜನೂ ಸಹ ಆ ಭೂದೇವಿಯ ಎದುರಿನಲ್ಲಿ ಅವನ ಮಾತನ್ನಂಗೀಕರಿಸಿ ಮುಂದೆ ತನ್ನ ಸ್ಥಾನಕ್ಕೆ ಪುರೋಹಿತನೊಂದಿಗೆ ತೆರಳಿದನು.

೩೮. ತದನಂತರ ಒಂದು ದಿವಸ ತನ್ನ ಮಾಯಾಶಕ್ತಿಯಿಂದ ಮನುಷ್ಯಸ್ತ್ರೀ ರೂಪವನ್ನಿಟ್ಟಿದ್ದ ಭೂದೇವಿಯು ಏಕಾಂತದಲ್ಲಿ ಮುಖ್ಯಮಂತ್ರಿಯಾದ ಆ ನರಕನನ್ನು ಕರೆತಂದು ಹೀಗೆ ಹೇಳಿದಳು.

ಉಪಾಂಶು ನರಕಂ ಪ್ರಾಹ ಧಾತ್ರೀ ತಸ್ಯ ಮಹಾತ್ಮನಃ ।
ತ್ವಯಾ ಸಹ ಮಹಾಬಾಹೋ ಗಂಗಾಂ ಯಾತುಂ ಮತೋ ಮಮ ॥ ೩೯ ॥

ಯದಿ ತ್ವಂ ಯಾಸಿ ಯಾಸ್ಯಾಮಿ ರಥೇನಾದ್ಯೈವ ಪುತ್ರಕ ।

॥ ನರಕ ಉವಾಚ ॥

ನ ಪಿತುರ್ವಚನಂ ಯಾಸ್ಯೇ ವಿನಾ ಮಾತಸ್ತ್ವಯಾ ಸಹ ॥ ೪೦ ॥

ಅನುಜ್ಞಾಪ್ಯ ಮಹಾರಾಜಂ ಕರಿಷ್ಯಾಮಿ ತವೇಪ್ಸಿತಂ ।
ಗುರುಂ ಚ ತನಯಂ ತಸ್ಯ ಶತಾನಂದಂ ದ್ವಿಜೋತ್ತಮಂ ॥ ೪೧ ॥

ಅನುಜ್ಞಾಪ್ಯ ರಥೇನಾಹಂ ಯಾಸ್ಯೇ ಗಂಗಾಂ ತ್ವಯಾ ಸಹ ।

॥ ಧಾತ್ರ್ಯುವಾಚ ॥

ನ ತೇ ಪಿತಾಽಯಂ ಜನಕೋ ಯಃ ಸರ್ವಜಗತಾಂ ಪ್ರಭುಃ ॥ ೪೨ ॥

---

೩೯. ಎಲೈ ವೀರನಾದ ಬಾಲಕನೇ! ನಿನ್ನೊಡನೆ ನಾನು ಗಂಗೆಗೆ ಹೋಗ ಬೇಕೆಂದು ಇಷ್ಟವುಳ್ಳವಳಾಗಿರುವೆನು. ನೀನು ಬರುವುದಾದರೆ ಈಗಲೇ ರಥದಮೇಲೆ ಕುಳಿತುಕೊಂಡು ಹೋಗೋಣ.

೪೦. ನರಕನು ಹೇಳಿದನು:—ಓ ಮಾತೆಯೇ! ನನ್ನ ತಂದೆಯ ಅಪ್ಪಣೆ ಯಿಲ್ಲದೇ ನಿನ್ನೊಡನೆ ನಾನು ಬರಲಾರೆನು. ಅವನ ಅನುಜ್ಞೆಯನ್ನು ಕೇಳಿಕೊಂಡು ನಿನ್ನ ಇಷ್ಟದಂತೆ ನಡೆಯುವೆನು.

೪೧. ಅಲ್ಲದೇ ಗುರುವಾದ ಗೌತಮನನ್ನೂ, ಅವನ ಪುತ್ರನಾದ ಶತಾನಂದ ನನ್ನೂ ಕೇಳಿಕೊಂಡು ರಥದಿಂದ ನಿನ್ನೊಡನೆ ಗಂಗಾನದಿಗೆ ಬರುವೆನು.

೪೨. ದಾದಿಯು ಹೇಳಿದಳು:—ಎಲೈ ಬಾಲಕನೇ! ಈ ಜನಕರಾಜನು ನಿನ್ನ ತಂದೆಯಲ್ಲವು. ಎಲ್ಲಾ ಜಗತ್ತುಗಳಿಗೆ ಒಡೆಯನಾದ ವಿಷ್ಣುವೇ ನಿನ್ನ ತಂದೆಯು. ನನ್ನೊಡನೆ ಗಂಗೆಗೆ ಬಂದು ಅಲ್ಲಿ ಅವನನ್ನು ನೋಡುವೆಯಂತೆ.

ಸ ತೇ ಪಿತಾ ತಂ ಗಂಗಾಯಾಂ ಪಶ್ಯ ಗತ್ವಾ ಪುಯಾ ಸಹ ।
ಅಯಂ ಪಿತಾ ಪಾಲಕಸ್ತೇ ನ ರಾಜ್ಯಂ ಸಂಪ್ರದಾಸ್ಯತಿ ॥ ೪೩ ॥

ಯಸ್ತೇ ವರ್ಧಯಿತಾ ತಾತ ತಮಾಸಾದಯ ಪುತ್ರಕ ।
ಅತ್ರ ಯದ್ಯದ್ರಹಸ್ಯಂ ತದ್ಗಂಗಾಯಾನೇವ ಪುತ್ರಕ ॥ ೪೪ ॥

ಕಥಯಿಷ್ಯಾಮ್ಯಹಂ ಸರ್ವಂ ರಹೋಭಂಗಸ್ತಥೋಽನ್ಯಥಾ ।

॥ ಮಾರ್ಕಂಡೇಯ ಉವಾಚ ॥

ಜಾತಸಂಪ್ರತ್ಯಯೋ ಧಾತ್ರ್ಯಾ ವಚಸಾ ನರಕಸ್ತದಾ ॥ ೪೫ ॥

ವಿಹಾಯ ಯಾನಂ ಛಂದೇನ ಪದ್ಭ್ಯಾಂ ಗಂಗಾಂ ತದಾ ಯಯೌ ।
ಅಥ ಗಂಗಾಂ ಸಮಾಸಾದ್ಯ ಸಂಸ್ನಾಪ್ಯ ವಿಧಿವತ್ಸುತಂ ॥ ೪೬ ॥

ಆತ್ಮಾನಂ ದರ್ಶಯಾಮಾಸ ಪೃಥಿವೀ ಸ್ವಸುತಾಯ ವೈ ।
ಮಾಯಾಮಾನುಷಮೂರ್ತಿಂ ತಾಂ ವಿಹಾಯ ಜಗತಾಂ ಪ್ರಸೂಃ ॥ ೪೭ ॥

---

೪೩. ಈ ಜನಕನು ನಿನ್ನ ಸಾಕಿದ ತಂದೆಯು. ಇವನು ರಾಜ್ಯವನ್ನು ನಿನಗೆ ಕೊಡಲಾರನು. ಎಲೈ ಪುತ್ರನೇ! ಮುಂದೆ ನಿನ್ನನ್ನು ಯಾರು ಸಲಹುವರೋ ಅವರ ಬಳಿಯಲ್ಲಿಯೇ ಇರು.

೪೪. ಈ ವಿಷಯದಲ್ಲಿ ಏನೇನು ರಹಸ್ಯವಿರುವುದೋ ಅದೆಲ್ಲವನ್ನು ಗಂಗೆಯಲ್ಲಿ ಹೇಳುವೆನು. ಅದಲ್ಲದೆ ಅಕಾಲದಲ್ಲಿ ಈಗ ಹೇಳಿದರೆ ರಹಸ್ಯವನ್ನು ಬಯಲು ಮಾಡಿದಂತಾಗುವುದು.

೪೫. ಮಾರ್ಕಂಡೇಯನು ಹೇಳಿದನು:—ದಾದಿಯ ಮಾತಿನಲ್ಲಿ ನಂಬಿಕೆಯಿಟ್ಟು ನರಕನು ವಾಹನವನ್ನು ಬಿಟ್ಟು ಕಾಲುನಡಿಗೆಯಿಂದಲೇ ಗಂಗಾನದಿಗೆ ಹೊರಟನು.

೪೬. ಅನಂತರ ಗಂಗಾನದಿಯನ್ನು ಸೇರಿ ಅಲ್ಲಿ ನರಕನಿಗೆ ವಿಧಿಯಿಂದ ಸ್ನಾನ ಮಾಡಿಸಿ ಭೂದೇವಿಯು ಆ ತನ್ನ ಪುತ್ರನಿಗೆ ತನ್ನ ನಿಜವಾದ ರೂಪವನ್ನು ತೋರಿಸಿದಳು.

೪೭–೪೮. ಮಾಯಾನಿರ್ಮಿತವಾದ ಆ ಮನುಷ್ಯರೂಪವನ್ನು ಬಿಟ್ಟು ಜಗಜ್ಜನನಿಯಾದ ಭೂದೇವಿಯು ಕನ್ನೈದಿಲೆಯಂತೆ ನೀಲವಾದ ಕಾಂತಿಯುಳ್ಳದುಮೂ,

ನೀಲೋತ್ಪಲದಲಶ್ಯಾಮಂ ಸರ್ವಲಕ್ಷಣಸಂಯುತಂ ।
ಸರ್ವಾಂಗಸುಂದರಂ ಚಾರು ನಾನಾಲಂಕಾರಭೂಷಿತಂ ॥ ೪೮ ॥

ಪುತ್ರಾಯ ದರ್ಶಯಾಮಾಸ ನರಕಾಯ ವಸುಂಧರಾ ।
ಕಥಾಮೇತಾಂ ಚ ಪೂರ್ವಸ್ಮಿನ್ನದ್ಭುತಾಂ ಪೃಥಿವೀ ತದಾ ॥ ೪೯ ॥

ಕಥಯಾಮಾಸ ಪುತ್ರಾಯ ಪ್ರತೀತಿರ್ಜಾಯತೇ ಯಥಾ ।
ಮಮ ಗರ್ಭೇ ಯಥಾ ಪುತ್ರ ವರ್ಧಸೇ ತ್ವಂ ದಿನೇದಿನೇ ॥ ೫೦ ॥

ಬ್ರಹ್ಮಾದಯಸ್ತದಾ ದೇವಾ ಆಲೋಕ್ಯ ಸ್ವಯಮೇವ ತೇ ।
ಮಲಿನೀಕ್ಷಿತಿಸಂಜಾತಃ ಪುತ್ರೋ ವಿಷ್ಣೋರ್ಮಹಾತ್ಮನಃ ॥ ೫೧ ॥

ಆಸುರಂ ಭಾವಮಾಸ್ಥಾಯ ಸರ್ವಾನಸ್ಮಾನ್ವಧಿಷ್ಯತಿ ।
ಇತಿ ಚಿಂತಾಪರಾ ದೇವಾಃ ಕುಮಂತ್ರಂ ಚಕ್ರಿರೇ ತದಾ ॥ ೫೨ ॥

ಅಯಂ ನೋತ್ಪದ್ಯತಾಂ ಗರ್ಭಾದ್ಗರ್ಭೇ ತಿಷ್ಠತ್ವಯಂ ಸದಾ ।
ತತೋ ಮಮ ಭವಾನ್ ಗರ್ಭೇ ಸುಬಹೂನಿ ದಿನಾನ್ಯಥ ॥ ೫೩ ॥

ಎಲ್ಲಾ ಲಕ್ಷಣಗಳಿಂದ ಕೂಡಿದುದೂ, ಸರ್ವಾಂಗಸುಂದರವಾದುದೂ, ಮನೋಹರವಾದುದೂ, ಅನೇಕ ಆಭರಣಗಳಿಂದ ಅಲಂಕರಿಸಲ್ಪಟ್ಟುದೂ ಆದ ತನ್ನ ನಿಜಸ್ವರೂಪವನ್ನು ಪುತ್ರನಾದ ನರಕನಿಗೆ ತೋರಿಸಿದಳು.

೪೯. ಅಲ್ಲದೇ ಹಿಂದೆ ನಡೆದ ಅದ್ಭುತವಾದ ಕಥೆಯನ್ನೂ ಸಹ ಭೂದೇವಿಯು ತನ್ನ ಪುತ್ರನಿಗೆ ನಂಬಿಕೆಯುಂಟಾಗುವಂತೆ ಹೇಳಿದಳು.

೫೦-೫೨. ಎಲೈ ಪುತ್ರನೇ! ಹಿಂದೆ ನೀನು ಗರ್ಭದಲ್ಲಿ ದಿನದಿನವೂ ಬೆಳೆಯುತ್ತಿರುವುದನ್ನು ತಿಳಿದು ಬ್ರಹ್ಮನೇ ಮೊದಲಾದ ದೇವತೆಗಳು ಚಿಂತೆಗೊಳಗಾಗಿ ಋತುಮತಿಯಾದ ಭೂದೇವಿಯಲ್ಲಿ ಮಹಾತ್ಮನಾದ ವಿಷ್ಣುವಿನಿಂದ ಜನಿಸಿದ ಪುತ್ರನು ಮುಂದೆ ರಾಕ್ಷಸಸ್ವಭಾವವನ್ನು ಹೊಂದಿ ನಮ್ಮೆಲ್ಲರನ್ನೂ ಹಿಂಸಿಸುವನು. ಆದುದರಿಂದ ಇವನು ಗರ್ಭದಿಂದ ಜನಿಸದೆ ಗರ್ಭದಲ್ಲಿಯೇ ಇರಲಿ ಎಂದು ಒಂದು ಕೆಟ್ಟ ಆಲೋಚನೆಯನ್ನು ಮಾಡಿದರು.

೫೩. ಅನಂತರ ದೇವತೆಗಳ ಆ ಕೆಟ್ಟ ಆಲೋಚನೆಯಿಂದ ನೀನು ನನ್ನ ಗರ್ಭದಲ್ಲಿ ಅನೇಕ ಯುಗಗಳವರೆಗೆ ದುಃಖದಿಂದ ವಾಸಿಸಿರುವೆ.

ಅವಸದ್ದುಃಖವಾನ್ಪುತ್ರ ದೇವಾನಾಂ ಚ ಕುಮಂತ್ರತಃ ।
ಮೃತಕಲ್ಪಾಭವಮಹಂ ಭವತೋ ಧಾರಣಾತ್ಸುತ ॥ ೫೪ ॥

ತತೋಽಹಂ ಶರಣಂ ಯಾತಾ ಭಗವಂತಂ ಸನಾತನಂ ।
ನಾರಾಯಣಸ್ಯ ವಾಕ್ಯಾತ್ತು ಭವಾನುತ್ಪನ್ನವಾಂಸ್ತತಃ ॥ ೫೫ ॥

ಇತಿ ಸತ್ಯಂ ಮಮ ವಚಃ ಪುತ್ರ ಜಾನೀಹಿ ನಿಶ್ಚಿತಂ ।
ಅಥ ಯಾವನ್ನ ಪುತ್ರಸ್ಯ ವಿಸ್ಮಯಃ ಸಮುಪಪದ್ಯತ ॥ ೫೬ ॥

ತಾವದೇವ ಸ್ವಯಂದೇವೀ ಪ್ರೋವಚೇ ಪುತ್ರಮಿದಂ ವಚಃ ।
ಅಹಂ ತೇ ಜನನೀ ತಾತ ಮಯಾ ಜಾತೋಽಸಿ ಪುತ್ರಕ ॥ ೫೭ ॥

ಪೃಥಿವ್ಯಹಂ ಜಗದ್ಧಾತ್ರೀ ಮದ್ರೂಪಂ ಮನ್ಮಯಂತ್ವಿದಂ ।
ಪಿತಾ ತವ ಮಹಾಬಾಹೋ ಪ್ರಭುರ್ನಾರಾಯಣೋಽವ್ಯಯಃ ॥ ೫೮ ॥

---

೫೪. ಎಲೈ ಪುತ್ರನೇ ! ನಿನ್ನನ್ನು ಧರಿಸಿದುದರಿಂದ ನಾನು ಮೃತಪ್ರಾಯಳಾಗಿ ಪುರಾಣಪುರುಷನೂ, ಭಗವಂತನೂ ಆದ ನಾರಾಯಣನನ್ನು ಶರಣು ಹೊಂದಿದೆನು.

೫೫. ಮುಂದೆ ಆ ನಾರಾಯಣನ ಮಾತಿನಂತೆ ನೀನು ಜನಿಸಿರುವೆ. ಎಲೈ ಪುತ್ರನೇ ! ನಾನು ಹೇಳಿದ ಇದೆಲ್ಲವೂ ನಿಜವಾದುದೆಂದು ನಿಶ್ಚಯವಾಗಿ ತಿಳಿ.

೫೬. ಆಮೇಲೆ (ಇದನ್ನು ಕೇಳಿ) ನರಕನಿಗೆ ಆಶ್ಚರ್ಯವುಂಟಾಗುವುದರೊಳಗೆ ಭೂದೇವಿಯು ತಾನೇ ಈ ಮಾತನ್ನು ಅವನಿಗೆ ಹೇಳಿದಳು.

೫೭. ಎಲೈ ಪುತ್ರನೇ ! ನಾನು ನಿನ್ನ ತಾಯಿಯೆಂದು ತಿಳಿ. ಜಗತ್ತನ್ನು ಧರಿಸುವ ಭೂದೇವಿಯು ನಾನೇ ಆಗಿರುವೆನು. ನನ್ನ ಹೊರಗಿನ ರೂಪವು ಮಣ್ಣಿನ ರೂಪವಾದುದು.

೫೮. ಎಲೈ ವೀರನೇ ! ಜಗದೊಡೆಯನೂ, ನಾಶವಿಲ್ಲದವನೂ, ಅಚ್ಯುತನೂ, ಜಗತ್ತನ್ನು ಸೃಷ್ಟಿಸುವವನೂ, ಮಹಾತ್ಮನೂ, ಆದಿವರಾಹಸ್ವರೂಪನೂ ಆದ ನಾರಾಯಣನೇ ನಿನ್ನ ತಂದೆಯು.

ಅಚ್ಯುತೋ ಜಗತಾಂ ಧಾತಾ ಮಹಾತ್ಮಾ ಸೂಕರಾತ್ಮಧಕ್ ।
ತೇನಾಹಿತಸ್ತ್ವಂ ನುದ್ಗರ್ಭೇ ಸುಚಿರಂ ತ್ವಂ ಪುರಾಽವಸಃ ॥ ೫೯ ॥

ಸಂಪ್ರಾಪ್ತೇ ಸಮಯೇ ಜಾತಃ ಪಾಲಿತಶ್ಚೇಹ ಭೂಭೃತಾ ।

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯಾ ವಚಃ ಶ್ರುತ್ವಾ ಹರ್ಷಶೋಕಕುಲಸ್ತದಾ ॥ ೬೦ ॥

ನರಕಃ ಪೃಥಿವೀಂ ದೇವೀಮಿದಮಾಹ ಧನುರ್ಧರಃ ।
ನ ಮಾತಾ ವಿದಿತಾ ಪೂರ್ವಂ ಮಾತಾಹಮಿತಿ ಭಾಷಸೇ ॥ ೬೧ ॥

ವಿಷ್ಣುಃ ಪಿತೇತಿ ಚ ವಚೋ ನ ಪಿತಾ ವಿದಿತೋ ಮಮ ।
ಜಾನಾಮಿ ಪಿತರಂ ಚಾಹಂ ವಿದೇಹಾಧಿಪತಿಂ ನೃಪಂ ॥ ೬೨ ॥

ತಸ್ಯ ಭಾರ್ಯಾಂ ಸುಮತ್ಯಾಖ್ಯಾಮಹಂ ಜಾನಾಮಿ ಮಾತರಂ ।
ಭ್ರಾತರಸ್ತತ್ಸುತಾಃ ಸರ್ವೇ ಸೀತಾ ಮೇ ಭಗಿನೀ ಶುಭಾ ॥ ೬೩ ॥

---

೫೯. ವರಾಹರೂಪಿಯಾದ ಆ ನಾರಾಯಣನಿಂದ ನೀನು ನನ್ನ ಗರ್ಭದಲ್ಲಿ ಜನಿಸಿ ಬಹಳದಿವಸ ಅಲ್ಲಿಯೇ ವಾಸವಾಗಿದ್ದು ನಿಯಮಿತಕಾಲವು ಬರಲು ಜನಿಸಿ ಜನಕಮಹಾರಾಜನಿಂದ ಸಲಹಲ್ಪಟ್ಟಿರುವೆ.

೬೦. ಮಾರ್ಕಂಡೇಯನು ಹೇಳಿದನು:—ಹೀಗೆ ಭೂದೇವಿಯ ಮಾತನ್ನು ಕೇಳಿ ಧನುರ್ಧಾರಿಯಾದ ನರಕನು ಸಂತೋಷದುಃಖಗಳಿಂದ ಕೂಡಿ ಭೂದೇವಿಯನ್ನು ಕುರಿತು ಹೀಗೆ ಹೇಳಿದನು.

೬೧. ನೀನು ನನ್ನ ತಾಯಿಯೆಂದೂ, ವಿಷ್ಣುವು ನನ್ನ ತಂದೆಯೆಂತಲೂ ಈಗ ನನಗೆ ಹೇಳಿರುವೆ. ಇದಕ್ಕೆ ಮೊದಲು ಈ ವಿಷಯವು ನನಗೆ ತಿಳಿದಿರಲಿಲ್ಲವು.

೬೨. ಆದರೆ, ನಾನು ವಿದೇಹರಾಜನಾದ ಜನಕನನ್ನು ನನ್ನ ತಂದೆಯೆಂದೂ, ಅವನ ರಾಣಿಯಾದ ಸುಮತಿಯನ್ನು ತಾಯಿಯೆಂದೂ ತಿಳಿದಿರುವೆನು.

೬೩. ಆ ಜನಕನ ಮಿಕ್ಕ ಮಕ್ಕಳೆಲ್ಲರೂ ನನ್ನ ಸಹೋದರರು. ಮಂಗಳ ರೂಪಕಾದ ಸೀತೆಯು ನನ್ನ ಸಹೋದರಿಯು. ಸುಮತಿದೇವಿಯು ನನ್ನ ತಾಯಿಯೆಂದು ಜನರೆಲ್ಲರೂ ತಿಳಿದಿರುವರು.

ಸುಮತಿರ್ಮಮ ಮಾತೇತಿ ಲೋಕೇಽಪೀ ಜಾನಾತಿ ಸಂತತಂ ।
ಕಾತ್ಯಾಯನೀ ಚ ಧಾತ್ರೀ ಮೇ ಯಾಧುನೈವ ಕೃತಾ ತ್ವಯಾ ॥ ೬೪ ॥

ಏತತ್ಸರ್ವಂ ತ್ವಯಾ ಮಿಥ್ಯಾ ಶಂಸಿತಂ ಮಮ ಸಾಂಪ್ರತಂ ।
ಯಥಾ ತವಾಹಂ ತನಯಃ ಸತ್ಯಮಾಖ್ಯಾಹಿ ತನ್ಮನು ॥ ೬೫ ॥

॥ ಮಾರ್ಕಂಡೇಯ ಉವಾಚ ॥

ಪುತ್ರಸ್ಯ ವಚನಂ ಚೇತಿ ಶ್ರುತ್ವಾ ಸರ್ವಂಸಹಾ ತದಾ ।
ಸರ್ವಂ ತತ್ಪೂರ್ವವೃತ್ತಾಂತಂ ತನಯಾಯ ನ್ಯವೇದಯತ್ ॥ ೬೬ ॥

ಯಥಾ ಮಖಿನ್ಯಾಃ ಸಂಭೋಗೋ ವರಾಹಸ್ಯಾಭವತ್ಪುರಾ ।
ಯಥಾ ಗರ್ಭೇ ಧೃತೋ ದೇವೈರ್ಯೇನ ವಾ ಕಾರಣೇನ ಸಃ ॥ ೬೭ ॥

ಯಥಾ ಚ ಗರ್ಭದುಃಖಾರ್ತಾ ಮಾಧವಂ ಶರಣಂ ಗತಾ ।
ತಥಾ ತೇನ ಪ್ರದತ್ತಶ್ಚ ಸಮಯೋ ಜನನಂ ಪ್ರತಿ ॥ ೬೮ ॥

೬೪-೬೫. ನನ್ನ ಸಾಕುತಾಯಿ (ದಾದಿ) ಯು ಕಾತ್ಯಾಯನಿ ಎಂಬುವಳು. ಅವಳ ರೂಪವನ್ನೇ ನೀನು ಈಗ ತಾಳಿರುವೆ. ಆದಕಾರಣ ಈಗ ನೀನು ಹೇಳದು ದೆಲ್ಲವೂ ಸುಳ್ಳೆಂದು ತಿಳಿದಿರುವೆನು. ಆದುದರಿಂದ ನಾನು ನಿನಗೆ ಹೇಗೆ ಮಗನೆಂಬು ದನ್ನು ನಿಜವಾಗಿ ನನಗೆ ಹೇಳು.

೬೬. ಮಾರ್ಕಂಡೇಯನು ಹೇಳಿದನು:—ತನ್ನ ಪುತ್ರನಾದ ನರಕನ ಈರೀತಿ ಯಾದ ಮಾತುಗಳನ್ನು ಕೇಳಿ ಭೂದೇವಿಯು ಆಗ ಹಿಂದೆ ನಡೆದ ಇತಿಹಾಸವೆಲ್ಲವನ್ನೂ ಅವನಿಗೆ ಹೇಳಿದಳು.

೬೭. ತಾನು ರಜಸ್ವಲೆಯಾದಾಗ ಆದಿವರಾಹನೊಡನೆ ನಡೆಸಿದ ಸಂಭೋಗ ವನ್ನೂ, ದೇವತೆಗಳು ಗರ್ಭದಲ್ಲಿಯೇ ಶಿಶುವನ್ನು ಬಂಧಿಸಿದ ಕಾರಣವನ್ನೂ ಆ ನರಕ ನಿಗೆ ಹೇಳಿದಳು.

೬೮—೭೦. ಮುಂದೆ ತಾನು ಗರ್ಭದುಃಖದಿಂದ ಪೀಡಿತಳಾಗಿ ವಿಷ್ಣುವನ್ನು ಶರಣುಹೊಂದಿದುದನ್ನೂ, ಆ ವಿಷ್ಣುವು ತನಗೆ ಜನನಕಾಲವನ್ನು ನಿರ್ದೇಶಿಸಿದುದನ್ನೂ ಮುಂದೆ ಜನಕರಾಜನ ಯಜ್ಞಭೂಮಿಯಲ್ಲಿ ತಾನು ಪುತ್ರನನ್ನು ಹಡೆದುದನ್ನೂ.

ಯಥಾ ವಿದೇಹರಾಜಸ್ಯ ಯಜ್ಞಭೂಮಾವಸೂಯತ ।
ವಿದೇಹರಾಜೇನ ಸಮಂ ಯಾದೃಶಃ ಸಮಯೋಽಭವತ್ ॥ ೬೯ ॥

ಯಥಾ ಮಾನುಷರೂಪೇಣ ಧಾತ್ರೀ ಸಾ ಸಮುಪಸ್ಥಿತ ।
ತತ್ಸರ್ವಂ ಕಥಯಾಮಾಸ ನರಕಾಯ ಮಹಾತ್ಮನೇ ॥ ೭೦ ॥

॥ ಋಷಯ ಊಚುಃ ॥

ಕಿಮರ್ಥಂ ಸಮಯೋ ದತ್ತಃ ವಿಷ್ಣುನಾ ಪ್ರಭವಿಷ್ಣುನಾ ।
ನಿಹತೇ ರಾವಣೇ ವೀರೇ ರಾಮೇಣ ಸುಮಹಾತ್ಮನಾ ॥ ೭೧ ॥

ಭವಿಷ್ಯತಿ ಸುತಸ್ತೇ ವೈ ತತ್ರ ನಃ ಸಂಶಯೋ ಮಹಾನ್ ।
ಏತತ್ತ್ವಂ ಸಂಶಯಂ ಛಿಂಧಿ ಗುರೋ ಶಾಸ್ತಾಸಿ ನಃ ಸದಾ ॥ ೭೨ ॥

॥ ಮಾರ್ಕಂಡೇಯ ಉವಾಚ ॥

ಭಾರಾರ್ತಾ ರಾವಣಾದೀನಾಂ ಪೃಥಿವೀ ಮಾಂಸಭೋಗಿನಾಂ ॥ ೭೩ ॥

ವಿದೇಹರಾಜನಿಗೂ, ತನಗೂ ಆದ ನಿಬಂಧನೆಯನ್ನೂ ಮತ್ತು ಮನುಷ್ಯರೂಪವನ್ನು ಧರಿಸಿ ತಾನು (ಭೂದೇವಿಯು) ದಾದಿಯಾದುದನ್ನೂ ಸಹ ಭೂದೇವಿಯು ಮಹಾತ್ಮನಾದ ನರಕನಿಗೆ ಹೇಳಿದಳು.

೭೧-೭೨. ಋಷಿಗಳು ಹೇಳಿದರು:—ಎಲೈ ಮಾರ್ಕಂಡೇಯನೇ! ಸರ್ವ ಸಮರ್ಥನಾದ ವಿಷ್ಣುವು, ಮಹಾತ್ಮನಾದ ರಾಮನಿಂದ ವೀರನಾದ ರಾವಣನು ಸಂಹರಿಸಲ್ಪಟ್ಟನಂತರ ಭೂದೇವಿಗೆ ಪುತ್ರಜನನವಾಗುವುದೆಂದು ಕಾಲನಿಯಮವನ್ನು ಅದೇಕೆ ಸೂಚಿಸಿದನು? ಈ ವಿಷಯದಲ್ಲಿ ನಮಗೆ ತುಂಬಾ ಸಂಶಯವಿರುವುದು. ಎಲೈ ಗುರುವೇ! ನೀನು ನಮಗೆ ಯಾವಾಗಲೂ ಶಿಕ್ಷಿತನಾಗಿರುವೆ. ಆದಕಾರಣ ಈ ನಮ್ಮ ಸಂಶಯವನ್ನು ಪರಿಹಾರಮಾಡಿಸು.

೭೩. ಮಾರ್ಕಂಡೇಯನು ಹೇಳಿದನು:—ಎಲೈ ಬ್ರಾಹ್ಮಣೋತ್ತಮರೇ! (ನರ) ಮಾಂಸವನ್ನು ತಿನ್ನುವ ರಾವಣನೇ ಮೊದಲಾದ ದುಷ್ಟರ ಭಾರದಿಂದ ಪೀಡಿತಳಾದ ಭೂದೇವಿಯು ಐದುಯೋಜನಪರ್ಯಂತರ ಕೆಳಗೆ ಇಳಿದುಹೋಗಿದ್ದಳು.

ಅಧೋ ಗತಾ ಯೋಜನಾನಿ ಪಂಚ ವೈ ದ್ವಿಜಸತ್ತಮಾಃ ।
ಅಯಂ ವರಾಹವೀರ್ಯೇಣ ಯಾತೋ ಗರ್ಭೇ ಕ್ಷಿತೇಃ ಪುನಃ ॥ ೭೪ ॥

ಅಸಾವಪಿ ಮಹಾರಾಜೋ ದಶಗ್ರೀವೋ ಯಥಾಽಭವತ್ ।
ಅಧೋ ಯಾಸ್ಯತಿ ಭಾರಾರ್ತಾ ಸಾತೀವ ಪೃಥಿವೀತ್ವಿತಿ ॥ ೭೫ ॥

ಸಮಯಂ ದತ್ತವಾನ್ವಿಷ್ಣೂ ರಾವಣೇ ನಿಪತೇ ಸತಿ ।
ಧರಾಯೈ ಭಾರವಿಹತಿರ್ವ್ಯಾಜೇನ ದ್ವಿಜಸತ್ತಮಾಃ ॥ ೭೬ ॥

ಅಥೈನಾಂ ಪೃಥಿವೀಂ ಪ್ರಾಹ ನರಕಃ ಪುನರೇವ ಹಿ ।
ಪೃಥ್ವ್ಯಾ ವಚನಂ ಶ್ರುತ್ವಾ ಸ್ವಲ್ಪಸಂಶಯಸಂಯುತಃ ॥ ೭೭ ॥

ಯದ್ಯೇವಂ ಮೇ ಪಿತಾ ವಿಷ್ಣುರ್ಮಾತಾ ತ್ವಂ ಪೃಥಿವೀ ಶುಭೇ ।
ಆಗಚ್ಛತು ಜಗನ್ನಾಥೋ ಮಮೈವಾಭ್ಯುಪಪತ್ತಯೇ ॥ ೭೮ ॥

---

೭೪. ಆಗಲೇ ವರಾಹಮೂರ್ತಿಯ ವೀರ್ಯದಿಂದ ಭೂದೇವಿಯ ಗರ್ಭದಲ್ಲಿ ಈ ನರಕನು ಉತ್ಪನ್ನನಾದನು. ಇವನೂ ಸಹ ರಾವಣನಂತೆ ಭೂಮಿಗೆ ತುಂಬಾ ಭಾರವಾದನು.

೭೫-೭೬. ಎಲೈ ಬ್ರಾಹ್ಮಣೋತ್ತಮರೇ! ಈ ಗರ್ಭದ ಭಾರದಿಂದ ಪೀಡಿಸಲ್ಪಟ್ಟು ಭೂದೇವಿಯು ಇನ್ನೂ ಕೆಳಗೆಹೋಗುವಳೆಂದು ತಿಳಿದು ವಿಷ್ಣುವು ಭಾರನನ್ನು ಇಳಿಸುವನಿಮಿತ್ತದಿಂದ ರಾವಣನು ಹತನಾದಮೇಲೆ ಗರ್ಭಜನನವು ಆಗುವುದೆಂದು ಸಮಯ ನಿಬಂಧನೆಯನ್ನು ಭೂದೇವಿಗೆ ನೀಡಿದನು.

೭೭. ಅನಂತರ ಹೀಗೆ ಭೂದೇವಿಯು ಹೇಳಿದ ಮಾತುಗಳನ್ನು ಕೇಳಿ ಸ್ವಲ್ಪ ಮಟ್ಟಿಗೆ ಸಂಶಯವು ಹೋಗಲು ನರಕನು ತಿರುಗಿ ಅವಳನ್ನು ಕುರಿತು ಹೀಗೆ ಹೇಳಿದನು.

೭೮. ಮಂಗಳರೂಪಳಾದ ಓ ಭೂದೇವಿಯೇ! ವಿಷ್ಣುವೇ ನನ್ನ ತಂದೆಯೂ ನೀನೆ ನನ್ನ ತಾಯಿಯೂ ಆದರೆ, ಜಗದ್ಗೊಡೆಯನಾದ ಆ ನಾರಾಯಣನೇ ನನ್ನನ್ನು ಸಲಹಲು ತಾನೇ ನನ್ನೆದುರಿಗೆ ಬರಲಿ.

ಸ ಏವ ಸರ್ವಲೋಕೇಶೋ ಯದಿ ಮಾಂ ಭಾಷ್ಯತೇಽಚ್ಯುತಃ ।
ಪಿತಾಪಂ ತೇ ತ್ವಿಯಂ ಮಾತಾ ಶ್ರದ್ದಧೇ ತದಪಂ ಶುಭೇ ॥ ೭೯ ॥

ತ್ವಯಾ ಮಾನುಷರೂಪೇಣ ಧಾತ್ರ್ಯಾಽಪಂ ಪರಿಪಾಲಿತಃ ।
ತದ್ರೂಪಂ ದ್ರಷ್ಟುಮಿಚ್ಛಾಮಿ ಯದಿ ತೇ ರೂಪಮೀದೃಶಂ ॥ ೮೦ ॥

ತತ್ಪೂರ್ವರೂಪಂ ದೃಷ್ಟ್ವಾ ವೈ ವಚನಾಚ್ಚ ಜಗದ್ಗುರೋಃ ।
ಜಾತಶ್ರದ್ಧೋ ಮಹಾಭಾಗೇ ಸ್ಥಾಸ್ಯಾಮಿ ಸಮಯೇ ತವ ॥ ೮೧ ॥

॥ ಮಾರ್ಕಂಡೇಯ ಉವಾಚ ॥

ಪುತ್ರಸ್ಯ ವಚನಂ ಶ್ರುತ್ವಾ ಪೃಥ್ವೀ ಪೂರ್ವವತ್ತದಾ ।
ಮಾಯಾಮಾನುಷರೂಪಂ ತತ್ಪ್ರತಿಜಗ್ರಾಹ ತತ್ಪರಃ ॥ ೮೨ ॥

ತಥಾ ಕಾತ್ಯಾಯನೀರೂಪಂ ಯೇನ ರೂಪೇಣ ಪಾಲಿತಃ ।
ನರಕಃ ಸಾ ತು ತದ್ಗೃಹ್ಯ ತತ್ಯಾಜ ಪೃಥ್ವೀತನುಂ ॥ ೮೩ ॥

---

೭೯. ಜಗದೊಡೆಯನಾದ ವಿಷ್ಣುವೇ ಬಂದು ನಾನೇ ನಿನ್ನ ತಂದೆಯು. ನಿನ್ನ ತಾಯಿಯೇ ಈ ಭೂದೇವಿಯು ಎಂದು ಹೇಳಿದರೆ ಆಗ ನಾನು ನಂಬುವೆನು.

೮೦. ನೀನೇ ಮನುಷ್ಯರೂಪವನ್ನು ಧರಿಸಿ ನನ್ನ ದಾದಿಯಾಗಿ ನನ್ನನ್ನು ಸಲಹಿದೆಯಷ್ಟೆ. ನಿನ್ನ ಆ ದಾದಿಯ ರೂಪವನ್ನು ತಿರುಗಿ ನೋಡಲಿಚ್ಛಿಸುವೆನು.

೮೧. ಎಲೈ ಭಾಗ್ಯಶಾಲಿನಿಯೇ! ನಿನ್ನ ಮೊದಲಿನ ದಾದಿಯ ರೂಪವನ್ನು ನೋಡಿಯೂ, ನಾರಾಯಣ ಮಾತಿನಿಂದಲೂ ನಂಬಿಕೆ ಉಳ್ಳವನಾಗಿ ಮುಂದೆ ನಿನ್ನ ನಿಯಮದಂತೆ ಇರುವೆನು.

೮೨. ಮಾರ್ಕಂಡೇಯನು ಹೇಳಿದನು:—ಪುತ್ರನಾದ ನರಕನ ಮಾತನ್ನು ಕೇಳಿ ಭೂದೇವಿಯು ಮೊದಲು ಮಾಯೆಯಿಂದ ತಾನು ಧರಿಸಿದ್ದ ಮನುಷ್ಯದಾದಿಯ ರೂಪವನ್ನು ಅವನೆದುರಿಗೆ ಧರಿಸಿ ನಿಂತಳು.

೮೩. ತನ್ನ ಭೂದೇವಿಯ ರೂಪವನ್ನು ಬಿಟ್ಟು ಹಿಂದೆ ನರಕನನ್ನು ಯಾವ ರೂಪದಿಂದ ಸಲಹಿದಳೋ ಆ ಕಾತ್ಯಾಯನಿಯ (ಅರ್ಧಮುದುಕಿಯ) ರೂಪದಿಂದಲೇ ಅವನೆದುರಿಗೆ ಪ್ರಕಟಳಾದಳು.

ಅಥ ದೃಷ್ಟ್ವೈವ ನರಕೋ ಧಾತ್ರೀಂ ಕಾತ್ಯಾಯನೀಂ ತದಾ ।
ಪಪ್ರಚ್ಛ ಪೂರ್ವವೃತ್ತಾಂತಂ ಯದ್ವೃತ್ತಂ ನೃಪಮಂದಿರೇ ॥ ೮೪ ॥

ಸಾ ತಥಾ ಕಥಯಾಮಾಸ ಯಥಾ ಸ ಪ್ರತಿಪಾಲಿತಃ ।
ಯದ್ವೃತ್ತಂ ಪೂರ್ವಜೋ ಗೇಹೇ ನೃಪಸ್ಯ ಜನಕಸ್ಯ ತು ॥ ೮೫ ॥

ಜಾತಸಂಪ್ರತ್ಯಯಸ್ತತ್ರ ನರಕಃ ಸಮುಪಪದ್ಯತ ।
ಪೃಥಿವೀ ಚ ಪುನರ್ದೇವೀರೂಪಂ ಸ್ವಂ ಜಗೃಹೇ ತದಾ ॥ ೮೬ ॥

ಅಥ ಸಸ್ಮಾರ ಪೃಥಿವೀ ಜಗನ್ನಾಥಂ ಹರಿಂ ಪ್ರಭುಂ ।
ಸಮಯೇ ಪೂರ್ವವಿಹಿತೇ ಪ್ರಣಮ್ಯ ಶಿರಸಾ ಮುಹುಃ ॥ ೮೭ ॥

ಸ್ಮೃತಮಾತ್ರಸ್ತದಾ ಕ್ಷಿತ್ಯಾ ಮಾಧವೋ ಗರುಡಧ್ವಜಃ ।
ಪ್ರಸನ್ನೋ ಜಗತಾಂ ನಾಥಃ ಪ್ರತ್ಯಕ್ಷತ್ವಂ ಗತಸ್ತದಾ ॥ ೮೮ ॥

---

೮೪. ಆಗ ನರಕನು ಮುದುಕಿಯಾದ ದಾದಿರೂಪವನ್ನು ನೋಡಿ ಮುಂಚೆ ರಾಜನ ಅರಮನೆಯಲ್ಲಿ ಹಿಂದೆ ಏನು ನಡೆಯಿತೆಂಬುವನ್ನು ಕುರಿತು ಭೂದೇವಿಯನ್ನು ಪ್ರಶ್ನಿಸಿದನು.

೮೫. ಆಗ ಭೂದೇವಿಯು ತಾನು ನರಕನನ್ನು ಸಲಹಿದುದನ್ನೂ, ಜನಕನ ಅರಮನೆಯಲ್ಲಿ ನಡೆದ ಮಿಕ್ಕ ವೃತ್ತಾಂತವೆಲ್ಲವನ್ನೂ ಅವನಿಗೆ ಹೇಳಿದಳು.

೮೬. ಆಗ ನರಕನು ಭೂದೇವಿಯು ಹೇಳಿದುದರಲ್ಲಿ ನಂಬಿಕೆಯುಳ್ಳವನಾದನು. ಭೂದೇವಿಯೂ ಸಹ ಮೊದಲಿನ ರೂಪವನ್ನು ಸ್ವೀಕರಿಸಿದಳು.

೮೭. ಅನಂತರ ಭೂದೇವಿಯು ಹಿಂದಿನ ನಿಬಂಧನೆಯಂತೆ ಜಗನ್ನಾಥನಾದ ಹರಿಯನ್ನು ಶಿರಸ್ಸಿನಿಂದ ನಮಿಸಿ ಸ್ಮರಿಸಿದಳು.

೮೮. ಭೂದೇವಿಯು ಸ್ಮರಿಸಿದೊಡನೆಯೇ ಜಗದೊಡೆಯನೂ, ಗರುಡಧ್ವಜನೂ ಆದ ಮಾಧವನು ಪ್ರಸನ್ನನಾಗಿ ಅವಳೆದುರಿಗೆ ಪ್ರತ್ಯಕ್ಷನಾದನು.

ತಂ ದೃಷ್ಟ್ವಾ ಪೃಥಿವೀ ದೇವೀ ದೇವಂ ಗರುಡವಾಹನಂ ।
ನೀಲೋತ್ಪಲದಲಶ್ಯಾಮಂ ಶಂಖಚಕ್ರಗದಾಧರಂ ॥ ೮೯ ॥

ಪೀತಾಂಬರಂ ಜಗನ್ನಾಥಂ ಶ್ರೀವತ್ಸೋರಸ್ಕಮವ್ಯಯಂ ।
ಪ್ರಣನಾಮ ಮಹಾಭಕ್ತ್ಯಾ ಪಸ್ಪರ್ಶ ಶಿರಸಾ ಮಹೀಂ ॥ ೯೦ ॥

ಪರಮೇಶ ಜಗನ್ನಾಥ ಜಗತ್ಕಾರಣಕಾರಣ ।
ಪ್ರಸೀದೇತಿ ವದಂಶ್ಚಾಪಿ ತದಾ ಪ್ರೋವಾಚ ಜಗತ್ಪ್ರಸೂಃ ॥ ೯೧ ॥

ನರಕಸ್ತು ಹರಿಂ ದೃಷ್ಟ್ವಾ ನಿಮೀಲ್ಯನಯನದ್ವಯಂ ।
ತತ್ತೇಜಸಾಽಭಿಭೂತಸ್ಸ ತದಾ ಭೂಮಾವಪಾವಿಶತ್ ॥ ೯೨ ॥

ಉಪವಿಷ್ಟೇ ತದಾ ದೇವೀ ತನಯೇ ನರಕಾಭ್ವಯೇ ।
ಪ್ರಸಾದಯಾಮಾಸ ತದಾ ಪುತ್ರಾರ್ಥೇ ವರವರ್ಣಿನೀ ॥ ೯೩ ॥

ಪ್ರಸಾದ್ಯಮಾನೋ ಧರಯಾ ಹರಿರ್ನಾರಾಯಣೋಽವ್ಯಯಃ ।
ಶಂಖಾಗ್ರೇಣ ತದಾ ಪುತ್ರಂ ಪಸ್ಪರ್ಶ ನರಕಾಹ್ವಯಂ ॥ ೯೪ ॥

೮೯-೯೦. ಬಳಿಕ ವಿಷ್ಣುವು ಗರುಡನನ್ನೇರಿ ಅಲ್ಲಿಗೆ ಬಂದು ಭೂದೇವಿಗೆ ಪ್ರತ್ಯಕ್ಷನಾದನು. ಆ ವಿಷ್ಣುವು ಕನ್ನೈದಿಲೆಯಂತೆ ನೀಲವಾದ ಶರೀರಕಾಂತಿ, ಕೈಗಳಲ್ಲಿ ಶಂಖ, ಚಕ್ರ, ಗದೆ, ಎದೆಯಲ್ಲಿ ಶ್ರೀವತ್ಸವೆಂಬ ಚಿಹ್ನೆ, ಇವುಗಳಿಂದ ಒಪ್ಪುತ್ತ, ಪೀತಾಂಬರಧಾರಿಯಾಗಿ ಅವಳಿಗೆ ಗೋಚರವಾಗಲು ಭೂದೇವಿಯು ಅವನನ್ನು ಬಹು ಭಕ್ತಿಯಿಂದ ಭೂಮಿಯನ್ನು ಮುಟ್ಟಿ ನಮಸ್ಕರಿಸಿದಳು.

೯೧. ಓ ಪರಮೇಶ್ವರನೇ! ಜಗದೊಡೆಯನೇ! ನೀನು ಜಗತ್ತಿಗೆ ಕಾರಣನಾದ ಬ್ರಹ್ಮನಿಗೂ ಕಾರಣನಾದವನು, ಪ್ರಸನ್ನನಾಗು ಎಂದು ಭೂದೇವಿಯು ಸ್ತುತಿಸಿದಳು.

೯೨. ಆಗ ನರಕನು ಪ್ರತ್ಯಕ್ಷನಾದ ಹರಿಯನ್ನು ನೋಡಿ ಅವನ ತೇಜಸ್ಸಿನಿಂದ ಭ್ರಾಂತನಾಗಿ ಕಣ್ಣುಗಳನ್ನು ಮುಚ್ಚಿಕೊಂಡು ಭೂಮಿಯಲ್ಲಿ ಕುಳಿತನು.

೯೩. ಹೀಗೆ ತನ್ನ ಪುತ್ರನಾದ ನರಕನು ಭೂಮಿಯಲ್ಲಿ ಕುಳಿತುಕೊಳ್ಳಲು ಭೂದೇವಿಯು ತನ್ನ ಪುತ್ರನಿಗಾಗಿ ಹರಿಯನ್ನು ಪ್ರಸನ್ನವಾಗುವಂತೆ ಸ್ತುತಿಸಿದಳು.

೯೪. ಭೂದೇವಿಯಿಂದ ಸ್ತುತಿಸಲ್ಪಟ್ಟು, ನಾಶರಹಿತನಾದ ನಾರಾಯಣನು ತನ್ನ ಶಂಖದ ಅಗ್ರಭಾಗದಿಂದ ಪುತ್ರನಾದ ನರಕನನ್ನು ಸ್ಪರ್ಶಿಸಿದನು (ನೇವರಿಸಿದನು)

ಸ್ಪೃಷ್ಟಮಾತ್ರೋಽಥ ಹರಿಣಾ ನರಕೋಽಭೂತ್ಸುದರ್ಶನಃ ।
ಪ್ರಹೃಷ್ಟಶ್ಚೋತ್ಸಾಹವಾಂಶ್ಚೈವ ಬಲವಾನ್ ಸಮುಪದ್ಯತ ॥ ೯೫ ॥

ತತ ಉತ್ಥಾಯ ನರಕೋ ಹರಿಂ ನಾರಾಯಣಂ ಪ್ರಭುಂ ।
ಭಕ್ತ್ಯಾ ಪ್ರಣಮ್ಯ ಗೋವಿಂದಂ ಸಾಷ್ಟಾಂಗಂ ಚ ಮುಹುರ್ಮುಹುಃ ॥ ೯೬ ॥

ನನಾಮ ಪೃಥಿವೀಂ ವೀರೋ ಜಾತಸಂಪ್ರತ್ಯಯಸ್ತದಾ ।
ಪ್ರಣಮ್ಯ ಚ ಮಹಾಭಾಗಾಂ ಭಕ್ತ್ಯಾ ಪರಮಯಾ ಯುತಃ ॥ ೯೭ ॥

ಪ್ರಾಂಜಲಿಃ ಪುರತಸ್ತಸ್ಥೌ ನೋಕ್ತ್ವಾ ಕಿಂಚನ ವೈ ಭಿಯಾ ।
ತತಸ್ತದರ್ಥೇ ಪೃಥಿವೀ ಮಾಧವಂ ಸಮಯಾಚತ ॥ ೯೮ ॥

ಪ್ರಸೀದ ದೇವದೇವೇಶ ಸಮಯಂ ಪ್ರತಿಪಾಲಯ ।
ತ್ವಯೋಽಯಂ ತನಯೋ ದತ್ತೋ ಮಮ ಸರ್ವಂ ಜಗತ್ಪತೇ ॥ ೯೯ ॥

---

೯೫. ಹರಿಯು ಸ್ಪರ್ಶಿಸಿದೊಡನೆಯೇ ನರಕನು ದಿವ್ಯದೃಷ್ಟಿಯುಳ್ಳವನೂ ತುಂಬಾ ಹರ್ಷವುಳ್ಳವನೂ, ಉತ್ಸಾಹವುಳ್ಳವನೂ, ಆಗಿ ವಿಷ್ಣುವನ್ನು ನೋಡಲು ಸಮರ್ಥನಾದನು.

೯೬. ಅನಂತರ ಎದ್ದು ನರಕನು ಪ್ರಭುವಾದ ನಾರಾಯಣನನ್ನು ಭಕ್ತಿಯಿಂದ ಪುನಃಪುನಃ ನಮಸ್ಕರಿಸಿ ಭೂದೇವಿಯ ಮಾತಿನಲ್ಲಿ ನಂಬಿಕೆಯುಳ್ಳವನಾಗಿ ಅವಳನ್ನೂ ನಮಸ್ಕರಿಸಿದನು.

೯೭. ಭಾಗ್ಯವಂತಳಾದ ಭೂದೇವಿಯನ್ನು ಅತ್ಯಂತ ಭಕ್ತಿಯಿಂದ ನಮಸ್ಕರಿಸಿ ಕೈಗಳನ್ನು ಮುಗಿದುಕೊಂಡು ಭಯದಿಂದ ಏನೂ ಹೇಳಲಾರದೆ ಅವರ ಎದುರಿನಲ್ಲಿ ಸುಮ್ಮನೆ ನಿಂತನು.

೯೮. ಅನಂತರ ಭೂದೇವಿಯು ಎಲೈ ದೇವದೇವನಾದ ನಾರಾಯಣನೇ ! ನಿನ್ನ ಮಗನಾದ ಈ ನರಕನನ್ನು ಅನುಗ್ರಹಿಸು, ಹಿಂದಿನ ನಿಯಮವನ್ನು ನಡೆಸಿಕೊಡು ಎಂದಳು.

೯೯-೧೦೦. ನೀನೇ ನನಗೆ ಈ ಪುತ್ರನನ್ನು ಅನುಗ್ರಹಿಸಿರುವೆ. ಓ ಜಗದೊಡೆಯನೇ ! ಈ ಪುತ್ರನಿಗಾಗಿ ಹಿಂದೆ ನೀನು ಮಾಡಿದ ಪ್ರತಿಜ್ಞೆಯನ್ನು ನಡೆಯಿಸಿಕೊಡು.

ನಿತದರ್ಥೇ ಪ್ರತಿಜ್ಞಾತಂ ಯದ್ದತ್ತಂ ಪ್ರತಿಪಾಲಯ ॥ ೧೦೦ ॥

॥ ಭಗವಾನುವಾಚ ॥

ಭವತೀ ಯತ್ಸುಪುತ್ರಾರ್ಥೇ ಮಾಮುಯಾಚತ ಯತ್ಪುರಾ ।
ತತ್ಸರ್ವಂ ತವ ದತ್ತಂ ವೈ ರಾಜ್ಯಂ ದತ್ತಂ ಚ ತತ್ಸುತೇ ॥ ೧೦೧ ॥

ಇತ್ಯುಕ್ತ್ವಾ ಭಗವಾನ್ವಿಷ್ಣುರಾದಾಯ ನರಕಾಪ್ವಯಂ ।
ಸಾರ್ಧಂ ಪೃಥಿವ್ಯಾ ಗಂಗಾಯಾಂ ಮುಮಜ್ಜ ಜಗತಾಂ ಪ್ರಭುಃ ॥ ೧೦೨ ॥

ನಿಮಜ್ಯ ಕ್ಷಣಮಾತ್ರೇಣ ಪ್ರಾಗ್ಜ್ಯೋತಿಷಪುರಂ ಗತಃ ।
ಮಧ್ಯಗಂ ಕಾಮರೂಪಸ್ಯ ಕಾಮಾಖ್ಯಾ ಯತ್ರ ದೇವತಾ ॥ ೧೦೩ ॥

ಸ ಚ ದೇಶಃ ಸ್ವರಾಜ್ಯಾರ್ಥೇ ಪೂರ್ವಂ ಗುಪ್ತಂ ಚ ಶಂಭುನಾ ।
ಕಿರಾತೈರ್ಬಲಿಭಿಃ ಕ್ರೂರೈರಜ್ಞೈರಪಿಚ ವಾಸಿತಃ ॥ ೧೦೪ ॥

---

೧೦೧. ಭಗವಂತನು ಹೇಳಿದನು:—ನಿನ್ನ ಮಗನಿಗಾಗಿ ಏನನ್ನು ನೀನು ಕೇಳಿದೆಯೋ ಅದೆಲ್ಲವನ್ನು ಕೊಟ್ಟಿರುವೆನು. ನಿನ್ನ ಮಗನಿಗೆ ರಾಜ್ಯವನ್ನೂ ಕೊಟ್ಟಿರುವೆನು.

೧೦೨. ಹೀಗೆ ಹೇಳಿ ಭಗವಂತನಾದ ವಿಷ್ಣುವು ನರಕಕುಮಾರನನ್ನು ಕರೆದು ಕೊಂಡು ಭೂದೇವಿಯೊಡನೆ ಗಂಗೆಯಲ್ಲಿ ಮುಳುಗಿದನು.

೧೦೩. ಮುಳುಗಿ ಸ್ವಲ್ಪಹೊತ್ತಿನಲ್ಲಿಯೇ ಪ್ರಾಗ್ಜ್ಯೋತಿಪುರಕ್ಕೆ ಹೋದನು. ಆ ಪುರವು ಕಾಮರೂಪದೇಶದಲ್ಲಿರುವುದು. ಅಲ್ಲಿ " ಕಾಮಾ " ಎಂಬ ದೇವತೆಯು ನೆಲಸಿರುವಳು.

೧೦೪. ಆ ದೇಶವನ್ನು ಹಿಂದೆ ಶಂಕರನು ತನ್ನ ರಾಜ್ಯಕ್ಕಾಗಿ ರಕ್ಷಿಸಿದ್ದನು. ಅಲ್ಲಿ ಬಲಶಾಲಿಗಳೂ, ಕ್ರೂರರೂ, ತಿಳಿವಳಿಕೆಯಿಲ್ಲದವರೂ, ವೀರರೂ ಆದ ಕಿರಾತರು ವಾಸಿಸುತ್ತಿದ್ದರು.

ರುಕ್ಮಸ್ತಂಭನಿಭಾಂಸ್ತತ್ರ ಕಿರಾತಾನ್ ಜ್ಞಾನವರ್ಜಿತಾನ್ ।
ಅನರ್ಥಮುಂಡಿತಾನ್ಮದ್ಯಮಾಂಸಾಶನೈಕತತ್ಪರಾನ್ ॥ ೧೦೫ ॥

ದದರ್ಶ ವಿಷ್ಣುಃ ಕುಪಿತಾನ್ವಿಷ್ಣುಂ ದೃಷ್ಟ್ವಾ ದ್ವಿಜರ್ಷಭಾಃ ।
ತೇಷಾಮಧಿಪತಿಸ್ತತ್ರ ಘಾಟಕೋ ನಾಮ ವೀರ್ಯವಾನ್ ॥ ೧೦೬ ॥

ರುಕ್ಮಸ್ತಂಭನಿಭಸ್ತುಂಗಃ ಪ್ರದೀಪ್ತ ಇವ ಪಾವಕಃ ।
ಸ ಕ್ರೋಧಾಚ್ಚ ತುರಂಗೇಣ ಬಲೇನ ಮಹತಾ ಯುತಃ ॥ ೧೦೭ ॥

ಆಸಸಾದ ಜಗನ್ನಾಥಂ ನರಕಂ ಚ ಮಹಾಬಲಂ ।
ಆಸಾದ್ಯ ಶರವರ್ಷೇಣ ವವರ್ಷ ಪ್ರಭುಮವ್ಯಯಂ ॥ ೧೦೮ ॥

ಕಿರಾತೈಃ ಸಹಿತೋ ರಾಜಾ ಘಟಕಾಖ್ಯಃ ಕಿರಾತರಾಟ್ ।
ಮಾಧವೋಽಪಿ ತದಾ ಪುತ್ರಂ ನರಕಂ ವೀರ್ಯವತ್ತರಂ ॥ ೧೦೯ ॥

---

೧೦೫. ಅವರು ಶುದ್ಧ ಮೂಢರಾಗಿಯೂ ಅವಿವೇಕಿಗಳಾಗಿಯೂ ಇದ್ದರು. ಮನಸ್ಸು ಬಂದಂತೆ ತಲೆಯ ಕೂದಲನ್ನು ಬೋಳಿಸಿಕೊಂಡು ಯಾವಾಗಲೂ ಮದ್ಯ ಮಾಂಸಗಳನ್ನೇ ತಿನ್ನುತ್ತಾ ಇದ್ದ ಆ ಕಿರಾತರು ಕೋಪದಿಂದ ವಿಷ್ಣುವನ್ನು ನೋಡಿದರು. ವಿಷ್ಣುವೂ ಸಹ ಅವರನ್ನು ನೋಡಿದನು.

೧೦೬. ಆ ಕಿರಾತರೆಲ್ಲರಿಗೂ ನಾಯಕನು "ಘಾಟಕ" ನೆಂಬ ವೀರನು. ಅವನು ಸ್ತಂಭದಂತೆ ಉನ್ನತಾಕಾರವಾಗಿದ್ದನು. ಉರಿಯುತ್ತಿರುವ ಅಗ್ನಿಯಂತೆ ದೇಹಕಾಂತಿಯಿಂದ ಒಪ್ಪುತ್ತಿದ್ದನು.

೧೦೭-೧೦೮. ಆ ಘಾಟಕನು ಕೋಪದಿಂದ ದೊಡ್ಡದಾದ ಸೈನ್ಯಸಮೂಹದೊಡನೆ ವಿಷ್ಣುವನ್ನೂ, ಬಲಶಾಲಿಯಾದ ನರಕನನ್ನೂ ಎದುರಿಸಿಬಂದು ವಿಷ್ಣುವಿನ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

೧೦೯. ಆಗ ವಿಷ್ಣುವು ಬಲಶಾಲಿಯಾದ ತನ್ನ ಪುತ್ರ ನರಕನನ್ನು ಆ ಕಿರಾತರೊಡನೆ ಯುದ್ಧಮಾಡಲು ಕಳುಹಿಸಿದನು.

ಪ್ರೇಷಯಾಮಾಸಯುದ್ಧಾಯ ಕಿರಾತನೃಪತೇಸ್ತದಾ ।
ನರಕೋ ಧನುರಾದಾಯ ಸಹ ತೈರ್ಬಲವತ್ತ್ರೈಃ ॥ ೧೧೦ ॥

ಯುಯುಧೇ ಸುಚಿರಂ ತತ್ರ ಶಸ್ತ್ರಾಸ್ತ್ರೈರ್ಬಹುಧೇರಿತೈಃ ।
ತತೋಽಸೌ ಭಲ್ಲಮಾದಾಯ ಯೋಜಯಿತ್ವಾ ಧನುರ್ಗುಣೈಃ ॥ ೧೧೧ ॥

ಶಿರಃ ಕಿರಾತರಾಜಸ್ಯ ಚಿಚ್ಛೇದ ನರಕೋ ಬಲೀ ।
ಮುಖ್ಯಾನ್ಮುಖ್ಯಾನ್ ಕಿರಾತಾಂಶ್ಚ ಬಹೂನ್ ಸೇನಾಧಿಪಾಂ ಸ್ತಥಾ ॥೧೧೨॥

ಜಘಾನ ಕುಪಿತೋ ವೀರಃ ಕೇಸರೀವ ಮತಂಗಜಾನ್ ।
ಹತೇಽಥ ನೃಪತೌ ಕೇಚಿತ್ಪಲಾಯನಪರಾಯಣಾಃ ॥ ೧೧೩ ॥

ಕಿರಾತಾಃ ಕೇಚನ ಪುನರ್ನರಕಂ ಶರಣಂ ಗತಾಃ ।
ನಿಹತ್ಯ ಯುಧ್ಯಮಾನಾಂಸ್ತು ಸರಂಕ್ಷ್ಯ ಶರಣಾಗತಾನ್ ॥ ೧೧೪ ॥

---

೧೧೦. ನರಕನು ಧನುಸ್ಸನ್ನು ತೆಗೆದುಕೊಂಡು ಬಲಶಾಲಿಗಳಾದ ಆ ಕಿರಾತ ರೊಡನೆ ಅನೇಕ ಆಯುಧ ಮತ್ತು ಅಸ್ತ್ರ (ಬಾಣ) ಗಳಿಂದ ಬಹಳಕಾಲ ಯುದ್ಧ ಮಾಡಿದನು.

೧೧೧. ಅನಂತರ ಬಲಿಷ್ಠನಾದ ಆ ನರಕನು ಭಲ್ಲಿಯನ್ನು ತೆಗೆದುಕೊಂಡು ಧನುಸ್ಸಿಗೆ ಸೇರಿಸಿ ಅದರಿಂದ ಕಿರಾತರಾಜನಾದ ಘಟಕನ ಶಿರಸ್ಸನ್ನು ಕತ್ತರಿಸಿದನು.

೧೧೨. ಮತ್ತು ಮುಖ್ಯರಾದ ಕಿರಾತರೆಲ್ಲರನ್ನೂ ಸೇನಾಧಿಪತಿಗಳನ್ನೂ ಸಹ, ಸಿಂಹವು ಆನೆಯನ್ನು ಕೊಲ್ಲುವಂತೆ ವೀರನಾದ ಆ ನರಕನು ಸಂಹರಿಸಿದನು.

೧೧೩. ಕಿರಾತರಾಜನು ಮೃತನಾದಮೇಲೆ ಉಳಿದ ಕೆಲವು ಕಿರಾತರು ಓಡಿ ಹೋದರು. ಕೆಲವರು ನರಕನಿಗೆ ಶರಣಾಗತರಾದರು.

೧೧೪. ಯುದ್ಧಕ್ಕೆ ಬಂದವರನ್ನು ಸಂಹರಿಸಿ ಶರಣಾಗತರನ್ನು ರಕ್ಷಿಸಿ ನರಕನು ತನ್ನ ತಂದೆಯಾದ ವಿಷ್ಣುವಿನ ಬಳಿಗೆ ಬಂದು ನಮಸ್ಕರಿಸಿ ಹೀಗೆ ಹೇಳಿದನು.

ನರಕಃ ಪಿತರಂ ಗತ್ವಾ ಪ್ರಣಮ್ಯಾಥ ನ್ಯವೇದಯತ್ ।
ಹತಸ್ತಾತಸ್ತ್ವಯಾ ಘಾಟಕೋ ಮಯಾ ॥ ೧೧೫ ॥

ಸೇನಾಧಿಪಾಂಶ್ಚ ತಸ್ಯಾನ್ಯಾನ್ ಕಿಮನ್ಯತ್ಕರವಾಣ್ಯಹಂ ।

॥ ಶ್ರೀ ಭಗವಾನುವಾಚ ॥

ಕಿರಾತಾನ್ ಜಹಿ ಯಾವತ್ತ್ವಂ ದೇವೀಂ ದಿಕ್ಕರವಾಸಿನೀಂ ॥ ೧೧೬ ॥

ಪಲಾಯಮಾನಾನ್ ವಿದ್ರಾವ್ಯ ಪಾಲಯನ್ ಶರಣಾಗತಾನ್ ।

॥ ಮಾರ್ಕಂಡೇಯ ಉವಾಚ ॥

ತತಃ ಸ ನರಕೋ ವೀರಃ ಸಮಾರುಹ್ಯ ಸಿತಂ ಗಜಂ ॥ ೧೧೭ ॥

ಚತುರ್ದಂತಂ ಮಹಾಕಾಯಂ ಕಿರಾತಾಧಿಪವಾಹನಂ ।
ಐರಾವತಸಮಂ ವೀರ್ಯೇ ವೇಗೇನ ಗರುಡೋಪಮಂ ॥ ೧೧೮ ॥

---

೧೧೫. ಓ ತಂದೆಯೇ! ಕಿರಾತರಾಜನಾದ ಘಾಟಕನು ನನ್ನಿಂದ ಹತನಾದನು. ಮಿಕ್ಕ ಅವನ ಸೇನಾಪತಿಗಳನ್ನೂ ಸಂಹರಿಸಿರುವೆನು. ಮುಂದೆ ಏನು ಮಾಡಬೇಕೆಂಬುದನ್ನು ತಿಳಿಸು ಎಂದನು.

೧೧೬. ಭಗವಂತನು ಹೇಳಿದನು:—ದಿಕ್ಕರವಾಸಿನೀದೇವಿಯು ನೆಲಸಿರುವವರೆಗೂ ಇರುವ ಕಿರಾತರನ್ನು ಸಂಹರಿಸು. ಪಲಾಯನ ಮಾಡುವವರನ್ನು ಓಡಿಸಿ ಶರಣಾಗತರನ್ನು ಪಾಲಿಸು.

೧೧೭-೧೧೮. ಮಾರ್ಕಂಡೇಯನು ಹೇಳಿದನು:—ಅನಂತರ ವೀರನಾದ ಆ ನರಕನು ದೊಡ್ಡಶರೀರವುಳ್ಳ ಮತ್ತು ಐರಾವತದಂತೆ ಪರಾಕ್ರಮವುಳ್ಳದೂ, ಗರುಡನಂತೆ ವೇಗಶಾಲಿಯಾದುದೂ, ನಾಲ್ಕುದಂತವುಳ್ಳದೂ ಆದ ಆ ಕಿರಾತನ ವಾಹನವಾದ ಬಿಳಿಯ ಆನೆಯನ್ನೇರಿ ದಿಕ್ಕರವಾಸಿನಿದೇವಿಯು ಇರುವವರೆಗೂ ಕಿರಾತರನ್ನು ಆ ಪ್ರದೇಶದಿಂದ ಓಡಿಸಿದನು.

ಕಿರಾತಾನ್ ದ್ರಾವಯಾಮಾಸ ಯಾವದ್ದಿಕ್ಕರವಾಸಿನೀಂ ।
ಪಿತರಂ ಪುನರಾಗಮ್ಯ ವಚನಂ ಚೇದಮಬ್ರವೀತ್ ॥ ೧೧೯ ॥

ವಿದ್ರಾವಿತಾಃ ಕಿರಾತಸ್ತೇ ಸಾಗರಾಂತಂ ಸಮಾಶ್ರಿತಾಃ ।
ಹತಶ್ಚ ಘಟಕಾಖ್ಯೋ ಹಿ ಕಿರಾತಾಧಿಪತಿರ್ಮಹಾನ್ ॥ ೧೨೦ ॥

ವೇಗಿನಂ ರಥಮಾರುಹ್ಯ ಐರಾವತಸಮಂ ಗಜೈಃ ।
ಯದನ್ಯತ್ಕರಣೀಯಂ ಮೇ ತದಾಜ್ಞಾಪಯ ಸಂಪ್ರತಿ ॥ ೧೨೧ ॥

॥ ಭಗವಾನುವಾಚ ॥

ಕರತೋಯಾ ಸದಾ ಗಂಗಾ ಪೂರ್ವಭಾಗಾವಧಿಶ್ರಯಾ ।
ಯಾವಲ್ಲಲಿತಕಾಂತಾಸ್ತಿ ತಾವದೇವ ಪುರಂ ತವ ॥ ೧೨೨ ॥

ಅತ್ರ ದೇವೀ ಮಹಾಮಾಯಾ ಯೋಗನಿದ್ರಾ ಜಗತ್ಪ್ರಸೂಃ ।
ಕಾಮಾಖ್ಯಾ ರೂಪಮಾಸ್ಥಾಯ ಸದಾ ತಿಷ್ಠತಿ ಶೋಭನಾ ॥ ೧೨೩ ॥

೧೧೯—೧೨೧. ಅನಂತರ ಆ ನರಕನು ತಂದೆಯಾದ ನಾರಾಯಣನ ಬಳಿಗೆ ಬಂದು ಓ ತಂದೆಯೇ! ಸಮುದ್ರದ ಕೊನೆಯವರೆಗೂ ಕಿರಾತರನ್ನು ಓಡಿಸಿರುವೆನು. ಘಾಟಕನೆಂಬ ವೀರನಾದ ಕಿರಾತರಾಜನನ್ನು ಸಂಹರಿಸಿಯೂ ಆಯಿತು. ಐರಾವತದಂತೆ ಪರಾಕ್ರಮಶಾಲಿಯೂ ವೇಗಶಾಲಿಯೂ ಆದ ಈ ಆನೆಯನ್ನೇರಿ ಎಲ್ಲ ಕಿರಾತರನ್ನೂ ಓಡಿಸಿಯಾಯಿತು. ನಾನು ಇನ್ನೇನು ಮಾಡಬೇಕೆಂಬುದನ್ನು ತಿಳಿಸಬೇಕು ಎಂದು ಕೇಳಿದನು.

೧೨೨. ಭಗವಂತನು ಹೇಳಿದನು:—ಕರತೋಯಾನದಿಯೂ, ಗಂಗಾನದಿಯೂ ಇರುವ ಪೂರ್ವದಿಕ್ಕಿನ ಕೊನೆಯವರೆಗೂ ಮತ್ತು ಲಲಿತಕಾಂತಾದೇವಿಯು ಎಲ್ಲಿರುವಳೋ ಅಲ್ಲಿಯವರೆಗೂ ಇರುವ ಈ ನಗರವು ನಿನ್ನ ರಾಜಧಾನಿಯು.

೧೨೩. ಈ ನಗರದಲ್ಲಿ ಆದಿಮಾಯೆಯೂ, ಯೋಗನಿದ್ರೆಯೂ, ಜಗನ್ಮಾಯೆಯೂ ಆದ ದೇವಿಯು "ಕಾಮಾ" ಎಂಬ ಹೆಸರುಳ್ಳ ರೂಪದಿಂದ ಇಲ್ಲಿ ಯಾವಾಗಲೂ ನೆಲಸಿರುವಳು.

ಅತ್ರಾಸ್ತಿ ನದರಾಜೋಽಯಂ ಲೌಹಿತ್ಯೋ ಬ್ರಹ್ಮಣಃ ಸುತಃ ।
ಅತ್ರೈವ ದಶ ದಿಕ್ಪಾಲಾಃ ಸ್ವೇ ಸ್ವೇ ಪೀಠೇ ವ್ಯವಸ್ಥಿತಾಃ ॥ ೧೨೪ ॥

ಅತ್ರ ಸ್ವಯಂ ಮಹಾದೇವೋ ಬ್ರಹ್ಮಾ ಚಾಯಂ ವ್ಯವಸ್ಥಿತಃ ।
ಚಂದ್ರಃ ಸೂರ್ಯಶ್ಚ ಸತತಂ ವಸತೋಽತ್ರೈವ ಪುತ್ರಕ ।
ಸರ್ವೇ ಕ್ರೀಡಾರ್ಥಮಾಯಾತಾ ರಹಸ್ಯಂದೇಶಮುತ್ತಮಂ ॥ ೧೨೫ ॥

ಅತ್ರ ಶ್ರೀರ್ವಸತೇ ಭದ್ರಾ ಭೋಗ್ಯಮತ್ರ ತಥಾ ಬಹು ।
ಅಸ್ಯ ಮಧ್ಯೇ ಸ್ಥಿತೋ ಬ್ರಹ್ಮಾ ಪ್ರಾಜ್ಞಿಕ್ಷೇತ್ರಂ ಸಸರ್ಜ ಹ ॥ ೧೨೬ ॥

ತತಃ ಪ್ರಾಗ್ಜ್ಯೋತಿಷಾಖ್ಯೇಯಂ ಪುರೀ ಶಕ್ರಪುರೀಸಮಾ ।
ಅತ್ರ ತ್ವಂ ವಸ ಭದ್ರಂ ತೇ ಹ್ಯಭಿಷಿಕ್ತೋ ಮಯಾ ಸ್ವಯಂ ॥ ೧೨೭ ॥

ಕೃತದಾರಃ ಸಹಾಮಾತ್ಯೈ ರಾಜಾ ಭೂತ್ವಾ ಮಹಾಬಲಃ ।

॥ ಮಾರ್ಕಂಡೇಯ ಉವಾಚ ॥

ಏವಮುಕ್ತ್ವಾ ಸ್ವಯಂ ವಿಷ್ಣುಃ ಶಂಭೋರನುಮತೇ ತದಾ ॥ ೧೨೮ ॥

---

೧೨೪. ಇಲ್ಲಿ ಬ್ರಹ್ಮಪುತ್ರನಾದ ಲೌಹಿತ್ಯವೆಂಬ ನದಿಯು ಹರಿಯುತ್ತಿರುವುದು. ಇಲ್ಲಿಯೇ ಹತ್ತುಜನ ದಿಕ್ಪಾಲಕರು ತಮ್ಮತಮ್ಮ ಸ್ಥಾನಗಳಲ್ಲಿ ನೆಲಸಿರುವರು.

೧೨೫. ಎಲೈ ಪುತ್ರನೇ ! ಅಲ್ಲದೇ ಈ ನಗರದಲ್ಲಿ ಮಹಾದೇವನೂ, ಬ್ರಹ್ಮನೂ, ನಾನೂ ನೆಲಸಿರುವೆವು. ಚಂದ್ರಸೂರ್ಯರೂ ನೆಲಸಿರುವರು.

೧೨೬. ಉತ್ತಮವಾದ ಈ ಏಕಾಂತಸ್ಥಳಕ್ಕೆ ನಾವೆಲ್ಲರೂ ವಿಹರಿಸಲು ಬಂದಿವೆವು. ಇಲ್ಲಿ ಸ್ಥಿರವಾದ ಲಕ್ಷ್ಮಿಯೂ, ಸುಖವನ್ನು ಕೊಡುವ ವಸ್ತುಗಳೂ ಬೇಕಾದಷ್ಟಿರುವುವು.

೧೨೭. ಇಂದ್ರನ ಅಮರಾವತಿಯಂತಿರುವ ಈ ನಗರದಲ್ಲಿ ಹಿಂದೆ ಬ್ರಹ್ಮನು ನಕ್ಷತ್ರಗಳನ್ನು ಸೃಷ್ಟಿಸಿದನು. ಆದಕಾರಣ ಈ ನಗರಕ್ಕೆ "ಪ್ರಾಗ್ಜ್ಯೋತಿಷ" (ಮೊದಲು ನಕ್ಷತ್ರಗಳನ್ನು ಕಂಡುದುದು) ವೆಂದು ಹೆಸರಾಯಿತು.

೧೨೮. ಇಲ್ಲಿ ನಿನ್ನನ್ನು ರಾಜನನ್ನಾಗಿ ಪ್ರತಿಷ್ಠಿಸುವೆನು. ಇಲ್ಲಿ ಬಲಶಾಲಿಯಾದ ರಾಜನಾಗಿ ಮದುವೆಯನ್ನು ಮಾಡಿಕೊಂಡು ಮಂತ್ರಿಗಳೊಡನೆ ರಾಜ್ಯಭಾರವನ್ನು ಮಾಡುತ್ತಿರು, ನಿನಗೆ ಮಂಗಳವಾಗಲಿ.

ಸರ್ವಾನ್ಕಿರಾತಾನ್ ಪೂರ್ವಸ್ಯಾಂ ಸಾಗರಾಂತೇ ನ್ಯವೇಶಯತ್ ।
ಪೂರ್ವಂ ಲಲಿತಕಾಂತಾಯಾಃ ಸಮಾದಾಯಾವಧಿಂ ಪುನಃ ॥ ೧೨೯ ॥

ಯಾವತ್ಸಾಗರಪರ್ಯಂತಂ ಕಿರಾತಾಸ್ತಾವದಾವಸನ್ ।
ಪಶ್ಚಾಲ್ಲಲಿತಕಾಂತಾಯಾ ದೇಶಂ ಕೃತ್ವಾವಧಿಂ ಪುನಃ ॥ ೧೩೦ ॥

ಕರತೋಯಾಂ ನದೀಂ ಯಾವತ್ಕಾಮಾಖ್ಯಾನಿಲಯಂ ತು ತತ್ ।
ತಸ್ಮಾತ್ಕಿರಾತಾನುತ್ಸಾರ್ಯ ವೇದಶಾಸ್ತ್ರಾತಿಗಾನ್ಬಹೂನ್ ॥ ೧೩೧ ॥

ದ್ವಿಜಾತೀನ್ವಾಸಯಾಮಾಸ ತತ್ರ ವರ್ಣಾನ್ಸನಾತನಾನ್ ।
ವೇದಾಧ್ಯಯನದಾನಾನಿ ಸತತಂ ವರ್ತತೇ ಯಥಾ ॥ ೧೩೨ ॥

ತಥಾ ಚಕಾರ ಭಗವಾನ್ಮುನಿಭಿರ್ವಾಸಯನ್ವಿಭುಃ ।
ವೇದವಾದರತಾಃ ಸರ್ವೇ ದಾನಧರ್ಮಪರಾಯಣಾಃ ॥ ೧೩೩ ॥

---

೧೨೯. ಮಾರ್ಕಂಡೇಯನು ಹೇಳಿದನು:-ಹೀಗೆ ಹೇಳಿ ವಿಷ್ಣುವು ಶಂಕರನ ಅನುಮತಿಯಂತೆ ಎಲ್ಲಾ ಕಿರಾತರನ್ನೂ ಪೂರ್ವದಿಕ್ಕಿನ ಸಮುದ್ರದ ಕೊನೆಯಲ್ಲಿ ಇರಿಸಿದನು.

೧೩೦. ಪೂರ್ವದಿಕ್ಕಿನಲ್ಲಿ ಲಲಿತಕಾಂತಾದೇವಿಯು ಇರುವ ಪ್ರದೇಶದಿಂದ ಸಮುದ್ರದವರೆಗೂ ಕಿರಾತರು ನೆಲಸಿರುವರು.

೧೩೧. ಲಲಿತಕಾಂತಾದೇವಿಯು ಇರುವ ಸ್ಥಳದಿಂದ ಕರತೋಯಾನದಿಯು ಇರುವವರೆಗೂ ಇರುವ ಪ್ರದೇಶವು ಕಾಮಾದೇವಿಯು ನೆಲಸಿರುವ ಸ್ಥಳವು.

೧೩೨. ಆ ಸ್ಥಳದಿಂದ ವೇದಶಾಸ್ತ್ರಗಳ ನಿಯಮಗಳನ್ನು ಉಲ್ಲಂಘಿಸಿ ನಡೆಯುವ ಕಿರಾತರೆಲ್ಲರನ್ನೂ ಓಡಿಸಿ ಅಲ್ಲಿ ಹಿಂದಿನಿಂದಲೂ ನಡೆದುಬಂದ ಧರ್ಮಿಷ್ಠರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ನೆಲೆಗೊಳಿಸಿದನು.

೧೩೩. ಮತ್ತು ಭಗವಂತನು ಮುನಿಗಳನ್ನು ಅಲ್ಲಿ ವಾಸಿಸುವಂತೆ ಮಾಡಿ, ವೇದಾಧ್ಯಯನ, ದಾನಾದಿಸತ್ಕರ್ಮಗಳು ಅಲ್ಲಿ ಯಾವಾಗಲೂ ನಡೆಯುವಂತೆ ಮಾಡಿದನು.

ನ ಚಿರಾದಭವದ್ದೇಶಃ ಕಾಮರೂಪಾಹ್ವಯಸ್ತದಾ ।
ತತೋ ವಿದರ್ಭರಾಜಸ್ಯ ಪುತ್ರೀಂ ಮಾಯಾಹ್ವಯಾಂ ಹರಿಃ ॥ ೧೩೪ ॥

ಪುತ್ರಾರ್ಥೇ ವರಯಾಮಾಸ ನರಕಸ್ಯ ಸಮಾಂ ಗುಣೈಃ
ತಾಮುದ್ವಾಹ್ಯ ಹೃಷೀಕೇಶಸ್ತಸ್ಮಿನ್ಪುರವರೇ ಸ್ವಯಂ ॥ ೧೩೫ ॥

ತಯಾ ಸಮುಂ ಸ್ವತನಯಂ ರಾಜತ್ವೇನಾಭ್ಯಷೇಚಯತ್
ಸುಗುಪ್ತಾಂ ಚ ಪುರೀಂ ಚಕ್ರೇ ಗಿರಿದುರ್ಗೇಣ ಮಾಧವಃ ॥ ೧೩೬ ॥

ತದ್ದುರ್ಗಂ ಸರ್ವತೋ ಭದ್ರಂ ದೇವೈರಪಿ ದುರಾಸದಂ ।
ತತಃ ಕಿರಾತರಾಜಸ್ಯ ಚತುರ್ದಂತಾಃ ಸುದಂತಿನಃ ॥ ೧೩೭ ॥

ಪಂಚವಿಂಶತಿಸಾಹಸ್ರಾ ಮಹಾಮಾತ್ರಕುಥೈರ್ಯುತಾಃ ।
ಯಾನಿ ರತ್ನಾನ್ಯನೇಕಾನಿ ಸೈನ್ಯಾನಿ ವಿವಿಧಾನಿ ಚ ॥ ೧೩೮ ॥

---

೧೩೪. ಸ್ವಲ್ಪದಿವಸಗಳಲ್ಲಿಯೇ ಆ ಕಾಮರೂಪದೇಶದಲ್ಲಿ ವೇದಾಧ್ಯಯನದಲ್ಲಿ ಆಸಕ್ತರೂ, ದಾನಧರ್ಮಗಳಲ್ಲಿ ಪರಾಯಣರೂ ಆದ ಜನಗಳು ತುಂಬಿದ್ದರು.

೧೩೫. ಅನಂತರ ಹರಿಯು ವಿದರ್ಭದೇಶದ ರಾಜನ ಪುತ್ರಿಯಾದ, ನರಕನಿಗೆ ಅನುರೂಪಳಾದ "ಮಾಯಾ" ಎಂಬ ಕನ್ಯೆಯನ್ನು ತನ್ನ ಮಗನಿಗಾಗಿ ವರಿಸಿದನು.

೧೩೬. ಆ ಮಾಯೆಯನ್ನು ನರಕನಿಗೆ ಮದುವೆಮಾಡಿಸಿ ವಿಷ್ಣುವು ಅವಳೊಡನೆ ಆ ನರಕನನ್ನು ಆ ಪಟ್ಟಣದಲ್ಲಿ ರಾಜನನ್ನಾಗಿ ಪಟ್ಟಾಭಿಷೇಕ ಮಾಡಿದನು.

೧೩೭. ಬಳಿಕ ಮಾಧವನು ಆ ಪ್ರಾಗ್ಜ್ಯೋತಿಷನಗರವನ್ನು ಗಿರಿದುರ್ಗಾದಿಗಳಿಂದ ಭದ್ರಪಡಿಸಿದನು. ಆ ದುರ್ಗವು ಎಲ್ಲೆಡೆಯಲ್ಲಿಯೂ ಭದ್ರವಾಗಿದ್ದು ದೇವತೆಗಳಿಗೂ ಆಕ್ರಮಿಸಲು ಅಸಾಧ್ಯವಾಗಿದ್ದಿತು.

೧೩೮-೧೩೯. ಅನಂತರ ಕಿರಾತರಾಜನ ಇಪ್ಪತ್ತೈದುಸಾವಿರ ಆನೆಗಳನ್ನೂ, ಮಾವಟಿಗ, ಆಸನ, ಇವುಗಳೊಡನೆ ಸ್ವೀಕರಿಸಿದನು ಮತ್ತು ಅನೇಕ ರತ್ನ, ಸೈನ್ಯ, ಕುದುರೆ, ಆಭರಣ ಇವೆಲ್ಲವನ್ನೂ ಸ್ವೀಕರಿಸಿದನು.

ಅಶ್ವಾಶ್ಚಾಭರಣಾಶ್ಚೈವ ತತ್ಸರ್ವಂ ನರಕೋಽಗ್ರಹೀತ್ ।
ಯದ್ಯತ್ಸುಭೂಷಣಂ ರಾಜ್ಞೋ ಧ್ವಜಾಶ್ಚಾಭರಣಾನಿ ಚ ॥ ೧೪೯ ॥

ತಾನಿ ತಾನಿ ಸ್ವಯಂ ವಿಷ್ಣುಸ್ತನಯಸ್ಯ ದದೌ ತದಾ ।
ರಥಂ ಚ ಪ್ರದದೌ ತಸ್ಮೈ ತ್ರಿಷು ಲೋಕೇಷು ದುರ್ಲಭಂ ॥ ೧೪೦ ॥

ಲೋಹಾಷ್ಟಚಕ್ರಸಂಛನ್ನಮರ್ಧಯೋಜನವಿಸ್ತೃತಂ ।
ಯುಕ್ತಮಶ್ವಸಹಸ್ರೈಶ್ಚ ತಥಾಷ್ಟಾಭಿರ್ಮನೋಜವೈಃ ॥ ೧೪೧ ॥

ರತ್ನಕಾಂಚನಚಿತ್ರಾಢ್ಯಂ ವೇದಿಕಾಭಾಗವಿಸ್ತರಂ ।
ವಜ್ರಧ್ವಜೇನ ಮಹತಾ ಕಾಂಚನೇನ ವಿರಾಜಿತಂ ॥ ೧೪೨ ॥

ಹೇಮದಂಡಪತಾಕಾಢ್ಯಂ ವೈಢೂರ್ಯಮಣಿಕೂಬರಂ ।
ಸಿಂಹವ್ಯಾಘ್ರಸಮುದ್ಭೂತೈಶ್ಚರ್ಮಭಿಶ್ಚಾದಿತಂ ಸದಾ ॥ ೧೪೩ ॥

---

೧೪೦. ಅಲ್ಲದೇ ಆ ಕಿರಾತರಾಜನ ಯಾವಯಾವ ಆಭರಣ, ಧ್ವಜ ಮುಂತಾದವು ಇದ್ದುವೋ ಅವೆಲ್ಲವನ್ನೂ ವಿಷ್ಣುವು ತಾನೇ ತನ್ನ ಪುತ್ರ ನರಕನಿಗೆ ಕೊಟ್ಟನು.

೧೪೧. ಮೂರುಲೋಕದಲ್ಲಿಯೂ ಇಲ್ಲದಂತಹ ಅಪೂರ್ವವಾದ ಒಂದು ರಥವನ್ನು ವಿಷ್ಣುವು ನರಕನಿಗೆ ಕೊಟ್ಟನು. ಅದಕ್ಕೆ ಲೋಹಮಯವಾದ ಎಂಟು ಚಕ್ರಗಳಿದ್ದುವು. ಅರ್ಧಯೋಜನದಷ್ಟು ದೊಡ್ಡದಾಗಿದ್ದಿತು.

೧೪೨-೧೪೩. ಆ ರಥಕ್ಕೆ ಎಂಟುಸಾವಿರ ವೇಗಶಾಲಿಗಳಾದ ಕುದುರೆಗಳನ್ನು ಕಟ್ಟಿದ್ದರು. ಅದು ರತ್ನಖಚಿತವಾಗಿಯೂ, ಸುವರ್ಣಮಯವಾದ ಕೆತ್ತನೆಯ ಚಿತ್ರ ಕೆಲಸಗಳಿಂದಲೂ ಅಲಂಕೃತವಾಗಿತ್ತು. ಕುಳಿತುಕೊಳ್ಳುವ ಪ್ರದೇಶವು ವಿಶಾಲವಾಗಿತ್ತು. ಅದರ ಧ್ವಜಗಳು ರತ್ನಸುವರ್ಣಾದಿಗಳಿಂದ ರಚಿಸಲ್ಪಟ್ಟಿದ್ದವು. ಚಿನ್ನದ ಧ್ವಜದಂಡ, ವೈಢೂರ್ಯಾದಿ ರತ್ನಗಳಿಂದ ಖಚಿತವಾದ ನೊಗ, ಇವುಗಳಿಂದ ಆ ರಥವು ಶೋಭಿಸುತ್ತಲಿದ್ದಿತು ಮತ್ತು ಅದು ಕಬ್ಬಿಣದ ಹೊದಿಕೆಯಿಂದಲೂ ಸಿಂಹ, ಹುಲಿಗಳ ಚರ್ಮಗಳ ಹೊದಿಕೆಗಳಿಂದಲೂ ಆವೃತವಾಗಿದ್ದಿತು. ಕಿರುಗೆಜ್ಜೆಗಳ ಮಾಲೆಗಳಿಂದ ಶೋಭಿಸುತ್ತಲಿದ್ದಿತು. ಅನೇಕಬಗೆಯ ಆಯುಧಗಳಿಂದಲೂ, ಮಾಯೆಗಳಿಂದಲೂ ಕೂಡಿ ಕಂಗೊಳಿಸುವ ಆ ರಥವನ್ನು ವಿಷ್ಣುವು ಆ ನರಕನಿಗೆ ಕೊಟ್ಟನು.

ಲೋಹತಾಮ್ರೈಶ್ಚ ಸಂಛನ್ನಂ ಕಿಂಕಿಣೀಜಾಲಮಾಲಿನಂ ।
ಸರ್ವಪ್ರಹರಣೈರ್ಯುಕ್ತಂ ಬಹುಮಾಯಾಸಮನ್ವಿತಂ ॥ ೧೪೪ ॥

ಶಕ್ತಿಂ ಚ ಪ್ರದದೌ ತಸ್ಮೈ ಸರ್ವಶತ್ರುವಿಶಾತನೀಂ ।
ಜ್ವಾಲಾಮಾಲಾಭಿದೀಪ್ತಾಂಗೀಂ ರಿಪುಕಕ್ಷಾಗ್ನಿರೂಪಿಣೀಂ ॥ ೧೪೫ ॥

ಇಮಂ ಚ ಸಮಯಂ ಪ್ರೋಚೇ ನರಕಾಯ ಮಹಾತ್ಮನೇ ।
ನರಕಸ್ಯ ಹಿತಾಯೇಶೋ ವಸುಧಾಯಾಃ ಸಮುಕ್ಷತಃ ॥ ೧೪೬ ॥

ಇಮಾಂ ಶಕ್ತಿಂ ನ ಹಿ ಭವಾನ್ ಪ್ರಾಣಸ್ಯ ಸಂಶಯಂ ವಿನಾ ।
ಪ್ರಯೋಕ್ಷ್ಯತಿ ಕದಾಚಿತ್ತು ಮಾನುಷೇಷು ವಿಶೇಷತಃ ॥ ೧೪೭ ॥

ಏಷಾ ಮಾಯಾ ಚ ವೈದರ್ಭೀ ಭವತಃ ಸದೃಶೀಗುಣೈಃ ।
ಭವತೋ ಜೀವನಂ ಯಾವತ್ತಾವತ್ಸ್ಥಾಸ್ಯತಿ ಶೋಭನಾ ॥ ೧೪೮ ॥

ತ್ವಂ ತು ಪ್ರಜಾಯೈ ತ್ರೇತಾಯಾಂ ಯತ್ನವಾನ್ವೈ ಭವಿಷ್ಯಸಿ ।
ದ್ವಾಪರಾಂತೇ ತು ಸಂಪ್ರಾಪ್ತೇ ಪ್ರಜಾ ತವ ಭವಿಷ್ಯತಿ ॥ ೧೪೯ ॥

೧೪೪-೧೪೫. ಜ್ವಲಿಸುತ್ತಿರುವಂತಹುದೂ, ಶತ್ರುಗಳೆಂಬ ಹುಲ್ಲುಗಳಿಗೆ ಅಗ್ನಿಯಂತಿರುವುದೂ ಎಂದರೆ ಸಕಲ ಶತ್ರುಗಳನ್ನೂ ಸಂಹರಿಸುವಂತಹುದೂ ಆದ ಶಕ್ತಿಯೊಂದನ್ನೂ ಕೊಟ್ಟನು.

೧೪೬. ಅಲ್ಲದೇ ನಾರಾಯಣನು ಮಹಾತ್ಮನಾದ ನರಕನಿಗೆ ಅವನ ಕ್ಷೇಮಕ್ಕೋಸ್ಕರ ಭೂದೇವಿಯ ಎದುರಿನಲ್ಲಿ ನಿಯಮವೊಂದನ್ನು ಮಾಡಿ ಹೀಗೆ ಹೇಳಿದನು.

೧೪೭. ಎಲೈ ನರಕನೇ! ಈ ಶಕ್ತಿಯನ್ನು ನೀನು ಪ್ರಾಣಾಪಾಯವು ಬಂದ ಸಮಯದಲ್ಲಲ್ಲದೆ ಬೇರೆಕಾಲದಲ್ಲಿ ಪ್ರಯೋಗಿಸಕೂಡದು. ಅದರಲ್ಲಿಯೂ ವಿಶೇಷವಾಗಿ ಮನುಷ್ಯರಲ್ಲಿ ಪ್ರಯೋಗಿಸಕೂಡದು.

೧೪೮. ವಿದರ್ಭರಾಜನ ಪ್ರತಿಕೃಯಾದ ಈ ಮಾಯೆಯು ನಿನಗನುರೂಪಳಾದ ಪತ್ನಿಯಾಗಿರುವಳು. ನೀನು ಜೀವಿಸಿರುವವರೆಗೂ ಮಂಗಳರೂಪಿಯಾದ ಇವಳು ನಿನ್ನೊಡನೆ ಇರುವಳು.

೧೪೯. ತ್ರೇತಾಯುಗದಲ್ಲಿ ನೀನು ಪ್ರಜೆ (ಮಕ್ಕಳು) ಗಳಿಗಾಗಿ ಯತ್ನಿಸುವೆ. ದ್ವಾಪರಯುಗದ ಕೊನೆಯಲ್ಲಿ ನಿನಗೆ ಮಕ್ಕಳಾಗುವುದು.

ವಿರೋಧೋ ಮುನಿಭಿಃ ಸಾರ್ಧಂ ಬ್ರಾಹ್ಮಣೈರಪಿ ಪುತ್ರಕ ।
ನ ಕದಾಚಿತ್ತ್ವಯಾ ಕಾರ್ಯಶ್ಚಿರಂ ಜೀವಿತುಮಿಚ್ಛತಾ ॥ ೧೫೦ ॥

ನ ರಾಜಭಿರ್ನ ದೇವೈಶ್ಚ ವಿರೋಧೋ ಯುಜ್ಯತೇ ತವ ।
ಮಹಾದುರ್ಗಸ್ಯ ವೈ ಮಧ್ಯೇ ವಸತೋ ಹ್ಯಪರಾಜಿತೇ ॥ ೧೫೧ ॥

ದಿವ್ಯಯೋಷಿದ್ಗಣೈಃ ಸಾರ್ಧಂ ವಸಮಾನೋಽತಿಭೋಗವಾನ್ ।
ಸಪರ್ವತೇ ಕಾಮರೂಪೇ ಚಿರಂ ತ್ವಂ ತಿಷ್ಠ ಪುತ್ರಕ ॥ ೧೫೨ ॥

ಮಹಾದೇವೀಂ ಮಹಾಮಾಯಾಂ ಜಗನ್ಮಾತರಮಂಬಿಕಾಂ ।
ಕಾಮಾಖ್ಯಾಂ ತ್ವಂ ವಿನಾ ಪುತ್ರ ನಾನ್ಯದೇವಂ ಯಜಿಷ್ಯಸಿ ॥ ೧೫೩ ॥

ಇತೋಽನ್ಯಥಾ ತ್ವಂ ವಿಹರನ್ ಗತಪ್ರಾಣೋ ಭವಿಷ್ಯಸಿ ।
ತಸ್ಮಾನ್ನರಕ ಯತ್ನೇನ ಸಮಯಂ ಪ್ರತಿಪಾಲಯ ॥ ೧೫೪ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಭಗವಾನ್ ವಿಷ್ಣುರ್ನರಕಂ ತನಯಂ ಸ್ವಕಂ ।
ತಮುಪಾಸ್ಯ ರಹಸ್ಯೇನಾಂ ಪೃಥಿವೀಂ ವಾಕ್ಯಮುಬ್ರವೀತ್ ॥ ೧೫೫ ॥

೧೫೦—೧೫೨. ಎಲೈ ಪುತ್ರನೇ! ಬಹಳದಿವಸ ಬದುಕಬೇಕೆಂದಿದ್ದರೆ, ನೀನು ಮುನಿಗಳೊಂದಿಗೂ ಬ್ರಾಹ್ಮಣರೊಂದಿಗೂ ಯಾವಾಗಲೂ ವಿರೋಧವನ್ನು ಕಟ್ಟಿಕೊಳ್ಳ ಬಾರದು ಮತ್ತು ರಾಜರೊಡನೆಯೂ ದೇವತೆಗಳೊಡನೆಯೂ ವಿರೋಧವು ಉಚಿತ ವಲ್ಲ. ಅಭೇದ್ಯವಾದ ಈ ದುರ್ಗದ ಮಧ್ಯದಲ್ಲಿರುವ ಕಾಮರೂಪಪರ್ವತದಲ್ಲಿ ಸುಂದರಿ ಯರಾದ ಯುವತಿಯರೊಡನೆ ವಿಹರಿಸುತ್ತಾ ಬಹಳದಿವಸಗಳವರೆಗೆ ಸುಖವಾಗಿರು.

೧೫೩. ಮಹಾದೇವಿಯೂ, ಮಹಾಮಾಯೆಯೂ, ಜಗತ್ತಿಗೆ ಮಾತೆಯೂ ಆದ ಕಾಮಾದೇವಿಯನ್ನು ಹೊರತು ಇನ್ನು ಯಾವ ದೇವರನ್ನೂ ಪೂಜಿಸಬೇಡ.

೧೫೪. ಎಲೈ ನರಕನೇ! ಹೀಗಲ್ಲದೆ ಬೇರೆ ರೀತಿಯಲ್ಲಿ ನೀನು ಆಚರಿಸು ವೆಯಾದರೆ ಮರಣವನ್ನು ಹೊಂದುವೆ. ಆದಕಾರಣ ಈ ನಿಯಮವನ್ನು ಅನುಸರಿಸಿ ನೀನು ನಡೆಯಬೇಕು.

೧೫೫—೧೫೭ ಮಾರ್ಕಂಡೇಯನು ಹೇಳಿದನು—ಹೀಗೆ ತನ್ನ ಪುತ್ರನಾದ ನರಕನಿಗೆ ಬುದ್ಧಿಹೇಳಿ ಭಗವಂತನಾದ ವಿಷ್ಣುವು ಅವನನ್ನು ಅಲ್ಲಿಯೇ ಬಿಟ್ಟು ಏಕಾಂತ

ಯದ್ಯತ್ಪೂರ್ವಂ ಮಯಾ ಪ್ರೋಕ್ತಂ ಕರ್ತವ್ಯಂ ತವ ಸುಂದರಿ ।
ತತ್ಸರ್ವಂ ನರಕಾಯಾಶು ಭೂತ್ಯೈ ಸಮುಪದೇಶಯ ॥ ೧೫೬ ॥

ಯದ್ಯೈನಂ ತ್ವಂ ಸ್ವಯಂ ಹಂತುಂ ಮಾಂ ಜಗದ್ಧಾತ್ರಿ ಭಾಷಸೇ ।
ತದಾ ತು ಮಾನುಷಃ ಕಶ್ಚಿನ್ನರಕಂ ನಿಹನಿಷ್ಯತಿ ॥ ೧೫೭ ॥

॥ ಪೃಥಿವ್ಯುವಾಚ ॥

ಪ್ರಜಾರ್ಥಮೇಷ ಯತ್ನೋ ಮೇ ನಿಂದ್ಯಃಸ್ಯಾತ್ಸಂತತಿಂ ವಿನಾ ।
ತಸ್ಮಾನ್ನಾಥ ಪ್ರಯತ್ನಾನ್ಮೇ ಸಂತತಿಂ ಪಾಲಯಿಷ್ಯಸಿ ॥ ೧೫೮ ॥

॥ ಮಾರ್ಕಂಡೇಯ ಉವಾಚ ॥

ಏವ ಮಸ್ತ್ವಿತಿ ತಾಂ ವಿಷ್ಣುಃ ಪೃಥಿವೀಂ ಪ್ರತಿ ಪಾವನಃ ।
ನರಕಂ ಚ ಸಮಾಭಾಷ್ಯ ತತ್ರಾಂತರ್ಧಿಮುಗಾತ್ ಕ್ಷಣಾತ್ ॥ ೧೫೯ ॥

ಗತೇ ಪರೌ ನಿಜಸ್ಥಾನಂ ಪೃಥಿವೀ ತನಯಂ ಸ್ವಕಂ ।
ಯತ್ಪೂರ್ವಂ ಹರಿಣಾ ಪ್ರೋಕ್ತಂ ತತ್ರ ತಂ ವ್ಯನಯತ್ಸ್ವಯಂ ॥ ೧೬೦ ॥

ದಲ್ಲಿ ಭೂದೇವಿಯನ್ನು ಕುರಿತು, ಎಲೌ ಸುಂದರಿಯೇ! ಹಿಂದೆ ನಿನಗೆ ಯಾವಯಾವ ಕರ್ತವ್ಯವನ್ನು ಹೇಳಿರುವೆನೋ ಅದೆಲ್ಲವನ್ನೂ ನರಕನಿಗೆ ಅವನ ಕ್ಷೇಮಕ್ಕಾಗಿ ಉಪದೇಶಿಸು. ಯಾವಾಗ ಈ ನರಕನ ಸಂಹಾರಕ್ಕಾಗಿ ನೀನು ಅಪೇಕ್ಷಿಸುವೆಯೋ ಆಗ ಇವನನ್ನು ಓರ್ವ ಮನುಷ್ಯನು ಸಂಹರಿಸುವನು ಎಂದು ಹೇಳಿದನು.

೧೫೮. ಭೂದೇವಿಯು ಹೇಳಿದಳು--ಪ್ರಜೆಗಳಿಗಾಗಿ ನಾನು ಹೀಗೆ ಯತ್ನಿಸುತ್ತಿರುವೆನು. ಸಂತತಿ ಇಲ್ಲದವನು ನಿಂದ್ಯನು. ಆದಕಾರಣ ಓ ಪತಿಯೇ! ನನ್ನ ಸಂತತಿಯಾದ ಈ ನರಕನನ್ನು ನೀನು ಪ್ರಯತ್ನಪೂರ್ವಕವಾಗಿ ಸಲಹಬೇಕು.

೧೫೯. ಮಾರ್ಕಂಡೇಯನು ಹೇಳಿದನು-ಹಾಗೆಯೇ ಆಗಲೆಂದು ಭೂದೇವಿಗೆ ಹೇಳಿ ಪೂಜ್ಯನಾದ ನಾರಾಯಣನು ಅವಳನ್ನೂ ನರಕನನ್ನೂ ಸಂತೈಸಿ ಆ ಕೂಡಲೇ ಅಲ್ಲಿಯೇ ಅಂತರ್ಧಾನನಾದನು.

೧೬೦. ಹರಿಯು ತನ್ನ ಸ್ಥಾನಕ್ಕೆ ತೆರಳಿದಮೇಲೆ ಭೂದೇವಿಯು ತನ್ನ ಪುತ್ರನಾದ ನರಕನಿಗೆ ಹಿಂದೆ ಹರಿಯು ಹೇಳಿದುದೆಲ್ಲವನ್ನೂ ಉಪದೇಶಿಸಿದಳು.

ನರಕೋಽಪಿ ತಥಾ ಧೀಮಾನ್ವೇದಶಾಸ್ತ್ರಾರ್ಥಪಾರಗಃ ।
ಬ್ರಹ್ಮಣ್ಯನೀತಿಕುಶಲೋ ವದಾನ್ಯೋ ದಾನತತ್ಪರಃ ॥ ೧೬೧ ॥

ಕಾಮಾಖ್ಯಾಪೂಜನರತೋ ನೀಲಕೂಟೇ ಮಹಾಗಿರೌ ।
ಮಹಾಭೋಗೀ ಮಹಾಶ್ರೀಮಾ ಹೀನಬಾಧಶ್ಚ ಶತ್ರುಭಿಃ ॥ ೧೬೨ ॥

ಸುಚಿರಂ ರಾಜ್ಯಮಕರೋಚ್ಛಕ್ರವತ್ತ್ರಿದಶಾಲಯೇ ।
ತತೋ ವಿದೇಹರಾಜೋಽಪಿ ಶ್ರುತ್ವೈವ ನರಕಶ್ರಿಯಂ ॥ ೧೬೩ ॥

ಸಪುತ್ರಭಾರ್ಯಃ ಸಗಣೋ ನರಕಂ ದ್ರಷ್ಟುಮಭ್ಯಗಾತ್ ।
ಪ್ರಾಗ್ಜ್ಯೋತಿಷಪುರಂ ಗತ್ವಾ ಕಾಮರೂಪಾಂತರಸ್ಥಿತಂ ॥ ೧೬೪ ॥

ದದರ್ಶ ನರಕಂ ರಾಜಾ ಶರಚ್ಚಂದ್ರಸಮಂ ಶ್ರಿಯಾ ।
ಪ್ರಾಗ್ಜ್ಯೋತಿಷಪುರಂ ಮೇನೇ ಸ ರಾಜಾ ತ್ವಮರಾವತೀಂ ॥ ೧೬೫ ॥

---

೧೬೧. ಅನಂತರ ಬುದ್ಧಿವಂತನೂ, ವೇದಶಾಸ್ತ್ರಗಳನ್ನು ಬಲ್ಲವನೂ, ಬ್ರಾಹ್ಮಣ ರಕ್ಷಕನೂ, ನೀತಿಯಲ್ಲಿ ನಿಪುಣನೂ, ಉದಾರನೂ ಆದ ನರಕನು ಅಲ್ಲಿ ನೀಲಕೂಟ ನೆಂಬ ಬೆಟ್ಟದಲ್ಲಿರುವ " ಕಾಮಾ " ಎಂಬ ದೇವಿಯನ್ನು ಪೂಜಿಸುವುದರಲ್ಲಿ ನಿರತ ನಾದನು.

೧೬೨. ಆ ನರಕನು ತನ್ನ ರಾಜ್ಯದಲ್ಲಿ ಶತ್ರುಗಳ ಬಾಧೆಯಿಲ್ಲದೆ ಅಮರಾವತಿ ಯಲ್ಲಿ ಇಂದ್ರನಂತೆ ಸುಖವಾಗಿ ರಾಜ್ಯಭಾರಮಾಡುತ್ತಿದ್ದನು.

೧೬೩-೧೬೪. ಅನಂತರ ವಿದೇಹರಾಜನಾದ ಜನಕನು ನರಕನ ರಾಜ್ಯಸಂಪ ತ್ತನ್ನು ಕೇಳಿ ಅವನನ್ನು ನೋಡಲು ಪತ್ನಿ ಪುತ್ರಾದಿಪರಿವಾರಗಳೊಡನೆ ಕಾಮರೂಪ ದೇಶದಲ್ಲಿರುವ ಪ್ರಾಗ್ಜ್ಯೋತಿಷನಗರಕ್ಕೆ ಬಂದು ಶರದೃತುವಿನ ಚಂದ್ರನಂತೆ ಪ್ರಕಾಶಿ ಸುತ್ತಲಿರುವ ಆ ನರಕನನ್ನು ನೋಡಿದನು.

೧೬೫. ಅಲ್ಲಿನ ವೈಭವಾದಿಗಳನ್ನು ನೋಡಿ ಪ್ರಾಗ್ಜ್ಯೋತಿಷಪುರವನ್ನು ಅಮರಾ ವತಿಯೆಂದೂ, ಪರಿವಾರ ಮತ್ತು ಅಲಂಕಾರಗಳಿಂದ ಶೋಭಿಸುವ ನರಕನನ್ನು ಇಂದ್ರ ನೆಂದೂ ಆ ಜನಕರಾಜನು ಭ್ರಾಂತಿಪಡುವಂತಾಯಿತು.

ದೇವೇಂದ್ರಂ ನರಕಂ ಮೇನೇ ಸತ್ಪರಿಚ್ಛದಭೂಷಣಂ ।
ತತೋ ಮಹಿಷ್ಯೈ ತತ್ಸರ್ವಂ ಜನಕೋ ವಾಕ್ಯಮಬ್ರವೀತ್ ॥ ೧೬೬ ॥

ಏಷ ತೇ ಪಾಲಿತಸುತಃ ಶ್ರೀಮಾನ್ನರಕಸಂಜ್ಞಿತಃ ।
ಪೃಥಿವ್ಯಾ ದಯಿತಃ ಪುತ್ರಃ ಸಂಜಾತೋ ಘೃಷ್ಟಿರೂಪಿಣಾ ॥ ೧೬೭ ॥

ವಿಷ್ಣುನಾ ಜಗದೀಶೇನ ತ್ವಮೇನಂ ಪಶ್ಯ ಸಂಗತಂ ।

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಜನಕೋ ರಾಜಾ ಯಥಾ ವೃತ್ತಂ ತಥಾ ಪುರಾ ॥ ೧೬೮ ॥

ವೃತ್ತಾಂತಂ ಕಥಯಾಮಾಸ ನರಕೋ ಜಾತವಾನ್ಯಥಾ ।
ತತಸ್ತತ್ರ ಚಿರಂ ಸ್ಥಿತ್ವಾ ಪ್ರಾಗ್ಜ್ಯೋತಿಷಪುರೇ ಮುದಾ ॥ ೧೬೯ ॥

ವಿದೇಹಾಧಿಪತೀ ರಾಜಾ ನರಕೇಣ ಪ್ರಪೂಜಿತಃ ।
ಸ್ವಸ್ಥಾನಂ ಗತವಾನ್ ತಸ್ಮಾತ್ಸ್ವಗಣೈಃ ಪರಿವಾರಿತಃ ॥ ೧೭೦ ॥

೧೬೬-೧೬೭. ಬಳಿಕ ಜನಕರಾಜನು ತನ್ನ ರಾಣಿಗೆ ಹಿಂದಿನ ವೃತ್ತಾಂತವನ್ನು ತಿಳಿಸಿ, ಈ ನರಕನು ನಿನ್ನ ಸಾಕುಮಗನು, ವರಾಹರೂಪಿಯಾದ ವಿಷ್ಣುವಿನಿಂದ ಭೂದೇವಿಯಲ್ಲಿ ಜನಿಸಿದ ಪುತ್ರನು, ಭೂದೇವಿಗೆ ಪ್ರೀತಿಯ ಮಗನಾದ ಇವನನ್ನು ನೋಡೆಂದು ಹೇಳಿದನು.

೧೬೮. ಮಾರ್ಕಂಡೇಯನು ಹೇಳಿದನು—ನರಕನು ಜನಿಸಿದುದೇ ಮೊದಲಾದ ಹಿಂದಿನ ವೃತ್ತಾಂತವನ್ನೆಲ್ಲವನ್ನೂ ಜನಕರಾಜನು ತನ್ನ ರಾಣಿಗೆ ಹೇಳಿದನು.

೧೬೯-೧೭೦. ಅನಂತರ ವಿದೇಹದೇಶಕ್ಕೆ ಒಡೆಯನಾದ ಆ ಜನಕಮಹಾರಾಜನು ನರಕನಿಂದ ಪೂಜಿಸಲ್ಪಟ್ಟು ಬಹಳಕಾಲ ಆ ಪ್ರಾಗ್ಜ್ಯೋತಿಷಪುರದಲ್ಲಿ ಸಂತೋಷವಾಗಿದ್ದು ತನ್ನ ಪರಿವಾರದೊಡನೆ ತನ್ನ ದೇಶಕ್ಕೆ ಹೊರಟುಹೋದನು.

ಏವಂ ಸ ನರಕೋ ಜಾತಃ ಪೃಥಿವ್ಯಾಸ್ತನಯಸ್ತದಾ ।
ಹೀನಾಸುರಸ್ವಭಾವಃ ಸನ್ನಿಜಹಾರ ಚಿರಂ ಕ್ಷಿತೌ ॥ ೧೭೧ ॥

॥ ಇತಿ ಶ್ರೀ ಕಾಲಿಕಾಪುರಾಣ ಏಕೋನಚತ್ವಾರಿಂಶತ್ತಮೋಽಧ್ಯಾಯಃ ॥

---

೧೭೧. ಹೀಗೆ ಹಿಂದೆ ಆ ನರಕನು ಭೂದೇವಿಯ ಮಗನಾಗಿ ಜನಿಸಿ ರಾಕ್ಷಸ ಸ್ವಭಾವವಿಲ್ಲದೆ ಬಹಳಕಾಲ ಭೂಮಿಯಲ್ಲಿ ಸುಖವಾಗಿ ವಿಹರಿಸುತ್ತಿದ್ದನು.

ಇಲ್ಲಿಗೆ ಮೂವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.



॥ ಶ್ರೀಃ ॥

ಅಥ

॥ಶ್ರೀ ಕಾಲಿಕಾಪುರಾಣೇ ಚತ್ವಾರಿಂಶತ್ತಮೋऽಧ್ಯಾಯಃ॥

॥ ಮಾರ್ಕಂಡೇಯ ಉವಾಚ ॥

ಸ ರಾಜಾ ನರಕಃ ಶ್ರೀಮಾನ್ ಜಿರಂಜೀವೀ ಮಹಾಭುಜಃ ।
ಮಾನುಷೇಣೈವ ಭಾವೇನ ಚಿರಂ ರಾಜ್ಯಮಥಾಕರೋತ್ ॥ ೧ ॥

ತ್ರೇತಾಯಾಂ ತು ವ್ಯತೀತಾಯಂ ದ್ವಾಪರಸ್ಯ ತು ಶೇಷತಃ ।
ಅಭವಚ್ಛೋಣಿತಪುರೇ ಬಾಣೋ ನಾಮ ಮಹಾಸುರಃ ॥ ೨ ॥

ತಸ್ಯಾಗ್ನಿದುರ್ಗಂ ನಗರಂ ಸ ಚ ಶಂಭುಸಖೋ ಬಲೀ ।
ಸಹಸ್ರಬಾಹುರ್ದುರ್ಧರ್ಷಃ ಪ್ರಿಯಃ ಪುತ್ರಃ ಸ ವೈ ಬಲೇಃ ॥ ೩ ॥

॥ ನಲವತ್ತನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು—ಚಿರಂಜೀವಿಯೂ, ವೀರನೂ, ಶ್ರೀಮಂತನೂ ಆದ ಆ ನರಕರಾಜನು ಮನುಷ್ಯರಂತೆಯೇ ಇರುತ್ತಾ ಪ್ರಾಗ್ಜ್ಯೋತಿಷ ಪುರದಲ್ಲಿ ಬಹಳಕಾಲ ರಾಜ್ಯವಾಳಿದನು.

೨. ಮುಂದೆ ತ್ರೇತಾಯುಗವು ಕಳೆದು ದ್ವಾಪರಯುಗದ ಕೊನೆಯಲ್ಲಿ "ಶೋಣಿತ" ವೆಂಬ ಪಟ್ಟಣದಲ್ಲಿ "ಬಾಣ" ನೆಂಬ ಮಹಾ ಅಸುರನು ರಾಜ್ಯವಾಳುತ್ತಿದ್ದನು.

೩. ಅವನ ಶೋಣಿತಪುರವು ಅಗ್ನಿದುರ್ಗದಿಂದ ಭದ್ರವಾಗಿದ್ದಿತು. ಬಲಿಷ್ಠನಾದ ಆ ಬಾಣಾಸುರನು ಶಂಕರನ ಮಿತ್ರನು ಮತ್ತು ಪರಾಕ್ರಮಶಾಲಿಯಾದ ಇವನಿಗೆ ಸಾವಿರತೋಳುಗಳಿದ್ದುವು. ಅಲ್ಲದೆ ಇವನು ಬಲಿಚಕ್ರವರ್ತಿಯ ಪ್ರಿಯಪುತ್ರನೂ ಆಗಿದ್ದನು.

ನರಕೇಣ ಸಮಂ ತಸ್ಯ ಮಹಾಮೈತ್ರೀ ವ್ಯಜಾಯತ ।
ಗಮನಾಗಮನಂ ನಿತ್ಯಮನ್ಯೋನ್ಯಾನುಗ್ರಹೈಸ್ತಥಾ ॥ ೪ ॥

ತಯೋರಭೂನ್ಮಹಾಪ್ರೀತಿಃ ಪವನಾನಲಯೋರ್ಯಥಾ ॥
ಸ ಚ ಬಾಣಃ ಸಮಾರಾಧ್ಯ ಮಹಾದೇವಂ ಜಗತ್ಪ್ರಭುಂ ॥ ೫ ॥

ಆಸುರೇಣಾಥ ಭಾವೇನ ವ್ಯಚರಚ್ಚಾಕುತೋಭಯಃ ।
ತತ್ಸಂಸರ್ಗಾತ್ಸ ನರಕೋ ದೃಷ್ಟ್ವಾ ತಸ್ಯಾದ್ಭುತಾಕೃತಿಂ ॥ ೬ ॥

ತೇನೈವ ಸಹ ಭಾವೇನ ವಿಹರ್ತುಮುಪಚಕ್ರಮೇ ।
ನ ಬ್ರಾಹ್ಮಣಾನ್ ಪೂಜಯತಿ ಯಥಾಪೂರ್ವಂ ತಥಾ ದ್ವಿಜಾಃ ॥ ೭ ॥

ನ ಚ ಯಜ್ಞೇಷು ದಾನೇಷು ಪೂರ್ವವನ್ಮೋದತಃ ಸ ಚ ।
ನ ತಥಾ ವಿಷ್ಣುಮಭ್ಯೇತಿ ಪೃಥಿವೀಂ ವಾಪಿ ನಾರ್ಚತಿ ॥ ೮ ॥

---

೪. ಆ ಬಾಣಾಸುರನಿಗೂ ನರಕನಿಗೂ ತುಂಬಾ ಸ್ನೇಹವುಂಟಾಯಿತು. ಅವನು ಇಲ್ಲಿಗೆ ಬರುವುದು ಇವನು ಅಲ್ಲಿಗೆ ಹೋಗುವುದು ಮುಂತಾದ ಪರಸ್ಪರ ಸ್ನೇಹಭಾವ ಗಳಿಂದ ಬೆಂಕಿ ಗಾಳಿಗಳಿಗಿದ್ದಂತೆ ಅವರ ಸ್ನೇಹವು ಬೆಳೆಯಿತು.

೫. ಆ ಬಾಣಾಸುರನು ಜಗದೊಡೆಯನಾದ ಶಂಕರನನ್ನು ಆರಾಧಿಸಿ ವರವನ್ನು ಪಡೆದು ಯಾವ ಭಯವೂ ಇಲ್ಲದೆ ರಾಕ್ಷಸಸ್ವಭಾವದಿಂದ ವರ್ತಿಸುತ್ತಲಿದ್ದನು.

೬. ನರಕನೂ ಸಹ ಬಾಣನ ಅದ್ಭುತವಾದ ಆಕಾರವನ್ನು ನೋಡಿ ಅವನ ಸಹವಾಸದಿಂದ ತಾನೂ ರಾಕ್ಷಸಸ್ವಭಾವದಿಂದಲೇ ವಿಹರಿಸತೊಡಗಿದನು.

೭. ಎಲೈ ಬ್ರಾಹ್ಮಣರೇ! ಹೀಗೆ ರಾಕ್ಷಸಸ್ವಭಾವವನ್ನು ಹೊಂದಿದ ಆ ನರಕನು ಮೊದಲಿನಂತೆ ಬ್ರಾಹ್ಮಣರನ್ನು ಪೂಜಿಸಲಿಲ್ಲವು. ಯಜ್ಞ ಮತ್ತು ದಾನ ಗಳಿಂದ ಮೊದಲಿನಂತೆ ಸಂತೋಷಗೊಳ್ಳುತ್ತಿರಲಿಲ್ಲವು.

೮. ಅಲ್ಲದೆ, ಆ ನರಕನು ಮೊದಲಿನಂತೆ ವಿಷ್ಣುವನ್ನಾಗಲೀ, ಭೂದೇವಿಯನ್ನಾಗಲೀ ಪೂಜಿಸಲಿಲ್ಲವು. ಕಾಮಾ ಎಂಬ ದೇವಿಯಲ್ಲಿಯೂ ಮೊದಲಿನಂತೆ ಭಕ್ತಿಯಿರಲಿಲ್ಲ.

ಕಾಮಾಖ್ಯಾಯಾಂ ತಥಾ ಭಕ್ತಿಸ್ತದಾ ತಸ್ಯಾಭ ನಾಭವತ್ ।
ಏತಸ್ಮಿನ್ನಂತರೇ ಭ್ರಾತುಸ್ತನಯೋ ಮುನಿಸತ್ತಮಃ ॥ ೯ ॥

ವಸಿಷ್ಠೋ ನಾಮ ಕಾಮಾಖ್ಯಾಂ ದ್ರಷ್ಟುಂ ಪ್ರಾಗ್ಜ್ಯೋತಿಷಂ ಗತಃ ।
ತಾಂ ದುರ್ಗಾಭ್ಯಂತರೇ ನಿಲಕೂಟೇ ದೇವೀಂ ವ್ಯವಸ್ಥಿತಾಂ ॥ ೧೦ ॥

ದ್ರಷ್ಟುಂ ಗಂತುಂ ವಸಿಷ್ಠಸ್ಯ ದ್ವಾರಂ ನ ನರಕೋಽಹ್ಯದಾತ್ ।
ತತೋ ವಸಿಷ್ಠಃ ಕುಪಿತಃ ವಚನಂ ಪರುಷಂ ಮುನಿಃ ॥ ೧೧ ॥

ಜಗಾದ ನರಕಂ ವೀರಂ ಗರ್ಹಯನ್ಮುನಿಸತ್ತಮಃ ।
ಕಥಂ ಪೃಥಿವ್ಯಾಸ್ತನಯೋ ವರಾಹಸ್ಯ ಸುತೇಜಸಾ ॥ ೧೨ ॥

ದೇವೀಂ ದ್ರಷ್ಟುಂ ಬ್ರಾಹ್ಮಣಸ್ಯ ನ ದದಾಸಿ ತಥಾಗತಃ ।
ಕಿಂ ತೇ ಕುಲೋಚಿತಂ ಕರ್ಮ ತ್ವಂ ಕರೋಷಿ ನರಾಧಮ ॥ ೧೩ ॥

ದೇವೀಂ ಪ್ರಾಗ್ಜ್ಯೋತಿಷಂ ಗತ್ವಾ ಪೂಜಯಿಷ್ಯೇ ಜಗನ್ಮಯಾಂ ।
ತತಃ ಸ ನರಕೋ ರಾಜಾ ಪ್ರಾಪ್ತಕಾಲಃ ಕ್ಷಿತೇಃ ಸುತಃ ॥ ೧೪ ॥

---

೯. ಇದೇ ಸಮಯದಲ್ಲಿ ಬ್ರಹ್ಮನ ಪುತ್ರನೂ, ಮುನಿಶ್ರೇಷ್ಠನೂ ಆದ ವಸಿಷ್ಠ ಮುನಿಯು ಕಾಮಾದೇವಿಯ ದರ್ಶನಕ್ಕಾಗಿ ಪ್ರಾಗ್ಜ್ಯೋತಿಷಪುರಕ್ಕೆ ಬಂದನು.

೧೦. ಅಲ್ಲಿ ದುರ್ಗದ ಒಳಗೆ ನೀಲಕೂಟದಲ್ಲಿ ನೆಲಸಿರುವ ದೇವಿಯ ದರ್ಶನಕ್ಕೆ ಹೋಗಲು ವಸಿಷ್ಠನಿಗೆ ಅವಕಾಶವನ್ನೇ ಆ ನರಕನು ಕೊಡಲಿಲ್ಲವು.

೧೧—೧೩. ಆಗ ಮುನಿಶ್ರೇಷ್ಠನಾದ ವಸಿಷ್ಠಮುನಿಯು ಕೋಪಗೊಂಡು ವೀರನಾದ ಆ ನರಕನನ್ನು ನಿಂದಿಸುತ್ತಾ ಅವನನ್ನು ಕುರಿತು, ಎಲ್ಲೆ ನರಕನೇ ! ಭೂದೇವಿಯ ಮತ್ತು ತೇಜಸ್ವಿಯಾದ ವರಾಹಪುತ್ರನಾಗಿದ್ದರೂ ನಾಸ್ತಿಕನಾಗಿ ಬ್ರಾಹ್ಮಣನಾದ ನನಗೆ ದೇವೀದರ್ಶನಕ್ಕೆ ಅವಕಾಶವನ್ನು ಏತಕ್ಕೆ ಕೊಡುವುದಿಲ್ಲ ? ಎಲ್ಲೆ ನೀಚ ಮನುಷ್ಯನೇ ! ನೀನು ಮಾಡುವ ಈ ಕಾರ್ಯವು ನಿನ್ನ ಕುಲಕ್ಕೆ ಉಚಿತವಾದುದೇ ? ನಾನು ಪ್ರಾಗ್ಜ್ಯೋತಿಷನಗರದ ಒಳಗೆ ಹೋಗಿ ಜಗದ್ರೂಪಳಾದ ದೇವಿಯನ್ನು ಪೂಜಿಸಿಯೇ ತೀರುವೆನು ಎಂದು ಕೋಪದಿಂದ ಹೇಳಿದನು.

೧೪. ಅನಂತರ ಭೂದೇವಿಯ ಸುತನಾದ ಆ ನರಕರಾಜನು ತನ್ನ ಮರಣ ಕಾಲವು ಸನ್ನಿಹಿತವಾದಕಾರಣ ವಿವೇಚನೆಯಿಲ್ಲದೆ ಆ ವಸಿಷ್ಠಮುನಿಗೆ ಕಠಿಣವಾದ

ಪರುಷೇಣಾಥ ವಾಕ್ಯೇನ ತಮಾಕ್ಷಿಪ್ಯ ನಿರಸ್ತವಾನ್ ।
ತತೋ ಮುನಿಃ ಸ ಕುಪಿತಃ ಶಶಾಪ ನರಕಂ ನೃಪಂ ॥ ೧೫ ॥

ನಚಿರಾದ್ಯೇನ ಜಾತೋಽಸಿ ತೇನ ಮಾನುಷರೂಪಿಣಾ ।
ಮರಣಂ ಭವಿತಾ ಪಾಪ ವರಾಹಕುಲಪಾಂಸನ ॥ ೧೬ ॥

ಮೃತೇ ತ್ವಯಿ ಮಹಾದೇವೀಂ ಕಾಮಾಖ್ಯಾಂ ಜಗತಾಂ ಪ್ರಸೂಂ ।
ಪೂಜಯಿಷ್ಯಾಮ್ಯಹಂ ಪಾಪ ತಿಷ್ಠ ಯಾಸ್ಯೇ ಸ್ವಮಾಲಯಂ ॥ ೧೭ ॥

ತ್ವಂ ಯಾವಜ್ಜೀವಿತಾ ಪಾಪ ಕಾಮಾಖ್ಯಾಪಿ ಜಗತ್ಪ್ರಸೂಃ ।
ಸರ್ವೈಃ ಪರಿಕರೈಃ ಸಾರ್ಧಮಂತರ್ಧಾನಾಯ ಗಚ್ಛತು ॥ ೧೮ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಬ್ರಹ್ಮಪುತ್ರಃ ಸ ಸ್ವಸ್ಥಾನಂ ಗತವಾನ್ಮುನಿಃ ।
ವಸಿಷ್ಠಸ್ತೇನ ಭೌಮೇನ ನಿರಸ್ತಃ ಕುಪಿತೋ ಭೃಶಂ ॥ ೧೯ ॥

ಮಾತುಗಳನ್ನಾಡಿ ದೇವಿಯ ದರ್ಶನಕ್ಕೆ ಅವಕಾಶವನ್ನು ಕೊಡದೆ ಅವನನ್ನು ತಡೆದನು.

೧೫-೧೬. ಆಗ ಮುನಿಯು ಕೋಪಗೊಂಡು ನರಕರಾಜನನ್ನು ಹೀಗೆ ಶಪಿಸಿದನು—ವರಾಹಮೂರ್ತಿಯ ಕುಲಕ್ಕೆ ಕಲಂಕರೂಪನಾದ ಎಲ್ಲೆ ಪಾಪಿಯೇ! ನೀನು ಯಾವನಿಂದ ಜನಿಸಿರುವೆಯೋ ಅವನೇ (ವಿಷ್ಣುವು) ಮನುಷ್ಯರೂಪದಿಂದ ಬಂದು ನಿನ್ನನ್ನು ಸಂಹರಿಸುವನು.

೧೭. ನೀನು ಮೃತನಾದಮೇಲೆ ಜಗನ್ಮಾತೆಯಾದ ಕಾಮಾದೇವಿಯನ್ನು ಪೂಜಿಸುವೆನು. ಎಲ್ಲೆ ಪಾಪಿಯೇ! ಇರು. ನಾನು ಈಗ ನನ್ನ ಸ್ಥಾನಕ್ಕೆ ತೆರಳುವೆನು.

೧೮. ಎಲ್ಲೆ ಪಾಪಿಯೇ! ನೀನು ಜೀವಿಸಿರುವವರೆಗೂ ಜಗಜ್ಜನನಿಯಾದ ಈ ಕಾಮಾದೇವಿಯು ತನ್ನ ಪರಿವಾರದೊಡನೆ ಅಂತರ್ಧಾನವನ್ನು ಹೊಂದಲಿ (ಅದೃಶ್ಯಳಾಗಲಿ.)

೧೯. ಮಾರ್ಕಂಡೇಯನು ಹೇಳಿದನು—ನರಕನಿಂದ ತಡೆಯಲ್ಪಟ್ಟು ಕೋಪಗೊಂಡ ಆ ಬ್ರಹ್ಮಪುತ್ರನಾದ ವಸಿಷ್ಠಮುನಿಯು ಹೀಗೆ ಹೇಳಿ ತನ್ನ ಸ್ಥಾನಕ್ಕೆ ತೆರಳಿದನು.

ಗತೇ ವಸಿಷ್ಠೇ ನರಕಃ ಶೀಘ್ರಂ ವಿಸ್ಮಯಸಂಯುತಃ ।
ಜಗಾಮ ದೇವೀಭವನಂ ನೀಲಕೂಟಂ ಮಹಾಗಿರಿಂ ॥ ೨೦ ॥

ತತ್ರ ಗತ್ವಾ ನ ಚಾಪಶ್ಯತ್ತ್ಯಾಮಾಖ್ಯಾಂ ಕಾಮರೂಪಿಣೀಂ ।
ನ ಯೋನಿಮಂಡಲಂ ತಸ್ಯಾಃ ಸರ್ವಾನ್ ಪರಿಕರಿಕೆರಾಂಸ್ತಥಾ ॥ ೨೧ ॥

ತತಃ ಸ ವಿಮನಾ ಭೂತ್ವಾ ಕ್ಷಿತಿಂ ಸಸ್ಮಾರ ಮಾತರಂ ।
ಪಿತರಂ ಚ ಜಗನ್ನಾಥಂ ನರಕಃ ಪ್ರಭುಮವ್ಯಯಂ ॥ ೨೨ ॥

ನ ತಾವಪಿ ತದಾ ಯಾತೌ ತಸ್ಯ ಪ್ರತ್ಯಕ್ಷತಾಂ ದ್ವಿಜಾಃ ।
ವ್ಯುತ್ಕ್ರಾಂತಸಮಯಸ್ಯೇತಿ ನೀತಿಹೀನಸ್ಯ ಶಂಭವೇ ॥ ೨೩ ॥

ಚಿರಂ ಪ್ರತೀಕ್ಷ್ಯ ತೌ ತತ್ರ ಭೌಮೋ ವಜ್ರಧ್ವಜಸ್ತದಾ ।
ಅಪ್ರಾಪ್ತಕ್ಷಿತಿವಿಷ್ಣುಃ ಸ ಸಶೋಕಃ ಸ್ವಂ ನಿವೇಶನಂ ॥ ೨೪ ॥

---

೨೦. ವಸಿಷ್ಠನು ಹೊರಟುಹೋದನಂತರ ನರಕನು ಭಯಗೊಂಡು ಆಗಲೇ ನೀಲಕೂಟಗಿರಿಯಲ್ಲಿರುವ ಕಾಮಾಖ್ಯಾದೇವಿಯ ದೇವಾಲಯಕ್ಕೆ ಹೋದನು.

೨೧. ಅವನು ಆ ದೇವಾಲಯಕ್ಕೆ ಹೋಗಿನೋಡಲು ಆ ಕಾಮಾದೇವಿಯು ಅವನಿಗೆ ಕಾಣಿಸಲೇಯಿಲ್ಲವು. ಅವಳ ಯೋನಿಮಂಡಲವಾಗಲೀ ಅವಳ ಪರಿವಾರವಾಗಲೀ ಯಾವುದೂ ಕಾಣಿಸಲಿಲ್ಲವು.

೨೨. ಅನಂತರ ಆ ನರಕನು ಮನಸ್ಸಿನಲ್ಲಿ ಬಹಳ ವ್ಯಾಕುಲಗೊಂಡು ತನ್ನ ತಾಯಿಯಾದ ಭೂದೇವಿಯನ್ನೂ, ಮತ್ತು ಪ್ರಭುವಾಗಿಯೂ, ನಾಶವಿಲ್ಲದವನಾಗಿಯೂ, ಜಗದೊಡೆಯನೂ ಆದ ತನ್ನ ತಂದೆ ವಿಷ್ಣುವನ್ನೂ ಸಹ ಸ್ಮರಿಸಿದನು.

೨೩. ಎಲೈ ಬ್ರಾಹ್ಮಣರೇ! ನೀತಿರಹಿತನಾದ ಆ ನರಕನಿಗೆ ಮರಣಕಾಲವು ಸಮೀಪಿಸಿದ್ದರಿಂದ ವಿಷ್ಣುವೂ ಮತ್ತು ಭೂದೇವಿಯೂ ಪ್ರತ್ಯಕ್ಷರಾಗಲಿಲ್ಲ.

೨೪. ಹೀಗೆ ದೇವೀದೇವಾಲಯದಲ್ಲಿ ವಜ್ರಧ್ವಜನಾದ ನರಕನು, ಭೂದೇವಿಯನ್ನೂ ವಿಷ್ಣುವನ್ನೂ ನಿರೀಕ್ಷಿಸುತ್ತಾ ಬಹಳಹೊತ್ತು ಇದ್ದನು. ಆಮೇಲೆ ಅವರು ಕಾಣದೆ ಇರಲು ಬಹಳ ದುಃಖವುಳ್ಳವನಾಗಿ ತನ್ನ ಮನೆಗೆ ಹೊರಟನು.

ಸ ಗಚ್ಛನ್ ಸ್ವಗೃಹಂ ಭೌಮಃ ಪುರೀಂ ಸ್ವಾಂ ದೃಷ್ಟವಾಂಸ್ತು ಸಃ ।
ಪೂರ್ವಶ್ರಿಯಾ ಪರಿತ್ಯಕ್ತಾಂ ಮಲಿನಾಂ ವನಿತಾಮಿವ ॥ ೨೫ ॥

ದೇವ್ಯಾಮಂತರ್ಹಿತಾಯಾಂ ತು ವೇದವಾದವಿವರ್ಜಿತಂ ।
ಪುಣ್ಯಸ್ವಲ್ಪದಾರಜನಂ ತತ್ಪುರಂ ಸಮುಪದ್ಯತ ॥ ೨೬ ॥

ನ ದೇವಾಸ್ತತ್ರ ಗಚ್ಛಂತಿ ನ ವಿಪ್ರಾ ನ ಮಹರ್ಷಯಃ ।
ಬಭೂವ ನಗರಂ ತಸ್ಯ ಸ್ವಲ್ಪಯಜ್ಞಕ್ರಿಯೋತ್ಸವಂ ॥ ೨೭ ॥

ಈತಯೋ ಬಹವೋ ಜಾತಾ ಮೃತಾಶ್ಚ ಬಹವೋ ಜನಾಃ ।
ಲೌಹಿತ್ಯನದರಾಜೋಽಪಿ ಹೀನತೋಯಸ್ತದಾಽಭವತ್ ॥ ೨೮ ॥

ಬಹೂನಿ ವಿಪರೀತಾನಿ ದೃಷ್ಟ್ವಾ ಸ ನರಕಸ್ತದಾ ।
ಮೇನೇ ಮರಣಮಾಸನ್ನಮಾತ್ಮನೋ ಬ್ರಹ್ಮಶಾಪತಃ ॥ ೨೯ ॥

೨೫-೨೬. ದಾರಿಯಲ್ಲಿ ಹೋಗುತ್ತಾ ನರಕನು ಮೊದಲಿನ ಕಾಂತಿಯಿಲ್ಲದುದೂ ಮಲಿನವಾದ ಸ್ತ್ರೀಯಂತೆ ಮಲಿನವಾದುದೂ ಕಾಮಾಖ್ಯಾದೇವಿಯು ಅಂತರ್ಧಾನ ಳಾದ್ದರಿಂದ ವೇದಶಾಸ್ತ್ರಗಳ ಘೋಷವಿಲ್ಲದುದೂ ಪುಣ್ಯಕರ್ಮದಲ್ಲಿ ನಿರತರಾದ ಅಲ್ಪ ಜನರುಳ್ಳದುದೂ ಆದ ತನ್ನ ಪಟ್ಟಣವನ್ನು ನೋಡಿದನು.

೨೭. ಮತ್ತು ಆ ನಗರಕ್ಕೆ ದೇವತೆಗಳೂ, ಬ್ರಾಹ್ಮಣರೂ, ಮಹರ್ಷಿಗಳೂ, ಬರುವುದನ್ನೇ ಬಿಟ್ಟರು. ಮತ್ತು ಯಜ್ಞಗಳೂ ಉತ್ಸವಗಳೂ ಆ ನಗರದಲ್ಲಿ ಅತ್ಯಲ್ಪ ವಾಗಿ ನಡೆಯುತ್ತಿದ್ದವು.

೨೮. ಮತ್ತು ಹೆಚ್ಚಾದ ಈತಿಬಾಧೆಯೂ, ರೋಗಾದ್ಯುಪದ್ರವಗಳೂ ಉಂಟಾಗಿ ಅನೇಕಜನರು ಮೃತರಾದರು. ಆ ಪಟ್ಟಣದಲ್ಲಿ ಹರಿಯುತ್ತಿದ್ದ ಲೌಹಿತ್ಯವೆಂಬ ನದಿಯ ನೀರೂ ಬತ್ತಿಹೋಯಿತು.

೨೯. ಈರೀತಿಯಾಗಿ ಅನೇಕ ದುಃಶಕುನಗಳನ್ನು ಆ ನರಕನು ನೋಡಿ ತನಗೆ ಬ್ರಾಹ್ಮಣ ಶಾಪದಿಂದ ಮರಣವು ಸನ್ನಿಹಿತವಾಯಿತೆಂದು ತಿಳಿದನು.

ತತಃ ಪ್ರಾಗ್ಜ್ಯೋತಿಷಾಧ್ಯಕ್ಷಃ ಶೋಕವಿಪ್ಲವಚೇತನಃ ।
ಚಿಂತಯನ್ಮನಸಾ ಮಿತ್ರಂ ಬಾಣಂ ಬಲಿಸುತಂ ಯಯೌ ॥ ೩೦ ॥

ಸಖಾ ಪ್ರಾಣಸಮಃ ಸೋಽಸ್ಯ ಸತತಾನ್ಯೋನ್ಯರಕ್ಷಣೇ ।
ತತ್ಪರೌ ಬಾಣನರಕೌ ಸ್ವರ್ವೈದ್ಯಾವಶ್ವಿನಾವಿವ ॥ ೩೧ ॥

ಏತಸ್ಮಿನ್ನಂತರೇ ಬಾಣೋ ಮಿತ್ರಂ ಶಂಭುಸಖೋ ಬಲೀ ।
ಅನುಕೂಲಯಿತಾ ಮಂತ್ರಪ್ರದಾನೇನ ಮಹಾ ಬುಧಃ ॥ ೩೨ ॥

ಇತಿ ಚಾಸೀನ್ಮತಿಸ್ತಸ್ಯ ವಜ್ರಕೇತೋಸ್ತದಾಽಚಲಾ ।
ದೂತಂ ಚ ಪ್ರಾಹಿಣೋದ್ದೀಪ್ತಂ ಬಾಣಸ್ಯ ನಗರಂ ಪ್ರತಿ ॥ ೩೩ ॥

ಸ ಶೋಣಿತಪುರಂ ಗತ್ವಾ ಸ್ಯಂದನೇನಾಶುಗಾಮಿನಾ ।
ತತೋ ಭೌಮಸ್ಯ ವೃತ್ತಾಂತಂ ಬಾಣಾಯಾಶು ನ್ಯವೇದಯತ್ ॥ ೩೪ ॥

---

೩೦. ಅನಂತರ ಪ್ರಾಗ್ಜ್ಯೋತಿಷನಗರಕ್ಕಧಿಪತಿಯಾದ ನರಕನು ದುಃಖದಿಂದ ಮನಸ್ಸಿನಲ್ಲಿ ಬಹಳವಾಗಿ ನೊಂದು ತನಗೆ ಮಿತ್ರನೂ, ಬಲಿಚಕ್ರವರ್ತಿಯ ಮಗನೂ ಆದ ಬಾಣಾಸುರನನ್ನು ಮನಸ್ಸಿನಲ್ಲಿ ನೆನೆದನು.

೩೧. ಮತ್ತು ಆ ಬಾಣಾಸುರನು ನರಕನಿಗೆ ಪರಮಮಿತ್ರನಾಗಿದ್ದನು. ಆ ಬಾಣಾಸುರನೂ ನರಕನೂ ಪರಸ್ಪರವಾಗಿ ರಕ್ಷಣೆಮಾಡತಕ್ಕ ವಿಷಯದಲ್ಲಿ ದೇವತೆಗಳ ವೈದ್ಯರಾದ ಅಶ್ವಿನೀದೇವತೆಗಳಂತೆ ಪ್ರಿಯಮಿತ್ರರೂ ಪ್ರಾಣಕ್ಕೆ ಸಮಾನರೂ ಆಗಿದ್ದರು.

೩೨-೩೩. ಇಂತಹ ಸಮಯದಲ್ಲಿ ಶಂಕರನ ಸಖನೂ ಬಲಶಾಲಿಯೂ ತನ್ನ ಮಿತ್ರನೂ ಆದ ಬಾಣಾಸುರನು ಸರಿಯಾದ ತಿಳುವಳಿಕೆಯನ್ನು ಕೊಟ್ಟು ತನಗೆ ಸಹಾಯಮಾಡುವನೆಂದು ತಿಳಿದು ನರಕನು ಸಮರ್ಥನಾದ ದೂತನೊಬ್ಬನನ್ನು ಬಾಣನ ರಾಜಧಾನಿಗೆ ಕಳುಹಿಸಿಕೊಟ್ಟನು.

೩೪. ಆ ದೂತನು ವೇಗವಾದ ರಥವನ್ನೇರಿ ಶೋಣಿತಪುರಕ್ಕೆ ಹೋಗಿ ಅಲ್ಲಿ ಬಾಣಾಸುರನಿಗೆ ನರಕನು ಹೇಳಿಕಳುಹಿಸಿದ ವೃತ್ತಾಂತವನ್ನರುಹಿದನು.

ಯಥಾ ಶಪ್ತೋ ವಸಿಷ್ಠೇನ ಯಥಾ ಚಾಂತರ್ಹಿತಾಂಬಿಕಾ ।
ಯಥಾ ವಿಘ್ನಃ ಪುರವರೇ ಜಾತಃ ಪ್ರಾಗ್ಜ್ಯೋತಿಷಾಹ್ವಯೇ ॥ ೩೫ ॥

ಸಮುಯಸ್ಯ ವ್ಯತಿಕ್ರಾಂತಿರ್ಭೂಮಿಮಾಧವಯೋರ್ಯಥಾ ।
ತಥಾ ಸ ದೂತೋ ಭೌಮಸ್ಯ ಶಶಂಸ ಬಲಿಸೂನವೇ ॥ ೩೬ ॥

ಸ ಸಮಾ ಕರ್ಣ್ಯ ಮಿತ್ರಸ್ಯ ಸಮ್ಯಗ್ದೈವಪರಾಭವಂ ।
ಸ್ವಯಂ ಜಗಾಮ ನರಕಂ ಸಭಾಜಯಿತುಮೀಶ್ವರಃ ॥ ೩೭ ॥

ಸ ಕಾಂಚನವಿಚಿತ್ರಾಂಗಂ ಯುಕ್ತಮುಚ್ಚಶತೈಸ್ತ್ರಿಭಿಃ ।
ಲೋಹಚಕ್ರಂ ಚ ವೈಯಾಘ್ರಂ ಮಯೂರಧ್ವಜಭೂಷಿತಂ ॥ ೩೮ ॥

ಹೇಮದಂಡಸಿತಚ್ಛತ್ರಚ್ಛಾದಿತಂ ಕಿಂಕಿಣೀಗಣೈಃ ।
ನಾನಾರತ್ನೌಘರಚಿತಮಾರುರೋಹ ಮಹಾರಥಂ ॥ ೩೯ ॥

೩೫-೩೬. ವಸಿಷ್ಠಮುನಿಯು ಶಪಿಸಿದುದನ್ನೂ ಕಾಮಾಖ್ಯಾದೇವಿಯು ಅಂತರ್ಧಾನಳಾದುದನ್ನೂ ಪ್ರಾಗ್ಜ್ಯೋತಿಷಪುರದಲ್ಲಿ ಅನೇಕ ತೊಂದರೆ ಉಪದ್ರವಗಳು ಉದಯಿಸಿರುವುದನ್ನೂ ಭೂದೇವಿ ಮತ್ತು ನಾರಾಯಣರು ಮಾಡಿದ ನಿಬಂಧನೆಯನ್ನು ನರಕನು ಮೀರಿದುದನ್ನೂ ಬಾಣಾಸುರನಿಗೆ ಆ ದೂತನು ಹೇಳಿದನು.

೩೭. ಇದನ್ನು ಕೇಳಿ ರಾಜನಾದ ಬಾಣನು ತನ್ನ ಮಿತ್ರ ನರಕನಿಗಾದ ದೈವ ತಿರಸ್ಕಾರವನ್ನು ಅಂದರೆ ಬ್ರಾಹ್ಮಣ ಶಾಪ, ದೇವಿಯ ಅಂತರ್ಧಾನ ಮುಂತಾದುವು ಗಳನ್ನು ಕೇಳಿ ಆ ನರಕನನ್ನು ಸಮಾಧಾನಗೊಳಿಸಲು ಪ್ರಾಗ್ಜ್ಯೋತಿಷಪುರಕ್ಕೆ ಹೊರಟನು.

೩೮-೩೯. ಆಗ ಬಾಣನು ಸುವರ್ಣಮಯವಾದ ತನ್ನ ರಥವನ್ನೇರಿ ಹೊರ ಟನು. ಆ ರಥವು ಅನೇಕ ಅಲಂಕಾರಗಳಿಂದ ಕಂಗೊಳಿಸುತ್ತಿತ್ತು. ಅದಕ್ಕೆ ಮುನ್ನೂರು ಕುದುರೆಗಳನ್ನು ಕಟ್ಟಿದ್ದರು. ಅದರ ಚಕ್ರಗಳು ಉಕ್ಕಿನಿಂದ ಮಾಡಲ್ಪಟ್ಟಿದ್ದುವು. ಕುಳಿತುಕೊಳ್ಳಲು ಹುಲಿಯಚರ್ಮವನ್ನು ಹಾಸಿದ್ದರು. ನವಿಲುಗರಿಯಿಂದ ಮಾಡಿದ ಧ್ವಜಗಳಿಂದಲೂ, ಚಿನ್ನದ ದಂಡವುಳ್ಳ ಶ್ವೇತಚ್ಛತ್ರಿಯಿಂದಲೂ, ಕಿರುಗೆಜ್ಜೆಗಳು, ಅನೇಕ ರತ್ನಗಳು ಇವುಗಳಿಂದಲೂ ಆ ರಥವನ್ನು ಅಲಂಕರಿಸಿದ್ದರು. ಇಂತಹ ಮಹಾ ರಥವನ್ನು ಹತ್ತಿ ಕುಳಿತು ಬಾಣನು ನರಕನನ್ನು ನೋಡಲು ಹೊರಟನು.

ಸ ಸಹಸ್ರಭುಜಃ ಶ್ರೀಮಾನ್ ಚತುರಂಗಬಲೈರ್ಯುತಃ ।
ಪ್ರಾಗ್ಜ್ಯೋತಿಷಂ ಭೌಮಪುರಮಜಿರಾದಾಜಗಾಮ ಹ ॥ ೪೦ ॥

ತಮಾಸಾದ್ಯ ಮಹಾಬಾಹುರ್ಬಾಣಃ ಪ್ರಾಗ್ಜ್ಯೋತಿಷೇಶ್ವರಂ ।
ಹೀನಂ ಪೂರ್ವಶ್ರಿಯಾ ಮಿತ್ರಮಪಶ್ಯನ್ನಗರಂ ಚ ತತ್ ॥ ೪೧ ॥

ಸ ತೇನ ಪೂಜಿತೋ ಬಾಣೋ ಯಥಾಯೋಗ್ಯಂ ಸುತೇನ ಕೋಽಃ ।
ಪಪ್ರಚ್ಛ ಕಿಂನಿಮಿತ್ತಂ ತೇ ಹೀನಶ್ರೀಕಮಭೂತ್ಪುರಂ ॥ ೪೨ ॥

ಶರೀರಂ ಚ ಯಥಾಪೂರ್ವಂ ತಥಾ ನ ತವ ರಾಜತೇ ।
ಮನಶ್ಚ ತೇ ನಾತಿಹೃಷ್ಟಂ ತತ್ರ ಹೇತುಂ ವದಸ್ವ ಮೇ ॥ ೪೩ ॥

ಏವಮಾದೀನಿ ಪೃಷ್ಟಃ ಸ ನರಕಃ ಕ್ಷಿತಿನಂದನಃ ।
ಯಥಾ ವಸಿಷ್ಠಶಾಪೋಽಭೂತ್ತತ್ಸರ್ವಂ ತಸ್ಯ ಚಾಬ್ರವೀತ್ ॥ ೪೪ ॥

---

೪೦. ಸಾವಿರತೋಳುಗಳುಳ್ಳ ಆ ಬಾಣಾಸುರನು ನರಕನ ರಾಜಧಾನಿಯಾದ ಪ್ರಾಗ್ಜ್ಯೋತಿಷಪುರಕ್ಕೆ ರಥ, ಆನೆ, ಕುದುರೆ, ಕಾಲಾಳು ಇವುಗಳೊಡನೆ ತೆರಳಿದನು.

೪೧. ಅಲ್ಲಿಗೆ ಹೋಗಿ ವೀರನಾದ ಬಾಣನು ಮೊದಲಿನಂತೆ ಕಾಂತಿಯಿಲ್ಲದ ಪ್ರಾಗ್ಜ್ಯೋತಿಷಾಧಿಪತಿಯಾದ ನರಕನನ್ನೂ ಅವನ ನಗರವನ್ನೂ ನೋಡಿದನು.

೪೨-೪೩. ಅಲ್ಲಿ ಬಾಣನು ಭೂಪುತ್ರನಾದ ನರಕನಿಂದ ಯೋಗ್ಯವಾಗಿ ಸನ್ಮಾನಿತನಾಗಿ ಅವನನ್ನು ಕುರಿತು, ಎಲೈ ಮಿತ್ರನಾದ ನರಕನೇ! ನಿನ್ನ ಈ ಪಟ್ಟಣವು ಅದೇಕೆ ಕಳೆಗುಂದಿರುವುದು? ನಿನ್ನ ಶರೀರವೂ ಕೂಡ ಮೊದಲಿನಂತೆ ಕಾಂತಿಯುಳ್ಳದ್ದಾಗಿಲ್ಲವು. ನಿನ್ನ ಮನಸ್ಸೂ ಅಷ್ಟೊಂದು ಸಂತೋಷದಿಂದಿರುವಂತೆ ತೋರುವುದಿಲ್ಲ. ಇದಕ್ಕೆ ಕಾರಣವೇನು ಹೇಳು ಎಂದು ಕೇಳಿದನು.

೪೪. ಹೀಗೆ ಬಾಣನು ಕೇಳಲು ಭೂಪುತ್ರನಾದ ಆ ನರಕನು ತನಗೆ ವಸಿಷ್ಠ ಶಾಪವು ಬಂದ ಕಾರಣವನ್ನು ಹೇಳಿದನು.

ಯಚ್ಛ್ರುತಂ ಭೌಮವದನಾತ್ತದ್ದೂತಾವೇದಿತಂ ಪುರಾ ।
ಜ್ಞಾತ್ವಾ ತಥಾ ತಂ ಪ್ರೋವಾಚ ಬಾಣೋ ವಜ್ರಧ್ವಜಂ ಪುನಃ ॥ ೪೫ ॥

ನ ಹಿ ಮನ್ಯುಸ್ತ್ವಯಾ ಕಾರ್ಯಃ ಸುಖದುಃಖೇ ಶರೀರಿಣಾಂ ।
ಚಕ್ರವತ್ಪರಿವರ್ತೇತೆ ನೈತಾಭ್ಯಾಂ ಕೋಽಪಿ ಹೀಯತೇ ॥ ೪೬ ॥

ಪರಂ ತತ್ರ ಪ್ರತೀಕಾರಃ ಕಾರ್ಯೋ ಧೀರೈರ್ವಿಭೂತಯೇ ।
ಭವಾನಪಿ ಪ್ರತೀಕಾರಂ ಕರ್ತುಮರ್ಹತಿ ಸಂಪ್ರತಿ ॥ ೪೭ ॥

ಯ ಏವ ಮಾನುಷಃ ಪೃಥ್ವ್ಯಾಮಸಾಧಾರಣಭೂತಿಭಿಃ ।
ವರ್ಧತೇ ದಾನವೋ ವಾಪಿ ದೈತ್ಯೋ ವಾಪ್ಯಥವಾಽಸುರಃ ॥ ೪೮ ॥

ರಾಕ್ಷಸಃ ಕಿನ್ನರೋ ವಾಪಿ ಶಕ್ರಸ್ತಾನ್ಸಹತೇ ನ ಹಿ ।
ಸ ಕೌಟಿಲ್ಯಂ ದೈವಗಣೈಃ ಸಾರ್ಧಂ ಕುರ್ವನ್ನಿತಸ್ತತಃ ॥ ೪೯ ॥

---

೪೫. ಹಿಂದೆ ನರಕನ ದೂತನಿಂದ ತಿಳಿದ ವೃತ್ತಾಂತವೇ ಈಗ ನರಕನು ಹೇಳುತ್ತಿರುವನು ಎಂದು ತಿಳಿದು ಬಾಣನು ತಿರುಗಿ ಆ ನರಕನನ್ನು ಕುರಿತು ಹೀಗೆ ಹೇಳಿದನು.

೪೬. ಎಲೈ ನರಕನೇ ! ಇದಕ್ಕಾಗಿ ನೀನು ದುಃಖಪಡಲಾಗದು. ಸುಖದುಃಖ ಗಳು ರಥದ ಗಾಲಿಯಂತೆ ಒಂದಾಗುತ್ತಲೊಂದು ಪರಿವರ್ತಿಸುವುವು. ಅವುಗಳಿಂದ ಮನುಷ್ಯನಿಗೆ ಯಾವ ಹಾನಿಯೂ ಇಲ್ಲವು.

೪೭. ಆದರೆ ಧೀರನಾದವನು ದುಃಖಬರುವಂತಹ ಪ್ರಸಂಗದಲ್ಲಿ ಮುಂದಿನ ಕ್ಷೇಮಕ್ಕಾಗಿ ಪ್ರತೀಕಾರವನ್ನು ಮಾಡಬೇಕು ನೀನೂ ಸಹ ಈ ವಿಷಯದಲ್ಲಿ ಪ್ರತೀ ಕಾರವನ್ನು ಯೋಚಿಸಿ ಮಾಡುವವನಾಗು.

೪೮. ಭೂಮಿಯಲ್ಲಿ ಮನುಷ್ಯ, ದಾನವ, ದೈತ್ಯ ಅಥವಾ ಕಿನ್ನರ ಇವರಲ್ಲಿ ಯಾರೇ ಆಗಲಿ ತುಂಬಾ ಐಶ್ವರ್ಯದಿಂದ ಏಳಿಗೆಯುಳ್ಳವನಾಗುತ್ತಿದ್ದರೆ ಅವನನ್ನು ನೋಡಿ ಇಂದ್ರನು ಸಹಿಸುವುದಿಲ್ಲವು.

೪೯. ಆ ಇಂದ್ರನು ದೇವತೆಗಳೊಡನೆ ಅಲ್ಲಲ್ಲಿ ಏನಾದರೂ ಕುಯುಕ್ತಿ ಯನ್ನು ಮಾಡಿ ಯಾವುದಾದರೊಂದು ಕಪಟರೀತಿಯಿಂದ ಆ ಐಶ್ವರ್ಯವಂತನ ಐಶ್ವರ್ಯವನ್ನು ಹಾಳುಮಾಡುವನು.

ಯಥಾ ತಥಾ ಪ್ರಕಾರೇಣ ಭ್ರಂಶಯತ್ಯೇವ ತಂ ಶ್ರಿಯಂ ।
ತಸ್ಯ ಚೇಷ್ಟತಮೋ ದೇವೋ ವಿಷ್ಣುರ್ನಿತ್ಯಂ ಸನಾತನಃ ॥ ೫೦ ॥

ಸ ನ ಶಕ್ರಸ್ಯ ಕುರುತೇ ಮನೋಽನಿಷ್ಟಂ ಮನಾಗಪಿ ।
ಯಃ ಸಮಾರಾಧಯೇದ್ವಿಷ್ಣುಂ ಶಕ್ರಸ್ಯಾನಿಷ್ಟಕಾರಕಃ ॥ ೫೧ ॥

ಶಸ್ಯೈ ವರಂ ತು ಸಚ್ಛಿದ್ರಂ ದತ್ವಾ ತಂ ಶಾತಯತ್ಯಪಿ ।
ಚಿರಮಾರಾಧಿತೋವಿಷ್ಣುರಿಷ್ಟಾನ್ಕಾಮಾನ್ ಪ್ರಯಚ್ಛತಿ ॥ ೫೨ ॥

ಮಹತಾ ಕಾಯದುಃಖೇನ ಪೂಜಿತಃ ಸನ್ ಪ್ರಸೀದತಿ ।
ವಿನೇಷ್ಟದೇವತಾಪೂಜಾಂ ವಿಭೂತಿಮತುಲಾಂ ಪುಮಾನ್ ॥ ೫೩ ॥

ಕಃ ಪ್ರಾಪ್ನೋತಿ ಶ್ರುತಃ ಪೂರ್ವಂ ನ ವಾ ಪೂರ್ವತರಃ ಕ್ವಚಿತ್ ।
ತ್ವಯಾ ನಾರಾಧಿತಃ ಪೂರ್ವಂ ಬ್ರಹ್ಮ ವಾ ವಿಷ್ಣುರೀಶ್ವರಃ ॥ ೫೪ ॥

---

೫೦. ಆ ಇಂದ್ರನಿಗೆ ಪುರಾಣಪುರುಷನಾದ ವಿಷ್ಣುವು ಸದಾ ಬೇಕಾದವನು. ಆ ವಿಷ್ಣುವು ಇಂದ್ರನ ಮನಸ್ಸಿಗೆ ಅನಿಷ್ಟವಾದುದನ್ನು ಸ್ವಲ್ಪವೂ ಮಾಡುವುದಿಲ್ಲವು.

೫೧. ಇಂದ್ರನಿಗೆ ಅನಿಷ್ಟವನ್ನುಂಟುಮಾಡುವಂತಹ ರೀತಿಯಲ್ಲಿ ವರವನ್ನು ಪಡೆಯಲು ಯಾವನು ವಿಷ್ಣುವನ್ನು ಆರಾಧಿಸುವನೋ ಅವನಿಗೆ ವಿಷ್ಣುವು ಏನಾದರೊಂದು ಕಪಟವನ್ನಿಟ್ಟು ವರವನ್ನು ಕೊಟ್ಟು ಮುಂದೆ ಆ ಕಪಟದ ಮೂಲಕ ಅವನನ್ನು ನಾಶಗೊಳಿಸುವನು.

೫೨. ಬಹಳಕಾಲ ಆರಾಧಿಸಿದರೇನೇ ವಿಷ್ಣುವು ಬೇಕಾದ ವರಗಳನ್ನು ನೀಡುವನು. ಹೆಚ್ಚಾದ ಶರೀರಕ್ಲೇಶದಿಂದ ಪೂಜಿಸಿದರೆ ಅವನು ಪ್ರಸನ್ನನಾಗುವನು.

೫೩. ತನ್ನ ಇಷ್ಟದೇವತೆಯನ್ನು ಪೂಜಿಸದೆ ಯಾವ ಮನುಷ್ಯನೂ ಐಶ್ವರ್ಯವಂತನಾಗಲಾರನು. ಅಂತಹ ಮನುಷ್ಯನನ್ನು ಹಿಂದೆಂದೂ ನಾವು ಕೇಳಿರುವುದಿಲ್ಲವು.

೫೪. ಆದರೇ ನೀನು ವಿಷ್ಣುವನ್ನಾಗಲೀ, ಬ್ರಹ್ಮನನ್ನಾಗಲೀ, ಶಂಕರನನ್ನಾಗಲೀ ಆರಾಧಿಸಲಿಲ್ಲವು. ಆದಕಾರಣ ನಿನಗೂ ನಿನ್ನ ದೇಶಕ್ಕೂ ಅನೇಕ ತೊಂದರೆಗಳುಂಟಾಗಿರುವುವು.

ತೇನ ತೇಽದ್ಯ ಮಹಾವಿಷ್ಣೋ ಉತ್ಪನ್ನಾ ವಿಷಯೇ ತವ ।
ಯೋಽವಾ ವಿಷ್ಣುಃ ಪಾಲಕಸ್ತೇ ನ ನಿಸರ್ಗಾನುಕಂಪಕಃ ॥ ೫೫ ॥

ಕಿಂ ತು ತೇ ಸ ಕ್ಷಿತೇರ್ವಾಕ್ಯಾತ್ತಯಾಚಾರಾಧಿತೋ ಮುಹುಃ ।
ದತ್ತಂ ಛಿದ್ರಂ ಚ ತೇ ವಿಷ್ಣುರ್ನಾಪರಾಧ್ಯಸ್ತ್ವಯಾ ದ್ವಿಜಾಃ ॥ ೫೬ ॥

ಇತೋನ್ಯಥಾ ತ್ವಂ ಭವಿತಾ ಹತಶ್ರೀರಿತಿ ನಃ ಶ್ರುತಂ ।
ಅಪರಾಧ್ಯಸ್ತ್ವಯಾ ಭೂಪ ವಸಿಷ್ಠಃ ಪರಮೋ ಮುನಿಃ ॥ ೫೭ ॥

ತೇನ ಸ್ಮರಣಮಾತ್ರೇಣ ನಾಯಾತೌ ಕ್ಷಿತಿಮಾಧವೌ ।
ತಸ್ಮಾತ್ತ್ವಂ ಮಿತ್ರ ಬುಧ್ಯಸ್ವ ಕೌಟಿಲ್ಯಂ ಹರಿಮೇಧಸಃ ॥ ೫೮ ॥

ನಾಧುನಾ ಯಜ್ಯತೇ ಭೂಮಿ ತವೌದಾಸೀನತಾ ಕೃತಿಃ ।
ಯತ್ತೇ ಮನಸಿ ತಾತೋಽಯಮಿತಿ ಸಂಪ್ರತ್ಯಯಃ ಸ ತೇ ॥ ೫೯ ॥

---

೫೫. ನಿನ್ನನ್ನು ರಕ್ಷಿಸುವಂತಹ ಆ ವಿಷ್ಣುವಿಗೆ ನಿನ್ನಲ್ಲಿ ಸ್ವಾಭಾವಿಕವಾಗಿ ದಯೆಯಿಲ್ಲವು. ಆದರೆ ಭೂದೇವಿಯು ಅವನನ್ನು ತುಂಬಾ ಆರಾಧಿಸಿ ಬೇಡಿಕೊಂಡಿದ್ದರಿಂದ ಅವಳ ಮಾತಿನಂತೆ ನಿನ್ನಲ್ಲಿ ಸ್ವಲ್ಪಮಟ್ಟಿಗೆ ದಯೆಯುಳ್ಳವನಾಗಿರುವನು.

೫೬. ವಿಷ್ಣುವೇ ನಿನ್ನಲ್ಲಿ ಕಪಟವನ್ನಿಟ್ಟು ಅಂದರೆ ಬ್ರಾಹ್ಮಣರಿಗೆ ತೊಂದರೆ ಮಾಡಿದರೆ ನಿನ್ನ ಐಶ್ವರ್ಯವು ಹೋಗುವುದು ಎಂದು ಅನುಗ್ರಹಿಸಿರುವನು. ಇದರಲ್ಲಿ ಬ್ರಾಹ್ಮಣರ ದೋಷವೇನೂ ಇಲ್ಲವು. ಬ್ರಾಹ್ಮಣ ಶಾಪದಿಂದ ಇನ್ನು ಮುಂದೆ ಐಶ್ವರ್ಯ ಹೀನವಾಗುವಿಯೆಂದು ಕೇಳಿದೆನು.

೫೭. ಎಲೈ ರಾಜನೇ ! ಮಹಾಮುನಿಯಾದ ವಸಿಷ್ಠನ ವಿಷಯದಲ್ಲಿ ನೀನು ತಪ್ಪನ್ನು ಮಾಡಿರುವೆ. ಆದಕಾರಣ ನೀನು ಸ್ಮರಿಸಿದೊಡನೆಯೇ ಭೂದೇವಿ ಮತ್ತು ನಾರಾಯಣರು ನಿನ್ನ ಬಳಿಗೆ ಬರಲಿಲ್ಲವು.

೫೮. ಇದರಿಂದ ವಿಷ್ಣುವಿನ ಬುದ್ಧಿ ಎಷ್ಟೊಂದು ಕುಟಿಲವಾದುದೆಂದು ಯೋಚಿಸು. ಎಲೈ ಮಿತ್ರನಾದ ನರಕನೇ ! ಈಗ ನೀನು ಈರೀತಿಯಾಗಿ ಉದಾಸೀನವಾಗಿರುವುದು ಯುಕ್ತವಲ್ಲವು.

೫೯. ಆದರೆ ವಿಷ್ಣುವು ನನ್ನ ತಂದೆ ಎಂದು ನಿನಗೆ ನಂಬಿಕೆಯಿರುವುದು. ಹಾಗಲ್ಲವು. ವರಾಹಮೂರ್ತಿಯು ನಿನ್ನ ತಂದೆಯು. ಅವನು ಲೋಕಾಂತರಕ್ಕೆ ಹೋಗಿ (ಮೃತನಾಗಿ) ಬಹಳ ದಿವಸಗಳಾದವು.

ವರಾಹ ಏವ ತೇ ತಾತಃ ಸ ಚ ಲೋಕಾಂತರಂ ಗತಃ ।
ವರಾಹೋಽಪಿ ಹರೇರಂಶ ಇತಿ ಯಚ್ಛ್ರೂಯತೇ ತ್ವಯಾ ॥ ೬೦ ॥

ತಸ್ಯಾಂಶ ಇತ್ಯನುಕ್ರೋಶಃ ಕೇನ ವಾ ಕ್ರಿಯತೇ ವದ ।
ತಸ್ಮಾತ್ತ್ವಂ ಕುರು ಶಂಭೋರ್ವಾ ಬ್ರಹ್ಮಣೋ ವಾಧುನಾರ್ಚನಂ ॥ ೬೧ ॥

ಸ ತೇ ಪ್ರಸನ್ನಃ ಪರಮನಿಷ್ಟಕಾಮಂ ಪ್ರದಾಸ್ಯತಿ ।
ವಿಷ್ಣೋ ವಾ ಮುನಿಶಾಪೋ ವಾ ಮಹೇತಿರ್ವಾತಿಪೀಡಕಃ ॥ ೬೨ ॥

ವಿಧೌ ಪ್ರಸನ್ನೇ ಶಂಭೌ ವಾ ನ ಚಿರಾತ್ಪ್ರಕ್ಷಯಮೇಷ್ಯತಿ ।

॥ ಮಾರ್ಕಂಡೇಯ ಉವಾಚ ॥

ಜಾತಸಂಪ್ರತ್ಯಯೋ ಭೌಮೋ ಬಾಣಸ್ಯ ವಚನಾತ್ತದಾ ॥ ೬೩ ॥

ಸುಪ್ರೀತಃ ಸಮುವಾಚೇದಂ ಧೀಮಾನ್ ಘರ್ಘರನಿಃಸ್ವನಃ ।

॥ ಭೌಮ ಉವಾಚ ॥

ಯತ್ತ್ವಯಾ ಗದಿತಂ ಬಾಣ ಹಿತಂ ಮೇ ಮಿತ್ರವತ್ಸಲ ॥ ೬೪ ॥

---

೬೦. ಆ ವರಾಹನು ಈ ವಿಷ್ಣುವಿನ ಅಂಶವೆಂದು ಯಾರಾದರೂ ನಂಬುವರೆ?

೬೧. ಆದಕಾರಣ ನೀನು ಶಂಕರನನ್ನಾಗಲೀ, ಬ್ರಹ್ಮನನ್ನಾಗಲೀ ಅರ್ಚಿಸು. ಅವರು ನಿನಗೆ ಪ್ರಸನ್ನರಾಗಿ ನಿನಗೆ ಬೇಕಾದ ವರವನ್ನು ಕೊಟ್ಟು ನಿನ್ನ ಇಷ್ಟಾರ್ಥವನ್ನು ನೆರವೇರಿಸುವರು.

೬೨. ಬ್ರಹ್ಮನಾಗಲೀ, ಶಂಕರನಾಗಲೀ ಪ್ರಸನ್ನರಾದರೆ, ಈ ವಿಘ್ನಗಳೂ, ಮುನಿಶಾಪವೂ, ಅತಿಯಾದ ಈತಿಬಾಧೆಗಳೂ ಸಹ ಕೂಡಲೇ ನಷ್ಟವಾಗುವುವು.

೬೩. ಮಾರ್ಕಂಡೇಯನು ಹೇಳಿದನು:—ಈರೀತಿಯಾದ ಬಾಣನ ಮಾತು ಗಳಲ್ಲಿ ನಂಬಿಕೆಯನ್ನಿಟ್ಟು ಆ ನರಕನು ಆಗ ಅತ್ಯಂತ ಸಂತೋಷಗೊಂಡು ಮೇಘದಂತೆ ಗಂಭೀರವಾದ ಧ್ವನಿಯಿಂದ ಹೀಗೆ ಹೇಳಿದನು.

೬೪. ನರಕನು ಹೇಳಿದನು:— ಎಲೈ ಬಾಣನೇ! ನೀನು ಮಿತ್ರನಲ್ಲಿ ತುಂಬಾ ಪ್ರೀತಿಯುಳ್ಳವನು. ನೀನು ನನ್ನ ಹಿತಕ್ಕಾಗಿ ಯಾವುದನ್ನು ಹೇಳಿರುವೆಯೋ ಅದರಂತೆ ಮಾಡಲು ನಾನು ಈಗ ತಪಸ್ಸನ್ನಾಚರಿಸುವೆನು.

ತತ್ಕಾರ್ಯಮುಚಿರಾದೇವ ತಪಶ್ಚರಣಮುತ್ತಮಂ ।
ವಿಷ್ಣುರ್ನಾರಾಧನಿಯೋ ಮೇ ತತ್ರ ಹೇತುಸ್ತ್ವಯೋದಿತಃ ॥ ೬೫ ॥

ನೈವಾರಾಧ್ಯಸ್ತಥಾ ಶಂಭುರಂತರ್ಗುಪ್ತಃ ಸ ಮೇ ಪುರೇ ।
ತಸ್ಮಾದ್ಬ್ರಹ್ಮಾ ಸಮಾರಾಧ್ಯೋ ವಚನಾತ್ತವ ಮಿತ್ರಕ ॥ ೬೬ ॥

ತತ್ಪುತ್ರಸ್ಯ ಮಹಾಬಾಹೋ ಲೌಹಿತ್ಯಸ್ಯಾಂಬುಸನ್ನಿಧೌ ।
ಭವತಾಧ್ಯಾಪಿತಶ್ಚಾಹಂ ಶಿಷ್ಯೋಽಥ ಗುರುಣಾ ಯಥಾ ॥ ೬೭ ॥

ಮಿತ್ರಂ ಮಿತ್ರಂ ಯಥಾ ಧೀರ ಸಾಮ್ನಾ ಪರಮವಲ್ಗುನಾ ।

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಸ ಮಹಾಬಾಹುರ್ಬಾಣಂ ವಜ್ರಧ್ವಜಸ್ತದಾ ॥ ೬೯ ॥

ಯಥಾವತ್ಪೂಜಯಾಮಾಸ ತನ್ಮಿತ್ರಂ ಮಿತ್ರವತ್ಸಲಃ ।
ಅರ್ಚಯಿತ್ವಾ ಯಥಾಯೋಗ್ಯಂ ಪ್ರಸ್ಥಾಪ್ಯ ಚ ಬಲೇಃ ಸುತಂ ॥ ೭೯ ॥

---

೬೫. ನಾನು ವಿಷ್ಣುವನ್ನು ಆರಾಧಿಸುವುದಿಲ್ಲವು. ಆ ವಿಷಯದಲ್ಲಿ ಕಾರಣವನ್ನು ನೀನೇ ಹೇಳಿರುವೆ. ಅದರಂತೆ ಶಂಕರನನ್ನೂ ಆರಾಧಿಸುವುದಿಲ್ಲವು. ಅವನು ನನ್ನ ನಗರದಲ್ಲಿಯೇ ಗುಪ್ತವಾಗಿ ಸೇರಿಕೊಂಡಿರುವನು.

೬೬. ಆದಕಾರಣ ಎಲೈ ವೀರನೇ! ನಿನ್ನ ಮಾತಿನಂತೆ ಬ್ರಹ್ಮನನ್ನು ಅವನ ಪುತ್ರನಾದ ಲೌಹಿತ್ಯವೆಂಬ ನದಿಯ ತೀರದಲ್ಲಿ ಆರಾಧಿಸುವೆನು.

೬೭. ಈ ವಿಷಯದಲ್ಲಿ ನೀನು ಶಿಷ್ಯನಿಗೆ ಗುರುವು ಉಪದೇಶಿಸುವಂತೆಯೂ, ಮಿತ್ರನು ಮಿತ್ರನಿಗೆ ತಿಳಿಸುವಂತೆಯೂ, ಒಳ್ಳೆಯ ಮಾತುಗಳಿಂದ ನನಗೆ ತಿಳಿಸಿರುವೆ.

೬೮—೭೦. ಮಾರ್ಕಂಡೇಯನು ಹೇಳಿದನು:—ಹೀಗೆ ಹೇಳಿ ವೀರನೂ, ಮಿತ್ರವತ್ಸಲನೂ ಆದ ಆ ನರಕನು ಆಗ ತನ್ನ ಮಿತ್ರನಾದ ಆ ಬಾಣನನ್ನು ಯಥೋಚಿತವಾಗಿ ಸತ್ಕರಿಸಿ ಅತ್ಯುಗ್ರವಾಗಿ ಬ್ರಹ್ಮನನ್ನು ಆರಾಧಿಸಲಿಚ್ಛೆಯಿಂದ ಲೌಹಿತ್ಯವೆಂಬ ಶ್ರೇಷ್ಠವಾದ ನದಿಯ ತೀರದಲ್ಲಿರುವ ಬ್ರಹ್ಮಗಿರಿಯನ್ನೇರಿ ಅಲ್ಲಿ ತಪಸ್ಸನ್ನಾಚರಿಸ ತೊಡಗಿದನು.

ಬ್ರಹ್ಮಾರಾಧನಮತ್ಯುಗ್ರಂ ಕರ್ತುಮಿಚ್ಛನ್ ಕ್ಷಿತೇಃ ಸುತಃ ।
ಸ ತೀರೇ ನದರಾಜಸ್ಯ ಲೌಹಿತ್ಯಸ್ಯ ಮಹಾತ್ಮನಃ ॥ ೭೦ ॥

ಬ್ರಹ್ಮಾಚಲಂ ಸಮಾರುಹ್ಯ ತಪಸ್ತಪ್ತುಮುಪಸ್ಥಿತಃ ।
ಸ ಮಾನುಷೇಣ ಮಾನೇನ ಕ್ಷಿತಿಪುತ್ರಃ ಶತಂ ಸಮಾಃ ॥ ೭೧ ॥

ಜಲಾಹಾರವ್ರತೇನೈವ ಸಮಾನರ್ಚ ಪಿತಾಮಹಂ ।
ಸಂತುಷ್ಟಃ ಶತವರ್ಷಾಂತೇ ಬ್ರಹ್ಮಾ ಲೋಕಪಿತಾಮಹಃ ॥ ೭೨ ॥

ಪ್ರತ್ಯಕ್ಷೀಭೂಯ ನರಕಸ್ಯಾಗ್ರತಃ ಸಮುಪಸ್ಥಿತಃ ।
ಪ್ರೀತೋಽಸ್ಮಿ ತೇ ವರಂ ದಾಸ್ಯೇ ವರಂ ವರಯ ಸುವ್ರತ ॥ ೭೩ ॥

ಇತಿ ಪ್ರೋವಾಚ ನರಕಂ ಸ ತದಾ ಕಮಲಾಸನಃ ।
ಸ ದೃಷ್ಟ್ವಾ ಸರ್ವಲೋಕೇಶಂ ಪ್ರತ್ಯಕ್ಷಂ ಕಮಲಾಸನಂ ॥ ೭೪ ॥

ಪ್ರಣಮ್ಯ ಪ್ರಾಂಜಲಿಃ ಪ್ರೋಚೇ ವಿನಯಾನತಕಂಧರಃ ।
ದೇವಾಸುರೇಭ್ಯೋ ರಕ್ಷೋಭ್ಯಃ ಸರ್ವೇಭ್ಯೋ ದೇವಯೋನಿತಃ ॥ ೭೫ ॥

---

೭೦. ಅಲ್ಲಿ ನರಕನು ಮನುಷ್ಯಗಣನೆಯಂತೆ ನೂರುವರ್ಷಗಳಕಾಲ ಕೇವಲ ಜಲವನ್ನೇ ಆಹಾರವನ್ನಾಗಿ ಸೇವಿಸುತ್ತ ಬ್ರಹ್ಮನನ್ನು ಅರ್ಚಿಸಿದನು.

೭೨-೭೩. ನೂರುವರ್ಷಗಳು ಕಳೆಯಲು ಲೋಕಕ್ಕೆ ತಾತನೆನಿಸಿದ ಬ್ರಹ್ಮನು ನರಕನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಅವನ ಎದುರಿಗೆ ಬಂದು ಅವನನ್ನು ಕುರಿತು ಎಲೈ ತಪಸ್ವಿಯೇ! ನಿನ್ನ ತಪಸ್ಸಿಗೆ ಮೆಚ್ಚಿರುವೆನು ಬೇಕಾದ ವರವನ್ನು ಕೇಳಿಕೋ ಎಂದು ಹೇಳಿದನು.

೭೪. ಆ ನರಕನು ಜಗತ್ತಿಗೆಲ್ಲಾ ಒಡೆಯನಾದ ಬ್ರಹ್ಮನು ಪ್ರತ್ಯಕ್ಷನಾಗಿರುವುದನ್ನು ನೋಡಿ ಅವನಿಗೆ ನಮಸ್ಕರಿಸಿ ಅಂಜಲಿಬದ್ಧನಾಗಿ ವಿನಯದಿಂದ ಶಿರಸ್ಸನ್ನು ಬಗ್ಗಿಸಿ ಹೀಗೆ ಹೇಳಿದನು.

೭೫. ಓ ದೇವೋತ್ತಮನಾದ ಬ್ರಹ್ಮನೇ! ದೇವತೆಗಳಿಗೂ, ರಾಕ್ಷಸರಿಗೂ, ದೇವತೆಗಳಿಂದ ಜನಿಸಿದ ಮಿಕ್ಕ ಸಿದ್ಧ ಗಂಧರ್ವರೇ ಮೊದಲಾದವರುಗಳಿಗೂ ನಾನು ಅವಧ್ಯನಾಗುವಂತೆ ಒಂದು ವರವನ್ನು ಕೊಡು.

ಅವಧ್ಯತ್ವಂ ಸುರಶ್ರೇಷ್ಠ ವರಮೇಕಂ ಪ್ರಯಚ್ಛ ಮೇ ।
ಅವಿಚ್ಛಿನ್ನಾ ಸಂತತಿರ್ಮೇ ಯಾವಚ್ಚಂದ್ರೋ ರವಿಸ್ತಪೇತ್ ॥ ೭೬ ॥

ತಾವದ್ಭವತು ಲೋಕೇಶ ದ್ವಿತೀಯೋಽಯಂ ವರಂ ಮಮ ।
ತಿಲೋತ್ತಮಾದ್ಯಾ ಯಾ ದೇವ್ಯಃ ಸದ್ರೂಪಗುಣಸಂಯುತಾಃ ॥ ೭೭ ॥

ತಾಸ್ತಾಮೇ ದಯಿತಾಃ ಸಂತು ಸಹಸ್ರಾಣಿ ತು ಷೋಡಶ ।
ಅಜೇಯತ್ವಂ ಸದಾ ಶ್ರೀಮಾನ್ ನ ಜಹಾತು ಕದಾಚನ ॥ ೭೮ ॥

ಇತಿ ಪಂಚ ವರಾ ಮೇಽದ್ಯ ವೃತಾಸ್ತ್ವತ್ತಃ ಪಿತಾಮಹ ।

॥ ಮಾರ್ಕಂಡೇಯ ಉವಾಚ ॥

ಮಾಯಯಾ ಮೋಹಿತೋ ಭೌಮೋ ಮುನಿಶಾಪಂ ವಿಸೃತ್ಯ ಚ ॥ ೭೯ ॥

ಅನ್ಯದ್ವರಾಂತರಂ ವವ್ರೇ ಮುನಿಶಾಪಸ್ತಥಾ ಸ್ಥಿತಃ ।
ಏವಮಸ್ತ್ವಿತಿ ತಾನ್ಸರ್ವಾನ್ವರಾನ್ ದತ್ವಾ ಪಿತಾಮಹಃ ॥ ೮೦ ॥

---

೭೬. ಅಲ್ಲದೆ ಓ ಬ್ರಹ್ಮನೇ! ನನ್ನ ವಂಶವು ಸೂರ್ಯ ಚಂದ್ರರು ಇರುವ ವರೆಗೆ ಸ್ಥಿರವಾಗುವಂತೆ ಅನುಗ್ರಹಿಸು, ಇದು ಎರಡನೆಯ ವರವು.

೭೭. ತಿಲೋತ್ತಮೆಯೇ ಮೊದಲಾದ ಒಳ್ಳೆಯ ರೂಪ ಮತ್ತು ಗುಣಗಳಿಂದ ಕೂಡಿರುವ ಹದಿನಾರುಸಹಸ್ರ ದೇವಸ್ತ್ರೀಯರು ನನ್ನ ಸ್ತ್ರಿಯೆಯರಾಗಬೇಕು.

೭೮. ಇನ್ನೊಬ್ಬರಿಂದ ನನಗೆ ಪರಾಭವವಾಗಬಾರದು. ಲಕ್ಷ್ಮಿಯು ನನ್ನನ್ನು ಎಂದೂ ಬಿಟ್ಟುಹೋಗಬಾರದು. ಯಾವಾಗಲೂ ನನ್ನಲ್ಲಿ ಐಶ್ವರ್ಯವು ನೆಲಸಿರಬೇಕು. ಓ ಬ್ರಹ್ಮನೇ! ಈ ಐದು ವರಗಳನ್ನು ನನಗೆ ಅನುಗ್ರಹಿಸು.

೭೯. ಮಾರ್ಕಂಡೇಯನು ಹೇಳಿದನು :—ಮಾಯೆಯಿಂದ ಮೋಹಿತನಾಗಿ ಬೇರೆಬೇರೆ ವರಗಳನ್ನು ಕೇಳಿದನಲ್ಲದೆ ಬ್ರಾಹ್ಮಣಶಾಪದ ವಿಮೋಚನೆಯನ್ನು ಕೇಳುವುದನ್ನೇ ಮರೆತನು. ಆ ಮುನಿಶಾಪವು ಹಾಗೇ ಉಳಿಯಿತು.

೮೦—೮೩. ಹಾಗೆಯೇ ಆಗಲೆಂದು ಬ್ರಹ್ಮನು ನರಕನಿಗೆ ಅವನು ಕೇಳಿದ ವರಗಳನ್ನು ಕೊಟ್ಟು ಅವನನ್ನು ಕುರಿತು, ಎಲೈ ನರಕನೇ! ದ್ವಾಪರಯುಗದ ಕೊನೆ

ಉವಾಚೇದಂ ದ್ವಾಪರಾಂತೇ ಸಂಧ್ಯಾಯಾಂ ಸುರಕನ್ಯಕಾಃ ।
ತಿಲೋತ್ತಮಾದ್ಯಾಸ್ತೇ ಜಾಯಾಃ ಸಂಭವಿಷ್ಯಂತಿ ಭೂತಲೇ ॥ ೮೧ ॥

ನ ಯಾವನ್ನಾರದೋ ಯಾತಿ ವಜ್ರಧ್ವಜ ಪುರಸ್ತವ ।
ತಾವನ್ನ ಮೈಥುನೇ ಯೋಜ್ಯಾ ಭವತಾ ತಾಃ ಕ್ಷಿತೇಃ ಸುತ ॥ ೮೨ ॥

ಇತ್ಯುಕ್ತ್ವಾ ಸರ್ವಲೋಕೇಶಃ ಕ್ಷಣಾದಂತರ್ಹಿತೋಽಭವತ್ ।
ಮುದಮಾಸಾದ್ಯ ಪರಮಾಂ ಸ್ವಸ್ಥಾನಂ ನರಕೋಽಭ್ಯಗಾತ್ ॥ ೮೩ ॥

ತತೋ ಮುದಿತಲೋಕಂ ತನ್ನಗರಂ ಶ್ರೀನಿಷೇವಿತಂ ।
ಸದಾ ಸೋತ್ಸಾಹಸಂಪೂರ್ಣಮಿತಿವಿಘ್ನವಿವರ್ಜಿತಂ ॥ ೮೪ ॥

ಆಭವತ್ಪಶುಸಂಘೈಶ್ಚ ವಾಜಿವಾರಣಕುಂಭಕೈಃ ।
ಸಂಪೂರ್ಣಂ ದೇವರಾಜಸ್ಯ ದಯಿತೇವಾಮರಾವತೀ ॥ ೮೫ ॥

ಉತ್ತೀರ್ಣತಪಸಂ ಶ್ರುತ್ವಾ ಬಾಣೋ ದತ್ತವರಂ ತಥಾ ।
ಸ್ವಯಂ ಪುನರುಪಾತಿಷ್ಠದ್ಭಾವಮಂ ವಜ್ರಧ್ವಜಂ ತಥಾ ॥ ೮೬ ॥

ಯಲ್ಲಿ ದೇವಸ್ತ್ರೀಯರಾದ ತಿಲೋತ್ತಮೆಯೇ ಮೊದಲಾದ ಅಪ್ಸರೆಯರು ನಿನ್ನ ಪತ್ನಿಯರಾಗುವರು. ನಾರದಮುನಿಯು ನಿನ್ನ ನಗರಕ್ಕೆ ಬರುವನರೆಗೂ ನೀನು ಪತ್ನಿಯರೊಡನೆ ಸಂಗವನ್ನಾಚರಿಸಕೂಡದು ಎಂದು ಹೇಳಿ ಜಗದೊಡೆಯನಾದ ಬ್ರಹ್ಮನು ಆ ಕೂಡಲೇ ಅಂತರ್ಧಾನನಾದನು. ನರಕನೂ ಸಹ ವರಪ್ರಾಪ್ತಿಯಿಂದ ಸಂತುಷ್ಟನಾಗಿ ತನ್ನ ನಗರಕ್ಕೆ ತೆರಳಿದನು.

೮೪-೮೫. ಅನಂತರ ಆ ನರಕನ ನಗರವು ಮೊದಲಿನಂತೆ ಕಾಂತಿಯುಳ್ಳದುಮೂ ಸದಾ ಉತ್ಸಾಹದಿಂದ ತುಂಬಿದುದೂ ಈತಿಬಾಧೆಗಳಿಲ್ಲದುದೂ ಆಯಿತು. ಜನಗಳೂ ಸಂತೋಷದಿಂದಿದ್ದರು. ಆನೆ, ಕುದುರೆ, ಗೋವು ಮೊದಲಾದ ಪಶುಸಂಪತ್ತಿನಿಂದಲೂ ಐಶ್ವರ್ಯದಿಂದಲೂ ಆ ನಗರವು ತುಂಬಿ ಇಂದ್ರನಿಗೆ ಪ್ರಿಯವಾದ ಅಮರಾವತಿ ನಗರದಂತೆ ಕಂಗೊಳಿಸಿತು.

೮೬-೮೭. ತಪಸ್ಸಿನಲ್ಲಿ ಜಯಶಾಲಿಯಾಗಿ ನರಕನು ವರಗಳನ್ನು ಪಡೆದುದನ್ನು ಕೇಳಿ ಬಾಣಾಸುರನು ತಾನೇ ಆ ನರಕನನ್ನು ನೋಡಲು ಪ್ರಾಗ್ಜ್ಯೋತಿಷನಗರಕ್ಕೆ ಪ್ರಯಾಣಮಾಡಿದನು. ಮಿತ್ರನಾದ ನರಕನನ್ನು ಕುರಿತು ತಪಸ್ಸಿನ ವಿಷಯವಾಗಿ ಹೀಗೆ ಕೇಳಿದನು.

ಸ ಗತ್ವಾ ಭೌಮನಗರಂ ಬಾಣಃ ಪ್ರಾಗ್ಜ್ಯೋತಿಷಾಧ್ಯುಷಂ ।
ಪಪ್ರಚ್ಛ ನರಕಂ ಮಿತ್ರಂ ತಪಸಃ ಸನ್ನಿವೇಶನಂ ॥ ೮೭ ॥

ಕುತ್ರ ತ್ವಯಾ ತಪಸ್ತಪ್ತಂ ಕಂ ವಾಚೀರ್ಣಂ ತ್ವಯಾ ವ್ರತಂ ।
ಕೀದೃಶೋ ವಾ ವರೋ ಲಬ್ಧಸ್ತನ್ಮಮಾಖ್ಯಾತುಮರ್ಹಸಿ ॥ ೮೮ ॥

ದೃಷ್ಟಂ ತವ ಪುರಂ ಸರ್ವಂ ಪ್ರಹೃಷ್ಟಜನಸಂಕುಲಂ ।
ವಾಜಿವಾರಣರತ್ನೌಘೈಃ ಪೂರಿತಂ ಮಂಗಲಸ್ವನೈಃ ॥ ೮೯ ॥

ದೃಶ್ಯತೇಽದ್ಯ ತ್ವಯಾ ಸಾಲ್ಯಂ ಸಸ್ಯಪೂರ್ಣಮನಾಮಯಂ ।
ಕಥ್ಯತಾಂ ವಾ ಕಥಂ ಬ್ರಹ್ಮಾ ವರಂ ತುಭ್ಯಂ ಪ್ರದತ್ತವಾನ್ ॥ ೯೦ ॥

॥ ಭೌಮ ಉವಾಚ ॥

ಬ್ರಹ್ಮಾ ಸ್ವಯಂ ಪರ್ವತರೂಪಧಾರೀ ।
ಕಾಮೇಶ್ವರೀಂ ಧರ್ತುಮಿಹಾವತೀರ್ಣಃ ॥
ತತ್ರ ಸ್ವಯಂ ಸಂಪ್ರತಿ ಘಸ್ರಮೇತಿ ।
ಪುರಾ ನ ಯಾವಚ್ಛಪತೇ ವಸಿಷ್ಠಃ ॥ ೯೧ ॥

---

೮೮. ಎಲೈ ನರಕನೇ! ನೀನು ಎಲ್ಲಿ ತಪಸ್ಸನ್ನಾಚರಿಸಿದೆ? ಎಂತಹ ವ್ರತವನ್ನಾಚರಿಸಿದೆ? ಎಂತಹ ವರಗಳನ್ನು ಪಡೆದಿರುವೆ? ಇದೆಲ್ಲವನ್ನೂ ನನಗೆ ಹೇಳು.

೮೯. ನಿನ್ನ ನಗರವು ಸಂತೋಷದಿಂದಿರುವ ಜನಗಳಿಂದ ತುಂಬಿರುವುದನ್ನೂ ಕುದುರೆ, ಆನೆ, ರತ್ನಗಳಿಂದ ತುಂಬಿರುವುದನ್ನೂ ಮತ್ತು ಮಂಗಳವಾದ ಧ್ವನಿಗಳಿಂದ ಕೂಡಿರುವುದನ್ನೂ ನೋಡಿದೆನು.

೯೦. ನಿನ್ನ ರಾಜ್ಯವು ಈಗ ಸಸ್ಯಸಮೃದ್ಧಿಯಿಂದ ಪೂರ್ಣವಾಗಿ ರೋಗಾದಿಗಳ ತೊಂದರೆಯಿಲ್ಲದೆ ಇರುವಂತೆ ತೋರುತ್ತಿರುವುದು. ಬ್ರಹ್ಮನು ನಿನಗೆ ಏನು ವರಗಳನ್ನು ಕೊಟ್ಟನೆಂಬುದನ್ನು ಹೇಳು.

೯೧. ನರಕನು ಹೇಳಿದನು:—ನನ್ನ ರಾಜ್ಯದಲ್ಲಿ ಬ್ರಹ್ಮನು ಕಾಮೇಶ್ವರೀ ದೇವಿಯನ್ನು ಧರಿಸಲು ಪರ್ವತ (ಬ್ರಹ್ಮಗಿರಿ) ರೂಪದಿಂದ ಅವತರಿಸಿರುವನು. ಅವನು ವಸಿಷ್ಠಮುನಿಯು ನನ್ನನ್ನು ಶಪಿಸುವ ಮೊದಲು ಪ್ರತಿದಿನವೂ ಆ ಪರ್ವತಕ್ಕೆ ಒರುತ್ತಲಿದ್ದನು.

ಸೋಽಯಂ ಪುರೇ ಮೇ ಬಲಿಪುತ್ರ ರಾಜತೇ ।
ದೇವೌಘಸೇವೋಽಸ್ಯಮರೋತ್ತಮಾಂಶಃ ॥
ತತ್ರಾಹಮೇಕೋ ವರತೋಯಭೋಜನಃ ।
ವರ್ಷಾಣ್ಯಕಾರ್ಷಂಶ್ಚ ತಪಃ ಶತಾನಿ ವೈ ॥ ೯೨ ॥

ಲೌಹಿತ್ಯತೀರೇ ಘನವಾಯುಸೇವಿತೇ ।
ಮನೋಹರೇ ಪ್ರಾಣಭೃತಾಂ ಸುಖಪ್ರದೇ ॥
ತಪಃ ಪ್ರವೃತ್ತೇಽಸ್ಯ ಸುಖಂ ಸಮಾಗಮ
ಚ್ಛರದ್ಯಥೈಕಾ ಶರದಾಂ ಶತಾನಿ ಮೇ ॥ ೯೩ ॥

ತತಸ್ಸ ತುಷ್ಟಶ್ಚತುರಾನನೋಽಭವತ್ ।
ಪ್ರತ್ಯಕ್ಷತೋ ಮಾಂ ನ್ಯಗದಚ್ಚ ಮದ್ಧಿತಂ ॥
ತವ ಪ್ರಸನ್ನೋಽಸ್ಮಿ ವರಂ ತವೇಪ್ಸಿತಂ ।
ದಾಸ್ಯೇ ಗೃಹಾಣೇತಿ ಪುರೋಽಥ ಭೂತ್ವಾ ॥ ೯೪ ॥

ಅವಧ್ಯತಾ ಮೇ ಸುರಯೋನಿತಃ ಸುರಾ ।
ದಚ್ಚಿನ್ನಸಂತಾನಮಜೇಯತಾ ತಥಾ ॥

---

೯೨. ಬ್ರಹ್ಮನ ಅಂಶವೂ ದೇವತೆಗಳಿಂದ ಸೇವಿಸಲ್ಪಡುವುದೂ ಆದ ಆ ಬ್ರಹ್ಮ ಗಿರಿಯು ನನ್ನ ರಾಜ್ಯದಲ್ಲಿಯೇ ಇರುವುದು. ಎಲೈ ಬಾಣನೇ! ಆ ಬೆಟ್ಟದಲ್ಲಿ ನಾನು ಕೇವಲ ಜಲವನ್ನೇ ಆಹಾರವನ್ನಾಗಿ ಸೇವಿಸುತ್ತಾ ಒಂದುನೂರುವರ್ಷಗಳ ಪರ್ಯಂತರ ತಪಸ್ಸನ್ನಾ ಚರಿಸಿದೆನು.

೯೩. ಆ ಲೌಹಿತ್ಯನದೀತೀರವು ಬಹು ಮನೋಹರವಾಗಿರುವುದು. ಅಲ್ಲಿನ ಸ್ವಚ್ಛವಾದ ಗಾಳಿಯು ಪ್ರಾಣಿಗಳಿಗೆ ಹಿತಕರವಾಗಿರುವುದು. ಇಂತಹ ರಮ್ಯವಾದ ಪ್ರದೇಶದಲ್ಲಿ ತಪಸ್ಸನ್ನು ಮಾಡುತ್ತಲಿದ್ದ ನನಗೆ ನೂರುವರ್ಷಗಳ ಕಾಲವು ಒಂದೇ ವರ್ಷದಂತೆ ಸುಖವಾಗಿ ಕಳೆದುಹೋಯಿತು.

೯೪. ಅನಂತರ ಬ್ರಹ್ಮನು ನನ್ನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ನನ್ನೆದುರಿಗೆ ಬಂದುನಿಂತು, ಎಲೈ ನರಕನೇ! ನಿನಗೆ ನಾನು ಪ್ರಸನ್ನನಾಗಿರುವೆನು. ಬೇಕಾದ ವರ ಗಳನ್ನು ಕೇಳಿಕೋ ಎಂದು ಹಿತವಾಗಿ ನನಗೆ ಹೇಳಿದನು.

ಸದಾ ವಿಭೂತಿರ್ನ ಜಹಾತು ಮಾಪಿತಿ ।
ವರಾಶ್ಚ ನಾರ್ಯೋ ನವಯೌವನಾನ್ವಿತಾಃ ॥ ೯೫ ॥

ಏತೇ ವರಾಃ ಪಂಚ ಮಯಾ ತತೋ ವೃತಾಃ ।
ಸೋಽಪಿ ಪ್ರತಿಶ್ರುತ್ಯ ಗತೋ ನಿಜಾಸ್ಪದಂ ॥ ೯೬ ॥

ತತೋಽಹಮಭ್ಯೇತ್ಯ ಪುರಂ ನಿಜಂ ಮುದಾ ।
ಮಂತ್ರಿಪ್ರವೀರೈಃ ಸಹಿತಃ ಪುನಸ್ತಾನ್ ॥
ಪೌರಾನ್ಸಬಂಧೂನ್ ಸಗಣಾನಮೋದಯಂ ।
ದಾನೇನ ಮಾನೇನ ಚ ಭೋಜನೇನ ॥ ೯೭ ॥

॥ ಮಾರ್ಕಂಡೇಯ ಉವಾಚ ॥

ಇತೀರಿತಂ ತಸ್ಯ ಬಲೇಃ ಸುತಸ್ತದಾ ।
ಭೌಮಸ್ಯ ಶ್ರುತ್ವಾ ಮುಮುದೇ ನ ತತ್ಕ್ಷಣಾತ್ ॥
ಇದಂ ತದೋಚೇ ವಚನಂ ಕ್ಷಿತೇಃ ಸುತಂ ।
ತತ್ಕಾಲಯುಕ್ತಂ ನ ಚ ಸೂನೃತೋದ್ಭವಂ ॥ ೯೯ ॥

೯೫-೯೬. ಆಗ ನಾನು, ದೇವತೆಗಳು, ದೇವಸಂಭೂತರಾದ ಗಂಧರ್ವರೇ ಮೊದಲಾದವರು, ರಾಕ್ಷಸರು, ಇವರಾರಿಂದಲೂ ಅವಧ್ಯನಾಗುವಂತೆಯೂ, ಯಾರಿಂದಲೂ ನನಗೆ ಸೋಲಾಗದಂತೆಯೂ, ನನ್ನ ವಂಶವು ನಿಲ್ಲದೆ ಸೂರ್ಯಚಂದ್ರರಿರುವವರೆಗೆ ಸ್ಥಿರವಾಗಿರುವಂತೆಯೂ; ಯಾವಾಗಲೂ ಐಶ್ವರ್ಯವಿರುವಂತೆಯೂ, ಸುಂದರಿಯರಾದ ದೇವಸ್ತ್ರೀಯರು ನನ್ನ ಪತ್ನಿಯರಾಗುವಂತೆಯೂ, ಐದು ವರಗಳನ್ನು ಕೇಳಿದೆನು. ಆ ವರಗಳನ್ನು ಕೊಟ್ಟು ಬ್ರಹ್ಮನು ತನ್ನ ಸ್ಥಾನಕ್ಕೆ ತೆರಳಿದನು.

೯೭. ಅನಂತರ ನಾನು ಸಂತೋಷಗೊಂಡು ನನ್ನ ನಗರಕ್ಕೆ ತಿರುಗಿಬಂದು ವೀರರಾದ ಮಂತ್ರಿಗಳೊಡನೆ ಕೂಡಿ ಪುರಜನರು ಅವರ ಬಂಧುಗಳು ಮತ್ತು ಪರಿವಾರಗಳು ಇವರೆಲ್ಲರನ್ನೂ ದಾನಗಳಿಂದಲೂ ಸಂಭಾವನೆಗಳಿಂದಲೂ ಭೋಜನದಿಂದಲೂ ಸಂತೋಷಗೊಳಿಸಿದೆನು.

೯೮. ಮಾರ್ಕಂಡೇಯನು ಹೇಳಿದನು:-ಈರೀತಿ ನರಕನು ಹೇಳಿದ ಮಾತುಗಳನ್ನು ಕೇಳಿ ಬಾಣನು ಸಂತೋಷಗೊಳ್ಳಲಿಲ್ಲವು. ಆಗ ಅವನು ನರಕನನ್ನು ಕುರಿತು ಆಕಾಲಕ್ಕೆ ಉಚಿತವಾದರೂ ಪ್ರಿಯವಾಗಿಲ್ಲದಂತಹ ಮಾತನ್ನು ಹೀಗೆ ಹೇಳಿದನು.

ನ ತೇ ಮುನೇಃ ಶಾಪಮತೀತ್ಯ ಗಂತುಂ ।
ಭೂತಾ ಮತಿರ್ಮಿತ್ರ ತಥಾ ವಿಧೇಃ ಪುರಂ ॥
ಕಥಂ ತು ಭದ್ರಂ ಭವಿತಾ ತವೇಹ ।
ಭಾವೀತ್ಯವಶ್ಯಂ ಕ್ಷಿತಿಪುತ್ರ ನಿತ್ಯಂ ॥ ೯೯ ॥

ಕೃತಸ್ಯ ಕರಣಂ ನಾಸ್ತಿ ದೈವಾಭಿಷ್ಟುತಕರ್ಮಣಃ ।
ಭಾವೀತ್ಯವಶ್ಯಂ ಯದ್ಭಾವ್ಯಂ ತತ್ರ ಬ್ರಹ್ಮಾಪ್ಯಬಾಧಕಃ ॥ ೧೦೦ ॥

ತಸ್ಮಾತ್ತ್ವಂ ಸುಮಹಾವೀರಾನಸುರಾನ್ವಾವಕೋಪಮಾನ್ ।
ಸಂಧಾಯ ಚ ಪುರಸ್ಕೃತ್ಯ ಸಾಚಿವ್ಯೇ ವಿನಿಯೋಜಯ ॥ ೧೦೧ ॥

ದ್ವಾರಿ ಸಂಸ್ಥಾಪ್ಯ ವೈ ವೀರಾನ್ ದೇವೈರಪಿ ದುರಾಸದಾನ್ ।
ಅತಿಕ್ರಮಸ್ವ ದೇವೇಶಂ ಯದಿ ಲಬ್ಧವರೋ ಭವಾನ್ ॥ ೧೦೨ ॥

ವಿಧಿನಾ ಯೋ ವರೋ ದತ್ತೋ ಭವತೇ ತತ್ಪರೀಕ್ಷಣಂ ।
ಕರ್ತುಮರ್ಹಸಿ ಜಾಯಾಯಾಮುಪುತ್ರೋ ಜನಯಾತ್ಮಜಂ ॥ ೧೦೩ ॥

---

೯೯. ಎಲೈ ನರಕನೇ! ವಸಿಷ್ಠಮುನಿಯ ಶಾಪವು ಹೋಗುವಂತೆ ವರವನ್ನು ಕೇಳಲು ಬ್ರಹ್ಮನೆದುರಿಗೆ ನಿನಗೆ ಬುದ್ಧಿಯೇ ಹೊಳೆಯಲಿಲ್ಲವು. ಹೀಗಿರಲು ನಿನಗೆ ಮುಂದೆ ಒಳ್ಳೆಯದಾಗುವ ಬಗೆಯೆಂತು?

೧೦೦. ಅದೃಷ್ಟಾನುಸಾರವಾಗಿ ಮಾಡಿರುವ ಕರ್ಮವನ್ನು ಏನೂ ಮಾಡಲಾಗುವುದಿಲ್ಲವು. ಅದಕ್ಕನುಸಾರವಾದ ಫಲವು ಮುಂದೆ ಆಗಿಯೇ ಆಗುವುದು. ಅದನ್ನು ತಪ್ಪಿಸಲು ಬ್ರಹ್ಮನಿಗೂ ಸಾಧ್ಯವಿಲ್ಲವು.

೧೦೧. ಆದಕಾರಣ ನೀನು ಮಹಾವೀರರೂ, ಅಗ್ನಿಯಂತೆ ತೇಜಸ್ವಿಗಳೂ ಆದ ಕೆಲವರು ರಾಕ್ಷಸರನ್ನು ಸೇರಿಸಿ ಅವರನ್ನು ಗೌರವಿಸಿ ಅವರ ಸಹಾಯವನ್ನು ಹೊಂದುವವನಾಗು.

೧೦೨. ನೀನು ಅಂತಹ ಬಲಶಾಲಿಗಳನ್ನು ಪಡೆದು ನಗರದ ದ್ವಾರದಲ್ಲಿ ದೇವತೆಗಳೂ ಸಹ ಜಯಿಸದಂತಹ ಆ ವೀರರನ್ನು ಕಾವಲಾಗಿ ಇಟ್ಟು ದೇವೇಂದ್ರನನ್ನೂ ಜಯಿಸುವವನಾಗು.

೧೦೩. ಬ್ರಹ್ಮನು ನಿನಗೆ ಕೊಟ್ಟ ವರಗಳನ್ನು ಪರೀಕ್ಷಿಸು. ಪುತ್ರನಿಲ್ಲದ ನೀನು ನಿನ್ನ ಪತ್ನಿಯಲ್ಲಿ ವಂಶಾಭಿವೃದ್ಧಿಗಾಗಿ ಪುತ್ರೋತ್ಪಾದನೆಮಾಡು.

ಇತ್ಯುಕ್ತ್ವಾ ಪ್ರಯಯೌ ಬಾಣೋ ಯಥಾವತ್ತೇನ ಪೂಜಿತಃ ।
ನರಕೋ ಮಿತ್ರವಚನಂ ಕರ್ತುಂ ಸಮುಪಚಕ್ರಮೇ ॥ ೧೦೪ ॥

॥ ಇತಿ ಶ್ರೀ ಕಾಲಿಕಾಪುರಾಣೇ ಚತ್ವಾರಿಂಶತ್ತಮೋಽಧ್ಯಾಯಃ ॥

---

೧೦೪. ಹೀಗೆ ಹೇಳಿ ಬಾಣನು ಆ ನರಕನಿಂದ ಯೋಗ್ಯವಾಗಿ ಸತ್ಕರಿಸಲ್ಪಟ್ಟು ತನ್ನ ನಗರಕ್ಕೆ ತೆರಳಿದನು. ನರಕನೂ ಸಹ ತನ್ನ ಮಿತ್ರನಾದ ಬಾಣನ ಮಾತಿನಂತೆ ನಡೆಸಲು ಉದ್ಯುಕ್ತನಾದನು.

ಇಲ್ಲಿಗೆ ನಲವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ

ಶ್ರೀಕಾಲಿಕಾಪುರಾಣೇ ಏಕಚತ್ವಾರಿಂಶತ್ತಮೋಽಧ್ಯಾಯಃ

॥ ಮಾರ್ಕಂಡೇಯ ಉವಾಚ ॥

ಋತುಮತ್ಯಾಂ ತು ಜಾಯಾಯಾಂ ಕಾಲೇ ಸ ನರಕಃ ಕ್ರಮಾತ್ ।
ಭಗದತ್ತಂ ಮಹಾಶೀರ್ಷಂ ಮದವಂತಂ ಸುಮಾಲಿನಂ ॥ ೧ ॥

ಚತುರೋ ಜನಯಾಮಾಸ ಪುತ್ರಾನೇತಾನ್ ಕ್ಷಿತೇಃ ಸುತಃ ।
ಮಹಾಸತ್ತ್ವಾನ್ಮಹಾವೀರ್ಯಾನ್ವೀರೈರನ್ಯೈರ್ದುರಾಸದಾನ್ ॥ ೨ ॥

ತತೋ ಬಾಣಸ್ಯ ವಚನಾದ್ಧಯಗ್ರೀವಂ ತಥಾ ಮುರುಂ ।
ಸಂಧಾಯಾಥ ಸಮಾನೀಯ ಸೈನಾಪತ್ಯೇಽಭ್ಯಷೇಚಯತ್ ॥ ೩ ॥

॥ ನಲವತ್ತೊಂದನೆಯ ಅಧ್ಯಾಯವು ॥

೧-೨. ಮಾರ್ಕಂಡೇಯ ಮುನಿಯು ಹೇಳಿದನು:—ಮುಂದೆ ಆ ನರಕನು ತನ್ನ ಪತ್ನಿಯು ಋತುಮತಿಯಾದ ಕಾಲದಲ್ಲಿ ಎಂದರೆ ಗರ್ಭಾದಾನಕ್ಕೆ ಯೋಗ್ಯವಾದ ಕಾಲದಲ್ಲಿ ಅವಳಲ್ಲಿ ಭಗದತ್ತ, ಮಹಾಶೀರ್ಷ, ಮದವಂತ, ಸುಮಾಲಿಗಳೆಂಬ ತುಂಬಾ ಬಲಶಾಲಿಗಳೂ, ವೀರರೂ, ಮಿಕ್ಕ ವೀರರುಗಳಿಗೆ ಜಗ್ಗದಿರುವವರೂ ಆದ ನಾಲ್ವರು ಮಕ್ಕಳನ್ನು ಪಡೆದನು.

೩. ಅನುತರ ಆ ನರಕನು ಬಾಣನ ಮಾತಿನಂತೆ ಹಯಗ್ರೀವ ಮತ್ತು ಮುರು ಗಳೆಂಬ ರಾಕ್ಷಸರನ್ನು ಸಂಧಿಸಿ ತನ್ನ ನಗರಕ್ಕೆ ಕರೆಸಿಕೊಂಡು ಅವರನ್ನು ತನ್ನ ಸೇನಾ ಪತಿಗಳನ್ನಾಗಿ ಮಾಡಿದನು.

ಮುರುಂ ಸನ್ನಿಹಿತಂ ಶ್ರುತ್ವಾ ಹಯಗ್ರೀವಂ ಚ ಭೌಮಿನಾ ।
ಯೇ ಯೇ ಕ್ಷಿತೌ ತದಾ ಹ್ಯಾಸನ್ನಸುರಾಸ್ತೇಽಪಿ ಸಂಗತಾಃ ॥ ೪ ॥

ಹಯಗ್ರೀವಂ ಮುರುಂ ಶ್ರುತ್ವಾ ನರಕೇಣ ಸಮಾಗತಂ ।
ನಿಸುಂದಸುಂದನಾಮಾನಾವಸುರೌ ಸೈನಿಕೈಃ ಸಹ ॥ ೫ ॥

ವಿರೂಪಾಕ್ಷಸ್ತದಾ ದೈತ್ಯಃ ಸರ್ವೇ ತೇನ ಸಮಾಗಮನ್ ।
ತತಃ ಸ ಪಶ್ಚಿಮದ್ವಾರಿ ನರಕಃ ಸೇನಯಾ ಸಹ ॥ ೬ ॥

ಮುರುಂ ದ್ವಾರಾಧಿಪಂ ಚಕ್ರೇ ಹಯಗ್ರೀವಂ ತಥೋತ್ತರೇ ।
ಪೂರ್ವದ್ವಾರಿ ನಿಸುಂದಂ ತು ವಿರೂಪಾಕ್ಷಂ ತು ದಕ್ಷಿಣೇ ॥ ೭ ॥

ಮಧ್ಯೇ ಪಂಚಜನಂ ಸುಂದಂ ಸೈನಾಪತ್ಯೇಽಭ್ಯಷೇಚಯತ್ ।
ಮುರುಃ ಕ್ಷುರಾಂತಾನ್ಪಾಶಾಂಶ್ಚ ಷಟ್ಸಹಸ್ರಾಣ್ಯಯೋಜಯತ್ ॥ ೮ ॥

---

೪. ಹೀಗೆ ಮುರು ಮತ್ತು ಹಯಗ್ರೀವರೆಂಬ ಅಸುರರು ನರಕನನ್ನು ಕೂಡಿ ಕೊಂಡುದನ್ನು ಕೇಳಿ ಆಗ ಭೂಮಿಯಲ್ಲಿ ಎಷ್ಟುಜನ ಅಸುರರಿದ್ದರೋ ಅವರೆಲ್ಲರೂ ಬಂದು ನರಕನನ್ನು ಸೇರಿದರು.

೫. ಅಲ್ಲದೆ ಈ ವೃತ್ತಾಂತವನ್ನು ಕೇಳಿ ನಿಸುಂದ ಮತ್ತು ಸುಂದ ಹಾಗೂ ವಿರೂಪಾಕ್ಷರೆಂಬ ಅಸುರರೂ ಸಹ ತಮ್ಮತಮ್ಮ ಸೇನೆಯೊಡನೆ ನರಕನನ್ನು ಕೂಡಿ ದರು.

೬. ಅನಂತರ ಆ ನರಕನು ಪಶ್ಚಿಮದ್ವಾರದಲ್ಲಿ ಮುರುವನ್ನೂ ಉತ್ತರದ್ವಾರ ದಲ್ಲಿ ಹಯಗ್ರೀವನನ್ನೂ ದ್ವಾರಾಧಿಪತಿಗಳನ್ನಾಗಿ ಮಾಡಿ ಸೇನೆಯೊಡನೆ ಇರಿಸಿದನು.

೭. ಪೂರ್ವದ ಬಾಗಿಲಲ್ಲಿ ನಿಸುಂದನನ್ನೂ ದಕ್ಷಿಣದ ಬಾಗಿಲಲ್ಲಿ ವಿರೂಪಾಕ್ಷ ನನ್ನೂ ದ್ವಾರಾಧಿಪತಿಗಳಾಗಿ ನಿಯಮಿಸಿದನು. ಈ ಐದು ಜನಗಳಿಗೂ ಸೇನಾಪತಿ ಯಾಗಿ ಮಧ್ಯದಲ್ಲಿ ಸುಂದನನ್ನು ನಿಯಮಿಸಿದನು.

೮. ಅಲ್ಲದೆ ಮುರುವೆಂಬ ಅಸುರನು ನರಕನಿಂದ ಸತ್ಕರಿಸಲ್ಪಟ್ಟವನಾಗಿ ಪೂರ್ವ ದ್ವಾರದಲ್ಲಿ ಆರುಸಾವಿರ (೬೦೦೦) ರಾಕ್ಷಸರನ್ನು ನಿಯಮಿಸಿದನು.

ದ್ವಾರಿ ತತ್ಪುರರಕ್ಷಾರ್ಥಂ ಸತ್ಕೃತಃ ಕ್ಷಿತಿಸೂನುನಾ ।
ಏವಂ ಪೂರ್ವಾನ್ಪೂರ್ವತರಾನವಮತ್ಯ ಸುಮಂತ್ರಿಣಃ ॥ ೯ ॥

ಅಸುರೈರೇವ ಸತತಂ ಸೋಽಸುರೋ ಮುದಿತೋಽಭವತ್ ।
ಪೂರ್ವಂ ಗೃಹೀತಂ ಭಾವಂ ಸ ಪರಿತ್ಯಜ್ಯ ಕ್ಷಿತೇಃ ಸುತಃ ॥ ೧೦ ॥

ಆಸುರಂ ಭಾವಮಾಸಾದ್ಯ ಬಾಧತೇ ತ್ರಿದಿವೌಕಸಃ ।
ನ ದೇವಾನ್ನ ಮುನೀನ್ತ್ಸರ್ವಾನ್ನ ಚ ಜಾನಾತಿ ಕಾಂಶ್ಚನ ॥ ೧೧ ॥

ಸುರೇಶ್ವರಂ ಜಿಗಾಯಾಶು ಹಯಗ್ರೀವಸಹಾಯವಾನ್
ಏವಂ ಸ ಚಾಸುರಂ ಭಾವಂ ತನ್ವಾನೋ ವಿಚರನ್ ಕ್ಷಿತೌ ॥ ೧೨ ॥

ಬಾಣಸ್ಯ ವಚನಾಚ್ಚಕ್ರಂ ಬಾಧಯತ್ಯೇವ ವೈ ಮುನೀನ್ ।
ದೇವೇಶ್ವರಂ ತ್ರಿಧಾ ಜಿತ್ವಾ ಹಯಗ್ರೀವಸಹಾಯವಾನ್ ॥ ೧೩ ॥

---

೯. ಹೀಗೆ ಆ ನರಕನು ತನ್ನ ಮೊದಲಿನ ಮಂತ್ರಿಗಳೆಲ್ಲರನ್ನೂ ತಿರಸ್ಕರಿಸಿ ಆ ಅಸುರರೊಡನೆ ಸೇರಿ ತಾನೂ ಅಸುರನಾಗಿ ಸಂತೋಷದಿಂದಿದ್ದನು.

೧೦. ಹಿಂದೆ ತಾನು ಗ್ರಹಿಸಿದ್ದ ಮನುಷ್ಯಭಾವವನ್ನು ಬಿಟ್ಟು ಆ ನರಕನು ಅಸುರಭಾವವನ್ನು ಹೊಂದಿ ದೇವತೆಗಳನ್ನು ಬಾಧಿಸತೊಡಗಿದನು.

೧೧. ದೇವತೆಗಳನ್ನೂ ಮುನಿಗಳನ್ನೂ ಆ ನರಕನು ಗಣನೆಗೇ ತರಲಿಲ್ಲವು. ಸ್ವಲ್ಪಕಾಲದಲ್ಲಿಯೇ ಹಯಗ್ರೀವನ ಸಹಾಯದಿಂದ ಇಂದ್ರನನ್ನು ಜಯಿಸಿದನು.

೧೨. ಆ ನರಕನು ಅಸುರ ಕರ್ಮವನ್ನು ಆಚರಿಸುತ್ತಾ ಬಾಣನ ಮಾತಿನಂತೆ ಇಂದ್ರನನ್ನೂ ಮುನಿಗಳನ್ನೂ ಬಾಧಿಸಿದನು.

೧೩-೧೪. ಹಯಗ್ರೀವನ ಸಹಾಯದಿಂದ ಮೂರುಬಾರಿ ದೇವೇಂದ್ರನನ್ನು ಜಯಿಸಿ, ಮೂರು ಲೋಕ ಪ್ರಸಿದ್ಧವಾದುದೂ, ನವರತ್ನಗಳಲ್ಲಿ ಶ್ರೇಷ್ಠವಾದುದೂ, ಅಮೃತವನ್ನು ಸುರಿಸುವುದೂ, ದುಃಖ ಮತ್ತು ವಿಘ್ನಗಳನ್ನು ಹೋಗಲಾಡಿಸುವುದೂ

ಅದಿತೇಃ ಕುಂಡಲಯುಗಂ ತ್ರಿಷು ಲೋಕೇಷು ವಿಶ್ರುತಂ ।
ಸರ್ವರತ್ನಾಽಮೃತಸ್ರಾವಿ ದುಃಖವಿಘ್ನಹರಂ ಪರಂ ॥ ೧೪ ॥

ಜಹಾರ ನರಕೋ ಭೌಮೋ ನಿರ್ಭೀತೋ ದೈವಶಾಪತಃ ।
ಏವಂ ದೇವಾನ್ಬಾಧಮಾನೋ ಮುನೀನ್ವಿಪ್ರಾನ್ ಕ್ಷಿತೇಃ ಸುತಃ ॥ ೧೫ ॥

ಪಂಚವರ್ಷಸಹಸ್ರಾಣಿ ರಾಜ್ಯಂ ಪ್ರಾಗ್ಜ್ಯೋತಿಷೇಽಕರೋತ್ ।
ಏತಸ್ಮಿನ್ನಂತರೇ ದೇವೀ ಮಹಾಭಾರಾರ್ದಿತಾ ಕ್ಷಿತಿಃ ॥ ೧೬ ॥

ಬ್ರಹ್ಮವಿಷ್ಣುಮುಖಾನ್ದೇವಾನ್ರಕ್ಷಾರ್ಥಂ ಶರಣಂ ಗತಾ ।
ಇದಂ ಚೋವಾಚ ಧಾತಾರಂ ಪ್ರಣಮ್ಯೋರ್ವೀ ಸಮಾಧವಂ ॥ ೧೭ ॥

ದಾನವಾ ರಾಕ್ಷಸಾ ದೈತ್ಯಾ ಹರಿಣಾ ಯೇ ಚ ಸೂದಿತಾಃ ।
ತೇ ರಾಜ್ಞಾಂ ಮಂದಿರೇ ಜಾತಾ ಅಧುನಾ ಬಲಗರ್ವಿತಾಃ ॥ ೧೮ ॥

ತೇಷಾಂ ಭಾರಮಹಂ ಸೋಢುಂ ನ ಶಕ್ನೋಮಿ ಮಹತ್ತರಂ ।
ಅಸಂಖ್ಯಾತಾಶ್ಚ ತೇ ಸರ್ವೇ ತಾನ್ಸಂಖ್ಯಾತುಂ ನ ಚೋತ್ಸಹೇ ॥ ೧೯ ॥

ಆದ ದೇವಮಾತೆಯಾದ ಅದಿತಿಯ ಕುಂಡಲಗಳೆರಡನ್ನು ಆ ನರಕನು ದೈವಶಾಪವ ಪೆದರಿಕೆಯಿಲ್ಲದೆ ಅಪಹರಿಸಿದನು.

೧೫. ದೇವತೆಗಳನ್ನೂ ಮುನಿಗಳನ್ನೂ ಬ್ರಾಹ್ಮಣರನ್ನೂ ಬಾಧಿಸುತ್ತಾ ಆ ನರಕನು ಐದುಸಾವಿರ ವರ್ಷಗಳಕಾಲ ಆ ಪಾಗ್ಜ್ಯೋತಿಷನಗರದಲ್ಲಿ ರಾಜ್ಯವಾಳಿದನು.

೧೬. ಈ ಮಧ್ಯದಲ್ಲಿ ಭೂದೇವಿಯು ನರಕನೇ ಮೊದಲಾದ ದುಷ್ಟರ ಮಹಾ ಭಾರದಿಂದ ನೊಂದು ಬ್ರಹ್ಮ ಮತ್ತು ವಿಷ್ಣುವೇ ಮೊದಲಾದ ದೇವತೆಗಳನ್ನು ಮರೆ ಹೊಕ್ಕಳು.

೧೭-೧೯. ಆ ಬ್ರಹ್ಮ ಮತ್ತು ವಿಷ್ಣುಗಳನ್ನು ನಮಸ್ಕರಿಸಿ ಹೀಗೆ ಹೇಳಿದಳು. ಓ ಪ್ರಭುಗಳೆ! ಹಿಂದೆ ಹರಿಯು ಯಾವಯಾವ ರಾಕ್ಷಸರನ್ನೂ ಮತ್ತು ದೈತ್ಯರನ್ನೂ ಸಂಹರಿಸಿದ್ದನೋ ಅವರೆಲ್ಲರೂ ಈಗ ರಾಜಗೃಹದಲ್ಲಿ ರಾಜರಾಗಿ ಜನಿಸಿ ತುಂಬಾ ಬಲ ದಿಂದ ಕೊಬ್ಬಿರುವರು.

೧೯. ಆ ರಾಕ್ಷಸರ ಮಹಾಭಾರವನ್ನು ಹೊರಲು ನಾನು ಅಶಕ್ತಳಾಗಿರುವೆನು. ಆ ರಾಕ್ಷಸರು ಎಣಿಸಲಾಗದಷ್ಟು ಇರುವರು. ಅವರ ಸಂಖ್ಯೆಯನ್ನು ತಿಳಿಯಲು ಸಾಧ್ಯವಿಲ್ಲವು.

ಅಷ್ಟೌ ಶತಸಹಸ್ರಾಣಿ ತೇಷಾಂ ಮುಖ್ಯಾ ಮಹಾಬಲಾಃ ।
ತೇಷ್ವಪ್ಯತಿಬಲಾನ್ವೋಢುಂ ನ ತಾಞ್ಛಕ್ನೋಮಿ ಚಾಧುನಾ ॥ ೨೦ ॥

ಬಾಣಂ ಬಲೇಸ್ಸುತಂ ವೀರಂ ಕಂಸಂ ಧೇನುಕಮೇವ ಚ ।
ಅರಿಷ್ಟಂ ಚ ಪ್ರಲಂಬಂ ಚ ಸುನಾಮಾನಂ ಮುರಂ ಶಲಂ ॥ ೨೧ ॥

ಚಾಣೂರಮುಷ್ಟಿಕೌ ಮಲ್ಲೌ ಜರಾಸಂಧಂ ಮಹಾಬಲಂ ।
ನರಕಂ ಚ ಹಯಗ್ರೀವಂ ನಿಸುಂದಂ ಸುಂದಮೇವ ಚ ॥ ೨೨ ॥

ವಿರೂಪಾಕ್ಷಂ ಪಂಚನದಂ ಹಿಡಿಂಬಂ ಚ ಬಕಂ ಬಲಂ ।
ಜಟಾಸುರಂ ಚ ಕಿರ್ಮೀರಂ ಮಲಾಯುಧಮಲಂಬುಷಂ ॥ ೨೩ ॥

ಸೌಭಾಗ್ಯಂ ಚ ಜರಾಸಂಧಂ ದ್ವಿವಿದಂ ಚಾಪಿ ವಾನರಂ ।
ಶ್ರುತಾಯುಧಂ ಮಹಾದೈತ್ಯಂ ಶತಾಯುಧಮಥಾಪರಂ ॥ ೨೪ ॥

ಋಷ್ಯಶೃಂಗಸುತಂ ಚೈವ ಸುಬಾಹುಮತಿಬಾಹುಕಂ ।
ಕಾಲಕಂಜಾಂಸ್ತಥಾದೈತ್ಯಾನ್ ಹಿರಣ್ಯಪುರವಾಸಿನಃ ॥ ೨೫ ॥

---

೨೦. ಅಪರಿಮಿತರಾದ ಆ ಅಸುರರಲ್ಲಿಯೂ ಮುಖ್ಯವಾಗಿ ಎಂಟು ಲಕ್ಷ ಅಸುರರು ಅತಿ ಬಲಶಾಲಿಗಳಾಗಿರುವರು. ಇವರೆಲ್ಲರ ಭಾರವನ್ನೂ ನಾನು ಹೊರಲಾರೆನು.

೨೧-೨೫. ಬಲಿಚಕ್ರವರ್ತಿಯ ಮಗನಾದ ವೀರನಾದ ಬಾಣ, ಕಂಸ, ಧೇನುಕಾಸುರ, ಅರಿಷ್ಟ, ಪ್ರಬಲಾಸುರ, ಸುನಾಮ, ಮುರ, ಶಲಾಸುರ, ಚಾಣೂರ ಮತ್ತು ಮುಷ್ಟಿಕರೆಂಬ ಜಟ್ಟಿಗಳು ತುಂಬಾ ಬಲಶಾಲಿಯಾದ ಜರಾಸಂಧ, ಹಯಗ್ರೀವ ಮತ್ತು ಸುಂದ ನಿಸುಂದರು ವಿರೂಪಾಕ್ಷ, ಪಂಚನದಾಸುರ, ಹಿಡಿಂಬ, ಬಕಾಸುರ ಮತ್ತು ಬಲಾಸುರ, ಜಟಾಸುರ, ಕಿರ್ಮಿರಾಸುರ, ಮಲಾಯುಧ ರಾಕ್ಷಸ, ಅಲಂಬುಷ ರಾಕ್ಷಸ, ಸೌಭಾಗ್ಯಾಸುರ, ಜರಾಸಂಧ, ದ್ವಿವಿದವಾನರ, ಶ್ರುತಾಯುಧ ಮತ್ತು ಶತಾಯುಧರೆಂಬ ಮಹಾಸುರರು. ಋಷ್ಯಶೃಂಗನೆಂಬ ಅಸುರನ ಪುತ್ರ, ಸುಬಾಹು ರಾಕ್ಷಸ ಮತ್ತು ಅತಿಬಾಹು, ಹಿರಣ್ಯವೆಂಬ ಪುರದಲ್ಲಿ ವಾಸಿಸುವ ಕಾಲಕಂಜರೆಂಬ ದೈತ್ಯರು ಇವರ ಭಾರವನ್ನು ಹೊರಲಾರೆನು.

ಏತೇಷಾಂ ತು ಪದಕ್ಷೋಭೈರ್ವಿಶೀರ್ಣೋಽಹಂ ದಿನೇ ದಿನೇ ।
ಲೋಕಾನ್ಧಾರಯಿತುಂ ನ ಶಕ್ನೋಮಿ ತಾನ್ನಿಹನ್ತು ಸುರೋತ್ತಮಾಃ॥ ೨೬ ॥

ನ ಚೇದ್ರಕ್ಷಾಂ ಪ್ರಕುರ್ವಂತಿ ಭವಂತಃ ಸುರಸತ್ತಮಾಃ ।
ತದಾ ವಿಶೀರ್ಣಾ ಯಾಸ್ಯಾಮಿ ಪಾತಾಲಮವಶಾಧುನಾ ॥ ೨೭ ॥

॥ ಮಾರ್ಕಂಡೇಯ ಉವಾಚ ॥

ತತಸ್ತಸ್ಯಾ ವಚಃ ಶ್ರುತ್ವಾ ಬ್ರಹ್ಮವಿಷ್ಣುಮಹೇಶ್ವರಾಃ ।
ಇತ್ಯೂಚುಸ್ತೇ ಕರಿಷ್ಯಾಮಃ ಕ್ಷಿತೇರ್ಭಾರವಿಮೋಕ್ಷಣಂ ॥ ೨೮ ॥

ವಿಸೃಜ್ಯ ಪೃಥಿವೀಂ ದೇವೀಂ ಸರ್ವೇ ದೇವಾಃ ಸನಾತನಂ ।
ಮಾಧವಂ ತೋಷಯಾಮಾಸುರ್ಭಾರಾವತರಣಂ ಪ್ರತಿ ॥ ೨೯ ॥

ಸ ತು ತುಷ್ಟಃ ಸುರಾನ್ತ್ಸರ್ವಾನ್ತ್ಸ್ವಾಂಶೈರವತರಂತು ವೈ ।
ಕ್ಷಿತೌ ಭಾರಾವತಾರಾಯೇತ್ಯುಕ್ತ್ವಾ ಸ್ವಯಮಿಹ ಪ್ರಭುಃ ॥ ೩೦ ॥

---

೨೬. ಈ ಎಲ್ಲಾ ದೈತ್ಯರ ಪಾದಘಾತಗಳಿಂದ ದಿನದಿನವೂ ನಾನು ವಿಶೀರ್ಣಳಾಗುತ್ತಾ ಇರುವೆನು. ಆದಕಾರಣ ಲೋಕಗಳನ್ನು ಧರಿಸಲೂ ಅಶಕ್ತಳಾಗಿರುವೆನು. ಎಲೈ ದೇವಶ್ರೇಷ್ಠರೆ! ಅವರೆಲ್ಲರನ್ನೂ ಸಂಹರಿಸಿರಿ.

೨೭. ದೇವಶ್ರೇಷ್ಠರಾದ ನೀವು ನನ್ನನ್ನು ರಕ್ಷಿಸದಿದ್ದರೆ ಆ ರಾಕ್ಷಸರ ಕ್ಷೋಭೆಯಿಂದ ವಿಶೀರ್ಣಳಾಗಿ ಪಾತಾಳಕ್ಕೆ ಕುಸಿದುಹೋಗುವೆನು.

೨೮. ಮಾರ್ಕಂಡೇಯನು ಹೇಳಿದನು:—ಅನಂತರ ಭೂದೇವಿಯ ಆ ಮಾತುಗಳನ್ನು ಕೇಳಿ ಬ್ರಹ್ಮ ವಿಷ್ಣು ಮಹೇಶ್ವರರು ಅವಳನ್ನು ಕುರಿತು "ಎಲೌ ಭೂದೇವಿಯೆ! ನಿನ್ನ ಭಾರವನ್ನು ಇಳಿಸುವೆವು" ಎಂದು ಹೇಳಿದರು.

೨೯. ಆಮೇಲೆ ಭೂದೇವಿಯನ್ನು ಕಳುಹಿಸಿ ದೇವತೆಗಳೆಲ್ಲರೂ ಭೂಭಾರವನ್ನು ಇಳಿಸುವುದಕ್ಕಾಗಿ ಪುರಾಣಪುರುಷನಾದ ವಿಷ್ಣುವನ್ನು (ಸ್ತುತಿಯಿಂದ) ಸಂತೋಷಗೊಳಿಸಿದರು.

೩೦. ಆಗ ಸಂತುಷ್ಟನಾಗಿ ಪ್ರಭುವಾದ ವಿಷ್ಣುವು ದೇವತೆಗಳನ್ನು ಕುರಿತು, "ನೀವೂ ಸಹ ಭೂಭಾರವನ್ನು ಇಳಿಸುವುದಕ್ಕಾಗಿ ನಿಮ್ಮಂಶದಿಂದ ಭೂಲೋಕದಲ್ಲಿ

ಅವತೀರ್ಣೋಽಥ ದೇವಕ್ಯಾ ಗರ್ಭೇ ಭಾರಾವತಾರಣೇ ।
ವಿಷ್ಣುಂ ಚಾವತರಿಷ್ಯಂತಂ ಜ್ಞಾತ್ವಾ ದೇವಾಃ ಸನಾತನಂ ॥ ೩೧ ॥

ರಂಭಾ ತಿಲೋತ್ತಮಾದ್ಯಾಶ್ಚ ದೇವ್ಯೋ ರೂಪಗುಣಾನ್ವಿತಾಃ ।
ಕ್ಷಿತಾವುತ್ಪಾದಯಾಮಾಸುಃ ಸಹಸ್ರಾಣಿ ತು ಷೋಡಶ ॥ ೩೨ ॥

ತಾಃ ಸರ್ವಾ ಹಿಮವತ್ಪೃಷ್ಠೇ ಕ್ರೀಡಮಾನಾ ವರಸ್ತ್ರಿಯಃ ।
ಅಪಶ್ಯನ್ನರಕೋ ಭೌಮಸ್ತಾ ಜಹಾರ ತದಾ ಹತಾತ್ ॥ ೩೩ ॥

ತೇನ ತಾ ಧರ್ಷಿತಾ ದೇವ್ಯೋ ನೀತಾಃ ಪ್ರಾಗ್ಜ್ಯೋತಿಷಂ ಪ್ರತಿ ।
ನರಕಂ ಪ್ರಾರ್ಥಯಾಮಾಸುಃ ಸಮಯಂ ಮೈಥುನಂ ಪ್ರತಿ ॥ ೩೪ ॥

ನಾರದೋ ಯಾವದಾಯಾತಿ ನಗರಂ ಪ್ರತಿ ಭೌಮ ತೇ ।
ಅಸ್ಮಾಕಂ ಕುರು ರಕ್ಷಾಂ ಚ ತಾವನ್ನೋ ಮುಂಚ ಮೈಥುನೇ ॥ ೩೫ ॥

ಅವತರಿಸಿರಿ" ಎಂದು ಹೇಳಿ ಭೂಲೋಕದಲ್ಲಿ ದೇವಕೀದೇವಿಯ ಗರ್ಭದಲ್ಲಿ ಭೂಭಾರವನ್ನು ಕಮ್ಮಿಮಾಡುವುದಕ್ಕೆ ಅವತರಿಸಿದನು.

೩೧-೩೨. ಪುರಾಣಪುರುಷನಾದ ವಿಷ್ಣುವು ಭೂಲೋಕದಲ್ಲಿ ಅವತರಿಸಿದನ್ನು ತಿಳಿದು ರಂಭೆ ಮತ್ತು ತಿಲೋತ್ತಮೆಯೇ ಮೊದಲಾದ ರೂಪ ಮತ್ತು ಗುಣಶಾಲಿಗಳಾದ ಹದಿನಾರುಸಾವಿರ ದೇವಸ್ತ್ರೀಯರು ಭೂಮಿಯಲ್ಲಿ ಅವತರಿಸಿದರು.

೩೩. ಹಿಮಾಲಯ ತಪ್ಪಲಲ್ಲಿ ವಿಹರಿಸುತ್ತಿರುವ ಆ ಉತ್ತಮ ಸ್ತ್ರೀಯರನ್ನು (ನೋಡಿ) ನರಕನು ನೋಡಿ ಅವರೆಲ್ಲರನ್ನೂ ಬಲಾತ್ಕಾರವಾಗಿ ತನ್ನ ನಗರಕ್ಕೆ ಕರೆದೊಯ್ದನು.

೩೪. ಆ ಪ್ರಾಗ್ಜ್ಯೋತಿಷಪುರದಲ್ಲಿ ನರಕನು ಆ ದೇವಸ್ತ್ರೀಯರನ್ನ ಸಂಭೋಗಕ್ಕಾಗಿ ಬಲಾತ್ಕರಿಸಲು ಅವರು ಅದಕ್ಕಾಗಿ ಒಂದು ಅವಧಿಯನ್ನು ಅವನಲ್ಲಿ ಹೀಗೆ ಕೇಳಿಕೊಂಡರು.

೩೫. "ಓ ನರಕರಾಜನೆ! ನಿನ್ನ ನಗರಕ್ಕೆ ನಾರದಮುನಿಯು ಬರುವವರೆಗೂ ನಮ್ಮನ್ನು ಸಲಹು. ಅಲ್ಲಿಯವರೆಗೆ ನಮ್ಮನ್ನು ಸಂಭೋಗಕ್ಕಾಗಿ ಬಲಾತ್ಕರಿಸಬೇಡ ಅವಧಿಯನ್ನು ಕೊಡು.

ಸ ಸಮೇಷ್ಯತಿ ವೀರತ್ವಾನ್ನ ಚಿರಾನ್ನೋ ಽನುಗ್ರಹಾತ್ ।
ತೇನ ದೃಷ್ಟಾ ವಯಂ ಸಾರ್ಧಮೇಷ್ಯಾಮಃ ಸಂಗಮಂ ತ್ವಯಾ ॥ ೩೬ ॥

ಇತಿ ಸಂಪ್ರಾರ್ಥಿತಸ್ತಾಭಿರ್ನರಕೋ ಭೂಮಿನಂದನಃ ।
ಬ್ರಹ್ಮವಾಕ್ಯಂ ತದಾ ಸ್ಮೃತ್ವಾ ಹ್ಯೇವಮಸ್ತ್ವಿತಿವಾನ್ಮುದಃ ॥ ೩೭ ॥

ಏತಸ್ಮಿನ್ನಂತರೇ ದೇವೋ ಭಗವಾಂಲ್ಲೋಕಭಾವನಃ ।
ದೇವಕ್ಯಾ ಜಠರಾಚ್ಚಾತೋ ವ್ರಜೇ ನಂದಗೃಹೇಽಭವತ್ ॥ ೩೮ ॥

ಕಂಸಕೇಶಿಪ್ರಲಂಬಾದೀನ್ ಹತ್ವಾ ದೈತ್ಯಾನನೇಕಶಃ ।
ಅಕರೋದ್ದ್ವಾರಕಾವಾಸಂ ಸಾಗರೇ ಸಲಿಲಾಂತರೇ ॥ ೩೯ ॥

ತತ್ರಾಪ್ತೌ ಕನ್ಯಕಾಸ್ತೇನ ಸ್ವಧರ್ಮೇಣ ಚ ಸ್ವೀಕೃತಾಃ
ಕಾಲಿಂದೀ ಮಾನುಷೀರೂಪಾ ರುಕ್ಮಿಣೀ ರಮಣೀ ತತಃ ॥ ೪೦ ॥

---

೩೬. ಆ ನಾರದಮುನಿಯು ಸ್ವಲ್ಪಕಾಲದಲ್ಲಿಯೇ ನಮ್ಮ ಅನುಗ್ರಹಕ್ಕಾಗಿ ಬರುವನು. ಅವನ ದರ್ಶನವನ್ನು ತೆಗೆದುಕೊಂಡು ಆಮೇಲೆ ನಿನ್ನೊಡನೆ ಸೇರುವೆವು.

೩೭. ಈರೀತಿಯಾಗಿ ಆ ಸ್ತ್ರೀಯರು ಪ್ರಾರ್ಥಿಸಲು ಭೂಪುತ್ರನಾದ ನರಕನು ಬ್ರಹ್ಮನ ನಾರದಮುನಿಯು ನಿನ್ನ ನಗರಕ್ಕೆ ಬಂದಮೇಲೆ ಆ ಸ್ತ್ರೀಯರೊಡನೆ ವಿಹರಿಸು ಎಂಬ ವಾಕ್ಯವನ್ನು ಸ್ಮರಿಸಿ ಹಾಗೆಯೇ ಆಗಲಿ ಎಂದನು.

೩೮. ಈ ಸಮಯದಲ್ಲಿ ಲೋಕಕರ್ತನಾದ ಭಗವಂತನು ದೇವಕಿಯ ಗರ್ಭದಲ್ಲಿ ಜನಿಸಿ ಗೋಕುಲದಲ್ಲಿ ನಂದಗೋಪನ ಮನೆಯಲ್ಲಿ ಬೆಳೆಯುತ್ತಲಿದ್ದನು.

೩೯. ಅಲ್ಲದೆ ಮುಂದೆ ಕಂಸ, ಕೇಶಿ, ಪ್ರಲಂಬಾಸುರ ಮೊದಲಾದ ರಾಕ್ಷಸರನ್ನು ಕೊಂದು ಸಮುದ್ರ ಮಧ್ಯದಲ್ಲಿ ದ್ವಾರಕಾನಗರವನ್ನು ಕಲ್ಪಿಸಿ ಅಲ್ಲಿ ವಾಸಿಸುತ್ತಲಿದ್ದನು.

೪೦-೪೧. ಅಲ್ಲಿ ತನ್ನ ಧರ್ಮದಂತೆ ಆ ಭಗವಂತನು (ಶ್ರೀಕೃಷ್ಣ) ಮನುಷ್ಯರೂಪಳಾದ ಕಾಲಿಂದಿ, ರುಕ್ಮಿಣಿ, ರಮಣಿ, ಸತ್ರಾಜಿತು ಎಂಬುವನ ಪುತ್ರಿಯಾದ

ನಗ್ನಜಿತ್ತನಯಾ ಸತ್ಯಾ ಲಕ್ಷ್ಮಣಾ ಚಾರುಹಾಸಿನೀ ।
ಸುಶೀಲಾ ಶೀಲಸಂಪನ್ನಾ ತಥಾ ಜಾಂಬವತೀ ಸತೀ ॥ ೪೧ ॥

ಏತಾಸು ಸ್ತ್ರೀಷು ಚ ತತೋ ಹ್ಯನುರಕ್ತಸ್ಯ ತಸ್ಯ ವೈ ।
ಷಟ್ತ್ರಿಂಶದ್ವತ್ಸರಾ ಜಾತಾ ಬಲದೇವಸಹಾಯಿನಃ ॥ ೪೨ ॥

ಪ್ರದುಮ್ನಸಾಂಬಪ್ರಮುಖಾಃ ಪುತ್ರಾಸ್ತಸ್ಯ ಮಹಾಬಲಾಃ ।
ಜಾತಾಸ್ತತ್ರ ದ್ವಿಜಶ್ರೇಷ್ಠಾಃ ಶಾಸ್ತ್ರೇ ಶಸ್ತ್ರೇ ಚ ಕೋವಿದಾಃ ॥ ೪೩ ॥

ಅನೇಕೇ ನಿಹತಾ ದೈತ್ಯಾ ಭಾರಭೂತಾಸ್ತದಾ ಕ್ಷಿತೇಃ ।
ಪ್ರಹೃಷ್ಟಃ ಕ್ರೀಡಮಾನಶ್ಚ ದ್ವಾರಕಾಯಾಮುವಾಸ ಸಃ ॥ ೪೪ ॥

ಅಥ ಶಕ್ರಸ್ತದಾಽಽಯಾತೋ ನರಕೇಣಾರ್ದಿತೋ ಭೃಶಂ ।
ದ್ವಾರಕಾಂ ಪ್ರತಿ ಕೃಷ್ಣಸ್ಯ ದರ್ಶನಾಯ ಗಣೈಃ ಸಹ ॥ ೪೫ ॥

ಸತ್ಯಭಾಮೆ, ಸುಂದರನಾದ ಮಂದಹಾಸವುಳ್ಳ ಲಕ್ಷ್ಮಣಾದೇವಿ, ಶೀಲವತಿಯಾದ ಸುಶೀಲೆ ಜಾಂಬವತಿ ಮತ್ತು ಸತಿ ಎಂಬ ಎಂಟುಜನ ಕನ್ಯೆಯರನ್ನು ಮದುವೆಯಾದನು.

೪೨. ಈ ಎಂಟು ಜನ ಸುಂದರಿಯರೊಡನೆ ಅನುರಾಗದಿಂದ ವಿಹರಿಸುತ್ತಾ ಅಣ್ಣನಾದ ಬಲರಾಮನ ಸಹಾಯದಿಂದ ಇರುತ್ತಿದ್ದ ಆ ಭಗವಂತನಿಗೆ ಮೂವತ್ತಾರು ವರ್ಷಗಳು ಕಳೆದುವು.

೪೩. ಎಲೈ ಬ್ರಾಹ್ಮಣಶ್ರೇಷ್ಠರೆ! ಭಗವಂತನಿಗೆ ಅಲ್ಲಿ ಯುದ್ಧಕಲೆಯಲ್ಲಿಯೂ ಶಾಸ್ತ್ರದಲ್ಲಿಯೂ ನಿಪುಣರಾದ ಪ್ರದ್ಯುಮ್ನ ಮತ್ತು ಸಾಂಬನೇ ಮೊದಲಾದ ಅನೇಕ ಮಹಾಬಲಶಾಲಿಗಳಾದ ಮಕ್ಕಳು ಜನಿಸಿದರು.

೪೪. ಆಗ ಶ್ರೀಕೃಷ್ಣನಿಂದ ಭೂಮಿಗೆ ಭಾರವಾಗಿದ್ದ ಅನೇಕ ರಾಕ್ಷಸರು ಸಂಹರಿಸಲ್ಪಟ್ಟರು. ಸಂತೋಷದಿಂದ ವಿಹರಿಸುತ್ತಾ ಭಗವಂತನು ದ್ವಾರಕೆಯಲ್ಲಿ ವಾಸಿಸುತ್ತಲಿದ್ದನು.

೪೫. ಆಮೇಲೆ ಒಂದುದಿನ ನರಕನಿಂದ ತುಂಬಾ ಪೀಡಿಸಲ್ಪಟ್ಟು ಇಂದ್ರನು ಶ್ರೀಕೃಷ್ಣನನ್ನು ನೋಡಲು ತನ್ನ ಪರಿವಾರದೊಂದಿಗೆ ದ್ವಾರಕಾನಗರಕ್ಕೆ ಬಂದನು.

ತತ್ರ ಗತ್ವಾ ಪರಿಷ್ವಜ್ಯ ಕೃಷ್ಣಂ ಲೋಕನಮಸ್ಕೃತಂ ।
ಪೂಜಿತಸ್ತೇನ ಬಹುಶ ಆಸನೇ ಕಾಂಚನೇ ಸ್ಥಿತಃ ॥ ೪೬ ॥

ಕಥಯಾಮಾಸ ಹರಯೇ ನರಕಸ್ಯ ವಿಚೇಷ್ಟಿತಂ ।
ಶಕ್ರೋ ಯಥಾ ಪೂರ್ವವೃತ್ತಂ ಯಥಾ ವಾ ವರ್ತತೇಽಧುನಾ ॥ ೪೭ ॥

॥ ಶಕ್ರ ಉವಾಚ ॥

ಶೃಣು ಕೃಷ್ಣ ಮಹಾಬಾಹೋ ಯದರ್ಥಮಹಮಾಗತಃ ।
ಕಥಯಿಷ್ಯಾಮಿ ತತ್ಸರ್ವಂ ತತ್ರ ಶಂಕಾಂ ನ ಸಂಕುರು ॥ ೪೮ ॥

ಭೂಮಿಪುತ್ರೋಽಸುರೋ ನಾಮ್ನಾ ನರಕಃ ಸುರಮರ್ದನಃ ।
ಚಿರಂಜೀವೀ ಪುರಾ ವಿಷ್ಣೋ ಕ್ಷಿತಿಭ್ಯಾಂ ಪರಿಪಾಲಿತಃ ॥ ೪೯ ॥

ಅಧುನಾ ಸ ಕ್ಷಿತಿಂ ವಿಷ್ಣುಮವಜ್ಞಾಯ ದುರಾಸದಃ ।
ಬಾಣಸ್ಯ ವಚನಾದ್ಬ್ರೋ ಬ್ರಹ್ಮಾಣಂ ಪರ್ಯತೋಷಯತ್ ॥ ೫೦ ॥

---

೪೬. ದ್ವಾರಕೆಗೆ ಬಂದು ಇಂದ್ರನು ಕೃಷ್ಣನ ಬಳಿಗೆ ಹೋಗಿ ಸಕಲರಿಂದ ನಮಸ್ಕರಿಸಲ್ಪಡುವ ಆ ಕೃಷ್ಣನನ್ನು ಆಲಿಂಗಿಸಿ ಅವನಿಂದ ಸತ್ಕೃತನಾಗಿ ಸುವರ್ಣ ಮಯವಾದ ಆಸನದಲ್ಲಿ ಕುಳಿತನು.

೪೭-೪೮. ಬಳಿಕ ಇಂದ್ರನು ಶ್ರೀಕೃಷ್ಣನಿಗೆ ನರಕನ ಚೇಷ್ಟೆಗಳನ್ನು ಹೀಗೆ ಹೇಳಿದನು. ಆ ನರಕನ ಹಿಂದಿನ ಸಮಾಚಾರವನ್ನೂ ಈಗ ಹೇಗಿರುವನೆಂಬುದನ್ನೂ ನಾನು ಯಾವ ಕಾರ್ಯದ ನಿಮಿತ್ತವಾಗಿ ಬಂದಿರುವೆನೋ ಅದೆಲ್ಲವನ್ನೂ ಹೇಳುವೆನು. ಆ ವಿಷಯದಲ್ಲಿ ಸಂಶಯಪಡಬೇಡ.

೪೯. ಭೂದೇವಿಯ ಪುತ್ರನೂ, ದೇವತೆಗಳನ್ನು ಹಿಂಸಿಸುವವನೂ ಮತ್ತು ಚಿರಂಜೀವಿಯೂ ಆದ ನರಕನೆಂಬ ಅಸುರನಿರುವನು. ಹಿಂದೆ ಅವನು ಭೂದೇವಿ ಮತ್ತು ನಾರಾಯಣರಿಂದ ಸಲಹಲ್ಪಟ್ಟವನು.

೫೦-೫೧. ಈಗ ಆ ವೀರನಾದ ನರಕನು ಬಾಣಾಸುರನ ಮಾತಿನಂತೆ ಭೂದೇವಿಯನ್ನೂ, ನಾರಾಯಣನನ್ನೂ ಮರೆತು ಬ್ರಹ್ಮನನ್ನು ತಪಸ್ಸಿನಿಂದ ಸಂತೋಷಗೊಳಿಸಿ ಮೆಚ್ಚಿಸಿ ಸಂತುಷ್ಟನಾದ ಅವನಿಂದ ವರವನ್ನು ಪಡೆದು ತುಂಬಾ ಕೊಬ್ಬಿದವ

ಬ್ರಹ್ಮಣಃ ಸ ವರಂ ಲಬ್ಧ್ವಾ ಹ್ಯತೀವಾಭೂತ್ಪ್ರದರ್ಪಿತಃ ।
ಮಾಧವಂ ಪೃಥಿವೀಂ ವಾಪಿ ಸಸ್ಮಾರ ನ ಕದಾಚನ ॥ ೫೧ ॥

ಪೂರ್ವಮಾಸೀತ್ಸ ಧರ್ಮಾತ್ಮಾ ಹ್ಯಾರಾಧಿತಸುರೋ ವ್ರತೀ
ಅಧುನಾ ಬಾಧತೇ ಸರ್ವಾನಾಸುರಂ ಭಾವಮಾಶ್ರಿತಃ ॥ ೫೨ ॥

ಅದಿತೇಃ ಕುಂಡಲೇ ಮೋಹಾಜ್ಜಹಾರಾಮೃತಸಂಭವೇ ।
ದೇವಾನೃಷೀನ್ಬಾಧಮಾನೋ ವಿಪ್ರಾಣಾಮುಪ್ರಿಯೇ ರತಃ ॥ ೫೩ ॥

ಮಾಂ ಚಾಪಿ ಬಾಧತೇ ನಿತ್ಯಂ ಕಾಮಗಾಮಿ ದುರಾಸದಃ ।
ಜೇತಾ ತು ಸುರದೈತ್ಯಾನಾಮವಧ್ಯಃ ಸರ್ವದೇಹಿನಾಂ ॥ ೫೪ ॥

ತವ ಚಾಪ್ಯಂತರಪ್ರೇಕ್ಷೀ ತಂ ಪಾಪಂ ಜಹಿ ಭೂತಯೇ ।
ತ್ವದರ್ಥಂ ಸರ್ವದೇವೈರ್ಯಾ ದೇವಗಂಧರ್ವಕನ್ಯಕಾಃ ॥ ೫೫ ॥

ನಾಗಿ ವಿಷ್ಣುವನ್ನಾಗಲೀ ತಾಯಿಯಾದ ಭೂದೇವಿಯನ್ನಾಗಲೀ ಯಾವಾಗಲೂ ಸ್ಮರಿಸುವುದೇ ಇಲ್ಲವು.

೫೨. ಹಿಂದೆ ಅವನು ದೇವತೆಗಳನ್ನು ಆರಾಧಿಸುತ್ತ ವ್ರತನಿಷ್ಠನಾಗಿ ತುಂಬಾ ಧರ್ಮಾತ್ಮನಾಗಿದ್ದನು. ಆದರೆ ಈಗ ರಾಕ್ಷಸಸ್ವಭಾವವುಳ್ಳವನಾಗಿ ಎಲ್ಲರನ್ನೂ ಪೀಡಿಸುತ್ತಲಿರುವನು.

೫೩. ಅಲ್ಲದೆ ಅವನು ಅದಿತಿದೇವಿಯ ಅಮೃತವನ್ನು ಸುರಿಸುವ ಕುಂಡಲ ಗಳೆರಡನ್ನು ದುರಾಶೆಯಿಂದ ಅಪಹರಿಸಿರುವನು. ದೇವತೆಗಳನ್ನೂ ಋಷಿಗಳನ್ನೂ ಬಾಧಿಸುತ್ತ ಬ್ರಾಹ್ಮಣರಿಗೆ ಕೆಟ್ಟುದನ್ನು ಮಾಡುತ್ತಲಿರುವನು.

೫೪. ಪರಾಕ್ರಮಿಯಾದ ಆ ನರಕನು ಸ್ವೇಚ್ಛೆಯಾಗಿ ವಿಹರಿಸುತ್ತಾ ನನ್ನನ್ನು ಬಾಧಿಸುತ್ತಲಿರುವನು. ದೇವತೆಗಳನ್ನೂ, ರಾಕ್ಷಸರನ್ನೂ ಜಯಿಸಿರುವನು. ಎಲ್ಲಾ ಪ್ರಾಣಿಗಳೂ ಅವನನ್ನು ಕೊಲ್ಲಲು ಶಕ್ತರಲ್ಲ.

ನಿನ್ನಲ್ಲಿಯೂ ಛಿದ್ರವನ್ನು ಹುಡುಕುತ್ತಲಿರುವನು. ನಿನ್ನನ್ನು ಜಯಿಸಲು ಸಮಯವನ್ನು ನಿರೀಕ್ಷಿಸುತ್ತಲಿರುವನು. ಆದಕಾರಣ ಪಾಪಿಯಾದ ಆ ನರಕನನ್ನು ಸರ್ವರ ಕ್ಷೇಮಕ್ಕಾಗಿ ಸಂಹರಿಸು.

ಪುರಾ ಪರ್ವತಮುಖ್ಯೇ ತು ಹಿಮವತ್ಯವತಾರಿತಾಃ ।
ಚತುರ್ದಶ ಸಹಸ್ರಾಣಿ ಸಹಸ್ರೇ ದ್ವೇ ಶತಾಧಿಕೇ ॥ ೫೬ ॥

ತಾಃ ಸರ್ವಾಃ ಕನ್ಯಕಾಃ ಪಾಪಃ ಪ್ರಸಹ್ಯ ವರದರ್ಪಿತಃ ।
ಜಹಾರ ಸ ದುರಾಧರ್ಷೋ ಹಯಗ್ರೀವಸಹಾಯವಾನ್ ॥ ೫೭ ॥

ಸಾಗರೇ ಯಾನಿ ರತ್ನಾನಿ ಪೃಥಿವ್ಯಾಂ ಚ ತ್ರಿವಿಷ್ಟಪೇ ।
ತಾನಿ ಸರ್ವಾಣಿ ಸಂಹೃತ್ಯ ಪ್ರಮುಥ್ಯ ಸುರಮಾನುಷಾನ್ ॥ ೫೮ ॥

ತೀರೇ ಲೌಹಿತ್ಯತೀರ್ಥಸ್ಯ ಸೋಽಕರೋನ್ಮಣಿಪರ್ವತಂ ।
ತಸ್ಮಿನ್ಗಿರೌ ಪುರೀಂ ರಮ್ಯಾಂ ಕಾರಯಿತ್ವಾಽಲಕಾಹ್ವಯಾಂ ॥ ೫೯ ॥

ತಾಃ ಸರ್ವಾ ವಾಸಯಾಮಾಸ ದೇವಗಂಧರ್ವಯೋಷಿತಃ ।
ಏಕವೇಣೀಧರಾಃ ಸರ್ವಾಃ ಸಂಭೋಗಪರಿವರ್ಜಿತಾಃ ॥ ೬೦ ॥

೫೬-೫೭. ಹದಿನಾರುಸಾವಿರದ ಎರಡುನೂರು ದೇವ ಮತ್ತು ಗಂಧರ್ವಕನ್ಯೆಯರು ಪರ್ವತಶ್ರೇಷ್ಠವಾದ ಹಿಮಾಲಯದಲ್ಲಿ ಅವತರಿಸಿದ್ದರು. ಆ ಎಲ್ಲಾ ದೇವ ಸ್ತ್ರೀಯರನ್ನೂ ವರದಿಂದ ಕೊಬ್ಬಿದ ಆ ನರಕನು ಹಯಗ್ರೀವನ ಸಹಾಯದೊಡನೆ ಬಲಾತ್ಕಾರದಿಂದ ಅಪಹರಿಸಿದನು.

೫೮. ಸಮುದ್ರದಲ್ಲಿಯೂ ಭೂಮಿಯಲ್ಲಿಯೂ ಸ್ವರ್ಗದಲ್ಲಿಯೂ ಇರುವಂತಹ ರತ್ನಗಳಿಲ್ಲವನ್ನೂ ದೇವಮನುಷ್ಯರನ್ನು ಹಿಂಸಿಸಿ ತಂದು ಲೌಹಿತ್ಯನದಿಯ ದಡದಲ್ಲಿ ಮಣಿಮಯವಾದ ಪರ್ವತವನ್ನು ನಿರ್ಮಿಸಿರುವನು.

೫೯. ಆ ಪರ್ವತದಲ್ಲಿ "ಅಲಕಾ" ಎಂಬ ಮನೋಹರವಾದ ನಗರಿಯನ್ನು ಕಲ್ಪಿಸಿ ಅಲ್ಲಿ ಆ ಹದಿನಾರುಸಾವಿರ ದೇವಗಂಧರ್ವ ಕನ್ಯೆಯರನ್ನು ಇರಿಸಿರುವನು.

೬೦. ಆ ಕನ್ಯೆಯರು ಈಗ ಅಲ್ಲಿ ಸಂಸ್ಕಾರವಿಲ್ಲದೆ ಬತ್ತಿಹೊಸೆದ ಕೇಶಪಾಶಗಳಿಂದ ಮಲಿನರಾಗಿ ಸಂಭೋಗಸುಖವಿಲ್ಲದೆ ನಿನ್ನನ್ನೇ ನಿರೀಕ್ಷಿಸುತ್ತಲಿರುವರು. ಓ ಕೃಷ್ಣನೇ! ಆ ಸ್ತ್ರೀಯರನ್ನು ಬಂಧವಿಮೋಚನೆಮಾಡಿ ಸನಾಥೆಯರನ್ನಾಗಿಮಾಡು.

ತ್ವಾಮೇವ ತಾಃ ಪ್ರತೀಕ್ಷಂತೇ ಸನಾಥಾಃ ಕುರು ಕೃಷ್ಣ ತಾಃ ।
ಯಾವದಾಗಚ್ಛತಿ ಪುರಂ ಭವತೋ ನಾರದೋ ಮುನಿಃ ॥ ೬೧ ॥

ತಾವನ್ನ ಮೈಥುನೇ ಯತ್ನಂ ಭೌಮ ತ್ವಂ ಸಂಕರಿಷ್ಯಸಿ ।
ಇತಿ ತಾಃ ಸಮಯಂ ಚಕ್ರುರ್ನರಕಸ್ಯ ದುರಾತ್ಮನಃ ॥ ೬೨ ॥

ನಾರದಶ್ಚ ತದಾಽಽಯಾತಃ ಪ್ರಾಗ್ಜ್ಯೋತಿಷಪುರಂ ಪ್ರತಿ ।
ಯದಾ ತ್ವಂ ನರಕಂ ಹಂತುಂ ಗಂತಾ ತತ್ಪುರಮುತ್ತಮಂ ॥ ೬೩ ॥

ತಸ್ಮಾತ್ತ್ವಂ ಪಾಪಕರ್ಮಾಣಂ ನರಕಂ ನರಕೋಪಮಂ ।
ಜಹಿ ದೇವಮನುಷ್ಯಾಣಾಂ ಕಂಟಕಂ ತ್ವಂ ದುರಾಸದಂ ॥ ೬೪ ॥

ವಧಾತ್ತಸ್ಯ ಕ್ಷಿತಿರ್ದೇವೀ ಪುತ್ರಶೋಕಂ ನ ಚಾಪ್ಸ್ಯತಿ ।
ಸ್ವಯಮೇವ ವಧಂ ತಸ್ಯ ದೇವೇಭ್ಯೋ ಯದಯಾಚತ ॥ ೬೫ ॥

೬೧-೬೨. ಎಲೈ ನರಕನೇ! ನಿನ್ನ ನಗರಕ್ಕೆ ನಾರದಮುನಿಯು ಬರುವವರೆಗೆ ನಮ್ಮಲ್ಲಿ ಸಂಭೋಗಪ್ರಯತ್ನವನ್ನು ಮಾಡಬಾರದು ಎಂಬ ನಿಬಂಧನೆಯನ್ನು ಆ ಕನ್ಯೆಯರು ದುರಾತ್ಮನಾದ ನರಕನೊಡನೆ ಮಾಡಿಕೊಂಡಿರುವರು.

೬೩. ಓ ಕೃಷ್ಣನೇ! ನೀನು ಆ ನರಕನನ್ನು ಸಂಹರಿಸಲು ಉತ್ತಮವಾದ ಪ್ರಾಗ್ಜ್ಯೋತಿಷನಗರಕ್ಕೆ ಯಾವಾಗ ಹೋಗುವೆಯೋ ಆಗಲೇ ನಾರದಮುನಿಯೂ ಆ ನಗರಕ್ಕೆ ಬರುವನು.

೬೪. ಆದಕಾರಣ ಓ ಕೃಷ್ಣನೇ! ನೀನು ಪಾಪಿಯೂ, ನರಕದಂತೆ ಕೇವಲ ಹಿಂಸಾಮಯನೂ, ಪಾಪಿಗಳಿಗೆ ಆಶ್ರಯನೂ; ದೇವತೆಗಳು ಮತ್ತು ಮನುಷ್ಯರಿಗೆ ಕಂಟಕನಾಗಿರುವವನೂ, ನಿರ್ಭಯನೂ ಆದ ಆ ನರಕಾಸುರನನ್ನು ಸಂಹರಿಸು.

೬೫. ಆ ನರಕರನ್ನು ಸಂಹರಿಸಿದರೆ ಭೂದೇವಿಯು ಪುತ್ರಶೋಕವುಳ್ಳವಳಾಗುವುದಿಲ್ಲವು. ಕಾರಣವೇನೆಂದರೆ, ಅವಳೇ ಅವನನ್ನು ಸಂಹರಿಸುವಂತೆ ದೇವತೆಗಳನ್ನು ಪ್ರಾರ್ಥಿಸಿರುವಳು.

ತಸ್ಮಾತ್ತ್ವಂ ಜಹಿ ಪಾಪಿಷ್ಠಂ ನರಕಂ ಪಾಪಪೂರುಷಂ ।
ಸ್ತ್ರೀರತ್ನಾನ್ಯಪಿ ರತ್ನಾನಿ ತಂ ನಿಹತ್ಯ ಸಮುದ್ಧರ ॥ ೬೬ ॥

ಇತ್ಯುಕ್ತೋ ಜಗತಾಂ ನಾಥಃ ಶಕ್ರೇಣ ಸುಮಹಾತ್ಮನಾ ।
ಪ್ರತಿಜಜ್ಞೇ ಕ್ಷಿತಿಸುತಂ ಹಂತುಂ ಪ್ರತಿ ತದೈವ ಹಿ ॥ ೬೭ ॥

ಪ್ರತಿಜ್ಞಾಯ ವಧಂ ತಸ್ಯ ಶಕ್ರೇಣ ಸಹ ಕೇಶವಃ ।
ತದೈವ ಯಾತ್ರಾಮಕರೋತ್ಪ್ರಾಗ್ಜ್ಯೋತಿಷಪುರಂ ಪ್ರತಿ ॥ ೬೮ ॥

ಆರುಹ್ಯ ಗರುಡಂ ಕೃಷ್ಣಃ ಸತ್ಯಭಾಮಾದ್ವಿತೀಯಕಃ ।
ಪ್ರಾಗ್ಜ್ಯೋತಿಷಮುಖೋಽಗಚ್ಛದ್ದ್ವಾವಸಸ್ತ್ರಿದಿವಂ ಯಯೌ ॥ ೬೯ ॥

ದಿವಮಾಕ್ರಮ್ಯ ಗಚ್ಛಂತೌ ಕೃಷ್ಣಶಕ್ರೌ ಮಹಾದ್ಯುತೀ ।
ಯಾದವಾ ದದೃಶುಸ್ತತ್ರ ಸೂರ್ಯಾಚಂದ್ರಮಸೌ ಯಥಾ ॥ ೭೦ ॥

---

೬೬. ಆದುದರಿಂದ ಓ ಕೃಷ್ಣನೆ! ಪಾಪನಿರತನೂ ಪಾಪಮಯನೂ ಆದ ಆ ನರಕಾಸುರನನ್ನು ಸಂಹರಿಸು. ಹೀಗೆ ಸಂಹರಿಸಿ ಅವನಲ್ಲಿರುವ ದೇವಸ್ತ್ರೀಯರೆಂಬ ರತ್ನಗಳನ್ನೂ, ಮಿಕ್ಕ ರತ್ನಗಳನ್ನೂ ಉದ್ಧರಿಸು.

೬೭. ಈರೀತಿಯಾಗಿ ಇಂದ್ರನು ಹೇಳಲು ಜಗದೊಡೆಯನಾದ ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸುವೆನೆಂದು ಆಗಲೇ ಅಂಗೀಕರಿಸಿದನು.

೬೮. ನರಕನ ವಧೆಯನ್ನು ಮಾಡುವೆನೆಂದು ಇಂದ್ರನೊಡನೆ ಹೇಳಿ ಆಗಲೇ ಪ್ರಾಗ್ಜ್ಯೋತಿಷನಗರಕ್ಕೆ ಪ್ರಯಾಣವನ್ನು ಬೆಳೆಸಿದನು.

೬೯. ಆಗ ಶ್ರೀಕೃಷ್ಣನು ಗರುಡನನ್ನೇರಿ ಸತ್ಯಭಾಮೆಯೊಡನೆ ಪ್ರಾಗ್ಜ್ಯೋತಿಷ ನಗರಕ್ಕೆ ಎದುರಾಗಿ ಹೊರಟನು. ಇಂದ್ರನು ಸ್ವರ್ಗಕ್ಕೆ ಹೊರಟುಹೋದನು.

೭೦. ಆ ಕೃಷ್ಣ ಮತ್ತು ಇಂದ್ರರು ಆಕಾಶದಲ್ಲಿ ಹೋಗುತ್ತಿರುವಾಗ ಸೂರ್ಯ ಚಂದ್ರರಂತೆ ಪ್ರಕಾಶಿಸುತ್ತಲಿರುವುದನ್ನು ದ್ವಾರಕೆಯಲ್ಲಿಯ ಯಾದವರು ನೋಡಿದರು.

ಸಂಸ್ತೂಯಮಾನೌ ಗಂಧರ್ವೈರ್ದೇವೈರಪ್ಸರಸಾಂ ಗಣೈಃ ।
ಕೃಷ್ಣಃ ಶಕ್ರಃ ಕ್ಷಣಾದೇವ ಗತೌ ಖೇ ತಾವದೃಶ್ಯತಾಂ ॥ ೭೧ ॥

ತತಃ ಕ್ಷಣೇನ ಗರುಡೇನಾಸಸಾದ ಜಗತ್ಪತಿಃ ।
ಪುರಂ ಪ್ರಾಗ್ಜ್ಯೋತಿಷಂ ರಮ್ಯಂ ನರಕೇಣ ವಶೀಕೃತಂ ॥ ೭೨ ॥

ಸ ದುರ್ಗಂ ಮೌರವೈಃ ಪಾಶೈಃ ಷಟ್ಸಹಸ್ರೈರ್ಭಯಂಕರೈಃ ।
ಕ್ಷುರಾಂತೈರ್ವೇಷ್ಟಿತಂ ಪಾರ್ಶ್ವೇ ಮೃತ್ಯುಪಾಶೈರಿವೋಚ್ಛ್ರಿತಂ ॥ ೭೩ ॥

ನಿರ್ಗಚ್ಛಂತಂ ಪುರಾತ್ತಸ್ಮಾನ್ನಾರದಂ ಚ ದದರ್ಶ ಸಃ ।
ಸ ತು ದೇವಮುನಿಃ ಶ್ರೀಮಾನ್ಯದಾಗಾನ್ನರಕಂ ಪ್ರತಿ ॥ ೭೪ ॥

ತದಾ ಪ್ರಾಗ್ಜ್ಯೋತಿಷಂ ಗತ್ವಾ ಸತ್ಕೃತಸ್ತೇನ ನಾರದಃ ।
ಸಂಗಮೇ ಸಮಯಂ ಪ್ರೋಚೇ ನರಕಾಯ ಸ ಯೋಷಿತಾಂ ॥ ೭೫ ॥

---

೭೧. ಗಂಧರ್ವರಿಂದಲೂ, ದೇವತೆಗಳಿಂದಲೂ, ಅಪ್ಸರಸ್ತ್ರೀಯರಿಂದಲೂ ಸ್ತುತಿಸಲ್ಪಡುತ್ತಾ ಆ ಕೃಷ್ಣ ಮತ್ತು ಇಂದ್ರರು ಸ್ವಲ್ಪಕಾಲದಲ್ಲಿಯೇ ಆಕಾಶದಲ್ಲಿ ಅದೃಶ್ಯರಾದರು.

೭೨. ಅನಂತರ ಜಗದೊಡೆಯನಾದ ಶ್ರೀ ಕೃಷ್ಣನು ಸ್ವಲ್ಪಕಾಲದಲ್ಲಿಯೇ ಗರುಡನಮೇಲೆ ಕುಳಿತು ನರಕಾಸುರನ ಅಧೀನದಲ್ಲಿರುವ ರಮ್ಯವಾದ ಪ್ರಾಗ್ಜ್ಯೋತಿಷ ಪುರವನ್ನು ಸೇರಿದನು.

೭೩-೭೪. ಅಲ್ಲಿ ಆ ಶ್ರೀ ಕೃಷ್ಣನು ಆ ನಗರದ ಮುರುರಾಕ್ಷಸನ ಕಡೆ ಭಯಂಕರರೂ, ಮೃತ್ಯುವಿನ ಪಾಶದಂತೆ ಇರುವವರೂ ಆದ ಆರುಸಾವಿರ ರಾಕ್ಷಸರಿಂದ ಸುತ್ತುವರಿಯಲ್ಪಟ್ಟ ಎತ್ತರವಾದ ದುರ್ಗವನ್ನು ನೋಡಿದನು. ಮತ್ತು ಆ ನಗರದಿಂದ ಹೊರಹೊರಡುತ್ತಲಿರುವ ನಾರದಮುನಿಯನ್ನೂ ನೋಡಿದನು.

೭೫. ಆ ದೇವಮುನಿಯಾದ ನಾರದನು ಆಗಲೇ ಪ್ರಾಗ್ಜ್ಯೋತಿಷನಗರಕ್ಕೆ ಹೋಗಿ ನರಕನನ್ನು ಕಂಡು ಅವನಿಂದ ಸತ್ಕೃತನಾಗಿ ಆ ದೇವಸ್ತ್ರೀಯರೊಡನೆ ಸಂಭೋಗಕ್ಕೆ ಒಂದು ಕಾಲವನ್ನು ಹೀಗೆ ಹೇಳಿದನು.

ಪ್ರವರ್ತತೇಽದ್ಯ ಚೈತ್ರಸ್ಯ ಶುಕ್ಲಪಕ್ಷಸ್ಯ ಪಂಚಮೀ ।
ನವಮ್ಯಾಂ ತು ಧರಾಪುತ್ರ ಪ್ರಾಪ್ಸ್ಯೋತಿ ಮಹದಾಪದಂ ॥ ೭೬ ॥

ತದಾ ಯದಿ ಚತುರ್ದಶ್ಯಾಂ ಸುಸ್ನಾತಾ ಯೋಷಿತಸ್ತ್ವಮಾಃ ।
ಸುರತೇಷು ತ್ವಯಾ ತತ್ರ ಪ್ರಯೋಕ್ತವ್ಯಾ ಯಥಾಸುಖಂ ॥ ೭೭ ॥

ನಾರದಸ್ಯ ವಚಃ ಶ್ರುತ್ವಾ ನರಕೋ ಭಯಮೋಹಿತಃ ।
ಆಸಾರಂ ಚ ಪ್ರಸಾರಂ ಚ ನಗರೇ ಸಂನ್ಯವೇದಯತ್ ॥ ೭೮ ॥

ರಕ್ಷಭೀ ರಕ್ಷಿತಂ ರಾಜ್ಯಂ ರಕ್ಷಿತಂ ಚ ಸಪುಂತತಃ ।
ಭಯಹರ್ಷಯುತೋ ಭೌಮಃ ಸಮಯಂ ಸಮವೈಕ್ಷತ ॥ ೭೯ ॥

ತಸ್ಮಿನ್ನವಸರೇ ಪ್ರಾಪ ಕೃಷ್ಣಃ ಪ್ರಾಗ್ಜ್ಯೋತಿಷಂ ಪುರಂ ।
ಪ್ರಥಮಂ ಪಶ್ಚಿಮಂ ದ್ವಾರಮಾಸಾದ್ಯ ಗರುಡಧ್ವಜಃ ॥ ೮೦ ॥

---

೭೬. ಅದೇನೆಂದರೆ :—ಎಲೈ ನರಕನೆ! ಇಂದು ಚೈತ್ರ ಶುಕ್ಲ ಪಂಚಮಿ ಯಾಗಿರುವುದು. ಮುಂದೆ ಬರುವ ನವಮಿಯಲ್ಲಿ ನಿನಗೆ ದೊಡ್ಡದೊಂದು ಆಪತ್ತು ಬರುವದಿರುತ್ತವೆ.

೭೭. ಆ ಆಪತ್ತಿನ ಪರಿಹಾರಕ್ಕಾಗಿ ನವಮಿಯನ್ನು ಕಳೆದು ಚತುರ್ದಶಿಯಲ್ಲಿ ಈ ಸ್ತ್ರೀಯರು (ಮುಂಗಳ) ಋತುಸ್ನಾನ ಮಾಡಿದುದೇ ಆದರೆ ಅಂದು ನೀನು ಈ ಸ್ತ್ರೀಯರಲ್ಲಿ ರತಿಕ್ರೀಡೆಯಿಂದ ಸುಖವಾಗಿರಬಹುದು.

೭೮. ಈರೀತಿಯಾದ ನಾರದಮುನಿಯ ಮಾತುಗಳನ್ನು ಕೇಳಿ ನರಕನು ಭಯಗೊಂಡು ಮೂಢನಾಗಿ ಸೈನ್ಯಗಳನ್ನು ಎಲ್ಲೆಲ್ಲಿಯೂ ಇರಿಸಿದನು. ಮತ್ತು ರಕ್ಷಣೆಗೆ ಉಪಯುಕ್ತವಾದ ಆಯಾಯ ಕಾರ್ಯಗಳಿಗೆ ನಿಯಮಿಸಿದನು.

೭೯. ಆಗ ಅವನ ರಾಜ್ಯವು ಸುತ್ತಲೂ ರಾಕ್ಷಸರ ರಕ್ಷಣೆಯಿಂದ ಕೂಡಿದು ದಾಯ್ತು. ನರಕಾಸುರನು ತನಗೆ ಆಪತ್ತು ಬರುವುದೆಂಬ ಭಯದಿಂದಲೂ, ಚತುರ್ದಶಿ ಯಲ್ಲಿ ದೇವಸ್ತ್ರೀಯರ ಭೋಗ ಸಿಕ್ಕುವುದೆಂಬ ಹರ್ಷದಿಂದಲೂ ಕೂಡಿ ಸಮಯವನ್ನು ನಿರೀಕ್ಷಿಸುತ್ತಲಿದ್ದನು.

೮೦-೮೧. ಇದೇ ಸಮಯದಲ್ಲಿ ಶ್ರೀ ಕೃಷ್ಣನು ಪ್ರಾಗ್ಜ್ಯೋತಿಷನಗರಕ್ಕೆ ಬಂದನು. ಅವನು ಮೊದಲು ಪಶ್ಚಿಮಬಾಗಲಿಗೆ ಬಂದು ಅಲ್ಲಿರುವ ಮುರುವಿನಕಡಿ

ಪಾಶಾನಾಂ ಷಟ್ಸಹಸ್ರಾಣಿ ಕ್ಷುರಾನ್ತ್ಸಂಛಿದ್ಯ ನೈಕಧಾ ।
ಜಘಾನ ಸ ಮುರುಂ ದೈತ್ಯಂ ಸಾನುಗಂ ಚ ಸಬಾನ್ಧವಂ ॥ ೮೧ ॥

ಷಟ್ಸಹಸ್ರಾ ಮಹಾವೀರಾ ದಾನವಾ ದ್ವಾರಿ ಸಂಸ್ಥಿತಾಃ ।
ಹತಾಶ್ಚಕ್ರೇಣ ಹರಿಣಾ ತಥೈವ ಮುರುಣಾ ಸಹ ॥ ೮೨ ॥

ಮುರುಂ ಹತ್ವಾ ಸಹಸ್ರಾಣಿ ಪುತ್ರಾಂಸ್ತಸ್ಯಾಪರಾಂಶ್ಚ ಷಟ್ ।
ಜಘಾನ ಚಕ್ರೇಣ ತದಾ ಖಂಡಶೋಽನ್ಯಾಂಶ್ಚ ದಾನವಾನ್ ॥ ೮೩ ॥

ತತೋಽನೇಕಶಿಲಾಸಂಘಾನತಿಕ್ರಮ್ಯ ಜನಾರ್ದನಃ ।
ಸಗಣಂ ಸಾನುಗಂ ಚೈವ ನಿಸುಂದಂ ಸಮುಯೋಧಯತ್ ॥ ೮೪ ॥

ಏಕೋ ಯೋ ಯೋಧಯೇದ್ದೇವಾನ್ತ್ಸಹಸ್ರಂ ವತ್ಸರಾನ್ಪರಾ ।
ಶಕ್ರಂ ಚ ಸಮತಿಕ್ರಮ್ಯ ಮಹಾವೀರಪರಾಕ್ರಮಃ ॥ ೮೫ ॥

ಯವರಾದ ಕ್ಷುರರೆಂಬ ಆರುಸಾವಿರ ರಾಕ್ಷಸರನ್ನು ಅನೇಕ ಪ್ರಕಾರವಾಗಿ ಚಕ್ರದಿಂದ ಕತ್ತರಿಸಿ ಮುರುವೆಂಬ ಪ್ರಧಾನನಾದ ಅಸುರನನ್ನು ಅವನ ಬಂಧುಗಳು ಮತ್ತು ಪರಿವಾರಗಳೊಡನೆ ಸಂಹರಿಸಿದನು.

೮೨. ಪಶ್ಚಿಮದ್ವಾರವನ್ನು ರಕ್ಷಿಸುತ್ತಲಿರುವ ಆ ಆರುಸಾವಿರ ರಾಕ್ಷಸರನ್ನೂ ಸಹ ಅವರ ನಾಯಕನಾದ ಮುರುವಿನೊಡನೆ, ವಿಷ್ಣುವು ತನ್ನ ಚಕ್ರವನ್ನು ಪ್ರಯೋಗಿಸಿ ಸಂಹರಿಸಿದನು.

೮೩. ಹೀಗೆ ಶ್ರೀ ಕೃಷ್ಣನು ಮುರುವೆಂಬ ಅಸುರನನ್ನು ಸಂಹರಿಸಿ ಅವನ ಪುತ್ರರಾದ ಆರುಸಾವಿರಜನ ರಾಕ್ಷಸರನ್ನು ಸಹ ತನ್ನ ಚಕ್ರದಿಂದ ಸಂಹರಿಸಿ ಮತ್ತೆ ಕೆಲವರನ್ನು ತುಂಡುತುಂಡಾಗಿ ಕತ್ತರಿಸಿದನು.

೮೪. ಅನಂತರ ರಕ್ಷಣೆಗಾಗಿ ನಿರ್ಮಿಸಿದ್ದ ಅನೇಕ ಕಲ್ಲುಗಳ ಸಮೂಹಗಳನ್ನು ದಾಟಿ ಶ್ರೀ ಕೃಷ್ಣನು ನಿಸುಂದನಿರುವಲ್ಲಿಗೆ ಹೋಗಿ ಆ ನಿಸುಂದಾಸುರನನ್ನು ಅವನ ಸೈನ್ಯ ಮತ್ತು ಪರಿವಾರದೊಡನೆ ಸಂಹರಿಸಿದನು.

೮೫. ಇಂದ್ರನನ್ನೂ ಜಯಿಸಿ ದೇವತೆಗಳೊಡನೆ ಸಾವಿರ ವರ್ಷಗಳಕಾಲ ಯುದ್ಧಮಾಡಿದಂತಹ ಮಹಾವೀರನೂ, ಪರಾಕ್ರಮಶಾಲಿಯೂ ಆದ ಹಯಗ್ರೀವನೆಂಬ ಅಸುರನನ್ನು ಶ್ರೀ ಕೃಷ್ಣನು ಯುದ್ಧದಲ್ಲಿ ಸಂಹರಿಸಿದನು.

ತಂ ಜಘಾನ ಹಯಗ್ರೀವಂ ಸಮತಿಕ್ರಮ್ಯ ಕೇಶವಃ ।
ಮಧ್ಯೇ ಲೌಹಿತ್ಯಸಂಜ್ಞಸ್ಯ ಭಗವಾನಾಸ್ದೇವಕೀಸುತಃ ॥ ೮೬ ॥

ಔದುಕಾಯಾಂ ವಿರೂಪಾಕ್ಷಂ ಸುಂದಂ ಹತ್ವಾ ಮಹಾಬಲಃ ।
ತತಃ ಪಂಚಜನಂ ವೀರಂ ಜಘಾನ ಪರಮೇಶ್ವರಃ ॥ ೮೭ ॥

ಏತಾನ್ ಹತ್ವಾ ಮಹಾಕಾಯಾನ್ಮಹಾವೀರಾನ್ದುರಾಸದಾನ್ ।
ಆಸಸಾದ ಜಗನ್ನಾಥಃ ಪುರಂ ಪ್ರಾಗ್ಜ್ಯೋತಿಷಾಹ್ವಯಂ ॥ ೮೮ ॥

ವಿಯತ್ಸ್ಥೈರ್ದೇವತೈಃ ಸರ್ವೈರ್ನಾರದೇನ ಮಹಾತ್ಮನಾ ।
ಜಯಶಬ್ದೈಃ ಸ್ತೂಯಮಾನಃ ಪ್ರವಿವೇಶ ಯಥೇಶ್ವರಃ ॥ ೮೯ ॥

ಶ್ರಿಯಾ ಯಕ್ತಾನ್ದೀಪ್ಯಮಾನಾನ್ಪ್ರಾಕಾರಾಟ್ಟಾಲಭೂಷಿತಾಂ ।
ಸ ಮೇನೇ ನಗರೀಂ ವಿಷ್ಣುಃ ಕಿಮಿಂದ್ರಸ್ಯಾಮರಾವತೀ ॥ ೯೦ ॥

ತತ್ರ ಯುದ್ಧಂ ಮಹದ್ಭೂತಂ ನಾನಾಪ್ರಹರಣೋದ್ಯತಂ ।
ಭೀರೂಣಾಂ ತ್ರಾಸಜನನಂ ಶೂರಾಣಾಂ ಹರ್ಷವರ್ಧನಂ ॥ ೯೧ ॥

೮೬-೮೭. ಅಲ್ಲದೆ ಲೌಹಿತ್ಯವೆಂಬ ನದಿಯ ಜಲಮಧ್ಯದಲ್ಲಿರುವ ವಿರೂಪಾಕ್ಷನೆಂಬ ಅಸುರನನ್ನೂ, ಸುಂದಾಸುರನನ್ನೂ ಸಂಹರಿಸಿ ಮಹಾಬಲಶಾಲಿಯಾದ ಶ್ರೀ ಕೃಷ್ಣನು ವೀರನಾದ ಪಂಚಜನನೆಂಬ ರಾಕ್ಷಸನನ್ನು ಸಂಹರಿಸಿದನು

೮೮-೮೯. ಮಹಾ ಶರೀರವುಳ್ಳವರೂ, ತುಂಬಾ ಬಲಶಾಲಿಗಳೂ, ಪರಾಕ್ರಮಿಗಳೂ ಆದ ಈ ರಾಕ್ಷಸರನ್ನೆಲ್ಲಾ ಸಂಹರಿಸಿ ಜಗದೊಡೆಯನಾದ ಶ್ರೀ ಕೃಷ್ಣನು ಆಕಾಶದಲ್ಲಿರುವ ದೇವತೆಗಳಿಂದಲೂ, ಮಹಾತ್ಮನಾದ ನಾರದಮುನಿಯಿಂದಲೂ ಸಹ ಜಯ ಶಬ್ದದೊಡನೆ ಸ್ತುತಿಸಲ್ಪಡುತ್ತಾ ಆ ಪ್ರಾಗ್ಜ್ಯೋತಿಷನಗರವನ್ನು ಪ್ರವೇಶಿಸಿದನು.

೯೦. ತುಂಬಾ ಐಶ್ವರ್ಯದಿಂದ ಕೂಡಿದುದೂ, ಪ್ರಕಾಶಿಸುತ್ತಿರುವುದೂ, ಭವ್ಯವಾದ ಕೋಟಿ ಮತ್ತು ಗೋಪುರಗಳಿಂದ ಅಲಂಕರಿಸಲ್ಪಟ್ಟುದೂ ಆದ ಆ ಪ್ರಾಗ್ಜ್ಯೋತಿಷನಗರಿಯನ್ನು ನೋಡಿ ಶ್ರೀ ಕೃಷ್ಣನು ಇಂದ್ರನ ಅಮರಾವತಿಯೇನೋ ಎಂದು ಸಂಶಯಪಟ್ಟನು.

೯೧-೯೨. ಯುದ್ಧವು ನಡೆಯಿತು. ಆ ಯುದ್ಧದಲ್ಲಿ ಅನೇಕಬಗೆಯ ಆಯುಧಗಳನ್ನು ಉಪಯೋಗಿಸಿ ಒಬ್ಬರಿಗೊಬ್ಬರು ಭಯಂಕರವಾಗಿ ಯುದ್ಧಮಾಡುತ್ತಿದ್ದರು.

ಯಥಾ ದೇವಾಸುರಂ ಯುದ್ಧಂ ತಥೈವ ಸಮುಪಸ್ಥಿತ ।
ತತಃ ಶಾರ್ಙ್ಗವಿನಿರ್ಮುಕ್ತೈರ್ಬಾಣೈಸ್ತಾನ್ದಾನವಾನ್ಬಹೂನ್ ॥ ೯೨ ॥

ನಿಜಘಾನ ಮಹಾಬಾಹುರ್ಗರುಡಸ್ಥೋ ಜನಾರ್ದನಃ ।
ಅಷ್ಟೌ ಶತಸಹಸ್ರಾಣಿ ಅಷ್ಟೌ ಶತಶತಾನಿ ಚ ॥ ೯೩ ॥

ಹತ್ವಾಽಸುರಾನ್ಮಹಾಬಾಹುರ್ನರಕಂ ತಂ ಸಮಾಸದತ್ ॥ ೯೪ ॥

ತತಃ ಶ್ರುತ್ವಾ ಸ ನರಕಃ ಪತಿತಾನಸುರಾನ್ಬಹೂನ್ ।
ದೃಷ್ಟ್ವಾ ಚ ಕೃಷ್ಣಂ ಮಹಾಬಾಹುಂ ಗರುಡಸ್ಥಂ ಮಹಾಬಲಂ ॥ ೯೫ ॥

ವಸಿಷ್ಠಶಾಪಂ ಸಸ್ಮಾರ ಸಮಯಂ ಮಾಧವಸ್ಯ ಚ ।
ನಾರದಸ್ಯ ವಚಶ್ಚಾಪಿ ವರಚ್ಛದ್ಮ ತಥಾ ವಿಧೇಃ ॥ ೯೬ ॥

ಸ ಪ್ರಾಪ್ತಕಾಲಶ್ಚ ತದಾ ಕೇಶವೇನ ಸಮಾಗತಃ ।
ಯುದ್ಧಮೇವ ಪರಂ ಮೇನೇ ಸ್ಮರನ್ಬಾಣವಚಸ್ತದಾ ॥ ೯೭ ॥

ಆ ಯುದ್ಧವು ಹೇಡಿಗಳಿಗೆ ಭಯವನ್ನೂ ವೀರರಿಗೆ ಹರ್ಷವನ್ನೂ ಉಂಟುಮಾಡುತ್ತಾ ದೇವಾಸುರರ ಯುದ್ಧದಂತೆ ತೋರುತ್ತಿದ್ದಿತು.

೯೩. ಅನಂತರ ಶ್ರೀ ಕೃಷ್ಣನು ಗರುಡನ ಮೇಲೆಯೇ ಕುಳಿತು ತನ್ನ ಧನುಸ್ಸಿನಿಂದ ಬಾಣಗಳನ್ನು ಪ್ರಯೋಗಿಸಿ ಅನೇಕ ರಾಕ್ಷಸರನ್ನು ಸಂಹರಿಸಿದನು.

೯೪. ಹೀಗೆ ಅಲ್ಲಿರುವ ಎಂಟುಲಕ್ಷದ ಎಂಟುಸಾವಿರದ ರಾಕ್ಷಸರನ್ನು ಸಂಹರಿಸಿ ವೀರನಾದ ಶ್ರೀ ಕೃಷ್ಣನು ಆ ನರಕನ ಬಳಿಗೆ ಬಂದನು.

೯೫-೯೬. ಆಗ ನರಕಾಸುರನು ರಾಕ್ಷಸರೆಲ್ಲರೂ ಯುದ್ಧದಲ್ಲಿ ನಷ್ಟರಾದುದನ್ನು ಕೇಳಿ ಎದುರಿಗೆ ಬಂದಿರುವ ಮಹಾ ಬಾಹುಶಾಲಿಯೂ, ಗರುಡವನ್ನೇರಿ ಕುಳಿತಿರುವವನೂ, ಮಹಾಬಲಶಾಲಿಯೂ ಆದ ಶ್ರೀ ಕೃಷ್ಣನನ್ನು ನೋಡಿ ವಸಿಷ್ಠಮುನಿಯ ಶಾಪವನ್ನೂ, ತನ್ನ ತಂದೆಯಾದ ನಾರಾಯಣನ ನಿಬಂಧನೆಯನ್ನೂ, ನಾರದಮುನಿಯ ಮಾತುಗಳನ್ನೂ, ಬ್ರಹ್ಮನ ಕಪಟದಿಂದ ಕೂಡಿರುವ ವರವನ್ನೂ ಸ್ಮರಿಸಿಕೊಂಡನು.

೯೭. ಮರಣಕಾಲ ಒದಗಿಬರಲು ಆ ನರಕನು ಬಾಣನ ಮಾತುಗಳನ್ನು ಸ್ಮರಿಸಿ ಕೃಷ್ಣನೊಡನೆ ಯುದ್ಧವನ್ನು ಮಾಡುವುದೇ ಉತ್ತಮವಾದುದೆಂದು ನಿಶ್ಚಯಿಸಿದನು.

ಸ ಕಾಂಚನಂ ಸಮಾರುಹ್ಯ ರಥಂ ವಜ್ರಧ್ವಜಂ ವರಂ ।
ಲೋಹಚಕ್ರಾಷ್ಟಸಂಯುಕ್ತಂ ತ್ರಿನಲ್ವಪ್ರಮಿತಂ ರಥಂ ॥ ೯೮ ॥

ಯುಕ್ತಮಶ್ವಸಹಸ್ರೈಸ್ತು ವಜ್ರಧ್ವಜವಿರಾಜಿತಂ ।
ನಾನಾಪ್ರಹರಣೋಪೇತಂ ಬಹುತೂಣೀರಸಂಯುತಂ ॥ ೯೯ ॥

ಅಗಚ್ಛತ್ಸಮರಾಯಾಶು ನರಕಃ ಪೃಥಿವೀಸುತಃ ।
ಸ ಗಚ್ಛನ್ತ್ಸಮರಾಯಾಶು ಮಾನುಷಂ ಭಾವಮರ್ಚಿತಂ ॥ ೧೦೦ ॥

ನಿಂದ್ಯಂ ತಥಾಽಸುರಂ ಮೇನೇ ಸ್ಮರನ್ಪೂರ್ವವಚೋ ಹರೇಃ ।
ಕ್ಷಣಾತ್ಕೃಷ್ಣಂ ಸ ದದರ್ಶ ಗರುಡೋಪರಿ ಸಂಸ್ಥಿತಂ ॥ ೧೦೧ ॥

ಶಂಖಚಕ್ರಾಗದಾಜಾಜ್ಞಂ ವರಾಸಿಧರಮಚ್ಯುತಂ ।
ಕಿರೀಟಿಕುಂಡಲಯುತಂ ಶ್ರೀವತ್ಸವಕ್ಷಸಂ ಹರಿಂ ॥ ೧೦೨ ॥

---

೯೮. ಬಳಿಕ ಆ ನರಕನು ಸುವರ್ಣಮಯವೂ, ವಜ್ರಮಯವಾದ ಧ್ವಜವುಳ್ಳದುದೂ, ಕಬ್ಬಿಣದ ಎಂಟುಗಾಲಿಗಳುಳ್ಳದುದೂ, ಮೂರು ನಲ್ವಗಳ ಪ್ರಮಾಣಗಳುಳ್ಳದುದೂ ಆದ ತನ್ನ ರಥವನ್ನು ಏರಿದನು.

೯೯-೧೦೦. ಆ ರಥಕ್ಕೆ ಸಾವಿರ ಕುದುರೆಗಳನ್ನು ಕಟ್ಟಿದ್ದರು. ಅದು ವಜ್ರಮಯವಾದ ಧ್ವಜದಿಂದ ಶೋಭಿಸುತ್ತಲಿದ್ದಿತು. ಅನೇಕ ಶಸ್ತ್ರಗಳಿಂದಲೂ, ಬಾಣ ಬತ್ತಳಿಕೆಗಳಿಂದಲೂ ಕೂಡಿದ್ದಿತು. ಇಂತಹ ರಥವನ್ನು ಭೂದೇವಿಯ ಪುತ್ರನಾದ ಆ ನರಕನು ಏರಿ ಜಾಗ್ರತೆ ಯುದ್ಧಕ್ಕೆ ಹೊರಟನು.

೧೦೧. ಹೀಗೆ ಅವನು ಯುದ್ಧಕ್ಕೆ ಹೋಗುತ್ತಾ ತನ್ನ ತಂದೆಯಾದ ವಿಷ್ಣುವಿನ ಮಾತನ್ನು ಸ್ಮರಿಸಿಕೊಂಡು ಮನುಷ್ಯಭಾವವೇ ಶ್ರೇಷ್ಠವಾದುದೆಂದೂ, ತಾನು ಮಾಡುತ್ತಿರುವ ರಾಕ್ಷಸಸ್ವಭಾವವು ನಿಂದ್ಯವಾದುದೆಂದೂ ತಿಳಿದನು.

೧೦೨-೧೦೩. ಅನಂತರ ಆ ನರಕನು ರಥದಿಂದ ಸ್ವಲ್ಪಹೊತ್ತಿನಲ್ಲಿಯೇ ಬಂದು ಗರುಡನಮೇಲೆ ಕುಳಿತಿರುವ ಕೃಷ್ಣನನ್ನು ನೋಡಿದನು. ಅವನು ಶಂಖ, ಚಕ್ರ, ಗದೆ, ಧನುಸ್ಸು, ಅಭಯಮುದ್ರೆ, ಖಡ್ಗ ಇವುಗಳನ್ನು ಧರಿಸಿದ್ದನು. ಕಿರೀಟ ಮತ್ತು ಕುಂಡಲಗಳು, ಎದೆಯಲ್ಲಿ ಶ್ರೀವತ್ಸವೆಂಬ ಚಿಹ್ನೆಯು, ಕೌಸ್ತುಭಮಣಿ ಇವುಗಳಿಂದ

ಕೌಸ್ತುಭೋದ್ಭಾಸಿತೋರಸ್ಕಂ ಪೀತಾಂಬರಧರಂ ಪರಂ ।
ಸ ತೇನ ಯುಯುಧೇ ವೀರೋ ವಿಷ್ಣುನಾ ಪ್ರಭವಿಷ್ಣುನಾ ॥ ೧೦೩ ॥

ಪ್ರಾಗ್ಜ್ಯೋತಿಷಾಧಿಪೋ ಭೌಮೋ ನರಕಃ ಪೃಥಿವೀಸುತಃ ।
ಸ ಯುಧ್ಯತ್ಕೃಷ್ಣನಿಕಟೇ ಕಾಲಿಕಾಂ ಕಾಲಿಕೋಪಮಾಂ ॥ ೧೦೪ ॥

ರಕ್ತಾಸ್ಯನಯನಾಂ ದೀರ್ಘಾಂ ಖಡ್ಗಶಕ್ತಿಧರಾಂ ತದಾ ।
ಅಪಶ್ಯಜ್ಜಗತಾಂ ಧಾತ್ರೀಂ ಕಾಮಾಖ್ಯಾಮಪಿ ಮೋಹಿನೀಂ ॥ ೧೦೫ ॥

ಸ ವಿಸ್ಮಿತಸ್ತದಾ ಭೀತಸ್ತಾಂ ದೃಷ್ಟ್ವಾ ಜಗತಾಂ ಪ್ರಸೂಂ ।
ಯೋದ್ಧವ್ಯಮಿತ್ಯೇವ ತದಾ ಯುಯುಧೇ ನರಕೋಽಸುರಃ ॥ ೧೦೬ ॥

ತೇನ ಸಾರ್ಧಂ ತದಾ ಕೃಷ್ಣಃ ಕೃತ್ವಾ ಸುಮಹದದ್ಭುತಂ ।
ಯುದ್ಧಂ ತಾದೃಕ್ಪುರಾಭೂತಂ ನ ದೇವೇ ನ ಚ ಮಾನುಷೇ ॥ ೧೦೭ ॥

ಅಲಂಕೃತನಾಗಿ, ಹಳದಿಬಣ್ಣದ ಬಟ್ಟೆಗಳನ್ನು ಧರಿಸಿ ಶೋಭಿಸುತ್ತಿರುವ ಶ್ರೀ ಕೃಷ್ಣನನ್ನು ನೋಡಿದನು.

೧೦೪. ವೀರನೂ, ಪ್ರಾಗ್ಜ್ಯೋತಿಷನಗರಕ್ಕೆ ಒಡೆಯನೂ, ಭೂದೇವಿಯ ಪುತ್ರನೂ ಆದ ಆ ನರಕನು ಸರ್ವಸಮರ್ಥನಾದ ಶ್ರೀ ಕೃಷ್ಣನೊಡನೆ ಯುದ್ಧಮಾಡಿದನು.

೧೦೫. ಯುದ್ಧಮಾಡುತ್ತಿರುವಾಗ ಆ ನರಕನು ಶ್ರೀ ಕೃಷ್ಣನ ಬಳಿಯಲ್ಲಿ ನೀಲವರ್ಣವುಳ್ಳವಳೂ, ಪ್ರಸಿದ್ಧ ಕಾಳಿಯಂತೆ ಇರುವವಳೂ, ಕೆಂಪಾದ ಕಣ್ಣು ಮತ್ತು ಮುಖವುಳ್ಳವಳೂ, ಎತ್ತರವಾಗಿರುವವಳೂ, ಖಡ್ಗ, ಶಕ್ತ್ಯಾಯುಧ ಇವುಗಳನ್ನು ಧರಿಸಿದವಳೂ, ಜಗತ್ತನ್ನು ಸೃಷ್ಟಿಸುವವಳೂ, ಆದನ್ನು ಮೋಹಗೊಳಿಸುವವಳೂ ಆದ "ಕಾಮಾಖ್ಯಾದೇವಿ" ಯನ್ನು ನೋಡಿದನು.

೧೦೬. ಆಗ ನರಕಾಸುರನು ಜಗನ್ಮಾತೆಯಾದ ಕಾಮರೂಪಾದೇವಿಯನ್ನು ನೋಡಿ ತುಂಬಾ ವಿಸ್ಮಯಗೊಂಡು ಭೀತನಾಗಿ ಜಯದಲ್ಲಿ ಆಶೆಯಿಲ್ಲದೆ ಕೇವಲ ಯುದ್ಧವನ್ನು ಮಾಡುವುದು ತನ್ನ ಕರ್ತವ್ಯವೆಂಬ ಮಾತ್ರದಿಂದಲೇ ಯುದ್ಧಮಾಡಿದನು.

೧೦೭. ಆಗ ಶ್ರೀ ಕೃಷ್ಣನೂ ಸಹ ಆ ನರಕನೊಡನೆ ಮಹತ್ತಾದ ಯುದ್ಧವನ್ನು ಮಾಡಿದನು. ಆಶ್ಚರ್ಯಕರವಾದ ಇಂತಹ ಯುದ್ಧವು ಹಿಂದೆ ದೇವ

ತತಸ್ತೇನಾಥ ಭೌಮೇನ ಯುದ್ಧಕೇಲಿಂ ಸ ಮಾಧವಃ ।
ಚಿರಂ ಕೃತ್ವಾ ಜಘಾನಾಥ ದೇವೇಂದ್ರಂ ಪ್ರತಿಹರ್ಷಯನ್ ॥ ೧೦೪ ॥

ಸುದರ್ಶನೇನ ಚಕ್ರೇಣ ಮಧ್ಯದೇಶೇ ತದಾ ಹರಿಃ ।
ದ್ವಿಧಾ ಚಿಚ್ಛೇದ ನರಕಂ ಸ ಪತೋಽಭ್ಯಪತದ್ಭುವಿ ॥ ೧೦೯ ॥

ವಿಭಕ್ತಂ ತಚ್ಛರೀರಂ ತು ಭೂಮೌ ನಿಪತಿತಂ ತದಾ ।
ವಿರಾಜತೇ ವಜ್ರಭಿನ್ನೋ ಯಥಾ ಗೈರಿಕಪರ್ವತಃ ॥ ೧೧೦ ॥

ಪತಿತೇ ತನಯೇ ದೇವೀ ಪೃಥ್ವೀ ದೃಷ್ಟ್ವಾ ಶರೀರಕೆಂ ।
ಶೋಕವೇಗಂ ತದಾ ಸೇಹೇ ಜ್ಞಾತ್ವಾ ಕಾಲಂ ತದಾಗತಂ ॥ ೧೧೧ ॥

ಅದಿತೇಃ ಕುಂಡಲಯುಗಂ ಸ್ವಯಮಾದಾಯ ಕಾಶ್ಯಪೀ ।
ಉಪಾತಿಷ್ಠತ ಗೋವಿಂದಂ ವಚನಂ ಚೇದಮಬ್ರವೀತ್ ॥ ೧೧೨ ॥

ಲೋಕನಲ್ಲಿಯಾಗಲಿ ಅಥವಾ ಮನುಷ್ಯಲೋಕದಲ್ಲಿಯಾಗಲಿ ಹಿಂದೆ ಯಾವಾಗಲೂ ನಡೆದಿರಲಿಲ್ಲ.

೧೦೪-೧೦೯. ಹೀಗೆ ಆ ಕೃಷ್ಣನು ನರಕನೊಡನೆ ಬಹಳಕಾಲ ಯುದ್ಧವನ್ನು ಮಾಡಿ ಅನಂತರ ದೇವೇಂದ್ರನಿಗೆ ಹರ್ಷವುಂಟಾಗುವಂತೆ ನರಕನ ಮಧ್ಯ ಶರೀರದಲ್ಲಿ ತನ್ನ ಸುದರ್ಶನಚಕ್ರವನ್ನು ಪ್ರಯೋಗಿಸಿ ಎರಡು ಭಾಗವಾಗಿ ಕತ್ತರಿಸಿದನು. ಆಗ ನರಕನು ಮೃತನಾಗಿ ಭೂಮಿಯಲ್ಲಿ ಬಿದ್ದನು.

೧೧೦. ಚಕ್ರದಿಂದ ಛೇದಿಸಲ್ಪಟ್ಟು ಭೂಮಿಯಲ್ಲಿ ಬಿದ್ದಿರುವ ಆ ನರಕನ ಶರೀರವು ವಜ್ರಾಯುಧದಿಂದ ಛೇದಿಸಲ್ಪಟ್ಟು ಗೈರಿಕ ಧಾತುಗಳ ಮಯವಾದ ಪರ್ವತದಂತೆ ಪ್ರಕಾಶಿಸುತ್ತಲಿದ್ದಿತು.

೧೧೧. ಭೂದೇವಿಯು ತನ್ನ ಪುತ್ರನು ಮೃತನಾಗಿ ಅವನ ಶರೀರವು ಭೂಮಿಯಲ್ಲಿ ಬಿದ್ದಿರುವುದನ್ನು ನೋಡಿ ಆಗ ನರಕನು ಮೃತನಾಗಬೇಕಾದ ಕಾಲವೇ ಬಂದಿರುವುದೆಂದು ತಿಳಿದು ಆ ಕಾಲಾನುಸಾರವಾಗಿ ಪುತ್ರಶೋಕವನ್ನು ಸಹಿಸಿದಳು.

೧೧೨. ನರಕನಲ್ಲಿದ್ದ ಅದಿತಿದೇವಿಯ ಕುಂಡಲಗಳೆರಡನ್ನೂ ತಾನೇ ತೆಗೆದು ಆ ಭೂದೇವಿಯು ಶ್ರೀ ಕೃಷ್ಣನಿಗೆ ಆ ಕುಂಡಲಗಳನ್ನು ಒಪ್ಪಿಸಿ ಅವನನ್ನು ಕುರಿತು ಹೀಗೆ ಹೇಳಿದಳು.

ತ್ವಯಾ ವರಾಹರೂಪೇಣ ಯದಾಽಹಂ ಚೋದ್ಧೃತಾ ಪುರಾ ।
ತದಾ ತ್ವದ್ಗಾತ್ರಸಂಸ್ಪರ್ಶಾತ್ಪ್ರೋ ಮೇ ನರಕಃ ಸ್ಥಿತಃ ॥ ೧೧೩ ॥

ಸೋಽಯಂ ತ್ವಯಾ ಪಾಲಿತಶ್ಚ ಪಾತಿತಶ್ಚಾಧುನಾ ಸುತಃ ।
ಗೃಹಾಣ ಕುಂಡಲೇ ಚೇಮೇ ಅದಿತೇಃ ಸರ್ವಕಾಮದೇ ॥ ೧೧೪ ॥

ಸಂತತಿಂ ಚಾಸ್ಯ ಗೋವಿಂದ ಪ್ರತಿಪಾಲಯ ನಿತ್ಯದಾ ।

॥ ಶ್ರೀ ಭಗವಾನುವಾಚ ॥

ಭಾರಾವತರಣೇ ದೇವಿ ನರಕಸ್ಯ ವಧಃ ಪುರಾ ॥ ೧೧೫ ॥

ತ್ವಯೈವ ಪ್ರಾರ್ಥಿತೋ ಯಸ್ಮಾತ್ತೇನಾಸೌ ನಿಹತೋ ಮಯಾ
ಪಾಲಯಿಷ್ಯೇಽಸ್ಯ ಸಂತಾನಂ ದೇವಿ ತ್ವದ್ವಚನಾದಹಂ ॥ ೧೧೬ ॥

---

೧೧೩. ಓ ಶ್ರೀ ಕೃಷ್ಣನೇ! ನೀನು ಹಿಂದೆ ವರಾಹರೂಪದಿಂದ ನೀರಿನಲ್ಲಿ ಮುಳುಗಿದ ನನ್ನನ್ನು ಉದ್ಧರಿಸಿದೆ. ಆ ಕಾಲದಲ್ಲಿ ನಿನ್ನ ಶರೀರಸ್ಪರ್ಶದಿಂದ ಈ ನನ್ನ ಪುತ್ರನಾದ ನರಕನು ಜನಿಸಿದನು.

೧೧೪. ಈ ನರಕನನ್ನು ನೀನೇ ಸಲಹಿರುವೆ. ಈಗ ದುಷ್ಟನಾದ ಇವನನ್ನು ನೀನೇ ಸಂಹರಿಸಿರುವೆ. ಎಲ್ಲಾ ಇಷ್ಟಾರ್ಥಗಳನ್ನು ಕೊಡುವ ಅದಿತಿದೇವಿಯ ಈ ಕುಂಡಲಗಳನ್ನು ಸ್ವೀಕರಿಸು. ಓ ಗೋವಿಂದನೇ! ಮುಂದೆ ಈ ನರಕನ ಸಂತತಿಯನ್ನು ರಕ್ಷಿಸುವವನಾಗು.

೧೧೫. ಶ್ರೀ ಕೃಷ್ಣಭಗವಂತನು ಹೇಳಿದನು:—ಎಲೈ ದೇವಿಯೇ! ನಿನ್ನ ಭಾರವನ್ನು ಇಳಿಸಿಕೊಡುವುದಕ್ಕೋಸ್ಕರ ನೀನೇ ಹಿಂದೆ ಈ ನರಕನ ನಾಶವನ್ನು ಕೇಳಿ ಕೊಂಡಿರುವೆ, ಆದಕಾರಣವೇ ಇವನನ್ನು ನಾನು ಸಂಹರಿಸಿರುವೆನು.

೧೧೬. ಎಲೌ ದೇವಿಯೇ! ನಿನ್ನ ಮಾತಿನಂತೆ ಈ ನರಕನ ಸಂತತಿಯನ್ನು ಪಾಲಿಸುವೆನು. ನಿನ್ನ ಮತ್ತು ನನ್ನ ಮೊಮ್ಮಗನಾದ ಭಗದತ್ತನನ್ನು ಈ ಪ್ರಾಗ್ಜ್ಯೋತಿಷನಗರದಲ್ಲಿ ರಾಜನನ್ನಾಗಿ ಪಟ್ಟಾಭಿಷೇಕ ಮಾಡಿಸುವೆನು.

ಪ್ರಾಗ್ಜ್ಯೋತಿಷೇಽಭಿಷೇಕ್ಷ್ಯಾಮಿ ನಪ್ತಾರಂ ಭಗದತ್ತಕಂ ।
ವಿಪಮುಕ್ತ್ವಾ ಮಹಾಬಾಹುರ್ಭಗವಾನ್ಮಧುಸೂದನಃ ॥ ೧೧೭ ॥

ಅಂತಃಪುರಂ ವಿವೇಶಾಥ ನರಕಸ್ಯ ಧನಾಲಯಂ ।
ಸ ತತ್ರ ದದೃಶೇ ವೀರೋ ರತ್ನಾನಿ ವಿವಿಧಾನಿ ಚ ॥ ೧೧೮ ॥

ರಾಶೀಭೂತಾನಿ ಶುದ್ಧಾನಿ ಪರ್ವತಾನಿವ ರಾಜತಃ ।
ಮುಕ್ತಾಮಣಿಪ್ರವಾಲಾನಾಂ ವೈಭೂರ್ಯಸ್ಯ ಚ ಪರ್ವತಂ ॥ ೧೧೯ ॥

ತಥಾ ರಜತಕೂಟಾನಿ ವಜ್ರಕೂಟಾನಿ ಮಾಧವಃ ।
ಸುವರ್ಣಸಂಚಯಾನ್ರುಕ್ಮದಂಡಾನ್ರತ್ನಮಯಧ್ವಜಾನ್ ॥ ೧೨೦ ॥

ವಾಹನಾನಿ ವಿಚಿತ್ರಾಣಿ ಯಾನಾನಿ ಶಯನಾನಿ ಚ
ಖಚಿತಾನಿ ಸ್ವರ್ಣರತ್ನೈರ್ಮಹಾರ್ಹಾಣಿ ಮಹಾಂತಿ ಚ ॥ ೧೨೧ ॥

---

೧೧೭. ಹೀಗೆ ಹೇಳಿ ಆಜಾನುಬಾಹುವಾದ ಶ್ರೀ ಕೃಷ್ಣಭಗವಂತನು ಐಶ್ವರ್ಯ ದಿಂದ ಕೂಡಿರುವ ನರಕಾಸುರನ ಅಂತಃಪುರವನ್ನು ಪ್ರವೇಶಿಸಿದನು.

೧೧೮. ವೀರನಾದ ಕೃಷ್ಣನು ಅಂತಃಪುರದಲ್ಲಿ ಪರ್ವತಗಳಂತೆ ರಾಶಿರಾಶಿಯಾಗಿ ಬಿದ್ದು ಶುದ್ಧವೂ ಪ್ರಕಾಶಿಸುತ್ತಲೂ ಇರುವ ಅನೇಕವಿಧವಾದ ರತ್ನಗಳನ್ನು ನೋಡಿ ದನು.

೧೧೯. ಮುತ್ತು, ರತ್ನ, ಪವಳ ಮತ್ತು ವಜ್ರಗಳು ಇವುಗಳಿಂದ ನಿರ್ಮಿತ ವಾದ ಕ್ರೀಡಾಪರ್ವತವನ್ನು ನೋಡಿದನು. ಅಲ್ಲದೆ ಆ ಪರ್ವತದ ರಜತ ಮತ್ತು ವಜ್ರಮಯಗಳಾದ ಶಿಖರಗಳನ್ನು ಆ ಕೃಷ್ಣನು ನೋಡಿದನು.

೧೨೦-೧೨೧. ಅಲ್ಲದೆ ಚಿನ್ನದ ರಾಶಿಗಳನ್ನೂ, ಚಿನ್ನದ ದಂಡಗಳುಳ್ಳ ವಜ್ರ ಮಯವಾದ ಧ್ವಜಗಳನ್ನೂ, ಚಿನ್ನದಿಂದಲೂ, ರತ್ನದಿಂದಲೂ ಕೆತ್ತಲ್ಪಟ್ಟು ಅತಿ ವಿಚಿತ್ರ ಗಳೂ, ಬೆಲೆಯುಳ್ಳವುಗಳೂ ಆದ ದೊಡ್ಡದೊಡ್ಡ ವಾಹನಗಳನ್ನೂ, ರಥಗಳನ್ನೂ, ಹಾಸಿಗೆಗಳನ್ನೂ ಅಲ್ಲಿ ನೋಡಿದನು.

ಯದ್ಯದ್ಧೃಷ್ಟಂ ಚ ಯಾವಚ್ಚ ಧನಂ ರತ್ನಂ ಮಣೀಂಸ್ತಥಾ ।
ಭುವಿ ತಾದೃಕ್ಚ ನೋ ದೃಷ್ಟಮನ್ಯತ್ರ ನರಕಾಲಯಾತ್ ॥ ೧೨೨ ॥

ನ ಕುಬೇರಸ್ಯ ನೇಂದ್ರಸ್ಯ ನ ಯಮಸ್ಯಾಪ್ಯಪಾಂ ಪತೇಃ ।
ತಾವಂತಿ ಧನರತ್ನಾನಿ ಯಾವಂತಿ ನರಕಾಲಯೇ ॥ ೧೨೩ ॥

ಕೇಶವೋಽಪ್ಯಥ ತತ್ರೈವ ನಾರದೇನ ಚ ಸಂಗತಃ ।
ಅವೇಕ್ಷ್ಯಾಂತಃಪುರಧನಂ ಸಾರಂ ಸಾರತರಂ ತತಃ ॥ ೧೨೪ ॥

ತೇಷಾಂ ಸಮಾದದೇ ಗ್ರಾಹ್ಯಂ ಪ್ರಭೂತಂ ಪರವೀರಹಾ ।
ಯಾ ದತ್ತಾ ವೈಷ್ಣವೀ ಶಕ್ತಿರ್ವಿಷ್ಣುನಾ ಪ್ರಭವಿಷ್ಣುನಾ ।
ಹತ್ವಾ ಭೌಮಂ ತು ತಾಂ ಶಕ್ತಿಃ ಜಗೃಹೇ ದೇವಕೀಸುತಃ ॥ ೧೨೫ ॥

ಪೃಥಿವ್ಯಾ ನಾರದೇನೈವ ಸಹಿತಃ ಕೇಶವಸ್ತದಾ ।
ಭಗದತ್ತಂ ಭೌಮಸುತಂ ಪ್ರಾಗ್ಜ್ಯೋತಿಷಪುರೋತ್ತಮೇ ॥ ೧೨೬ ॥

---

೧೨೨. ಶ್ರೀ ಕೃಷ್ಣನು ಆ ಅಂತಃಪುರದಲ್ಲಿ ಯಾವಯಾವ ಧನಗಳು, ರತ್ನ, ವಜ್ರ, ಮುಂತಾದುವುಗಳನ್ನು ಎಷ್ಟೆಷ್ಟು, ನೋಡಿದೆನೋ ಅಷ್ಟು ರತ್ನಾದಿಗಳನ್ನು ಆ ನಗರದಲ್ಲಿ ಹೊರತು ಇನ್ನೆಲ್ಲಿಯೂ ಅವನು ನೋಡಿರಲಿಲ್ಲವು.

೧೨೩. ಆ ನರಕನ ಅರಮನೆಯಲ್ಲಿರುವಷ್ಟು ಧನ ಮತ್ತು ರತ್ನಗಳು ಕುಬೇರ, ಇಂದ್ರ, ಯಮ, ವರುಣ ಇವರುಗಳ ನಗರದಲ್ಲಿಯೂ ಇರಲಿಲ್ಲವು.

೧೨೪. ಶತ್ರುಸಂಹಾರಕನಾದ ಆ ಶ್ರೀ ಕೃಷ್ಣನು ನಾರದನೊಡನೆ ಆ ಅಂತಃಪುರದಲ್ಲಿ ಸಂಚರಿಸುತ್ತಾ ಅಲ್ಲಿರುವ ರತ್ನವೇ ಮೊದಲಾದ ವಸ್ತುಗಳಲ್ಲಿ ಶ್ರೇಷ್ಠವಾದ ಮತ್ತು ಅತಿ ಉತ್ತಮವಾದವುಗಳನ್ನು ಬೇಕಾದಷ್ಟು ಸ್ವೀಕರಿಸಿದನು.

೧೨೫. ಹಿಂದೆ ಜಗದೊಡೆಯನಾದ ವಿಷ್ಣುವು ನರಕನಿಗೆ ಹಿಂದೆ ಕೊಟ್ಟ ಶಕ್ತಿಯನ್ನು ಈಗ ಶ್ರೀ ಕೃಷ್ಣನು ಆ ನರಕನನ್ನು ಸಂಹರಿಸಿ ತಾನು ಸ್ವೀಕರಿಸಿದನು.

೧೨೬. ಭೂದೇವಿಯೊಡನೆಯೂ ನಾರದಮುನಿಯೊಡನೆಯೂ ಕೃಷ್ಣನು ಆ ಪ್ರಾಗ್ಜ್ಯೋತಿಷವೆಂಬ ಶ್ರೇಷ್ಠನಗರವಲ್ಲಿ ನರಕಾಸುರನ ಪುತ್ರನಾದ ಭಗದತ್ತನನ್ನು ರಾಜನನ್ನಾಗಿ ಪಟ್ಟಾಭಿಷೇಕ ಮಾಡಿ ಆ ನಗರ ಮಧ್ಯದಲ್ಲಿ ಇರಿಸಿದನು.

ಅಭಿಷಿಚ್ಯ ತಥಾ ಭೂತಂ ಪುರಮಧ್ಯೇ ನ್ಯವೇಶಯತ್ ।
ಅಭಿಷಿಕ್ತಂ ತು ತಂ ದೃಷ್ಟ್ವಾ ಭಗದತ್ತಂ ತಥಾ ಕ್ಷಿತಿಃ ॥ ೧೨೭ ॥

ನಪುತ್ರಶ್ಚೈಷೋಽಥ ತಾಂ ಶಕ್ತಿಂ ಕೇಶವಂ ಸಮಯಾಚತ ।
ಕೇಶವೋಽಪಿ ಕ್ಷಿತೇರ್ವಾಕ್ಯಾನ್ನಾರದಾನುಮತೇನ ಚ ॥ ೧೨೮ ॥

ತಾಂ ಶಕ್ತಿಂ ಭಗದತ್ತಾಯ ಸುಪ್ರೀತಮನಸಾ ದದೌ ।
ಯಚ್ಛತ್ರಂ ವರುಣಂ ಜಿತ್ವಾ ಕಾಂಚನಸ್ರಾವಿಸಂಜ್ಞಕಂ ॥ ೧೨೯ ॥

ಸಮಾನಯತ್ಪುರಾ ಭೌಮಸ್ತಚ್ಛತ್ರಂ ಹರಿರಾದದೇ ।
ಅಷ್ಟಭಾರಸುವರ್ಣಾನಿ ಯತ್ಸಂಸ್ರವತಿ ಚಾನ್ವಹಂ ।
ಯಚ್ಛ್ರೋಶಮಾತ್ರವಿಸ್ತೀರ್ಣಮರ್ಧಯೋಜನಮುಚ್ಛ್ರಿತಂ ॥ ೧೩೦ ॥

ರತ್ನೋತ್ತಮಾನಿ ಸರ್ವಾಣಿ ಚತುರ್ದಂತಾಂಸ್ತಥಾ ಗಜಾನ್ ।
ಚತುರ್ದಶ ಸಹಸ್ರಾಣಿ ಪೂಜಿತಾಃ ಪ್ರಮುದಸ್ತಥಾ ॥ ೧೩೧ ॥

---

೧೨೭. ಆ ಭಗದತ್ತನು ಪಟ್ಟಾಭಿಷಿಕ್ತನಾದುದನ್ನು ನೋಡಿ ಭೂದೇವಿಯು ತನ್ನ ಮೊಮ್ಮಗನಾದ ಅವನಿಗಾಗಿ ವಿಷ್ಣುದತ್ತವಾದ ಶಕ್ತಿಯನ್ನು ಕೊಡಬೇಕೆಂದು ಶ್ರೀ ಕೃಷ್ಣನನ್ನು ಯಾಚಿಸಿದಳು.

೧೨೮. ಶ್ರೀ ಕೃಷ್ಣನೂ ಸಹ ಭೂದೇವಿಯ ಮಾತಿನಂತೆ ನಾರದಮುನಿಯ ಅನುಮತಿಯಿಂದ ಆ ಶಕ್ತಿಯನ್ನು ಭಗದತ್ತನಿಗೆ ಸಂತೋಷದಿಂದ ಕೊಟ್ಟನು.

೧೨೯. ಹಿಂದೆ ನರಕಾಸುರನು ವರುಣನನ್ನು ಜಯಿಸಿ ಅವನಲ್ಲಿದ್ದ ಕಾಂಚನ ಸ್ರಾವಿ ಎಂಬ ಒಂದು ಛತ್ರವನ್ನು ತಂದಿದ್ದನು. ಅದನ್ನು ಶ್ರೀ ಕೃಷ್ಣನು ತಾನು ತೆಗೆದು ಕೊಂಡನು.

೧೩೦. ಆ ಛತ್ರಿಯು ಪ್ರತಿದಿನವೂ ಇನ್ನೂರು ತೊಲ ಪ್ರಮಾಣದ ಎಂಟು ಭಾರಗಳು ಅಂದರೆ ಸಾವಿರದ ಆರುನೂರು ತೊಲ ಚಿನ್ನವನ್ನು ಸುರಿಸುವಂತಹುದು. ಒಂದು ಹರಿದಾರಿಯಷ್ಟು ಅಗಲವಾಗಿ ಅರ್ಧ ಯೋಜನದಷ್ಟು ಎತ್ತರವಾಗಿಯೂ ಇದ್ದಿತು.

೧೩೧-೧೩೨. ಹೀಗೆ ಅಲ್ಲಿರುವ ಉತ್ತಮವಾದ ರತ್ನಗಳೆಲ್ಲವನ್ನೂ ನಾಲ್ಕು

ದ್ವಾರಕಾಂ ಪ್ರತಿ ದೈತ್ಯೈಶ್ಚೈರ್ವಾಹಯಾಮಾಸ ಕೇಶವಃ ॥ ೧೩೨ ॥

ಯಾ ದೇವಕನ್ಯಕಾಃ ಪೂರ್ವಂ ನರಕೇಣ ಹೃತಾ ಬಲಾತ್ ।
ತಾಸಾಂ ಕೃತ್ವಾ ಹೃಷೀಕೇಶೋ ವೇಣೀಬಂಧವಿಮೋಕ್ಷಣಂ ॥ ೧೩೩ ॥

ವಾಸೋಭಿರ್ಭೂಷಣೈರ್ದಿವ್ಯೈಸ್ತಾಃ ಸತ್ಕೃತ್ಯ ಮುಹುರ್ಮುಹುಃ ।
ಆರೋಪ್ಯ ಚ ವಿಮಾನೇ ತು ರಕ್ಷಿಭಿರ್ಬಲಿಭಿರ್ದೃಢೈಃ ॥ ೧೩೪ ॥

ನಾರದಾಧಿಷ್ಠಿತಾಃ ಸರ್ವಾ ದ್ವಾರಕಾಂ ಪ್ರತ್ಯವಾಹಯತ್ ।
ಯಃ ಕೃತಃ ಸುರಕನ್ಯಾರ್ಥೇ ಭೌಮೇನ ಮಣಿಪರ್ವತಃ ॥ ೧೩೫ ॥

ಮಣಿರತ್ನೌಘಸಂಪೂರ್ಣೋ ದಿವಾಕರಸಮಪ್ರಭಃ ।
ಉತ್ಪಾಟ್ಯ ತು ಜಗನ್ನಾಥಸ್ತಾರ್ಕ್ಷ್ಯಪೃಷ್ಠೇ ನ್ಯವಾಪಯತ್ ॥ ೧೩೬ ॥

ತಥೈವ ವಾರುಣಂ ಛತ್ರಂ ಗರುಡೋಪರಿ ಮಾಧವಃ ।
ಆರೋಪ್ಯ ಸತ್ಯಯಾ ಸಾರ್ಧಮಾಸೀನಃ ಸುಮನಾ ಹರಿಃ ॥ ೧೩೭ ॥

ದಂತಗಳುಳ್ಳವುಗಳೂ, ಮದದಿಂದ ಕೊಬ್ಬಿರುವುವೂ ಆದ ಹದಿನಾಲ್ಕುಸಾವಿರ ಗಜ ಶ್ರೇಷ್ಠಗಳನ್ನೂ ಸಹ ಶ್ರೀ ಕೃಷ್ಣನು ರಾಕ್ಷಸರ ಮೂಲಕ ದ್ವಾರಕೆಗೆ ಒಯ್ದನು.

೧೩೩-೧೩೪. ಹಿಂದೆ ನರಕನು ಹಿಮವಂತನ ತಪ್ಪಲಿನಿಂದ ಬಲಾತ್ಕಾರದಿಂದ ಅಪಹರಿಸಿ ತಂದು ಬಂಧನದಲ್ಲಿಟ್ಟಿದ್ದ ದೇವಕನ್ಯೆಯರನ್ನು ಬಿಡಿಸಿದನು. ಜಟೆಯಾಗಿರುವ ಅವರ ಕೇಶಪಾಶಗಳನ್ನು ಬಿಡಿಸಿ ಸಂತುಷ್ಟರಾಗಿ ತಮ್ಮ ಕೇಶಪಾಶಗಳನ್ನು ಬಾಚಿ ಜಡೆ ಹಾಕಿಕೊಳ್ಳುವಂತೆ ಮಾಡಿದನು ಮತ್ತು ಅನೇಕಬಗೆಯ ವಸ್ತ್ರಾಭರಣಗಳಿಂದ ಆ ಕನ್ಯೆಯರನ್ನು ಸತ್ಕರಿಸಿ ಬಲಶಾಲಿಗಳಾದ ಪುರುಷರ ರಕ್ಷಣೆಯಿಂದ ಅವರನ್ನು ವಿಮಾನಕ್ಕೆ ಹತ್ತಿಸಿ ಅದರ ಮೂಲಕ ನಾರದನೊಡನೆ ಅವರೆಲ್ಲರನ್ನೂ ದ್ವಾರಕೆಗೆ ಕರೆದುಕೊಂಡು ಹೋದನು.

೧೩೫-೧೩೬. ಆ ದೇವಕನ್ಯೆಯರ ವಿಹಾರಕ್ಕಾಗಿ ನರಕನು ನಿರ್ಮಿಸಿದ್ದ ಶ್ರೇಷ್ಠ ರತ್ನಗಳಿಂದ ತುಂಬಿದ್ದ ಮಣಿಪರ್ವತವನ್ನು ಕಿತ್ತು ಶ್ರೀ ಕೃಷ್ಣನು ಅದನ್ನು ಗರುಡನ ಬೆನ್ನಿನಮೇಲೆ ಇರಿಸಿಕೊಂಡನು.

೧೩೭-೧೩೮. ಅದರಂತೆ ವರುಣನ ಛತ್ರಿಯನ್ನೂ ಸಹ ಗರುಡನಮೇಲೆ ಇರಿಸಿಕೊಂಡು ಸತ್ಯಭಾಮೆಯೊಡನೆ ಸಂತೋಷದಿಂದ ಆ ಗರುಡನ ಮೇಲೇರಿ ಶ್ರೀಕೃಷ್ಣ

ಭಗದತ್ತಂ ಸಮಾಭಾಷ್ಯ ಪೃಥಿವೀಂ ಚ ಜಗತ್ಪತಿಃ ।
ಪ್ರತಸ್ಥೇ ದ್ವಾರಕಾಂ ವೀರೋ ವಿಯನ್ಮಾರ್ಗೇಣ ವೈ ದ್ರುತಂ ॥ ೧೩೮ ॥

ಸುಪರ್ಣಃ ಕಾಂಚನಸ್ರಾವಿ ಛತ್ರಂ ಸಮಣಿಪರ್ವತಂ ।
ಕೇಶವಂ ಸತ್ಯಯಾ ಸಾರ್ಧಂ ಹೇಲಯಾ ಖೇ ವಹನ್ಯಯೌ ॥ ೧೩೯ ॥

ಕ್ಷಣೇನ ದ್ವಾರಕಾಂ ಪ್ರಾಪ್ಯ ಕೇಶವಃ ಪರವೀರಹಾ ।
ಮುದಂ ಚ ಲೇಭೇ ಸಕಲೈರ್ಬಾಂಧವೈಶ್ಚ ತಥಾ ಗಣೈಃ ॥ ೧೪೦ ॥

ಏವಂ ಕಾಲೀ ಮಹಾಮಾಯಾ ಕಾಲಿಕಾಖ್ಯಾ ಜಗನ್ಮಯಾ ।
ವಿಷ್ಣುಂ ಚ ಜಗತಾಂ ನಾಥಂ ಪರಾಪರಪತಿಂ ಹರಿಂ ॥ ೧೪೧ ॥

ಜಗತ್ಕಾರಣಕರ್ತಾರಂ ಜ್ಞಾನಗಮ್ಯಂ ಜಗನ್ಮಯಂ ।
ಸಂಮೋಹಯತ್ಯೇವ ತಥಾ ಹ್ಯನುರಾಗವಿರಾಗವಾನ್ ॥ ೧೪೨ ॥

ಜಗದೊಡೆಯನೂ ಆದ ಶ್ರೀಹರಿಯು ಭಗದತ್ತನನ್ನೂ, ಭೂದೇವಿಯನ್ನೂ ಬೀಳ್ಕೊಂಡು ಆಕಾಶಮಾರ್ಗದಿಂದ ಜಾಗ್ರತೆಯಾಗಿ ದ್ವಾರಕೆಗೆ ಹೊರಟನು.

೧೩೯. ಆ ಗರುಡನು ವರುಣನ ಕಾಂಚಶ್ರಾವಿಯೆಂಬ ಛತ್ರಿಯನ್ನೂ, ಮಣಿಪರ್ವತವನ್ನೂ, ಸತ್ಯಭಾಮೆಯೊಡನೆ ಶ್ರೀ ಕೃಷ್ಣನನ್ನೂ ಸಹ ಸುಖವಾಗಿ ಹೊತ್ತುಕೊಂಡು ಆಕಾಶದಲ್ಲಿ ಹಾರಿಹೋದನು.

೧೪೦. ಸ್ವಲ್ಪಕಾಲದಲ್ಲಿಯೇ ದ್ವಾರಕೆಯನ್ನು ಸೇರಿ ಶತ್ರುನಾಶಕನಾದ ಶ್ರೀ ಕೃಷ್ಣನು ತನ್ನ ಬಂಧುಬಳಗ ಮತ್ತು ಪರಿವಾರದೊಡನೆ ಸೇರಿ ತುಂಬಾ ಹರ್ಷದಿಂದಿದ್ದನು.

೧೪೧. ಕಾಳಿಕೆ ಎಂಬ ಹೆಸರುಳ್ಳ ಮಹಾಮಾಯಾಸ್ವರೂಪಳಾದ ದೇವಿಯು, ಜಗದೊಡೆಯನೂ, ಪರಾಪರ ವಸ್ತುಗಳಿಗೆ ಒಡೆಯನೂ, ಪಾಪನಾಶಕನೂ, ವ್ಯಾಪಕನೂ, ಜಗತ್ತಿಗೆ ಕಾರಣಕರ್ತೃವೂ, ಜ್ಞಾನಗಮ್ಯನೂ, ಜಗದ್ರೂಪನೂ ಆದ ನಾರಾಯಣನನ್ನೂ ಸಹ ಮೋಹಗೊಳಿಸಿದಳು.

೧೪೨-೧೪೩. ಅದಕ್ಕನುಸಾರವಾಗಿ ನಾರಾಯಣನು ಅನುರಾಗ ಮತ್ತು ವಿರಕ್ತಿಗಳನ್ನೂ, ಹೊಂದಿ ಮಿತ್ರರನ್ನು ಸ್ನೇಹದಿಂದ ಅನುಗ್ರಹಿಸುತ್ತಲೂ, ಶತ್ರುಗಳನ್ನು

ಅನುಗೃಹ್ಣಾತಿ ಮಿತ್ರಾಣಿ ಹ್ಯಮಿತ್ರಾಣಿ ನಿಪಾತಿ ಚ ।
ನಾರೀಷು ಮೂಢೋ ರಮತೇ ದ್ವಂದೈನಾಪಿ ಚ ಮುಹ್ಯತೇ ॥ ೧೪೩ ॥

ಇತಿ ವಃ ಕಥಿತಂ ವಿಪ್ರಾ ಯಥಾಽಭೂನ್ನರಕೋಽಸುರಃ ।
ಯಥಾ ಚ ವರಲಾಭೋಽಭೂದ್ಯಥಾ ಚಾಸ್ಯ ವಿಚೇಷ್ಟಿತಂ ॥ ೧೪೪ ॥

ಆರಾಧಿತೋ ಯಥಾ ಬ್ರಹ್ಮಾ ಬಾಣಬುದ್ಧ್ಯಾ ಥ ಭೌಮಿನಾ ।
ಕಮನ್ಯದುಚಿತಂ ವಾಸ್ತಿ ತದ್ಬ್ರೂವಂತು ದ್ವಿಜೋತ್ತಮಾಃ ॥ ೧೪೫ ॥

ಇತಿ ಶ್ರೀ ಕಾಲಿಕಾಪುರಾಣೇ ನರಕೋಪಾಖ್ಯಾನೇ
ಏಕಚತ್ವಾರಿಂಶತ್ತಮೋಽಧ್ಯಾಯಃ

ನಿಗ್ರಹಿಸುತ್ತಲೂ, ಸ್ತ್ರೀಯರಲ್ಲಿ ಮೋಹಗೊಂಡು ಕ್ರೀಡಿಸುತ್ತಲೂ, ಸುಖ, ದುಃಖ, ಶೀತೋಷ್ಣ ಮುಂತಾದ ದ್ವಂದ್ವಗಳ ವಿರುದ್ಧಾನುಭವದಿಂದ ಮೋಹಗೊಳ್ಳುತ್ತಲೂ ಇದ್ದನು.

೧೪೪-೧೪೫. ಎಲೈ ಬ್ರಾಹ್ಮಣರೇ! ಈರೀತಿಯಾಗಿ ನಿಮಗೆ ನರಕನು ಜನಿಸಿದುದನ್ನೂ, ಅವನು ಹೇಗೆ ವರವನ್ನು ಪಡೆದನೆಂಬುದನ್ನೂ, ಯಾವರೀತಿ ವರ್ತಿಸುತ್ತಿದ್ದನೆಂಬುದನ್ನೂ, ಬಾಣನ ಮಾತಿನಂತೆ ಬ್ರಹ್ಮನನ್ನು ಹೇಗೆ ಆರಾಧಿಸಿದನೆಂಬುವುದನ್ನೂ ಹೇಳಿರುವೆನು. ಎಲೈ ಬ್ರಾಹ್ಮಣೋತ್ತಮರೇ! ಇನ್ನೇನು ಕೇಳಬೇಕೆಂದಿರುವಿರೋ ಅದನ್ನು ಕೇಳಿರಿ.

ಇಲ್ಲಿಗೆ ನಲವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ
ಶ್ರೀ ಕಾಲಿಕಾಪುರಾಣೇ ದ್ವಿಚತ್ವಾರಿಂಶತ್ತಮೋऽಧ್ಯಾಯಃ

॥ ಋಷಯ ಊಚುಃ ॥

ಕಥಂ ಗಿರಿಸುತಾ ಕಾಲೀ ಬಭೂವ ಜಗತಾಂ ಪ್ರಸೂಃ ।
ದಾಕ್ಷಾಯಣೀ ತ್ಯಕ್ತತನುಃ ಕಥಮಾಪ ಹರಂ ಪತಿಂ ॥ ೧ ॥

ಕಥಮುರ್ಧಶರೀರಂ ಸಾ ಜಹಾರ ಚ ಪಿನಾಕಿನಃ ।
ಏತನ್ನಃ ಪೃಚ್ಛತಾಂ ಸಮ್ಯಕ್ಕಥಯಸ್ವ ಮಹಾಮತೇ ॥ ೨ ॥

॥ ಮಾರ್ಕಂಡೇಯ ಉವಾಚ ॥

ಶೃಣುಧ್ವಂ ಮುನಿಶಾರ್ದೂಲಾ ಯಥಾ ದಾಕ್ಷಾಯಣೀ ಸತೀ ।
ಭೂತಾ ಗಿರಿಸುತಾ ಪೂರ್ವಂ ಯಥಾರ್ಧಮಹರತ್ತನುಂ ॥ ೩ ॥

॥ ನಲವತ್ತೆರಡನೆಯ ಅಧ್ಯಾಯವು ॥

೧-೨. ಋಷಿಗಳು ಕೇಳಿದರು:—ಓ ಮಾರ್ಕಂಡೇಯನೇ! ಜಗಜ್ಜನನಿಯಾದ ಕಾಲಿಕಾದೇವಿಯು ದಕ್ಷನ ಪುತ್ರಿಯಾದ ಸತೀದೇವಿಯ ಶರೀರವನ್ನು ಬಿಟ್ಟ ಮೇಲೆ ಹೇಗೆ ಪರ್ವತರಾಜನ ಮಗಳಾಗಿ ಜನಿಸಿ ತಿರುಗಿ ಶಂಕರನನ್ನು ಪತಿಯಾಗಿ ಪಡೆದಳು? ಅದಲ್ಲದೆ ಪಾರ್ವತಿಯಾಗಿ ಅವಳು ಮುಂದೆ ಶಂಕರನ ಅರ್ಧಶರೀರವನ್ನು ಹೇಗೆ ಆಕ್ರಮಿಸಿದಳು? ಇದೆಲ್ಲವನ್ನು ಪ್ರಶ್ನಿಸುತ್ತಿರುವ ನಮಗೆ ಹೇಳುವವನಾಗು.

೩. ಮಾರ್ಕಂಡೇಯನು ಹೇಳಿದನು:-ಎಲೈ ಮುನಿಶ್ರೇಷ್ಠರೇ! ದಕ್ಷಬ್ರಹ್ಮನ ಪುತ್ರಿಯಾದ ಸತಿದೇವಿಯು ಪರ್ವತನಾಜನ ಮಗಳಾಗಿ ಹುಟ್ಟಿದ ರೀತಿಯನ್ನೂ, ಶಂಕರನ ಅರ್ಧಶರೀರವನ್ನು ಆಕ್ರಮಿಸಿದುದನ್ನೂ ಹೇಳುವೆನು.

ಯದಾಽತ್ಯಜತ್ತನುಂ ದೇವೀ ಪೂರ್ವಂ ದಾಕ್ಷಾಯಣೀ ಸತೀ ।
ತದೈವ ಮನಸಾಽಗಚ್ಛನ್ಮೇನಕಾಂ ಹಿಮವದ್ಗಿರಿಂ ॥ ೪ ॥

ಯದಾ ಹರೇಣ ಸಹಿತಾ ದಕ್ಷಕನ್ಯಾ ಹಿಮಾಚಲೇ ।
ಚಿಕ್ರೀಡ ಚ ತದಾ ತಸ್ಯಾ ಮೇನಕಾಽಭೂದ್ಧಿತೈಷಿಣೀ ॥ ೫ ॥

ತಸ್ಯಾಃ ಸುತಾ ಸ್ಯಾಮಿತಿ ಚ ಆಧಾಯ ಮನಸಿ ದ್ವಿಜಾಃ ।
ತ್ಯಕ್ತ್ವಪ್ರಾಣಾ ತದಾ ದೇವೀ ಭೂತಾ ಹಿಮವತಃ ಸುತಾ ॥ ೬ ॥

ಯದಾ ದಾಕ್ಷಾಯಣೀ ಪ್ರಾಣಾನ್ದಕ್ಷಕೋಪಾಜ್ಜಹೌ ಪುರಾ ।
ತದೈವ ಮೇನಕಾ ದೇವೀ ಆರಿರಾಧಯಿಷುಃ ಶಿವಾಂ ॥ ೭ ॥

ಮಹಾಮಾಯಾಂ ಜಗದ್ಧಾತ್ರೀಂ ಯೋಗನಿದ್ರಾಂ ಸನಾತನೀಂ ।
ಮೋಹಿನೀಂ ಸರ್ವಭೂತಾನಾಂ ಶರಣಂ ಸರ್ವನಾಕಿನಾಂ ॥ ೮ ॥

---

೪. ಹಿಂದೆ ಸತೀದೇವಿಯು ದಕ್ಷನಮೇಲಿನ ಕೋಪದಿಂದ ಶರೀರವನ್ನು ತ್ಯಜಿಸುವಾಗ ಮನಸ್ಸಿನಲ್ಲಿ ಮೇನಕಾದೇವಿಯನ್ನೂ ಹಿಮವಂತನನ್ನೂ ಸ್ಮರಿಸಿದಳು.

೫. ಅಲ್ಲದೆ ಹಿಂದೆ ಶಂಕರನೊಡನೆ ಹಿಮಾಲಯದಲ್ಲಿ ಆ ಸತೀದೇವಿಯು ವಿಹರಿಸುವಾಗ ಹಿಮವಂತನ ಪತ್ನಿಯಾದ ಮೇನಕೆಯು ತುಂಬಾ ಹಿತೈಷಿಯಾಗಿದ್ದಳು.

೬. ಆದಕಾರಣ ಶರೀರವನ್ನು ಬಿಡುವಾಗ ಆ ಸತಿಯು ಆ ಮೇನಕೆಯ ಮಗಳಾಗಿ ಜನಿಸಬೇಕು ಎಂದು ಮನಸ್ಸಿನಲ್ಲಿ ಸಂಕಲ್ಪಿಸಿ ಪ್ರಾಣವನ್ನು ಬಿಟ್ಟಳು. ಅದರಂತೆ ಮುಂದೆ ಹಿಮವಂತನ ಮಗಳಾಗಿ ಜನಿಸಿದಳು.

೭. ದಕ್ಷನಮೇಲಿನ ಕೋಪದಿಂದ ಸತಿದೇವಿಯು ಪ್ರಾಣವನ್ನು ಬಿಟ್ಟ ಸಮಯದಲ್ಲಿಯೇ ಮೇನಕಾದೇವಿಯು ಮಂಗಳರೂಪಳಾದ ದೇವಿಯನ್ನು ಆರಾಧಿಸಲಿಚ್ಛೆಯುಳ್ಳವಳಾದಳು.

೮-೯. ನಂತರ ಅವಳು ಆದಿಮಾಯೆಯೂ, ಜಗತ್ತನ್ನು ಧರಿಸುವವಳೂ, ಯೋಗನಿದ್ರೆಯ ರೂಪಳೂ, ಅನಾದಿಮೂರ್ತಿಯೂ, ಸಕಲ ಪ್ರಾಣಿಗಳನ್ನೂ ಮೋಹಗೊಳಿಸುವವಳೂ, ಎಲ್ಲಾ ದೇವತೆಗಳನ್ನು ರಕ್ಷಿಸುವವಳೂ ಆದ ಆದಿಶಕ್ತಿಯನ್ನು

ಅಷ್ಟಮ್ಯಾಮುಪವಾಸಂ ತು ಕೃತ್ವಾ ಸಾ ನವಮೀತಿಥೌ ।
ಮೋದಕೈರ್ಬಲಿಭಿಃ ಪಿಷ್ಟೈಃ ಪಾಯಸೈರ್ಗಂಧಪುಷ್ಪಕೈಃ ॥ ೯ ॥

ಜೈತ್ರೇ ಮಾಸಿ ಸಮಾರಭ್ಯ ಸಪ್ತವಿಂಶತಿವಾಸರಾನ್ ।
ಯಾವತ್ಸಂಪೂಜಯಾಮಾಸ ಪುತ್ರಾರ್ಥಿನ್ಯನ್ವಹಂ ಶುಚಿಃ ॥ ೧೦ ॥

ಗಂಗಾಯಾಮೋಷಧಿಪ್ರಸ್ಥೇ ಕೃತ್ವಾ ಮೂರ್ತಿಂ ಮಹೀಮಯೀಂ ।
ಕಚಾಚಿತ್ಸಾ ನಿರಾಹಾರಾ ಕದಾಚಿತ್ಸಾ ಧೃತವ್ರತಾ ॥ ೧೧ ॥

ಶಿವಾವಿನ್ಯಸ್ತಮನಸಾ ಸಪ್ತವಿಂಶತಿವತ್ಸರಾನ್ ।
ನಿನಾಯ ಮೇನಕಾ ದೇವೀ ಪರಮಾಂ ಭೂತಿಮಿಚ್ಛತೀ ॥ ೧೨ ॥

ಸಪ್ತವಿಂಶತಿವರ್ಷಾಂತೈರ್ಜಗನ್ಮಾತಾ ಜಗನ್ಮಯೀ ।
ಸುಪ್ರೀತಾಽಭವದತ್ಯರ್ಥಂ ಸ್ಮಾಹ ಪ್ರತ್ಯಕ್ಷತಾಂ ಗತಾ ॥ ೧೩ ॥

ಪೂಜಿಸಲೋಸುಗ, ಒಂದು ಅಷ್ಟಮಿ ತಿಥಿಯಲ್ಲಿ ಉಪವಾಸವಿದ್ದು ಮರುದಿನ ನವಮಿ ಯಲ್ಲಿ ಮೋದಕಗಳಿಂದಲೂ, ಪರಮಾನ್ನ, ಹೋಳಿಗೆ ತಂಬಿಟ್ಟು ಮುಂತಾದ ನೈವೇದ್ಯ ಗಳಿಂದಲೂ, ಗಂಧ ಮತ್ತು ಪುಷ್ಪಗಳಿಂದಲೂ ದೇವಿಯನ್ನು ಪೂಜಿಸಿದಳು.

೧೦. ಪುತ್ರರನ್ನು ಪಡೆಯುವ ಇಚ್ಛೆಯಿಂದ ಜೈತ್ರಮಾಸದಲ್ಲಿ ಪ್ರಾರಂಭಿಸಿ ಇಪ್ಪತ್ತೇಳುದಿನಗಳು ದೇವಿಯನ್ನು ಶುದ್ಧಳಾಗಿ ಪೂಜಿಸಿದಳು.

೧೧-೧೨. ಅಲ್ಲದೆ ಆ ಮೇನಕೆಯು ಗಂಗಾನದಿಯ ದಡದಲ್ಲಿರುವ ಓಷಧಿ ಪ್ರಸ್ಥದಲ್ಲಿ ದೊಡ್ಡದಾದ ದೇವಿಯ ಮೂರ್ತಿಯನ್ನು ರಚಿಸಿ ಒಮ್ಮೆ ಆಹಾರವನ್ನು ಸೇವಿಸದೆಯೂ, ಒಮ್ಮೆ ನಿಯಮನಿಷ್ಠಳಾಗಿಯೂ, ದೇವಿಯ ಧ್ಯಾನದಲ್ಲಿ ತಲ್ಲೀನವಾದ ಮನಸ್ಸುಳ್ಳವಳಾಗಿಯೂ ಇದ್ದು ಉತ್ಕೃಷ್ಟವಾದ ಪುತ್ರಸಂಪತ್ತನ್ನು ಪಡೆಯಲಿಚ್ಛೆ ಯಿಂದ ಇಪ್ಪತ್ತೇಳು ವರ್ಷಗಳನ್ನು ಕಳೆದಳು.

೧೩-೧೪. ಹೀಗೆ ಇಪ್ಪತ್ತೇಳು ವರ್ಷಗಳು ಕಳೆಯಲು ಜಗತ್ತಿಗೆ ತಾಯಿಯೂ ಜಗದ್ರೂಪಳೂ ಆದ ಆದಿಶಕ್ತಿಯು ತುಂಬಾ ಪ್ರಸನ್ನಳಾಗಿ ಮೇನಕೆಗೆ ಪ್ರತ್ಯಕ್ಷಳಾಗಿ ಎಲೌ ಮೇನಕಾದೇವಿಯೇ! ನಿನಗೆ ಯಾವ ಇಷ್ಟಾರ್ಥವು ಬೇಕಾಗಿರುವುದೋ

॥ ದೇವ್ಯುವಾಚ ॥

ಯತ್ಪ್ರಾರ್ಥಿತಂ ತ್ವಯಾ ದೇವಿ ಮತ್ತಸ್ತತ್ಪ್ರಾರ್ಥಯಾಽಧುನಾ ।
ದಾಸ್ಯೇ ತವಾಹಂ ತತ್ಸರ್ವಂ ವಾಂಛಿತಂ ಯದ್ಧೃದಾ ಭವೇತ್ ॥ ೧೪ ॥

ತತಃ ಸಾ ಮೇನಕಾದೇವೀ ಪ್ರತ್ಯಕ್ಷಂ ಕಾಲಿಕಾಂ ಗತಾಂ ।
ದೃಷ್ಟ್ವೈವ ಪ್ರಣನಾಮಾಥ ವಚನಂ ಚೇದಮಬ್ರವೀತ್ ॥ ೧೫ ॥

ದೇವಿ ಪ್ರತ್ಯಕ್ಷತೋ ರೂಪಂ ತವ ದೃಷ್ಟಂ ಮಯಾಽಧುನಾ ।
ತ್ವಾಮಹಂ ಸ್ತೋತುಮಿಚ್ಛಾಮಿ ಪ್ರಸನ್ನಾ ಯದಿ ಮೇ ಶಿವೇ ॥ ೧೬ ॥

ತತಃ ಸಾ ಮಾತರಿತ್ಯುಕ್ತ್ವಾ ಕಾಲಿಕಾ ಸರ್ವಮೋಹಿನೀ ।
ಬಾಹುಭ್ಯಾಂ ಚಾರುವೃತ್ತಾಭ್ಯಾಂ ಮೇನಕಾಂ ಪರಿಷಸ್ವಜೇ ॥ ೧೭ ॥

ತತಃ ಸಾ ಮೇನಕಾದೇವೀ ಕಾಲಿಕಾಂ ಪರಮೇಶ್ವರೀಂ ।
ತುಷ್ಟಾವ ವಾಗ್ಭಿರಿಷ್ಟಾಭಿಃ ಶಿವಾಂ ಪ್ರತ್ಯಕ್ಷತಃ ಸ್ಥಿತಾಂ ॥ ೧೮ ॥

ದದನ್ನು ಕೇಳಿಕೋ ನಿನ್ನ ಮನಸ್ಸಿನಲ್ಲಿರುವ ಆ ಇಷ್ಟಾರ್ಥವೆಲ್ಲವನ್ನೂ ಕೊಡುವೆನು ಎಂದು ಹೇಳಿದಳು.

೧೫-೧೬. ಅನಂತರ ಆ ಮೇನಕಾದೇವಿಯು ಪ್ರತ್ಯಕ್ಷಳಾದ ಕಾಳಿಕಾದೇವಿಯನ್ನು ನೋಡಿ ಆ ಕೂಡಲೆ ನಮಸ್ಕರಿಸಿ ಓ ದೇವಿಯೇ! ಈ ನಿನ್ನ ರೂಪವನ್ನು ಈಗ ನೋಡಿದೆನು ನೀನು ಪ್ರಸನ್ನಳಾದರೆ ನಿನ್ನನ್ನು ಸ್ತುತಿಸಲಪೇಕ್ಷಿಸುವೆನು ಎಂದು ಹೇಳಿದಳು.

೧೭. ಅನಂತರ ಸರ್ವ ಜಂತುಗಳನ್ನೂ ಮೋಹಗೊಳಿಸುವ ಕಾಳಿಕಾದೇವಿಯು ಮೇನಕೆಯನ್ನು ಕುರಿತು, ಓ ಮಾತೆಯೇ! ಎಂದು ಕರೆದು ಸುಂದರವೂ, ವರ್ತುಳವೂ ಆದ ತನ್ನ ಬಾಹುಗಳಿಂದ ಮೇನಕೆಯನ್ನು ಆಲಂಗಿಸಿದಳು.

೧೮. ಅನಂತರ ಆ ಮೇನಕೆಯು ಪ್ರತ್ಯಕ್ಷಳಾಗಿ ನಿಂತಿರುವ ಮತ್ತು ಜಗದೊಡೆಯಳಾದ ಕಾಳಿಕಾದೇವಿಯನ್ನು ಪ್ರಿಯವಾದ ವಾಕ್ಯಗಳಿಂದ ಈರೀತಿಯಾಗಿ ಸ್ತುತಿಸಿದಳು.

॥ ಮೇನಕೋವಾಚ ॥

ಪ್ರೇರಯಂತೀಂ ಜಗದ್ಧಾಮ ಚಂಡಿಕಾಂ ಲೋಕಧಾರಿಣೀಂ ।
ಪ್ರಣಮಾಮಿ ಜಗದ್ಧಾತ್ರೀಂ ಸರ್ವಕಾಮಾರ್ಥಸಾಧಿನೀಂ ॥ ೧೯ ॥

ನಿತ್ಯಾನಂದಾಂ ಜ್ಞಾನಮಯೀಂ ಯೋಗನಿದ್ರಾಂ ಜಗತ್ಪ್ರಸೂಂ ।
ಪ್ರಣಮಾಮಿ ಶಿವಾಂ ಶುದ್ಧಾಂ ವಿಧಿಶೌರಿಶಿವಾತ್ಮಿಕಾಂ ॥ ೨೦ ॥

ಮಾಯಾಮಯೀಂ ಮಹಾಮಾಯಾಂ ಭಕ್ತಶೋಕವಿನಾಶಿನೀಂ ।
ಕಾಮಸ್ಯ ವನಿತಾಂ ಭದ್ರಾಂ ನಮಾಮಿ ತ್ವಾಂ ಚಿತಿಂ ಶಿವಾಂ ॥ ೨೧ ॥

ಸತ್ತ್ವೋದ್ರೇಕಾದ್ಯಾ ಭವಿತ್ರೀಹ ನಿತ್ಯಾಽ ।
ನಿತ್ಯಾ ಚಾಪಿ ಪ್ರಾಣಿನಾಂ ಬುದ್ಧಿರೂಪಾ ॥
ಸಾ ತ್ವಂ ಬಂಧಚ್ಛೇದಹೇತುರ್ಯತೀನಾಂ ।
ಕಸ್ತೇ ಗರ್ಹ್ಯೋ ಮಾದೃಶೀಭಿಃ ಪ್ರಭಾವಃ ॥ ೨೨ ॥

---

೧೯. ಮೇನಕೆಯು ಹೇಳಿದಳು :--ಜಗತ್ತನ್ನು ಪ್ರೇರಿಸುವವಳೂ, ಚಂಡಿಕೆಯೂ ಎಂದರೆ ದುಷ್ಟರ ನಿಗ್ರಹಕ್ಕಾಗಿ ಅತ್ಯಂತ ಕೋಪಿಷ್ಠಳೂ, ಲೋಕಗಳನ್ನು ಧರಿಸುವವಳೂ, ಜಗನ್ಮಾತೆಯೂ ಮತ್ತು ಎಲ್ಲಾ ಇಷ್ಟಾರ್ಥಗಳನ್ನು ನೆರವೇರಿಸಿಕೊಡುವವಳೂ ಆದ ಕಾಳಿಕಾದೇವಿಯನ್ನು ನಮಸ್ಕರಿಸುವೆನು.

೨೦. ನಿತ್ಯವಾದ ಆನಂದಸ್ವರೂಪಳೂ, ನಿರ್ಮಲರೂಪಳೂ, ಸೃಷ್ಟಿಸ್ಥಿತಿಲಯಗಳಿಗಾಗಿ ಬ್ರಹ್ಮ, ವಿಷ್ಣು ಮತ್ತು ಶಂಕರ ರೂಪಗಳನ್ನು ಧರಿಸುವವಳೂ ಆದ ದೇವಿಯನ್ನು ನಮಸ್ಕರಿಸುವೆನು.

೨೧. ಮಾಯಾರೂಪಳೂ, ಆದಿಮಾಯೆಯೂ, ಭಕ್ತರ ದುಃಖವನ್ನು ಹೋಗಲಾಡಿಸುವವಳೂ, ಮನ್ಮಥನ ಪತ್ನಿಯಾದ ರತಿದೇವಿಯ ರೂಪಳೂ ಆದ ಕಾಳಿಕಾದೇವಿಯನ್ನು ನಮಸ್ಕರಿಸುವೆನು.

೨೨. ಪ್ರಾಣಿಗಳಿಗೆ ಸತ್ತ್ವಗುಣಪ್ರಧಾನವಾಗಿ ಯಾವ ಸುಬುದ್ಧಿಯು ಜನಿಸುವುದೋ ಆ ಸುಬುದ್ಧಿಯೂ ನೀನು ಮತ್ತು ನಿತ್ಯಾನಿತ್ಯಸ್ವರೂಪಳಾದ ಆ ಬುದ್ಧಿಯ ರೂಪದಿಂದ ಯತಿಗಳಿಗೆ ಸಂಸಾರ ಬಂಧನವನ್ನು ಹರಿದೊಗೆಯುವವಳೂ ನೀನು ಇಂತಹ ನಿನ್ನ ಮಹಿಮೆಯನ್ನು ನನ್ನಂತಹ ಮೂಢಳು ವರ್ಣಿಸುವದೆಂತು ?

ಯಾ ತ್ವಂ ಸಾಮ್ನಾಂ ಸಿದ್ಧಿರುಕ್ತಿಸ್ತಥಾರ್ಚಾ ।
ಯಾ ವೃತ್ತಿರ್ಯಾ ಯಜುಷಾಂ ದೀರ್ಘರೂಪಾ ॥
ಹಿಂಸಾ ಯಾ ವಾಥರ್ವವೇದಸ್ಯ ಸಾ ತ್ವಂ ।
ನಿತ್ಯಂ ಕಾಮಂ ತ್ವಂ ಮಮೇಷ್ಟಂ ವಿಧೇಹಿ ॥ ೨೩ ॥

ನಿತ್ಯಾನಿತ್ಯೈರ್ಭಾಗಹೀನೈಃ ಪುರಸ್ತಾ ।
ಸ್ತನ್ಮಾತ್ರೈರ್ಯೈರ್ಯದತೀತೇ ಭೂತವರ್ಗಃ ॥
ತೇಷಾಂ ಶಕ್ತಿಸ್ತ್ವಂ ಸದಾ ನಿತ್ಯರೂಪಾ ।
ಕಾ ತೇ ಯೋಷಾ ಯೋಗ್ಯಂ ವಕ್ತುಂ ಸಮರ್ಥಾ ॥ ೨೪ ॥

ಕ್ಷಿತಿರ್ಧರಿತ್ರೀ ಜಗತಾಂ ತ್ವಮೇವ ।
ತ್ವಮೇವ ನಿತ್ಯಾ ಪ್ರಕೃತಿಸ್ವರೂಪಾ ॥
ಯಯಾ ವಶಃ ಕ್ರಿಯತೇ ಬ್ರಹ್ಮರೂಪಃ ।
ಸಾ ತ್ವಂ ನಿತ್ಯಾ ಮೇ ಪ್ರಸೀದಾದ್ಯ ಮಾತಃ ॥ ೨೫ ॥

---

೨೩. ಓ ದೇವಿಯೇ! ನೀನು ಸಾಮವೇದದ ಸಿದ್ಧಿಯು ಋಗ್ವೇದದ ಉಕ್ತಿಯು ಅಂದರೆ ಪ್ರತಿಪಾದ್ಯಳೂ ನೀನು. ಯಜುರ್ವೇದದ ದೀರ್ಘ ಅಂದರೆ ದಂಡಾಕಾರವಾದ ಆವೃತ್ತಿಯೂ ನೀನು. ಅಥರ್ವವೇದದಲ್ಲಿ ಹೇಳುವ ಹಿಂಸೆಯೂ ನೀನು. ಹೀಗೆ ನಾಲ್ಕು ವೇದಗಳಲ್ಲಿಯೂ ಗಾನಮಾಡಲ್ಪಡುವ ನೀನು ನನಗೆ ಇಷ್ಟಾರ್ಥಗಳನ್ನು ಸದಾ ನೆರವೇರಿಸಿಕೊಡು.

೨೪. ನೀನು ಸೃಷ್ಟಿಗಿಂತಲೂ ಮೊದಲು ವ್ಯಕ್ತವಾಗದೆ ಇರುವಂತ ನಿತ್ಯ ಮತ್ತು ಅನಿತ್ಯರೂಪಳು. ತನ್ಮಾತ್ರಗಳು ಅಂದರೆ ವ್ಯಕ್ತವಾಗಿ ಕಣ್ಣಿಗೆ ಕಾಣುವಂತಹ ಮಹಾಭೂತಗಳಿಗೆ ಕಾರಣವಾದ ಸೂಕ್ಷ್ಮಭೂತಗಳು ಮಹಾಭೂತಗಳನ್ನು ಸೃಷ್ಟಿಸುವುವು ಅಂದರೆ ಪರಸ್ಪರ ಸೇರಿ ಕಣ್ಣಿಗೆಕಾಣುವಂತಹ ದೊಡ್ಡದೊಡ್ಡ ಪಂಚಭೂತಗಳಾಗುವುವು ಎಂದು ಅಭಿಪ್ರಾಯವು. ಆದರೆ ಆ ತನ್ಮಾತ್ರಗಳಲ್ಲಿರುವ ಮಹಾಭೂತಗಳನ್ನು ಸೃಷ್ಟಿಸುವ ಶಕ್ತಿಯು ನೀನೆ ಆಗಿರುವೆ. ಇಂತಹ ನಿನ್ನ ಯೋಗ್ಯತೆಯನ್ನು ನನ್ನಂತವ ಹೆಂಗಸು ಎಂದಿಗೂ ಹೇಳಲು ಶಕ್ತಳಲ್ಲವು.

೨೫. ಓ ದೇವಿಯೇ! ಜಗತ್ತನ್ನು ಧರಿಸಿರುವ ಈ ಭೂಮಿಯೂ ನೀನೇ. ಈ ಜಗತ್ತಿನಲ್ಲಿ ನಿತ್ಯವಾದ ವಸ್ತುವು ನೀನೇ ಆಗಿರುವೆ ಮತ್ತು ಈ ಜಗತ್ತಿಗೆ ನೀನೇ ಪ್ರಕೃ

ತ್ವಂ ಜಾತವೇದೋಗತಶಕ್ತಿರೂಪಾ ।
ತ್ವಂ ದಾಹಿಕಾ ಸೂರ್ಯಕರಸ್ಯ ಶಕ್ತಿಃ ॥
ಆಹ್ಲಾದಿಕಾ ತ್ವಂ ಬಹು ಚಂದ್ರಿಕಾಯಾ ।
ಸ್ತಾಂ ತ್ವಾನುಡಂ ಸ್ತೌಮಿ ನಮಾಮಿ ಚಾಂಬಿಕಾಂ
॥ ೨೬ ॥

ಯೋಷಾ ಯೋಷಿತ್ಪ್ರಿಯಾಣಾಂ ತ್ವಂ ವಿದ್ಯಾ ಚೋರ್ಧ್ವರೇತಸಾಂ ।
ವಾಂಛಾ ತ್ವಂ ಸರ್ವಜಗತಾಂ ಮಾಯಾ ಚ ತ್ವಂ ತಥಾ ಪರೇಃ ॥ ೨೭ ॥

ಯಾsನೇಕರೂಪಾಣಿ ವಿಧಾಯ ನಿತ್ಯಂ ।
ಸೃಷ್ಟಿಂ ಸ್ಥಿತಿಂ ಹಾನಿಮುಪೀಹ ಕರ್ತ್ರೀ ॥
ಬ್ರಹ್ಮಾಚ್ಯುತಸ್ಥಾಣುಶರೀರಹೇತುಃ ।
ಸಾ ತ್ವಂ ಪ್ರಸೀದಾದ್ಯ ಪುನರ್ನಮಸ್ತೇ
॥ ೨೮ ॥

ತಿಯು, ಆದಿಕಾರಣಳು. ನಿನ್ನಿಂದಲೇನೇ ನಾವು ಬ್ರಹ್ಮಸ್ವರೂಪವನ್ನು ಪಡೆಯ ಬಹುದು. ಇಂತಹ ನಿತ್ಯಳಾದ ಓ ಮಾತೆಯೇ! ನೀನು ನನಗೆ ಪ್ರಸನ್ನಳಾಗು

೨೬. ಅಲ್ಲದೆ ಅಗ್ನಿಯಲ್ಲಿರುವ ಜ್ವಲಿಸುತ್ತಿರುವ ಶಕ್ತಿಯೂ ನೀನು, ಸೂರ್ಯ ಕಿರಣಗಳಲ್ಲಿರುವ ಪ್ರಕಾಶಿಸುವ ಶಕ್ತಿಯೂ ನೀನು, ಚಂದ್ರಕಿರಣಗಳಲ್ಲಿಯ ಸಂತೋಷ ಗೊಳಿಸುವ ಶಕ್ತಿಯೂ ನೀನು. ಇಂತಹ ನಿನ್ನನ್ನು ನಾನು ಸ್ತುತಿಸುವೆನು ಮತ್ತು ಜಗನ್ಮಾತೆಯಾದ ನಿನಗೆ ನಮಿಸುವೆನು.

೨೭. ಸ್ತ್ರೀಯರಲ್ಲಿ ಆಸಕ್ತಿಯುಳ್ಳ ಕಾಮುಕರಿಗೆ ನೀನು ಸ್ತ್ರೀರೂಪಳು ಎಂದರೆ ಸ್ತ್ರೀರೂಪದಿಂದ ಕಾಮುಕರನ್ನು ಮೋಹಗೊಳಿಸುವವಳು. ತಪಸ್ವಿಗಳ ಮತ್ತು ಜ್ಞಾನಿ ಗಳ ಯೋಗವಿದ್ಯಾ ಮತ್ತು ಜ್ಞಾನಸ್ವರೂಪವೂ ನೀನು. ಸಕಲ ಪ್ರಾಣಿಗಳ ಆಶೆಯೂ ನೀನು. ಹರಿಯ ಮಾಯೆಯೂ ನೀನು.

೨೮. ಬ್ರಹ್ಮ, ವಿಷ್ಣು, ಈಶ್ವರರೆಂಬ ಅನೇಕ ರೂಪಗಳನ್ನು ಧರಿಸಿ ನಿತ್ಯವೂ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಇವುಗಳನ್ನು ನೀನು ಮಾಡುವೆ. ಅಲ್ಲದೆ ಬ್ರಹ್ಮ ವಿಷ್ಣು ಮಹೇಶ್ವರರ ಶರೀರವನ್ನು ಸೃಷ್ಟಿಸುವವಳೂ ನೀನು. ಇಂತಹ ನೀನು ನನಗೆ ಪ್ರಸನ್ನ ಳಾಗು, ಇಗೋ ಪುನಃ ನಿನಗೆ ನಮಿಸುವೆನು.

॥ ಮಾರ್ಕಂಡೇಯ ಉವಾಚ ॥

ತತಃ ಸಾ ಜಗತಾಂ ಮಾತಾ ಕಾಲಿಕಾ ಪುನರೇವ ಹಿ ।
ಉವಾಚ ಮೇನಕಾಂ ದೇವೀಂ ವಾಂಛಿತಂ ವರಯೇತ್ಯುತ ॥ ೨೯ ॥

ತತಃ ಸಾ ಪ್ರಥಮಂ ಪುತ್ರಶತಂ ವವ್ರೇ ಯಶಸ್ವಿನೀ ।
ವೀರ್ಯವಚ್ಚಾಯುಷಾ ಯುಕ್ತಮೃದ್ಧಿಸಿದ್ಧಿಸಮನ್ವಿತಂ ॥ ೩೦ ॥

ಪಶ್ಚಾತ್ತಥೈಕಾಂ ತನಯಾಂ ಸುರೂಪಾಂ ಗುಣಶಾಲಿನೀಂ ।
ಕುಲದ್ವಯಾನಂದಕರೀಂ ಭುವನತ್ರಯದುರ್ಲಭಾಂ ॥ ೩೧ ॥

ತತೋ ಭಗವತೀ ಪ್ರಾಹ ಮೇನಕಾಂ ಮುನಿಸಂನಿಭಾಂ ।
ಸ್ಮಿತಪೂರ್ವಂ ತದಾ ತಸ್ಯಾಃ ಪೂರಯಂತೀ ಮನೋರಥಂ ॥ ೩೨ ॥

॥ ದೇವ್ಯುವಾಚ ॥

ಶತಂ ಪುತ್ರಾಃ ಸಂಭವಂತು ಭವತ್ಯಾ ವೀರ್ಯಸಂಯುತಾಃ ।
ತತ್ರೈಕೋ ಬಲವಾನ್ಮುಖ್ಯಃ ಪ್ರಥಮಂ ಸಂಭವಿಷ್ಯತಿ ॥ ೩೩ ॥

---

೨೯. ಮಾರ್ಕಂಡೇಯ ಮುನಿಯು ಹೇಳಿದನು:—ಅನಂತರ ಜಗನ್ಮಾತೆಯಾದ ಆ ಕಾಳಿಕೆಯು ಮೇನಕೆಯನ್ನು ಕುರಿತು, ಎಲೌ ಮೇನಕೆಯೇ! ನಿನಗೆ ಬೇಕಾದ ವರವನ್ನು ಕೇಳಿಕೋ ಎಂದು ಹೇಳಿದಳು.

೩೦. ಆಗ ಮೇನಕೆಯು ಮೊದಲು ವೀರ್ಯವಂತರೂ, ಚಿರಂಜೀವಿಗಳೂ, ಸಕಲ ಇಷ್ಟಾರ್ಥಸಿದ್ಧಿಯುಳ್ಳವರೂ ಆದಂತಹ ನೂರುಜನ ಮಕ್ಕಳನ್ನು ಕೇಳಿಕೊಂಡಳು.

೩೧. ಅನಂತರ ಸುಂದರಿಯೂ, ಗುಣವಂತಳೂ, ಮಾತೃ ಮತ್ತು ಪಿತೃಕುಲಗಳಿಗೆ ಆನಂದವನ್ನುಂಟುಮಾಡುವವಳೂ, ಮೂರುಲೋಕದಲ್ಲಿ ಎಲ್ಲೆಲ್ಲಿಯೂ ಜನಿಸದಂತಹ ಉತ್ತಮಳೂ ಆದ ಪುತ್ರಿಯೋರ್ವಳನ್ನು ಕೇಳಿಕೊಂಡಳು.

೩೨. ಅನಂತರ ದೇವಿಯು ಮುನಿಗಳಂತೆ ಪವಿತ್ರಳೂ, ವ್ರತನಿರತಳೂ ಆದ ಮೇನಕೆಯನ್ನು ಕುರಿತು ಮಂದಹಾಸಪೂರ್ವಕವಾಗಿ ಮೇನಕೆಯ ಇಷ್ಟಾರ್ಥವನ್ನು ನೆರವೇರಿಸುವಂತಹ ಮಾತುಗಳನ್ನು ಹೇಳಿದಳು.

೩೩. ಎಲೌ ಮೇನಕೆಯೇ! ವೀರ್ಯಶಾಲಿಗಳಾದ ನೂರುಮಕ್ಕಳು ನಿನಗೆ

ಸುತಾ ಚ ತವ ದೇವಾನಾಂ ಮಾನುಷಾಣಾಂ ಚ ರಕ್ಷಸಾಂ ।
ಹಿತಾಯ ಸರ್ವಜಗತಾಂ ಭವಿಷಾಮ್ಯುದಯೇವ ತೇ ॥ ೩೪ ॥

ತ್ವಂ ಸುಖಪ್ರಸವಾ ನಿತ್ಯಂ ತಥಾ ನಿತ್ಯಂ ಪತಿವ್ರತಾ ।
ಅಮ್ಲಾನಾ ರೂಪಸಂಪನ್ನಾ ಸುಭಗಾ ಚ ಭವಿಷ್ಯಸಿ ॥ ೩೫ ॥

ಏವಮುಕ್ತ್ವಾ ಜಗದ್ಧಾತ್ರೀ ತತ್ರೈವಾಂತರಧೀಯತ ।
ಮೇನಕಾ ಚ ಮುದಂ ಲಬ್ಧ್ವಾ ಸ್ವಸ್ಥಾನಂ ಪ್ರವಿವೇಶ ಹ ॥ ೩೬ ॥

ತತಃ ಕಾಲೇ ತು ಸಂಪ್ರಾಪ್ತೇ ಮೈನಾಕಮಚಲೋತ್ತಮಂ ।
ಯಕ್ಷೇಣ ಸಹ ಯೋಽದ್ಯಾಪಿ ಸಿಂಧುಮಧ್ಯೇ ಪ್ರವರ್ತತೇ ॥ ೩೭ ॥

ಮೇನಕಾ ಸುಷುವೇ ದೇವೀ ದೇವೇಂದ್ರಂ ಸ್ಪರ್ಧಯಾ ಗತಂ ।
ಅಸ್ಯಾನೂನಶತಂ ಪುತ್ರಾನ್ ಕ್ರಮಾತ್ಸಾ ಸುಷುವೇ ಸತೀ ॥ ೩೮ ॥

ಆಗುವರು. ಅವರಲ್ಲಿ ಮೊದಲು ತುಂಬಾ ಬಲಶಾಲಿಯೂ, ಮುಖ್ಯನೂ ಆದ ಪುತ್ರನು ಜನಿಸುವನು.

೩೪. ಅಲ್ಲದೆ ದೇವತೆಗಳೂ ಮನುಷ್ಯರೂ ಮತ್ತು ರಾಕ್ಷಸರೂ ಇವರೇ ಮೊದಲಾದ ಸಕಲ ಜಗತ್ತಿನ ಕ್ಷೇಮಕ್ಕಾಗಿ ನಾನೇ ನಿನ್ನ ಮಗಳಾಗಿ ಜನಿಸುವೆನು.

೩೫. ನೀನು ಸುಖವಾಗಿ ಪುತ್ರರನ್ನು ಪಡೆದು ಪತಿವ್ರತೆಯೂ, ಸುಂದರವಾದ ರೂಪವುಳ್ಳವಳೂ, ತುಂಬಾ ಭಾಗ್ಯಶಾಲಿನಿಯೂ ಆಗುವೆ.

೩೬. ಈರೀತಿಯಾಗಿ ಹೇಳಿ ಜಗನ್ಮಾತೆಯಾದ ಕಾಳಕಾದೇವಿಯು ಅಲ್ಲಿಯೇ ಅದೃಶ್ಯಳಾದಳು. ಮೇನಕೆಯೂ ಸಹ ಸಂತೋಷಗೊಂಡು ತನ್ನ ಸ್ಥಾನಕ್ಕೆ ತೆರಳಿದಳು.

೩೭. ಅನಂತರ ಆ ಮೇನಕೆಯು ಯುಕ್ತವಾದ ಕಾಲದಲ್ಲಿ ಗರ್ಭವನ್ನು ಧರಿಸಿ ಪರ್ವತಶ್ರೇಷ್ಠವಾದ "ಮೈನಾಕ" ಗಿರಿಯನ್ನು ಹೆತ್ತಳು. ಆ ಮೈನಾಕಗಿರಿಯು ಇಂದಿಗೂ ಸಮುದ್ರ ಮಧ್ಯದಲ್ಲಿ ಯಕ್ಷನೊಡನೆ ಇರುವುದು.

೩೮-೩೯. ಅಲ್ಲದೆ ಆ ಮೇನಕೆಯು ಸ್ಪರ್ಧೆಯಿಂದ ಬಂದಿರತಕ್ಕ ದೇವೇಂದ್ರನನ್ನೂ ಎಂದರೆ ರೆಕ್ಕೆಯನ್ನು ಕತ್ತರಿಸಲು ವಜ್ರಧರನಾಗಿ ಬಂದ ದೇವೇಂದ್ರನನ್ನೂ

ಮಹಾವೀರ್ಯಾನ್ಮಹಾಸತ್ತ್ವಾನ್ಸಂಪನ್ನಾನ್ಸರ್ವತೋ ಗುಣೈಃ ।
ತತಃ ಸಾ ಕಾಲಿಕಾ ದೇವೀ ಯೋಗನಿದ್ರಾ ಜಗನ್ಮಯಾ ॥ ೩೯ ॥

ಪೂರ್ವತ್ಯಕ್ತ್ವಸತೀರೂಪಾ ಜನ್ಮಾರ್ಥಂ ಮೇನಕಾಂ ಯಯೌ ।
ಸಮಯಸ್ಯಾನುರೂಪೇಣ ಮೇನಕಾಜಠರೇ ಶಿವಾ ॥ ೪೦ ॥

ಸಮುದ್ಭವೇ ಸಮುತ್ಪನ್ನಾ ಸಾ ಲಕ್ಷ್ಮೀರಿವ ಸಾಗರಾತ್ ।
ವಸಂತಸಮಯೇ ದೇವೀ ನವಮ್ಯಾಮೃಕ್ಷಯೋಗತಃ ॥ ೪೧ ॥

ಅರ್ಧರಾತ್ರೇ ಸಮುತ್ಪನ್ನಾ ಗಂಗೇವ ಶಶಿಮಂಡಲಾತ್ ।
ತತಸ್ತಸ್ಯಾಂ ತು ಜಾತಾಯಾಂ ಪ್ರಸನ್ನಾ ಅಭವನ್ದಿಶಃ ॥ ೪೨ ॥

ಅನುಕೂಲೋ ಬವೌ ವಾಯುರ್ಗಂಭೀರೋ ಗಂಧವಾಂಶುಭಃ ।
ಬಭೂವ ಪುಷ್ಪವೃಷ್ಟಿಶ್ಚ ತೋಯವೃಷ್ಟಿಸ್ತಥಾಽಪರಾ ॥ ೪೩ ॥

ಎದುರಿಸುವಂತಹ ಮತ್ತು ತುಂಬಾ ವೀರ್ಯವಂತರೂ, ಬಲಶಾಲಿಗಳೂ, ಸಕಲಗುಣ ಶಾಲಿಗಳೂ ಆದ ನೂರುಜನ ಮಕ್ಕಳನ್ನು ಪೆತ್ತಳು.

೪೦. ಅನಂತರ ಜಗದ್ರೂಪಳೂ, ಯೋಗರೂಪಳೂ ಆದ ಕಾಳಿಕಾದೇವಿಯು ಹಿಂದೆಯೇ ಸತಿದೇವಿಯ ರೂಪವನ್ನು ಬಿಟ್ಟು ತಿರುಗಿ ಜನಿಸುವುದಕ್ಕಾಗಿ ಮೇನಕಾ ದೇವಿಯ ಜಠರದಲ್ಲಿ ಸೇರಿ ಜನ್ಮವನ್ನು ಪಡೆದಳು.

೪೧. ಮುಂದೆ ಮೇನಕೆಯ ಗರ್ಭದಲ್ಲಿ ಕಾಲಕ್ಕನುಸಾರವಾಗಿ ಬೆಳೆಯುತ್ತಾ ಕ್ಷೀರಸಮುದ್ರದಲ್ಲಿ ಲಕ್ಷ್ಮಿಯು ಜನಿಸಿದಂತೆ ಜನಿಸಿದಳು.

೪೨. ವಸಂತಋತುವಿನ ನವಮಿಯಲ್ಲಿ ಒಳ್ಳೆಯ ನಕ್ಷತ್ರವು ಸೇರಿರಲು ಅರ್ಧ ರಾತ್ರಿಯಲ್ಲಿ ಕಾಳಿಕಾದೇವಿಯು ಚಂದ್ರಮಂಡಲದಿಂದ ಗಂಗೆಯು ಜನಿಸಿದಂತೆ ಮೇನ ಕೆಯ ಗರ್ಭದಿಂದ ಜನಿಸಿದಳು.

೪೩—೪೫. ಹೀಗೆ ಆ ದೇವಿಯು ಜನಿಸಿದೊಡನೆ ದಿಕ್ಕುಗಳೆಲ್ಲವೂ ನಿರ್ಮಲ ವಾದುವು, ಗಾಳಿಯು ಮಂದವಾಗಿಯೂ, ಸುವಾಸನೆಯುಳ್ಳದ್ದಾಗಿಯೂ ಮತ್ತು ಅನುಕೂಲವಾಗಿಯೂ ಬೀಸಿತು, ಆಕಾಶದಿಂದ ಪೂವಿನ ಸುರಿಮಳೆಯೂ, ಜಲ ವೃಷ್ಟಿಯೂ ಆಯಿತು, ಅಗ್ನಿಗಳು ಶಾಂತತೆಯಿಂದ ಪ್ರದಕ್ಷಿಣಾಕಾರವಾಗಿ ಜ್ವಲಿಸಿದವು,

ಜಜ್ವಲುಶ್ಚಾಗ್ನಯಃ ಶಾಂತಾ ಜಗಜ್ಜುಶ್ಚ ಘನಾಘನಂ ।
ತಸ್ಯಾಂ ತು ಜಾತಮಾತ್ರಾಯಾಂ ಸರ್ವಂ ಸ್ವಾಸ್ಥ್ಯಮಪದ್ಯತ ॥ ೪೪ ॥

ತಾಂ ತು ದೃಷ್ಟ್ವಾ ತಥಾ ಜಾತಾಂ ನೀಲೋತ್ಪಲದಲಾನುಗಾಂ ।
ಶ್ಯಾಮಾಂ ಸಾ ಮೇನಕಾ ದೇವೀ ಮುದಮಾಪಾತಿಹರ್ಷಿತಾ ॥ ೪೫ ॥

ದೇವಾಶ್ಚ ಹರ್ಷಮತುಲಂ ಪ್ರಾಪುಸ್ತತ್ರ ಮುಹುರ್ಮುಹುಃ ।
ತುಷ್ಟುವುಶ್ಚಾಂತರಿಕ್ಷಸ್ಥಾ ಗಂಧರ್ವಾಪ್ಸರಸಾಂ ಗಣಾಃ ॥ ೪೬ ॥

ತಾಂ ತು ನೀಲೋತ್ಪಲದಲಶ್ಯಾಮಾಂ ಹಿಮವತಃ ಸುತಾಂ ।
ಕಾಲೀತಿ ನಾಮ್ನಾ ಹಿಮವಾನಾಜುಹಾವ ಕೃತೇ ದಿನೇ ॥ ೪೭ ॥

ಬಾಂಧವೈಸ್ತು ಸಮಸ್ತೈಸ್ತನ್ನಾಮ್ನಾ ಸಾ ಪಾರ್ವತೀತಿ ಚ ।
ಕಾಲೀತಿ ಚ ತಥಾ ನಾಮ್ನಾ ಕೀರ್ತಿತಾ ಗಿರಿನಂದಿನೀ ॥ ೪೮ ॥

ಮೇಘಗಳು ಗಂಭೀರವಾಗಿ ಘರ್ಜಿಸಿದುವು. ಹೀಗೆ ಆ ದೇವಿಯು ಜನಿಸಿದೊಡನೆಯೇ ಜಗತ್ತೆಲ್ಲವೂ ಶಾಂತಿಯನ್ನು ಹೊಂದಿತು. ಕನ್ನೈದಿಲೆಯಂತೆ ನೀಲವಾದ ಕಾಂತಿಯುಳ್ಳವಳಾಗಿ ಜನಿಸಿದ ಆ ದೇವಿಯನ್ನು ನೋಡಿ ಮೇನಕೆಯು ತುಂಬಾ ಹರ್ಷಗೊಂಡಳು.

೪೬. ಹೀಗೆ ದೇವಿಯು ಜನಿಸಿದುದರಿಂದ ತುಂಬಾ ಹರ್ಷದಿಂದ ಅಂತರಿಕ್ಷದಲ್ಲಿದ್ದುಕೊಂಡು ದೇವತೆಗಳೂ, ಗಂಧರ್ವರೂ, ಅಪ್ಸರಸ್ತ್ರೀಯರೂ ಸಹ ಆ ದೇವಿಯನ್ನು ಸ್ತುತಿಸಿದರು.

೪೭. ಕನ್ನೈದಿಲೆಯಂತೆ ನೀಲವಾದ ರೂಪವುಳ್ಳ ತನ್ನ ಪುತ್ರಿಗೆ ಹಿಮವಂತನು ನಾಮಕರಣ ದಿನದಲ್ಲಿ ಕಾಲಿಯೆಂದು ಹೆಸರಿಟ್ಟನು.

೪೮. ಪರ್ವತಪುತ್ರಿಯಾದ ಅವಳನ್ನು ಪಾರ್ವತಿಯೆಂದೂ ಕಾಳಿಯೆಂದೂ ಎರಡು ಹೆಸರುಗಳಿಂದ ಅವರ ಬಂಧುಗಳು ಕರೆದರು.

ತತಃ ಸಾ ವವೃಧೇ ದೇವೀ ಗಿರಿರಾಜಗೃಹೇ ಶುಭಾ ।
ಗಂಗೇವ ವರ್ಷಾಸಮಯೇ ಶರದೀವಾಥ ಚಂದ್ರಿಕಾ ॥ ೪೯ ॥

ವಿಧಮಾನಾನುದಿವಸಂ ಚಾರ್ವಂಗೀ ಚಾರುತಾಂ ಮುಹುಃ ।
ದಧ್ರೇ ಸಾನುದಿನಂ ಕಾಲೀ ಚಂದ್ರಬಿಂಬಂ ಕಲಾಮಿವ ॥ ೫೦ ॥

ಸಾ ಬಾಲಭಾವಮಾಪನ್ನಾ ಕ್ರೀಡಂತೀ ಕಾಲಿಕಾ ಮುದಂ ।
ಸಖೀಭಿಃ ಪ್ರಾಪ ವಿಪುಲಾಂ ಕಾಲಿಂದೀವ ಸರಿದ್ವ್ರಜೈಃ ॥ ೫೧ ॥

ಷಡ್ಗುಣಾಸ್ತಾಂ ಸ್ವಯಂ ದೇವೀಂ ಪೂರ್ವಜನ್ಮವಶೀಕೃತಾಃ ।
ಸ್ವಯಮಾಯುರ್ದ್ವಿಜಶ್ರೇಷ್ಠಾಃ ಪ್ರಾವೃಷಂ ಕಾಲಿಕಾ ಯಥಾ ॥ ೫೨ ॥

ಅತಿಚಕ್ರಾಮ ಸ್ವಗುಣೈಃ ಸಾ ದೇವೀ ದೇವಕನ್ಯಕಾಃ ।
ರೂಪೈರಪ್ಸರಸಃ ಸರ್ವಾ ಗೀತೈರ್ಗಂಧರ್ವಕನ್ಯಕಾಃ ॥ ೫೩ ॥

---

೪೯. ಅನಂತರ ಮಂಗಳರೂಪಳಾದ ಆ ಪಾರ್ವತಿಯು ಹಿಮವಂತನ ಅರಮನೆಯಲ್ಲಿ ವರ್ಷಾಕಾಲದ ಗಂಗೆಯಂತೆಯೂ ಶರದೃತುವಿನ ಶುಕ್ಲಪಕ್ಷದ ಚಂದ್ರಕಲೆಯಂತೆಯೂ ದಿನದಿನವೂ ವೃದ್ಧಿಹೊಂದಿದಳು.

೫೦. ಹೀಗೆ ದಿನದಿನವೂ ಬೆಳೆಯುತ್ತಾ ಸುಂದರವಾದ ಶರೀರವುಳ್ಳ ಆ ಪಾರ್ವತಿಯು ಶುಕ್ಲಪಕ್ಷದ ಚಂದ್ರಮಂಡಲವು ಕಲೆಯನ್ನು ಧರಿಸುವಂತೆ ದಿನದಿನದಲ್ಲೂ ಹೆಚ್ಚಾಗಿ ಸೌಂದರ್ಯವನ್ನು ಧರಿಸಿ ಬೆಳೆಯುತ್ತಿದ್ದಳು.

೫೧. ಕಾಳೀಸ್ವರೂಪಳಾದ ಆ ಪಾರ್ವತಿಯು ಬಾಲ್ಯಭಾವವನ್ನು ಹೊಂದಿ ಗೆಳತಿಯರೊಡನೆ ಆಟವಾಡುತ್ತಾ ಅನೇಕ ನದಿಗಳೊಡನೆ ಸೇರಿದ ಕಾಳಿಂದೀನದಿಯಂತೆ ತುಂಬಾ ಸಂತೋಷವುಳ್ಳವಳಾದಳು.

೫೨. ಹಿಂದಿನ ಜನ್ಮದಲ್ಲಿ ವಶೀಕರಿಸಲ್ಪಟ್ಟ ಸ್ತ್ರೀಯರಿಗೆ ಬೇಕಾದ ಆರು ಗುಣಗಳೂ ಸಹ ವರ್ಷಾಕಾಲವಲ್ಲಿ ಮೇಘಗಳು ಬಂದುಸೇರುವಂತೆ ತಾನಾಗಿಯೇ ಬಂದು ಸೇರಿದುವು.

೫೩. ಆ ಪಾರ್ವತೀದೇವಿಯು ತನ್ನ ಗುಣಗಳಲ್ಲಿ ದೇವಕನ್ಯೆಯರನ್ನೂ, ರೂಪದಲ್ಲಿ ಅಪ್ಸರಸ್ತ್ರೀಯರನ್ನೂ, ಗಾನದಲ್ಲಿ ಗಂಧರ್ವಕನ್ಯೆಯರನ್ನೂ ಮೀರಿಸಿದಳು.

ಸಾ ಬಾಲ್ಯ ಏವ ಸತತಂ ಬಂಧುವರ್ಗಪ್ರಿಯಾ ಶುಭಾ ।
ಗುಣೈಃ ಸ್ವಬಂಧೂನ್ಪಿತರಂ ಮಾತರಂ ಚಾಪ್ಯತೋಷಯತ್ ॥ ೫೪ ॥

ಮಾತುಃ ಸ್ತುತಿಕರೀ ನಿತ್ಯಂ ಪಿತೃಪೂಜನತತ್ಪರಾ ।
ಸರ್ವದಾ ಭ್ರಾತೃಸಹಿತಾ ಜಗನ್ಮಾತಾsಭವತ್ತದಾ ॥ ೫೫ ॥

ಸರ್ವದಾ ಸಾ ಜಗನ್ಮಾತಾ ಕನ್ಯಾ ಸಾ ಸಮುಪಸ್ಥಿತಾ ।
ಪಿತುಃ ಸಮೀಪೇ ವಸತಿ ಕಾಲಿಂದೀವ ವಿಭಾವಸೋಃ ॥ ೫೬ ॥

ಅಥೈಕದಾ ತಾಂ ನಿಕಟೇ ನಿಧಾಯ ಹಿಮವದ್ಗಿರಿಃ ।
ತನಯೈಃ ಸಹ ಸಂಗಮ್ಯ ಸ್ಥಿತಃ ಪರಮಕೌತುಕಾತ್ ॥ ೫೭ ॥

ಅಥಾಗತಸ್ತತ್ರ ಮುನಿರ್ನಾರದೋ ದೇವಲೋಕತಃ ।
ಹಿಮವಂತಂ ಸುಖಾಸೀನಂ ಸುತೈಃ ಸಾರ್ಧಂ ಪದರ್ಶ ಸಃ ॥ ೫೮ ॥

---

೫೪. ಬಂಧುಗಳಿಗೆ ತುಂಬಾ ಪ್ರೀತಿಪಾತ್ರಳಾದ ಆ ಪಾರ್ವತೀದೇವಿಯು ಬಾಲ್ಯದಲ್ಲಿಯೇ ತನ್ನ ಗುಣಗಳಿಂದ ಬಂಧುಗಳನ್ನೂ, ತಂದೆಯನ್ನೂ, ತಾಯಿಯನ್ನೂ ಸಂತೋಷಗೊಳಿಸಿದಳು.

೫೫. ಜಗನ್ಮಾತೆಯಾದ ಆ ಪಾರ್ವತಿಯು ನಿತ್ಯವೂ ತಾಯಿಯನ್ನು ಸ್ತುತಿಸುತ್ತಲೂ, ತಂದೆಯನ್ನು ಪೂಜಿಸುತ್ತಲೂ, ಅಣ್ಣನಾದ ಮೈನಾಕನೊಡನೆ ವಿಹರಿಸುತ್ತಲೂ ಇರುತ್ತಿದ್ದಳು.

೫೬. ಕನ್ಯಕಾವಸ್ಥೆಯನ್ನು ಹೊಂದಿದ ಆ ಪಾರ್ವತಿಯು, ಕಾಳಿಂದಿಯು ತನ್ನ ತಂದೆಯಾದ ಸೂರ್ಯನೊಡನಿರುವಂತೆ ಹಿಮವಂತನ ಬಳಿಯಲ್ಲಿಯೇ ಇರುತ್ತಿದ್ದಳು.

೫೭—೫೯. ಆಮೇಲೆ ಒಂದುದಿನ ಹಿಮವಂತನು ಆ ಪಾರ್ವತಿಯನ್ನು ತನ್ನ ಸಮೀಪದಲ್ಲಿ ಕುಳ್ಳಿರಿಸಿಕೊಂಡು, ತನ್ನ ಮಕ್ಕಳೊಡನೆ ವಿಹರಿಸುತ್ತಾ ತುಂಬಾ ಸಂತೋಷದಿಂದಿರುವಾಗ ನಾರದಮುನಿಯು ದೇವಲೋಕದಿಂದ ಬಂದು ಅಲ್ಲಿ ಮಕ್ಕಳೊಡನೆ ಸುಖವಾಗಿ ವಿಹರಿಸುತ್ತಲಿರುವ ಹಿಮವಂತನನ್ನೂ ಅವನ ಬಳಿಯಲ್ಲಿ ಸೂರ್ಯನ ಬಳಿ

ಅಪಶ್ಯನ್ನಿಕಟೇ ಕಾಲೀಂ ಕಾಲಿಕಾಮಿವ ಸೂರ್ಯತಃ ।
ಜ್ಯೋತ್ಸ್ನಾಮಿವ ಸುಧಾಂಶೋಸ್ತು ಸಮ್ಯಗ್ವ್ಯಾಪ್ತಾಂ ಶರನ್ನಿಶಿ ॥ ೫೯ ॥

ಪೂಜಿತಸ್ತೇನ ಗಿರಿಣಾ ಕೃತಾಸನಪರಿಗ್ರಹಃ ।
ನಾರದಃ ಪ್ರಭವಂ ಶೈಲಂ ವೃತ್ತಾಂತಂ ಪರ್ಯಪೃಚ್ಛತ ॥ ೬೦ ॥

ತತೋ ವಿದಿತವೃತ್ತಾಂತೋ ನಾರದೋ ಮೇನಕಾಂ ಪ್ರತಿ ।
ಉವಾಚ ಹರ್ಷಯನ್ವಾಕ್ಯಂ ಮುನಿರ್ವಾಕ್ಯವಿಶಾರದಃ ॥ ೬೧ ॥

ಏಷಾ ತೇ ತನಯಾ ರುಚ್ಯಾ ಶುದ್ಧಾಂಶೋರಿವ ವರ್ಧಿತಾ ।
ಆದ್ಯಾ ಕಲಾ ಶೈಲರಾಜ ಸರ್ವಲಕ್ಷಣಶಾಲಿನೀ ॥ ೬೨ ॥

ಶಂಭೋರ್ಭವಿತ್ರೀ ದಯಿತಾ ಸಾನುಕೂಲಾ ಸದಾ ಪರೇಃ ।
ತಸ್ಯ ಚಿತ್ತಂ ವಶೇ ಚೈಷಾ ಕರಿಷ್ಯತಿ ತಪಸ್ವಿನೀ ॥ ೬೩ ॥

ಯಲ್ಲಿರುವ ಕಾಳಿಂದಿಯಂತೆಯೂ, ಶರದೃತುವಿನ ಚಂದ್ರನಲ್ಲಿರುವ ಚಂದ್ರಕಲೆಯಂತೆಯೂ ಇರುವ ಕಾಳಿಕಾ ಅವತಾರಳಾದ ಪಾರ್ವತೀದೇವಿಯನ್ನು ನೋಡಿದನು.

೬೦. ಅನಂತರ ನಾರದಮುನಿಯು ಹಿಮವಂತನಿಂದ ಪೂಜಿಸಲ್ಪಟ್ಟು ಆಸನದಲ್ಲಿ ಕುಳಿತು ಅವನನ್ನು ಕುರಿತು ಮೊದಲು ಹೆಚ್ಚಿನ ಸಮಾಚಾರವೇನೆಂದು ಕೇಳಿದನು.

೬೧. ಆಮೇಲೆ ಹಿಮವಂತನಿಂದ ಮೇನಕೆಯು ತಪಸ್ಸುಮಾಡಿದುದೇ ಮೊದಲಾದ ವಿಚಾರವನ್ನು ತಿಳಿದು ಅವನನ್ನು ಸಂತೋಷಗೊಳಿಸುತ್ತಾ ವಾಗ್ಮಿಯಾದ ಆ ಮುನಿಯು ಹೀಗೆ ಹೇಳಿದನು.

೬೨. ಎಲೈ ಪರ್ವತರಾಜನೆ! ಸಕಲ ಲಕ್ಷಣಗಳಿಂದ ಶೋಭಿಸುತ್ತಲಿರುವ ಈ ನಿನ್ನ ಮಗಳಾದ ಪಾರ್ವತಿಯು ಚಂದ್ರನ ಮೊದಲನೆಯ ಕಲೆಯಂತೆ ಕಾಂತಿಶಾಲಿನಿಯಾಗಿ ಬೆಳೆಯುತ್ತಿರುವಳು.

೬೩. ಈ ಪಾರ್ವತಿಯು ಮುಂದೆ ಶಂಕರನ ಪ್ರಿಯೆಯು ಆಗುವಳು. ಪರಿಯಲೋಕೋದ್ಧಾರಕಾರ್ಯಕ್ಕೆ ಅನುಕೂಲಳಾಗಿರುವಳು. ಶಂಕರನ ಮನಸ್ಸನ್ನು ತಪಸ್ವಿನಿಯಾದ ಇವಳು ತನ್ನ ಅಧೀನಮಾಡಿಕೊಳ್ಳುವಳು.

ಸ ಚಾಪ್ಯೇನಾಮೃತೇ ಜಾಯಾಂ ನಾನ್ಯಾಮುದ್ವಾಹಯಿಷ್ಯತಿ ।
ನಿತಯೋರ್ಯಾದೃಶಃ ಪ್ರೇಮಾ ಕಯೋಶ್ಚಿನ್ನೈವ ತಾದೃಶಃ ॥ ೬೪ ॥

ಭೂತೋ ವಾ ಭವಿತಾ ವಾಪಿ ನಾಧುನಾ ಚ ಪ್ರವರ್ತತೇ ।
ಅನಯಾ ಸುರಕಾರ್ಯಾಣಿ ಕರ್ತವ್ಯಾನಿ ಬಹೂನಿ ಚ ॥ ೬೫ ॥

ಅನಯೈವ ಗಿರಿಶ್ರೇಷ್ಠ ಅರ್ಧನಾರೀಶ್ವರೋ ಹರಃ ।
ಭವಿಷ್ಯತಿ ಚ ಸೌಹಾರ್ದಾಜ್ಜ್ಯೋತ್ಸ್ನಯೈವಾಮೃತಾತ್ಮನಃ ॥ ೬೬ ॥

ಶರೀರಾರ್ಧಂ ಪರಸ್ಯೈಷಾ ಕರಿಷ್ಯತಿ ನಿಜಾಸ್ಪದೇ ।
ಸ್ವರ್ಣಗೌರೀ ಸುವರ್ಣಾಭಾ ತಪಸಾ ತೋಷಿತೇ ಪರೇ ॥ ೬೭ ॥

ವಿದ್ಯುದ್ಗೌರೀ ತ್ವಿಯಂ ಕಾಲೀ ತವ ಪುತ್ರೀ ಭವಿಷ್ಯತಿ ।
ಗೌರೀತಿ ನಾಮ್ನಾ ಪಶ್ಚಾತ್ತು ಖ್ಯಾತಿಮೇಷಾ ಗಮಿಷ್ಯತಿ ॥ ೬೮ ॥

---

೬೪. ಆ ಶಂಕರನೂ ಸಹ ಇವಳನ್ನು ಹೊರತು ಇನ್ನಾರನ್ನೂ ಮದುವೆಯಾ ಗುವುದಿಲ್ಲ. ಈ ಶಂಕರಪಾರ್ವತಿಯರಿಗೆ ಇರುವಂತಹ ಪ್ರೇಮವು ಇನ್ನಾವ ದಂಪತಿ ಗಳಿಗೂ ಇರುವುದಿಲ್ಲ, ಹಿಂದೆ ಇಂತಹ ಪ್ರೇಮವು ಯಾವ ದಂಪತಿಗಳಿಗೂ ಉಂಟಾ ಗಿಲ್ಲವು, ಮುಂದೆಯೂ ಆಗಲಾರದು. ಪ್ರಕೃತದಲ್ಲಿ ಎಲ್ಲಿಯೂ ಇಂತಹ ಪ್ರೇಮವು ಇಲ್ಲವು.

೬೫-೬೬. ಈ ಪಾರ್ವತಿಯಿಂದ ಅನೇಕ ದೇವಕಾರ್ಯಗಳು ಸಾಧಿಸಬೇಕಾಗಿ ರುವುವು. ಎಲೈ ಪುರುಷೋತ್ತಮನೆ! ಇವಳಿಂದಲೇನೆ ಶಂಕರನು ಮುಂದೆ ಅರ್ಧ ನಾರೀಶ್ವರನು ಎಂದು ಪ್ರಸಿದ್ಧನಾಗುವನು. ಚಂದ್ರನಿಗೆ ಜ್ಯೋತ್ಸ್ನೆಯು ಇರುವಂತೆ ಇವಳು ಅನುರಾಗದಿಂದ ಶಂಕರನ ಅರ್ಧಶರೀರವನ್ನು ಸ್ವೀಕರಿಸುವಳು.

೬೭-೬೮. ಮುಂದೆ ಇವಳು ತಪಸ್ಸಿನಿಂದ ಶಂಕರನನ್ನು ಸಂತೋಷಗೊಳಿಸಿ ಚಿನ್ನದಂತೆ ಹಳದಿಯವರ್ಣವುಳ್ಳವಳೂ, ವಿದ್ಯುತ್ತಿನಂತೆ ಹೊಳೆಯುವ ವರ್ಣವುಳ್ಳ ವಳೂ ಆಗುವಳು. ಆದಕಾರಣ ಮುಂದೆ ಈ ನಿನ್ನ ಮಗಳಿಗೆ "ಗೌರಿ" ಯೆಂಬ ಹೆಸರು ಪ್ರಸಿದ್ಧಿಯಾಗುವುದು.

ನಾನ್ಯಸ್ಮೈ ತ್ವಮಿಮಾಂ ದಾತುಂ ಮನಃ ಕರ್ತುಮಿಹಾರ್ಹಸಿ ।
ಇದಂ ಚೋತ್ಸಾಂಶು ದೇವಾನಾಂ ನ ಪ್ರಕಾಶ್ಯಂ ಕರಿಷ್ಯಸಿ ॥ ೬೯ ॥

॥ ಮಾರ್ಕಂಡೇಯ ಉವಾಚ ॥

ಇತಿ ತಸ್ಯ ವಚಃ ಶ್ರುತ್ವಾ ದೇವರ್ಷೇರ್ನಾರದಸ್ಯ ಚ ।
ಉವಾಚ ಹಿಮವಾನ್ವಾಕ್ಯಂ ಮುನಿಂ ಪ್ರತಿ ವಿಶಾರದಃ ॥ ೭೦ ॥

ಶ್ರೂಯತೇ ತ್ಯಕ್ತಸಂಗಃ ಸ ಮಹಾದೇವೋ ಯತಾತ್ಮವಾನ್ ।
ತಪಶ್ಚೋತ್ಸಾಂಶು ತಪತಿ ದೇವಾನಾಮಪ್ಯಗೋಚರಃ ॥ ೭೧ ॥

ಸ ಕಥಂ ಧ್ಯಾನಮಾರ್ಗಸ್ಥಃ ಪರಬ್ರಹ್ಮಾರ್ಪಿತಂ ಮನಃ ।
ಭ್ರಂಶಯಿಷ್ಯತಿ ದೇವರ್ಷೇ ತತ್ರ ಮೇ ಸಂಶಯೋ ಮಹಾನ್ ॥ ೭೨ ॥

---

೬೯. ಈ ಪಾರ್ವತಿಯನ್ನು ಶಂಕರನಿಗೆ ಹೊರತು ಇನ್ಯಾರಿಗೂ ಮದುವೆಮಾಡಿ ಕೊಡಕೂಡದು. ಈ ವಿಷಯವು ತುಂಬಾ ರಹಸ್ಯವಾದದು. ಇವನ್ನು ಇನ್ನಾರಿಗೂ ಹೇಳಕೂಡದು.

೭೦. ಮಾರ್ಕಂಡೇಯನು ಹೇಳಿದನು :—ದೇವಋಷಿಯಾದ ನಾರದನ ಈ ರೀತಿಯಾದ ಮಾತುಗಳನ್ನು ಕೇಳಿ ವಾಗ್ಮಿಯಾದ ಹಿಮವಂತನು ಆ ನಾರದಮುನಿಯನ್ನು ಕುರಿತು ಈರೀತಿ ಹೇಳಿದನು.

೭೧. ಓ ನಾರದಮುನಿಯೆ ! ಆ ಮಹಾದೇವನು ಸಂಸಾರದಲ್ಲಿ ಆಸಕ್ತಿಯಿಲ್ಲದವನಾಗಿ ಇಂದ್ರಿಯಗಳನ್ನು ಜಯಿಸಿ ದೇವತೆಗಳಿಗೂ ಅಗೋಚರನಾಗಿ ಏಕಾಂತದಲ್ಲಿ ತಪಸ್ಸನ್ನು ಆಚರಿಸುತ್ತಲಿರುವನೆಂದು ಕೇಳಿರುವೆನು.

೭೨. ಹೀಗೆ ಧ್ಯಾನಮಾರ್ಗದಲ್ಲಿ ನಿರತನಾದ ಶಂಕರನು ಪರಬ್ರಹ್ಮಧ್ಯಾನದಲ್ಲಿ ಆಸಕ್ತವಾದ ತನ್ನ ಮನಸ್ಸನ್ನು ಹೇಗೆ ತಾನೇ ಕೆಡಿಸಿಕೊಳ್ಳುವನು ? ಎಂದರೆ ಸಂಸಾರ ಮಾರ್ಗಕ್ಕೆ ಬರುವುದೆಂತು ? ಓ ದೇವರ್ಷಿಯೇ ! ಈ ವಿಷಯದಲ್ಲಿ ನನಗೆ ತುಂಬಾ ಸಂಶಯವಿರುವುದು.

ಅಕ್ಷರಂ ಪರಮಂ ಬ್ರಹ್ಮ ಪ್ರದೀಪಕಲಿಕೋಪಮಂ ।
ಸೋಽನ್ತಃ ಪಶ್ಯತಿ ಸರ್ವತ್ರ ನ ತು ಬಾಹ್ಯಂ ನಿರೀಕ್ಷತೇ ॥ ೭೩ ॥

ಇತಿ ಸ್ಮ ಶ್ರೂಯತೇ ನಿತ್ಯಂ ಕಿನ್ನರಾಣಾಂ ಮುಖಾದ್ದ್ವಿಜ ।
ಸ ಕಥಂ ತಾದೃಶಂ ಸ್ವಾಂತಂ ಶಕ್ತೋ ಭ್ರಂಶಯಿತುಂ ಹರಃ ॥ ೭೪ ॥

ವಿಶೇಷತಃ ಶ್ರೂಯತೇ ಸ್ಮ ದಾಕ್ಷಾಯಣ್ಯಾ ಸಮಂ ಹರಃ ।
ಸಮಯಜ್ಞಾತವಾನ್ಪೂರ್ವಂ ತನ್ಮೇ ನಿಗದತಃ ಶೃಣು ॥ ೭೫ ॥

ತ್ವಾಮೃತೇಽನ್ಯಾಂ ನ ವನಿತಾಂ ದಾಕ್ಷಾಯಣಿ ಸತಿ ಪ್ರಿಯೇ ।
ಭಾರ್ಯಾರ್ಥೇ ಸಂಗ್ರಹೀಷ್ಯಾಮಿ ಸತ್ಯಮೇತದ್ಬ್ರವೀಮಿ ತೇ ॥ ೭೬ ॥

ಇತಿ ಸತ್ಯಾ ಸಮಂ ತೇನ ಪುರೈವ ಸಮಯಃ ಕೃತಃ ।
ತಸ್ಯಾಂ ಮೃತಯಾಂ ಸ ಕಥಂ ಸ್ತ್ರಿಯಮನ್ಯಾಂ ಗ್ರಹೀಷ್ಯತಿ ॥ ೭೭ ॥

---

೭೩. ನಾಶವಿಲ್ಲದುದೂ, ದೀಪಜ್ವಾಲೆಯಂತೆ ಪ್ರಕಾಶರೂಪವಾದುದೂ ಆದ ಪರಬ್ರಹ್ಮವಸ್ತುವನ್ನು ತನ್ನ ಹೃದಯದ ಒಳಗೆ ಆ ಶಂಕರನು ನೋಡುತ್ತಲಿರುವನು. ಅವನಿಗೆ ಹೊರಗಿನ ಪ್ರಪಂಚದಲ್ಲಿ ದೃಷ್ಟಿಯೇ ಇರುವುದಿಲ್ಲವು.

೭೪. ಈರೀತಿಯಾಗಿ ಕಿನ್ನರರ ಮುಖದಿಂದ ನಾನು ಕೇಳಿರುವೆನು ಎಂದ ಮೇಲೆ ಆ ಹರನು ಅಂತಹ ತನ್ನ ಮನಸ್ಸನ್ನು ಹೇಗೆ ಕೆಡಿಸಿಕೊಳ್ಳುವನು ?

೭೫. ಅಲ್ಲದೆ ಆ ಹರನು ದಕ್ಷನ ಪುತ್ರಿಯಾದ ಸತೀದೇವಿಯೊಡನೆ ಹಿಂದೊಂದು ಪ್ರತಿಜ್ಞೆಯನ್ನು ಮಾಡಿರುವನೆಂದು ವಿಶೇಷ ಸಮಾಚಾರವನ್ನು ಕೇಳಿರುವೆನು ಅದನ್ನು ಹೇಳುವೆನು ಕೇಳು.

೭೬. ಅದೇನೆಂದರೆ, ದಕ್ಷಪುತ್ರಿಯೂ, ಪ್ರಿಯಳೂ ಆದ ಎಲೌ ಸತೀದೇವಿಯೆ ! ನಿನ್ನಹೊರತು ಇನ್ನಾವ ಸ್ತ್ರೀಯನ್ನೂ ನಾನು ಮದುವೆಯಾಗುವುದಿಲ್ಲವು, ಇದು ನಿಜವಾದ ಮಾತು.

೭೭. ಈರೀತಿಯಾಗಿ ಸತೀದೇವಿಯೊಡನೆ ಹಿಂದೆಯೇ ಆ ಶಂಕರನು ಪ್ರತಿಜ್ಞೆಯನ್ನು ಮಾಡಿರುವನು ಎಂದಮೇಲೆ ಅವನು ಈ ಸತಿಯು ಮೃತಳಾದಮೇಲೆ ಈಗ ಬೇರೆ ಸ್ತ್ರೀಯನ್ನು ಹೇಗೆತಾನೇ ಮದುವೆಯಾಗುವನು ?

॥ ನಾರದ ಉವಾಚ ॥

ನಾತ್ರ ಕಾರ್ಯಾ ತ್ವಯಾ ಚಿಂತಾ ಗಿರಿರಾಜ ಭವತ್ಸುತಾ ।
ಏಷಾ ಸತೀ ಸಮುತ್ಪನ್ನಾ ಹರಾಯೈವ ನ ಸಂಶಯಃ ॥ ೭೮ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಸ ತು ದೇವರ್ಷಿರ್ನಾರದಸ್ತು ಯಥಾ ಸತೀ ।
ಮೇನಕಾಯಾಂ ಸಮುತ್ಪನ್ನಾ ಸರ್ವಂ ತತ್ಪ್ರೋಕ್ತವಾನ್ಗಿರೌ ॥ ೭೯ ॥

ತತ್ಸರ್ವಂ ಪೂರ್ವವೃತ್ತಾಂತಂ ನಾರದಸ್ಯ ಮುಖಾದ್ಗಿರಿಃ ।
ಶ್ರುತ್ವಾ ಸಪುತ್ರದಾರಃ ಸ ತದಾ ನಿಃಸಂಶಯೋಽಭವತ್ ॥ ೮೦ ॥

ತತಃ ಕಾಲೀ ಕಥಾಂ ಶ್ರುತ್ವಾ ನಾರದಸ್ಯ ಮುಖಾತ್ತದಾ ।
ಲಜ್ಜಯಾಧೋಮುಖೀ ಭೂತ್ವಾ ಸ್ಮಿತವಿಸ್ತಾರಿತಾನನಾ ॥ ೮೧ ॥

---

೭೮. ನಾರದಮುನಿಯು ಹೇಳಿದನು:—ಎಲೈ ಪರ್ವತರಾಜನೇ! ನೀನು ಚಿಂತಿಸಬೇಡ. ಆ ಸತೀದೇವಿಯೇ ತಿರುಗಿ ಶಂಕರನನ್ನು ಮದುವೆಯಾಗಲು ಈ ನಿನ್ನ ಮಗಳಾಗಿ ಜನಿಸಿರುವಳು ಇದರಲ್ಲಿ ಸಂಶಯವಿಲ್ಲವು.

೭೯. ಮಾರ್ಕಂಡೇಯನು ಹೇಳಿದನು:—ಹೀಗೆ ಹೇಳಿದ ದೇವಋಷಿಯಾದ ನಾರದಮುನಿಯು, ಆ ಸತೀದೇವಿಯೇ ಮೇನಕೆಯಲ್ಲಿ ಪಾರ್ವತಿಯರೂಪದಿಂದ ಹೇಗೆ ಜನಿಸಿದಳೆಂಬುದನ್ನೆಲ್ಲಾ ಆ ಹಿಮವಂತನಿಗೆ ಹೇಳಿದನು.

೮೦. ಹೀಗೆ ನಾರದನಿಂದ ಹಿಂದೆ ನಡೆದ ಸಮಾಚಾರವನ್ನೆಲ್ಲಾ ಹಿಮವಂತನು ಪತ್ನೀಪುತ್ರರೊಡನೆ ಕೇಳಿ ಆಗ ಯಾವ ಸಂಶಯವೂ ಇಲ್ಲದವನಾದನು

೮೧. ಆಗ ಕಾಳಿಯು ನಾರದಮುನಿಯಿಂದ ತನ್ನ ಹಿಂದಿನ ಸಮಾಚಾರವನ್ನು ತಿಳಿದು ಮಂದಹಾಸದಿಂದ ಅರಳಿದ ಮುಖವುಳ್ಳವಳಾಗಿ ಲಜ್ಜೆಯಿಂದ ಮುಖವನ್ನು ತಗ್ಗಿಸಿದಳು.

ಕರೇಣ ತಾಂ ತು ಸಂಗೃಹ್ಯ ಪ್ರೋನ್ನಮ್ಯ ಮುಖಂ ಗಿರಿಃ ।
ಮೂರ್ಧ್ನಿ ಸನ್ಯುಪಾಘ್ರಾಯ ಸ್ವಾಸನೇ ಸಂನ್ಯವೇಶಯತ್ ॥ ೮೨ ॥

ತತಸ್ತಾಂ ಪುನರೇವಾಹ ನಾರದಃ ಶೈಲಪುತ್ರಿಕಾಂ ।
ಹರ್ಷಯನ್ಗಿರಿರಾಜಂ ತು ಮೇನಕಾಂ ತನಯೈಃ ಸಹ ॥ ೮೩ ॥

ಸಿಂಹಾಸನೇನ ಕಿಂ ತ್ವಸ್ಯಾಃ ಶೈಲರಾಜ ಭವೇತ್ತವ ।
ಶಂಭೋರೂರುಃ ಸದೈವಾಸ್ಯಾ ಆಸನಂ ತು ಭವಿಷ್ಯತಿ ॥ ೮೪ ॥

ಹರೋರುಮಾಸನಂ ಪ್ರಾಪ್ಯ ತನಯಾ ತವ ಸಂತತಂ ।
ನಾನ್ಯತ್ರ ಕುತ್ರಚಿತ್ತುಷ್ಟಿಮಾಸನೇ ಪ್ರಾಪ್ಯತೇ ಗಿರೇ ॥ ೮೫ ॥

ಇತಿ ವಚನಮುದಾರಂ ನಾರದಃ ಶೈಲರಾಜಂ ।
ತ್ರಿದಿವಮುಗಮದುಕ್ತ್ವಾ ತತ್ಕ್ಷಣಾದ್ದೇವಯಾನೈಃ ॥

---

೮೨. ಬಳಿಕ ಹಿಮವಂತನು ಆ ಪಾರ್ವತಿಯನ್ನು ಕೈಯಿಂದ ಹಿಡಿದುಕೊಂಡು ಅವಳ ಮುಖವನ್ನು ಮೇಲಕ್ಕೆತ್ತಿ ಪ್ರೀತಿಯಿಂದ ಆಘ್ರಾಣಿಸಿ ತನ್ನ ಆಸನದಲ್ಲಿ ಕೂರಿಸಿ ಕೊಂಡನು.

೮೩. ನಾರದಮುನಿಯು ಹಿಮವಂತನನ್ನೂ ಮೇನಕೆಯನ್ನೂ ಅವರ ಮಿಕ್ಕ ಮಕ್ಕಳನ್ನೂ ಸಹ ಸಂತೋಷಗೊಳಿಸುತ್ತಾ ತಿರುಗಿ ಪಾರ್ವತಿಯನ್ನು ಕುರಿತು ಹೀಗೆ ಹೇಳಿದನು.

೮೪. ಎಲೈ ಹಿಮವಂತನೇ! ನಿನ್ನ ಸಿಂಹಾಸನದಿಂದ ಈ ಪಾರ್ವತಿಗೆ ಆಗ ಬೇಕಾದುದೇನೂ ಇಲ್ಲವು. ಆ ಶಂಕರನ ತೊಡೆಯೇ ಇವಳಿಗೆ ಸದಾ ಆಸನವಾಗು ವುದು.

೮೫. ಎಲೈ ಹಿಮಾಲಯನೇ! ನಿನ್ನ ಮಗಳಾದ ಈ ಕಾಳಿಯು ಶಂಕರನ ತೊಡೆಯನ್ನು ಆಸನವನ್ನಾಗಿ ಪಡೆದು ಮಿಕ್ಕ ಯಾವ ಆಸನಗಳಲ್ಲೂ ಆಶೆಯಿಲ್ಲದವ ಳಾಗುವಳು.

೮೬. ಹೀಗೆ ನಾರದಮುನಿಯು ಸತ್ಯವೂ ಸಂತೋಷಕರವೂ ಆದ ಮಾತು ಗಳನ್ನು ಪರ್ವತರಾಜನಾದ ಹಿಮವಂತನಿಗೆ ಹೇಳಿ ವಿಮಾನದಿಂದ ಸ್ವರ್ಗಕ್ಕೆ

ಗಿರಿಪತಿರಪಿ ಚಿಂತಾಹರ್ಷಸಂಮೋಹಯುಕ್ತಃ ।
ಪ್ರವಿಶದಚಲಯಾಸೌ ಸ್ವಾಂತರಂ ಪದ್ಮಗರ್ಭಂ ॥ ೬೬ ॥

॥ ಇತಿ ಶ್ರೀ ಕಾಲಿಕಾಪುರಾಣೇ ದ್ವಿಚತ್ವಾರಿಂಶೋಽಧ್ಯಾಯಃ ॥

ಹೋದನು. ಪರ್ವತರಾಜನೂ ಸಹ ಚಿಂತೆ, ಹರ್ಷ, ಪ್ರೀತಿ ಇವುಗಳಿಂದ ಕೂಡಿದವನಾಗಿ ಮೇನಕೆಯೊಡನೆ ಗಿರಿಯ ಮಧ್ಯದಲ್ಲಿರುವ ಪದ್ಮಗರ್ಭವೆಂಬ ತನ್ನ ಅರಮನೆಗೆ ತೆರಳಿದನು.

ಇಲ್ಲಿಗೆ ನಲವತ್ತೆರಡನೆಯ ಅಧ್ಯಾಯವು ಮುಗಿದುದು.



॥ ಶ್ರೀಃ ॥

ಅಥ

ಶ್ರೀ ಕಾಲಿಕಾಪುರಾಣೇ ತ್ರಿಚತ್ವಾರಿಂಶತ್ತಮೋಽಧ್ಯಾಯಃ

॥ ಮಾರ್ಕಂಡೇಯ ಉವಾಚ ॥

ಏತಸ್ಮಿನ್ನಂತರೇ ಶಂಭುಃ ಕ್ಷಿಪ್ರಂ ತ್ಯಕ್ತ್ವಾ ತದಾ ಸರಃ ।
ಗಂಗಾವತಾರಮಗಮದ್ಧಿಮವತ್ಪ್ರಸ್ಥಮುತ್ತಮಂ ॥ ೧ ॥

ಯತ್ರ ಗಂಗಾ ನಿಪತಿತಾ ಪುರಾ ಬ್ರಹ್ಮ ಪುರಾತ್ಸೃತಾ ।
ಓಷಧೀಪ್ರಸ್ಥನಗರಸ್ಯಾದೂರೇ ಸಾನುರುತ್ತಮಃ ॥ ೨ ॥

ತತ್ರ ಭರ್ಗಃ ಸ್ವಮಾತ್ಮಾನಮಕ್ಷರಂ ಪರಮಾತ್ಪರಂ ।
ಚೇತೋಜ್ಞಾನಮಯಂ ನಿತ್ಯಂ ಜ್ಯೋತೀರೂಪಂ ನಿರಾಕುಲಂ ॥ ೩ ॥

॥ ನಲವತ್ತಮೂರನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು :—ಎಲೈ ಮುನಿಗಳೇ ! ಈ ಮಧ್ಯದಲ್ಲಿ ಶಿಪ್ರಸರೋವರದ ದಡದಲ್ಲಿ ಕುಳಿತು ಧ್ಯಾನಮಾಡುತ್ತಲಿದ್ದ ಶಂಕರನು ಆ ಸರೋವರವನ್ನು ಬಿಟ್ಟು ಹಿಮವತ್ಪರ್ವತದ ಗಂಗಾವತಾರವೆಂಬ ಶ್ರೇಷ್ಠವಾದ ತಪ್ಪಲಿಗೆ ಬಂದನು.

೨. ಆ ತಪ್ಪಲಲ್ಲಿಯೇ ಹಿಂದೆ ಬ್ರಹ್ಮಲೋಕದಿಂದ ಬಂದು ಗಂಗೆಯು ಬಿದ್ದು ಹರಿಯುತ್ತಿರುವಳು. ಅಲ್ಲದೆ ಆ ತಪ್ಪಲು ಹಿಮವಂತನ ರಾಜಧಾನಿಯಾದ " ಓಷಧಿಪ್ರಸ್ಥ " ವೆಂಬ ನಗರಕ್ಕೆ ಹತ್ತಿರದಲ್ಲಿಯೇ ಇರುವುದು.

೩-೪. ಆ ತಪ್ಪಲಲ್ಲಿ ಶಂಕರನು ನಾಶವಿಲ್ಲದುದೂ, ಸರ್ವೋತ್ಕೃಷ್ಟವಾದುದೂ, ಜ್ಞಾನಸ್ವರೂಪವೂ, ನಿತ್ಯವೂ, ಜ್ಯೋತಿಸ್ವರೂಪವೂ, ದುಃಖಸಂಬಂಧವಿಲ್ಲದುದೂ, ಜಗದ್ರೂಪವೂ, ದೀಪಜ್ವಾಲೆಯಂತೆ ಸ್ವತಃ ಪ್ರಕಾಶಿಸುವುದೂ, ತಾನು ಒಂದೇ ಸತ್ಯ

ಜಗನ್ಮಯಂ ಪ್ರದೀಪಾಭಂ ದ್ವೈತಹೀನಾವಿಶೇಷಕಂ ।
ವಿಕಾಗ್ರಂ ಚಿಂತಯಾಮಾಸ ಭಗವಾನ್ವೃಷಭಧ್ವಜಃ ॥ ೪ ॥

ಹರೇ ಧ್ಯಾನಪರೇ ತಸ್ಮಿನ್ಪ್ರಮಥಾ ಧ್ಯಾನತತ್ಪರಾಃ ।
ಅಭವನ್ಕೇಚಿದಪರೇ ನಂದಿಭೃಂಗ್ಯಾದಯೋ ಗಣಾಃ ॥ ೫ ॥

ದ್ವಾಃಸ್ಥಾ ಭೂತಾ ಮಹಾಭಾಗಾ ಯೇ ಪೂರ್ವದ್ವಾರಿ ಯೋಜಿತಾಃ ।
ತಾವಂತೋಽಪಿ ಗಣಾಸ್ತತ್ರ ನೈವ ಕಿಂಚನ ಕೂಚಿತಂ ॥ ೬ ॥

ತೇಷಾಂ ಸಂಶ್ರೂಯತೇ ಸರ್ವೇ ನಿಃಶಬ್ದಾಃ ಸಂಸ್ಥಿತಾಸ್ತತಃ ।
ಅನ್ಯೇ ತು ತತ್ರ ಕ್ರೀಡಂತಿ ಗಣಾ ದೂರಾಂತರಸ್ಥಿತಾಃ ॥ ೭ ॥

ಕುಸುಮೈಶ್ಚ ದಲೈರ್ಭಕ್ತೈರ್ಗಿರಿಪ್ರಸ್ರವಣೋದಕೈಃ ।
ರತ್ನಾನಿ ಚ ವಿಚಿನ್ವಂತೋ ಭೂಷಿತಾ ಗೈರಿಕೈಸ್ತಥಾ ॥ ೮ ॥

ವಾದ ವಸ್ತುವಾದುದರಿಂದ ಇತರ ಯಾವ ಭೇದ ಮತ್ತು ವಿಶೇಷವಿಲ್ಲದುದೂ ಆದ ಆತ್ಮಸ್ವರೂಪವನ್ನು ಸ್ಥಿರವಾದ ಮನಸ್ಸಿನಿಂದ ಧ್ಯಾನಿಸಿದನು.

೫. ಹೀಗೆ ಶಂಕರನು ಧ್ಯಾನಾಸಕ್ತನಾಗಲು, ನಂದಿ, ಭೃಂಗಿ ಮೊದಲಾದ ಕೆಲವು ಪ್ರಮಥಗಣಗಳು ತಾವೂ ಧ್ಯಾನಪರಗಳಾದುವು.

೬. ಕೆಲವು ಗಣಗಳು ಪೂರ್ವದ್ವಾರದಲ್ಲಿ ದ್ವಾರಪಾಲಕರಾದರು. ಶಂಕರನ ಧ್ಯಾನಕ್ಕೆ ವಿಘ್ನವಾದೀತೆಂದು ಆ ಗಣಗಳು ಸ್ವಲ್ಪವೂ ಶಬ್ದವನ್ನು ಮಾಡದೆ ಇದ್ದುವು.

೭. ಆಗ ಅವುಗಳ ಧ್ವನಿಯೇ ಕೇಳಿಸುತ್ತಲಿರಲಿಲ್ಲವು. ಎಲ್ಲವೂ ನಿಶ್ಶಬ್ದವಾಗಿದ್ದುವು. ಇನ್ನು ಕೆಲವು ಗಣಗಳು ಬಹಳ ದೂರದಲ್ಲಿದ್ದುಕೊಂಡು ಕ್ರೀಡಿಸುತ್ತಲಿದ್ದುವು.

೮. ಆ ಗಣಗಳು ಹೂವುಗಳಿಂದಲೂ, ಎಲೆಗಳಿಂದಲೂ, ಬೆಟ್ಟದಲ್ಲಿ ಸಿಕ್ಕುವ ಗೈರಿಕ ಧಾತು ಅಂದರೆ ಬಣ್ಣಬಣ್ಣವಾದ ವಸ್ತುಗಳಿಂದಲೂ ಅಲಂಕರಿಸಿಕೊಂಡು ಅಲ್ಲಿ ಸಿಕ್ಕುವ ಶ್ರೇಷ್ಠವಸ್ತುಗಳನ್ನೂ, ರತ್ನಗಳನ್ನೂ ಆರಿಸುತ್ತಾ ಬೆಟ್ಟದ ಚಿಲುಮೆಗಳಲ್ಲಿ (ಝರಿಗಳಲ್ಲಿ) ವಿಹರಿಸುತ್ತಿದ್ದರು.

ಸಗಣಂ ತು ತಥಾ ದೃಷ್ಟ್ವಾ ಗಿರಿರಾಜೋ ಗತಂ ಹರಂ ।
ಸ್ವಸ್ಥಾನಮೋಷಧಿಪ್ರಸ್ಥಂ ನಿಃಸೃತ್ಯ ಸಹಿತೋ ಗಣೈಃ ॥ ೯ ॥

ಪೂಜಾರ್ಥಮುಪತಸ್ಥೇ ಸ ಯಥಾಯೋಗ್ಯಂ ತಥಾऽರ್ಚಯತ್ ।
ಸ ಚಾಪಿ ಶಂಭುಸ್ತಸ್ಯಾರ್ಚಾಂ ಪರಯಾ ಶ್ರದ್ಧಯಾ ಯುತಃ ॥ ೧೦ ॥

ಪ್ರತಿಜಗ್ರಾಹ ಕೂಟಸ್ಥೇ ಗಂಗಾಶೀರ್ಷೇ ಯಥಾ ಪುರಾ ।
ಪೂಜಿತಸ್ತೇನ ಸಪ್ರೀತ್ಯಾ ಗಿರಿರಾಜಂ ವೃಷಧ್ವಜಃ ॥ ೧೧ ॥

ಉವಾಚ ಧ್ಯಾನಯೋಗಸ್ಥಃ ಸ್ಮಯನ್ನಿವ ಜಗತ್ಪತಿಃ ।

॥ ಈಶ್ವರ ಉವಾಚ ॥

ತವ ಪ್ರಸ್ಥೇ ತಪಸ್ತಪ್ತುಂ ರಹಸ್ಯಮುಪಯಾಗತಃ ॥ ೧೨ ॥

ನ ಯಥಾ ಕೋऽಪಿ ನಿಕಟಂ ಸಮಯಾತಿ ತಥಾ ಕುರು ।
ತ್ವಂ ಮಹಾತ್ಮಾ ಜಗದ್ಧಾಮ ಮುನೀನಾಂ ಚ ಸದಾಶ್ರಯಃ ॥ ೧೩ ॥

---

೯. ಹೀಗೆ ಹಿಮಾಲಯದಲ್ಲಿ ಶಂಕರನು ಧ್ಯಾನಿಸುತ್ತಾ ಗಣಗಳೊಡನೆ ಇರುವುದನ್ನು ನೋಡಿ ಹಿಮವಂತನು ತನ್ನ ಓಷಧಿಪ್ರಸ್ಥನಗರದಿಂದ ಪರಿವಾರದೊಡನೆ ಹೊರಟು ಅವನ ಬಳಿಗೆ ಬಂದು ಆ ಶಂಕರನನ್ನು ಯೋಗ್ಯವಾಗಿ ಅರ್ಚಿಸಿದನು.

೧೦. ಆ ಶಂಕರನೂ ಸಹ ಹಿಮವಂತನ ಪೂಜೆಯನ್ನು ತುಂಬಾ ಶ್ರದ್ಧೆಯಿಂದ ಹಿಂದೆ ಗಂಗಾಶೀರ್ಷವೆಂಬ ಶಿಖರದಲ್ಲಿ ಪೂಜೆಯನ್ನು ಸ್ವೀಕರಿಸಿದಂತೆ ಸ್ವೀಕರಿಸಿದನು.

೧೧. ಹೀಗೆ ಆ ಹಿಮವಂತನಿಂದ ಪೂಜಿತವಾಗಿ ಧ್ಯಾನಯೋಗದಲ್ಲಿ ನಿರತನೂ, ಜಗದೊಡೆಯನೂ ಆದ ಶಂಕರನು ತುಂಬಾ ಆಶ್ಚರ್ಯಗೊಂಡವನಂತೆ ಆ ಹಿಮವಂತನನ್ನು ಕುರಿತು ಹೀಗೆ ಹೇಳಿದನು.

೧೨. ಶಂಕರನು ಹೇಳಿದನು:-ಎಲೈ ಗಿರಿರಾಜನೇ! ರಹಸ್ಯವಾಗಿ ತಪಸ್ಸನ್ನು ಆಚರಿಸಲು ನಿನ್ನ ತಪ್ಪಲಿಗೆ ಬಂದಿರುವೆನು. ಆದಕಾರಣ ನನ್ನ ಬಳಿಗೆ ಯಾವನೊಬ್ಬನೂ ಬರದಂತೆ ಮಾಡುವವನಾಗು.

೧೩-೧೪. ನೀನು ಮಹಾತ್ಮನು, ಜಗತ್ತಿಗೆ ಆಧಾರಭೂತನು, ಮುನಿಗಳಿಗೆ ಒಳ್ಳೆಯ ಆಶ್ರಯವು ದೇವತೆಗಳಿಗೂ, ರಾಕ್ಷಸರಿಗೂ, ಯಕ್ಷ ಮತ್ತು ಕಿನ್ನರರಿಗೂ,

ದೇವಾನಾಂ ರಾಕ್ಷಸಾನಾಂ ಚ ಯಕ್ಷಾಣಾಂ ಕಿನ್ನರಸ್ಯ ಚ ।
ಸದಾವಾಸೋ ದ್ವಿಜಾತೀನಾಂ ಗಂಗಾಪೂತಶ್ಚ ನಿತ್ಯದಾ ॥ ೧೪ ॥

ತ್ವತ್ಪುರಸ್ಯಾಸ್ಯ ನಿಕಟೇ ಪ್ರಸ್ಥಂ ಗಂಗಾವತಾರಣಂ ।
ಆಶ್ರಿತೋಽಹಂ ಗಿರಿಶ್ರೇಷ್ಠ ತದ್ಯೋಗ್ಯಂ ಕುರು ಸಾಂಪ್ರತಂ ॥ ೧೫ ॥

ಇತ್ಯುಕ್ತ್ವಾ ಜಗತಾಂ ನಾಥಸ್ತೂಷ್ಣೀಮಾಸ ವೃಷಧ್ವಜಃ ।
ಗಿರಿರಾಜಸ್ತದಾ ಶಂಭುಂ ಪ್ರಣಮ್ಯೇದಮುಬ್ರವೀತ್ ॥ ೧೬ ॥

ಪೂತೋಽಸ್ಮಿ ಜಗತಾಂ ನಾಥ ತ್ವಯಾಽಹಂ ವರಮೇಶ್ವರ ।
ಆಗತೇನಾದ್ಯ ವಿಷಯಮಿತಃ ಕೃತ್ಯಂ ಕಮಸ್ತಿ ಮೇ ॥ ೧೭ ॥

ತಪಸಾ ಮುಹತಾ ತ್ವಂ ಹಿ ದೇವೈರ್ಯತ್ನಪರಸ್ಥಿತೈಃ ।
ನ ಪ್ರಾಪ್ಯಸೇ ಜಗನ್ನಾಥ ಸ ತ್ವಂ ಸ್ವಯಮುಪಸ್ಥಿತಃ ॥ ೧೮ ॥

ಬ್ರಾಹ್ಮಣರಿಗೂ ಸಹ ನೀನು ಆಶ್ರಯನು. ನಿನ್ನಲ್ಲಿ ಹರಿಯುತ್ತಿರುವ ಗಂಗೆಯಿಂದ ನೀನು ಸದಾ ಪವಿತ್ರನಾಗಿರುವೆ.

೧೫. ನಿನ್ನ ನಗರದ ಸಮೀಪದಲ್ಲಿರುವ ಗಂಗಾವತರಣವೆಂಬ ತಪ್ಪಲನ್ನು ತಪಸ್ಸಿಗಾಗಿ ಆಶ್ರಯಿಸಿರುವೆನು. ಎಲೈ ಗಿರಿಶ್ರೇಷ್ಠನೇ! ಈಗ ಯೋಗ್ಯವಾದು ದಾವುದೋ ಅದನ್ನು ಮಾಡುವವನಾಗು,

೧೬. ಹೀಗೆ ಹೇಳಿ ಜಗದೊಡೆಯನಾದ ಶಂಕರನು ಸುಮ್ಮನಾದನು. ಆಗ ಹಿಮವಂತನು ತುಂಬಾ ಪ್ರೀತಿಯಿಂದ ಆ ಶಂಕರನನ್ನು ಕುರಿತು ಹೀಗೆ ಹೇಳಿದನು.

೧೭. ಜಗದೊಡೆಯನಾದ ಓ ಪರಮೇಶ್ವರನೇ! ನೀನು ನನ್ನ ದೇಶಕ್ಕೆ ಬಂದುದರಿಂದ ನಾನು ಪವಿತ್ರನಾದೆನು. ನಾನು ಸಂಸಾರದಲ್ಲಿ ಮಾಡಬೇಕಾದ ಇದಕ್ಕಿಂತಲೂ ಮಿಗಿಲಾದಕೃತ್ಯವೇನಿರುವುದು ?

೧೮. ತುಂಬಾ ಯತ್ನಪೂರ್ವಕವಾಗಿ ತಪಸ್ಸನ್ನು ಮಾಡುವ ದೇವತೆಗಳಿಗೂ ನೀನು ದುರ್ಲಭನಾಗಿರುವೆ. ಓ ಜಗದೊಡೆಯನೆ! ಇಂತಹ ನೀನು ನನ್ನಲ್ಲಿಗೆ ತಾನಾಗಿಯೇ ಬಂದಿರುವೆ.

ಮತ್ತೋ ಧನ್ಯತರೋ ನಾಸ್ತಿ ನ ಮತ್ತೋಽನ್ಯೋಽಸ್ತಿ ಪುಣ್ಯವಾನ್ ।
ಯದ್ಭವಾನ್ ಹಿಮವತ್ಪೃಷ್ಠೇ ತಪಸೇ ಸಮುಪಸ್ಥಿತಃ ॥ ೧೯ ॥

ದೇವೇಂದ್ರಾದಧಿಕಂ ಮನ್ಯೇ ಆತ್ಮಾನಂ ಪರಮೇಶ್ವರ ।
ಸಗಣೇಸ ತ್ವಯಾ ಪ್ರಾಪ್ತೋ ಯದಹಂ ಕಾಮಚಾರತಃ ॥ ೨೦ ॥

ಇತ್ಯುಕ್ತ್ವಾ ಗಿರಿರಾಜೋಽಥ ಸ್ವವೇಶ್ಮ ಪುನರಾಗಮತ್ ।
ನಿಯಮಾಯ ಪರೀವಾರಾನ್ಗಣಾನಸ್ಯವದತ್ಸ್ವಕಾನ್ ॥ ೨೧ ॥

ಅದ್ಯ ಪ್ರಭೃತಿ ಸೋ ಗಂತಾ ಕೋಽಪಿ ಗಂಗಾವತಾರಣಂ ।
ಮಚ್ಛಾಸನಂ ನ ಹಿ ವಿನಾ ಯೋ ಗಂತಾ ದಂಡಯೇ ಹ್ಯಹಂ ॥ ೨೨ ॥

ಇತಿ ಸ್ವಾನ್ತ್ಸ ನಿಯಮ್ಯಾಶು ತಿಲಪುಷ್ಪಕುಶಾನ್ಫಲಂ ।
ಸಮಾಪಾಯಾಶು ತನಯಾಸಹಿತೋಽಗಾದ್ಧರಾಂತಿಕಂ ॥ ೨೩ ॥

---

೧೯. ನೀನು ತಪಸ್ಸಿಗಾಗಿ ನನ್ನಲ್ಲಿರುವ ತಪ್ಪಲಿಗೆ ಬಂದಿರುವುದರಿಂದ ನನ್ನಂತಹ ಧನ್ಯರು ಇನ್ಯಾರೂ ಇಲ್ಲವು. ನನ್ನಷ್ಟು ಪುಣ್ಯವಂತರು ಇನ್ನಾರೂ ಇಲ್ಲವು.

೨೦. ಓ ಪರಮೇಶ್ವರನೆ! ನೀನು ನಿನ್ನ ಇಚ್ಛೆಯಂತೆಯೇ ನನ್ನಲ್ಲಿ ಗಣಗಳೊಡನೆ ಬಂದಿರುವೆ. ಈ ಕಾರಣದಿಂದ ನಾನು ನನ್ನನ್ನು ದೇವೇಂದ್ರನಿಗಿಂತಲೂ ಹೆಚ್ಚಿನವನೆಂದು ತಿಳಿದುಕೊಂಡಿರುವೆನು.

೨೧. ಹೀಗೆ ಹೇಳಿ ಆ ಹಿಮವಂತನು ತನ್ನ ಅರಮನೆಗೆ ತಿರುಗಿ ಬಂದನು. ಅಲ್ಲಿ ಶಂಕರನು ಮಾಡುವ ತಪಸ್ಸಿನ ಅನುಕೂಲಕ್ಕಾಗಿ ತನ್ನ ಪರಿವಾರವನ್ನು ಕುರಿತು ಈರೀತಿಯಾಗಿ ಹೇಳಿದನು.

೨೨. ಇಲ್ಲಿಂದ ಮುಂದೆ ಯಾರೂ ಶಂಕರನು ತಪಸ್ಸುಮಾಡುತ್ತಲಿರುವ "ಗಂಗಾವತರಣ" ವೆಂಬ ತಪ್ಪಲಿಗೆ ಹೋಗಕೂಡದು. ಹಾಗೆ ನನ್ನ ಅಪ್ಪಣೆಯಿಲ್ಲದೆ ಹೋದರೆ ಅವರನ್ನು ತೀವ್ರ ಶಿಕ್ಷೆಗೆ ಗುರಿಮಾಡುವೆನು.

೨೩-೨೪. ಹೀಗೆ ತನ್ನ ಪರಿವಾರಕ್ಕೆ ಕಟ್ಟಪ್ಪಣೆಯನ್ನು ಮಾಡಿ ಆ ಹಿಮವಂತನು ತಾನು ತಿಲಪುಷ್ಪ, ದರ್ಭೆ, ಫಲ ಇವುಗಳನ್ನು ತೆಗೆದುಕೊಂಡು ತನ್ನ ಮಗಳಾದ ಪಾರ್ವತಿಯೊಡನೆ ಶಂಕರನ ಬಳಿಗೆ ಹೋಗಿ ಸಕಲಗುಣಸಂಪೂರ್ಣಳಾದ ತನ್ನ

ಅಥ ಗತ್ವಾ ಜಗನ್ನಾಥಂ ಪರಂ ಧ್ಯಾನಪರಂ ತದಾ ।
ನಮಯಾಮಾಸ ತನಯಾಂ ಕಾಲೀಂ ಸರ್ವಗುಣಾನ್ವಿತಾಂ ॥ ೨೪ ॥

ತಿಲಪುಷ್ಪಾದಿಕಂ ಯದ್ಯತ್ತತ್ತದಗ್ರೇ ನಿಧಾಯ ಸಃ ।
ಅಗ್ರೇ ಕೃತ್ವಾ ಸುತಾಂ ಶಂಭುಮಿದಮಾಹ ಸ ಶೈಲರಾಟ್ ॥ ೨೫ ॥

ಭಗವಂಸ್ತನಯೇಯಂ ಮೇ ತ್ವಮಾರಾಧಯಿತುಂ ಪ್ರತಿ ।
ಸಮಾದಿಷ್ಟಾ ಸಮಾನೀತಾ ತ್ವದಾರಾಧನಕಾಂಕ್ಷಿಣೀ ॥ ೨೬ ॥

ಸಖಿಭ್ಯಾಂ ಸಹ ನಿತ್ಯಂ ತ್ವಾಂ ಸೇವತಾಮಿಯಂ ಶಂಕರ ।
ಅನುಜಾನೀಹಿ ಸೇವಾಯೈ ಮಯಿ ತೇ ಯದ್ಯನುಗ್ರಹಃ ॥ ೨೭ ॥

ಅಥ ತಾಂ ಶಂಕರೋಽಪಶ್ಯತ್ಪ್ರಥಮಾರೂಢಯೌವನಾಂ ।
ಫುಲ್ಲೇಂದೀವರಪತ್ರಾಭಾಂ ಪೂರ್ಣಚಂದ್ರನಿಭಾನನಾಂ ॥ ೨೮ ॥

ಮಗಳಾದ ಪಾರ್ವತಿಯನ್ನು ಧ್ಯಾನನಿರತನಾದ ಶಂಕರನಿಗೆ ನಮಸ್ಕರಿಸುವಂತೆ ಹೇಳಿದನು.

೨೫. ಅಲ್ಲದೆ ತಾನು ತಂದಿರುವ ತಿಲಪುಷ್ಪ ಮುಂತಾದುವುಗಳನ್ನು ಶಂಕರನಿಗೆ ಸಮರ್ಪಿಸಿ ಆ ಹಿಮವಂತನು ತನ್ನ ಮಗಳಾದ ಪಾರ್ವತಿಯನ್ನು ಶಂಕರನ ಎದುರಿಗೆ ನಿಲ್ಲಿಸಿ ಹೀಗೆ ಹೇಳಿದನು.

೨೬-೨೭. ಓ ಭಗವಂತನೆ! ಇವಳು ನನ್ನ ಪುತ್ರಿಯು, ನಿನ್ನ ಸೇವೆಮಾಡುವುದಕ್ಕಾಗಿ ನಿನ್ನ ಬಳಿಗೆ ಕರೆದುಕೊಂಡು ಬಂದಿರುವೆನು. ಇವಳೂ ಸಹ ನಿನ್ನನ್ನು ಆರಾಧಿಸಬೇಕೆಂದು ತುಂಬಾ ಇಚ್ಛೆಯುಳ್ಳವಳಾಗಿರುವಳು. ಸಖಿಯರೊಡನೆ ಈ ಪಾರ್ವತಿಯು ನಿನ್ನನ್ನು ಸೇವಿಸಲಿ. ಓ ಜಗದೊಡೆಯನಾದ ಶಂಕರನೆ! ನನ್ನಲ್ಲಿ ನಿನಗೆ ಅನುಗ್ರಹವಿದ್ದರೆ ಇವಳು ನಿನ್ನನ್ನು ಸೇವೆಸಲು ಅನುಮತಿಯನ್ನು ಕೊಡು.

೨೮. ಅನಂತರ ಶಂಕರನು ನವಯೌವನದಿಂದ ಶೋಭಿಸುತ್ತಾ, ಅರಳಿದ ಕಮಲದಂತೆ ಕಾಂತಿಯುಳ್ಳ ಆ ಪಾರ್ವತಿಯನ್ನು ನೋಡಿದನು.

ಸಮುಗ್ರನೀಲಕೇಶೌಜಪ್ರಾಪ್ತವೇಶವಿಜೃಂಭಿಕಾಂ ।
ಕಂಬುಗ್ರೀವಾಂ ವಿಶಾಲಾಕ್ಷೀಂ ಚಾರುಕರ್ಣಯುಗೋಜ್ಜ್ವಲಾಂ ॥ ೨೯ ॥

ಮೃಡಾಲಾಯುತಪರ್ಯಂತ ಬಾಹುಯುಗ್ಮಮನೋರಮಾಂ ।
ರಾಜೀವಕುಂಡಲಪ್ರಖ್ಯಘನಪೀನೋನ್ನತಸ್ತನೌ ॥ ೩೦ ॥

ಬಿಭ್ರಂತೀಂ ಕ್ಷೀಣಸನ್ಮಧ್ಯಂ ರಕ್ತಪಾಣಿತಲದ್ವಯಾಂ ।
ಸ್ಥಲಪದ್ಮಪ್ರತೀಕಾಶಪಾದಯುಗ್ಮಮನೋರಮಾಂ ॥ ೩೧ ॥

ಮಧ್ಯಕ್ಷೀಣಾಂ ಮಹಾಸತ್ತ್ವಾಂ ವೃತ್ತಸ್ಥೂಲಘನೋಜ್ಜ್ವಲಾಂ ।
ಸುಜಂಘಾಂ ನಾಗನಾಸೋರುಂ ನಿಮ್ನನಾಭಿವಿಭೂಷಿತಾಂ ॥ ೩೨ ॥

ಸುವೃತ್ತಜಾನುಜಂಘಾಯಾಂ ತ್ರಿಗಂಭೀರಾಂ ಷಡುನ್ನತಾಂ ।
ಸರ್ವಲಕ್ಷಣಸಂಪೂರ್ಣಾಂ ತ್ರಿಷು ಲೋಕೇಷು ದುರ್ಲಭಾಂ ॥ ೩೩ ॥

೨೯-೩೦. ಆ ಪಾರ್ವತಿಯು ವಿಶಾಲವೂ, ನೀಳವೂ ಮತ್ತು ನೀಲವೂ ಆಗಿರುವ ಕೇಶಪಾಶಗಳ ಸೌಂದರ್ಯದಿಂದ ಮತ್ತಷ್ಟು ಸುಂದರವಾಗಿ ಕಾಣಿಸುತ್ತಿದ್ದಳು. ಶಂಖಿವಂತೆ ಇರುವ ಕಂಠದ ಸೊಬಗು, ವಿಶಾಲವಾದ ಕಣ್ಣುಗಳು, ಸುಂದರವಾದ ಕರ್ಣಯುಗ್ಮಗಳು, ತಾವರೆಯ ನಾಳದಂತೆ ಮೃದುವೂ, ವಿಶಾಲವೂ ಆದ ಬಾಹುಗಳು, ಪದ್ಮಗಳ ಮೊಗ್ಗೆಯಂತೆ ಸುಂದರವಾಗಿ ಉಬ್ಬಿ ಉನ್ನತವಾದ ಕುಚಗಳು ಇವುಗಳಿಂದ ಮನೋಹರವಾಗಿ ಒಪ್ಪುತ್ತಿದ್ದಳು.

೩೧-೩೨. ಅವಳ ನಡುವು ಬಹು ಕೃಶವಾಗಿದ್ದಿತು. ಶರೀರವು ಚೆನ್ನಾಗಿ ಬೆಳೆದು ಧಷ್ಟಪುಷ್ಟವಾಗಿ ನೋಡುವುದಕ್ಕೆ ಸುಂದರವಾಗಿ ಕಾಣುತ್ತಲಿದ್ದಿತು. ಸುಂದರಾಕಾರವಾದ ಅವಳ ಜಂಘೆಯೂ, ಸಂಪಿಗೆಯ ಮೊಗ್ಗಿನಂತಿರುವ ಅವಳ ನಾಸಿಕೆಯೂ, ಆಳವಾದ ನಾಭಿಪ್ರದೇಶವೂ, ಅವಳ ಸೌಂದರ್ಯರಾಶಿಯನ್ನು ಮತ್ತಷ್ಟು ಹೆಚ್ಚಿಸುತ್ತಲಿದ್ದವು.

೩೩. ಆ ಪಾರ್ವತಿಯು ದುಂಡನೆಯದೂ, ಸುಂದರವೂ ಆದ ಕಣಕಾಲುಗಳುಳ್ಳವಳೂ, ನಾಭಿ, ಗಮನ, ಸ್ವಭಾವ, ಈ ಮೂರರಲ್ಲಿ ಗಂಭೀರವಾದವಳೂ, ನಿತಂಬಗಳೆರಡು, ಕುಚಗಳೆರಡು, ಜಘನ ಸೌಂದರ್ಯ ಈ ಆರು ವಿಷಯಗಳಲ್ಲಿ ಉನ್ನತಳೂ, ಸಕಲ ಲಕ್ಷಣಗಳುಳ್ಳವಳೂ, ಮೂರು ಲೋಕದಲ್ಲಿ ಇನ್ನೆಲ್ಲಿಯೂ ಇರದಂತಹ ಸೌಂದರ್ಯಶಾಲಿನಿಯೂ ಆಗಿದ್ದಳು.

ಧ್ಯಾನಪಂಜರನಿರ್ಬಂಧಮುನಿಮಾನಸಮುಷ್ಯರಂ ।
ದರ್ಶನಾದ್ಭ್ರಂಶಿತುಂ ಶಕ್ತಾಂ ಯೋಷಿದ್ಗಣಶಿರೋಮಣಿಂ ॥ ೩೪ ॥

ತಾಂ ದೃಷ್ಟ್ವಾ ತಪಸೇ ನಿತ್ಯಂ ಧ್ಯಾನಿನಾಂ ಚ ಮನೋಹರಾಂ ।
ವಿಘ್ನಹೇತುಂ ಚಾನುರಾಗವರ್ಧಿನೀಂ ಕಾಮರೂಪಿಣೀಂ ॥ ೩೫ ॥

ಗಿರಿರಾಜಸ್ಯ ವಚನಾತ್ತನಯಾಂ ತಸ್ಯ ಶಂಕರಃ ।
ಪರ್ಯೇಷಣಾಯೈ ಜಗೃಹೇ ಗೌರವಾದಪಿ ಗೋರಥಃ ॥ ೩೬ ॥

ಉವಾಚೇದಂ ತವ ಸುತಾ ಸಖಿಭ್ಯಾಂ ಸಹ ಶೈಲರಾಟ್ ।
ನಿತ್ಯಂ ಮೇ ಸೇವಯಾಯತ್ತಾ ನಿರ್ಭೀತಾ ಹ್ಯತ್ರ ತಿಷ್ಠತು ॥ ೩೭ ॥

ಏವಮುಕ್ತ್ವಾ ತು ತಾಂ ದೇವೀಂ ಸೇವಾಯೈ ಜಗೃಹೇ ಹರಃ ।
ಇದಮೇವ ಮಹದ್ಧೈರ್ಯಂ ಯದ್ವಿಘ್ನೋ ನ ಹಿ ವಿಘ್ನಯೇತ್ ॥ ೩೮ ॥

---

೩೪. ನೋಡಿದೊಡನೆಯೇ ಧ್ಯಾನವೆಂಬ ಪಂಜರದ ನಿರ್ಬಂಧದಲ್ಲಿರುವ ಮುನಿಗಳ ಮನಸ್ಸನ್ನೂ ಚಂಚಲಗೊಳಿಸುವಂತಹ ಸೌಂದರ್ಯವುಳ್ಳವಳೂ, ಸ್ತ್ರೀಯರಲ್ಲಿ ರತ್ನಪ್ರಾಯಳೂ ಆಗಿದ್ದಳು.

೩೫-೩೬. ಈರೀತಿಯಾಗಿ ಧ್ಯಾನಿಗಳ ಮನಸ್ಸನ್ನು ಅಪಹರಿಸುವಷ್ಟು ಸುಂದರಳೂ, ತಪಸ್ಸಿಗೆ ವಿಘ್ನವನ್ನುಂಟುಮಾಡುವವಳೂ, ಅನುರಾಗ ಮತ್ತು ಕಾಮಗಳನ್ನು ವೃದ್ಧಿಪೊಂದಿಸುವವಳೂ ಆದ ಆ ಪಾರ್ವತಿಯನ್ನು ನೋಡಿ ಶಂಕರನು ಪರ್ವತರಾಜನ ಮಾತಿನ ಗೌರವಕ್ಕಾಗಿ ಆ ಪಾರ್ವತಿಯು ತನ್ನ ಸೇವೆಯನ್ನು ಮಾಡಲು ಅಂಗೀಕರಿಸಿದನು.

೩೭. ಅಲ್ಲದೆ ಆ ಹಿಮವಂತನನ್ನು ಕುರಿತು ಹೀಗೆ ಹೇಳಿದನು:—ಎಲೈ ಹಿಮವಂತನೆ! ಈ ನಿನ್ನ ಮಗಳು ಸಖಿಯರೊಡನೆ ನಿತ್ಯವೂ ನನ್ನನ್ನು ಸೇವಿಸುತ್ತಾ ಯಾವ ಭಯವೂ ಇಲ್ಲದೆ ಇಲ್ಲಿರಲಿ.

೩೮. ಹೀಗೆ ಹೇಳಿ ಶಂಕರನು ಆ ಪಾರ್ವತಿಯನ್ನು ತನ್ನ ಸೇವೆಗಾಗಿ ಅಂಗೀಕರಿಸಿದನು. ಯಾವನ ಧೈರ್ಯವನ್ನು ವಿಘ್ನವೂ ಸಹ ಕೆಡಿಸಲಾರದೋ ಅದೇ ನಿಜವಾದ ಧೈರ್ಯವು.

ನಿರ್ವಿಘ್ನಂ ಸ್ಥಾನಮಾಸಾದ್ಯ ಯತ್ತಪಃ ಕ್ರಿಯತೇ ದ್ವಿಜೈಃ ॥ ೩೯ ॥

ಸ ವಿಘ್ನೋ ವಿಘ್ನಹೇತುಂ ಯಃ ಪರಿಭೂಯ ಪ್ರವರ್ತತೇ ।
ತನ್ಮಹತ್ತ್ವಂ ಚ ತಪಸಾಂ ಧೀರತಾ ಚ ತಪಸ್ವಿನಾಂ ॥ ೪೦ ॥

ತತಃ ಸ್ವಪುರಮಾಯಾತೋ ಗಿರಿರಾಟ್ಪರಿಚಾರಕೈಃ ।
ಹರಶ್ಚ ಧ್ಯಾನಯೋಗೇನ ಪರಂ ಚಿಂತಯಿತುಂ ಸ್ಥಿತಃ ॥ ೪೧ ॥

ಕಾಲೀ ಸಖಿಭ್ಯಾಂ ಸಹಿತಾ ಪ್ರತ್ಯಹಂ ಚಂದ್ರಶೇಖರಂ ।
ಸೇವಮಾನಾ ಮಹಾದೇವಂ ಗಮನಾಗಮನೇ ಸ್ಥಿತಾ ॥ ೪೨ ॥

ಕದಾಚಿತ್ಸಹಿತಾ ಕಾಲೀ ಸಖಿಭ್ಯಾಂ ಶಂಕರಾಗ್ರತಃ ।
ವಿತನ್ವತೀ ಶುಭಂ ಗೀತಂ ಪಂಚಮಂ ಜಾತನೋತ್ತದಾ ॥ ೪೩ ॥

೩೯-೪೦. ವಿಘ್ನವಿಲ್ಲದಂತಹ ಸ್ಥಳದಲ್ಲಿ ಯಾವ ತಪಸ್ಸನ್ನು ದ್ವಿಜರು ಆಚರಿಸುವರೋ ಮತ್ತು ಅದೇ ವಿಘ್ನವು ತುಂಬಾ ತೊಂದರೆಯನ್ನುಂಟುಮಾಡಿದರೂ ಅದನ್ನು ಲಕ್ಷ್ಯಮಾಡದೆ ಯಾವನು ತಪಸ್ಸಿನಲ್ಲಿ ನಿರತನಾಗುವನೋ ಅವನೇ ನಿಜವಾದ ತಪಸ್ವಿಯು. ಅವನು ಮಾಡುವ ತಪಸ್ಸೇ ನಿಜವಾದ ತಪಸ್ಸು. ಅದೇನೆ ತಪಸ್ವಿಗಳಿಗಿರಬೇಕಾದ ಧೈರ್ಯವು.

೪೧. ಅನಂತರ ಹಿಮವಂತನು ತನ್ನ ಪರಿವಾರದೊಡನೆ ನಗರಕ್ಕೆ ಹಿಂತಿರುಗಿ ಬಂದನು. ಶಂಕರನೂ ಸಹ ಧ್ಯಾನಯೋಗದಿಂದ ಪರವಸ್ತುವಿನ ಚಿಂತೆಯಲ್ಲಿ ನಿರತನಾದನು.

೪೨. ಕಾಳಿಯು ಸಖಿಯರೊಡನೆ ನಿತ್ಯವೂ ಚಂದ್ರಶೇಖರನಾದ ಮಹಾದೇವನಿರುವಲ್ಲಿಗೆ ಹೋಗಿ ಬರುತ್ತಲಿದ್ದು ಅವನನ್ನು ಸೇವಿಸುತ್ತಲಿದ್ದಳು.

೪೩. ಒಮ್ಮೆ ಆ ಪಾರ್ವತಿಯು ಶಂಕರನ ಎದುರಿಗೆ ಕುಳಿತು ಸಖಿಯರೊಡನೆ ಮಂಗಳವಾದ ಸಂಗೀತವನ್ನು ಪ್ರಾರಂಭಿಸಿ ಪಂಚಮಸ್ವರದಿಂದ ಇಂಪಾಗಿ ಹಾಡುತ್ತಲಿದ್ದಳು.

ಕದಾಚಿತ್ಕುಶಪುಷ್ಪಾದಿ ಸಮಿದ್ವಾರಿ ಹರಾಯ ಸಾ ।
ಸಖಿಭ್ಯಾಂ ಸ್ನಾನಸತ್ಕಾರಂ ಕುರ್ವತೀ ನ್ಯವಸತ್ತದಾ ॥ ೪೪ ॥

ಕದಾಚಿದಗ್ರೇ ನಿಯತಾ ಸ್ಥಿತಾ ಚಂದ್ರಭೃತೋ ಮುಖಂ ।
ವೀಕ್ಷಂತೀ ಚಿಂತಯಾಮಾಸ ಸಕಾಮಾ ಚಂದ್ರಶೇಖರಂ ॥ ೪೫ ॥

ಯದಾ ಕಾರ್ಯೇಷು ಸಾ ವ್ಯಗ್ರಾ ತದಾ ತತ್ಕರ್ಮ ಚೇಷ್ಟತೇ ।
ಕೃತ್ಯಹೀನಾ ಯದಾ ಸಾ ತು ತದೈವಾಚಿಂತಯದ್ಧರಂ ॥ ೪೬ ॥

ಕದಾ ನೂಮೇಷ ಭೂತೇಶಃ ಕರ್ತಾ ಪಾಣಿಗ್ರಹೀತಿಕಾಂ ।
ಕದಾ ನುಯಾ ಸಮಂ ರಂತಾ ನಾನಾಸದ್ಭಾವಭಾವನೈಃ ॥ ೪೭ ॥

ಇತಿ ಚಿಂತಾಪರಾ ಕಾಲೀ ಸ್ವಪ್ನೇಽಪಿ ಪರಮೇಶ್ವರಂ ।
ಅರ್ಚಯತ್ಯೇವ ಪರಮಂ ಸದಾ ಚಿಂತನತತ್ಪರಾ ॥ ೪೮ ॥

---

೪೪. ಮತ್ತೊಮ್ಮೆ ಸಖಿಯರೊಡನೆ ದರ್ಭೆ, ಹೂವು, ಸಮಿತ್ತು, ಗಂಗಾನದಿಯನೀರು ಇವುಗಳನ್ನು ತಂದುಕೊಟ್ಟು ಆ ಶಂಕರನಿಗೆ ಸ್ನಾನಕ್ಕೆ ಅನುಕೂಲಪಡಿಸುತ್ತಲಿದ್ದಳು.

೪೫. ಇನ್ನೊಮ್ಮೆ ಶಂಕರನಿಗೆ ಎದುರಾಗಿ ನಿಂತು ಚಂದ್ರಶೇಖರನಾದ ಅವನ ಸುಂದರ ಮುಖವನ್ನು ನೋಡುತ್ತಾ ಕಾಮವಿಕಾರವನ್ನು ಹೊಂದಿ ಅವನನ್ನೇ ಚಿಂತಿಸುವಳು.

೪೬. ಕೆಲಸವಿದ್ದಾಗ ಅವಳು ಅದರಲ್ಲಿಯೇ ಪ್ರವರ್ತಿಸುವಳು. ಕಾರ್ಯವಿಲ್ಲದಿದ್ದಾಗಲೆಲ್ಲಾ ಶಂಕರನನ್ನೇ ಅವಳು ಚಿಂತಿಸುವಳು.

೪೭-೪೮. ಭೂತಾಧಿಪತಿಯಾದ ಈ ಶಂಕರನು ನನ್ನನ್ನು ಯಾವಾಗ ಮದುವೆಯಾಗುವನು? ಮತ್ತು ಸಮಯೋಚಿತವಾದ ಕ್ರೀಡೆಗಳಿಂದ ನನ್ನೊಡನೆ ಯಾವಾಗ ವಿಹರಿಸಿಯಾನು? ಎಂದು ಪರಮೇಶ್ವರನನ್ನು ಸ್ವಪ್ನದಲ್ಲಿಯೂ ಚಿಂತಿಸುತ್ತಾ ಅರ್ಚಿಸುವಳು.

ಅಗ್ರಂ ಗತಾ ಯದಾ ಕಾಲೀ ಪ್ರಧ್ಯಾಯತಿ ಮಹೇಶ್ವರಂ ।
ತದಾ ತದ್ವೇದ ಭೂತೇಶಸ್ತಾಂ ನಿಸರ್ಗಪರಿಶ್ಥಿತಾಂ ॥ ೪೯ ॥

ಕಿಂತು ಗರ್ಭಗತೈರ್ಬೀಜೈರ್ಧೃತದೇಹೇತಿ ತಾಂ ತದಾ ।
ನಾಗ್ರಹೀದ್ಗಿರಿಶಃ ಕಾಲೀಂ ಭಾರ್ಯಾರ್ಥೇ ಽಧೃತವ್ರತಾಂ ॥ ೫೦ ॥

ಮಹಾದೇವೋಽಪಿ ತಾಂ ದೃಷ್ಟ್ವಾ ತದೈವೇದಮಚಿಂತಯತ್ ।
ಕಥಮೇಷಾ ತಪಶ್ಚರ್ಯಾ ವ್ರತಂ ಕುರ್ಯಾದ್ಗಿರೇಃ ಸುತಾ ॥ ೫೧ ॥

ಕೃತವ್ರತಾಂ ಗ್ರಹಿಷ್ಯಾಮಿ ಗರ್ಭಬೀಜವಿವರ್ಜಿತಾಂ ।
ಕಾಲೀಂ ಭಾರ್ಯಾಂ ಸ್ವದಯಿತಾಂ ಯೋನಿಜಾಮತಿದೂಷಿತಾಂ ॥ ೫೨ ॥

---

೪೯. ಆ ಪಾರ್ವತಿಯು ತನ್ನ ಎದುರಿಗೆಬಂದಾಗ ತನ್ನನ್ನೇ ಚಿಂತಿಸುವುದನ್ನು ಶಂಕರನು ತಿಳಿದು ಯೌವ್ವನಸ್ವಭಾವಕ್ಕನುಸಾರವಾಗಿ ನಡೆಯುತ್ತಿರುವಳೆಂದಂದುಕೊಂಡನು.

೫೦. ಆದರೆ ಗರ್ಭಗತವಾದ ವೀರ್ಯದಿಂದ ಜನಿಸಿದವಳು ಅಪವಿತ್ರಳೂ, ತಪಸ್ಸಿನಿಂದ ಪವಿತ್ರವಾದ ಶರೀರವಿಲ್ಲದವಳೂ, ಆಗಿರುವಳೆಂದು ತಿಳಿದು ಶಂಕರನು ಕಾಳಿಯನ್ನು ತನ್ನ ಪತ್ನಿಯನ್ನಾಗಿ ಸ್ವೀಕರಿಸಲಿಲ್ಲವು.

೫೧. ಮಹಾದೇವನೂ ಸಹ ಆ ಪಾರ್ವತಿಯನ್ನು ನೋಡಿ ಹೀಗೆ ಆಲೋಚಿಸಿದನು:—ಪರ್ವತರಾಜನ ಪುತ್ರಿಯಾದ ಇವಳು ತಪಸ್ಸನ್ನು ಮಾಡುವಳೇ? ಹಾಗೆ ತಪಸ್ಸನ್ನು ಮಾಡಿದರೆ ಅವಳ ಗರ್ಭಬೀಜದ ದೋಷವು ಹೋಗುವುದು. ಅವಳನ್ನು ಆಮೇಲೆ ನಾನು ಮದುವೆಯಾಗುವೆನು.

೫೨-೫೩. ನನಗೆ ತುಂಬಾ ಪ್ರಿಯಳೂ, ಹಿಂದಿನ ಜನ್ಮದ ಪತ್ನಿಯು ಆಗಿದ್ದರೂ ಪ್ರಕೃತಿ ಯೋನಿಯಿಂದ ಜನಿಸಿದುದರಿಂದ ಅಶುದ್ಧಳಾಗಿರುವ ಈ ಕಾಳಿಯ ಗರ್ಭಬೀಜದೋಷವು ತಪಸ್ಸಿನಿಂದಲೂ, ಸಂಸ್ಕಾರದಿಂದಲೂ ಬಿಟ್ಟುಹೋಗುವುದು. ಆದುದರಿಂದ

ವ್ರತೇನ ಚಾಥ ಸಂಸ್ಕಾರೈರ್ಗರ್ಭಬೀಜಂ ವಿಮುಚ್ಯತೇ ।
ತಸ್ಮಾದ್ವ್ರತಂ ಯಥಾ ಕಾಲೀ ಕುರ್ಯಾತ್ತದ್ಬ್ರೂಹಿ ಕಥಂ ॥ ೫೩ ॥

॥ ಇತಿ ಶ್ರೀ ಕಾಲಿಕಾಪುರಾಣೇ ತ್ರಿಚತ್ವಾರಿಂಶತ್ತಮೋಧ್ಯಾಯಃ ॥

ಈ ಪಾರ್ವತಿಯು ವ್ರತವನ್ನು ಹೇಗೆ ಆಚರಿಸುವಳು ? ಅದು ಹೇಗೆ ಯೋಗ್ಯವಾಗಿ ಆಗಬಹುದು ಎಂದು ಯೋಚಿಸುತ್ತಿದ್ದನು.

ಇಲ್ಲಿಗೆ ನಲವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ
ಶ್ರೀ ಕಾಲಿಕಾಪುರಾಣೇ ಚತುಶ್ಚತ್ವಾರಿಂಶತ್ತಮೋಧ್ಯಾಯಃ

॥ ಮಾರ್ಕಂಡೇಯ ಉವಾಚ ॥

ಇತಿ ಸಂಚಿಂತ್ಯ ಭೂತೇಶಸ್ತದಾ ಧ್ಯಾನಮನಾಃ ಸ್ಥಿತಃ ।
ಧ್ಯಾನಾಸಕ್ತಸ್ಯ ತಸ್ಯಾಥ ನಾನ್ಯಚಿಂತಾ ವ್ಯಜಾಯತ ॥ ೧ ॥

ಕಾಲೀ ತ್ವನುದಿನಂ ಶಂಭುಂ ಭಕ್ತ್ಯಾ ಭೃಶಮುಸೇವತ ।
ವಿಚಿಂತಯಂತೀ ಸತತಂ ತಸ್ಯ ರೂಪಂ ಮಹಾತ್ಮನಃ ॥ ೨ ॥

ಹರೋ ಧ್ಯಾನಪರಃ ಕಾಲೀಂ ನಿತ್ಯಂ ಪ್ರತ್ಯಕ್ಷತಃ ಸ್ಥಿತಾಂ ।
ವಿಸ್ಮೃತ್ಯ ಪೂರ್ವವೃತ್ತಾಂತ್ತಂ ಪಶ್ಯನ್ನಪಿ ನ ಪಶ್ಯತಿ ॥ ೩ ॥

॥ ನಲವತ್ತನಾಲ್ಕನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು:—ಹೀಗೆ ಚಿಂತಿಸಿ ಶಂಕರನು ಆಗ ಧ್ಯಾನಾಸಕ್ತನಾದನು. ಧ್ಯಾನಾಸಕ್ತನಾದ ಅವನಿಗೆ ಪರಬ್ರಹ್ಮನ ಚಿಂತೆಯ ಹೊರತು ಬೇರೆ ಯಾವ ಚಿಂತೆಯೂ ಆಗಲಿಲ್ಲವು.

೨. ಪಾರ್ವತಿಯಾದರೋ ಮಹಾತ್ಮನಾದ ಆ ಶಂಕರನ ರೂಪವನ್ನು ಸದಾ ಚಿಂತಿಸುತ್ತಾ ಪ್ರತಿದಿನವೂ ತುಂಬಾ ಭಕ್ತಿಯಿಂದ ಆ ಶಂಕರನನ್ನು ಸೇವಿಸುತ್ತಿದ್ದಳು.

೩. ಶಂಕರನು ಧ್ಯಾನದಲ್ಲಿ ಆಸಕ್ತನಾಗಿ ನಿತ್ಯವೂ ಎದುರಿಗೆ ಇರುವ ಕಾಳಿಯನ್ನು ನೋಡುತ್ತಿದ್ದರೂ ಪೂರ್ವದ ವೃತ್ತಾಂತವನ್ನು (ಆಧ್ಯಾನದಿಂದ) ಮರೆತು ಅದನ್ನು ತಿಳಿದರೂ ತಿಳಿಯದವನಂತಾಗಿದ್ದನು.

ಏತಸ್ಮಿನ್ನಂತರೇ ದೇವಾನ್ತಾರಕೋ ನಾಮ ದೈತ್ಯರಾಟ್ ।
ಬಬಾಧೇ ಸರ್ವಲೋಕಾಂಶ್ಚ ಬ್ರಹ್ಮಣೋ ವರದರ್ಪಿತಃ ॥ ೪ ॥

ವಶೀಕೃತ್ಯ ಸ ಲೋಕಾನ್ ತ್ರೀನ್ ಸ್ವಯಮಿಂದ್ರೋ ಬಭೂವ ಹ ।
ವಿದ್ರಾವ್ಯ ಸಕಲಾನ್ದೇವಾನ್ ದೈತ್ಯಾನ್ ಸ್ವಾಂಸ್ತತ್ಪದೇಷು ಚ ॥ ೫ ॥

ಸ್ವಯಂ ನಿಯೋಜಯಾಮಾಸ ದೇವಯೋನಿಷು ಚಾಪ್ಯಸೌ ।
ನ ಯಮಃ ಸ್ವೇಚ್ಛಯಾ ಲೋಕಾನ್ತಸ್ಮಿನ್ರಾಜ್ಞಿ ನಿಯಚ್ಛತಿ ॥ ೬ ॥

ನ ಸ್ವೇಚ್ಛಯಾ ತಥಾ ಸೂರ್ಯೋ ಲೋಕಾಂಸ್ತಪತಿ ತದ್ಭಯಾತ್ ।
ಚಂದ್ರಸ್ತು ಸರ್ವಸಾಚಿವ್ಯಂ ತಸ್ಯ ಕುರ್ವನ್ಸ ರಶ್ಮಿಭಿಃ ॥ ೭ ॥

ವಾಯುನಾ ಸಹ ಸಂಗಮ್ಯ ತತ್ಸೇವಾಂ ವಿದಧೇಽ ನಿಶಂ ।
ತದಾ ಸೌಗಂಧ್ಯಗಾಂಭೀರ್ಯಶೈತ್ಯಸ್ನಿಗ್ಧತ್ವಸಂಯುತಃ ॥ ೮ ॥

---

೪. ಈ ಮಧ್ಯದಲ್ಲಿ ತಾರಕಾಸುರನೆಂಬ ದೈತ್ಯರಾಜನು ಬ್ರಹ್ಮನ ವರದಿಂದ ಕೊಬ್ಬಿದವನಾಗಿ ದೇವತೆಗಳನ್ನೂ, ಸಕಲ ಲೋಕಗಳನ್ನೂ ತುಂಬಾ ಪೀಡಿಸುತ್ತಿದ್ದನು.

೫. ಮೂರು ಲೋಕಗಳನ್ನೂ ಜಯಿಸಿ ತಾನೇ ಇಂದ್ರನಾದನು. ದೇವತೆಗಳನ್ನೆಲ್ಲಾ ಓಡಿಸಿ ಅವರ ಸ್ಥಾನಗಳಲ್ಲಿಯೂ, ದೇವತೆಗಳಿಂದ ಜನಿಸಿದ ಗಂಧರ್ವರೇ ಮೊದಲಾದವರ ಸ್ಥಾನಗಳಲ್ಲಿಯೂ ಸಹ ತನ್ನ ಕಡೆಯ ರಾಕ್ಷಸರನ್ನು ನಿಯಮಿಸಿದನು.

೬. ಆ ತಾರಕನು ರಾಜನಾಗಿರುವುದರಿಂದ ಯಮನು ಪ್ರಾಣಿಗಳಿಗೆ ಅವರವರ ಕರ್ಮಕ್ಕನುಸಾರವಾಗಿ ಶಿಕ್ಷೆಯನ್ನು ಸ್ವೇಚ್ಛೆಯಿಂದ ಕೊಡುವುದು ಸಾಧ್ಯವಾಗಿಲ್ಲ. ಆ ತಾರಕನ ಭಯದಿಂದ ಸೂರ್ಯನೂ ಸಹ ಸ್ವೇಚ್ಛೆಯಿಂದ ಜನಗಳನ್ನು ತಾಪಗೊಳಿಸುವುದಿಲ್ಲವು.

೭. ಚಂದ್ರನು ವಾಯುವಿನೊಡನೆ ಸೇರಿ ತನ್ನ ತಂಪಾದ ಕಿರಣಗಳಿಂದ ಆ ತಾರಕನಿಗೆ ವಿಹಾರಕ್ಕೆ ಅನುಕೂಲತೆಯನ್ನು ಮಾಡುತ್ತಾ ಅವನ ಸೇವೆಯನ್ನು ಮಾಡುತ್ತಿದ್ದನು.

೮. ತಾರಕರಾಜನ ಅಪ್ಪಣೆಯಂತೆ ವಾಯುವು ಸುವಾಸನೆ, ಗಂಭೀರತೆ, ಶೀತತೆ ಮತ್ತು ರಮಣೀಯತೆಗಳಿಂದ ಕೂಡಿ ಬೀಸುತ್ತಲಿದ್ದಿತು.

ತಂ ವೀಜಯನ್ ವವೌ ವಾಯುಃ ಶಾಸನಾತ್ತಸ್ಯ ಭೂಭೃತಃ ।
ಧನದೋಽಪಿ ತದಾ ಸಾರಂ ಧನಮಾದಾಯ ಯತ್ನತಃ ॥ ೯ ॥

ಸಾವಧಾನಸ್ತಸ್ಯ ಸೇವಾಮಕರೋತ್ತಾರಕೇಚ್ಛಯಾ ।
ಅಗ್ನಿಸ್ತಸ್ಯಾಭವತ್ಸೂದಃ ಶಾಸನಾತ್ತಾರಕಸ್ಯ ತು ॥ ೧೦ ॥

ವ್ಯಂಜನಾನ್ಯಥ ಭೋಜ್ಯಾನಿ ಜಕ್ರೇ ತತ್ಸ್ವೇಚ್ಛಯಾ ತದಾ ।
ನಿರ್ಋತಿಸ್ತಸ್ಯ ಸತತಂ ಸಹಿತಃ ಸರ್ವರಾಕ್ಷಸೈಃ ॥ ೧೧ ॥

ಅಶ್ವಾನ್ಗಜಾನ್ವಾಹನಾನಿ ಕಾರಯಾಮಾಸ ಸಾಧ್ವಸಾತ್ ।
ನೃತ್ಯದ್ಭಿರಪ್ಸರೋಭಿಶ್ಚ ಸ್ತುವದ್ಭಿಃ ಸೂತಮಾಗಧೈಃ ।
ಗಾಯಮಾನೈಶ್ಚ ಗಂಧರ್ವೈಃ ಸ ಚಿಕ್ರೀಡ ಸುರಾನ್ ದ್ವಿಷನ್ ॥ ೧೨ ॥

ಏವಂ ಸ ಸರ್ವಲೋಕಾಂಸ್ತು ತ್ರಿಷ್ವಪ್ಯಥ ವಿಲೋಡಯನ್ ॥ ೧೩ ॥

---

೯. ಕುಬೇರನೂ ಸಹ ಆ ತಾರಕನ ಅಪ್ಪಣೆಯಂತೆ ತನ್ನಲ್ಲಿರುವ ಧನವನ್ನೆಲ್ಲಾ ಪ್ರಯತ್ನಪೂರ್ವಕವಾಗಿ ತಂದು ಆ ತಾರಕನಿಗೆ ಒಪ್ಪಿಸಿ ಎಚ್ಚರಿಕೆಯಿಂದ ಆ ತಾರಕನ ಸೇವೆಯನ್ನು ಮಾಡುತ್ತಲಿದ್ದನು.

೧೦. ಅಗ್ನಿಯು ಅಡಿಗೆಯವನಾಗಿ ಆ ತಾರಕನ ಅಪ್ಪಣೆಯಂತೆ ಆಯಾಯ ಮೇಲೋಗರಗಳನ್ನೂ ಭಕ್ಷ್ಯಗಳನ್ನೂ ಅವನ ಇಚ್ಛೆಯಂತೆ ಮಾಡುತ್ತಿದ್ದನು.

೧೧. ನಿರ್ಋತಿಯು ರಾಕ್ಷಸರೊಡನೆ ಕೂಡಿಕೊಂಡು ಆ ತಾರಕನಿಗೆ ಕುದುರೆಗಳು, ಆನೆಗಳು, ವಾಹನಗಳು ಮುಂತಾದುವುಗಳನ್ನು ಭಯದಿಂದ ಸಿದ್ಧಪಡಿಸಿಕೊಡುತ್ತಿದ್ದನು.

೧೨. ಆ ತಾರಕನು ನರ್ತನಮಾಡುತ್ತಲಿರುವ ಅಪ್ಸರಸ್ತ್ರೀಯರಿಂದಲೂ, ಹೊಗಳುತ್ತಲಿರುವ ವಂದಿ ಮಾಗಧರಿಂದಲೂ, ಗಂಧರ್ವರ ಇಂಪಾದ ಗಾನಗಳಿಂದಲೂ ವಿಹರಿಸುತ್ತಾ ದೇವತೆಗಳನ್ನು ಬಾಧಿಸತೊಡಗಿದನು.

೧೩-೧೫. ಈರೀತಿಯಾಗಿ ಆ ತಾರಕಾಸುರನು ಮೂರು ಲೋಕಗಳಲ್ಲಿರುವ ಜನಗಳನ್ನೆಲ್ಲಾ ಹಿಂಸಿಸುತ್ತಲೂ, ಆ ಲೋಕಗಳಲ್ಲಿಯೂ ದೇವತೆಗಳ ಬಳಿಯಲ್ಲಿಯೂ ಇದ್ದ ಶ್ರೇಷ್ಠವಾದ ವಸ್ತುಗಳೆಲ್ಲವನ್ನೂ ತೆಗೆದುಕೊಂಡನು. ಹೀಗೆ ಆ ತಾರಕಾಸುರ

ಲೋಕೇಷು ಸಾರಾನ್ ಸಾರಾಂಶ್ಚ ದೇವಾನಾಮವ್ಯಥಾಗ್ರಹೀತ್ ।
ತೇನಾಭಿಬಾಧಿತಾಃ ಸರ್ವೇ ದೇವಾಃ ಶಕ್ರಪುರೋಗಮಾಃ ॥ ೧೪ ॥

ಬ್ರಹ್ಮಾಣಂ ಶರಣಂ ಜಗ್ಮುರನಾಥಾ ನಾಥಮುತ್ತಮಂ ।
ತೇ ಪ್ರಣಮ್ಯ ಸುರಾಃ ಸರ್ವೇ ಪುರುಹೂತಪುರೋಗಮಾಃ ॥ ೧೫ ॥

ಇದಮೂಚುರ್ಮಹಾತ್ಮಾನಂ ಸರ್ವಲೋಕಪಿತಾಮಹಂ ।

॥ ದೇವಾ ಊಚುಃ ॥

ಲೋಕೇಶ ತಾರಕೋ ದೈತ್ಯೋ ವರೇಣ ತವ ಗರ್ವಿತಃ ॥ ೧೬ ॥

ನಿರಸ್ಯಾಸ್ಮಾನ್ ಹತಾದಸ್ಮದ್ವಿಷಯಾನ್ ಸ್ವಯಮುಗ್ರಹೀತ್ ।
ರಾತ್ರಿಂ ದಿವಂ ಬಾಧತೇಸ್ಮಾನ್ಯತ್ರ ಯತ್ರ ಸ್ಥಿತಾ ವಯಂ ॥ ೧೭ ॥

ಪಲಾಯಿತಾಶ್ಚ ಪಶ್ಯಾಮಃ ಸರ್ವಕಾಷ್ಠಾಸು ತಾರಕಂ ।
ಅಗ್ನಿರ್ಯಮೋಽಥ ವರುಣೋ ನಿರ್ಋತಿರ್ವಾಯುರೇವ ಚ ॥ ೧೮ ॥

ನಿಂದ ಪೀಡಿಸಲ್ಪಟ್ಟು ಇಂದ್ರನೇ ಮೊದಲಾದ ಎಲ್ಲಾ ದೇವತೆಗಳೂ ರಕ್ಷಕರಿಲ್ಲದ ವರಾಗಿ ಸರ್ವರಕ್ಷಕನಾದ ಬ್ರಹ್ಮನನ್ನು ಮರೆಹೊಕ್ಕರು. ಬ್ರಹ್ಮನನ್ನು ನಮಸ್ಕರಿಸಿ ಲೋಕಕ್ಕೆ ತಾತನೂ ಮಹಾತ್ಮನೂ ಆದ ಆ ಬ್ರಹ್ಮನನ್ನು ಕುರಿತು ಹೀಗೆ ಹೇಳಿದರು.

೧೬. ದೇವತೆಗಳು ಹೇಳಿದರು:—ಓ ಬ್ರಹ್ಮನೇ! ತಾರಕಾಸುರನು ನಿನ್ನ ವರದಿಂದ ಕೊಬ್ಬಿದವನಾಗಿ ನಮ್ಮನ್ನೆಲ್ಲಾ ಬಲಾತ್ಕಾರದಿಂದ ಓಡಿಸಿ ನಮ್ಮ ಸ್ಥಾನ ಗಳನ್ನು ತಾನೇ ಆಕ್ರಮಿಸಿರುವನು.

೧೭. ಈಗಲೂ ರಾತ್ರಿ ಹಗಲೂ ನಮ್ಮನ್ನು ಬಾಧಿಸುತ್ತಿರುವನು. ನಾವು ಎಲ್ಲೆಲ್ಲಿ ಇರುವೆವೋ ಅಥವಾ ಓಡಿಹೋಗುವೆವೋ ಅಲ್ಲೆಲ್ಲಾ ತಾರಕಾಸುರನೇ ನಮಗೆ ಕಾಣಿಸಿದಂತಾಗುವುದು.

೧೮-೧೯. ಅಗ್ನಿ, ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈ ದೇವತೆಗಳೂ ಸಹ ಆ ತಾರಕನಿಂದ ಪೀಡಿಸಲ್ಪಟ್ಟು ಅವನ ಅಪ್ಪಣೆಯಂತೆ ಸಕಲ

ತಥಾ ಮನುಷ್ಯಧರ್ಮಾ ಚ ಸರ್ವೈಃ ಪರಿಕರೈರ್ಯುತಃ ।
ಏತೇ ತೇನಾರ್ದಿತಾಃ ಬ್ರಹ್ಮನ್ ದೇವಾಸ್ತಸ್ಯೈವ ಶಾಸನಾತ್ ॥ ೧೯ ॥

ಅನಿಚ್ಛಾಕಾರ್ಯನಿರತಾಃ ಸರ್ವೇ ತಸ್ಯಾನುಜೀವಿನಃ ।
ಯಾ ದೇವವನಿತಾಃ ಸ್ವರ್ಗೇ ಯೇ ಚಾಪ್ಯಪ್ಸರಸಾಂ ಗಣಾಃ ॥ ೨೦ ॥

ತಾನ್ಸರ್ವಾನಗೃಹೀದ್ದೈತ್ಯಃ ಸಾರಂ ಲೋಕೇಷು ಯಚ್ಚ ಯತ್ ।
ನ ಯಜ್ಞಾಃ ಸಂಪ್ರವರ್ತಂತೇ ತಪಸ್ಯಂತಿ ನ ತಾಪಸಾಃ ॥ ೨೧ ॥

ದಾನಧರ್ಮಾದಿಕಂ ಕಿಂಚಿನ್ನ ಲೋಕೇಷು ಪ್ರವರ್ತತೇ ।
ತಸ್ಯ ಸೇನಾಪತಿಃ ಪಾಪಃ ಕ್ರೌಂಚೋ ನಾಮಾತಿದಾರುಣಃ ॥ ೨೨ ॥

ಸ ಪಾತಾಲತಲಂ ಗತ್ವಾ ಬಾಧತೇಽರ್ದನಿಶಂ ಪ್ರಜಾಃ ।
ತಸ್ಮಾತ್ತು ತಾರಕೇನೇದಂ ಸಕಲಂ ಭುವನತ್ರಯಂ ॥ ೨೩ ॥

ಪರಿವಾರಗಳೊಡನೆ ಇಚ್ಛೆಯಿಲ್ಲದಿದ್ದರೂ ಆ ತಾರಕನ ಕಾರ್ಯಗಳನ್ನು ನಿರ್ವಹಿಸುತ್ತಾ ಅವನನ್ನು ಅನುಸರಿಸಿ ಜೀವಿಸುತ್ತಲಿರುವರು.

೨೦. ಅಲ್ಲದೆ ಸ್ವರ್ಗದಲ್ಲಿದ್ದ ದೇವಸ್ತ್ರೀಯರನ್ನೂ, ಅಪ್ಸರೆಯರನ್ನೂ, ಮೂರು ಲೋಕಗಳಲ್ಲಿರುವ ಸಾರವಾದ ವಸ್ತುಗಳೆಲ್ಲವನ್ನೂ ಅಪಹರಿಸಿರುವನು.

೨೧. ಆ ತಾರಕನ ಬಾಧೆಯಿಂದ ಈಗ ಯಜ್ಞಗಳು ನಡೆಯುತ್ತಿಲ್ಲವು. ತಪಸ್ವಿಗಳು ತಪಸ್ಸನ್ನು ಆಚರಿಸುತ್ತಿಲ್ಲವು. ಲೋಕದಲ್ಲಿ ದಾನಧರ್ಮಗಳು ನಡೆಯುತ್ತಿಲ್ಲವು.

೨೨. ಅತಿ ಪಾಪಿಯೂ ಕ್ರೂರನೂ ಆದ ಕ್ರೌಂಚನೆಂಬ ಅಸುರನು ಆ ತಾರಕಾಸುರನಿಗೆ ಸೇನಾಪತಿಯಾಗಿರುವನು. ಅವನು ಪಾತಾಳದ ಕೆಳಗೆ ಸಹ ಹೋಗಿ ಹಗಲೂ ರಾತ್ರಿಯೂ ಪ್ರಜೆಗಳೆಲ್ಲರನ್ನೂ ಬಾಧಿಸುತ್ತಲಿರುವನು.

೨೩. ಹೀಗೆ ಆ ತಾರಕನಿಂದ ಜಗತ್ತೆಲ್ಲವೂ ಅಪಹರಿಸಲ್ಪಟ್ಟು ಬಾಧೆಗೊಳಗಾಗಿರುವುದು. ಓ ಬ್ರಹ್ಮನೇ ! ಹೀಗಾಗಿರುವ ಈ ಜಗತ್ತನ್ನು ರಕ್ಷಿಸುವವನಾಗು.

ಹೃತಂ ಸರ್ವಂ ಜಗತ್ತ್ರಾಹಿ ಪಾಪಾತ್ತಸ್ಮಾತ್ಪಿತಾಮಹ ।
ವಯಂ ಚ ಯತ್ರ ಸ್ಥಾಸ್ಯಾಮಸ್ತತ್ಸ್ಥಾನಂ ವಿನಿವೇದಯ ॥ ೨೪ ॥

ಸ್ವಸ್ಥಾನಾಚ್ಚ್ಯವಿತಾಸ್ತೇನ ಲೋಕನಾಥ ಜಗದ್ಗುರೋ ।
ತ್ವಂ ನೋ ಗತಿಶ್ಚ ಶಾಸ್ತಾ ಚ ತ್ವಂ ನಸ್ತ್ರಾತಾ ಪಿತಾ ಪ್ರಸೂಃ ॥ ೨೫ ॥

ತ್ವಮೇವ ಭುವನಾನಾಂ ಚ ಸ್ಥಾಪಕಃ ಪಾಲಕಃ ಕೃತೀ ।
ತಸ್ಮಾದ್ಯಾವತ್ತಾರಕಾಖ್ಯೇ ವನೇಽಹಂ ದಗ್ಧಾಃ ಪ್ರಜಾಪತೇ ॥ ೨೬ ॥

ನ ಭವಾನುಸ್ಥಾ ಕರ್ತುಂ ಭವತಾ ಯುಜ್ಯತೇಽಧುನಾ ।

॥ ಮಾರ್ಕಂಡೇಯ ಉವಾಚ ॥

ಸುರಾಣಾಂ ವಚನಂ ಶ್ರುತ್ವಾ ಬ್ರಹ್ಮಾ ಲೋಕಪಿತಾಮಹಃ ॥ ೨೭ ॥

ಪ್ರತ್ಯುವಾಚ ಸುರಾನ್ಸರ್ವಾನ್ತತ್ಕಾಲಂ ಸದೃಶಂ ವಚಃ ।

॥ ಬ್ರಹ್ಮೋವಾಚ ॥

ಮಮೈವ ವರದಾನೇನ ತಾರಕಾಖ್ಯಃ ಸಮೇಧಿತಃ ॥ ೨೮ ॥

---

೨೪. ಜಗತ್ತಿಗೆ ಒಡೆಯನೂ ಗುರುವೂ ಆದ ಬ್ರಹ್ಮನೇ ! ಆ ತಾರಕನಿಂದ ಸ್ಥಾನಭ್ರಷ್ಟರಾದ ನಾವು ಈಗ ಎಲ್ಲಿ ವಾಸಿಸುವುದು ? ನಮಗೆ ಸ್ಥಾನವನ್ನು ಕಲ್ಪಿಸು.

೨೫. ನಮಗೆ ನೀನೇ ಗತಿಯು. ನಮ್ಮನ್ನು ಆಳುವವನೂ ನೀನೇ. ನಮಗೆ ರಕ್ಷಕನೂ, ತಂದೆಯೂ, ತಾಯಿಯೂ ನೀನೇ. ಅಲ್ಲದೇ ಸಕಲ ಲೋಕಗಳನ್ನೂ ಸ್ಥಾಪಿಸುವವನೂ, ಪಾಲಕನೂ ನೀನೇ.

೨೬. ಆದಕಾರಣ ಓ ಬ್ರಹ್ಮನೇ ! ಆ ತಾರಕನೆಂಬ ಬೆಂಕಿಯಲ್ಲಿ ನಾವು ಸುಟ್ಟುಹೋಗದಂತೆ ನೀನು ನಮ್ಮನ್ನು ಕಾಪಾಡುವುದು ಈಗ ಯೋಗ್ಯವಾಗಿರುವುದು.

೨೭. ಮಾರ್ಕಂಡೇಯನು ಹೇಳಿದನು :-ಲೋಕಕ್ಕೆ ತಾತನೆನಿಸಿದ ಬ್ರಹ್ಮನು ಈರೀತಿಯಾಗಿ ದೇವತೆಗಳ ಮಾತನ್ನು ಕೇಳಿ ಅವರೆಲ್ಲರನ್ನೂ ಕುರಿತು ಸಮಯೋಚಿತವಾದ ಮಾತುಗಳನ್ನು ಹೀಗೆ ಹೇಳಿದನು.

೨೮. ಬ್ರಹ್ಮನು ಹೇಳಿದನು :—ಎಲೈ ದೇವತೆಗಳಿರಾ ! ಆ ತಾರಕಾಸುರನು ನನ್ನ ವರದಿಂದಲೇ ಅಭಿವೃದ್ಧಿಯನ್ನು ಹೊಂದಿರುವನು. ಆದಕಾರಣ ನನ್ನಿಂದಲೇ ಅವನ ಮರಣವು ಯುಕ್ತವಾದುದಲ್ಲವು.

ನ ಮತಸ್ತಸ್ಯ ಮರಣಂ ಯುಜ್ಯತೇ ತ್ರಿದಿವೌಕಸಃ ।
ಯುಷ್ಮಾಕಂ ಚ ಪ್ರತೀಕಾರಃ ಕರ್ತವ್ಯಃ ಪ್ರತಿಕರ್ಮಣಿ ॥ ೨೯ ॥

ಕಿಂತು ಸಮ್ಯಙ್ನ ಶಕ್ನೋಮಿ ಪ್ರತಿಕರ್ತುಂ ಪ್ರಚೋದಿತಃ ।
ತಸ್ಮಾದ್ಯಥಾ ತಾರಕಾಖ್ಯಃ ಸ್ವಯಮೇಷ್ಯತಿ ಸಂಕ್ಷಯಂ ॥ ೩೦ ॥

ತಥಾ ಯೂಯಂ ಸಂವಿದಧ್ವಮುಪದೇಶಕರಸ್ತ್ವಹಂ ।
ನ ಮಯಾ ತಾರಕೋ ವಧ್ಯೋ ನ ತಥಾ ವನಮಾಲಿನಾ ॥ ೩೧ ॥

ನ ಹರೇಣ ತಥಾ ವಧ್ಯೋ ನಾನ್ಯೈರಪಿ ಸುರೈರ್ನರೈಃ ।
ಏಷ ಏವ ವರೋ ದತ್ತೋ ಮಯಾ ತಸ್ಮೈ ತಪಸ್ಯತೇ ॥ ೩೨ ॥

ಉಪಾಯಶ್ಚಿಂತಿತಶ್ಚಾಸ್ತಿ ತತ್ಕುರ್ವಂತು ಸುರೋತ್ತಮಾಃ ।
ಸತೀ ದಾಕ್ಷಾಯಣೀ ಪೂರ್ವಂ ತ್ಯಕ್ತದೇಹಾ ಸ್ವಜನ್ಮನೇ ॥ ೩೩ ॥

---

೨೯. ಈ ಕಾರ್ಯದಲ್ಲಿ ನಾನು ನಿಮಗೆ ಸಹಾಯವಾಗಿದ್ದು ಅವನಿಗೆ ಪ್ರತೀಕಾರವನ್ನು ಮಾಡಬೇಕು. ಆದರೆ ಪ್ರತೀಕಾರವನ್ನು ನಾನು ಸಂಪೂರ್ಣವಾಗಿ ಮಾಡಲಾರೆನು.

೩೦. ಆದಕಾರಣ ಆ ತಾರಕನು ನಾಶಹೊಂದುವಂತೆ ನೀವುಗಳು ಒಂದು ಉಪಾಯವನ್ನು ಮಾಡಿರಿ. ಆ ಉಪಾಯವನ್ನು ನಿಮಗೆ ತಿಳಿಸುವೆನು.

೩೧. ಆ ತಾರಕನು ನನ್ನಿಂದಲೂ, ವಿಷ್ಣುವಿನಿಂದಲೂ, ಶಂಕರನಿಂದಲೂ, ಮಿಕ್ಕ ದೇವತೆಗಳು ಮತ್ತು ಮನುಷ್ಯರಿಂದಲೂ ಸಂಹರಿಸಲ್ಪಡತಕ್ಕವನಲ್ಲವು.

೩೨. ಈರೀತಿಯಾದ ವರವನ್ನು ತಪಸ್ಸನ್ನು ಮಾಡುತ್ತಿರುವಾಗ ಆ ತಾರಕನಿಗೆ ನಾನೇ ಕೊಟ್ಟಿರುವೆನು. ಆದರೆ ಅದರ ಪ್ರತೀಕಾರಕ್ಕೆ ಬೇರೊಂದು ಉಪಾಯವನ್ನೂ ಆಲೋಚಿಸಿರುವೆನು. ಎಲೈ ದೇವಶ್ರೇಷ್ಠರೇ! ಆ ಉಪಾಯವನ್ನು ಮಾಡಿರಿ.

೩೩. ಅದೇನೆಂದರೆ:—ಹಿಂದೆ ದಕ್ಷನ ಪುತ್ರಿಯಾದ ಸತೀದೇವಿಯು ದಕ್ಷನ ಮೇಲಿನ ಕೋಪದಿಂದ ಶರೀರವನ್ನು ತ್ಯೆಜಿಸಿ ತಿರುಗಿ ಜನ್ಮವೆತ್ತುವುದಕ್ಕಾಗಿ ಹಿಮವಂತನ ರಾಣಿಯಾದ ಮೇನಕೆಯನ್ನು ಗೊತ್ತುಮಾಡಿಕೊಂಡಿರುವಳು.

ಅಗಚ್ಛನ್ಮೇನಕಾಂ ದೇವೀಂ ಶೈಲರಾಜಸ್ಯ ಯೋಷಿತಂ ।
ತಾಂ ಸಮುತ್ಪಾದಯಾಮಾಸ ಮೇನಕಾ ಜಠರೇ ಗಿರಿಃ ॥ ೩೪ ॥

ಲಕ್ಷ್ಮೀಮಿವ ಪುರಾ ಖ್ಯಾತ್ಯಾಂ ಭೃಗುಃ ಸ್ವತನಯೇ ಮುನಿ ।
ತಾಮವಶ್ಯಂ ಮಹಾದೇವಃ ಕುರ್ಯಾತ್ತಾಪಿಗೃಹೀತಿಕಾಂ ॥ ೩೫ ॥

ಯಥಾ ಸ ನಚಿರಾತ್ತಸ್ಯಾಮನುರಕ್ತೋ ಭವೇತ್ಸುರಾಃ ।
ತಥಾ ವಿದಧ್ವಂ ಸುತರಾಂ ತತ್ತೇಜಃ ಪ್ರತಿಕರ್ತೃ ವಃ ॥ ೩೬ ॥

ತ ಮೂರ್ಧ್ವರೇತಸಂ ಶಂಭುಂ ಸೈವ ಪ್ರಚ್ಯುತರೇತಸಂ ।
ಕರ್ತುಂ ಸಮರ್ಥಾ ನಾನ್ಯಾಸ್ತಿ ಕಾಚಿದಪ್ಯಬಲಾ ಪರಾ ॥ ೩೭ ॥

ತತ್ತೇಜಃ ಪ್ರಚ್ಯುತಂ ಯಚ್ಚ ತಸ್ಮಾದ್ಯೋ ಜಾಯತೇ ಸುತಃ ।
ಸ ಏವ ತಾರಕಾಖ್ಯಸ್ಯ ಹಂತಾ ನಾನ್ಯಸ್ತು ವಿದ್ಯತೇ ॥ ೩೮ ॥

---

೩೪. ಹಿಂದೆ ನನ್ನ ಮಾನಸಪುತ್ರನಾದ ಭೃಗುಮುನಿಯು ತನ್ನ ಪತ್ನಿಯಾದ ಖ್ಯಾತಿಯಲ್ಲಿ ಲಕ್ಷ್ಮಿಯನ್ನು ಪಡೆದಂತೆ ಆ ಹಿಮವಂತನು ತನ್ನ ಪತ್ನಿಯಾದ ಮೇನಕೆಯ ಗರ್ಭದಲ್ಲಿ ಆ ಸತೀದೇವಿ (ಪಾರ್ವತಿ) ಯನ್ನು ಉತ್ಪಾದನೆಮಾಡಿರುವನು.

೩೫-೩೬. ಆ ಪಾರ್ವತಿಯನ್ನು ಶಂಕರನು ಅವಶ್ಯವಾಗಿ ಲಗ್ನಮಾಡಿಕೊಳ್ಳುವನು. ಆದಕಾರಣ ಎಲ್ಲೆ ದೇವತೆಗಳಿರಾ ! ಆ ಶಂಕರನು ಪಾರ್ವತಿಯಲ್ಲಿ ಜಾಗ್ರತೆಯಾಗಿ ಅನುರಾಗವನ್ನು ಹೊಂದುವಂತೆ ಉಪಾಯವನ್ನು ಮಾಡಿರಿ. ಆ ಶಂಕರನ ವೀರ್ಯದಿಂದ ಜನಿಸುವ ಕುಮಾರನೇ ನಿಮ್ಮ ಕಷ್ಟವನ್ನು ಹೋಗಲಾಡಿಸುವನು.

೩೭. ಬ್ರಹ್ಮಚರ್ಯದಿಂದಿದ್ದು ತಪಸ್ಸನ್ನು ಆಚರಿಸುತ್ತಾ ತುಂಬಾ ವೀರ್ಯವಂತನಾದ ಆ ಶಂಕರನ ರೇತಸ್ಸನ್ನು ಸ್ಖಲಿಸುವಂತೆ ಮಾಡಲು ಆ ಪಾರ್ವತಿಯೇ ಶಕ್ತಳು. ಇನ್ನಾವ ಸ್ತ್ರೀಯೂ ಆ ಕಾರ್ಯವನ್ನು ಮಾಡಲಾರಳು.

೩೮. ಆ ಶಂಕರನ ವೀರ್ಯವು ಸ್ಖಲಿಸಿ ಅದರಿಂದ ಜನಿಸಿದ ಕುಮಾರನೇ ತಾರಕಾಸುರನನ್ನು ಸಂಹರಿಸುವನು. ಇನ್ನಾವನೂ ಆ ತಾರಕನನ್ನು ಸಂಹರಿಸಲು ಸಾಧ್ಯವಿಲ್ಲವು.

ಸಾ ಸುತಾ ಗಿರಿರಾಜಸ್ಯ ಸಾಂಪ್ರತಂ ರೂಢಯೌವನಾ ।
ತಪಸ್ಯಂತಂ ಗಿರಿಪ್ರಸ್ಥೇ ನಿತ್ಯಂ ಪರ್ಯೇಷತೇ ಹರಂ ॥ ೩೯ ॥

ವಾಕ್ಯಾದ್ಧಿಮವತಃ ಸಾ ತು ಕಾಳೀನಾಮ್ನಾ ನಿಷೇವತೇ ।
ಸಖಿಭ್ಯಾಂ ಸಹ ಸರ್ವಜ್ಞಂ ಧ್ಯಾನಸ್ಥಂ ಪರಮೇಶ್ವರಂ ॥ ೪೦ ॥

ತಾಮಗ್ರತೋ ವರ್ತಮಾನಾಂ ತ್ರಿಲೋಕೇವರವರ್ಣಿನೀಂ ।
ಧ್ಯಾನಾಸಕ್ತೋ ಮಹಾದೇವೋ ಮನಸಾಪಿ ನ ಚೇಚ್ಛತೇ ॥ ೪೧ ॥

ಯಥಾ ಸಮೀಹತೇ ಭಾರ್ಯಾಂ ಕಾಲೀಂ ಸ ಚಂದ್ರಶೇಖರಃ ।
ತಥಾ ಕುರುಧ್ವಂ ತ್ರಿದಶಾ ನ ಚಿರಾದೇವ ಯತ್ನತಃ ॥ ೪೨ ॥

ಸ್ವಸ್ಥಾನಂ ಭವತಾಂ ಸ್ವರ್ಗಸ್ತಸ್ಮಾತ್ತಾರಕಮಸ್ಯಹಂ ।
ನಿವರ್ತಯಿಷ್ಯೇ ಸಂಗಮ್ಯ ಗಚ್ಛಧ್ವಂ ವಿಗತಜ್ವರಾಃ ॥ ೪೩ ॥

---

೩೯. ಹಿಮವಂತನ ಪುತ್ರಿಯಾದ ಪಾರ್ವತಿಯು ಈಗ ಯೌವನಶಾಲಿನಿಯಾಗಿ ಹಿಮಾಲಯದ ಗಂಗಾವತಾರವೆಂಬ ತಪ್ಪಲಲ್ಲಿ ತಪಸ್ಸನ್ನು ಮಾಡುತ್ತಲಿರುವ ಶಂಕರನನ್ನು ಸೇವಿಸುತ್ತಿರುವಳು.

೪೦. ಕಾಳಿ ಎಂಬ ಹೆಸರುಳ್ಳ ಆ ದೇವಿಯು ತಂದೆಯಾದ ಹಿಮವಂತನ ಮಾತಿನಂತೆ ತನ್ನ ಸಖಿಯರಿಬ್ಬರೊಡನೆ ಸರ್ವಜ್ಞನೂ, ಧ್ಯಾನನಿರತನೂ ಆದ ಪರಮೇಶ್ವರನನ್ನು ಸೇವಿಸುತ್ತಿರುವಳು.

೪೧. ಮೂರು ಲೋಕಗಳಲ್ಲಿಯೂ ಅತಿ ಶ್ರೇಷ್ಠಳಾದ ಮತ್ತು ತನ್ನ ಎದುರಿನಲ್ಲಿಯೇ ತನ್ನ ಸೇವೆಯನ್ನು ಮಾಡುತ್ತಿರುವ ಆ ಕಾಳಿಯನ್ನು ಧ್ಯಾನಾಸಕ್ತನಾಗಿರುವ ಆ ಪರಮೇಶ್ವರನು ಮನಸ್ಸಿನಿಂದಲೂ ಸಹ ಇಚ್ಛಿಸುತ್ತಿಲ್ಲವು.

೪೨. ಎಲೈ ದೇವತೆಗಳಿರಾ ! ಆ ಚಂದ್ರಶೇಖರನು ಪಾರ್ವತಿಯನ್ನು ಪತ್ನಿಯನ್ನಾಗಿ ಪರಿಗ್ರಹಿಸುವಂತೆ ಯತ್ನವನ್ನು ಆದಷ್ಟು ಜಾಗ್ರತೆಮಾಡಿರಿ.

೪೩. ನಾನು ತಾರಕನನ್ನು ಕಂಡು ಸ್ವರ್ಗದಿಂದ ಅವನನ್ನು ಹಿಂತಿರುಗಿಸುವೆನು. ಅನಂತರ ಯಾವ ತೊಂದರೆಯೂ ಇಲ್ಲದೆ ನಿಮ್ಮ ಸ್ವಸ್ಥಾನವಾದ ಸ್ವರ್ಗಕ್ಕೆ ನಡೆಯಿರಿ.

ಇತ್ಯುಕ್ತ್ವಾ ಸರ್ವಲೋಕೇಶಸ್ತಾರಕಾಖ್ಯಮುಪಸ್ಥಿತಃ ।
ಉಪಸಂಗಮ್ಯ ವಚನಂ ಸಮಾಭಾಷ್ಯೇದಮಬ್ರವೀತ್ ॥ ೪೪ ॥

ಭೋ ಭೋ ತಾರಕ ಮಾ ಸ್ವರ್ಗರಾಜ್ಯಂ ತ್ವಂ ಪರಿಶಾಧಿ ಭೋಃ ।
ತದರ್ಥಂ ನ ತಪಸ್ತಪ್ತಂ ಸಮಯೇ ಭವತಾ ಪುರಾ ॥ ೪೫ ॥

ವರೋ ನಾಪಿ ಮಯಾ ದತ್ತೋ ನ ಮಯಾ ಸ್ವರ್ಗರಾಜತಾ ।
ತಸ್ಮಾತ್ಸ್ವರ್ಗಂ ಪರಿತ್ಯಜ್ಯ ಕ್ಷಿತೌ ರಾಜ್ಯಂ ಸಮಾಚರ ॥ ೪೬ ॥

ದೇವಭೋಗ್ಯಾನಿ ತತ್ರೈವ ಸಂಭವಿಷ್ಯಂತಿ ತೇಽಸುರ ।
ಇತ್ಯುಕ್ತ್ವಾ ಸರ್ವಲೋಕೇಶಸ್ತತ್ರೈವಾಂತರಧೀಯತ ॥ ೪೭ ॥

ಸ ತಾರಕಃ ಪರಿತ್ಯಜ್ಯ ಸ್ವರ್ಗಂ ಕ್ಷಿತಿಮಥಾಭ್ಯಯಾತ್ ।
ತತ್ರೈವ ಸಂಸ್ಥಿತೋ ದೇವಾನ್ ಬಾಧತೇ ಸ್ಮ ಚ ನಿತ್ಯಶಃ ॥ ೪೮ ॥

---

೪೪. ಈರೀತಿಯಾಗಿ ದೇವತೆಗಳಿಗೆ ಹೇಳಿ ಬ್ರಹ್ಮನು ತಾರಕಾಸುರನ ಬಳಿಗೆ ಬಂದು ಅವನನ್ನು ಕಂಡು ಈರೀತಿಯಾಗಿ ಹೇಳಿದನು.

೪೫. ಎಲೈ ತಾರಕಾಸುರನೇ ! ನೀನು ಸ್ವರ್ಗದವರೆಗೆ ಮಾತ್ರ ರಾಜ್ಯವನ್ನು ಆಳುವವನಾಗು. ಅಲ್ಲಿಂದ ಮುಂದಕ್ಕೆ ಹೋಗಬೇಡ. ಆ ಸ್ವರ್ಗಕ್ಕಾಗಿ ನೀನು ಹಿಂದೆ ತಪಸ್ಸನ್ನು ಆಚರಿಸಲಿಲ್ಲವು.

೪೬. ನೀನು ಸ್ವರ್ಗಕ್ಕೆ ರಾಜನಾಗುವಂತೆ ನಾನೂ ವರವನ್ನು ಕೊಟ್ಟಿಲ್ಲವು. ಆದಕಾರಣ ಈ ಸ್ವರ್ಗವನ್ನು ಬಿಟ್ಟು ಭೂಲೋಕಕ್ಕೆ ಹೋಗಿ ಅಲ್ಲಿ ರಾಜ್ಯವಾಳುತ್ತಾ ಸುಖವಾಗಿರು.

೪೭. ಎಲೈ ಅಸುರನೇ ! ಆ ಭೂಲೋಕದಲ್ಲಿಯೇ ದೇವಲೋಕದ ಸುಖ ವಸ್ತುಗಳೆಲ್ಲವೂ ಲಭಿಸುವವು. ಹೀಗೆಂದು ಹೇಳಿ ಬ್ರಹ್ಮನು ಅಲ್ಲಿಯೇ ಅಂತರ್ಧಾನನಾದನು.

೪೮. ಆನಂತರ ಆ ತಾರಕನು ಸ್ವರ್ಗವನ್ನು ಬಿಟ್ಟು ಭೂಲೋಕಕ್ಕೆ ತೆರಳಿದನು. ಅಲ್ಲಿಯೇ ಇದ್ದುಕೊಂಡು ದೇವತೆಗಳನ್ನು ಬಾಧಿಸುತ್ತಲಿದ್ದನು.

ಇಂದ್ರಂ ಕರಪ್ರದಂ ಚಕ್ರೇ ನಿದೇಶಸ್ಥಂ ಮಹಾಬಲಂ ।
ತಮಿಂದ್ರಃ ಸತತಂ ದೇವಯೋಗ್ಯಾನಿ ವಿತರನ್ಮಹುಃ ॥ ೪೯ ॥

ಸೇವಮಾನೋ ಕ್ಷಮೋ ನಾಭೂತ್ಸಂತೋಷಯಿತುಮೀಶ್ವರಂ ।
ಏವಂ ತೇನಾರ್ದಿತಾ ದೇವಾ ಮನ್ಯುನಾ ಪರಿಪೀಡಿತಾಃ ॥ ೫೦ ॥

ವಿಧಾತುರುಪದೇಶೇನ ಯತ್ನಂ ಚಕ್ರುರ್ಮಹಾನ್ವಯೇ ।
ತತ ಇಂದ್ರೋಽಥ ಗುರುಣಾ ಸಂಗಮ್ಯ ಕೃತನಿಶ್ಚಯಃ ॥ ೫೧ ॥

ಕುಸುಮೇಷುಂ ಸಮಾಹೂಯ ವಚನಂ ಚೇದಮಬ್ರವೀತ್ ।

॥ ಇಂದ್ರ ಉವಾಚ ॥

ತ್ವಯೇದಂ ಪಾಲ್ಯತೇ ವಿಶ್ವಂ ತ್ವಯಾ ವಿಶ್ವಂ ಪ್ರಸೂಯತೇ ॥ ೫೨ ॥

---

೪೯. ಬಲಶಾಲಿಯಾದ ಇಂದ್ರನೂ ಸಹ ತನಗೆ ಕಪ್ಪವನ್ನು ಕೊಡುತ್ತಾ ತನ್ನ ಅಪ್ಪಣೆಯಂತೆ ನಡೆಯುವಹಾಗೆ ಎಂದರೆ ತನ್ನ ಸಾಮಂತರಾಜನನ್ನಾಗಿ ಮಾಡಿ ಕೊಂಡನು. ಅದರಂತೆಯೇ ಆ ಇಂದ್ರನೂ ತಾರಕನಿಗೆ ಸದಾ ದೇವಲೋಕದ ಸುಖ ವಸ್ತುಗಳನ್ನು ಒದಗಿಸಿಕೊಟ್ಟು ಅವನನ್ನು ಸೇವಿಸುತ್ತಲಿದ್ದನು. ಆದರೂ ಒಡೆಯ ನಾದ ಆ ತಾರಕನನ್ನು ಮೆಚ್ಚಿಸಿ ಸಂತೋಷಗೊಳಿಸಲಾರದವನಾದನು.

೫೦. ಹೀಗೆ ಆ ತಾರಕನಿಂದ ಪೀಡಿಸಲ್ಪಟ್ಟು ದೇವತೆಗಳು ತುಂಬಾ ದುಃಖ ಗೊಂಡವರಾಗಿ ಬ್ರಹ್ಮನ ಉಪದೇಶದಂತೆ ಶಂಕರನ ವಿವಾಹಕಾರ್ಯಕ್ಕಾಗಿ ಯತ್ನಿಸ ತೊಡಗಿದರು.

೫೧. ಆಗ ಇಂದ್ರನು ಬೃಹಸ್ಪತಿಯೊಡನೆ ಮುಂತ್ರಾಲೋಚನೆಯನ್ನು ಮಾಡಿ ಮನ್ಮಥನನ್ನು ತನ್ನ ಬಳಿಗೆ ಕರೆಯಿಸಿಕೊಂಡು ಅವನನ್ನು ಕುರಿತು ಹೀಗೆ ಹೇಳಿದನು.

೫೨. ಇಂದ್ರನು ಹೇಳಿದನು :—ಎಲೈ ಮನ್ಮಥನೇ ! ನಿನ್ನ ಕಾರ್ಯದಿಂದಲೇ ಈ ಜಗತ್ತು ಕಾಪಾಡಲ್ಪಡುತ್ತಿದೆ, ನಿನ್ನಿಂದಲೇ ಜನಿಸಲ್ಪಡುತ್ತಿದೆ. ನೀನು ಹಿಂದೆ ಬ್ರಹ್ಮ, ವಿಷ್ಣು, ಮತ್ತು ಶಂಕರ ಇವರು ಮೂವರಿಗೂ ಪ್ರೀತಿಯನ್ನುಂಟುಮಾಡಿರುವೆ.

ತ್ವಂ ಬ್ರಹ್ಮವಿಷ್ಣುರುದ್ರಾಣಾಂ ಪ್ರೀತಿಹೇತುಃ ಪುರಾಭವಃ ।
ಬ್ರಹ್ಮಾ ಪ್ರೀತ್ಯಾ ಯಥಾಪೂರ್ವಮಗೃಣ್ಹಾಚ್ಚರಿತವ್ರತಾಂ ॥ ೫೩ ॥

ಸಾವಿತ್ರೀಂ ಮಾಧವೋ ಲಕ್ಷ್ಮೀಂ ಸತೀಂ ದಾಕ್ಷಾಯಣೀಂ ಹರಃ ।
ತಾಃ ಪ್ರೀತಯೇ ಪುರಾ ತೇಷಾಂ ದೇವೇಶಾನಾಂ ಯಥಾ ಕೃತಾಃ ॥ ೫೪ ॥

ತಥೈವ ಕುರು ಮೇ ಪ್ರೀತಿಂ ಕಾಮ ಪ್ರಾಣಭೃತಾಂ ವರ ।
ನ ತ್ವಂ ನಕಸ್ಯಚಿತ್ಸ್ವರ್ಗೇ ಪಾತಾಳೇವಾಥ ಭೂತಲೇ ॥ ೫೫ ॥

ಪ್ರಿಯಃ ಪ್ರಾಣಭೃತಾಂ ಕಾಮ ಸತತಂ ಜಗತಾಂ ಮತಃ ।
ದೇವದಾನವಯಕ್ಷಾಣಾಂ ರಕ್ಷಸಾಂ ಮಾನುಷಸ್ಯ ಚ ॥ ೫೬ ॥

ತ್ವಂ ಪಾಲಕಶ್ಚ ಕರ್ತಾ ಚ ಹೃದಯೇ ಚ ಪ್ರವರ್ತಸೇ ।
ತಸ್ಮಾತ್ತ್ವಂ ಸರ್ವಜಗತಾಂ ಹಿತಾಯ ಕುರು ಚೇಪ್ಸಿತಂ ॥ ೫೭ ॥

---

೫೩. ಬ್ರಹ್ಮನು ನಿನ್ನಿಂದಲೇ ಸುಶೀಲೆಯಾದ ಸರಸ್ವತಿಯಲ್ಲಿ ಪ್ರೀತಿಯುಳ್ಳವನಾಗಿ ಅವಳನ್ನು ಮದುವೆಯಾದನು. ಅದರಂತೆ ವಿಷ್ಣುವು ಲಕ್ಷ್ಮಿಯನ್ನೂ ಶಂಕರನು ಸತೀದೇವಿಯನ್ನೂ ಮದುವೆಯಾಗಿರುವರು.

೫೪. ಆ ತ್ರಿಮೂರ್ತಿಗಳಿಗೆ ಆ ಸ್ತ್ರೀಯರಲ್ಲಿ ಹೇಗೆ ಪ್ರೀತಿಯನ್ನುಂಟುಮಾಡಿರುವೆಯೋ ಅದರಂತೆ ನನಗೂ ಸಕಲ ಪ್ರಾಣಿಗಳಿಗೂ ಸಂತೋಷವನ್ನುಂಟುಮಾಡು.

೫೫. ಎಲೈ ಮನ್ಮಥನೇ ! ಸ್ವರ್ಗದಲ್ಲಿಯಾಗಲೀ ಪಾತಾಳದಲ್ಲಿಯಾಗಲೀ ಭೂಲೋಕದಲ್ಲಿಯಾಗಲೀ ನಿನ್ನನ್ನು ಅಪೇಕ್ಷಿಸದ ಪ್ರಾಣಿಗಳೇ ಇಲ್ಲವು. ಎಲ್ಲರಿಗೂ ನೀನು ಬೇಕಾದವನು.

೫೬. ಎಲೈ ಮನ್ಮಥನೇ ! ದೇವತೆಗಳು, ದಾನವರು, ಯಕ್ಷರು, ರಾಕ್ಷಸರು, ಮನುಷ್ಯರು, ಇವರೆಲ್ಲರಿಗೂ ನೀನು ರಕ್ಷಕನು. ಇವರನ್ನು ಸೃಷ್ಟಿಸುವವನೂ ನೀನು. ಇವರೆಲ್ಲರ ಹೃದಯದಲ್ಲಿಯೂ ನೀನು ನೆಲಸಿರುವೆ.

೫೭. ಆದಕಾರಣ ನೀನು ಮಹಾತ್ಮರಾದ ದೇವತೆಗಳು, ರಾಕ್ಷಸರು, ಯಕ್ಷರು, ಮನುಷ್ಯರು, ಇವರೆಲ್ಲರ ಮತ್ತು ಸಕಲ ಜಗತ್ತಿನ ಹಿತಕ್ಕಾಗಿ ಒಂದು ಕಾರ್ಯವನ್ನು ಸಾಧಿಸಬೇಕಾಗಿರುತ್ತದೆ.

ದೇವದಾನವಯಕ್ಷಾಣಾಂ ಮಾನುಷಾಣಾಂ ಮಹಾತ್ಮನಾಂ ।

॥ ಮಾರ್ಕಂಡೇಯ ಉವಾಚ ॥

ಏತಚ್ಛ್ರುತ್ವಾ ವಚಸ್ತಸ್ಯ ಶಕ್ರಸ್ಯ ಮಕರಧ್ವಜಃ ॥ ೫೮ ॥

ದೇವರಾಜಮುವಾಚೇದಂ ಸುಪ್ರೀತಸ್ತದ್ವಚೋಮೃತೈಃ ।
ಯತ್ಕಾರ್ಯಮಾಶಿತಾ ಶಕ್ರ ತತ್ಕರ್ಮ ವಿದಿತಂ ತ್ವಯಾ ॥ ೫೯ ॥

ತಸ್ಮಾನ್ಮಮೋಚಿತಂ ಶಕ್ಯಂ ಕರಿಷ್ಯೇ ತನ್ನಿದೇಶಯ ।
ಪಂಚೈವ ಬಾಣಾ ಮೃದವಸ್ತೇಚ ಪುಷ್ಪಮಯಾ ಮನು ॥ ೬೦ ॥

ಚಾಪಸ್ತಥಾ ಪುಷ್ಪಮಯಃ ಸಿಂಜಿನೀ ಭ್ರಮರಾತ್ಮಿಕಾ ।
ರತಿರ್ಭೋದಯಿತಾ ಜಾಯಾ ವಸಂತಃ ಸಚಿವೋ ಮನು ॥ ೬೧ ॥

ಯಂತಾ ಮಲಯಜೋ ವಾಯುರ್ಮಿತ್ರಂ ಮನು ಸುಧಾನಿಧಿಃ ।
ಸೇನಾಧಿಪೋ ಮೇ ಶೃಂಗಾರೋ ಹಾವಭಾವಾಶ್ಚ ಸೈನಿಕಾಃ ॥ ೬೨ ॥

---

೫೮. ಮಾರ್ಕಂಡೇಯನು ಹೇಳಿದನು:—ಇಂದ್ರನು ಹೇಳಿದ ಆ ಅಮೃತದಂತೆ ಇರುವ ಸವಿಮಾತುಗಳನ್ನು ಕೇಳಿ ಮನ್ಮಥನು ತುಂಬಾ ಸಂತುಷ್ಟನಾಗಿ ಇಂದ್ರನನ್ನು ಕುರಿತು ಹೀಗೆ ಹೇಳಿದನು.

೫೯. ಓ ಇಂದ್ರನೇ ! ನಾನು ಯಾವ ಕಾರ್ಯವನ್ನು ಮಾಡಬಲ್ಲೆನೋ ಅದು ನಿನಗೆ ತಿಳಿದೇ ಇರುವುದು. ಆದಕಾರಣ ನನಗೆ ಯೋಗ್ಯವಾದುದೂ, ನಾನು ಮಾಡುವಂತಹುದೂ ಆದ ಕಾರ್ಯವಿದ್ದರೆ ಅದನ್ನು ಬೇಗನೆ ನನಗೆ ತಿಳಿಸು.

೬೦-೬೨. ನನ್ನಲ್ಲಿ ಅತಿ ಮೃದುವಾದ ಐದೇ ಬಾಣಗಳಿರುವುವು. ಅವುಗಳೂ ಪುಷ್ಪಮಯಗಳು. ಧನುಸ್ಸೂ ಮೃದುವಾದ ಪುಷ್ಪಮಯವಾದುದು. ಧನುಸ್ಸಿನ ಹುರಿಯು ಭ್ರಮರಮಯವಾದುದು. ರತಿದೇವಿಯು ನನ್ನನ್ನು ಸಂತೋಷಗೊಳಿಸುವ ಭಾರ್ಯೆಯು, ವಸಂತನು ನನ್ನ ಮಂತ್ರಿಯು, ಮಲಯಪರ್ವತದ ವಾಯುವು ನನ್ನ ಸಾರಥಿಯು, ಚಂದ್ರನು ನನ್ನ ಗೆಳೆಯನು, ಶೃಂಗಾರರಸವು ನನ್ನ ಸೇನಾಪತಿಯು, ಸ್ತ್ರೀಯರ ಹಾವಭಾವಗಳೆಂಬ ಶೃಂಗಾರಚೇಷ್ಟೆಗಳು ನನ್ನ ಸೈನಿಕರು. ಹೀಗೆ ನನ್ನ ಪರಿವಾರಗಳೆಲ್ಲಾ ಕೇವಲ ಮೃದುಸ್ವಭಾವವುಳ್ಳವುಗಳು, ಕ್ರೂರವಾದವುಗಳಲ್ಲ. ನಾನೂ ಸಹ ಪಾಗೆಯೇ ಇರುವೆನು.

ಸರ್ವೇ ಮೇ ಮೃದವೋಽಕ್ರೂರಾ ಅಹಂ ಚಾಪಿ ತಥಾವಿಧಃ ।
ಯದ್ಯೇನ ಯುಜ್ಯತೇ ಕಾರ್ಯೇ ಧೀಮಾಂಸ್ತತ್ತೇನ ಯೋಜಯೇತ್ ॥೬೩॥
ಮಮ ಯೋಗ್ಯಂ ತು ಯತ್ಕರ್ಮ ತಸ್ಮಾತ್ತಸ್ಮಿನ್ನಿಯೋಜಯ ।

॥ ಇಂದ್ರ ಉವಾಚ ॥

ಯತ್ಕಾರಯಿತುಮಿಚ್ಛಾಮಿ ಭವತಾ ತನ್ಮನೋಭವ ॥ ೬೪ ॥
ತತ್ತೇ ಸಮುಚಿತಂ ಕರ್ಮ ತಸ್ಮಿನ್ಪರಿವೃತೋ ಭವಾನ್ ।
ಕೃತಕರ್ಮಾಽಪಿ ತತ್ರ ತ್ವಂ ಕೃತೀ ಚಾಪಿ ಮನೋಭವ ॥ ೬೫ ॥
ತ್ವದನೈಷ್ಠಿಃ ಕಿಂತು ಮಃಸಾಧ್ಯಂ ತತ್ತ್ವಾಂ ತತ್ರ ನಿಯೋಜಯೇ ।
ಶ್ರೂಯತೇ ಹಿ ತಪಸ್ಯಂತಂ ಧ್ಯಾನಸ್ಥಂ ವೃಷಭಧ್ವಜಂ ॥ ೬೬ ॥
ಗಿರೇರ್ಹಿಮವತಃ ಪ್ರಸ್ಥೇ ನಿರಾಕಾಂಕ್ಷಂ ವಧೂಕೃತೌ ।
ತಂ ಪಿತುರ್ವಚನಾತ್ಕಾಳೀ ತಪಸ್ಯಂತಂ ನಿಷೇವತೇ ॥ ೬೭ ॥

---

೬೩. ಯಾವನು ಯಾವ ಕಾರ್ಯವನ್ನು ಮಾಡಬಲ್ಲನೋ ಅವನನ್ನು ಅಂತಹ ಕಾರ್ಯವಲ್ಲಿಯೇ ಬುದ್ಧಿವಂತನಾದವನು ನಿಯಮಿಸಬೇಕು. ಆದಕಾರಣ ನನಗೆ ಯೋಗ್ಯವಾದ ಕಾರ್ಯವನ್ನೇ ನಿಯಮಿಸು.

೬೪. ಇಂದ್ರನು ಹೇಳಿದನು:–ಎಲೈ ಮನ್ಮಥನೇ ! ನಿನ್ನಿಂದ ನಾನು ಮಾಡಿಸಬೇಕೆಂದಿರುವ ಕಾರ್ಯವು ನೀನು ಮಾಡುವಂತಹುದೇ ಆಗಿರುವುದು. ಅಂತಹ ಕಾರ್ಯವನ್ನು ನೀನು ನಿತ್ಯವೂ ಮಾಡುತ್ತಲೇ ಇರುವೆ.

೬೫. ಆ ಕಾರ್ಯವನ್ನು ನೀನು ಹಿಂದೆ ನಿರ್ವಹಿಸಿ ಕೃತಕೃತ್ಯನಾಗಿದ್ದರೂ ಸಹ ಈಗ ನಾನು ಹೇಳುವ ಕಾರ್ಯವು ನಿನ್ನ ಹೊರತು ಬೇರೆ ಯಾರಿಂದಲೂ ಸಾಧ್ಯವಿಲ್ಲವು. ಆದಕಾರಣ ನಿನ್ನನ್ನೇ ಆ ಕಾರ್ಯದಲ್ಲಿ ನಿಯಮಿಸಿರುವೆನು.

೬೬. ಅದೇನೆಂದರೆ, ಹಿಮಾಲಯದ ಒಂದು ತಪ್ಪಲಿನಲ್ಲಿ ಶಂಕರನು ಧ್ಯಾನ ನಿರತನಾಗಿ ಸ್ತ್ರೀಯರ ವಿಷಯದಲ್ಲಿ ಆಸಕ್ತಿಯೇ ಇಲ್ಲದೆ ತಪಸ್ಸನ್ನು ಆಚರಿಸುತ್ತಲಿರುವನೆಂದು ಕೇಳಿರುವೆನು.

೬೭. ಹೀಗೆ ತಪಸ್ಸನ್ನಾಚರಿಸುತ್ತಲಿರುವ ಆ ಶಂಕರನನ್ನು ಈಗ ಪಾರ್ವತಿಯು ತನ್ನ ತಂದೆಯಾದ ಹಿಮವಂತನ ಮಾತಿನಂತೆಯೂ, ಆ ಶಂಕರನ ಅನುಮತಿಯಿಂದಲೂ, ಅವನನ್ನು ನಿತ್ಯವೂ ಸಖಿಯರೊಡನೆ ಸೇವಿಸುತ್ತಿರುವಳು.

ಸಖಿಭ್ಯಾಂ ಸಹಿತಾ ನಿತ್ಯಂ ಹರಸ್ಯಾನುಮತೇಽಧುನಾ ।
ಆರೂಢಯೌವನಾಂ ತಾಂ ತು ಸ್ತ್ರೀರತ್ನಮಪಿ ಸುಂದರೀಂ ॥ ೬೮ ॥

ಧ್ಯಾನಾಸಕ್ತೋ ಮಹಾದೇವೋ ನೇಹತೇ ಮನಸಾಪಿ ಚ ।
ಸಾನುರಾಗೋ ಯಥಾ ತಸ್ಯಾಂ ಜಾಯತೇ ವೃಷಭಧ್ವಜಃ ॥ ೬೯ ॥

ತಥಾ ವಿಧತ್ಸ್ವ ದೇವಾನಾಂ ಹಿತಾಯ ಜಗತಾಮಪಿ ।
ಸಹ ಸತ್ಯಾ ಯಥಾ ದೇವೋ ಸಾನುರಾಗೋ ವೃಷಧ್ವಜಃ ॥ ೭೦ ॥

ತಥೈತಯಾ ಗಿರಿಜಯಾ ರಮತಾಂ ತತ್ಕೃತೇನ ವೈ ।
ತಸ್ಯಾಃ ಕೃತೇ ತು ಯತ್ತೇಜಃ ಪ್ರಚ್ಯುತಂ ಸ್ಯಾದ್ಧರಸ್ಯವೈ ॥ ೭೧ ॥

ತತೋ ಯೋ ಜಾಯತೇ ಸ್ಯೋಽಸ್ಮಾನ್ತಾರಕಾದುದ್ಧರಿಷ್ಯತಿ ।

॥ ಮಾರ್ಕಂಡೇಯ ಉವಾಚ ॥

ತತಃ ಸ ದೇವರಾಜಸ್ಯ ವಚಃ ಶ್ರುತ್ವಾ ಮನೋಭವಃ ॥ ೭೨ ॥

---

೬೮. ನವಯೌವನಸಂಪನ್ನಳೂ, ಉತ್ತಮ ಸ್ತ್ರೀಯೂ, ಸುಂದರಿಯೂ ಆಗಿದ್ದರೂ ಆ ಕಾಳಿಯನ್ನು ಧ್ಯಾನನಿರತನಾದ ಮಹಾದೇವನು ಮನಸ್ಸಿನಲ್ಲಿಯೂ ಸ್ಮರಿಸುತ್ತಿಲ್ಲವು.

೬೯. ದೇವತೆಗಳಿಗೂ ಮತ್ತು ಜಗತ್ತಿಗೂ ಕ್ಷೇಮಕ್ಕಾಗಿ ಆ ಪಾರ್ವತಿಯಲ್ಲಿ ಶಂಕರನು ಅನುರಾಗವುಳ್ಳವನಾಗುವಂತೆ ನೀನು ಮಾಡುವವನಾಗು.

೭೦. ಹಿಂದೆ ಆ ಶಂಕರನು ಸತೀದೇವಿಯೊಡನೆ ಅನುರಾಗದಿಂದ ವಿಹರಿಸಿದಂತೆ ಈಗಲೂ ಆ ಪಾರ್ವತಿಯೊಡನೆ ವಿಹರಿಸುವಂತೆ ಮಾಡುವವನಾಗು.

೭೧. ಆ ಪಾರ್ವತಿಯ ನಿಮಿತ್ತವಾಗಿ ಶಂಕರನ ವೀರ್ಯವು ಸ್ಖಲಿಸಿದುದೇ ಆದರೆ ಆ ವೀರ್ಯದಿಂದ ಜನಿಸಿದ ಕುಮಾರನು ನಮ್ಮನ್ನು ತಾರಕಾಸುರನ ಬಾಧೆಯಿಂದ ರಕ್ಷಿಸುವನು.

೭೨. ಮಾರ್ಕಂಡೇಯನು ಹೇಳಿದನು:—ಅನಂತರ ಆ ಮನ್ಮಥನು ಮೇಲೆ ಹೇಳಿದ ಇಂದ್ರನ ಮಾತುಗಳನ್ನು ಕೇಳಿ ತನಗೆ ಹಿಂದೆ ಬ್ರಹ್ಮನು ಕೊಟ್ಟಿದ್ದ ಶಾಪವು ಫಲಿಸುವ ಸಮಯವು ಬಂದಿತೆಂದು ಹಿಂದೆ ನಡೆದ ವಿಷಯವನ್ನು ಸ್ಮರಿಸಿಕೊಂಡನು.

ಪ್ರಾಪ್ತಕಾಲಂ ಚ ಸಸ್ಮಾರ ಶಾಪಂ ಬ್ರಹ್ಮಕೃತಂ ಪುರಾ ।
ಸಂಧ್ಯಾಂ ಪ್ರತಿ ವಿಧಾತಾರಂ ಯದಾ ಶಸ್ತ್ರಂ ಪರೀಕ್ಷಿತುಂ ॥ ೭೩ ॥

ಕಾಮೋಽಹನತ್ಪುಷ್ಪಬಾಣೈಸ್ತದಾ ತಮುಶಪದ್ವಿಧಿಃ ।
ಶಂಭುನೇತ್ರಾಗ್ನಿದಗ್ಧಸ್ತ್ವಂ ಭವಿಷ್ಯಸಿ ದ್ವಿಜೋತ್ತಮಾಃ ॥ ೭೪ ॥

ಯದಾ ಕುರ್ಯಾದ್ಗಿರಿಸುತಾಂ ಹರಃ ಪಾಣಿಗ್ರಹೀತಿಕಾಂ ।
ತದಾ ಭವಾನ್ ಶರೀರೇಣ ಗಮಿಷ್ಯತಿ ಸಮುಗ್ರತಾಂ ॥ ೭೫ ॥

ಇತಿ ಸ್ಮೃತ್ವಾ ವಿಧೇಃ ಶಾಪಂ ಭೀತೋಽಪಿ ಮಕರಧ್ವಜಃ ।
ಅಂಗೀಚಕ್ರೇ ಶಕ್ರವಾಕ್ಯಾತ್ತಾಲ್ಯಾ ಯೋಜಯಿತುಂ ಹರಂ ॥ ೭೬ ॥

ಇದಂ ಚ ವಚನಂ ಪ್ರೋಚೇ ತತ್ಕಾಲಸದೃಶಂ ಪುನಃ ।

॥ ಮದನ ಉವಾಚ ॥

ಕರಿಷ್ಯೇ ತ್ವದ್ವಚಃ ಶಕ್ರ ಹರಂ ಸಂಗಮಯಾಮ್ಯಹಂ ॥ ೭೭ ॥

೭೩—೭೫. ಅದೇನೆಂದರೆ:— ಹಿಂದೆ ಸೃಷ್ಟಿಯ ಆದಿಯಲ್ಲಿ ಮನ್ಮಥನು ತನ್ನ ಆಯುಧಗಳನ್ನು ಪರೀಕ್ಷಿಸಲೋಸುಗ ಬ್ರಹ್ಮನು ಸಂಧ್ಯಾದೇವಿಯಲ್ಲಿ ಕಾಮವಿಕಾರ ವುಳ್ಳವನಾಗುವಂತೆ ಅವನನ್ನು ತನ್ನ ಪುಷ್ಪಬಾಣಗಳಿಂದ ಪ್ರಹರಿಸಿದನು. ಅದರಿಂದ ಕೋಪಗೊಂಡು ಬ್ರಹ್ಮನು ಮನ್ಮಥನನ್ನು ಕುರಿತು, ಎಲೈ ಮನ್ಮಥನೇ! ನೀನು ಶಂಕರನ ತೃತೀಯ ನೇತ್ರದ ಅಗ್ನಿಯಿಂದ ಸುಟ್ಟುಹೋಗುವೆ. ಮುಂದೆ ಆ ಶಂಕರನು ಪಾರ್ವತಿಯನ್ನು ಮದುವೆಯಾದಮೇಲೆ ನಿನಗೆ ಪುನಃ ನಿನ್ನ ಶರೀರವು ಪ್ರಾಪ್ತವಾಗು ವುದು ಎಂದು ಶಪಿಸಿದನು.

೭೬. ಈರೀತಿಯಾಗಿ ಬ್ರಹ್ಮನ ಶಾಪವನ್ನು ಸ್ಮರಿಸಿಕೊಂಡು ಹೆದರಿದರೂ ಮನ್ಮಥನು ಶಂಕರನು ಪಾರ್ವತಿಯಲ್ಲಿ ಅನುರಕ್ತನಾಗುವಂತೆ ಯತ್ನಿಸಲು ಅಂಗೀ ಕರಿಸಿ ಸಮಯೋಚಿತವಾದ ಈ ಮಾತನ್ನಾಡಿದನು.

೭೭. ಮನ್ಮಥನು ಹೇಳಿದನು:— ಓ ಇಂದ್ರನೇ! ನಿನ್ನ ಮಾತನ್ನು ನಡೆಸು ವೆನು. ಹಿಂದೆ ಸತೀದೇವಿಯನ್ನು ಶಂಕರನೊಡನೆ ಸೇರಿಸಿದಂತೆ ಈಗಲೂ ಪರ್ವತ ಪುತ್ರಿಯಾದ ಕಾಳಿಯನ್ನು ಶಂಕರನೊಡನೆ ಸೇರಿಸುವೆನು.

ಕಾಲ್ಯಾ ಗಿರಿಜಯಾ ಸಾರ್ಧಂ ದಾಕ್ಷಾಯಣ್ಯಾ ಯಥಾ ಪುರಾ ।
ಕಿಂತ್ವೇಕಂ ಮನು ಸಾಹಾಯ್ಯಂ ಕರ್ತಾ ತ್ವಂ ಹರಮೋಹನೇ ॥ ೭೮ ॥

ಯದಾ ಸಂಮೋಹನೇನಾಹಂ ಹರಂ ಸಮ್ಮೋಹಯಾಮಿ ಚ ।
ತದಾ ಕುರು ಸಹಾಯಂ ತ್ವಂ ಸ್ವಸ್ಥಮಾಸ್ಯಾಯಯಸ್ವ ಮಾಂ ॥ ೭೯ ॥

ಪ್ರವಿಶ್ಯಾಹಂ ಸುರಭಿಣಾ ನ ಚಿರಾಚ್ಛಂಕರಾಶ್ರಮಂ ।
ವಿಧಾಯ ಪೂರ್ವಂ ಮನಸೋ ವಿಕಾರಂ ಹರ್ಷಣೇನ ತು ॥ ೮೦ ॥

ಸಮ್ಮೋಹನೇನ ಸುಧೃಢಂ ಮೋಹಯಿಷ್ಯೇ ವೃಷಧ್ವಜಂ ।
ಸ್ಮರಿಷ್ಯಸಿ ತ್ವಂ ಸಂಪ್ರಾಪ್ತೇ ಕಾಲೇ ಮಾಂ ಪರಿಪಾಲನೇ ॥ ೮೧ ॥

ಅಹಂ ಗಚ್ಛಾಮಿ ಸಹಿತಂ ತತ್ಕರ್ತುಂ ಬಲಸೂದನ ।

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ಸ ಜಗಾಮಾಥ ಮದನಃ ಶಂಕರಾಶ್ರಮಂ ॥ ೮೨ ॥

೭೮-೭೯. ಆದರೆ ನಾನು ಶಂಕರನನ್ನು ಮೋಹಗೊಳಿಸುವಾಗ ನೀನೊಂದು ಸಹಾಯವನ್ನು ಮಾಡಬೇಕು. ಅದೇನೆಂದರೆ, ನಾನು ಸಮ್ಮೋಹನವೆಂಬ ನನ್ನ ಬಾಣದಿಂದ ಆ ಶಂಕರನನ್ನು ಮೋಹಗೊಳಿಸುವಾಗ ನನಗೆ ಮನಸ್ಸು ಸಮಾಧಾನ ವಾಗಿರುವಂತೆ ಸಹಾಯಮಾಡಿ ನನ್ನನ್ನು ರಕ್ಷಿಸು.

೮೦. ಸ್ವಲ್ಪದಿವಸಗಳಲ್ಲಿಯೇ ನಾನು ವಸಂತನೊಡನೆ ಶಂಕರನ ಆಶ್ರಮವನ್ನು ಪ್ರವೇಶಿಸಿ ಮೊದಲು ಹರ್ಷಣವೆಂಬ ಬಾಣದಿಂದ ಆ ಶಂಕರನ ಮನಸ್ಸನ್ನು ವಿಕಾರ ಗೊಳಿಸಿ ಅನಂತರ ಮೋಹನವೆಂಬ ಬಾಣದಿಂದ ಚನ್ನಾಗಿ ಮೋಹಗೊಳಿಸುವೆನು.

೮೧. ಅಂತಹ ಅಪಾಯಕಾಲವು ಬಂದೊದಗಿದಾಗ ನಿನ್ನನ್ನು ಸ್ಮರಿಸುವೆನು. ಆಗ ನೀನು ನನ್ನನ್ನು ರಕ್ಷಿಸಬೇಕು ಓ ಇಂದ್ರನೇ ! ಈಗ ನಾನು ನನ್ನ ಪರಿವಾರ ದೊಡನೆ ಆ ಕಾರ್ಯವನ್ನು ಸಾಧಿಸಲು ಹೋಗುವೆನು.

೮೨-೮೩. ಮಾರ್ಕಂಡೇಯನು ಹೇಳಿದನು :—ಹೀಗೆ ಹೇಳಿ ಆ ಮನ್ಮಥನು ಶಂಕರನ ಆಶ್ರಮಕ್ಕೆ ಹೋದನು. ಇಂದ್ರನು ದೇವತೆಗಳನ್ನೆಲ್ಲಾ ಕುರಿತು, ಎಲ್ಲೆ ದೇವತೆಗಳಿರಾ ! ಮನ್ಮಥನು ಶಂಕರನನ್ನು ಮೋಹಗೊಳಿಸುವುದಕ್ಕೆ ಎಲ್ಲೆಲ್ಲಿ ಹೋಗು

ಶಕ್ರೋಽಪಿ ತ್ರಿದಶಾನ್ಸರ್ವಾನಿದಮಾಹ ವಚಸ್ತದಾ ।
ಯೂಯಂ ಕುರುಧ್ವಂ ಸಾಹಾಯ್ಯಂ ಯತ್ರ ಯಾತಿ ಮನೋಭವಃ ॥ ೮೩ ॥

ತತ್ರ ತತ್ರಾನುಗಮ್ಯೈವ ಸಮಯೇ ಮಾಂ ಚ ಬೋಧತ ।
ಯದಾ ಸಮ್ಮೋಹನೇನಾಯಂ ಸಮ್ಮೋಹಯತಿ ಶಂಕರಂ ॥ ೮೪ ॥

ತದಾಽಹಮಪಿ ಯಾಸ್ಯಾಮಿ ತತ್ರ ಬೋಧತ ಮಾಂ ಸುರಾಃ ।
ಇತ್ಯುಕ್ತಾಸ್ತೇನ ಶಕ್ರೇಣ ದೇವಾ ಜಗ್ಮುರ್ಮನೋಭವಂ ॥ ೮೫ ॥

ಸೋಽಪಿಗತ್ವಾ ಯತ್ರ ಹರೋ ಗಂಗಾವತರಣೇ ಗಿರೇಃ ।
ಹಿಮಭಾರಭೃತಃ ಸಾನೌ ಸುರಭಿಂ ಚ ನ್ಯಯೋಜಯತ್ ॥ ೮೬ ॥

ತತಸ್ತತ್ರ ಗತೇ ಸದ್ಯಃ ಕ್ಷುರಭೌ ತಸ್ಯ ಲಕ್ಷಣಂ ।
ಅಭವನ್ನ ಚಿರಾದೇವ ತರುಗುಲ್ಮಲತಾದಿಷು ॥ ೮೭ ॥

ಪುಷ್ಪಿತಾಃ ಕಿಂಶುಕಾಸ್ತತ್ರ ಮಂಜುಲಾಃ ಕೇತಕಾಸ್ತಥಾ ।
ಸರಾಂಸಿ ಚ ಸಪದ್ಮಾನಿ ಸವಿಕಾರಾಶ್ಚ ಜಂತವಃ ॥ ೮೮ ॥

ವನೋ ಅಲ್ಲಲ್ಲಿಗೆ ನೀವುಗಳು ಅವನೊಡನೆ ಹೋಗಿ ಆ ಮನ್ಮಥನಿಗೆ ಸಹಾಯವನ್ನು ಮಾಡಿರಿ. ಸರಿಯಾದ ಸಮಯದಲ್ಲಿ ನನ್ನನ್ನು ಎಚ್ಚರಿಸಿರಿ.

೮೫. ಮನ್ಮಥನು ಸಮ್ಮೋಹನವೆಂಬ ಅಸ್ತ್ರದಿಂದ ಶಂಕರನನ್ನು ಮೋಹಗೊಳಿಸುವಾಗ ನಾನೂ ಅವನಲ್ಲಿಗೆ ಬರುವೆನು. ಎಲ್ಲಿ ದೇವತೆಗಳಿರಾ! ಆಗ ನನಗೆ ತಿಳಿಸುವವರಾಗಿರಿ.

೮೬-೮೬. ಹೀಗೆ ಇಂದ್ರನು ಹೇಳಲು ದೇವತೆಗಳು ಆಗ ಮನ್ಮಥನ ಬಳಿಗೆ ನಡೆದರು. ಆ ಮನ್ಮಥನೂ ಸಹ ಹಿಮವತ್ಪರ್ವತದ ಗಂಗಾವತರಣವೆಂಬ ಸಾನುವಿನಲ್ಲಿ ಇರುವ ಶಂಕರನ ಆಶ್ರಮಕ್ಕೆ ತೆರಳಿದನು. ವಸಂತಕಾಲವು ಪ್ರಾಪ್ತವಾಗಿ ಆ ಪ್ರದೇಶವು ಮನೋಹರವಾಗಿ ಕಾಣುವಂತೆ ಮಾಡಲು ವಸಂತನನ್ನು ನಿಯಮಿಸಿದನು.

೮೭-೮೮. ಆಗ ಅಲ್ಲಿ ವಸಂತನು ತನ್ನ ಕಾರ್ಯವನ್ನು ಚೆನ್ನಾಗಿ ಮಾಡಲು ಸ್ವಲ್ಪ ಕಾಲದಲ್ಲಿಯೇ ಅಲ್ಲಿದ್ದ ಮರ, ಹೊದೆ, ಬಳ್ಳಿ, ಮುಂತಾದುವುಗಳು ಚಿಗುರಿ ವಸಂತ ಋತುವು ಪ್ರಕಾಶಿಸಿತು. ಆ ತಪ್ಪಲಲ್ಲಿ ಮುತ್ತುಗದ ಮರಗಳು ಹೂವುಗಳನ್ನು ಬಿಟ್ಟುವು.

ವವೌ ವಾಯುಶ್ಚ ಗಂಭೀರೋ ಗಂಧಿಲಃ ಪುಷ್ಪರೇಣುಭಿಃ ।
ಶನೈಃ ಶನೈ ಸುಖಕರಃ ಕರ್ಷಯನ್ ಸ ಹಿ ಮಾನಸಂ ॥ ೮೯ ॥

ಪಕ್ಷಿಣಶ್ಚ ಮೃಗಾಶ್ಚೈವ ಯೇ ಚಾನ್ಯೇ ಪ್ರಾಣಧಾರಿಣಃ ।
ಸಿದ್ಧಾಶ್ಚ ಕಿನ್ನರಾಶ್ಚೈವ ದ್ವಂದ್ವಭಾವಂ ವಿತೇನಿರೇ ॥ ೯೦ ॥

ಚೂತಾಃ ಕುಸುಮಿತಾಸ್ತತ್ರ ನವಸ್ತಬಕಭೂಷಿತಾಃ ।
ಅಶೋಕಾಃ ಪಾಟಲಾಶ್ಚೈವ ನಾಗಕೇಸರಕಾರುಣಾಃ ॥ ೯೧ ॥

ಸವಿಕಾರಾ ಗಣಾಶ್ಚಾಸನ್ ಶಂಕರಸ್ಯ ತದಾ ದ್ವಿಜಾಃ ।
ಪ್ರತ್ಯಕ್ಷತೋ ಯಯುಸ್ತೇಽಪಿ ವಿಕಾರಂ ಶಂಭುಸಾಧ್ವಸಾತ್ ॥ ೯೨ ॥

ಮನೋಹರವಾದ ಕೇದಗಿಗಳೂ ಅರಳಿದವು. ಸರೋವರಗಳಲ್ಲಿ ಕಮಲಗಳು ಅರಳಿದವು. ಪ್ರಾಣಿಗಳೆಲ್ಲಾ ಒಂದು ಬಗೆಯ ಕಾಮವಿಕಾರವುಳ್ಳವುಗಳಾದವು. ಗಾಳಿಯೂ ಸಹ ಹೂವುಗಳ ಧೂಳಿನಿಂದ ಸುವಾಸನೆಯುಳ್ಳದ್ದಾಗಿ ಕಾಮಿಗಳ ಮನಸ್ಸನ್ನು ಎಳೆಯುತ್ತಾ ಮೆಲ್ಲಮೆಲ್ಲನೆ ಸುಖವಾಗುವಂತೆ ಬೀಸಿತು.

೯೦. ಹಕ್ಕಿಗಳೂ, ಮೃಗಗಳೂ, ಮಿಕ್ಕ ಪ್ರಾಣಿಗಳೂ, ಸಿದ್ಧರು, ಕಿನ್ನರರು ಇವರೆಲ್ಲರೂ ದ್ವಂದ್ವಭಾವ ಎಂದರೆ ಸತೀಪತಿಗಳಿಗಿರುವ ಶೃಂಗಾರಭಾವವನ್ನು ಹೊಂದಿದರು.

೯೧. ಮಾವಿನ ಮರಗಳು ಅರಳಿದ ಹೂವುಗಳಿಂದಲೂ, ಹೊಸದಾದ ಗೊಂಚಲುಗಳಿಂದಲೂ ಕಂಗೊಳಿಸಿದವು. ಅಶೋಕವೃಕ್ಷ, ಹಸುರು ಪಾದರಿಮರ, ನಾಗಕೇಸರವೃಕ್ಷ, ಕರುಣವೃಕ್ಷ ಇವೇ ಮೊದಲಾದ ವೃಕ್ಷಗಳೂ ಚಿಗುರು, ಹುವ್ವು ಇವುಗಳಿಂದ ಮನೋಹರವಾಗಿ ಕಾಣಿಸಿದವು.

೯೨. ಎಲೈ ಬ್ರಾಹ್ಮಣರೇ! ಶಂಕರನ ಪ್ರಮಥಗಣಗಳೂ ಸಹ ಆಗ ಮನ್ಮಥ ವಿಕಾರವುಳ್ಳವುಗಳಾದುವು. ಆದರೆ ಶಂಕರನ ಭಯದಿಂದ ಪ್ರತ್ಯಕ್ಷವಾಗಿ ಆ ವಿಕಾರವನ್ನು ತೋರ್ಪಡಿಸಲಿಲ್ಲ.

ಭ್ರಮಂತಿ ಸ್ಮ ತದಾ ತತ್ರ ಭ್ರಮರಾಃ ಕುಸುಮೋದ್ಭವಂ ।
ಪಿಬಂತೋ ಬಹುಶಶ್ಚೂತಂ ಗುಂಜಂತಃ ಸಹ ಜಾಯಯಾ ॥ ೯೩ ॥

ಏವಂ ಪ್ರವೃತ್ತೇ ಸುರಭೌ ಶೃಂಗಾರೋಽಪಿ ಗಣೈಃ ಸಹ ।
ಹಾವಭಾವಯುತಸ್ತತ್ರ ಪ್ರವಿವೇಶ ಹರಾಂತಿಕಂ ॥ ೯೪ ॥

ಮದನಃ ಸಗಣಸ್ತತ್ರ ನಿವಸಂಶ್ಚಿರಮೇವ ಹಿ ।
ನ ದೃಷ್ಟವಾಂಸ್ತದಾ ಶಂಭೋಶ್ಛಿದ್ರಂ ಯೇನ ಪ್ರವೇಕ್ಷ್ಯತಿ ॥ ೯೫ ॥

ಯದಾ ಚ ಪ್ರಾಪ್ತವಿವರಸ್ತದಾ ಭಯವಿಮೋಹಿತಃ ।
ನಾಗ್ರೇಸರೋಭವತ್ತಸ್ಯ ಮದನೋ ರತಿವಾರಿತಃ ॥ ೯೬ ॥

ಏವಂ ಯಾತಸ್ತಸ್ಯಕಾಲಃ ಪ್ರಭೂತೋ ದ್ವಿಜಸತ್ತಮಾಃ ।
ನಿರೂಪಯನ್ನವಾ ಚಾಪ ಛಿದ್ರಂ ತಸ್ಯ ಯತೇಸ್ತದಾ ॥ ೯೭ ॥

---

೯೩. ದುಂಬಿಗಳೂ ಸಹ ಧ್ವನಿಗೈಯ್ಯುತ್ತಾ, ಹೆಣ್ಣುದುಂಬಿಗಳೊಡನೆ ಮಾವಿನ ಮರವನ್ನು ಮುತ್ತಿ ಪುಷ್ಪರಸವನ್ನು ಪಾನಮಾಡುತ್ತಾ ವಿಹರಿಸುತ್ತಿದ್ದವು.

೯೪. ಹೀಗೆ ಎಲ್ಲೆಡೆಯಲ್ಲೂ ವಸಂತ ಋತುವು ವ್ಯಾಪಿಸಲು. ಶೃಂಗಾರರಸವೂ ಸಹ ತನ್ನ ಪರಿವಾರಯುಕ್ತವಾಗಿ ಹಾವಭಾವಗಳೊಡನೆ ಶಂಕರನ ಸಮೀಪವನ್ನೈ ದಿತು.

೯೫. ಮನ್ಮಥನು ಶಂಕರನ ಆಶ್ರಮದಲ್ಲಿ ಬಹಳ ಕಾಲವಿದ್ದರೂ, ಶಂಕರನನ್ನು ವಿಕಾರಗೊಳಿಸುವಂತಹ ಅವಕಾಶವನ್ನೇ ಕಾಣಲಿಲ್ಲ.

೯೬. ಸ್ವಲ್ಪ ಅವಕಾಶವು ಸಿಕ್ಕಿದಾಗಲೂ, ತುಂಬಾ ಭಯಗೊಂಡನಾಗಿ ರತೀ ದೇವಿಯಿಂದ ತಡೆಯಲ್ಪಟ್ಟು, ಆ ಶಂಕರನೆದುರೇ ಬರಲಾರದವನಾದನು.

೯೭. ಎಲೈ ಬ್ರಾಹ್ಮಣೋತ್ತಮರೇ! ಹೀಗೆ ಆ ಮನ್ಮಥನು ಅವಕಾಶವನ್ನು ನಿರೀಕ್ಷಿಸುತ್ತಿರಲು. ಬಹಳ ಕಾಲವು ಕಳೆಯಿತು. ಆದರೂ ಅವನಿಗೆ ಜಿತೇಂದ್ರಿಯನಾದ ಶಂಕರನನ್ನು ಮೋಹಗೊಳಿಸಲು ಅವಕಾಶವೇ ಸಿಗಲಿಲ್ಲವು.

ಜ್ವಲತ್ಕಾಲಾಗ್ನಿ ಸಂಕಾಶಂ ಭಾನುಲಕ್ಷಸಮಪ್ರಭಂ ।
ಧ್ಯಾನಸ್ಥಂ ಶಂಕರಂ ಕೋ ವಾ ಸಮಾಸಾದಯಿತುಂ ಕ್ಷಮಃ ॥ ೯೮ ॥

ಅಥೈಕದಾ ಗಿರಿಸುತಾ ಕಾಲೀ ತಸ್ಯಾಽಭವತ್ಪುರಾ ।
ಕೃತ್ವಾ ಪರೀಷ್ಟಿಂ ಕರ್ತವ್ಯಾಂ ಸಖಿಭ್ಯಾಂ ಪ್ರಣತಾ ಸ್ಥಿತಾ ॥ ೯೯ ॥

ಶಂಕರೋಽಪಿ ತದಾ ಧ್ಯಾನಂ ತ್ಯಕ್ತ್ವಾ ಕ್ಷಣಮುಥಾಸ್ಥಿತಃ ।
ಯೋಜಯನ್ಸ್ವಗಣಾನ್ಕೃತ್ಯೇ ಜ್ಯೋತಿಶ್ಚಿಂತಾವಿವರ್ಜಿತಃ ॥ ೧೦೦ ॥

ತಚ್ಛಿದ್ರಂ ಪ್ರಾಪ್ಯ ಮದನಃ ಪ್ರಥಮಂ ಹರ್ಷಣೇನ ತು ।
ಬಾಣೇನ ಹರ್ಷಯಾಮಾಸ ಪಾರ್ಶ್ವಸ್ಥಂ ಚಂದ್ರಶೇಖರಂ ॥ ೧೦೧ ॥

ಹರ್ಷಣೇನಾತಿಹೃಷಿತಃ ಶಂಗಾರಾದ್ಯೈರ್ನಿಷೇವಿತಃ ।
ಶಂಕರೋ ವದನಂ ಕಾಲ್ಯಾಃ ಸಾಕೂತಂ ಸಂ ವ್ಯಲೋಕಯತ್ ॥ ೧೦೨ ॥

---

೯೮. ಉರಿಯುತ್ತಿರುವ ಪ್ರಳಯಾಗ್ನಿಯಂತೆ ಪ್ರಕಾಶಿಸುವವನೂ, ಲಕ್ಷ ಸೂರ್ಯರಷ್ಟು ತೇಜಸ್ವಿಯೂ, ಧ್ಯಾನ ನಿರತನೂ, ಆದ ಶಂಕರನನ್ನು ಯಾವನು ತಾನೇ ವಶೀಕರಿಸಲು ಸಮರ್ಥನು?

೯೯. ಆಮೇಲೊಂದುದಿನ ಪಾರ್ವತಿಯು ಬಂದು ಶಂಕರನಿಗೆ ಮಾಡಬೇಕಾದ ಸೇವೆಯನ್ನು ಸಖಿಯರೊಡನೆ ಮಾಡಿ, ಭಕ್ತಿಯಿಂದ ಶಿರಸ್ಸನ್ನು ಬಗ್ಗಿಸಿ ಆ ಶಂಕರನ ಎದುರಿಗೆ ನಿಂತಿದ್ದಳು.

೧೦೦. ಆಗ ಶಂಕರನೂ ಸಹ ಸ್ವಲ್ಪ ಹೊತ್ತು ಧ್ಯಾನವನ್ನು ಬಿಟ್ಟು ತನ್ನ ಗಣಗಳನ್ನು ಆಯಾಯ ಕಾರ್ಯದಲ್ಲಿ ನಿಯಮಿಸುತ್ತಾ, ಪರಬ್ರಹ್ಮಚಿಂತೆಯಿಲ್ಲದೆ ಬಹಿರ್ಮುಖನಾಗಿದ್ದನು.

೧೦೧. ಆಗ ಈ ಅವಕಾಶವನ್ನು ಉಪಯೋಗಿಸಿಕೊಂಡು ಮನ್ಮಥನು ಬಂದು ಪಕ್ಕದಲ್ಲಿ ನಿಂತು, ಮೊದಲು ಶಂಕರನನ್ನು ಹರ್ಷಣವೆಂಬ ಬಾಣವನ್ನು ಪ್ರಯೋಗಿಸಿ ಹರ್ಷಗೊಳಿಸಿದನು.

೧೦೨. ಹೀಗೆ ತುಂಬಾ ಹರ್ಷಗೊಂಡು ಶೃಂಗಾರವೇ ಮೊದಲಾದುವು ಭಾವಗಳಿಂದ ಸೇವಿತನಾಗಿ, ಶಂಕರನು ಪಾರ್ವತಿಯ ಮುಖವನ್ನು ಸಾಭಿಪ್ರಾಯವಾಗಿ ನೋಡಿದನು.

ತತ್ಪ್ರಾಪ್ಯ ವಿವರಂ ಕಾಮಃ ಪುಷ್ಪಚಾಪೇ ನ್ಯಯೋಜಯತ್ ।
ಸಮ್ಮೋಹನಂ ಪುಷ್ಪಮಯಂ ಪುಷ್ಪಮಾಲಾವಿವರ್ಧಕಂ ॥ ೧೦೩ ॥

ತದಾಭೂದ್ದಕ್ಷಿಣೇ ಪಾರ್ಶ್ವೇ ರತಿಃ ಪ್ರೀತಿಸ್ತು ವಾಮತಃ ।
ಪೃಷ್ಠೇ ವಸಂತಸ್ತೂಣೀರಂ ಪುಷ್ಪಮಾದಾಯ ಸುಂದರಃ ॥ ೧೦೪ ॥

ಆಕರ್ಣಪೂರಿತಂ ಪುಷ್ಪಂ ಚಾಪಮಾಕೃಷ್ಯ ಸಂಯುತಃ ।
ಯದಾ ಮನೋಭವೋ ವಾಯುಸ್ತದಾ ತಂ ಸಮುಪೇಯಿವಾನ್ ॥ ೧೦೫ ॥

ಸಹಿತೇ ಪುಷ್ಪಬಾಣೇ ತು ಗಿರಿಜಾಂ ಚಂದ್ರಶೇಖರಃ ।
ಜಾತೇಂದ್ರಿಯವಿಕಾರಃ ಸಂಜಿಘೃಕ್ಷುಃ ಸಂಗಮೇಽಭವತ್ ॥ ೧೦೬ ॥

ಅಮರಾಃ ಶಕ್ರಸಹಿತಾಸ್ತದಾ ಸರ್ವೇ ವಿಯದ್ಗತಾಃ ।
ಸಮ್ಯಜ್ಞಾನೋಭವಂ ಮೇನೇ ಸುರಕೃತ್ಯೇ ನಿವೇಶಿತಂ ॥ ೧೦೭ ॥

---

೧೦೩. ವಿಶೇಷವಾದ ಈ ಅವಕಾಶವನ್ನು ಮನ್ಮಥನು ಪಡೆದು, ತನ್ನ ಪುಷ್ಪ ಮಯವಾದ ಧನುಸ್ಸಿನಲ್ಲಿ ಪುಷ್ಪಮಾಲೆಯಿಂದ ವರ್ಧಿತವಾದ ಸಮ್ಮೋಹನವೆಂಬ ಪುಷ್ಪ ಬಾಣವನ್ನು ಸೇರಿಸಿದನು.

೧೦೪. ಆಗ ಮನ್ಮಥನ ಬಲಭಾಗದಲ್ಲಿ ರತಿಯೂ, ಎಡಭಾಗದಲ್ಲಿ ಪ್ರೀತಿಯೂ (ಅನುರಾಗ) ಇದ್ದರು. ಹಿಂಭಾಗದಲ್ಲಿ ಸುಂದರನಾದ ವಸಂತನು ಪುಷ್ಪಮಯವಾದ ಬತ್ತಳಿಕೆಯನ್ನು ಹಿಡಿದು ನಿಂತಿದ್ದನು.

೧೦೫. ಮನ್ಮಥನು ಪುಷ್ಪಧನುಸ್ಸನ್ನು ಕಿವಿಯವರೆಗೆ ಎಳೆದ ಕೂಡಲೇ ವಾಯುವು ಸುವಾಸನೆಯಾಗಿ ಬೀಸಿತು.

೧೦೬. ಬಳಿಕ ಮನ್ಮಥನು ಬಾಣವನ್ನು ಪ್ರಯೋಗಿಸಲು ಚಂದ್ರಶೇಖರನು ಇಂದ್ರಿಯ ವಿಕಾರವನ್ನು ಹೊಂದಿ ಪಾರ್ವತಿಯನ್ನು ಸೇರುವುದಕ್ಕಾಗಿ, ಅವಳ ಸಂಗವನ್ನಪೇಕ್ಷಿಸಿದನು.

೧೦೭. ಇಂದ್ರನೊಡನೆ ಆಕಾಶದಲ್ಲಿದ್ದ ದೇವತೆಗಳೆಲ್ಲರೂ, ಶಂಕರನನ್ನು ಮೋಹಗೊಳಿಸುವಂತಹ ಈ ದೇವಕಾರ್ಯದಲ್ಲಿ ಮನ್ಮಥನನ್ನು ನಿಯಮಿಸಿದುದು ಸರಿಯಾಯಿತೆಂದು ತಿಳಿದುಕೊಂಡರು.

ಅಥ ಸಂಸ್ಮೃತ್ಯ ಸಂಯಮ್ಯ ನಿಗೃಹ್ಯ ವಿಕೃತಿಂ ತದಾ ।
ಇಂದ್ರಿಯಸ್ಯ ಮಹಾದೇವಃ ಸಹ ಸೇದಂ ವ್ಯಚಿಂತಯತ್ ॥ ೧೦೪ ॥

ಯೋನಿಜಾಂ ಗಿರಿಜಾಂ ಕಾಳೀಂ ತಪೋವ್ರತವಿವರ್ಜಿತಾಂ ।
ಕಥಂ ಸಂಗಮಕಾಮೋಽಹಂ ಧರ್ತುಮಿಚ್ಛಾಮಿ ವೈ ಹಠಾತ್ ॥ ೧೦೯ ॥

ತಪೋವ್ರತಪವಿತ್ರಾಂಗೀಂ ತಪಶ್ಚರಣಸತ್ಕೃತಾಂ ।
ಸ್ವಯಮೇವ ಗ್ರಹಿಷ್ಯಾಮಿ ಸತೀಂ ದಾಕ್ಷಾಯಣೀಮಿವ ॥ ೧೧೦ ॥

ಕಥಂ ವಿಕೃತಕಾಮೋಽಹಮನಿಚ್ಛನ್ನಿವ ಸಾಂಪ್ರತಂ ।
ಕೇನಾಪಿ ಚಾಕೃಷ್ಟ ಇವ ಚಿಕೀರ್ಷುಃ ಸಂಗಮೋದ್ಭವಂ ॥ ೧೧೧ ॥

ಏವಂ ವಿಕಾರಹೇತುಃ ಸ ನಿಶ್ಚಿನ್ವನ್ನಿಂದ್ರಿಯಸ್ಯ ತು ।
ಪುರೋಽವಲೋಕಯಾಮಾಸ ಸಂಹಿತೇಷುಂ ಮನೋಭವಂ ॥ ೧೧೨ ॥

---

೧೦೪. ಅನಂತರ ಶಂಕರನು ಎಚ್ಚೆತ್ತು ತಾನು ಮಾಡುತ್ತಿರುವುದೇನೆಂದು ಸ್ಮರಿಸಿಕೊಂಡು, ಧೈರ್ಯವನ್ನು ತಾಳಿ, ಕೂಡಲೇ ಇಂದ್ರಿಯ ವಿಕಾರವನ್ನು ತಡೆದು ಹೀಗೆ ಆಲೋಚಿಸಿದನು.

೧೦೯. ಈ ಪರ್ವತಪುತ್ರಿಯಾದ ಕಾಳಿಯು ಯೋನಿಯಿಂದ ಜನಿಸಿದವಳು ಎಂದರೆ ಗರ್ಭವಾಸದಲ್ಲಿದ್ದು ಜನಿಸಿದವಳು ಮತ್ತು ತಪಸ್ಸು ವ್ರತ ಇವುಗಳೊಂದೂ ಇಲ್ಲದೆ ಇರುವುದರಿಂದ ಅಶುದ್ಧಳಾಗಿರುವಳು. ಇಂಥವಳನ್ನು ಸೇರಲಿಚ್ಛೆಯಿಂದ ಹಿಡಿದುಕೊಳ್ಳಲು ನಾನು ಅಪೇಕ್ಷೆಯುಳ್ಳವನಾಗಬಹುದೇ?

೧೧೦. ಈ ಪಾರ್ವತಿಯು ತಪೋವ್ರತಗಳಿಂದ ಪವಿತ್ರಳೂ, ಸಂಸ್ಕೃತಳೂ, ಆದ ಮೇಲೆ ಇವಳನ್ನು ದಕ್ಷಪುತ್ರಿಯಾದ ಸತೀದೇವಿಯನ್ನು ಸ್ವೀಕರಿಸಿದಂತೆ ನಾನೇ ಸ್ವೀಕರಿಸುವೆನು.

೧೧೧. ಆದರೆ ಈಗ ನಾನು ಕಾಮವಿಕಾರವುಳ್ಳವನಾಗಿ ಈ ಪಾರ್ವತಿಯಲ್ಲಿ ಸಂಗಮೇಚ್ಛೆಯನ್ನು ಹೊಂದಲು ಪ್ರಬಲವಾದ ಯಾವುದೋ ಕಾರಣವಿರಬೇಕು. ಆ ಕಾರಣವಾವುದು?

೧೧೨. ಹೀಗೆ ತನ್ನ ವಿಕಾರಕ್ಕೆ ಕಾರಣವೇನೆಂದು ಅವನು ವಿಮರ್ಶಿಸುತ್ತಾ, ತನ್ನ ಎದುರಿನಲ್ಲಿ ಬಾಣವನ್ನು ಧನುಸ್ಸಿಗೆ ಸೇರಿಸಿ ನಿಂತಿರುವ ಮನ್ಮಥನನ್ನು ನೋಡಿದನು.

ಏತಸ್ಮಿನ್ನಂತರೇ ಬ್ರಹ್ಮಾ ವಿಜ್ಞಾತಸಮಯಃ ಸುರಾನ್ ।
ದೃಷ್ಟ್ವಾ ಸ್ಥಾನಾದಾಜಗಾಮು ತತ್ಸಮಾಜಮನುಗ್ರಹಾತ್ ॥ ೧೧೩ ॥

ತತಃ ಸ ಕುಪಿತೋ ದೃಷ್ಟ್ವಾ ಸಂಧಿತೇಷುಂ ಮನೋಭವಂ ।
ಜಜ್ವಾಲ ಜ್ವಲನಪ್ರಖ್ಯಸ್ತಂ ದಿಧಕ್ಷುಃ ಪ್ರಸಹ್ಯತು ॥ ೧೧೪ ॥

ಕಾಮೋಽಯಂ ಸಮಯಂ ಜ್ಞಾತ್ವಾ ಮಾಂ ಮೋಹಯಿತುಮಿಚ್ಛತಿ ।
ಮನೋ ಮೇ ಸ್ವವಶಂ ಕರ್ತುಂ ತಂ ನಯಾಮಿ ಯಮಕ್ಷಯಂ ॥ ೧೧೫ ॥

ಏವಂ ವಿಚಿಂತ್ಯಮಾನಸ್ಯ ನೇತ್ರೋದ್ಭಾವಿತತೇಜಸಾ ।
ವರ್ಧಿತೋ ಜ್ವಲನೋ ಭೂತ್ವಾ ಕ್ರೋಧಂ ನೇತ್ರಾತ್ಸಸರ್ಜ ಹ ॥ ೧೧೬ ॥

ತಂ ಕ್ರೋಧಂ ನಿಸ್ಸರಿಷ್ಯಂತಂ ಜಾತವೇದಸ್ವರೂಪಿಣಂ ।
ಜ್ಞಾತ್ವಾ ಕಾಮಸ್ಯ ತಾನ್ಬಾಣಾನ್ ಪೌಷ್ಪಚಾಪನಿಷಣ್ಣಕಾನ್ ॥ ೧೧೭ ॥

---

೧೧೩. ಈ ಮಧ್ಯದಲ್ಲಿ ಬ್ರಹ್ಮನು ದೇವತೆಗಳಿಂದ, ನಡೆಯುತ್ತಿರುವ ಸಮಾಚಾರವನ್ನು ತಿಳಿದು ತನ್ನ ಸ್ಥಾನದಿಂದ ಹೊರಟು ಮನ್ಮಥನ ಪರಿವಾರವನ್ನು ರಕ್ಷಿಸಲು ಅಲ್ಲಿಗೆ ಬಂದನು.

೧೧೪-೧೧೫. ಅಲ್ಲಿ ಬಾಣವನ್ನು ಧನುಸ್ಸಿಗೇರಿಸಿ ನಿಂತಿರುವ ಮನ್ಮಥನನ್ನು ನೋಡಿ ಶಂಕರನು ಕೋಪಗೊಂಡು ಆ ಮನ್ಮಥನನ್ನು ದಹಿಸಲಿಚ್ಛೆಯಿಂದ ಅಗ್ನಿಯಂತೆ ಮಹಾಕೋಪದಿಂದ ಜ್ವಲಿಸುತ್ತಾ ಹೀಗೆ ಯೋಚಿಸಿದನು ಈ ಮನ್ಮಥನು ಇದೇ ಸಮಯವೆಂದು ತಿಳಿದು ನನ್ನನ್ನು ತನ್ನ ವಶವನ್ನಾಗಿ ಮಾಡಿಕೊಳ್ಳಲು ಮೋಹಗೊಳಿಸಲು ವ್ಯಕ್ತನಾಗಿರುವನು. ಆದಕಾರಣ ಈ ಮನ್ಮಥನನ್ನು ಯಮನ ಮನೆಗೆ ಕಳುಹಿಸುವೆನು.

೧೧೬. ಹೀಗೆ ಆ ಶಂಕರನು ಆಲೋಚಿಸುತ್ತಿರುವಾಗ ಅವನ ನೇತ್ರಗಳ ತೇಜಸ್ಸಿನಿಂದ ಹೊರಹೊರಟ ಕೋಪಾಗ್ನಿಯು ಆವಿರ್ಭವಿಸಿ ಉರಿಯತೊಡಗಿತು.

೧೧೭. ಶಂಕರನ ತೃತೀಯ ನೇತ್ರದಿಂದ ಹೊರಡುತ್ತಿರುವ ಅಗ್ನಿರೂಪವಾದ ಕ್ರೋಧವನ್ನು ನೋಡಿ ಬ್ರಹ್ಮನು ಮನ್ಮಥನ ಧನುಸ್ಸಿನಲ್ಲಿರುವ ಬಾಣಗಳನ್ನು ಅವುಗಳ ಶಕ್ತಿಯನ್ನೂ, ಪ್ರಾಣ ಮತ್ತು ಸ್ವರೂಪವನ್ನೂ, ತಾನು ಆಕರ್ಷಿಸಿ ತೆಗೆದುಕೊಂಡು ರಕ್ಷಿಸಿದನು.

ಶಕ್ತ್ಯಂ ಪ್ರಾಣಾಂಸ್ತಥಾತ್ಮಾನಮಾಕೃಷ್ಯಾಪಾಲಯದ್ವಿಧಿಃ ।
ಉತ್ಸಾರಯಾಮಾಸ ತದಾ ವಸಂತಂ ಸ ಪಿತಾಮಹಃ ।
ನಿಜಶಕ್ತ್ಯಾ ತದಾ ಶಂಭುಕ್ರೋಧಾದ್ರಕ್ಷನ್ಮನೋಭವಂ ॥ ೧೧೮ ॥

ಆಥಾಕಾಶಗತಾ ದೇವಾಃ ಕ್ರುದ್ಧಂ ದೃಷ್ಟ್ವಾ ಮಹೇಶ್ವರಂ ।
ಪ್ರಸೀದ ಜಗತಾಂ ನಾಥ ಕಾಮೇ ಕ್ರೋಧಂ ಪರಿತ್ಯಜ ॥ ೧೧೯ ॥

ತ್ವಯಾ ಯಥಾ ಪುರಾ ಸೃಷ್ಟಃ ಶಂಭುರೂಪೇಣ ಕರ್ಮಣಾ ॥ ೧೨೦ ॥

ಯೇನ ಚಾಯೋಜಿತಂ ಕರ್ಮ ತತ್ಕರೋತಿ ಮನೋಭವಃ ।
ತಸ್ಮಾತ್ತ್ವಂ ಮದನೇ ಶಂಭೋ ಕ್ರೋಧಾಗ್ನಿಮುಪಸಂಹರ ॥ ೧೨೧ ॥

ಪ್ರಸೀದ ಸರ್ವಭೂತೇಶ ಭಕ್ತ್ಯಾ ತ್ವಾಂ ಪ್ರಣತಾ ವಯಂ ।
ಇತಿ ಸ್ಮ ವದತಾಂ ತೇಷಾಮಮರಾಣಾಂ ತದಾನಲಃ ॥ ೧೨೨ ॥

---

೧೧೮. ಅಲ್ಲದೇ ಬ್ರಹ್ಮನು ಶಂಕರನ ಕ್ರೋಧದಿಂದ ನಾಶವನ್ನೈದುತ್ತಿರುವ ಮನ್ಮಥನನ್ನು ತನ್ನ ಶಕ್ತಿಯಿಂದ ರಕ್ಷಿಸುತ್ತಾ, ವಸಂತನನ್ನು ಆ ಸ್ಥಳದಿಂದ ಬೇರೆ ಸ್ಥಳಕ್ಕೆ ಕಳುಹಿಸಿದನು.

೧೧೯-೧೨೧. ಅನಂತರದಲ್ಲಿ ಆಕಾಶದಲ್ಲಿರುವ ದೇವತೆಗಳು ಕ್ರೋಧಗೊಂಡ ಶಂಕರನನ್ನು ನೋಡಿ ಅವನನ್ನು ಕುರಿತು ಹೀಗೆ ಸ್ತುತಿಸಿದರು:—ಜಗದೊಡೆಯನಾದ ಓ ಶಂಕರನೇ! ಪ್ರಸನ್ನನಾಗು. ಮನ್ಮಥನಲ್ಲಿ ಕ್ರೋಧವನ್ನು ಬಿಡು. ಹಿಂದೆ ಶಂಭು ರೂಪದಿಂದ ನೀನೇ ಈ ಮನ್ಮಥನನ್ನು ಯಾವ ಕರ್ಮಕ್ಕಾಗಿ ಸೃಷ್ಟಿಸಿರುವೆಯೋ ಮತ್ತು ಇವನಿಗೆ ಯಾವ ಕರ್ಮವನ್ನು ಮಾಡುವಂತೆ ನಿಯಮಿಸಿರುವಿಯೋ ಅದನ್ನೇ ಮಾಡುತ್ತಲಿರುವನು. ಆದಕಾರಣ ಓ ಶಂಭುವೇ! ನೀನು ಈ ಮನ್ಮಥನಲ್ಲಿ ಕ್ರೋಧಾಗ್ನಿಯನ್ನು ಪ್ರಯೋಗಿಸದೆ ಅದನ್ನು ಉಪಸಂಹರಿಸು. ಓ ಜಗದೊಡೆಯನೇ! ಪ್ರಸನ್ನನಾಗು. ಭಕ್ತಿಯಿಂದ ನಿನ್ನನ್ನು ನಾವು ನಮಸ್ಕರಿಸುವೆವು.

೧೨೨. ಹೀಗೆ ಆ ದೇವತೆಗಳು ಹೇಳುತ್ತಿರುವಷ್ಟರಲ್ಲಿಯೇ ಶಂಕರನ ತೃತೀಯ ನೇತ್ರದಿಂದ ಹೊರಟ ಆ ಅಗ್ನಿಯು, ಮನ್ಮಥನನ್ನು ದಹಿಸಿ ಭಸ್ಮವನ್ನಾಗಿ ಮಾಡಿತು.

ಲಲಾಟಚಕ್ಷುಃಸಂಭೂತೋ ಭಸ್ಮಾಕಾರ್ಷೀನ್ಮನೋಭವಂ ।
ದಗ್ಧ್ವಾ ಕಾಮಂ ತದಾ ವಹ್ನಿರ್ಜ್ವಾಲಾಮಾಲಾತಿದೀಪಿತಃ ॥ ೧೨೩ ॥

ಸಂಸ್ತಂಭಿತೋಽಥ ವಿಧಿನಾ ಹರಂ ಗಂತುಂ ಶಶಾಕ ನ ।
ಮಹಾದೇವೋಽಪಿ ತದ್ಭಸ್ಮ ಮನೋಭವಶರೀರಜಂ ॥ ೧೨೪ ॥

ಆದಾಯ ಸರ್ವಗಾತ್ರೇಷು ಭೂತಿಲೇಪಂ ತದಾಕರೋತ್ ।
ಲೇಪಶೇಷಾಣಿ ಭಸ್ಮಾನಿ ಸಮಾದಾಯ ತದಾ ಹರಃ ॥ ೧೨೫ ॥

ಸ ಗಣೋಽಂತರ್ದಧೇ ಕಾಲೀಂ ವಿಹಾಯ ವಿಧಿಸಮ್ಮತೇ ।
ಬ್ರಹ್ಮಾ ಕ್ರೋಧಾನಲಂ ಶಂಭೋರ್ದಹಂತಂ ಸಕಲಾನ್ಸುರಾನ್ ॥ ೧೨೬ ॥

ವಡವಾರೂಪಿಣಂ ಚಕ್ರೇ ದೇವಾನಾಂ ಪುರತಸ್ತದಾ ।
ವಡವಾಂ ತಾಂ ತದಾ ದೇವಾಃ ಸೌಮ್ಯಾಂ ಜ್ವಾಲಾಮುಖೀಂ ಶುಭಾಂ

---

೧೨೩. ಆ ಜ್ವಾಲೆಗಳ ಮಾಲೆಯಿಂದ ಉರಿಯುತ್ತಿರುವ ಆ ನೇತ್ರಾಗ್ನಿಯು ಮನ್ಮಥನನ್ನು ದಹಿಸಿದ ಮೇಲೆ ಬ್ರಹ್ಮನು ಅದನ್ನು ಸ್ತಂಭಿಸಿದನು. ಅದರಿಂದ ಆ ಅಗ್ನಿಯು ತಿರುಗಿ ಶಂಕರನ ಬಳಿಗೆ ಹೋಗಲಾರದುದಾಯಿತು.

೧೨೪. ಆ ಮೇಲೆ ಮಹಾದೇವನು ಆ ಮನ್ಮಥನ ಶರೀರದ ಭಸ್ಮವನ್ನು ತೆಗೆದುಕೊಂಡು ತನ್ನ ಶರೀರಕ್ಕೆ ಭಸ್ಮದ ಲೇಪವನ್ನು ಮಾಡಿಕೊಂಡನು. ಎಂದರೆ ಆ ಭಸ್ಮವನ್ನು ತನ್ನ ಶರೀರದ ತುಂಬಾ ಬಳಿದುಕೊಂಡನು.

೧೨೫. ಉಳಿದ ಭಸ್ಮವನ್ನೆಲ್ಲಾ ತೆಗೆದುಕೊಂಡು ಕಾಳಿಯನ್ನು ಅಲ್ಲಿಯೇ ಬಿಟ್ಟು ಬ್ರಹ್ಮನ ಅನುಮತಿಯಂತೆ ತನ್ನ ಗಣಗಳೊಡನೆ ಅಂತರ್ಧಾನನಾದನು.

೧೨೬. ಅನಂತರ ಬ್ರಹ್ಮನು ಸಕಲದೇವತೆಗಳನ್ನೂ ದಹಿಸುತ್ತಿರುವ ಶಂಕರನ ಕ್ರೋಧಾಗ್ನಿಯನ್ನು ಆ ದೇವತೆಗಳ ಎದುರಿನಲ್ಲಿಯೇ ವಡವಾಗ್ನಿಯ ರೂಪವನ್ನಾಗಿ ಮಾಡಿದನು.

೧೨೭. ತಮ್ಮನ್ನು ದಹಿಸುತ್ತಿರುವ ಶಂಕರನ ಆ ಕ್ರೋಧಾಗ್ನಿಯು ಶಾಂತವಾಗಿ ಬಡಬಾಗ್ನಿಯೆಂಬ ಸೌಮ್ಯಾಕೃತಿಯನ್ನು ಹೊಂದಿದುದನ್ನು ನೋಡಿ ದೇವತೆಗಳೆಲ್ಲರೂ ಸಂತೋಷಗೊಂಡರು.

ವೃಷ್ಟ್ವಾ ನಿರ್ವಿಘ್ನಮನಸೋ ಬಭೂವುರ್ಮುನಯಃ ಪೂರ್ವಪೀಡಿತಾಃ ।
ವಡವಾಂ ತಾಂ ಸಮಾದಾಯ ತದಾ ಜ್ವಾಲಾಮುಖೀಂ ವಿಧಿಃ ॥ ೧೨೪ ॥

ಸಾಗರಂ ಪ್ರಯಯೌ ಲೋಕಹಿತಾಯ ಜಗತಾಂ ಪತಿಃ ।
ಗತ್ವಾಥ ಸಾಗರಂ ಬ್ರಹ್ಮಾ ಪ್ರೋವಾಚ ಪರಿಪೂಜಿತಃ ॥ ೧೨೯ ॥

ಯಥಾವತ್ತೇನ ವಿಪ್ರೇಂದ್ರಾಃ ಸಮುಯಂ ಚ ನಿವೇದಯತ್ ।
ಅಯಂ ಕ್ರೋಧೋ ಮಹೇಶಸ್ಯ ವಡವಾರೂಪಧೃಕ್ತ್ವಯಾ ॥ ೧೩೦ ॥

ಜ್ವಾಲಾಮುಖಿಃ ಸಮಾಧಾರ್ಯಃ ಯಾವನ್ನ ವಿನಯಾಮ್ಯಹಂ ।
ಯದಾ ತ್ವಾಮಹಮಾಗಮ್ಯ ವದಾಮಿ ಸರಿತಾಂ ಪತೇ ॥ ೧೩೧ ॥

ತದಾ ತ್ವಯಾ ಪರಿತ್ಯಾಜ್ಯಃ ಕ್ರೋಧೋಽಯಂ ಬಡಬಾಮುಖಃ ।
ಭೋಜನಂ ಭವತಸ್ತ್ವೀಯಮೇತಸ್ಯ ತು ಭವಿಷ್ಯತಿ ॥ ೧೩೨ ॥

---

೧೨೪. ಅನಂತರ ಜಗದೊಡೆಯನಾದ ಬ್ರಹ್ಮನು ಲೋಕಕ್ಷೇಮಕ್ಕಾಗಿ ಮುಖ ದಲ್ಲಿ ಜ್ವಾಲೆಯನ್ನು ಸುರಿಸುತ್ತಿರುವ ಆ ವಡವಾಗ್ನಿಯನ್ನು ತೆಗೆದುಕೊಂಡು ಸಮುದ್ರಕ್ಕೆ ಹೋದನು.

೧೨೯. ಎಲೈ ಬ್ರಾಹ್ಮಣರೇ! ಕೇಳಿ, ಬ್ರಹ್ಮನು ಸಮುದ್ರಕ್ಕೆ ಹೋಗಿ ಅಲ್ಲಿ ಆ ಸಮುದ್ರನಿಂದ ಯಥಾಯೋಗ್ಯವಾಗಿ ಪೂಜಿಸಲ್ಪಟ್ಟು, ಅವನನ್ನು ಕುರಿತು ಆಚರಿಸು ವಂತೆ ಒಂದು ನಿಬಂಧನೆಯನ್ನು ಹೀಗೆ ಹೇಳಿದನು.

೧೩೦. ಎಲೈ ಸಮುದ್ರನೇ! ವಡವಾಗ್ನಿಯ ರೂಪವಾಗಿರುವ ಈ ಜ್ವಾಲಾ ಮುಖಿಯು ಶಂಕರನ ಕ್ರೋಧವು. ಇದನ್ನು ನಾನು ಶಾಂತಗೊಳಿಸುವವರೆಗೆ ನೀನು ಇವನ್ನು ಸದಾ ಧರಿಸಬೇಕು.

೧೩೧. ಎಲೈ ಸಮುದ್ರ ರಾಜನೇ, ನಾನು ನಿನ್ನ ಬಳಿಗೆ ಬಂದು ಹೇಳುವವರೆಗೆ ಇದನ್ನು ನೀನು ಧರಿಸಿಕೊಂಡಿರು. ಆಮೇಲೆ ನೀನು ಈ ವಡವಾಗ್ನಿಯ ರೂಪವಾದ ಶಂಕರನ ಕ್ರೋಧವನ್ನು ತ್ಯಜಿಸು.

೧೩೨. ನಿನ್ನಲ್ಲಿರುವ ಜಲವೇ ಇದಕ್ಕೆ ಆಹಾರವು. ದಹಿಸುವುದಕ್ಕೆ ಸ್ವಲ್ಪವೂ ಅವಕಾಶ ಸಿಕ್ಕದಂತೆ ಈ ವಡವಾಗ್ನಿಯನ್ನು ನೀನು ಧರಿಸಬೇಕು.

ಯತ್ನಾದೇವಂ ವಿಧಾಯೋರ್ವೀಯಂ ಯಥಾ ಸೋ ಯಾತಿ ಜಾಂತರಂ ।
ಇತ್ಯುಕ್ತೋ ಬ್ರಹ್ಮಣಾ ಸಿಂಧುರಂಗೀಚಕ್ರೇ ತದಾ ಕ್ರುಧಂ ॥ ೧೩೩ ॥

ಗ್ರಹೀತುಂ ವಡವಾವಕ್ತ್ರಂ ಶಂಭೋಶ್ಚಾಶಕ್ಯಮವ್ಯರಂ ।
ತತಃ ಪ್ರವಿಷ್ಟೋ ಜಲಧೌ ಪಾವಕೋ ವಡವಾಮುಖಃ ॥ ೧೩೪ ॥

ವಾರ್ಯೋಘಾನ್ನಿರ್ದಹನ್ ಸಮ್ಯಕ್ ಜ್ವಾಲಾಮಾಲಾತಿದೀಪಿತಃ ।
ಯದಾಭವಚ್ಛಂಭುನೇತ್ರಾದ್ದದಾಹ ಮುದನಂ ತದಾ ॥ ೧೩೫ ॥

ಅಭವತ್ಸುಮಹಾಶಬ್ದೋ ಯೇನಾಕಾಶಃ ಪ್ರಪೂರಿತಃ ।
ತೇನ ಶಬ್ದೇನ ಮಹತಾ ಕಾಮದಾಹೇ ಕ್ಷಣೇನ ಚ ॥ ೧೩೬ ॥

ಸಖಿಭ್ಯಾಂ ಸಹ ಭೀತಾಭೂತ್ಕಾಲೀ ಶೋಕೆಯುತಾ ತದಾ ।
ತೇನ ಶಬ್ದೇನ ಹಿಮವಾಂಶ್ಚಕಿತೋ ವಿಸ್ಮಿತಸ್ತದಾ ॥ ೧೩೭ ॥

---

೧೩೩. ಹೀಗೆ ಬ್ರಹ್ಮನು ಹೇಳಲು ಸಾಗರನು ಶಂಕರನ ಕ್ರೋಧರೂಪವಾದ ಆ ವಡವಾಗ್ನಿಯನ್ನು ಸಾಧ್ಯವಿಲ್ಲದಿದ್ದರೂ ಬ್ರಹ್ಮನ ಮಾತಿನಂತೆ ಧರಿಸಲು ಅಂಗೀಕಾರ ಮಾಡಿದನು.

೧೩೪. ಅನಂತರ ಆ ಶಂಕರನ ಕ್ರೋಧರೂಪವಾದ ವಡವಾಗ್ನಿಯು ಸಮುದ್ರವನ್ನು ಪ್ರವೇಶಿಸಿ ಜ್ವಾಲೆಗಳ ಮಾಲೆಯಿಂದ ಜ್ವಲಿಸುತ್ತಾ, ನಿತ್ಯವೂ, ಆ ಸಮುದ್ರದ ಜಲವನ್ನು ಧ್ವಂಸಮಾಡತೊಡಗಿತು.

೧೩೫. ಹಿಂದೆ ಶಂಕರನ ನೇತ್ರದಿಂದ ಹೊರಹೊರಟ ಕ್ರೋಧಾಗ್ನಿಯು ದಹಿಸುವಾಗ ದೊಡ್ಡದೊಂದು ಶಬ್ದವಾಯಿತು. ಆ ಶಬ್ದದಿಂದ ಆಕಾಶವೆಲ್ಲಾ ತುಂಬಿ ಹೋಯಿತು.

೧೩೬. ಆ ಮಹಾಶಬ್ದದಿಂದಲೂ, ಆ ಕೂಡಲೇ ಆದ ಮನ್ಮಥನ ದಹನದಿಂದಲೂ, ಸಹ ಕಾಳಿಯು ಸಖಿಯರೊಡನೆ ತುಂಬಾ ಹೆದರಿ, ಆಗ ತುಂಬಾ ಶೋಕಗೊಂಡಳು.

೧೩೭. ಅಲ್ಲದೆ ಆ ಮಹಾಶಬ್ದವನ್ನು ಕೇಳಿ ಆಶ್ಚರ್ಯ ಮತ್ತು ಭಯದಿಂದ ಕೂಡಿ ಹಿಮವಂತನು ತನ್ನ ಮಗಳಾದ ಕಾಳಿಯನ್ನು ನೋಡಲು ಅಲ್ಲಿಗೆ ಬಂದನು.

ಸುತಾಮೇವ ಜಗನ್ಮಾಶು ಗತಾಂ ಕಾಲೀಂ ಹರಾಶ್ರಮಂ ।
ತಾಂ ತತ್ರ ಕಾಳೀಂ ತನಯಾಂ ಭಯಶೋಕಾಕುಲಾಂ ಶುಭಾಂ ॥ ೧೩೮ ॥

ರುದಂತೀಂ ಶಂಭುವಿರಾಹಾದಾಸಸಾದಾಚಲೇಶ್ವರಃ ।
ಆಸಾದ್ಯ ಪಾಣಿನಾ ತಸ್ಯಾ ಮಾರ್ಜಯನ್ನಯನದ್ವಯಂ ॥ ೧೩೯ ॥

ಮಾಭೈಷೀಃ ಕಾಲಿ ಮಾ ರೋದೀರಿತ್ಯುಕ್ತ್ವಾ ತಾಂ ತದಾಗ್ರಹೀತ್ ।
ಕ್ರೋಡೀಕೃತ್ಯ ಸುತಾಂ ತಾಂ ತು ಹಿಮವಾನಚಲೇಶ್ವರಃ ॥ ೧೪೦ ॥

ಸ್ವಮಾಲಯಮಥಾನಿನ್ಯೇ ಸಾಂತ್ವಯಾಮಾಸ ಚಾರ್ದಿತಾಂ ।
ಅಂತರ್ಹಿತೇ ಹರೇ ಕಾಲೀ ವಿರಹಾತ್ತಸ್ಯ ಸಂತತಂ ।
ನಿವಸಂತೀ ಪಿತುರ್ಗೇಹೇ ಶುಶೋಚ ಚ ಮುಮೋಹ ಚ ॥ ೧೪೧ ॥

ಶೈಲಾಧಿರಾಜೋಽಪ್ಯಥ ಮೇನಕಾಪಿ ।
ಮೈನಾಕಮುಖ್ಯೋಽಪಿ ಸಖೀದ್ವಯಂ ಚ ॥

---

೧೩೮. ಅಲ್ಲಿ ಭಯಶೋಕವಿಹ್ವಲಳೂ, ಶಂಕರನು ಹೊರಟುಹೋದುದರಿಂದ ದುಃಖಗೊಂಡು ಅಳುತ್ತಲೂ ಇರುವ ಮಂಗಳಾಂಗಿಯಾದ ತನ್ನ ಮಗಳನ್ನು ಹಿಮವಂತನು ನೋಡಿದನು.

೧೩೯. ಅನಂತರ ಆ ಪಾರ್ವತಿಯ ಬಳಿಗೆ ಬಂದು ಕೈಯಿಂದ ಅವಳ ಕಣ್ಣುಗಳನ್ನು ಒರಸುತ್ತಾ, ಎಲೈ ಕಾಳಿಯೇ! ಹೆದರಬೇಡ. ಅಳಬಾರದು. ಎಂದು ಸಮಾಧಾನಮಾಡಿ ಅವಳನ್ನು ಕೈಯಿಂದ ಹಿಡಿದುಕೊಂಡನು.

೧೪೦. ಮೃದುವಾದ ಮಾತುಗಳಿಂದ ಆ ಕಾಳಿಯನ್ನು ಧೈರ್ಯಗೊಳಿಸಿ, ಅವಳನ್ನು, ಪರ್ವತರಾಜನಾದ ಹಿಮವಂತನು ತನ್ನ ಅರಮನೆಗೆ ಕರೆದುಕೊಂಡು ಬಂದನು. ಮತ್ತು ದುಃಖಿತಳಾದ ಅವಳನ್ನು ಸಮಾಧಾನಗೊಳಿಸಿದನು.

೧೪೧. ಶಂಕರನು ಅಂತರ್ಧಾನವಾದುದರಿಂದ ಪಾರ್ವತಿಯು ಅವನ ಮೇಲಿನ ಮೋಹದಿಂದಲೂ ವಿರಹದಿಂದಲೂ ಶೋಕಿಸುತ್ತಾ ಕಾಲವನ್ನು ಕಳೆಯುತ್ತಿದ್ದಳು.

೧೪೨. ಆಗ ಹಿಮವಂತನು, ಮೈನಾಕವೇ ಮೊದಲಾದ ಅವಳ ಸಹೋದರರು, ತಾಯಿಯಾದ ಮೇನಕೆಯು, ಸಖಿಯರಿರ್ವರು ಇವರೆಲ್ಲರೂ, ದೃಢಮನಸ್ಸಿನವಳಾದ

ತಾಂ ಸಾಂತ್ವಯಾಂಚಕ್ರುರದೀನಸತ್ತ್ವಂ ।
ಹರಂ ವಿಸಸ್ಮಾರ ತಥಾಪಿ ನೋಮಾ ॥ ೧೪೨ ॥

॥ ಇತಿ ಶ್ರೀ ಕಾಲಿಕಾಪುರಾಣೇ ಚತುಶ್ಚತ್ವಾರಿಂಶತ್ತಮೋಧ್ಯಾಯಃ ॥

ಆ ಪಾರ್ವತಿಯನ್ನು ಸಮಾಧಾನಗೊಳಿಸುತ್ತಿದ್ದರು. ಆದರೂ, ಪಾರ್ವತಿಯು ಶಂಕರನನ್ನು ಮರೆಯಲೇ ಇಲ್ಲ. ಯಾವಾಗಲೂ ಅವನನ್ನು ಸ್ಮರಿಸುತ್ತಲೇ ಇದ್ದಳು.

ಇಲ್ಲಿಗೆ ನಲವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಕಾಲಿಕಾಪುರಾಣೇ
ಪಂಚಚತ್ವಾರಿಂಶತ್ತಮೋಽಧ್ಯಾಯಃ

॥ ಮಾರ್ಕಂಡೇಯ ಉವಾಚ ॥

ಅಥ ದೇವಮುನಿರ್ಯಾತೋ ಹಿಮವನ್ಮಂದಿರಂ ತದಾ ।
ನಿಯೋಜಿತೋ ಬಲಭಿದಾ ನಾರದಃ ಕಾಮುಗಃ ಪರಂ ॥ ೧ ॥

ಸ ಗತಃ ಪೂಜಿತಸ್ತೇನ ಧರೇಶೇನ ಮಹಾತ್ಮನಾ ।
ತಂ ಸಮುತ್ಸೃಜ್ಯ ರಹಸಿ ಕಾಲೀಂ ತಾಮಾಸಸಾದ ಹ ॥ ೨ ॥

ಆಸಾದ್ಯ ಕಾಳೀಂ ಸ ಮುನಿಃ ಸಂಬೋಧ್ಯ ಜ್ಞಾನಶಾಲಿನೀಂ ।
ಉವಾಚೇದಂ ವಚಸ್ತಥ್ಯಂ ಸರ್ವೇಷಾಂ ಜಗತಾಂ ಹಿತಂ ॥ ೩ ॥

॥ ನಲವತ್ತೈದನೆಯ ಅಧ್ಯಾಯವು ॥

೧. ಮಾರ್ಕಂಡೇಯನು ಹೇಳಿದನು :—ಅನಂತರ ಕಾಮಚಾರಿಯಾದ ದೇವ ಮುನಿ ನಾರದನು ಇಂದ್ರನಿಂದ ಪ್ರೇರಿತನಾಗಿ ಹಿಮವಂತನ ಅರಮನೆಗೆ ಬಂದನು.

೨-೩. ಅಲ್ಲಿ ಮಹಾತ್ಮನಾದ ಹಿಮವಂತನಿಂದ ಪೂಜಿಸಲ್ಪಟ್ಟು, ನಾರದನು ಅವನನ್ನು ಬಿಟ್ಟು ಏಕಾಂತದಲ್ಲಿ ಕಾಳಿಯ ಬಳಿಗೆ ಬಂದು ತಿಳಿವಳಿಕೆಯುಳ್ಳವಳಾದ ಅವಳನ್ನು ಸಂಬೋಧಿಸಿ ಜಗತ್ತಿಗೆ ಹಿತವಾದಂತಹ ಸತ್ಯವಾದ ಮಾತನ್ನು ಈ ರೀತಿಯಾಗಿ ಹೇಳಿದನು.

॥ ನಾರದ ಉವಾಚ ॥

ಶೃಣು ಕಾಳಿ ವಚೋ ಮಹ್ಯಂ ಸತ್ಯಂ ತದವಧಾರಯ ।
ಸೇವಿತಃ ಸ ಮಹಾದೇವಸ್ತ್ವಯೇಹ ತಪಸಾ ವಿನಾ ॥ ೪ ॥

ಅನುರಕ್ತೋಽಪಿ ತೇನ ತ್ವಾಂ ಮಹಾದೇವೋ ವಿಸೃಷ್ಟವಾನ್ ।
ತ್ವಾಮೃತೇ ಶಂಕರೋ ನಾನ್ಯಾಂ ದ್ವಿತೀಯಾಂ ಸಂಗ್ರಹೀಷ್ಯತಿ ॥ ೫ ॥

ತ್ವಂ ಚಾಪಿ ನಾನ್ಯಂ ದಯಿತಂ ಗ್ರಹೀಷ್ಯಸಿ ವಿನೇಶ್ವರಂ ।
ತಸ್ಮಾತ್ತ್ವಂ ತಪಸಾ ಯುಕ್ತಾ ಚಿರಮಾರಾಧಯೇಶ್ವರಂ ॥ ೬ ॥

ತಪಸಾ ಸಂಸ್ಕೃತಾಂ ತ್ವಾಂ ತು ಸ ದ್ವಿತೀಯಾಂ ಕರಿಷ್ಯತಿ ।
ಮಂತ್ರೋಽಯಂ ತಸ್ಯ ಸುಭಗೇ ಶೃಣು ತ್ವಂ ಯೇನ ಸೋಽಚಿರಾತ್ ॥ ೭ ॥

ಆರಾಧಿಸ್ತೇ ಪ್ರತ್ಯಕ್ಷೋ ಭವಿಷ್ಯತಿ ಮಹೇಶ್ವರಃ ।
ಓಂ ನಮಃ ಶಿವಾಯೇತಿ ಚ ಸರ್ವದಾ ಶಂಕರಪ್ರಿಯಃ ॥ ೮ ॥

೪-೫. ಎಲೌ ಕಾಳಿಯೇ! ನನ್ನ ಮಾತನ್ನು ಕೇಳುವವಳಾಗು. ಅದು ನಿಜವಾದುದೆಂದು ತಿಳಿ. ನೀನು ಇಲ್ಲಿ ತಪಸ್ಸನ್ನು ಮಾಡದೆ ಶಂಕರನನ್ನು ಸೇವಿಸುತ್ತಿರುವೆ. ಆದುದರಿಂದ ನಿನ್ನಲ್ಲಿ ಅನುರಕ್ತನಾಗಿದ್ದರೂ ಮಹಾದೇವನು ನಿನ್ನನ್ನು ಬಿಟ್ಟಿರುವನು. ಆದರೆ ನಿನ್ನ ಹೊರತು ಆ ಶಂಕರನು ಇನ್ನಾವ ಸ್ತ್ರೀಯನ್ನೂ ಮದುವೆಯಾಗುವುದಿಲ್ಲವು.

೬. ನೀನೂ ಸಹ ಶಂಕರನನ್ನು ಹೊರತು ಇನ್ನಾರನ್ನೂ ಮದುವೆಯಾಗುವುದಿಲ್ಲ. ಆದರೆ ಶಂಕರನು ತಪಸ್ಸಿನಿಂದ ಸಂಸ್ಕೃತಳಾದ ನಿನ್ನನ್ನು ಪತ್ನಿಯನ್ನಾಗಿ ಪರಿಗ್ರಹಿಸುವನು. ಆದುದರಿಂದ ನೀನು ತಪಸ್ಸಿನಿಂದ ಶಂಕರನನ್ನು ಬಹಳ ಕಾಲ ಆರಾಧಿಸು.

೭. ಎಲೌ ಭಾಗ್ಯಶಾಲಿನಿಯೇ! ಆ ಶಂಕರನನ್ನು, ಆರಾಧಿಸುವ ಮಂತ್ರವನ್ನು ಹೇಳುವೆನು ಕೇಳು. ಅದರಿಂದ ಆರಾಧಿಸಿದರೆ ಶಂಕರನು ನಿನಗೆ ಜಾಗ್ರತೆ ಪ್ರತ್ಯಕ್ಷನಾಗುವನು.

೮-೯. ಓಂ ನಮಃಶಿವಾಯ, ಎಂಬ ಈ ಆರುಅಕ್ಷರದ ಮಂತ್ರವು ಶಂಕರನಿಗೆ ಸದಾ ಪ್ರಿಯವಾದುದು. ಎಲೈ ಗಿರಿಜೆಯೇ ನೀನು ಶಂಕರನ ರೂಪವನ್ನು ಧ್ಯಾನಿಸುತ್ತಾ

ಚಿಂತಯಂತೀ ತು ತದ್ರೂಪಂ ನಿಯಮಸ್ಥಾ ಷಡಕ್ಷರಂ ।
ಮಂತ್ರಂ ಜಪ ತ್ವಂ ಗಿರಿಜೇ ತೇನ ತುಷ್ಟೋ ಭವೇದ್ಧರಃ ॥ ೯ ॥

ಏವಮುಕ್ತಾ ತದಾ ಕಾಲೀ ನಾರದೇನ ಮಹಾತ್ಮನಾ ।
ಕರ್ತವ್ಯಮನುಮೇನೇ ಸಾ ಹಿತಂ ತಥ್ಯಂ ಚ ತದ್ವತಃ ॥ ೧೦ ॥

ಅನುಮಾನ್ಯ ತಪಸ್ತಪ್ತುಂ ತಪಾ ಕಾಳೀಂ ಚ ನಾರದಃ ।
ಸ್ವರ್ಗಂ ಜಗಾಮ ತಸ್ಯಾಶ್ಚ ನಿಶ್ಚಿತಾಭೂನ್ಮತಿರ್ವ್ರತೇ ॥ ೧೧ ॥

ಅಥ ಯಾತೇ ದೇವಮುನೌ ಕಾಲೀ ಸಾಸಾದ್ಯ ಮೇನಕಾಂ ।
ತಪಃಶ್ರದ್ಧಾಂ ಸಮಾಚಖ್ಯೇ ಚಾತ್ಮನೋ ಹರಸಂಗಮೇ ॥ ೧೨ ॥

॥ ಕಾಳ್ಯುವಾಚ ॥

ತಪಸ್ತಪ್ತುಂ ಗಮಿಷ್ಯಾಮಿ ಮಾತಃ ಪ್ರಾಪ್ತುಂ ಮಹೇಶ್ವರಂ ।
ಅನುಜಾನೀಹಿ ಮಾಂ ಗಂತುಂ ತಪಸೇಽದ್ಯ ತಪೋವನಂ ॥ ೧೩ ॥

ನಿಯಮನಿರತಳಾಗಿ, ಮೇಲೆ ಹೇಳಿದ ಆರು ಅಕ್ಷರದ ಮಂತ್ರವನ್ನು ಜಪಿಸು. ಅದರಿಂದ ಶಂಕರನು ಸಂತುಷ್ಟನಾಗುವನು.

೧೦. ಹೀಗೆ ಮಹಾತ್ಮನಾದ ನಾರದಮುನಿಯು ಹೇಳಿದ ಮಾತನ್ನು ಕೇಳಿ ಪಾರ್ವತಿಯು ಹಿತವೂ ಸತ್ಯವೂ ಆದ ಆ ಮಾತನ್ನು ನಡೆಯಿಸುವೆನೆಂದು ಅಂಗೀಕರಿಸಿದಳು.

೧೧. ಕಾಳಿಯು ತಪಸ್ಸನ್ನು ಆಚರಿಸುವಂತೆ ಅವಳನ್ನು ಒಪ್ಪಿಸಿ, ನಾರದಮುನಿಯು ಸ್ವರ್ಗಕ್ಕೆ ತೆರಳಿದನು. ಆ ಕಾಳಿಯೂ ಸಹ ತಪಸ್ಸನ್ನು ಆಚರಿಸಬೇಕೆಂಬ ನಿಶ್ಚಯವುಳ್ಳವಳಾದಳು.

೧೨. ನಾರದಮುನಿಯು ಹೊರಟುಹೋದಮೇಲೆ ಕಾಳಿಯು ತನ್ನ ತಾಯಿಯಾದ ಮೇನಕೆಯ ಬಳಿಗೆ ಬಂದು ತಾನು ಶಂಕರನನ್ನು ಸೇರಲು ತಪಸ್ಸನ್ನು ಮಾಡುವೆನೆಂಬ ತನ್ನ ನಿಶ್ಚಯವನ್ನು ಹೇಳಿದಳು.

೧೩. ಕಾಳಿಯು ಹೇಳಿದಳು :—ಓ ಮಾತೆಯೇ! ಶಂಕರನನ್ನು ಪಡೆಯಲು ತಪಸ್ಸನ್ನು ಮಾಡುವುದಕ್ಕೆ ಹೋಗುವೆನು. ತಪಸ್ಸಿಗಾಗಿ ತಪೋವನಕ್ಕೆ ಹೋಗಲು ನೀನು ನನಗೆ ಅನುಮತಿಯನ್ನು ಕೊಡು.

ತಪಃಕರಣಯತ್ನಂ ಮೇ ಪಿತುರಾವೇದಯ ದ್ರುತಂ ।
ಯಾವನ್ನ ದಹ್ಯೇ ಜನನಿ ಭೂತೇಶವಿರಹಾಗ್ನಿನಾ ॥ ೧೪ ॥

ಇತಿ ತಸ್ಯಾ ವಚಃ ಶ್ರುತ್ವಾ ಮೇನಕಾ ಶೋಕಕರ್ಶಿತಾ ।
ಆಲಿಂಗ್ಯ ಸ್ವಸುತಾಮೂಚೇ ಮಾ ತಪಃ ಕುರು ವಲ್ಲಭೇ ॥ ೧೫ ॥

ಮೃದುದೇಹಾಸಿ ಪುತ್ರಿ ತ್ವಂ ಮಾ ತಪೋ ಯಾಹಿ ಕರ್ಕಶಂ ।
ತಪಃ ಸೋಢುಂ ಮುನೇರ್ಗಾತ್ರಂ ಶಕ್ತಂ ತೇ ನ ಕಳೇಬರಂ ॥ ೧೬ ॥

ವನವಾಸಶ್ಚ ತೇ ಪುತ್ರಿ ನೇಷ್ಟಃ ಶತ್ರುಗಣೈರಪಿ ।
ತಸ್ಮಾತ್ತ್ವಂ ಸಂಪರಿತ್ಯಜ್ಯ ವನವಾಸೋದ್ಭವಂ ತಪಃ ॥ ೧೭ ॥

ಆತ್ಮನೋ ಹ್ಯನುರೂಪೇಣ ತಪಸ್ತತ್ಕುರು ಯದ್ಧಿತಂ ।
ಮಾತುಃ ಸಾ ವಚನಂ ಶ್ರುತ್ವಾ ಗಿರಿಜಾ ದೀನಮಾನಸಾ ॥ ೧೮ ॥

---

೧೪ ಅಲ್ಲದೆ, ಓ ಮಾತೆಯೇ ! ನಾನು ಶಂಕರನ ವಿರಹಾಗ್ನಿಯಿಂದ ತಪಿಸುತ್ತಿರುವೆನು. ನಾನು ತಪಸ್ಸುಮಾಡುವ ಯತ್ನವನ್ನು ತಂದೆಯಾದ ಹಿಮವಂತನಿಗೆ ತಿಳಿಸು.

೧೫-೧೭. ಈರೀತಿಯಾದ ಕಾಳಿಯ ಮಾತನ್ನು ಕೇಳಿ ಮೇನಕೆಯು ತುಂಬಾ ದುಃಖವುಳ್ಳವಳಾಗಿ ತನ್ನ ಮಗಳಾದ ಆ ಕಾಳಿಯನ್ನು ಆಲಂಗಿಸಿಕೊಂಡು, ಎಲೈ ಪ್ರೀತಿಯ ಮಗಳೇ ! ನೀನು ತಪಸ್ಸನ್ನು ಮಾಡಲಾಗದು. ತಪಸ್ಸಿಗೆ ಹೊರಡಬೇಡ. ಮುನಿಯ ಕಠಿಣವಾದ ಶರೀರವು ತಪಸ್ಸನ್ನು ಸಹಿಸಬಲ್ಲುದು. ಆದರೆ ಮೃದುವಾದ ನಿನ್ನ ಶರೀರವು ತಪಸ್ಸನ್ನು ಸಹಿಸಲಾರದು. ತಪಸ್ಸಿಗಾಗಿ ನೀನು ವನವನ್ನಾಶ್ರಯಿಸುವುದು ನಮ್ಮ ಶತ್ರುಗಳಿಗೂ ಇಷ್ಟವಲ್ಲವು. ಆದಕಾರಣ ನೀನು ಆ ವನವನ್ನಾಶ್ರಯಿಸಿ ಮಾಡಬೇಕಾದ ತಪಸ್ಸನ್ನು ಬಿಟ್ಟು ನಿನಗೆ ಯೋಗ್ಯವಾದುದೂ ಹಿತವಾದುದೂ ಆದ ವ್ರತಾದಿಗಳನ್ನಾಚರಿಸು ಎಂದು ಹೇಳಿದಳು.

೧೪-೧೯. ಮಾರ್ಕಂಡೇಯನು ಹೇಳಿದನು :—ಈರೀತಿಯಾಗಿ ತಾಯಿಯಾದ ಮೇನಕೆಯು ಹೇಳಿದ ಮಾತನ್ನು ಕೇಳಿ ಆ ಪಾರ್ವತಿಯು ದುಃಖಗೊಂಡು ತಪಸ್ಸಿನ ಯತ್ನದಲ್ಲಿ ಆಸಕ್ತಿಯಿಂದ ತಾಯಿಯನ್ನು ಕುರಿತು, ಓ ಮಾತೆಯೇ ! ನೀನು ನನ್ನನ್ನು ತಡೆಯಬೇಡ. ನಾನು ತಪಸ್ಸಿಗಾಗಿ ತಪೋವನಕ್ಕೆ ಹೋಗುವೆನು. ನೀನು ನನಗನು

ಇತ್ಯುಚೇ ಚ ತದಾ ವಾಕ್ಯಂ ತಪೋಯತ್ನಪರಾ ಪ್ರಸೂಂ ।
ಮಾ ನಿಷೇಧಯು ಮಾಂ ಯಾಸ್ಯೇ ತಪಸೇಽದ್ಯ ತಪೋವನಂ ॥ ೧೯ ॥
ಪ್ರಚ್ಛನ್ನಮಪಿ ಯಾಸ್ಯಾಮಿ ನಾನುಜ್ಞಾತಾಸ್ಯಹಂ ತ್ವಯಾ ।

॥ ಮೇನಕೋವಾಚ ॥

ಗೃಹೇಷು ದೇವಾಃ ಸತತಂ ಬ್ರಹ್ಮವಿಷ್ಣುಶಿವಾದಯಃ ॥ ೨೦ ॥
ತಸ್ಮಾದ್ಗೃಹೇ ಪುತ್ರಿ ದೇವಾನರ್ಚಯು ತ್ವಂ ಯಥೇಪ್ಸಿತಾನ್ ।
ಸ್ತ್ರೀಣಾಂ ತಪೋವನಗತಿರ್ನ ಶ್ರುತಾ ಸ್ವಾಮಿನಾ ವಿನಾ ॥ ೨೧ ॥
ತಸ್ಮಾನ್ನ ಯುಜ್ಯತೇ ಪುತ್ರಿ ತಪೋಯಾತ್ರಾ ವನಂ ಪ್ರತಿ ।
ಯತೋ ನಿರಸ್ತಾ ತಪಸೇ ವನಂ ಗಂತು ಚ ಮೇನಯಾ ॥ ೨೨ ॥
ಉಮೇತಿ ತೇನ ಸೋಮೇತಿ ನಾಮು ಪ್ರಾಪ ತದಾ ಸತೀ ।
ಆವಜ್ಞಾಯ ತದಾ ಮಾತುರ್ವಚನಂ ಹಿಮವತ್ಸುತಾ ॥ ೨೩ ॥

ಮತಿಯನ್ನು ಕೊಡದಿದ್ದರೆ ನಿಮಗೆ ತಿಳಿಯದಂತೆಯಾದರೂ ನಾನು ಹೊರಟುಹೋಗುವೆನು ಎಂದು ಹೇಳಿದಳು.

೨೦-೨೧. ಮೇನಕೆಯು ಹೇಳಿದಳು :—ಎಲೈ ಪಾರ್ವತಿಯೇ ! ಬ್ರಹ್ಮವಿಷ್ಣು ಈಶ್ವರರೇ ಮೊದಲಾದ ದೇವತೆಗಳು ಮನೆಯಲ್ಲಿಯೇ ನೆಲಸಿರುವರು. ಆದುದರಿಂದ ನೀನು ಮನೆಯಲ್ಲಿಯೇ ಇದ್ದು ನಿನಗಿಷ್ಟವಾದ ದೇವತೆಯನ್ನು ಪೂಜಿಸಬಹುದು. ಎಲೌ ಮಗಳೇ ! ಪತಿಯಿಲ್ಲದೆ ತಪೋವನಕ್ಕೆ ಸ್ತ್ರೀಯರು ಹೋಗುವುದನ್ನು ನಾನು ಯಾವಾಗಲೂ ಕೇಳಿರುವುದಿಲ್ಲ. ವಾರ್ಧಕ್ಯಾವಸ್ಥೆಯಲ್ಲಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದ ಪತಿಯೊಡನೆ ಸತಿಯು ಹೋಗುವುದು ಪ್ರಸಿದ್ಧವಾಗಿರುವುದು. ಆದರೆ ಪತಿಯಿಲ್ಲದೇ ಇಂತಹ ತಾರುಣ್ಯದಲ್ಲಿ ತಪೋವನಕ್ಕೆ ಹೋಗುವುದು ಅನುಚಿತವು.

೨೨. ಹೀಗೆ ಕಾಳಿಯು ತಪಸ್ಸಿಗೆ ಹೊರಡಲು ಮೇನಕೆಯು " ಉ " ಅಂದರೆ ಎಲೈ ಪಾರ್ವತಿಯೇ ! " ಮಾ " ಅಂದರೆ ತಪಸ್ಸುಬೇಡ ಎಂದು ಹೇಳಿ ತಡೆದುದರಿಂದ ಆ ಕಾಳಿಗೆ " ಉಮಾ " ಎಂದು ಹೆಸರಾಯಿತು.

೨೩. ಮುಂದೆ ಆ ಪಾರ್ವತಿಯು ತಾಯಿಯ ಮಾತನ್ನು ಕೇಳದೆ ತಾನು ತಪಸ್ಸಿಗೆ ಉದ್ಯುಕ್ತಳಾಗಿರುವೆನೆಂಬ ವಿಷಯವನ್ನು ತನ್ನ ಸಖಿಯರ ಮೂಲಕ ತಂದೆಯಾದ ಹಿಮವಂತನಿಗೆ ತಿಳಿಸಿದಳು.

ಸಖಿಭ್ಯಾಂ ಜ್ಞಾಪಯಾಮಾಸ ಪಿತರಂ ತಪಸೋದ್ಯಮಂ ।
ಸ ತು ಜ್ಞಾತ್ವಾ ಗಿರಿಪತಿಸ್ತಪಸೇ ಚರಿತೋದ್ಯಮಂ ॥ ೨೪ ॥

ದುಹಿತುಶ್ಚಾನುಮೇನೇ ಚ ನಾತಿಹೃಷ್ಟಮನಾ ಇವ ।
ಸಾ ತು ಜ್ಞಾಪ್ಯ ತದಾ ತಾತಂ ಯತ್ರ ದಗ್ಧೋ ಮನೋಭವಃ ॥ ೨೫ ॥

ಶಂಭುನಾ ಪ್ರಯಯೌ ತತ್ರ ಗಂಗಾವತರಣಂ ಪ್ರತಿ ।
ಗಂಗಾವತರಣಂ ನಾಮ ಪ್ರಸ್ಥೋ ಹಿಮವತಃ ಸ ಚ ॥ ೨೬ ॥

ಪರಶೂನ್ಯೋಽಥ ತದೃಶೇ ಕಾಲ್ಯಾ ತಚ್ಚಿಂತಯಾ ತದಾ ।
ಯತ್ರ ಸ್ಥಿತ್ವಾ ಪುರಾ ಶಂಭುರ್ಧ್ಯಾನವಾನಭವದ್ಭೃಶಂ ॥ ೨೭ ॥

ತತ್ರ ಕ್ಷಣಂ ತು ಸಾ ಸ್ಥಿತ್ವಾ ಬಭೂವ ವಿರಹಾರ್ದಿತಾ ।
ಹಾ ಹರೇತಿ ಕ್ಷಣಂ ತತ್ರ ರೋದಮಾನಾ ಗಿರೇಃ ಸುತಾ ॥ ೨೮ ॥

ವಿಲಲಾಪಾತಿದುಃಖಾರ್ತಾ ಚಿಂತಾಶೋಕಸಮನ್ವಿತಾ ।
ಕ್ಷಣಂ ವಿಲಪ್ಯ ಸಾ ಕಾಳೀ ಸ್ಮೃತ್ವಾ ಪೂರ್ವೋದ್ಭವಂ ತದಾ ॥ ೨೯ ॥

---

೨೪. ಆ ಹಿಮವಂತನು ತನ್ನ ಮಗಳು ತಪಸ್ಸಿಗೆ ಸಿದ್ಧಳಾಗಿರುವಳೆಂದು ತಿಳಿದು ತನಗೆ ಮನಸ್ಸಿಲ್ಲದಿದ್ದರೂ ನಿರ್ವಾಹವಿಲ್ಲದೆ ಪಾರ್ವತಿಯು ತಪಸ್ಸು ಮಾಡಲು ಒಪ್ಪಿದನು.

೨೫-೨೬. ಅನಂತರ ಆ ಕಾಳಿಯು ತಂದೆಯ ಅನುಮತಿಯನ್ನು ಪಡೆದು ಗಂಗಾವತರಣವೆಂಬ ತಪ್ಪಲಿಗೆ ಹೋದಳು. ಅದು ಹಿಮಾಲಯದಲ್ಲಿರುವುದು. ಆಗ ಶಂಕರನ ಚಿಂತೆಯಿಂದ ಕೂಡಿರುವ ಕಾಳಿಯು ಆ ತಪ್ಪಲನ್ನು ನೋಡಿದಳು. ಅಲ್ಲಿ ಶಂಕರನೇ ಇರಲಿಲ್ಲ.

೨೭-೨೮. ಹಿಂದೆ ಶಂಕರನು ಯಾವ ಸ್ಥಳದಲ್ಲಿದ್ದು ತುಂಬಾ ಧ್ಯಾನಮಗ್ನನಾಗಿದ್ದನೋ ಆ ಸ್ಥಳದಲ್ಲಿ ಸ್ವಲ್ಪಹೊತ್ತು ನಿಂತು ಕಾಳಿಯು ವಿರಹದುಃಖದಿಂದ ಹಾ ಶಂಕರ! ಎಂದು ರೋಧಿಸುತ್ತಾ ಚಿಂತಾಶೋಕಗಳಿಂದ ತುಂಬಾ ಪ್ರಲಾಪಿಸಿದಳು.

೨೯. ಹಾಗೆಯೇ ಸ್ವಲ್ಪಹೊತ್ತು ಪ್ರಲಾಪಿಸಿ ಬಳಿಕ ತನ್ನ ಹಿಂದಿನ ಜನ್ಮದ ವೃತ್ತಾಂತವನ್ನು ಸ್ಮರಿಸಿಕೊಂಡು ಕಮಲದಂತೆ ಸುಂದರವಾದ ಕಣ್ಣುಗಳುಳ್ಳ ಆ ಕಾಳಿಯು ತನ್ನ ಹೃದಯದಲ್ಲಿ ಶಂಕರನ ಮೇಲೆ ಮೋಹವುಳ್ಳವಳಾದಳು.

ಹಾರ್ದಂ ಹರಸ್ಯ ಸಾ ಮೋಹಮವಾಪ ಕಮಲೇಕ್ಷಣಾ ।
ತತಶ್ಚಿರೇಣ ಸಾ ಮೋಹಂ ಧೈರ್ಯಾತ್ಸಂಸ್ತಭ್ಯ ಭಾಮಿನೀ ॥ ೩೦ ॥

ನಿಯಮಾಯೋಭವತ್ತತ್ರ ದೀಕ್ಷಿತಾ ಹಿಮವತ್ಸುತಾ ।
ಪ್ರಥಮಂ ನಿಯಮಸ್ತಸ್ಯಾ ಬಭೂವ ಫಲಭೋಜನಂ ॥ ೩೧ ॥

ಚರ್ಯಾ ಪಂಚಾತಪಾ ಚಿಂತಾ ಶಾಂಭವೀ ಶಾಂಭವೋ ಜಪಃ ।
ಯಜ್ಞೈರ್ಯೈರ್ದಾರುಭಿಃ ಶುಷ್ಕೈಶ್ಚತುರ್ಭಿಕ್ಷು ಚತುಷ್ಕೃತಂ ॥ ೩೨ ॥

ವನ್ಹಿಸಂಸ್ಥಾಪನಂ ಗ್ರೀಷ್ಮೇ ತೀವ್ರಾಂಶುಸ್ತತ್ರ ಪಂಚಮಃ ।
ಹಸ್ತಾಂತರೇ ಚತುರ್ವನ್ಹೀನ್ ಕೃತ್ವಾ ವೈಶ್ವಾನರೇಷ್ಟಿನಾ ॥ ೩೩ ॥

ತನ್ಮಧ್ಯಸ್ಥಾ ಸೂರ್ಯಬಿಂಬಂ ವೀಕ್ಷಂತೇ ವಲ್ಕಲಾಂಶುಕಾ ।
ಗ್ರೀಷ್ಮಂ ನಿನ್ಯೇ ವನ್ಹಿಮಧ್ಯೇ ಶಿಶಿರೇ ತೋಯವಾಸಿನೀ ॥ ೩೪ ॥

---

೩೦. ಅನಂತರ ಆ ಪಾರ್ವತಿಯು ಬಹಳಕಾಲದನಂತರ ಧೈರ್ಯದಿಂದ ಮೋಹವನ್ನು ತಡೆದು ತಪಸ್ಸಿನ ಆಚರಣೆಗಾಗಿ ದೀಕ್ಷಾಬದ್ಧಳಾದಳು.

೩೧. ಕೇವಲ ಹಣ್ಣುಗಳನ್ನೇ ಆಹಾರವನ್ನಾಗಿ ಸೇವಿಸುವುದು, ಪಾರ್ವತಿಯ ತಪಸ್ಸಿನ ಮೊದಲನೆಯ ನಿಯಮವಾಯಿತು. ಮತ್ತು ಆಗ ಪಂಚಾಗ್ನಿಗಳ ಮಧ್ಯದಲ್ಲಿ ತಪಸ್ಸು, ಶಂಕರನ ಚಿಂತನೆ, ಮತ್ತು ಓಂ ನಮಃ ಶಿವಾಯ ಎಂಬ ಶಂಕರನ ಜಪ, ಇವುಗಳನ್ನು ನಡೆಯಿಸುತ್ತಿದ್ದಳು.

೩೨-೩೪. ಗ್ರೀಷ್ಮಋತು (ಬೇಸಗೆ) ವಿನಲ್ಲಿ ಯಜ್ಞವೃಕ್ಷಗಳ ಒಣಗಿದ ಸೌದೆಗಳಿಂದ ನಾಲ್ಕು ದಿಕ್ಕುಗಳಲ್ಲಿಯೂ ಅಗ್ನಿಯನ್ನು ಸ್ಥಾಪಿಸಿ ಅವುಗಳ ಮಧ್ಯದಲ್ಲಿ ಕುಳಿತು ತಪಸ್ಸನ್ನು ಆಚರಿಸುತ್ತಿದ್ದಳು. ಮೇಲೆ ತುಂಬಾ ಪ್ರಕಾಶದಿಂದ ಜ್ವಲಿಸುತ್ತಿರುವ ಸೂರ್ಯನೇ ಐದನೆಯ ಅಗ್ನಿಯು. ಈ ಐದು ಅಗ್ನಿಗಳ ಮಧ್ಯದಲ್ಲಿ ತಪಸ್ಸನ್ನು ಆಚರಿಸಿದಳು. ಈ ಐದು ಅಗ್ನಿಗಳೂ ಅವಳು ಕುಳಿತಿರುವ ಸ್ಥಳಕ್ಕೆ ಒಂದು ಮೊಳ ದೂರ ಮಾತ್ರವಿದ್ದವು. ನಾರುಬಟ್ಟೆಯನ್ನುಟ್ಟು ಈ ಅಗ್ನಿಗಳ ಮಧ್ಯದಲ್ಲಿ ಕುಳಿತು ಮೇಲಿರುವ ಸೂರ್ಯಮಂಡಲವನ್ನು ನೋಡುತ್ತಾ ವೈಶ್ವಾನರವೆಂಬ ಯಾಗರೂಪವಾದ ತಪಸ್ಸಿನ ಅನುಷ್ಠಾನದಿಂದ ಗ್ರೀಷ್ಮಕಾಲವನ್ನು ಕಳೆದಳು. ಶಿಶಿರಋತುವಿನಲ್ಲಿ ನೀರಿನ ಮಧ್ಯದಲ್ಲಿ ನಿಂತು ತಪಸ್ಸುಮಾಡುತ್ತಾ ಆ ಕಾಲವನ್ನು ಕಳೆದಳು.

ಪ್ರಥಮಂ ಫಲಭೋಗೇನ ದ್ವಿತೀಯಂ ತೋಯಭೋಜನಂ ।
ತೃತೀಯಂ ತು ಸ್ವಯಂಪಾತಿವೃಕ್ಷಪಲ್ಲವಭೋಜನಂ ॥ ೩೫ ॥

ಕ್ರಮೇಣ ತು ತದಾ ಪರ್ಣಂ ನಿರಸ್ಯ ಹಿಮವತ್ಸುತಾ ।
ನಿರಾಹಾರವ್ರತಾ ಭೂತ್ವಾ ತಪಶ್ಚರಣಖಿನ್ನಿಕಾ ॥ ೩೬ ॥

ಆಹಾರೇ ತ್ಯಕ್ತಪರ್ಣಾಭೂದ್ಯಸ್ಮಾದ್ಧಿಮವತಃ ಸುತಾ ।
ತೇನ ದೇವೈರಪರ್ಣೇತಿ ಕಥಿತಾ ಪೃಥಿವೀತಲೇ ॥ ೩೭ ॥

ಪಂಚಾತಪವ್ರತೇನೈವ ತೋಯಾನಾಂ ಚ ಪ್ರವೇಶನೈಃ ।
ಏಕಪಾದಸ್ಥಿತಾ ಸಾ ತು ವಸಂತೇ ಹಿಮವತ್ಸುತಾ ॥ ೩೮ ॥

ಷಡಕ್ಷರಂ ಜಪಂತೀ ಸಾ ಚಿರಂ ತೇಪೇ ತಪೋ ಮಹತ್ ।
ಚೀರವಲ್ಕಲಸಂವೀತಾ ಜಟಾಸಂಘಾತಧಾರಿಣೀ ॥ ೩೯ ॥

---

೩೫. ಅಲ್ಲದೆ ಆ ಪಾರ್ವತಿಯು ಕೆಲವುಕಾಲ ಫಲವನ್ನು ಸೇವಿಸುತ್ತಲೂ, ಕೆಲವುಕಾಲ ಜಲವನ್ನು ಸೇವಿಸುತ್ತಲೂ, ಮತ್ತೊಮ್ಮೆ ತಾನಾಗಿ ಮರದಿಂದ ಬಿದ್ದಿರುವ ಎಲೆಗಳನ್ನು ಸೇವಿಸುತ್ತಲೂ ತಪಸ್ಸುಮಾಡುತ್ತಿದ್ದಳು.

೩೬. ಕ್ರಮಕ್ರಮವಾಗಿ ಎಲೆಯ ಆಹಾರವನ್ನೂ ಬಿಟ್ಟು ನಿರಾಹಾರವ್ರತದಿಂದ ಶರೀರಕ್ಲೇಶವನ್ನೂ ಲಕ್ಷಿಸದೆ ತಪಸ್ಸನ್ನು ಆಚರಿಸಿದಳು.

೩೭. ಹೀಗೆ ಆ ಕಾಳಿಯು ಎಲೆಗಳನ್ನೂ ಆಹಾರವನ್ನಾಗಿ ಸೇವಿಸದೆ ತಪಸ್ಸನ್ನಾಚರಿಸುತ್ತಿದ್ದುದರಿಂದ ದೇವತೆಗಳು ಅವಳನ್ನು "ಅಪರ್ಣಾ" ಎಂದರೆ ಎಲೆಯನ್ನು ಬಿಟ್ಟವಳು ಎಂಬ ಹೆಸರಿನಿಂದ ಕರೆದರು.

೩೮. ಆ ಪಾರ್ವತಿಯು ಗ್ರೀಷ್ಮಋತುವಿನಲ್ಲಿ ಪಂಚಾಗ್ನಿಗಳ ಮಧ್ಯದಲ್ಲಿ ಕುಳಿತುಕೊಂಡೂ, ಶಿಶಿರಋತುವಿನಲ್ಲಿ ನೀರಿನಲ್ಲಿ ನಿಂತೂ, ವಸಂತಋತುವಿನಲ್ಲಿ ಒಂದೇ ಕಾಲಿನಲ್ಲಿ ನಿಂತು ಸೂರ್ಯಮಂಡಲವನ್ನು ದೃಷ್ಟಿಸಿ ನೋಡುತ್ತಾ "ಓಂ ನಮಃ ಶಿವಾಯ" ಎಂಬ ಆರು ಅಕ್ಷರವುಳ್ಳ ಮಂತ್ರವನ್ನು ಜಪಿಸುತ್ತಲೂ, ಬಹಳಕಾಲ ಮಹಾ ತಪಸ್ಸನ್ನು ಮಾಡಿದಳು.

೩೯. ನಾರುಬಟ್ಟೆಯನ್ನೂ ಜಟೆಗಳನ್ನೂ ಧರಿಸಿ ಕೃಶಾಂಗಿಯಾದ ಆ ಪಾರ್ವತಿಯು ಅಂತಹ ಉಗ್ರವಾದ ತನ್ನ ತಪಸ್ಸಿನಿಂದ ಮುನಿಗಳನ್ನೂ ಮೀರಿಸಿದಳು ಎಂದರೆ ಮುನಿಗಳಿಗೂ ಅಸಾಧ್ಯವಾದ ತಪಸ್ಸನ್ನು ಆಚರಿಸಿದಳು.

ಕೃಶಾಂಗೀ ಚಿಂತನೇಽಶಕ್ತಾ ಜಿಗಾಯ ತಪಸಾ ಮುನೀನ್ ।
ತಾಂ ತಪಶ್ಚರಣೇಽಶಕ್ತಾಂ ರರಕ್ಷ ಶಂಕರಃ ಸ್ವಯಂ ॥ ೪೦ ॥

ಆಪ್ಯಾಯತಿಸ್ಮ ತದಾ ಭಯಾದ್ರಕ್ಷತಿ ಹರ್ಷಿತಃ ।
ಏವಂ ತಸ್ಯಾಸ್ತಪಸ್ಯಂತ್ಯಾಶ್ಚಿಂತಯಂತ್ಯಾ ಮಹೇಶ್ವರಂ ॥ ೪೧ ॥

ತ್ರೀಣಿ ವರ್ಷಸಹಸ್ರಾಣಿ ಜಗ್ಮುಃ ಕಾಲ್ಯಾಸ್ತಪೋವನೆ ।
ಷಟ್ತ್ರಿವರ್ಷಸಹಸ್ರಾಣಿ ಸಂಸ್ಕೃತಾ ವೀಕ್ಷಣಾತ್ ಸ್ವಯಂ ॥ ೪೨ ॥

ದೈವೇನ ವಿಧಿನಾ ದೇವೀ ವರಯೋಗ್ಯಾ ತದಾಽಭವತ್ ।
ಷಟ್ತ್ರಿವರ್ಷಸಹಸ್ರಾಣಿ ಯತ್ರ ತೇಪೇ ತಪೋ ಹರಃ ॥ ೪೩ ॥

ತತ್ರ ಕ್ಷಣಮುಥೋಷಿತ್ವಾ ಚಿಂತಯಾಮಾಸ ಭಾಮಿನೀ ।
ನಿಯಮಸ್ಥಾಂ ಮಹಾದೇವಃ ಕಿಂ ಮಾಂ ಜಾನಾತಿ ಸಾಧುನಾ ॥ ೪೪ ॥

---

೪೦. ತಪಸ್ಸನ್ನಾಚರಿಸುತ್ತಿರುವ ಆ ಪಾರ್ವತಿಯನ್ನು ಶಂಕರನು ತಾನೇ ಅಂತರ್ಧಾನನಾಗಿ ರಕ್ಷಿಸುತ್ತಿದ್ದನು. ತಪಸ್ಸಿನಿಂದ ಹರ್ಷಗೊಂಡು ಅವನು ಪಾರ್ವತಿಯನ್ನು ಸಂತುಷ್ಟಳಾಗಿರುವಂತೆ ಮಾಡುತ್ತಿದ್ದನು, ಭಯದಿಂದ ರಕ್ಷಿಸುತ್ತಿದ್ದನು.

೪೧. ಆ ತಪೋವನದಲ್ಲಿ ಪಾರ್ವತಿಯು ತಪಸ್ಸನ್ನಾಚರಿಸುತ್ತಾ ಮಹೇಶ್ವರನನ್ನು ಧ್ಯಾನಿಸುತ್ತಲಿರಲು ಮೂರುಸಾವಿರ ವರ್ಷಗಳು ಕಳೆದುವು.

೪೨. ಹೀಗೆ ಹದಿನೆಂಟುಸಾವಿರ ವರ್ಷಗಳಕಾಲ ಮಾಡಿದ ದಿವ್ಯವಾದ ತಪಸ್ಸಿನಿಂದ ಸಂಸ್ಕೃತಳಾಗಿ ಆ ಪಾರ್ವತಿಯು, ಶಂಕರನು ಪರಿಗ್ರಹಿಸಲು ಯೋಗ್ಯಳಾದಳು. ಶಂಕರನಿಗೆ ಸರ್ವವಿಧದಲ್ಲೂ ಅನುರೂಪಳಾದಳು.

೪೩-೪೪. ಹದಿನೆಂಟುಸಾವಿರ ವರ್ಷಗಳು ಕಳೆಯಲು ಪಾರ್ವತಿಯು, ಹಿಂದೆ ಶಂಕರನು ತಪಸ್ಸುಮಾಡುತ್ತಿದ್ದ ಸ್ಥಳದಲ್ಲಿ ಸ್ವಲ್ಪಹೊತ್ತಿದ್ದು ಹೀಗೆ ಆಲೋಚಿಸಿದಳು:- ನಾನು ತಪಸ್ಸಿನಲ್ಲಿ ಆಸಕ್ತಳಾಗಿರುವುದನ್ನು ಮಹಾದೇವನು ತಿಳಿದಿರುವನೋ ಇಲ್ಲವೋ? ಅವನ ಅನುಜ್ಞೆಯನ್ನು ಪಡೆಯದೆ ಅವನಿಗೆ ತಿಳಿಸದೆ ಬಹುಕಾಲ ತಪಸ್ಸನ್ನಾಚರಿಸಿರುವೆನು. ಈ ಲೋಕದಲ್ಲಿಯೇ ಶಂಕರನಿಲ್ಲವೇ ? ಮುನಿಗಳೂ, ದೇವತೆಗಳೂ, ಅವನನ್ನು ಎಲ್ಲವನ್ನೂ ಬಲ್ಲವನೆಂದೂ, ಎಲ್ಲೆಡೆಯಲ್ಲೂ ಇರುವವನೆಂದೂ, ಜ್ಞಾನ

ಯೇನಾಹಂ ಸುಚಿರಂ ತೇನ ನಾನುಜ್ಞಾತಾ ತಪೋರತಾ ।
ಲೋಕೇ ನಾಸ್ತ್ಯತ್ರ ಗಿರಿಶಃ ಕಿಂ ತತ್ರ ಮುನಿಭಿಃ ಸ್ತುತಃ ॥ ೪೫ ॥

ಸರ್ವಜ್ಞಃ ಸರ್ವಗೋ ದೇವೋ ಹರೋ ದೇವೈರ್ನಿಗದ್ಯತೇ ।
ಸ ಸರ್ವಗಸ್ತು ಸರ್ವಜ್ಞಃ ಸರ್ವಾತ್ಮಾ ಸರ್ವಹೃದ್ಗತಃ ॥ ೪೬ ॥

ಸರ್ವಭೂತಿಪ್ರದೋ ದೇವಃ ಸರ್ವಭಾವನಭಾವನಃ ।
ಸತೀ ಚ ಮೇನಕಾ ಮಾತಾ ಯದಿ ಚಾಹಂ ವೃಷಧ್ವಜೇ ॥ ೪೭ ॥

ಸಾನುರಕ್ತಾ ನ ಚಾನ್ಯಸ್ಮಿನ್ ಸ ಪ್ರಸೀದತು ಶಂಕರಃ ।
ಯದಿ ನಾರದವಕ್ತ್ರೋತ್ಥೋ ಮಂತ್ರೋಽಯಂ ಸ್ಯಾತ್ ಷಡಕ್ಷರಃ ॥ ೪೮ ॥

ಯದಿ ಭಕ್ತ್ಯಾ ಮಯಾ ಜಪ್ತಂ ಹರಸ್ತೇನ ಪ್ರಸೀದತು ।
ಸತ್ಯಂ ಯದಿ ತಪಸ್ತಪ್ತಂ ಸತ್ಯಂ ಚಾರಾಧಿತೋ ಹರಃ ॥ ೪೯ ॥

ಜ್ಯೋತಿಯ ಪ್ರಕಾಶಸ್ವರೂಪನೆಂದೂ ಹೇಳುವರಲ್ಲ ನಿಜವಾಗಿಯೂ ಅವನು ಎಲ್ಲಿಡೆಯಲ್ಲಿಯೂ ಇದ್ದೇಇರುವನು; ಎಲ್ಲವನ್ನೂ ಬಲ್ಲವನು; ಸರ್ವರೂಪನು; ಎಲ್ಲರ ಹೃದಯದಲ್ಲಿಯೂ ಅಂತರ್ಯಾಮಿಯಾಗಿ ನೆಲಸಿರುವನು; ಸಕಲ ಐಶ್ವರ್ಯವನ್ನು ಕೊಡುವ ದೇವನವನು; ಮತ್ತು ಬ್ರಹ್ಮನೇ ಮೊದಲಾದ ಎಲ್ಲಾ ಪ್ರಪಂಚಕ್ಕೂ ಕಾರಣನು.

೪೭-೪೯. ಈ ಜನ್ಮದಲ್ಲಿ ಮೇನಕೆಯ ಮಗಳಾದ ನಾನು ಹಿಂದಿನ ಜನ್ಮದಲ್ಲಿ ಈಶ್ವರನಲ್ಲಿಯೇ ಅನುರಕ್ತಳಾದ ಸತೀದೇವಿಯೇ ಆಗಿದ್ದರೆ ಆ ಶಂಕರನು ನನಗೆ ಪ್ರಸನ್ನನಾಗಲಿ; ನಾರದಮುನಿಯು ಹೇಳಿದ ಆರಕ್ಷರಗಳುಳ್ಳ ಆ ವಾಕ್ಯವು ಮಹಾ ಮಂತ್ರವೇ ಆಗಿದ್ದು ಆ ಮಂತ್ರವನ್ನು ನಾನು ಭಕ್ತಿಯಿಂದ ಜಪಿಸಿದುದೇ ಆದರೆ ಆ ಶಂಕರನು ನನಗೆ ಪ್ರಸನ್ನನಾಗಲಿ; ನಾನು ನಿಜವಾಗಿಯೂ ತಪಸ್ಸನ್ನಾಚರಿಸಿ ಶಂಕರನ್ನು ಆರಾಧಿಸಿದ್ದರೆ ಮತ್ತು ತಪಸ್ಸೆಂಬುವುದು ನಿಜವಾದುದಾದರೆ ಶಂಕರನು ನನಗೆ ಪ್ರಸನ್ನನಾಗಲಿ.

ಸತ್ಯಂ ಭವೇದ್ಯದಿ ತಪೋ ಹರಸ್ತೇನ ಪ್ರಸೀದತು ।

॥ ಮಾರ್ಕಂಡೇಯ ಉವಾಚ ॥

ಏವಂ ವಿಚಿಂತಯಂತೀ ಸಾ ಯದಾತಿಷ್ಠದ್ಧರಾಶ್ರಮೇ ॥ ೫೦ ॥

ಅಧೋಮುಖೀ ದೀನವೇಷಾ ಜಟಾವಲ್ಕಲಮಂಡಿತಾ ।
ತದೈವ ಬ್ರಾಹ್ಮಣಃ ಕಶ್ಚಿದ್ಬ್ರಹ್ಮಚಾರೀ ಧೃತವ್ರತಃ ॥ ೫೧ ॥

ಕೃಷ್ಣಾಜಿನೋತ್ತರೀಯೇಣ ಧೃತದಂಡಕಮಂಡಲುಃ ।
ಬ್ರಾಹ್ಮ್ಯಾ ಶ್ರಿಯಾ ದೀಪ್ಯಮಾನಃ ಸ್ವರ್ಣಗೌರಃ ಸುಶೋಭನಃ ॥ ೫೨ ॥

ಜಟಾಭಿಃ ಪರಿವೀತಾಭಿರುದ್ರಿಕ್ತಸ್ತನುದೇಹಭೃತ್ ।
ಉಪಸ್ಥಿತಸ್ತದಾ ಕಾಳೀಂ ಶಂಭುರ್ಬ್ರಾಹ್ಮಣರೂಪಧೃಕ್ ॥ ೫೩ ॥

ಆಸಾದ್ಯ ಪ್ರಥಮಂ ಕಾಳೀಂ ಸಮಾಭಾಷ್ಯ ತದಾ ದ್ವಿಜಃ ।
ಜ್ಞಾತುಂ ಪ್ರತ್ಯಕ್ಷತೋ ರಾಗಂ ಶ್ರೋತುಮಿಚ್ಛಂಶ್ಚ ತದ್ವಚಃ ॥ ೫೪ ॥

೫೦-೫೧. ಮಾರ್ಕಂಡೇಯ ಮುನಿಯು ಹೇಳಿದನು:—ಹೀಗೆ ಜಟೆ, ನಾರು ಬಟ್ಟೆ, ಇವುಗಳನ್ನು ಧರಿಸಿ ದುಃಖದಿಂದ ಆಲೋಚಿಸುತ್ತಾ ಮುಖವನ್ನು ಬಗ್ಗಿಸಿಕೊಂಡು ಇದ್ದಳು. ಆಗ ವ್ರತನಿಷ್ಠನಾದ ಓರ್ವ ಬ್ರಾಹ್ಮಣನು ಬ್ರಹ್ಮಚಾರಿಯ ವೇಷದಿಂದ ಅವಳ ಬಳಿಗೆ ಬಂದನು.

೫೨-೫೪. ಅವನು ಕೃಷ್ಣಾಜಿನವನ್ನು ಹೊದೆದಿದ್ದನು. ದಂಡ, ಕಮಂಡಲು ಗಳನ್ನು ಹಿಡಿದಿದ್ದನು. ಬ್ರಹ್ಮತೇಜಸ್ಸಿನಿಂದ ಪ್ರಕಾಶಿಸುತ್ತಿದ್ದನು. ಚಿನ್ನದಂತೆ ಶರೀರ ಕಾಂತಿಯಿಂದ ತುಂಬಾ ಮನೋಹರವಾಗಿ ಕಾಣುತ್ತಲಿದ್ದನು. ಸುತ್ತಿಕೊಂಡಿರುವ ಜಟೆ, ಉನ್ನತವಾಗಿಯೂ ಕೃಶವಾಗಿಯೂ ಇರುವ ದೇಹ, ಇವುಗಳಿಂದ ಒಪ್ಪುತ್ತಿದ್ದನು. ಇಂತಹ ಬ್ರಾಹ್ಮಣ ಬ್ರಹ್ಮಚಾರಿಯ ವೇಷವನ್ನು ಧರಿಸಿ ಶಂಕರನು ಕಾಳಿಯ ಬಳಿಗೆ ಬಂದು ಮೊದಲು ಕುಶಲಪ್ರಶ್ನೆಯನ್ನು ಮಾಡಿ, ಅನಂತರ ಅವಳಿಗೆ ತನ್ನಲ್ಲಿರುವ ಅನುರಾಗವನ್ನು ಪ್ರತ್ಯಕ್ಷವಾಗಿ ತಿಳಿಯಲು ಮತ್ತು ಆ ಪಾರ್ವತಿಯ ಮಾತುಗಳನ್ನು ಕೇಳಲು ಮೃದುಮಧುರ ವಾಕ್ಯಗಳಿಂದ ಗಿರಿಜೆಯನ್ನು ಕುರಿತು ಹೀಗೆ ಪ್ರಶ್ನಿಸಿದನು.

ವಾಗ್ಮೀ ವಿಚಿತ್ರವಾಕ್ಯೇನ ಪಪ್ರಚ್ಛ ಗಿರಿಜಾಂ ತದಾ ।

॥ ಬ್ರಾಹ್ಮಣ ಉವಾಚ ॥

ಕಾ ತ್ವಂ ಕಸ್ಯಾಸಿ ಕಲ್ಯಾಣಿ ಕಿಮರ್ಥಂ ವಿಜನೇ ವನೇ ॥ ೫೫ ॥

ತಪಶ್ಚರಸಿ ದುರ್ಧರ್ಷಂ ಮುನಿಭಿಃ ಪ್ರಯತಾತ್ಮಭಿಃ ।
ನ ಬಾಲಾ ತ್ವಂ ನಾಪಿ ವೃದ್ಧಾ ತರುಣೀ ಚಾತಿಶೋಭನಾ ॥ ೫೬ ॥

ಕಥಂ ಪತಿಂ ವಿನಾಭೀಕ್ಷ್ಣಂ ತಪಶ್ಚರಸಿ ಸಾಂಪ್ರತಂ ।
ಕಿಂ ವಾ ತಪಸ್ವಿನೀ ಭದ್ರೇ ಕಸ್ಯಚಿತ್ಸಹಚಾರಿಣೀ ॥ ೫೭ ॥

ತಪಸ್ವಿನಃ ಸ ಪುಷ್ಪಾದಿ ಸಮಾಹರ್ತುಂ ಗತೋಽನ್ಯತಃ ।
ಏತನ್ಮಮ ಸಮಾಚಕ್ಷ್ವ ಯದಿ ಗುಹ್ಯಂ ಭವೇನ್ನ ತೇ ॥ ೫೮ ॥

ಯದಿ ತೇ ಹೃದಯೇ ಮನ್ಯುಃ ಕಶ್ಚಿದ್ವಸತಿ ಸಂಪ್ರತಿ ।
ತದಾಚಕ್ಷ್ವ ಸಮರ್ಥೋಽಸ್ಮಿ ತಮಹಂ ಚಾಪಿ ವಾರಿತುಂ ॥ ೫೯ ॥

ಇತ್ಯುಕ್ತ್ವಾ ತೇನ ವಿಪ್ರೇಣ ಗಿರಿಜಾಥ ನಿಜಾಂ ಸಖೀಂ ।
ತಸ್ಯೋತ್ತರಪ್ರದಾನಾಯ ಕಟಾಕ್ಷೇಣ ನ್ಯಯೋಜಯತ್ ॥ ೬೦ ॥

೫೫-೫೯. ಬ್ರಾಹ್ಮಣನು ಹೇಳಿದನು :-ಎಲೌ ಮಂಗಳಾಂಗಿಯೇ! ನೀನಾರು? ಯಾರ ಸಂಬಂಧಿನಿಯು? ಏತಕ್ಕಾಗಿ ಜನರ ಸುಳಿವಿಲ್ಲದ ಈ ವನದಲ್ಲಿ ಜಿತೇಂದ್ರಿಯರಾದ ಮುನಿಗಳಿಗೂ ಅಸಾಧ್ಯವಾದ ತಪಸ್ಸನ್ನು ಆಚರಿಸುತ್ತಿರುವೆ? ನೀನೇನು ಹಸುಳೆಯಲ್ಲ, ಮುದುಕಿಯೂ ಅಲ್ಲ, ತುಂಬಾ ಸುಂದರಿಯಾದ ತರುಣಿಯಾಗಿರುವೆ. ಇಂತಹ ನೀನು ಪತಿ ಇಲ್ಲದೆ ಒಬ್ಬಳೇ ಹೇಗೆ ತಪಸ್ಸನ್ನಾಚರಿಸುತ್ತಿರುವೆ? ನೀನು ತಪಸ್ವಿನಿಯೋ ಅಥವಾ ಯಾವನಾದರೂ ತಪಸ್ವಿಯ ಪತ್ನಿಯಾಗಿರುವೆಯೋ? ಹಾಗಿದ್ದರೆ ನಿನ್ನ ಪತಿಯಾದ ತಪಸ್ವಿಯು ಹೂವು ಮೊದಲಾದವುಗಳನ್ನು ತರಲು ಇಲ್ಲಿಯೇ ಬೇರೆ ಕಡೆಗೆ ಹೋಗಿರಬಹುದಲ್ಲವೆ? ಇವೆಲ್ಲವನ್ನೂ ಸಹ ರಹಸ್ಯವಲ್ಲದಿದ್ದರೆ ನನಗೆ ಹೇಳುವವಳಾಗು. ಅಲ್ಲದೆ ನಿನ್ನ ಹೃದಯದಲ್ಲಿ ಯಾವುದಾದರೂ ದುಃಖವಿದ್ದರೆ ಹೇಳು ಅದನ್ನು ನಾನು ಹೋಗಲಾಡಿಸಬಲ್ಲೆನು.

೬೦. ಹೀಗೆ ಬ್ರಾಹ್ಮಣವೇಷಧಾರಿಯಾದ ಶಂಕರನು ಹೇಳಲು ಗಿರಿಜೆಯು ಆ ಬ್ರಾಹ್ಮಣನಿಗೆ ಉತ್ತರಕೊಡುವಂತೆ ತನ್ನ ಸಖಿಗೆ ದೃಷ್ಟಿಯಿಂದ ಸಂಜ್ಞೆಮಾಡಿದಳು.

ಸಾ ಸಖೀ ವಿಜಯಾ ತಸ್ಯಾ ವಚನಾದ್ಬ್ರಾಹ್ಮಣಂ ತದಾ ।
ಪ್ರೋವಾಚೇದಂ ಯಥಾ ತಥ್ಯಂ ವೀಕ್ಷಂತೀ ಗಿರಿಜಾಮುಖಂ ॥ ೬೧ ॥

ಏತಸ್ಯ ಗಿರಿರಾಜಸ್ಯ ತನಯೇಯಂ ದ್ವಿಜೋತ್ತಮ ।
ಖ್ಯಾತಾ ಪಿ ಪಾರ್ವತೀ ನಾಮ್ನಾ ಕಾಲೀತಿ ಚ ಸುಶೋಭನಾ ॥ ೬೨ ॥

ಊಚೇಯಂ ನ ಚ ಕೇನಾಪಿ ಶಂಕರಂ ವೃಷಭಧ್ವಜಂ ।
ವಾಂಛಂತೀ ದಯಿತಂ ತೀವ್ರಂ ತಪಶ್ಚರತಿ ವೈ ಪತಿಂ ॥ ೬೩ ॥

ತ್ರೀಣಿ ವರ್ಷಸಹಸ್ರಾಣಿ ತಪಸ್ತಪತಿ ಭಾಮಿನೀ ।
ನ ಶಂಕರೋ ಗಿರಿಸುತಾಮದ್ಯಾಪ್ಯಭ್ಯುಪಪದ್ಯತೇ ॥ ೬೪ ॥

ಶಂಕರೋ ಗಿರಿಶೋ ದೇವಃ ಸರ್ವಗಃ ಪರಮೇಶ್ವರಃ ।
ಇತಿಸ್ಮ ಗದ್ಯತೇ ದೇವೈರ್ಮುನಿಭಿಶ್ಚ ತಪೋಧನೈಃ ॥ ೬೫ ॥

---

೬೧. ವಿಜಯಾ ಎಂಬ ಆ ಸಖಿಯು ಪಾರ್ವತಿಯ ಸೂಚನೆಯಂತೆ ಬ್ರಾಹ್ಮಣನನ್ನು ಕುರಿತು ಪಾರ್ವತಿಯ ಮುಖವನ್ನು ನೋಡುತ್ತಾ ನಿಜವಾಗಿರುವುದನ್ನು ಹೀಗೆ ಹೇಳಿದಳು.

೬೨. ಓ ಬ್ರಾಹ್ಮಣಶ್ರೇಷ್ಠನೇ ! ಇವಳು ಗಿರಿರಾಜನಾದ ಈ ಹಿಮವಂತನ ಪುತ್ರಿಯು. ಸುಂದರಿಯಾದ ಇವಳು ಪಾರ್ವತೀ ಮತ್ತು ಕಾಳೀ ಎಂಬ ಹೆಸರುಗಳಿಂದ ಪ್ರಸಿದ್ಧಳಾಗಿರುವಳು.

೬೩-೬೪. ಇವಳಿಗೆ ಯಾರೂ ಏನನ್ನೂ ಹೇಳಿಲ್ಲವು. ವೃಷಭವಾಹನನಾದ ಶಂಕರನೇ ತನಗೆ ಪತಿಯಾಗಬೇಕೆಂದು ಮೂರುಸಾವಿರ ವರ್ಷಗಳಿಂದ ಕಠಿಣವಾದ ತಪಸ್ಸನ್ನಾಚರಿಸುತ್ತಿರುವಳು. ಆದರೆ ಶಂಕರನು ಈವರೆಗೂ ಇವಳನ್ನು ಪರಿಗ್ರಹಿಸಿಲ್ಲವು.

೬೫-೬೬. ಆ ಶಂಕರನು ಸುಖವನ್ನು ಕೊಡುವವನೆಂದೂ, ಜ್ಞಾನಜ್ಯೋತಿಸ್ವರೂಪನೆಂದೂ, ಎಲ್ಲಿಡೆಯಲ್ಲಿಯೂ ವ್ಯಾಪಿಸಿರುವನೆಂದೂ, ಪರಮೇಶ್ವರನೆಂದೂ ಮೊದಲಾಗಿ ದೇವತೆಗಳೂ, ತಪೋಧನರಾದ ಮುನಿಗಳೂ ಸ್ತುತಿಸುವರು. ಇಂತಹ ಆ ಶಂಕರನಿಗೆ ಈ ಪಾರ್ವತಿಯು ಈರೀತಿ ತಪಸ್ಸುಮಾಡುತ್ತಿರುವುದು ಗೊತ್ತಿಲ್ಲವೇ ?

ಕಿಮೇನಾಂ ಸ ನಜಾನಾತಿ ಕಂ ಸಾನೌ ನಾಸ್ತಿ ವಾ ಗಿರೇಃ ।
ಇತಿ ಚಿಂತಾವಿಷಣ್ಣೇಯಮದ್ಯ ನೋ ಲಭತೇ ಸುಖಂ ॥ ೬೬ ॥

ಅಸ್ಮಾರ್ಥಿತಸ್ತ್ವಮನಯಾ ದಯಸೇ ಯದಿ ವಾ ಸುಖಂ ।
ತದೈನಾಂ ಶಂಕರೇಣಾದ್ಯ ತ್ವಂ ಸಂಗಮಯ ಸುವ್ರತ ॥ ೬೭ ॥

ಇತಿ ತಸ್ಯಾ ವಚಃ ಶ್ರುತ್ವಾ ಬ್ರಹ್ಮಚಾರೀ ತದಾ ದ್ವಿಜಃ ।
ಸ್ಮಯಮಾನ ಇದಂ ವಾಕ್ಯಂ ಹೇಲಯೋವಾಚ ಪಾರ್ವತೀಂ ॥ ೬೮ ॥

॥ ಬ್ರಾಹ್ಮಣ ಉವಾಚ ॥

ಅಮೋಘದರ್ಶನಶ್ಚಾಸ್ಮಿ ಹರಂ ಚಾನಯಿತುಂ ಕ್ಷಮಃ ।
ಕಿಂತ್ವೇಕಂ ನಿಗದಾಮ್ಯದ್ಯ ನಿಶ್ಚಿತಂ ಮನ್ಮತಂ ಶೃಣು ॥ ೬೯ ॥

ಜಾನಾಮ್ಯಹಂ ಮಹಾದೇವಂ ತಂ ವದಾಮಿ ಶೃಣುಷ್ವ ಮೇ ।
ವೃಷಧ್ವಜೋ ಮಹಾದೇವೋ ಭೂತಿಲೇಪೀ ಜಟಾಧರಃ ॥ ೭೦ ॥

ಅಥವಾ ಅವನು ಈ ಪರ್ವತದ ತಪ್ಪಲಲ್ಲಿ ಈಗ ಇರುವುದಿಲ್ಲವೇ ? ಈರೀತಿಯಾಗಿ ತುಂಬಾ ಚಿಂತೆಗೊಳಗಾಗಿ ಈ ಕಾಳಿಯು ಈಗ ಸುಖವೆಂಬುದನ್ನೇ ಕಾಣಳು.

೬೭. ಓ ಬ್ರಹ್ಮಚಾರಿಯೇ! ನೀನು ಅಪ್ರಾರ್ಥಿತನಾಗಿ ಇಲ್ಲಿಗೆ ಬಂದಿರುವೆ. ನಿನಗೆ ಇವಳಲ್ಲಿ ದಯೆಯಿದ್ದರೆ ಅಥವಾ ಈ ಪಾರ್ವತಿಗೆ ಸುಖವಾಗಬೇಕೆಂದು ಬಯ ಸುವವನಾದರೆ ಇವಳನ್ನು ಈಗಲೇ ಶಂಕರನೊಡನೆ ಸೇರಿಸು.

೬೮. ಆ ವಿಜಯೆಯು ಹೇಳಿದ ಮಾತನ್ನು ಕೇಳಿ, ಬ್ರಾಹ್ಮಣನಾದ ಆ ಬ್ರಹ್ಮ ಚಾರಿಯು ಮಂದಹಾಸವನ್ನು ಬೀರುತ್ತ, ಹಾಸ್ಯಪೂರ್ವಕವಾಗಿ ಪಾರ್ವತಿಯನ್ನು ಕುರಿತು ಹೀಗೆ ಹೇಳಿದನು.

೬೯. ಬ್ರಾಹ್ಮಣನು ಹೇಳಿದನು:—ನನಗೆ ಅಮೂಲ್ಯವಾದ ಜ್ಞಾನದೃಷ್ಟಿ ಯಿರುವುದು. ಶಂಕರನನ್ನೂ ಸಹ ಇಲ್ಲಿಗೆ ಕರೆತರಲು ಶಕ್ತನಾಗಿರುವೆನು. ಆದರೆ ನಿಶ್ಚಯವಾದ ಒಂದು ವಿಷಯವನ್ನು ಹೇಳುವೆನು ಕೇಳು.

೭೦-೭೪. ನಾನು ಶಂಕರನನ್ನು ಚೆನ್ನಾಗಿ ಬಲ್ಲೆನು. ಅವನ ಸ್ವರೂಪವನ್ನು ಹೇಳುವೆನು ಕೇಳು. ಅವನಿಗೆ ಎತ್ತೇ ವಾಹನವು, ಮೈಗೆಲ್ಲಾ ಬೂದಿಯನ್ನು ಬಳಿದು

ವ್ಯಾಘ್ರಚರ್ಮಾಂಶುಕಶ್ಚೈಕಃ ಸಂವೀತೋ ಗಜಕೃತ್ತಿನಾ ।
ಕಪಾಲಧಾರೀ ಸರ್ಪೌಘೈಃ ಸರ್ವಗಾತ್ರೇಷು ವೇಷ್ಟಿತಃ ॥ ೭೧ ॥

ವಿಷದಿಗ್ಧಗಲಸ್ತ್ರ್ಯಕ್ಷೋ ವಿರೂಪಾಕ್ಷೋ ವಿಭೀಷಣಃ ।
ಅವ್ಯಕ್ತಜನ್ಮಾ ಸತತಂ ಗೃಹಭೋಗ್ಯವಿವರ್ಜಿತಃ ॥ ೭೨ ॥

ಜ್ಞಾತಿಭಿರ್ಬಾಂಧವೈರ್ಹೀನೋ ಭಕ್ಷ್ಯಭೋಜ್ಯವಿವರ್ಜಿತಃ ।
ಸ್ಮಶಾನವಾಸೀ ಸತತಂ ತತ್ಸಂಗಪರಿವರ್ಜಿತಃ ॥ ೭೩ ॥

ಗರ್ಜದ್ಭಿರ್ವಿಕಟೈಸ್ತೀಕ್ಷ್ಣೈರ್ಭೂತೌಘೈಃ ಪರಿವಾರಿತಃ ।
ಶೃಂಗಾರರಸಹೀನಶ್ಚ ಭಾರ್ಯಾಪುತ್ರವಿವರ್ಜಿತಃ ॥ ೭೪ ॥

ಕೇನ ವಾ ಕಾರಣೇನ ತ್ವಂ ಭರ್ತಾರಂ ತಂ ಸಮೀಹಸೇ ।
ಪೂರ್ವಂ ಶ್ರುತಂ ಮಯಾ ಚೈವ ತಸ್ಯಾಪರಮಿದಂ ಕೃತಂ ॥ ೭೫ ॥

ಕೊಳ್ಳುವನು, ಅಸಹ್ಯವಾದ ಜಟೆಗಳನ್ನು ಧರಿಸಿರುವನು, ಹುಲಿಯ ಚರ್ಮವನ್ನು ಉಡುವನು, ಆನೆಯ ಚರ್ಮವನ್ನು ಹೊದೆಯುವನು, ಅಶುದ್ಧವೂ, ಅಸಹ್ಯವೂ ಆದ ಮನುಷ್ಯನ ತಲೆಬುರುಡೆ (ಕಪಾಲ) ಯನ್ನು ಧರಿಸಿರುವನು, ಮೈಗೆಲ್ಲಾ ಹಾವುಗಳನ್ನು ಸುತ್ತಿಕೊಂಡಿರುವನು, ಅವನ ಕತ್ತು ವಿಷಮಯವಾಗಿದೆ, ಎಲ್ಲರಂತಿರದೆ ಅವನಿಗೆ ಮೂರು ಕಣ್ಣುಗಳಿರುವುವು, ಅವುಗಳಿಂದ ಅವನು ವಿಕಾರವಾಗಿ ಕಾಣುತ್ತಿರುವನು, ತುಂಬಾ ಭಯಂಕರನು, ಅವನ ಹುಟ್ಟೇ ತಿಳಿಯದು, ಮನೆ ಮಠ ಮುಂತಾದ ಸುಖ ಸಾಧನವಸ್ತುಗಳಾವುವೂ ಅವನಿಗಿಲ್ಲ, ಅವನಿಗೆ ನೆಂಟರಿಷ್ಟರೂ ಬಂಧುಬಳಗಗಳೂ ಯಾರೂ ಇಲ್ಲವು, ತಿನ್ನುಣ್ಣುವುದಕ್ಕಂತೂ ಇಲ್ಲವೇಇಲ್ಲವು, ಮನೆಯಿಲ್ಲದೆ ನಿತ್ಯವೂ ಸ್ಮಶಾನದಲ್ಲಿ ವಾಸಿಸುವನು, ಅವನಿಗೆ ಒಳ್ಳೆಯ ಸಹವಾಸವೇ ಇಲ್ಲ, ಭಯಂಕರವಾಗಿ ಗರ್ಜಿಸುವ ಮತ್ತು ವಿಕಾರವಾಗಿಯೂ ಕ್ರೂರವಾಗಿಯೂ ಇರುವ ಭೂತ (ದೆವ್ವ) ಗಳೇ ಅವನ ಪರಿವಾರಗಳು, ಆ ಶಂಕರನಲ್ಲಿ ಶೃಂಗಾರರಸವೆಂಬುದೇ ಇಲ್ಲವು, ಹೆಂಡತಿ ಮಕ್ಕಳುಗಳೂ ಸಹ ಅವನಿಗಿಲ್ಲವು.

೭೫. ಹೀಗಿದ್ದರೂ ನೀನು ಆ ಶಂಕರನೇ ನಿನಗೆ ಪತಿಯಾಗಬೇಕೆಂದು ಯಾವ ಕಾರಣದಿಂದ ಅಪೇಕ್ಷಿಸುವೆ? ಈಗ ನಾನು ಹೇಳಿದ ಅವನ ಸ್ವರೂಪವು ಹಿಂದೆ ನಾನು ಕೇಳಿ ತಿಳಿದಿರುವುದು. ಈಗ ಹೊಸದೊಂದು ಸಮಾಚಾರವನ್ನು ಕೇಳಿರುವೆನು ಅದನ್ನೂ ಹೇಳುವೆನು.

ಶೃಣು ತೇ ನಿಗದಾಮ್ಯದ್ಯ ಯದಿ ತೇ ಗೃಹ್ಣಿ ರೋಚತೇ।
ದಕ್ಷಸ್ಯ ದುಹಿತಾ ಸಾಧ್ವೀ ಸತೀ ವೃಷಭವಾಹನಂ ॥ ೭೬ ॥

ವವ್ರೇ ಪತಿಂ ಪುರಾ ದೈವಾತ್ಸಂಭೋಗಪರಿವರ್ಜಿತಂ ।
ಕಪಾಲಿಜಾಯೇತಿ ಸತೀ ದಕ್ಷೇಣ ಪರಿವರ್ಜಿತಾ ॥ ೭೭ ॥

ಯಜ್ಞಾಭಾಗಪ್ರದಾನಾಯ ಶಂಭುಶ್ಚಾಪಿ ವಿವರ್ಜಿತಃ।
ಸಾಥ ತೇನಾಪಮಾನೇನ ಭೃಶಂ ಶೋಕಾಕುಲಾ ಸತೀ ॥ ೭೮ ॥

ತತ್ಯಾಜ ಸ್ವಾನ್ ಪ್ರಿಯಾನ್ ಪ್ರಾಣಾನ್ ತಯಾ ತ್ಯಕ್ತಶ್ಚ ಶಂಕರಃ ।
ತ್ವಂ ಸ್ತ್ರೀರತ್ನಂ ತವ ಪಿತಾ ರಾಜಾ ನಿಖಿಲಭೂಭೃತಾಂ ॥ ೭೯ ॥

ತಥಾವಿಧಂ ಪತಿಂ ಕಸ್ಮಾದುಗ್ರೇಣ ತಪಸೇಹಸೇ ।
ದೇವೇಂದ್ರೋವಾ ಧನೇಶೋ ವಾ ಪವನೋ ವಾಪ್ಯಪಾಂ ಪತಿಃ ॥ ೮೦ ॥

---

೭೬. ಹಿಂದೆ ದಕ್ಷಬ್ರಹ್ಮನ ಕುವರಿಯೂ, ಪತಿವ್ರತೆಯೂ ಆದ ಸತೀದೇವಿಯು ಕಾಮಸುಖದ ಅರಿವೇ ಇಲ್ಲದ ಶಂಕರನನ್ನು ಅದೃಷ್ಟಪರಿಪಾಕದಿಂದ ವರಿಸಿದಳು.

೭೭. ಅಶುದ್ಧವಾದ ಕಪಾಲವನ್ನು ಧರಿಸಿದ ಶಂಕರನ ಹೆಂಡತಿಯೆಂದು ತಂದೆಯಾದ ದಕ್ಷಬ್ರಹ್ಮನು ಅವಳನ್ನು ತನ್ನ ಮನೆಗೇ ಸೇರಿಸುತ್ತಲಿರಲಿಲ್ಲ. ಯಾಗದಲ್ಲಿ ಹವಿರ್ಭಾಗಕ್ಕಾಗಿ ಶಂಕರನನ್ನೂ ಸಹ ಆ ದಕ್ಷನು ಕರೆಯಲಿಲ್ಲವು.

೭೮. ತನ್ನ ತಂದೆಯು ಮಾಡಿದ ಈ ಅಪಮಾನದಿಂದ ತುಂಬಾ ದುಃಖಿಗೊಂಡು ತನಗೆ ಪ್ರಿಯವಾದ ಪ್ರಾಣಗಳನ್ನು ಬಿಟ್ಟಳು. ಆ ಮೂಲಕ ಶಂಕರನನ್ನೂ ತ್ಯಜಿಸಿದಳು.

೭೯. ನೀನು ಸ್ತ್ರೀಯರಲ್ಲಿ ಅತ್ಯಂತ ಶ್ರೇಷ್ಠಳಾದವಳು. ನಿನ್ನ ತಂದೆಯು ಪರ್ವತಗಳಿಗೆ ರಾಜನು. ಹೀಗಿರುವಲ್ಲಿ ಇಂತಹ ಅನುರೂಪನಲ್ಲದ ಪತಿಯನ್ನು ಉಗ್ರವಾದ ತಪಸ್ಸಿನಿಂದ ಪಡೆಯಲು ಏಕೆ ಯತ್ನಿಸಿರುವೆ ?

೮೦-೮೨. ದೇವೇಂದ್ರ, ಕುಬೇರ, ವಾಯು, ವರುಣ, ಅಗ್ನಿ, ಅಥವಾ ಮಿಕ್ಕ ಬೇರೆ ದೇವತೆಗಳು, ದೇವವೈದ್ಯರಾದ ಅಶ್ವಿನೀಕುಮಾರರು, ವಿದ್ಯಾಧರರು, ಗಂಧರ್ವಕುಮಾರರು, ನಾಗಕುಮಾರ, ಅಥವಾ ಮನುಷ್ಯಕುಮಾರ ಇವರಲ್ಲಿ ರೂಪ, ಯೌವನ

ಅಗ್ನಿರ್ವಾನ್ಯಃ ಸುರೋ ವಾಪಿ ಸ್ವರ್ವೈದ್ಯಾವಶ್ವಿನಾವಪಿ ।
ವಿದ್ಯಾಧರೋ ವಾ ಗಂಧರ್ವೋ ನಾಗೋ ನಾ ಮಾನುಷೋಥ ವಾ ॥ ೮೧ ॥

ರೂಪಯೌವನಸಂಪನ್ನಃ ಸಮಸ್ತಗುಣಸಂಯುತಃ ।
ಸ ತೇ ಯೋಗ್ಯಃ ಪತಿಃ ಶ್ರೀಮಾನುದಾರಕುಲಸಂಭವಃ ॥ ೮೨ ॥

ಯೇನ ತ್ವಂ ಬಹುರತ್ನೌಘಪೂರಿತೇಽನರ್ಘವಿಸ್ತೃತೇ ।
ಮಾಲ್ಯಪ್ರವರಸಂಯುಕ್ತೇ ಧೂಪಚೂರ್ಣೈಃ ಸುವಾಸಿತೇ ॥ ೮೩ ॥

ಮೃದ್ವಾಸ್ತರಣಸಂಯುಕ್ತೇ ವಿಸ್ತೃತೇ ಸುಮನೋಹರೇ ।
ಚಾರುಪ್ರಸಾದಗರ್ಭಸ್ಥೇ ಜಾಂಬೂನದವಿಚಿತ್ರಿತೇ ॥ ೮೪ ॥

ಶಯ್ಯಾತಲೇ ಸಮಾಸಾದ್ಯ ಸ ಯೋಗ್ಯಸ್ತೇ ಭವೇತ್ಪತಿಃ ।
ಏವಂ ಜ್ಞಾತ್ವಾದ್ಯ ಸುಭಗೇ ಯದಿ ವಾಂಛಸಿ ಶಂಕರಂ ॥ ೮೫ ॥

ಸಂಪನ್ನನೂ, ಸಕಲಗುಣಸಂಪೂರ್ಣನೂ, ಶ್ರೀಮಂತನೂ, ದೊಡ್ಡಕುಲದಲ್ಲಿ ಜನಿಸಿದವನೂ ಆದ ಪುರುಷನನ್ನು ನೀನು ವರಿಸುವುದು ನ್ಯಾಯವು.

೮೩-೮೪. ಯಾವ ತರುಣನೊಂದಿಗೆ ನೀನು ಸೇರಲಪೇಕ್ಷಿಸುವೆಯೋ ಅವನ ಶಯನಗೃಹವು ಅನೇಕ ರತ್ನಖಚಿತವಾದುದೂ, ಬೆಲೆಯುಳ್ಳದುದೂ, ವಿಶಾಲವಾದುದೂ, ಶ್ರೇಷ್ಠವಾದ ಹಾರಗಳಿಂದ ತುಂಬಿದುದೂ ಆಗಿರಬೇಕು. ಅದು ಸುಗಂಧದ್ರವ್ಯಗಳಿಂದ ಘಮಘಮಿಸುತ್ತಿರಬೇಕು. ಮೆತ್ತನೆಯ ಹಾಸಿಗೆಯೂ, ಹೊದಿಕೆಗಳೂ ಇರಬೇಕು. ಸುವರ್ಣದಿಂದ ಅಲಂಕೃತವಾಗಿಯೂ, ಅತ್ಯಂತ ಮನೋಹರವಾಗಿಯೂ ಇರಬೇಕು. ಅಲ್ಲದೆ ಆ ಗೃಹವು ಸುಂದರವಾದ ಅರಮನೆಯಲ್ಲಿಯ ಒಳಗೃಹದಲ್ಲಿರಬೇಕು. ಇಂತಹ ಶಯನಗೃಹದಲ್ಲಿ ಯಾವ ತರುಣನೊಂದಿಗೆ ಸೇರಬಲ್ಲೆಯೋ ಅಂಥವನೇ ನಿನಗೆ ಯೋಗ್ಯನಾದ ಪತಿಯು.

೮೫. ಎಲೈ ಭಾಗ್ಯವಂತೆಯೇ ! ಇಷ್ಟೆಲ್ಲಾ ತಿಳಿದಿದ್ದರೂ ನೀನು ಆ ಶಂಕರನನ್ನೇ ಪ್ರೀತಿಸುವೆಯಾದರೆ ಸುಮ್ಮನೆ ತಪಸ್ಸನ್ನೇಕೆ ಆಚರಿಸುವೆ ? ನಾನು ಆ ಶಂಕರನೊಡನೆ ನಿನ್ನನ್ನು ಸೇರಿಸುವೆನು.

ಕಿಂ ತೇ ತಪೋಭಿಃ ಸುತರಾಮಹಂ ತಂ ಯೋಜಯೇ ತ್ವಯಾ ।

॥ ಮಾರ್ಕಂಡೇಯ ಉವಾಚ ॥

ಇತಿ ಶ್ರುತ್ವಾ ತದಾ ಕಾಳೀ ಬ್ರಾಹ್ಮಣಸ್ಯೋತ್ತರಂ ತದಾ ॥ ೬೬ ॥

ಮಿತಂ ತಥ್ಯಂ ಜಗಾದೈನಂ ಬ್ರಾಹ್ಮಣಂ ಕೋಪಸಂಯುತಾ ।

॥ ಕಾಳ್ಯುವಾಚ ॥

ನ ಜಾನಾಸಿ ಹರಂ ದೇವಂ ತ್ವಂ ಜಾನಾಮೀತಿ ಭಾಷಸೇ ॥ ೬೭ ॥

ಬಹಿರ್ಯದ್ದೃಶ್ಯತೇ ತತ್ತೇ ಕಥಿತಂ ದ್ವಿಜನಂದನ ।
ಯಸ್ಯ ಭಾವಂ ನ ಜಾನಂತಿ ಸೇಂದ್ರಾ ಬ್ರಹ್ಮಾದಯಃ ಸುರಾಃ ॥ ೬೮ ॥

ತಸ್ಯ ತ್ವಂ ವಿಪ್ರತನಯ ಶಿಶುಜ್ಞಾಸ್ಯಸಿ ಕಿಂ ಭವಂ ।
ಯಚ್ಛ್ರುತಂ ಭವತಾ ನೀಚವದನಾದ್ಭಾಷಿತಂ ಲಘು ॥ ೬೯ ॥

---

೬೬. ಮಾರ್ಕಂಡೇಯನು ಹೇಳಿದನು:— ಈರೀತಿಯಾಗಿ ಬ್ರಾಹ್ಮಣನು ಹೇಳಿದ್ದುದನ್ನು ಕೇಳಿ ಅವನು ಮಾಡಿದ ಶಂಕರನ ನಿಂದೆಯಿಂದ ಕೋಪಗೊಂಡು ಕಾಳಿಯು ಮಿತವಾದರೂ ಸತ್ಯವಾಗಿರುವ ಮಾತನ್ನು ಆ ಬ್ರಾಹ್ಮಣನಿಗೆ ಹೇಳಿದಳು.

೬೭. ಕಾಳಿಯು ಹೇಳಿದಳು:—ಓ ಬ್ರಾಹ್ಮಣಶ್ರೇಷ್ಠನೇ! ನೀನು ದೇವ ದೇವನಾದ ಶಂಕರನನ್ನು ತಿಳಿದಿಲ್ಲ. ಆದರೆ ತಿಳಿದಿರುವೆನೆಂದು ಮಾತ್ರ ಹೇಳುವೆ. ನಿನಗೆ ಹೊರಗೆ ಅವನ ವಿಷಯದಲ್ಲಿ ಏನು ಕಂಡಿರುವುದೋ ಅದನ್ನು ಮಾತ್ರ ಹೇಳಿರುವೆ.

೬೮. ಎಲೈ ಬ್ರಾಹ್ಮಣಪುತ್ರನೇ! ಆ ಶಂಕರನ ಉತ್ಪತ್ತಿಯು ಬ್ರಹ್ಮ ಮತ್ತು ಇಂದ್ರರೇ ಮೊದಲಾದ ದೇವತೆಗಳಿಗೂ ತಿಳಿಯದು. ಎಂದಮೇಲೆ ಪಸುಳೆಯಾದ ನಿನಗೆ ಅವನ ಉತ್ಪತ್ತಿಯು ತಿಳಿಯುವ ಬಗೆಯೆಂತು ?

೬೯. ನೀನು ಕೇಳಿದುದನ್ನು ಮಾತ್ರ ನಿನ್ನ ಈ ನೀಚನಾದ ಮುಖದಿಂದ ಆಡಿತೋರಿಸಿದೆ. ಅಲ್ಲಿ ಇಲ್ಲಿ, ಅವರಿವರು ಹೇಳಿದುದನ್ನು ಕೇಳಿಕೊಂಡು ನೀನು ಆಡುತ್ತಿರುವೆ. ನಿಜವಾಗಿಯೂ ನೀನು ಅವನನ್ನು ನೋಡಿರುವುದಿಲ್ಲ.

ಇತಸ್ತತಸ್ತು ಶ್ರುತ್ವೈವ ಭಾಷಸೇ ತ್ವಂ ನ ದೃಷ್ಟವಾನ್ ।
ತಸ್ಮಾತ್ತ್ವತ್ತೋ ವರಂ ನಾಹಂ ವಾಂಛಯೇ ನಾಪಿ ವಾ ಪತಿಂ ॥ ೯೦ ॥

ಅನ್ಯದ್ವದ ನ ಚ ತ್ವತ್ತೋ ವಾಂಛಯೇ ಹರಸಂಗಮಂ ।
ಇತ್ಯುಕ್ತ್ವಾ ಗಿರಿಜಾ ವಿಪ್ರಮವಲೋಕ್ಯ ಸಖೀಮುಖಂ ॥ ೯೧ ॥

ಇದಮಾಹ ತದಾ ಕಾಳೀ ಸಂಶಯಾರೂಢಚೇತನಾ ।
ಮಹತಾ ಚಿಂತನೇನೇಹ ತಪಸಾರಾಧಿತೋ ಹರಃ ॥ ೯೨ ॥

ತನ್ಮಮಾಗ್ರೇ ವಿಪ್ರಸುತೋ ನಿಂದಿತುಂ ವಾಕ್ಯಮುಕ್ತವಾನ್ ।
ತದಹಂ ಚಾಪನೇಷ್ಯಾಮಿ ಸ್ತುತಿವಾಕ್ಯೇನ ಸಾಂಪ್ರತಂ ॥ ೯೩ ॥

ಮಹಾತ್ಮನಾಂ ಚ ಯೋ ನಿಂದಾಂ ಶೃಣುತೇ ಕುರುತೇಽಥವಾ ।
ತಯೋರಾಗಃ ಸಮಂ ಪೂರ್ವಂ ಮಯಾ ತಾತಮುಖಾಚ್ಛ್ರುತಂ ॥ ೯೪ ॥

ತಸ್ಮಾತ್ತದಪನೇಷ್ಯೇಽಹಂ ತನ್ನಿಷೇಧಯ ವಿಪ್ರಕಂ ।
ಇತ್ಯುಕ್ತ್ವಾ ಸಾ ಸಖೀಂ ಕಾಳೀ ಶಂಭುಸಂಗತಮಾನಸಾ ॥ ೯೫ ॥

---

೯೦. ಆದಕಾರಣ ನಿನ್ನಿಂದ ನನಗೆ ಯಾವ ವರವೂ ಬೇಡ. ಪತಿಯನ್ನು ಅಪೇಕ್ಷಿಸುವುದೂ ಇಲ್ಲ. ನೀನು ಏನುಹೇಳಿದರೂ ನಿನ್ನಿಂದ ನನಗೆ ಶಂಕರನ ಸಮಾಗಮವಾಗುವುದು ಬೇಡ.

೯೧-೯೫. ಹೀಗೆ ಬಾಹ್ಮಣನಿಗೆ ಹೇಳಿ ಗಿರಿಜೆಯು ಸಂದೇಹದಿಂದ ಕಲುಷಿತವಾದ ಮನಸ್ಸುಳ್ಳವಳಾಗಿ ಸಖಿಯ ಮುಖವನ್ನು ನೋಡಿ, ಎಲೌ ಸಖಿಯೇ ! ಮಹತ್ತಾದ ಧ್ಯಾನದಿಂದಲೂ, ತಪಸ್ಸಿನಿಂದಲೂ, ಶಂಕರನನ್ನು ಆರಾಧಿಸಿರುವೆನು. ಆ ಹರನನ್ನು ಈ ಬ್ರಾಹ್ಮಣಕುಮಾರನು ನನ್ನೆದುರಿನಲ್ಲಿ ನಿಂದಿಸುವ ವಾಕ್ಯವನ್ನು ನುಡಿದಿರುವನು. ಶಂಕರನ ನಿಂದೆಯನ್ನು ಕೇಳಿದ ಮಹಾಪಾಪವನ್ನು ಸ್ತುತಿವಾಕ್ಯದಿಂದ ಈಗ ಹೋಗಲಾಡಿಸುವೆನು. ಮಹಾತ್ಮರ ನಿಂದೆಯನ್ನು ಕೇಳುವವರಿಗೂ, ಮಾಡುವವರಿಗೂ ಒಂದೇಸಮವಾದ ಪಾಪವುಂಟಾಗುವುದೆಂದು ತನ್ನ ತಂದೆಯ ಮುಖದಿಂದ ಕೇಳಿರುವೆನು. ಆದಕಾರಣ ಹರನಿಂದೆಯನ್ನು ಕೇಳಿದ್ದರಿಂದ ಉಂಟಾದ ಪಾಪವನ್ನು ಹೋಗಲಾಡಿಸುವೆನು. ನೀನು ಶಂಕರನನ್ನು ನಿಂದಿಸಿದಂತೆ ಆ ಬ್ರಾಹ್ಮಣ ವಟುವನ್ನು ತಡಿ ಎಂದು ನುಡಿದಳು.

ಅಗಃಸಮ್ಮಾರ್ಜನಾಯಾಶು ಹರಂ ಸ್ತೋತುಮುಪಾಕ್ರಮತ್ ।

॥ ಕಾಳ್ಯುವಾಚ ॥

ನಮಃ ಶಿವಾಯ ಶಾಂತಾಯ ಕಾರಣತ್ರಯಹೇತವೇ ॥ ೯೬ ॥

ನಿವೇದಯಾಮಿ ಚಾತ್ಮಾನಂ ತ್ವಂ ಗತಿಃ ಪರಮೇಶ್ವರ ।
ವಿಜ್ಞಾನಸೌಭಾಗ್ಯಸುಹೃದ್ಭಾಯ ತೇ
ಪ್ರಪಂಚಹೀನಾಯ ಹಿರಣ್ಯಬಾಹವೇ ॥
ನಮೋಽಸ್ತು ನಾರಾಯಣಪದ್ಮಸಂಭವ
ಪ್ರಧಾನಬೀಜಾಯ ಜಗದ್ಧಿತಾಯ ತೇ ॥ ೯೭ ॥

ಇತಿ ಸ್ತುವಂತೀ ಪುನರೇವ ಸ ದ್ವಿಜಃ
ತದಾ ವಚಃ ಕಿಂಚಿದುದೀರಿತುಂ ಪುನಃ ॥
ಸಮೀಕ್ಷ್ಯ ಕಾಳೀಮುಕರೋತ್ಸಯತ್ನಕಂ
ಬುಧ್ವಾ ಸಮಾಚಷ್ಟ ಸಖೀಂ ಗಿರೇಃ ಸುತಾ ॥ ೯೮ ॥

ಅಯಂ ದ್ವಿಜಃ ಕಿಂಚನ ವಕ್ತುಮಿಚ್ಛತಿ
ಉಗ್ರಂ ಹರಂ ಚಾಪಿ ನ ಸಂವಿದಾನಃ ॥

೯೬-೯೭. ಆಗ ಕಾಳಿಯು ಆ ಪಾಪಪರಿಹಾರಕ್ಕಾಗಿ ಶಂಕರನಲ್ಲಿಯೇ ನೆಟ್ಟಮನಸ್ಸಿನಿಂದ ಸ್ತೋತ್ರಮಾಡಿದಳು. ಮಂಗಳಸ್ವರೂಪನೂ, ಶಾಂತನೂ, ಬ್ರಹ್ಮವಿಷ್ಣುರುದ್ರರೆಂಬ ಮೂವರು ಜಗತ್ತಿನ ಕಾರಣರಿಗೂ ಕಾರಣನಾದವನೂ ಆದ ಶಂಕರನಿಗೆ ನಮಿಸುವೆನು. ಓ ಪರಮೇಶ್ವರನೇ! ನಿನಗೆ ನನ್ನನ್ನೇ ಅರ್ಪಿಸುವೆಮ. ನೀನೇ ನನಗೆ ಗತಿಯು. ನೀನು ಜ್ಞಾನಸ್ವರೂಪನು, ಸಕಲೈಶ್ವರ್ಯಸಂಪನ್ನನು, ಎಲ್ಲಾ ಪ್ರಪಂಚವನ್ನು ತೊರೆದು ವಿರಕ್ತನಾಗಿರುವವನು, ಸುವರ್ಣವರ್ಣವಾದ ಭುಜಗಳುಳ್ಳವನು, ನಾರಾಯಣ, ಬ್ರಹ್ಮ, ಪ್ರಕೃತಿ (ಮಾಯೆ), ಇವುಗಳಿಗೆ ಕಾರಣನು, ಜಗತ್ತನ್ನು ರಕ್ಷಿಸುವವನು, ಇಂತಹ ನಿನಗೆ ನಮಸ್ಕಾರವು.

೯೮. ಹೀಗೆ ಸ್ತುತಿಸುತ್ತಿರುವ ಕಾಳಿಯನ್ನು ಕುರಿತು ತಿರುಗಿ ಆ ಬ್ರಾಹ್ಮಣ ಪಟುವು ಮಾತನಾಡಲು ಉದ್ಯುಕ್ತನಾದನು. ಅವನ್ನು ತಿಳಿದು ಆ ಕಾಳಿಯು ತನ್ನ ಸಖಿಯನ್ನು ಕುರಿತು ಹೀಗೆ ಹೇಳಿದಳು.

೯೯. ಎಲೌ ಸಖಿಯೇ! ಈ ಬ್ರಾಹ್ಮಣನು, ಪಾಪಿಗಳಿಗೆ ಭಯಂಕರನೂ, ಭಕ್ತರ ಪಾಪವನ್ನು ನಾಶಮಾಡತಕ್ಕವನೂ ಆದ ಶಂಕರನನ್ನು ತಿಳಿಯದಿದ್ದರೂ ಆ

ನಿಂದನ್ ನ ಹಿ ಪ್ರಾಣಹರೀಂ ಹರಸ್ಯ
ನಿಂದಾಮಪಂ ಶ್ರೋತುಮಿಹ ಕ್ಷಮಾಮಿ ॥ ೯೯ ॥

ಯಾವದ್ಧರಿ ವಚೋಽಸ್ಯಾಹಂ ನ ಶೃಣೋಮ್ಯಧುನಾ ಸಖಿ ।
ಗಚ್ಛಾಮಿ ತಾವದ್ದೂರಾಯ ಸಮುತ್ತಿಷ್ಠಾಮಿ ಮುಪ್ರಿಯೇ ॥ ೧೦೦ ॥

ಇತ್ಯುಕ್ತ್ವಾ ಸಾ ತಯಾ ಸಖ್ಯಾ ಸಹಿತಾ ಹಿಮವತ್ಸುತಾ ।
ಪ್ರತಸ್ಥೇಽಥ ಸಮುತ್ಥಾಯ ತಮುತ್ಸೃಜ್ಯ ದ್ವಿಜಂ ಹಠಾತ್ ॥ ೧೦೧ ॥

ಅಥ ಶಂಭುರ್ನಿಜಂ ರೂಪಮಾಸ್ಥಾಯ ಹಿಮವತ್ಸುತಾಂ ।
ತಂ ಸಮುತ್ಸೃಜ್ಯ ಗಚ್ಛಂತೀಂ ಹರಃ ಸ್ಮೇರಮುಖೋಽನ್ವಯಾತ್॥ ೧೦೨ ॥

ಅಹಂ ಹರೋ ಮಹಾದೇವೋ ಮಾಂ ಸಂಸ್ತೌಷಿ ನ ಚಾಧುನಾ ।
ಸಮ್ಮುಖೇ ಭವ ಹೇ ಕಾಳಿ ಸಮಾಶಾಸ್ವಯ ಶಾಂಕರಿ ॥ ೧೦೩ ॥

ಶಂಕರನನ್ನು ನಿಂದಿಸಲಿಚ್ಛೆಯಿಂದ ಏನನ್ನೋ ಹೇಳಬೇಕೆಂದಿರುವನು. ಆದರೆ ಪ್ರಾಣ ವನ್ನೇ ನಾಶಮಾಡತಕ್ಕ ಹರನಿಂದೆಯನ್ನು ಕೇಳಲಾರೆನು.

೧೦೦. ಆದುದರಿಂದ ಎಲೈ ಸಖಿಯೇ! ಈ ಬ್ರಾಹ್ಮಣನು ಹೆಚ್ಚು ಮಾತ ನ್ನಾಡುವುದರೊಳಗೇ ನನ್ನ ಮನಸ್ಸಮಾಧಾನಕ್ಕಾಗಿ ಈ ಪ್ರದೇಶವನ್ನು ಬಿಟ್ಟು ದೂರ ಹೊರಟುಹೋಗುವೆನು.

೧೦೧. ಹೀಗೆ ಹೇಳಿ ಆ ಪಾರ್ವತಿಯು ಅಲ್ಲಿಂದೆದ್ದು ಆ ಬ್ರಾಹ್ಮಣನನ್ನು ಅಲ್ಲಿಯೇ ಬಿಟ್ಟು ತನ್ನ ಸಖಿಯರೊಡನೆ ಬೇರೆಕಡೆಗೆ ಹೊರಟಳು.

೧೦೨. ಬಳಿಕ ಬ್ರಾಹ್ಮಣರೂಪನಾದ ಶಂಕರನು ತನ್ನ ನಿಜವಾದ ರೂಪವನ್ನು ಧರಿಸಿ ಮಂದಹಾಸಯುಕ್ತವಾಗಿ ತನ್ನನ್ನು ಬಿಟ್ಟುಹೋಗುತ್ತಲಿರುವ ಪಾರ್ವತಿಯನ್ನು ಅನುಸರಿಸಿ ಅವಳ ಹಿಂದೆಯೇ ಹೋದನು.

೧೦೩. ಎಲೈ ಕಾಳಿಯೇ! ನಾನೇ ಮಹಾದೇವನಾದ ಶಂಕರನು. ನನ್ನನ್ನು ಈಗೇಕೆ ನೀನು ಸ್ತುತಿಸುವುದಿಲ್ಲ? ಎಲೌ ಶಂಕರಪ್ರಿಯಳೇ! ಇಗೋ ನಿನ್ನ ಎದು ರಾಗಿಯೇ ಬಂದಿರುವೆನು. ನನ್ನ ಮುಂದೆ ಬಂದು ನನ್ನನ್ನು ಸಮಾಧಾನಗೊಳಿಸು.

ಇತ್ಯುಕ್ತ್ವಾ ಸ ಮಹಾದೇವೋ ಗಚ್ಛಂತ್ಯಾಃ ಪುರತೋ ಗತಃ ।
ಪ್ರಸಾಯ್ಯ ಹಸ್ತೌ ಕಲ್ಯಾಸ್ತು ಗತಿಂ ತಸ್ಯಾ ವಿರೋಧಯನ್ ॥ ೧೦೪ ॥

ಸಾ ವೀಕ್ಷ್ಯ ಶಂಭುವದನಂ ತತ್ಕ್ಷಣಾದಭವದ್ಧಠಾತ್ ।
ಅಧೋಮುಖೀ ತಡಿದ್ಘಾತಚಕಿತೇವ ಗಿರೇಃ ಸುತಾ ॥ ೧೦೫ ॥

ಮುಂದಾಕ್ಷಪ್ರೀತಿಲಜ್ಜಾಭಿಃ ಸಾ ಜಡೇವ ತದಾಽಭವತ್ ॥ ೧೦೬ ॥

ವಕ್ತುಂ ಚ ನಾಶಕತ್ಕಿಂಚಿದ್ವಿವಕ್ಷುರಪಿ ಭಾಮಿನೀ ।
ಮನೋರಥಾನಾಂ ಸಿದ್ಧ್ಯಾತು ಸುಧಾಭಿರಿವ ಪೂರಿತಂ ॥ ೧೦೭ ॥

ಶರೀರಮಭವತ್ತಸ್ಯಾ ಮುದಾ ಪೂರ್ಣಂ ದ್ವಿಜೋತ್ತಮಾಃ ।
ಷಷ್ಟ್ಯಾವರ್ಷಸಹಸ್ರೈಸ್ತು ತಪಃಕ್ಲೇಶಮವಿಂದತ ॥ ೧೦೮ ॥

---

೧೦೪. ಹೀಗೆ ಹೇಳಿ ಆ ಮಹಾದೇವನು ನಡೆಯುತ್ತಲಿರುವ ಆ ಪಾರ್ವತಿಯ ಎದುರಿಗೆ ಹೋಗಿ ನಿಂತು ಕೈಗಳನ್ನು ನೀಡಿ ಅವಳ ಗಮನವನ್ನು ತಡೆದನು.

೧೦೫. ಆ ಗಿರಿಜೆಯು ತನ್ನ ಎದುರಿನಲ್ಲಿ ಬಂದು ನಿಂತಿರುವ ಶಂಕರನ ಮುಖವನ್ನು ನೋಡಿದಕೂಡಲೆ ಮಿಂಚಿನ ಪ್ರಕಾಶದಿಂದ ಹೊಡೆಯಲ್ಪಟ್ಟವಳಂತೆ ಏನೂ ತೋರದೆ ಮುಖವನ್ನು ತಗ್ಗಿಸಿ ಸುಮ್ಮನೆ ನಿಂತಳು.

೧೦೬. ಲಜ್ಜೆ ಪ್ರೀತಿಗಳಿಂದ ಏನುಮಾಡಲೂ ತೋರದೆ ಜಡಳಾದವಳಂತೆ ಆದಳು. ಹೇಳಬೇಕೆಂಬ ಇಚ್ಛೆಇದ್ದರೂ ಅವಳು ಏನನ್ನೂ ಹೇಳಲಾರದವಳಾದಳು.

೧೦೭. ಎಲೈ ಬ್ರಾಹ್ಮಣೋತ್ತಮರೇ ! ಆ ಪಾರ್ವತಿಯ ಮನೋರಥವು ಸಿದ್ಧಿಸಿದುದರಿಂದ ಅವಳ ಶರೀರವು ಅಮೃತದಿಂದ ತುಂಬಲ್ಪಟ್ಟಂತೆ ಸಂತೋಷದಿಂದ ಪರಿಪೂರ್ಣವಾಯಿತು.

೧೦೮. ಹದಿನೆಂಟುಸಾವಿರವರ್ಷ ತಪಸ್ಸುಮಾಡಿ ಅನುಭವಿಸಿದ ಕಷ್ಟವೆಲ್ಲ ಮರೆತುಹೋಗಿ ಸಂತೋಷಾಧಿಕ್ಯದಿಂದ ಆನಂದಪರವಶಳಾದಳು.

ಯತ್ತಂ ಕ್ಷಣಾತ್ಸಮುತ್ಸೃಜ್ಯ ಸಮ್ಮೋದಮುದಿತಾಭವತ್ ।
ತಾಂ ಚ ವೀಕ್ಷ್ಯ ತಥಾಭೂತಾಂ ಪ್ರಣಯಾದ್ವೃಷಭಧ್ವಜಃ ॥ ೧೦೯ ॥

ಕಾಮೇನ ಭಸ್ಮರೂಪೇಣ ಗಾತ್ರಸ್ಥೇನ ಚ ಮೋಹಿತಃ ।
ಅಥ ತಾಂ ವಿರಹೋದ್ವಿಕ್ತಃ ಸಮೇತ್ಯ ವೃಷಭಧ್ವಜಃ ॥ ೧೧೦ ॥

ಸಂಬೋಧಯನ್ನಿದಂ ಚಾಟುವಚನಂ ಪ್ರೋಕ್ತವಾನ್ ಮುದಾ ।
ನ ತೇ ಸುಂದರಿ ಮಾಂ ವಕ್ತುಂ ಕಿಂ ಚ ನಾಪಿ ತ್ವಮಿಹಸೇ ॥ ೧೧೧ ॥

ತಪಃಕ್ಲೇಶಂ ಸ್ಮರಂತೀ ಕಿಂ ಮಹ್ಯಂ ಕುಪ್ಯಸಿ ಸಾಂಪ್ರತಂ ।
ಅಹಂ ಚ ಪರಿತಪ್ಯಾಮಿ ತ್ವಾಮೃತೇ ಸುಭಗೇ ಮಮ ॥ ೧೧೨ ॥

ಸಮಯಾದ್ಯತ್ಸಮಾರಬ್ಧಂ ತಪಸ್ತಪ್ತಂ ತ್ವಯಾ ಸಮಂ ।
ಸಾನುರಕ್ತೋಽಥ ಸಂಸ್ಕೃತ್ಯ ಭವಿಷ್ಯಾಮಿ ತ್ವಯಾ ಪ್ರಿಯೇ ॥ ೧೧೩ ॥

---

೧೦೯. ಹೀಗಿರುವ ಆ ಪಾರ್ವತಿಯನ್ನು ನೋಡಿ ಶಂಕರನು ತನ್ನ ಶರೀರದಲ್ಲಿ ಭಸ್ಮರೂಪದಿಂದಿರುವ ಮನ್ಮಥನಿಂದ ಪ್ರೇರಿತನಾಗಿ ಆ ಪಾರ್ವತಿಯಲ್ಲಿ ಪ್ರೀತಿಯಿಂದ ಮೋಹಗೊಂಡವನಾದನು.

೧೧೦-೧೧೧. ಅನಂತರ ಅವಳ ವಿಯೋಗವನ್ನು ಸಹಿಸುವುದು ಅಶಕ್ಯ ವಾಗಲು ಪಾರ್ವತಿಯ ಬಳಿಗೆ ಬಂದು ಪ್ರಿಯವಾದ ಮಾತುಗಳಿಂದ ಅವಳನ್ನು ಸಂಬೋಧಿಸಿ, ಎಲೌ ಸುಂದರಿ! ನನ್ನೊಡನೆ ನೀನು ಒಂದು ಮಾತನ್ನೂ ಆಡಲಿಚ್ಛಿಸುವುದಿಲ್ಲವಲ್ಲ! ಇದಕ್ಕೆ ಕಾರಣವೇನು? ನೀನು ನನಗಾಗಿ ಮಾಡಿದ ತಪಸ್ಸಿನ ಕ್ಲೇಶವನ್ನು ಸ್ಮರಿಸಿಕೊಂಡು ನನ್ನ ಮೇಲೆ ಕೋಪಗೊಂಡಿರುವೆಯಾ?

೧೧೨-೧೧೩. ಎಲೈ ಭಾಗ್ಯವಂತಳೇ! ನಿನ್ನ ವಿಯೋಗದಿಂದ ನಾನು ತಪಿಸುತ್ತಲಿರುವೆನು. ಅಲ್ಲದೆ ಎಲೈ ಪ್ರಿಯಳೇ! ನಿನ್ನಲ್ಲಿ ಮೊದಲೇ ನಾನು ಅನುರಕ್ತನಾಗಿದ್ದರೂ ತಪಸ್ಸಿನಿಂದ ಸಂಸ್ಕೃತಳಾದ ಬಳಿಕ ನಿನ್ನೊಡನೆ ಸೇರುವೆನು ಎಂಬ ನನ್ನ ನಿಬಂಧನೆಯಂತೆ ನೀನು ತುಂಬಾ ಕಷ್ಟಪಟ್ಟು ತಪಸ್ಸನ್ನಾಚರಿಸಿರುವೆ. ಇದಕ್ಕೂ ಪರಿತಪಿಸುವೆನು.

ಆಧುನಾ ಸಮತೀತೋ ಮೇ ಯಃ ಕೃತಃ ಸಮಯೋ ಮಯಾ ।
ತಪಸೇ ಭವತೀ ಚಾಪಿ ತಪಸ್ಯೈವ ಸುಸಂಸ್ಕೃತಾ ॥ ೧೧೪ ॥

ಸಂಚಿಂತನೇನ ಜಪ್ಯೇನ ತಿವ್ರೇಣ ತಪಸಾ ತದಾ ।
ಮೂಲ್ಯೇನ ಮಹತಾಕ್ರೀತೋ ವಾಸೋಽಹಂ ಮಾಂ ನಿಯೋಜಯ ॥ ೧೧೫ ॥

ತ್ವದಂಗಾನಾಂ ಸಂಸ್ಕರಣೇ ಜಟಾನಾಂ ಚ ಪ್ರಸಾಧನೇ ।
ಪ್ರಮುಚ್ಯ ವಲ್ಕಲಂ ಗಾತ್ರಾಚ್ಚಾರ್ವಂಶುಕನಿವೇಶನೇ ॥ ೧೧೬ ॥

ಹಾರನೂಪುರಕೇಯೂರಕಾಂಚ್ಯಾದಿಪರಿಧಾಪನೇ ।
ದ್ರುತಂ ನಿಯೋಜಯ ಶುಭೇ ಯದಿ ಸ್ನೇಹೋಽಸ್ತಿ ಮಾದೃಶಿ ॥ ೧೧೭ ॥

ನಿರ್ದಗ್ಧೋ ಯೋ ಮಯಾ ಕಾಮೋ ಭಸ್ಮರೂಪೇಣ ಮತ್ತನೌ ।
ಸ್ಥಿತೋ ಮಾಂ ಪ್ರತಿಕೃತ್ಯೈವ ತ್ವದಗ್ರೇ ದಗ್ಧುಮಿಚ್ಛತಿ ॥ ೧೧೮ ॥

---

೧೧೪. ಈಗ ನಾನು ಹಿಂದೆ ಮಾಡಿದ ಪ್ರತಿಜ್ಞೆಯು ಪೂರ್ಣವಾಯಿತು. ತಪಸ್ಸಿನಿಂದ ಈಗ ನೀನೂ ಸಹ ಪರಿಶುದ್ಧಳಾಗಿರುವೆ.

೧೧೫-೧೧೬. ಧ್ಯಾನ, ಜಪ, ಕಠಿಣವಾದ ತಪಸ್ಸುಗಳೆಂಬ ಮಹಾಬೆಲೆಯನ್ನು ಕೊಟ್ಟು ನನ್ನನ್ನು ನೀನು ಕ್ರಯಕ್ಕೆ ತೆಗೆದುಕೊಂಡಿರುವೆ. ನಾನು ನಿನ್ನ ದಾಸನಾಗಿರುವೆನು. ನನ್ನನ್ನು ಯಾವ ಕೆಲಸಕ್ಕೆ ಬೇಕೋ ಅದರಲ್ಲಿ ನಿಯೋಗಿಸು. ನಿನ್ನ ಅಂಗಗಳನ್ನು ಸಂಸ್ಕರಿಸಲೂ, ಜಡೆಕಟ್ಟಿದ ಕೇಶಪಾಶಗಳನ್ನು ಸರಿಪಡಿಸಿ ಅಲಂಕರಿಸಲೂ, ಮತ್ತು ಶರೀರದಿಂದ ನಾರುಬಟ್ಟೆಯನ್ನು ತೆಗೆದು ಸುಂದರವಾದ ವಸ್ತ್ರವನ್ನುಡಿಸಲೂ ಸಹ ಈ ದಾಸನನ್ನು ನಿಯೋಗಿಸಿಕೋ.

೧೧೭. ಎಲೈ ಮಂಗಳಾಂಗಿಯೇ! ಹಾರ, ಕಡಗ, ಒಂಕೆ, ಒಡ್ಯಾಣ ಮುಂತಾದುವುಗಳನ್ನು ತೊಡಿಸಲೂ ಸಹ ನನ್ನಲ್ಲಿ ಸ್ನೇಹವಿದ್ದರೆ ಜಾಗ್ರತೆ ನನ್ನನ್ನು ನಿಯಮಿಸು.

೧೧೮. ನಾನು ಸುಟ್ಟುಹಾಕಿದ ಕಾಮನು ಭಸ್ಮರೂಪದಿಂದ ನನ್ನ ಶರೀರದಲ್ಲಿ ದ್ದುಕೊಂಡು ನನಗೆ ಪ್ರತೀಕಾರಮಾಡುತ್ತಿರುವನೋ ಎಂಬಂತೆ ನಿನ್ನೆದುರಿನಲ್ಲಿಯೇ ನನ್ನನ್ನು ದಹಿಸುತ್ತಲಿರುವನು.

ತಸ್ಮಾದುದ್ಧರ ಮಾಂ ಕಾಮಾದಗ್ನೇರಿವ ಮನೋಹರೇ !
ತ್ವದಂಗಾಮೃತದಾನೇನ ಪ್ರಸೀದ ದಯಿತೇ ಮಮ ॥ ೧೧೯ ॥

॥ ಇತಿ ಶ್ರೀ ಕಾಲಿಕಾಪುರಾಣೇ ಪಂಚಚತ್ವಾರಿಂಶತ್ತಮೋಧ್ಯಾಯಃ ॥

---

೧೧೯. ಆದುದರಿಂದ ಎಲೈ ಮನೋಹರಾಂಗಿಯೇ ! ಬೆಂಕಿಯಂತೆ ದಹಿಸುತ್ತಿರುವ ಮನ್ಮಥನಿಂದ ನನ್ನನ್ನು ನಿನ್ನ ಶರೀರವೆಂಬ ಅಮೃತವನ್ನು ಕೊಟ್ಟು ಉದ್ಧರಿಸು. ಎಲೈ ಪ್ರಿಯಳೇ ನನ್ನಲ್ಲಿ ಪ್ರಸನ್ನಳಾಗು.

ಇಲ್ಲಿಗೆ ನಲವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀಕಾಲಿಕಾಪುರಾಣೇ ಷಟ್ಚತ್ವಾರಿಂಶತ್ತಮೋಽಧ್ಯಾಯಃ

॥ ಮಾರ್ಕಂಡೇಯ ಉವಾಚ ॥

ಅಥ ಶ್ರುತ್ವಾ ವಚಃ ಶಂಭೋರ್ಗಿರಿಜಾತೀವ ಹರ್ಷಿತಾ ।
ಮೇನೇ ಪ್ರಾಪ್ತಂ ತದಾ ಶಂಭುಂ ಸುಂದರಂ ದಯಿತಂ ಪತಿಂ ॥ ೧ ॥

ಅಥ ಪ್ರಾಹ ತದಾ ಕಾಳೀ ಸಖೀವಕ್ತ್ರೇಣ ಶಂಕರಂ ।
ಯಥಾ ಸ ಶೃಣುತೇ ವಾಕ್ಯಂ ಶ್ರೋತುಮಿಚ್ಛಂಶ್ಚ ಶಂಕರಂ ॥ ೨ ॥

ನ ಸಂಧಾವತಿ ಭೇದೇಸ ಪ್ರವರ್ತಂತೇಽತ್ರ ಸಜ್ಜನಾಃ ।
ಮರ್ಯಾದಯಾ ಹರಸ್ತನ್ಮೇ ಪಾಣಿಂ ಗೃಹ್ಣಾತು ಶಂಕರಃ ॥ ೩ ॥

॥ ನಲವತ್ತಾರನೆಯ ಅಧ್ಯಾಯವು ॥

೧. ಮಾರ್ಕಂಡೇಯ ಮುನಿಯು ಹೇಳಿದನು :— ಅನಂತರ ಶಂಕರನ ಆ ಮಾತುಗಳನ್ನು ಕೇಳಿ ಗಿರಿಜೆಯು ತುಂಬಾ ಹರ್ಷಗೊಂಡವಳಾಗಿ ಸುಂದರನೂ, ತನಗೆ ಪ್ರಿಯನೂ ಆದ ಶಂಕರನೇ ತನ್ನ ಎದುರಿಗೆ ನಿಂತಿರುವನೆಂದು ತಿಳಿದಳು.

೨. ಆಮೇಲೆ ಆ ಪಾರ್ವತಿಯು ತನ್ನ ಮಾತನ್ನು ಕೇಳಬೇಕೆಂಬ ಕುತೂಹಲವುಳ್ಳ ಶಂಕರನು ಕೇಳುವಂತೆ ಸಖಿಯ ಮುಖವನ್ನು ನೋಡುತ್ತಾ ಹೀಗೆ ಹೇಳಿದಳು.

೩. ಸಜ್ಜನರು ಬಂಧುಬಳಗದವರ ಅನುಮತಿಯಿಲ್ಲದೆ ವಿವಾಹ ವಿಚಾರದಲ್ಲಿ ಪ್ರವರ್ತಿಸುವುದಿಲ್ಲ. ಆದುದರಿಂದ ಶಂಕರನು ವಿವಾಹಮರ್ಯಾದೆಯಂತೆ ನನ್ನ ಪಾಣಿಗ್ರಹಣ ಮಾಡಲಿ.

ಪಿತೃದತ್ತಾ ಭವೇತ್ಕನ್ಯಾ ತಪೋದತ್ತಾ ಭವೇನ್ನ ಹಿ ।
ತಪಸಾ ಚೇತ್ಪ್ರದತ್ತಾಹಂ ಮಾಂ ತಾತಶ್ಚ ಪ್ರದಾಸ್ಯತಿ ॥ ೪ ॥

ತಸ್ಮಾತ್ಸಂಸ್ಪಾರ್ಥ್ಯ ಪಿತರಂ ಹಿಮವಂತಂ ನಗೇಶ್ವರಂ ।
ವೈವಾಹಿಕೇನ ವಿಧಿನಾ ಪಾಣಿಂ ಗೃಣ್ಹಾತು ಮೇ ಹರಃ ॥ ೫ ॥

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತ್ವಾ ವಿರರಾಮಾಥ ಕಾಳೀ ಲಜ್ಜಾಸಮನ್ವಿತಾ ।
ಹರೋಽಪಿ ತದ್ವಚಃ ಸತ್ಯಂ ತಥ್ಯಂ ಯೋಗ್ಯಂ ತದಾ ಗ್ರಹೀತ್ ॥ ೬ ॥

ತತಃ ಸ ಸಗಣಃ ಶಂಭುಸ್ತತ್ರ ವಾಸಂ ತದಾಽಕರೋತ್ ।
ಗಂಗಾವತರಣೇ ಸಾನೌ ಯಥಾಪೂರ್ವಂ ತಥಾಽಧುನಾ ॥ ೭ ॥

ಕಾಳೀ ಪಿತುರ್ಗೃಹಂ ಯಾತಾ ಸಖೀಭಿಃ ಪರಿವಾರಿತಾ ।
ನಾಲೋಕಯಂತೀ ಸಾ ದೀನಾ ಗುರೂಣಾಂ ವಂದನಂ ಸತೀ ॥ ೮ ॥

---

೪. ತಂದೆಯೇ ಕನ್ಯೆಯನ್ನು ಕೊಡುವವನು. ಕೇವಲ ತಪಸ್ಸು ಕನ್ಯಾದಾನವನ್ನು ಮಾಡಲಾರದು. ತಪಸ್ಸಿನಿಂದ ನಿನಗೆ ಕೊಡಲ್ಪಟ್ಟಿದ್ದರೂ ನಮ್ಮ ತಂದೆಯು ಶಾಸ್ತ್ರವಿಧಿಯಿಂದ ದಾನಮಾಡಿಕೊಡುವನು.

೫. ಆದುದರಿಂದ ನನ್ನ ತಂದೆಯಾದ ಪರ್ವತರಾಜ ಹಿಮವಂತನನ್ನು ಸ್ಪಾರ್ಥಿಸಿ, ಶಂಕರನು ವಿವಾಹವಿಧಿಯಂತೆ ನನ್ನ ಪಾಣಿಗ್ರಹಣವನ್ನು ಮಾಡಲಿ.

೬. ಮಾರ್ಕಂಡೇಯನು ಹೇಳಿದನು:-ಹೀಗೆ ಹೇಳಿ ಕಾಳಿಯು ಲಜ್ಜೆಯಿಂದ ಕೂಡಿ ಸುಮ್ಮನಾದಳು. ಶಂಕರನೂ ಸಹ ಅವಳು ಹೇಳಿದ ಮಾತು ಸಮಯೋಚಿತವಾದುದೆಂದು ತಿಳಿದು ಅವಳ ಮಾತನ್ನು ಅಂಗೀಕರಿಸಿದನು.

೭. ಮತ್ತೆ ಶಂಕರನು ಆ ಗಂಗಾವತರಣವೆಂಬ ತಪ್ಪಲಲ್ಲಿ ಮೊದಲಿನಂತೆಯೇ ಗಣಗಳೊಡನೆ ವಾಸಿಸುತ್ತಿದ್ದನು.

೮. ಬಹಳಕಾಲದಿಂದ ಮಾತಾಪಿತೃಗಳ ಮುಖವನ್ನು ನೋಡದೆ ದುಃಖಿತಳಾದ ಆ ಪಾರ್ವತಿಯು ತನ್ನ ಸಖಿಯರೊಡನೆ ತಂದೆಯ ಮನೆಗೆ ಹೋದಳು.

ಏತಸ್ಮಿನ್ನಂತರೇ ಸಪ್ತ ಮರೀಚಿಪ್ರಮುಖಾನ್ ಮುನೀನ್ ।
ಚಿಂತಯಾಮಾಸ ಶಶಿಭೃತ್ಕಾಲೀಂ ಪ್ರಾರ್ಥಯಿತುಂ ತದಾ ॥ ೯ ॥

ಚಿಂತಿತಾಃ ಸಪ್ತ ಮುನಯಸ್ತತ್ಕ್ಷಣಾನ್ಮದನಾರಿಣಾ ।
ಆಕೃಷ್ಟಾ ಇವ ಕೇನಾಪಿ ತತ್ಸಕಾಶಮುಪಾಗತಾಃ ॥ ೧೦ ॥

ತಾನ್ಮುನೀನ್ ದದೃಶೇ ಶಂಭುಃ ಸಪ್ತಾಗ್ನೀನಿವ ದೀಪಿತಾನ್ ।
ಅರುಂಧತೀಂ ವಸಿಷ್ಠಸ್ಯ ಸಕಾಶೇ ದದೃಶೇ ಸತೀಂ ॥ ೧೧ ॥

ಅರುಂಧತೀಂ ತತೋ ದೃಷ್ಟ್ವಾ ವಸಿಷ್ಠಸ್ಯ ಸಮೀಪತಃ ।
ಮೇನೇ ಯೋಷಿದ್ಗೃಹಂ ರಮ್ಯಂ ಮುನಿಭಿಶ್ಚಾಪ್ಯವರ್ಜಿತಂ ॥ ೧೨ ॥

ತತಸ್ತೇ ಮುನಯಃ ಸರ್ವೇ ಸಂಪೂಜ್ಯ ವೃಷಭಧ್ವಜಂ ।
ಇದಮೂಚುಃ ಪ್ರಹರ್ಷೇಣ ಸ್ಮರಣಾಕರ್ಷಿತಾಃ ಪ್ರಿಯಂ ॥ ೧೩ ॥

॥ ಋಷಯ ಊಚುಃ ॥

ಯತ್ಪ್ರತ್ಯಕ್ಷಂ ದೃಶ್ಯತೇ ಶುದ್ಧರೂಪಂ ।
ಚಂದ್ರಪ್ರಖ್ಯಂ ಚಂದ್ರಖಂಡೋಪಶೋಭಿ ॥

೯-೧೦. ಈ ಸಮಯದಲ್ಲಿ ಶಂಕರನು ಕಾಳಿಯನ್ನು ತನಗೆ ಕೊಡುವಂತೆ ಹಿಮವಂತನಲ್ಲಿ ಪ್ರಾರ್ಥಿಸುವುದಕ್ಕಾಗಿ ಮರೀಚಿಯೇ ಮೊದಲಾದ ಸಪ್ತಋಷಿಗಳನ್ನು ಸ್ಮರಿಸಿದನು. ಸ್ಮರಿಸಿದೊಡನೆಯೇ ಸಪ್ತಋಷಿಗಳು ಎಳೆಯಲ್ಪಟ್ಟವರಂತೆ ಶಂಕರನ ಬಳಿಗೆ ಬಂದರು.

೧೧-೧೨. ಜ್ವಲಿಸುತ್ತಿರುವ ಏಳು ಅಗ್ನಿಗಳಂತೆ ತೇಜಸ್ವಿಗಳಾದ ಆ ಮುನಿಗಳನ್ನೂ, ವಸಿಷ್ಠಮುನಿಯ ಪಕ್ಕದಲ್ಲಿ ಪತಿವ್ರತೆಯಾದ ಅರುಂಧತೀದೇವಿಯನ್ನೂ ನೋಡಿ ಆ ಶಂಕರನು ಸ್ತ್ರೀಯನ್ನು ಪರಿಗ್ರಹಿಸುವುದು ರಮ್ಯವೆಂದೂ, ಮುನಿಗಳೂ ಸಹ ಸ್ತ್ರೀಪರಿಗ್ರಹವನ್ನು ಬಿಟ್ಟಿಲ್ಲವೆಂದೂ ತಿಳಿದನು.

೧೩. ಅನಂತರ ಶಂಕರನು ಸ್ಮರಿಸಿದ ಮಾತ್ರದಿಂದಲೇ ಬಂದಿರುವ ಆ ಋಷಿಗಳು ಅವನನ್ನು ಪೂಜಿಸಿ ಸಂತೋಷದಿಂದಲೂ ಪ್ರೀತಿಯಿಂದಲೂ ಶಂಕರನನ್ನು ಸ್ತುತಿಸಿದರು.

೧೪. ಋಷಿಗಳು ಹೇಳಿದರು :-ಚಂದ್ರನಂತೆ ಆಹ್ಲಾದಕರವಾದುದೂ, ಪ್ರಕಾಶಮಯವಾದುದೂ, ಶಿರಸ್ಸಿನಲ್ಲಿರುವ ಅರ್ಧಚಂದ್ರನಿಂದ ಶೋಭಿಸುತ್ತಲಿರುವುದೂ ಆದ

ಅಂತಃಪ್ರಜ್ಞಂ ಭಾವಿತಂ ತಸ್ಮಿನೀನಾಂ ।
ಭಾಗ್ಯಂ ದೃಷ್ಟಂ ಭಾಗಧೇಯೇನ ಮುಕ್ತೈಃ ॥ ೧೪ ॥

ಪ್ರಜ್ಞಾತಂತ್ರಂ ಧ್ಯಾನತಂತ್ರಂ ಪುರಸ್ತಾತ್ ।
ನಿತ್ಯಂ ಧ್ಯೇಯಂ ಧ್ಯಾಯಿನಾಂ ಸ್ವಪ್ರಕಾಶಂ ॥
ಪುಂಜೀಭೂತಂ ಬಾಹ್ಯತತ್ತ್ವೇನ ಶಶ್ವತ್ ।
ಯೋಗಪ್ರಾಪ್ಯಂ ಧಾಮ ಶಂಭೋರುದಾರಂ ॥ ೧೫ ॥

ದೃಷ್ಟ್ವಾ ಯಸ್ಯೈವಾಗ್ರಭಾಗಂ ಸನೇತ್ರಂ ।
ತ್ರಾಣಾಯ ಸ್ಯಾದ್ದರ್ಶನಂ ಸೂರ್ಯತುಲ್ಯಂ ॥
ತದ್ಧಾಮೇದಂ ಸ್ಥಾನಸರ್ವಸ್ಯ ನಿತ್ಯಂ ।
ಭಕ್ತ್ಯಾ ಸ್ತುತ್ಯಂ ತನ್ನುಮಃ ಶಂಭುದೇಹಂ ॥ ೧೬ ॥

ಯಾವ ಈ ರೂಪವು ಪ್ರತ್ಯಕ್ಷವಾಗಿ ನಮಗೆ ಕಾಣುತ್ತಿರುವುದೋ ಅದು ಚರ್ಮ ಚಕ್ಷುಸ್ಸು ಗಳಿಗೆ ಅಗೋಚರವಾದ ಜ್ಞಾನಸ್ವರೂಪವೂ, ಮುನಿಗಳ ಧ್ಯಾನಕ್ಕೆ ವಿಷಯವಾದುದೂ ಸಕಲೈಶ್ವರ್ಯಸಂಪನ್ನವೂ, ಪಾಪಪುಣ್ಯಗಳಿಂದ ರಹಿತರಾದ ಮುಕ್ತರಿಂದ ಪಡೆಯ ಲ್ಪಡತಕ್ಕುದೂ ಆದ ಬ್ರಹ್ಮವಸ್ತುವೇ ಆಗಿರುವುದು.

೧೫. ಅಲ್ಲದೆ ಶಂಕರನ ಸ್ವರೂಪವು ಮೊದಲು ಧ್ಯಾನದಿಂದಲೂ, ಆಮೇಲೆ ಜ್ಞಾನದಿಂದಲೂ ತಿಳಿಯಲ್ಪಡತಕ್ಕದ್ದು. ಧ್ಯಾನಮಾಡುವವರು, ಸ್ವಪ್ರಕಾಶಸ್ವರೂಪ ವಾದ ಈ ವಸ್ತುವನ್ನು ನಿತ್ಯವೂ ಧ್ಯಾನಿಸುವರು. ಮತ್ತು ಹೊರಗಿನ ಪ್ರಪಂಚವೆಲ್ಲವೂ ಈ ವಸ್ತುವಿನಲ್ಲಿಯೇ ಸೇರಿರುವದು ಎಂದರೆ, ಶಂಕರ ಸ್ವರೂಪವು ವಿರಾಟ್ಸ್ವರೂಪವಾ ದುದರಿಂದ ಸಕಲ ಜಗತ್ತೂ ಆ ಸ್ವರೂಪದಲ್ಲಿ ಅಡಗಿರುವುವೆಂದು ಅಭಿಪ್ರಾಯವು. ಬಾರಿಬಾರಿಗೂ ಪ್ರಳಯಕಾಲಗಳಲ್ಲಿ ಸಕಲ ಜಗತ್ತುಗಳೂ ಆ ಪರಬ್ರಹ್ಮವಸ್ತುವಿನಲ್ಲಿ ಲೀನವಾಗುವವು. ಅಲ್ಲದೆ ಯೋಗದಿಂದಲೂ, ಏಕಾಗ್ರಮನಸ್ಸಿನಿಂದ ಮಾಡುವ ಧ್ಯಾನದಿಂದಲೂ ಮಾತ್ರ ಈ ಪರಮೇಶ್ವರನನ್ನು ಹೊಂದಲು ಸಾಧ್ಯವು. ಬೇರೆ ಮಾರ್ಗವೇ ಇರುವುದಿಲ್ಲ.

೧೬. ಶಂಕರನ ಮುಖವು ಮೂರುಕಣ್ಣುಗಳಿಂದ ಕೂಡಿ ಸೂರ್ಯನಂತೆ ಪ್ರಕಾಶಿಸುತ್ತಿರುವುದು. ಈ ಶಂಕರನ ಸ್ವರೂಪವು ಸಕಲ ಜಗತ್ತಿಗೂ ಆಧಾರಭೂತ ವಾಗಿರುವುದು. ಇಂತಹ ರೂಪವನ್ನು ನೋಡಿದ ಮಾತ್ರದಿಂದಲೇ ನಮ್ಮ ರಕ್ಷಣೆ

ಪ್ರಕಾಶತೇ ಯಃ ಪ್ರಥಮಾದಿಭಾಗತಃ ।
ಸ್ಥಿತಃ ಸ ವಾಮೇ ಯ ಇಹೈವ ನೇತಾ ॥
ಸೋಽಸ್ಮಾಕಮಸ್ತು ಪ್ರಥಮಂ ಸ್ವಸಿದ್ಧ್ಯೈ ।
ಹರಸ್ಯ ಶಕ್ತ್ಯಾ ವಿಧೃತೋ ಲಲಾಟೇ ॥ ೧೭ ॥

ಯಃ ಪ್ರಧಾನಾತ್ಮಕಃ ಸತ್ತ್ವರಜೋಭ್ಯಾಂ ತಮಸಾನ್ವಿತಃ ।
ಪುರುಷಃ ಸರ್ವಜಗತಾಂ ಸ ಹರೋನಃ ಪ್ರಸೀದತು ॥ ೧೮ ॥

ಇತಿ ಸಂಸ್ತುತ್ಯ ದೇವೇಶಂ ಮುನಯೋ ವಿನಯಾನತಾಃ ।
ಊಚುಃ ಕಿಮರ್ಥಂ ಭವತಾ ಸ್ಮೃತಾಸ್ತನ್ನೋ ನಿಗದ್ಯತಾಂ ॥ ೧೯ ॥

ತೇಷಾಂ ತದ್ವಚನಂ ಶ್ರುತ್ವಾ ಶಂಕರಃ ಪ್ರಹಸನ್ನಿವ ।
ಜಗಾದ ತಾನ್ಮುನೀನ್ ಸರ್ವಾನ್ ಸಮಾಭಾಷ್ಯ ಪೃಥಕ್ ಪೃಥಕ್ ॥ ೨೦ ॥

ಯಾಗುವುದು. ಆದುದರಿಂದ ಈ ರೂಪವನ್ನು ನಾವು ಭಕ್ತಿಯಿಂದ ಸ್ತೋತ್ರಮಾಡುವೆವು.

೧೭. ಶಂಕರನ ಮುಖದ ಬಲಭಾಗದಲ್ಲಿ ಪ್ರಕಾಶಿಸುವಂತಹ ದಕ್ಷಿಣನೇತ್ರವೂ ಎಡಭಾಗದಲ್ಲಿ ಪ್ರಕಾಶಿಸುವ ವಾಮನೇತ್ರವೂ ಹಣೆಯಲ್ಲಿ ಶಕ್ತಿಯಿಂದ ಧರಿಸಿರುವ ತೃತೀಯ ನೇತ್ರವೂ ಸಹ ನಮಗೆ ಸಕಲ ಕಾರ್ಯಗಳ ಸಿದ್ಧಿಯನ್ನು ಶೀಘ್ರವಾಗಿ ಉಂಟುಮಾಡಲಿ.

೧೮. ಈ ಶಂಕರನು, ಸತ್ತ್ವರಜಸ್ತಮೋಗುಣಗಳಿಂದ ಕೂಡಿರುವ ಪ್ರಕೃತಿಯೂ ಆ ಪ್ರಕೃತಿಗೆ ನಿಯಾಮಕನಾದ ಪ್ರಧಾನಪುರುಷನೂ ಸಹ ತಾನೇ ಆಗಿರುವನು. ಇಂತಹ ಈ ಶಂಕರನು ನಮಗೆ ಪ್ರಸನ್ನನಾಗಲಿ.

೧೯. ಹೀಗೆ ದೇವದೇವನಾದ ಶಂಕರನನ್ನು ಸ್ತುತಿಸಿ, ಮುನಿಗಳು ಭಕ್ತಿಯಿಂದ ಬಗ್ಗಿದವರಾಗಿ ಅವನನ್ನು ಕುರಿತು, ಓ ಶಂಕರನೇ ! ನೀನು ನಮ್ಮೆಲ್ಲರನ್ನೂ ಯಾವ ಕಾರ್ಯಕ್ಕಾಗಿ ಸ್ಮರಿಸಿರುವೆ ? ದಯವಿಟ್ಟು ಅದನ್ನು ಹೇಳು ಎಂದು ಕೇಳಿದರು.

೨೦. ಮುನಿಗಳು ಹೇಳಿದ ಆ ಮಾತುಗಳನ್ನು ಕೇಳಿ ಶಂಕರನು ಮುಗುಳುನಗೆಯನ್ನು ಸೂಸುತ್ತಾ ಅವರಲ್ಲಿ ಒಬ್ಬೊಬ್ಬರನ್ನೂ ಬೇರೆಬೇರೆಯಾಗಿ ಕುಶಲಪ್ರಶ್ನೆಯನ್ನು ಮಾಡಿ, ಹೀಗೆ ಹೇಳಿದನು.

॥ ಈಶ್ವರ ಉವಾಚ ॥

ಹಿತಾಯು ಸರ್ವಜಗತಾಂ ಸಂಭೋಗಾಯಾತ್ಮನಸ್ತಥಾ ।
ದಾರಾನ್ ಗ್ರಹೀತುಮಿಚ್ಛಾಮಿ ತಥಾ ಸಂತಾನವೃದ್ಧಯೇ ॥ ೨೧ ॥
ಸಹಾಯಂ ತತ್ರ ಕುರ್ವಂತು ಭವಂತೋ ಮನು ಸಾಂಪ್ರತಂ ।
ಮದರ್ಥೇ ಚ ತತಃ ಕಾಳೀಂ ಯಾಚಂತಾಂ ಚ ಹಿಮಾಚಲಂ ॥ ೨೨ ॥
ಮಹತಾ ತಪಸಾ ಕಾಳೀ ಮಾಂ ಪತಿಂ ಲಘು ವಿಂದತಾಂ ।
ಕಿಂತು ಗ್ರಹಿಷ್ಯೇ ವಿಧಿನಾ ತಸ್ಮಾದ್ಯಾಚಂತು ತಂ ಗಿರಿಂ ॥ ೨೩ ॥
ಯಥಾ ತಥಾ ಸ್ವಯಂ ಕಾಳೀಂ ಶೈಲೋ ದಾತುಂ ಸಮುತ್ಸಹೇತ್ ।
ತಥಾ ತಥಾ ವಿದಧ್ವಂ ಹಿ ಯೂಯಂ ವಾಗ್ವಿಭವಾನ್ವಿತಾಃ ॥ ೨೪ ॥

॥ ಮಾರ್ಕಂಡೇಯ ಉವಾಚ ॥

ಹರಂ ಸಂಬೋಧ್ಯ ಮುನಯೋ ಽಗಚ್ಛನ್ಗಿರಿರಾಡ್ಗೃಹಂ ।
ತೇನ ಪ್ರಪೂಜಿತಾಸ್ತೇ ತು ಪ್ರೋಚುಸ್ತಂ ಮುನಯೋ ಗಿರಿಂ ॥ ೨೫ ॥

---

೨೧. ಈಶ್ವರನು ಹೇಳಿದನು:—ಸಕಲ ಜಗತ್ತಿನ ಕ್ಷೇಮಕ್ಕಾಗಿಯೂ, ಕಾಮ ಸುಖವನ್ನು ಅನುಭವಿಸುವುದಕ್ಕಾಗಿಯೂ ಮತ್ತು ಪ್ರಜೆಗಳ ಅಭಿವೃದ್ಧಿಗಾಗಿಯೂ, ನಾನು ಪತ್ನಿಯನ್ನು ಪರಿಗ್ರಹಿಸಲಪೇಕ್ಷೆಯುಳ್ಳವನಾಗಿರುವೆನು.

೨೨. ಅದಕ್ಕಾಗಿ ಈಗ ನೀವು ನನಗೆ ಸಹಾಯವನ್ನು ಮಾಡಬೇಕು. ಹಿಮವಂತನ ಬಳಿಗೆ ಹೋಗಿ ನನಗೋಸ್ಕರವಾಗಿ ಪಾರ್ವತಿಯನ್ನು ಯಾಚಿಸಿರಿ.

೨೩. ಮಹತ್ತಾದ ತಪಸ್ಸನ್ನು ಮಾಡಿ ಕಾಳಿಯು ನನ್ನನ್ನೇ ಪತಿಯನ್ನಾಗಿ ವರಿಸಿರುವಳು. ಆದರೂ ನಾನು ವಿವಾಹವಿಧಿಯಂತೆ ಅವಳನ್ನು ಮದುವೆಯಾಗುವೆನು. ಆ ವಿವಾಹವು ಬೇಗ ನೆರವೇರುವಂತೆ ಹಿಮವಂತನನ್ನು ಯಾಚಿಸಿರಿ.

೨೪. ನೀವು ಸಮಯೋಚಿತವಾದ ಮಾತನ್ನಾಡುವುದರಲ್ಲಿ ಕುಶಲರು. ಆದುದರಿಂದ ಆ ಹಿಮವಂತನು ತಾನಾಗಿಯೇ ಪಾರ್ವತಿಯನ್ನು ನನಗೆ ಮದುವೆಮಾಡಿ ಕೊಡಬುದ್ಯುಕ್ತನಾಗುವಂತೆ ಪ್ರಯತ್ನಿಸಿರಿ.

೨೫. ಮಾರ್ಕಂಡೇಯನು ಹೇಳಿದನು:—ಆನಂತರ ಆ ಸಪ್ತಋಷಿಗಳು ಶಂಕರನಿಂದ ಬೀಳ್ಕೊಂಡು ಪರ್ವತರಾಜನಾದ ಹಿಮವಂತನ ಆರಮನೆಗೆ ಹೋದರು. ಅಲ್ಲಿ ಆ ಹಿಮವಂತನಿಂದ ಸತ್ಕೃತರಾಗಿ ಹೀಗೆ ಹೇಳಿದರು.

ಯಶ್ಚಂದ್ರಶೇಖರೋ ದೇವೋ ದೇವದೇವಶ್ಚ ಯೋ ನುತಃ ।
ಶಾಪಾನುಗ್ರಹಣೇ ಶಕ್ತೋ ಯ ಏಕೋ ಜಗತಾಂ ಪತಿಃ ॥ ೨೬ ॥

ಯಃ ಸಂಹರತಿ ಸರ್ವಾಣಿ ಜಗಂತಿ ಪ್ರಳಯೋದ್ಭವೇ ।
ಯೋ ವಿಭೂತಿಪ್ರದೋ ಭಕ್ತೇ ನಾನಾರೂಪೋ ಮನೋಹರಃ ॥ ೨೭ ॥

ಸ ತೇ ದುಹಿತರಂ ಕಾಳೀಂ ಭಾರ್ಯಾರ್ಥಮಾದಾತುಮಿಚ್ಛತಿ ।
ಯದಿ ಪಶ್ಯಸಿ ತ್ವಂ ಯೋಗ್ಯಂ ವರಂ ತಂ ದುಹಿತುಃ ಸಮಂ ॥ ೨೮ ॥

ತದಾ ಪ್ರಯಚ್ಛ ತನಯಾಂ ಕಾಳೀಂ ಶಶಿಭೃತೇ ಗಿರೇ ।

॥ ಮಾರ್ಕಂಡೇಯ ಉವಾಚ ॥

ಇತ್ಯುಕ್ತಸ್ತೈರ್ಗಿರಿಪತಿಶ್ಚಿರಂ ಸ್ವಹೃದಯಸ್ಥಿತಂ ॥ ೨೯ ॥

ದುಹಿತುಶ್ಚ ಪ್ರಿಯಂ ಜ್ಞಾತ್ವಾ ಪ್ರಾಪ್ಯ ಸದ್ವಚನಾನ್ಮುದಂ ।
ಆಹ ಚೇದಂ ಪ್ರಕಾಶೇನ ಯುಷ್ಮಾಭಿಸ್ತ್ವಹಮಾಗತೈಃ ॥ ೩೦ ॥

೨೬-೨೭. ದೇವದೇವನೂ, ನಿಗ್ರಹಾನುಗ್ರಹಸಮರ್ಥನೂ, ಜಗತ್ತಿಗೆಲ್ಲಾ ಏಕನಾತ್ರ ಒಡೆಯನೂ, ಪ್ರಳಯಕಾಲದಲ್ಲಿ ಸಕಲ ಜಗತ್ತನ್ನು ಸಂಹರಿಸುವವನೂ, ಭಕ್ತರಿಗೆ ಸಕಲವಾದ ಐಶ್ವರ್ಯಗಳನ್ನು ಕೊಡುವವನೂ, ಅನೇಕ ರೂಪವುಳ್ಳವನೂ, ಮನೋಹರನೂ ಆದ ಚಂದ್ರಶೇಖರನು ನಿನ್ನ ಮಗಳಾದ ಕಾಳಿಯನ್ನು ಮದುವೆ ಮಾಡಿಕೊಳ್ಳಲು ಅಪೇಕ್ಷಿಸುತ್ತಿರುವನು.

೨೮. ಎಲೈ ಹಿಮವಂತನೇ ! ಆ ಶಂಕರನು ನಿನ್ನ ಮಗಳಿಗೆ ಅನುರೂಪನಾದ ವರನೆಂದು ಯೋಚಿಸುವಿಯಾದರೆ ಕಾಳಿಯನ್ನು ಶಂಕರನಿಗೆ ಮದುವೆಮಾಡಿಕೊಡು.

೨೯. ಮಾರ್ಕಂಡೇಯನು ಹೇಳಿದನು:— ಈ ರೀತಿಯಾಗಿ ಸಪ್ತಋಷಿಗಳು ಹೇಳಿದುದನ್ನು ಕೇಳಿ ಬಹಳಕಾಲದಿಂದ ತನ್ನ ಮನಸ್ಸಿನಲ್ಲಿದ್ದು ತನ್ನ ಮಗಳಿಗೂ ಪ್ರಿಯವಾದ ಇಷ್ಟವು ಕೈಗೂಡಿತೆಂದು ಚಿಂತಿಸಿ ತುಂಬಾ ಸಂತೋಷಗೊಂಡು, ಪ್ರಕಾಶವಾಗಿ ಆ ಮುನಿಗಳನ್ನು ಕುರಿತು ಹೀಗೆ ಹೇಳಿದನು.

೩೦-೩೧. ಓ ಮುನಿಗಳೇ ! ಮುನಿಶ್ರೇಷ್ಠರಾದ ನಿಮ್ಮೆಲ್ಲರ ಆಗಮನದಿಂದ

ಪಾವಿತೋ ಮುನಿಶಾರ್ದೂಲೈಃ ಪೂರಿತಶ್ಚ ಮನೋರಥಃ ।
ದಾಸ್ಯಾಮಿ ಶಂಭವೇ ಪುತ್ರೀಂ ಯುಷ್ಮಾಭಿಃ ಪ್ರಾರ್ಥಿತಸ್ತ್ವಹಂ ॥ ೩೧ ॥

ಪೂರ್ವಮೇವ ತಪಸ್ತಪ್ತ್ವಾ ತಯೇಶಃ ಪತಿರೀಹಿತಃ ।
ಧಾತುರ್ನಿಯೋಜನಮಿದಂ ಕೋಽನ್ಯಥಾ ಕರ್ತುಮುತ್ಸಹೇತ್ ॥ ೩೨ ॥

ಕೋಽನ್ಯಃ ಪ್ರಾರ್ಥಯಿತುಂ ಶಕ್ತಃ ಸುತಾಂ ಮಮ ವಿನಾ ಹರಾತ್ ।
ಹರೇಣಾವಗೃಹೀತಾ ಯಾ ತಾಮನ್ಯಃ ಕಃ ಸಮುತ್ಸಹೇತ್ ॥ ೩೩ ॥

ಪರಂ ಗೃಹೀತ್ವಾ ಮನಸಾ ನಾನ್ಯಂ ಸಾಪೀಹ ಕಾಂಕ್ಷತಿ ।
ಇತ್ಯುಕ್ತ್ವಾ ಮೇನಯಾ ಸಾರ್ಧಂ ಸುತಾಂ ದಾತುಂ ಚ ಶಂಭವೇ ॥ ೩೪ ॥

ಅಂಗೀಕೃತ್ಯ ವಿಸೃಷ್ಟಾಸ್ತೇ ಹ್ಯನುಪ್ರಾಪುರ್ಮಹೇಶ್ವರಂ
ತೇ ಗತ್ವಾ ಮುನಯಃ ಸರ್ವೇ ಮರೀಚಿಪ್ರಮುಖಾ ದ್ವಿಜಾಃ ॥ ೩೫ ॥

ನನ್ನ ಇಷ್ಟಾರ್ಥವು ಸಿದ್ಧಿಸಿತು. ನಿಮ್ಮ ಪ್ರಾರ್ಥನೆಯಂತೆ ಶಂಕರನಿಗೆ ನನ್ನ ಮಗಳನ್ನು ಅವಶ್ಯಕವಾಗಿ ಮದುವೆ ಮಾಡಿಕೊಡುವೆನು.

೩೨. ನನ್ನ ಮಗಳಾದ ಪಾರ್ವತಿಯು ತಪಸ್ಸನ್ನು ಮಾಡಿ ಶಂಕರನೇ ತನಗೆ ಪತಿಯಾಗಬೇಕೆಂದು ಈ ಮೊದಲೇ ನಿಶ್ಚಯಿಸಿರುವಳು. ಬ್ರಹ್ಮನೇ ಈ ಕಾರ್ಯವು ನಡೆಯಬೇಕೆಂದು ವಿಧಿಸಿರುವನು. ಇದನ್ನು ತಪ್ಪಿಸಲು ಯಾರುತಾನೇ ಸಮರ್ಥರು?

೩೩. ಈ ನನ್ನ ಮಗಳನ್ನು ಶಂಕರನು ಹೊರತು ಬೇರೆ ಯಾವ ಪುರುಷನು ಪ್ರಾರ್ಥಿಸಲೂ ಶಕ್ತನಲ್ಲ. ಶಂಕರನೂ ಸಹ ಇವಳನ್ನೇ ವರಿಸಲು ಅಪೇಕ್ಷಿಸುತ್ತಿರುವನು. ಹೀಗಿರುವಲ್ಲಿ ಮತ್ತಾರು ಈ ಪಾರ್ವತಿಯನ್ನು ವರಿಸಲು ಇಷ್ಟಪಡುವರು?

೩೪-೩೫. ಆ ನನ್ನ ಪುತ್ರಿಯೂ ಮನಸ್ಸಿನಲ್ಲಿ ಶಂಕರನನ್ನೇ ವರಿಸಿರುವಳು. ಇನ್ನಾರನ್ನೂ ವರಿಸಲಿಚ್ಛಿಸುವುದಿಲ್ಲ ಎಂದು ಹೇಳಿ ಹಿಮವಂತನು ತನ್ನ ಪತ್ನಿಯಾದ ಮೇನಕೆಯೊಡನೆ ಶಂಕರನಿಗೆ ಪಾರ್ವತಿಯನ್ನು ಕೊಡಲು ಅಂಗೀಕರಿಸಿ ಆ ಮುನಿಗಳನ್ನು ಬೀಳ್ಕೊಟ್ಟನು. ಆ ಮುನಿಗಳು ಶಂಕರನ ಬಳಿಗೆ ಹೋಗಿ ಹಿಮವಂತನು ಹೇಳಿದುದೆಲ್ಲವನ್ನೂ ಆ ಶಂಕರನಿಗೆ ಈರೀತಿಯಾಗಿ ಹೇಳಿದರು.

ಶೈಲರಾಜೋ ಯದಾಚಷ್ಟ ತದೂಚುರ್ಮದನಾರಯೇ ।
ಹಿಮವಾಂಸ್ತನಯಾಂ ದಾತುಂ ತುಭ್ಯಮುತ್ಸಹತೇ ಹರ ॥ ೩೬ ॥

ಯದಿದಾನೀಂ ತ್ವಯಾ ಕರ್ತುಂ ಯುಜ್ಯತೇ ಕ್ರಿಯತಾಂ ತು ತತ್ ।
ಅಸ್ಮಾಂಶ್ಚಾಪ್ಯನುಜಾನೀಹಿ ಹರಂ ಗಂತುಂ ನಿಜಾಸ್ಪದಂ ॥ ೩೭ ॥

ಸಿದ್ಧಂ ಜ್ಞಾತ್ವಾ ಹರಃ ಸಾಧ್ಯಂ ಮುದಿತಸ್ತಾನ್ವಿಸೃಷ್ಟವಾನ್ ।
ಯಥಾಯೋಗ್ಯಂ ಸಮಾಭಾಷ್ಯ ಕ್ರಮಾದೇಕೈಕಶೋ ಮುನೀನ್ ॥ ೩೮ ॥

ಕಾಳೀವಿವಾಹಾವಸರೇ ಯೂಯಮಾಯಾತ ಮಾಂ ಪ್ರತಿ ।
ಇತಿ ತೇ ವೈ ಹರೇಣೋಕ್ತಂ ಪ್ರತಿಶ್ರುತ್ಯರ್ಷಯೋ ಯಯುಃ ॥ ೩೯ ॥

ಅಥಾನ್ಯೋನ್ಯಪ್ರಿಯತಯಾ ಕೃತ್ವಾ ಕೃತ್ವಾ ಗತಾಗತಂ ।
ಸಮಯಂ ಕಾರಯಾಮಾಸ ವಿವಾಹಾಯ ಹರೋ ಗಿರಿಂ ॥ ೪೦ ॥

೩೬-೩೭. ಓ ಶಂಕರನೇ! ಹಿಮವಂತನು ನಿನಗೆ ಮಗಳನ್ನು ಕೊಡಲು ಒಪ್ಪಿರುವನು. ಈಗ ಮಾಡಬೇಕಾದ ಕಾರ್ಯವಾವುದೋ ಅದನ್ನು ಮಾಡು. ನಾವು ನಮ್ಮ ಸ್ಥಾನಗಳಿಗೆ ಹೊರಡುತ್ತೇವೆ, ನಮಗೆ ಅಪ್ಪಣೆಯನ್ನು ಕೊಡು.

೩೮. ಋಷಿಗಳು ಹೇಳಿದ ಮಾತನ್ನು ಕೇಳಿ ಶಂಕರನು ತನ್ನ ಮನೋರಥವು ನೆರವೇರಿತೆಂದು ತಿಳಿದು ಸಂತುಷ್ಟನಾಗಿ ಆ ಸಪ್ತಋಷಿಗಳಲ್ಲಿ ಒಬ್ಬೊಬ್ಬರನ್ನೂ ಯೋಗ್ಯವಾಗಿ ಸಂಭಾಷಣೆಯಿಂದ ಮನ್ನಿಸಿ, ಅವರಿಗೆ ಹೋಗಲು ಅನುಮತಿಯನ್ನು ಕೊಟ್ಟು ಕಳುಹಿಸಿದನು.

೩೯. ಕಳುಹಿಸುವಾಗ ಪಾರ್ವತಿಯ ಮದುವೆಯ ಸಮಯಕ್ಕೆ ತನ್ನಲ್ಲಿಗೆ ಬರಬೇಕೆಂದು ಶಂಕರನು ಹೇಳಿದನು. ಆ ಮಾತನ್ನಂಗೀಕರಿಸಿ ಆ ಮುನಿಗಳು ತಮ್ಮ ಸ್ಥಾನಗಳಿಗೆ ಹೊರಟುಹೋದರು.

೪೦. ಅನಂತರ ಹಿಮವಂತಶಂಕರರಿಗೆ ಪರಸ್ಪರ ಪರಿಚಯವಾಯಿತು. ಹಿಮವಂತನ ಮನೆಗೆ ಶಂಕರನು ಹೋಗಿ ಬರುತ್ತಲಿದ್ದನು. ಮದುವೆಗೆ ಮುಹೂರ್ತವನ್ನು ನಿಶ್ಚಯಿಸಿದನು.

ಮಾಧವೇ ಮಾಸಿ ಪಂಚಮ್ಯಾಂ ಸಿತೇ ಪಕ್ಷೇ ಗುರೋರ್ದಿನೇ ।
ಚಂದ್ರೇ ಚೋತ್ತರಫಲ್ಗುನ್ಯಾಂ ಭರಣ್ಯಾದೌ ಸ್ಥಿತೇ ರವೌ ॥ ೪೧ ॥

ಆಗತಾ ಮುನಯಸ್ತತ್ರ ಮರೀಚಿಪ್ರಮುಖಾ ಮುಹುಃ ।
ಹರೇಣ ಚಿಂತಿತಾಃ ಸರ್ವೇ ತಥಾ ಬ್ರಹ್ಮಾದಯಃ ಸುರಾಃ ॥ ೪೨ ॥

ತಥಾ ಚ ಸರ್ವೇ ದಿಕ್ಪಾಲಾ ಮುನಯಶ್ಚ ತಪೋಧನಾಃ ।
ಶಚ್ಯಾ ಸಹ ತಥಾ ಶಕ್ರೋ ಬ್ರಹ್ಮಾಣ್ಯಾದ್ಯಾಸ್ತು ಮಾತರಃ ॥ ೪೩ ॥

ನಾರದಶ್ಚ ಗತಸ್ತತ್ರ ದೇವರ್ಷಿರ್ಬ್ರಹ್ಮಣಃ ಸುತಃ ।
ಏತೈಃ ಪರಿಚರೈಃ ಸಾರ್ಧಂ ಗಣೈರಾಪ್ಯಾಯಿತಃ ಸ್ವಕೈಃ ॥ ೪೪ ॥

ವೈವಾಹಿಕೇನ ವಿಧಿನಾ ಗಿರಿಪುತ್ರೀಂ ಹರೋಽಗ್ರಹೀತ್ ।
ವಿವಾಹೇ ಗಿರಿಜಾಶಂಭ್ವೋಃ ಸರ್ಪಾ ಯೇಽಷ್ಟೌ ತನೌ ಸ್ಥಿತಾಃ ॥ ೪೫ ॥

---

೪೧. ವೈಶಾಖಮಾಸದ ಶುಕ್ಲಪಕ್ಷದ ಪಂಚಮಿ ಗುರುವಾರದಲ್ಲಿ ಮದುವೆಯ ಮುಹೂರ್ತವು ನಿಶ್ಚಯವಾಯಿತು. ಆ ದಿವಸ ಚಂದ್ರನು ಉತ್ತರ ಫಲ್ಗುನಿಯಲ್ಲಿದ್ದನು. ಸೂರ್ಯನು ರೋಹಿಣೀನಕ್ಷತ್ರದ ಆದಿಭಾಗ (೧ ನೇ ಪಾದ) ದಲ್ಲಿದ್ದನು.

೪೨-೪೩. ಆ ದಿವಸ ಹರನು ಸ್ಮರಿಸಲು, ಮರೀಚಿಯೇ ಮೊದಲಾದ ಸಪ್ತ ಋಷಿಗಳೂ ಅಲ್ಲಿಗೆ ಬಂದರು. ಅಲ್ಲದೇ ಬ್ರಹ್ಮನೇ ಮೊದಲಾದ ದೇವತೆಗಳೂ, ದಿಕ್ಪಾಲಕರೂ, ತಪಸ್ವಿಗಳಾದ ಮುನಿಗಳೂ, ಶಚೀದೇವಿಯೊಂದಿಗೆ ಇಂದ್ರನೂ, ಬ್ರಹ್ಮಾಣೀ (ಸರಸ್ವತಿ) ಯೇ ಮೊದಲಾದ ಜಗನ್ಮಾತೆಯರೂ ಅಲ್ಲಿ ಬಂದು ನೆರೆದರು.

೪೪. ಬ್ರಹ್ಮಮಾನಸಪುತ್ರನಾದ ದೇವಮುನಿ ನಾರದನೂ ಆ ಮದುವೆಗೆ ಬಂದನು ಪರಿವಾರಗಳೂ, ಪ್ರಮಥಗಣಗಳೂ, ತನ್ನನ್ನು ಸೇವಿಸುತ್ತಿರಲು ಶಂಕರನು ಆ ಶುಭಮುಹೂರ್ತದಲ್ಲಿ ಗಿರಿಜೆಯನ್ನು ವಿವಾಹದ ವಿಧಿಯಂತೆ ಮದುವೆಯಾದನು.

೪೫-೪೮. ಆ ಗಿರಿಜಾಶಂಕರರ ವಿವಾಹದಲ್ಲಿ ಶಂಕರನ ಶರೀರವಲ್ಲಿದ್ದ ಎಂಟು ಸರ್ಪಗಳು ಚಿನ್ನದ ಆಭರಣಗಳಾಗಿ ಮಾರ್ಪಟ್ಟು ಅವನ ಶರೀರವನ್ನು ಅಲಂಕರಿಸಿದುವು. ಆಗ ಶಂಕರನಿಗೆ ಸಾಮಾನ್ಯ ಮನುಷ್ಯರಂತೆ ಎರಡು ಕೈಗಳು ಮಾತ್ರವಿದ್ದುವು. ಜಟೆಗಳು ಸುಂದರವಾದ ಕೇಶಪಾಶಗಳಾದುವು. ಶಿರಸ್ಸಿನಲ್ಲಿರುವ ಅರ್ಧಚಂದ್ರನು

ತೇ ಜಾಂಬೂನದಸಂನ್ನದ್ಧಾ ಅಲಂಕಾರಾಸ್ತದಾಽಭವನ್ ।
ದ್ವಿಭುಜೋಽಭೂನ್ಮಹಾದೇವೋ ಜಟಾಃ ಕೇಶತ್ವಮಾಗತಾಃ ॥ ೪೬ ॥

ಶಿರಃಸ್ಥಿತಶ್ಚಂದ್ರಖಂಡಃ ಸೋಽರ್ಚಿಷಾ ಜ್ವಲಿತೋಽಭವತ್ ।
ಲಲಾಟನೇತ್ರಮಭವತ್ತದಾ ರತ್ನಂ ಮಹಾರ್ಘಕಂ ॥ ೪೭ ॥

ವಿಚಿತ್ರವಸನಂ ವ್ಯಾಘ್ರಕೃತ್ತಿರಾಸೀತ್ತದಾ ದ್ವಿಜಾಃ ।
ವಿಭೂತಿಲೇಪೋ ಹ್ಯಸ್ಯಾಸೀತ್ಸುಗಂಧಿಮಲಯೋದ್ಭವಃ ॥ ೪೮ ॥

ಗೌರರೂಪೋ ಹರಸ್ತತ್ರ ಬಭೂವಾದ್ಭುತದರ್ಶನಃ ।
ತತೋ ದೇವಾಃ ಸಗಂಧರ್ವಾಃ ಸಿದ್ಧವಿದ್ಯಾಧರೋರಗಾಃ ॥ ೪೯ ॥

ವಿಸ್ಮಯಂ ಪರಮಂ ಜಗ್ಮುರ್ಹರಂ ದೃಷ್ಟ್ವಾ ತಥಾವಿಧಂ ।
ಹಿಮವಾನ್ಮುದಿತಶ್ಚಾಸೀತ್ಸಹ ಪುತ್ರೈಶ್ಚ ಮೇನಯಾ ॥ ೫೦ ॥

ಕಾಂತಿಯಿಂದ ಮತ್ತಷ್ಟು ಜ್ವಲಿಸುತ್ತಿದ್ದನು. ಓ ಬ್ರಾಹ್ಮಣರೇ ಕೇಳಿ, ಆ ಶಂಕರನ ಹಣೆಯಲ್ಲಿರುವ ಮೂರನೆಯ ಕಣ್ಣು ಅಮೂಲ್ಯವಾದ ರತ್ನವಾಯಿತು, ಅವನು ಹೊದೆದಿದ್ದ ಹುಲಿಯ ಚರ್ಮವು ಅತಿ ವಿಚಿತ್ರತರವಾದ ವಸ್ತ್ರವಾಯಿತು. ಶರೀರದಲ್ಲಿನ್ನ ಭಸ್ಮಲೇಪವು ಸುವಾಸನೆಯುಳ್ಳ ಮಲಯಪರ್ವತದ ಗಂಧದ ಲೇಪವಾಯಿತು. ಸುವರ್ಣದಂತೆ ಹೊಳೆಯುವ ಶರೀರಕಾಂತಿಯಿಂದ ಶಂಕರನು ಅಲ್ಲಿ ತುಂಬಾ ಸುಂದರಪುರುಷನಾಗಿ ಶೋಭಿಸಿದನು.

೪೯. ಆಗ ದೇವತೆಗಳೂ, ಗಂಧರ್ವರೂ, ಸಿದ್ಧರೂ, ವಿದ್ಯಾಧರರೂ, ನಾಗಲೋಕದವರೂ ಸಹ ಹೀಗೆ ಸರ್ವಾಂಗಸುಂದರನಾಗಿ ಶೋಭಿಸುತ್ತಿರುವ ಶಂಕರನನ್ನು ನೋಡಿ ತುಂಬಾ ಆಶ್ಚರ್ಯಗೊಂಡರು.

೫೦. ಹಿಮವಂತನೂ ಸಹ ತನ್ನ ಪತ್ನಿಯಾದ ಮೇನಕೆಯೊಡನೆಯೂ, ಪುತ್ರರೊಡನೆಯೂ ತುಂಬಾ ಹರ್ಷಗೊಂಡನು. ಅವನ ಜ್ಞಾತಿಗಳೂ ಸಹ ಹರ್ಷಗೊಂಡರು.

ಚ್ಛ್ಯಾತಯಶ್ಚಾಸ್ಯ ಮುಮುದುರ್ದರಂ ದೃಷ್ಟ್ವಾ ತಥಾವಿಧಂ ।
ಇದಂ ಬ್ರಹ್ಮಾ ತತ್ರ ಜಗೌ ಹರಂ ದೃಷ್ಟ್ವಾ ಮನೋಹರಂ ॥ ೫೧ ॥

ಸರ್ವಂ ಶಿವಕರಂ ಯಸ್ಮಾತ್ಸುವೇಶಮುಭವತ್ಸುರಾಃ ।
ತಸ್ಮಾಚ್ಛಿವೋಽಯಂ ಲೋಕೇಷು ನಾಮಾಖ್ಯಾತೋಽಧಿಕಃ ಶಿವಃ ॥ ೫೨ ॥

ಮಹೇಶ್ವರನುಮಾಯುಕ್ತಮಿಾದೃಶಂ ಯಃ ಸ್ಮರೇದ್ಧೃದಾ
ಸತತಂ ತಸ್ಯ ಕೆಲ್ಯಾಣಂ ವಾಂಛಿತಂ ಚ ಭವಿಷ್ಯತಿ ॥ ೫೩ ॥

ಏವಂ ಕಾಳೀ ಮಹಾಮಾಯಾ ಯೋಗನಿದ್ರಾ ಜಗತ್ಪ್ರಸೂಃ ।
ಪೂರ್ವಂ ದಾಕ್ಷಾಯಣೀ ಭೂತ್ವಾ ಪಶ್ಚಾದ್ಗಿರಿಸುತಾಭವತ್ ॥ ೫೪ ॥

ಸ್ವಯಂ ಸಮರ್ಥಾಪಿ ಸತೀ ಕಾಳೀ ಸಮ್ಮೋಹಿತುಂ ಹರಂ ।
ತಥಾಪ್ಯುಗ್ರಂ ತಪಸ್ತೇಪೇ ಹಿತಾಯ ಜಗತಾಂ ಶಿವಾ ॥ ೫೫ ॥

೫೧-೫೨. ಆಗ ಅಲ್ಲಿ ಬ್ರಹ್ಮನು ಮನೋಹರನಾದ ಶಂಕರನನ್ನು ನೋಡಿ ಈರೀತಿಯಾಗಿ ಹೇಳಿದನು. ಎಲೈ ದೇವತೆಗಳೇ ! ಈಗ ಈ ಶಂಕರನು ಮಂಗಳಕರವಾದ ಸ್ವರೂಪವುಳ್ಳವನಾಗಿರುವನು. ಆದುದರಿಂದ ಇನ್ನು ಮುಂದೆ ಇವನು ಶಿವನೆಂಬ ಹೆಸರಿನಿಂದ ಪ್ರಸಿದ್ಧನಾಗಿ ಜಗತ್ತಿಗೆ ಇನ್ನೂ ಹೆಚ್ಚಾದ ಮಂಗಳವನ್ನುಂಟು ಮಾಡುವನು.

೫೩. ಪಾರ್ವತಿಯೊಡನಿರುವ ಈಶ್ವರನನ್ನು ಮನಸ್ಸಿನಿಂದ ಧ್ಯಾನಿಸಿದವನಿಗೆ ಸದಾ ಮಂಗಳವಾಗುವುದು. ಸಕಲ ಇಷ್ಟಾರ್ಥಗಳೂ ನೆರವೇರುವುವು.

೫೪. ಅಲ್ಲದೆ ಈ ಕಾಳಿಯು ಯೋಗನಿದ್ರೆಯೂ, ಜಗನ್ಮಾತೆಯೂ ಆದ ಮಹಾಮಾಯೆಯು. ವಿಷ್ಣುಮಾಯೆಯ ಸ್ವರೂಪಳು. ಇವಳು ಹಿಂದೆ ದಕ್ಷನ ಪುತ್ರಿಯಾದ ಸತಿಯಾಗಿ ಜನಿಸಿದ್ದವಳು ಈಗ ಗಿರಿಜೆಯಾಗಿರುವಳು.

೫೫. ಸಾಧ್ವಿಯಾದ ಈ ಕಾಳಿಯು ಯಾವ ಪ್ರಯತ್ನವನ್ನೂ ಮಾಡದೆ ಶಂಕರನನ್ನು ಮೋಹಗೊಳಿಸಲು ಸಮರ್ಥಳಾಗಿದ್ದರೂ ಜಗತ್ತಿನ ಕ್ಷೇಮಕ್ಕಾಗಿ ತಪಸ್ಸನ್ನಾಚರಿಸಿ ಈ ಚಂದ್ರಶೇಖರನನ್ನು ಈರೀತಿಯಾಗಿ ಮೋಹಗೊಳಿಸಿರುವಳು.

ಏವಂ ಸಮ್ಮೋಹಯಾಮಾಸ ಕಾಳಿಕಾ ಚಂದ್ರಶೇಖರಂ ।
ಇತ್ಯೇತತ್ಕಥಿತಂ ಸರ್ವಂ ತ್ಯಕ್ತದೇಹಾ ಸತೀ ಯಥಾ ॥ ೫೬ ॥

ಹಿಮವತ್ತನಯಾ ಭೂತ್ವಾ ಪುನಃ ಪ್ರಾಪ ಮಹೇಶ್ವರಂ ।
ಇದಂ ಯಃ ಕೀರ್ತಯೇತ್ಪುಣ್ಯಂ ಕಾಲಿಕಾಚರಿತಂ ದ್ವಿಜಾಃ ॥ ೫೭ ॥

ನಾಧಯೋ ವ್ಯಾಧಯಸ್ತಸ್ಯ ದೀರ್ಘಾಯುಃ ಸ ಚ ಜಾಯತೇ ।
ಇದಂ ಪವಿತ್ರಂ ಪರಮಮಿದಂ ಕಲ್ಯಾಣವರ್ಧನಂ ॥ ೫೮ ॥

ಶ್ರುತ್ವಾಪಿ ಸಕೃದೇವೇದಂ ಶಿವಲೋಕಾಯ ಗಚ್ಛತಿ ।
ಯಃ ಶ್ರಾದ್ಧೇ ಶ್ರಾವಯೇದ್ವಿಪ್ರಾನ್ ಕಾಳಿಕಾಚರಿತಂ ಮುದಾ ॥ ೫೯ ॥

ಪಿತರಸ್ತಸ್ಯ ಕೈವಲ್ಯಮಾಪ್ನುವಂತಿ ನ ಸಂಶಯಃ ।
ಯಃ ಶ್ರಾವಯೇದ್ಬ್ರಾಹ್ಮಣಾನಾಂ ಸನ್ನಿಧೌ ವಾ ಸಭಾಗತಃ ॥ ೬೦ ॥

---

೫೬. ಎಲೈ ಬ್ರಾಹ್ಮಣರೇ ! ಈರೀತಿಯಾಗಿ ಸತೀದೇವಿಯು ತಂದೆಯಮೇಲೆ ಕೋಪದಿಂದ ಶರೀರವನ್ನು ಬಿಟ್ಟು ತಿರುಗಿ ಹಿಮವಂತನ ಮಗಳಾದ ಪಾರ್ವತಿಯಾಗಿ ಜನಿಸಿ, ಮಹೇಶ್ವರನನ್ನು ವರಿಸಿದ ಇತಿಹಾಸವನ್ನು ಸಂಪೂರ್ಣವಾಗಿ ಹೇಳಿರುವೆನು.

೫೭. ಕಾಳಿಕಾದೇವಿಯ ಪುಣ್ಯಕರವಾದ ಈ ಚರಿತ್ರೆಯನ್ನು ಯಾವನು ಕೇಳುವನೋ ಅವನಿಗೆ ಯಾವವಿಧವಾದ ಮನೋವ್ಯಥೆಯೂ, ರೋಗಗಳೂ ಬರಲಾರವು. ಅವನು ಬಹಳಕಾಲ ಬದುಕುವನು.

೫೮. ಈ ಚರಿತ್ರೆಯು ಅತಿ ಪವಿತ್ರವಾದುದು ; ಇದು ಮಂಗಳವನ್ನು ಅಭಿವೃದ್ಧಿಗೊಳಿಸುವುದು. ಇಂತಹ ಈ ಚರಿತ್ರೆಯನ್ನು ಒಮ್ಮೆ ಕೇಳಿದರೂ ಸಹ ಅವನು ಶಿವಲೋಕಕ್ಕೆ ಹೋಗುವನು.

೫೯. ಈ ಕಾಳಿಕಾಚರಿತ್ರೆಯನ್ನು ಶ್ರಾದ್ಧಕಾಲದಲ್ಲಿ ಬ್ರಾಹ್ಮಣರಿಗೆ ಶ್ರವಣ ಮಾಡಿಸಿದರೆ ಅಂಥವನ ಪಿತೃಗಳು ಮೋಕ್ಷವನ್ನು ಹೊಂದುವರು. ಇದರಲ್ಲಿ ಸಂದೇಹವಿಲ್ಲ.

೬೦. ಈ ಕಥೆಯ ಸ್ವಲ್ಪಭಾಗವನ್ನಾದರೂ ಸಹ ಬ್ರಾಹ್ಮಣರ ಸನ್ನಿಧಿಯಲ್ಲಿ ಪಠಿಸುತ್ತಿದ್ದರೆ ಅಲ್ಲಿಗೆ ಆದಿಮಾಯೆಯಾದ ಕಾಳಿಯೊಡನೆ ಕೂಡಿ ಶಂಕರನೇ ಬಂದು ಕೇಳುವನು.

ತತ್ರ ಸ್ವಯಂ ಹರೋ ಗತ್ವಾ ಶೃಣೋತಿ ಸಹ ಮಾಯಯಾ ।
ಇತಿ ವಃ ಕಥಿತಂ ಪುಣ್ಯಂ ಸರ್ವಪಾಪಪ್ರಣಾಶನಂ ॥ ೬೧ ॥

ಯುಷ್ಮಭ್ಯಂ ರೋಚತೇ ಚಾನ್ಯದ್ಯತ್ತತ್ಪೃಚ್ಛತ ಸತ್ತಮಾಃ ।

॥ ಇತಿ ಶ್ರೀ ಕಾಲಿಕಾಪುರಾಣೇ ಷಟ್ಚತ್ವಾರಿಂಶತ್ತಮೋಽಧ್ಯಾಯಃ ॥

---

೬೧. ಎಲೈ ಬ್ರಾಹ್ಮಣೋತ್ತಮರೇ ! ಈರೀತಿಯಾಗಿ ಅತಿ ಪವಿತ್ರವಾದುದೂ, ಸಕಲ ಪಾಪಗಳನ್ನು ನಾಶಮಾಡತಕ್ಕುದೂ ಆದ ಈ ಚರಿತ್ರೆಯನ್ನು ನಿಮಗೆ ಹೇಳಿರುವೆನು. ಇನ್ನು ನೀವು ಮತ್ತೇನನ್ನು ಕೇಳಲಿಚ್ಛಿಸುವರೋ ಹೇಳಿರಿ, ಅದನ್ನು ಹೇಳುವೆನು.

ಇಲ್ಲಿಗೆ ನಲವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀ ಕಾಲಿಕಾಪುರಾಣೇ
ಸಪ್ತ ಚತ್ವಾರಿಂಶತ್ತಮೋಽಧ್ಯಾಯಃ

॥ ಋಷಯ ಊಚುಃ ॥

ವಿಚಿತ್ರಮಿದಮಾಖ್ಯಾತಂ ಬ್ರಹ್ಮನ್ಕಾಳೀಹರಾಗಮಂ ।
ಪುಣ್ಯಂ ಪಾಪಹರಂ ನಿತ್ಯಂ ಶ್ರುತಿಸೌಖ್ಯಪ್ರದಂ ವರಂ ॥ ೧ ॥

ಭೂಯಃ ಕಥಯ ಶರ್ವಸ್ಯ ಕಾಳೀತನ್ವರ್ಧಮುತ್ತಮಂ ।
ಕಥಂ ಜಹಾರ ಗೌರೀ ವಾ ಕಥಂಭೂತಾಥ ಕಾಳಿಕಾ ॥ ೨ ॥

ಕೇನ ವಾ ಕಾರಣೇನಾಶು ಕೃಷ್ಣಾ ಗೌರೀತ್ವಮಾಗತಾ ।
ತನ್ನಃ ಕಥಯ ತತ್ತ್ವೇನ ಮುನಿಶ್ರೇಷ್ಠ ದ್ವಿಜೋತ್ತಮ ॥ ೩ ॥

॥ ನಲವತ್ತೇಳನೆಯ ಅಧ್ಯಾಯವು ॥

೧. ಋಷಿಗಳು ಹೇಳಿದರು:–ಬ್ರಾಹ್ಮಣೋತ್ತಮನಾದ ಓ ಮಾರ್ಕಂಡೇಯ ಮುನಿಯೇ! ಶಂಕರ ಪಾರ್ವತಿಯರ ಸಮಾಗಮದ ಈ ಆಖ್ಯಾನವು ತುಂಬಾ ಆಶ್ಚರ್ಯಕರವೂ, ಪುಣ್ಯತಮವೂ ಆಗಿರುವುದು. ಇದು ಪಾಪವನ್ನು ಪರಿಹರಿಸುವುದಲ್ಲದೆ ಕೇಳುವುದಕ್ಕೂ ಬಹು ಇಂಪಾಗಿರುವುದು. ಇಂತಹ ಆಖ್ಯಾನವನ್ನು ಈಗ ನೀನು ನಮಗೆ ಹೇಳಿರುವೆ.

೨-೩. ಇನ್ನೂ ಕೆಲವು ವಿಷಯಗಳನ್ನು ಕೇಳಬೇಕೆಂದಿರುವೆವು. ಆ ಕಾಳಿಯು ಶಂಕರನ ಶರೀರದ ಅರ್ಧಭಾಗವನ್ನು ಆಕ್ರಮಿಸಿ ಅರ್ಧಾಂಗಿಯಾದುದು ಹೇಗೆ? ಅಲ್ಲದೆ ಆ ಕಾಳಿಯ ಶರೀರಕಾಂತಿಯು ಕಪ್ಪಾಗಿರುವುದೆಂದು ಹಿಂದೆಯೇ ಕೇಳಿರುವೆವು. ಅಂತಹ ಕಾಳಿಯ ಶರೀರವರ್ಣವು ಗೌರವರ್ಣವಾದ ಬಗೆಯೆಂತು? ಇವೆಲ್ಲವನ್ನೂ ನಮಗೆ ತಿಳಿಯಹೇಳು.

॥ ಮಾರ್ಕಂಡೇಯ ಉವಾಚ ॥

ಇದಂ ತು ಮಹದಾಖ್ಯಾನಂ ಕಥಯಿಷ್ಯಾಮಿ ವೋಽಧುನಾ ।
ಮಹರ್ಷಯಸ್ತಚ್ಛೃಣ್ವಂತು ತತ್ತ್ವೇನ ಶುಭದಂ ಪರಂ ॥ ೪ ॥

ಏತದೌರ್ವಂ ಪುರಾ ರಾಜಾ ಸಗರಃ ಪೃಷ್ಟವಾನ್ಮುನಿಂ ।
ಸ ತಂ ಯಥಾ ಸಮಾಚಷ್ಟ ತದ್ವೋಽಥ ನಿಗದಾಮ್ಯಹಂ ॥ ೫ ॥

ಪುರಾಽಭೂತ್ಸೋಮವಂಶೇ ಚ ಸಗರೋ ನಾಮ ಪಾರ್ಥಿವಃ ।
ಸ ಶ್ರೀಮಾನ್ ಬಲವಾನ್ ದಕ್ಷಃ ಸರ್ವಶಾಸ್ತ್ರಾರ್ಥಪಾರಗಃ ॥ ೬ ॥

ಸೋಽಭೂದೇಕರಥೇನೈವ ಜಿತ್ವಾ ಸರ್ವಾನ್ಮಹೀಭುಜಃ ।
ಸಾರ್ವಭೌಮೋ ನರಪತಿಃ ಸರ್ವರಾಜಗುಣೈರ್ಯುತಃ ॥ ೭ ॥

ತಂ ಪ್ರಾಪ್ತರಾಜ್ಯಂ ರಾಜಾನಂ ಸಗರಂ ಪಾರ್ಥಿವೋತ್ತಮಂ ।
ಸಭಾಜಯಿತುಮತ್ಯರ್ಥಂ ಮುನಯಃ ಸಮುಪಾಗತಾಃ ॥ ೮ ॥

---

೪. ಮಾರ್ಕಂಡೇಯನು ಹೇಳಿದನು:—ಎಲೈ ಮಹರ್ಷಿಗಳಿರಾ! ನೀವು ಕೇಳಿದ ಈ ಆಖ್ಯಾನವು ತುಂಬಾ ಮಹತ್ತಾದುದು ಮತ್ತು ಮಂಗಳಕರವಾದುದು. ಅದನ್ನು ನಿಮಗೆ ವಿಸ್ತಾರವಾಗಿ ಹೇಳುವೆನು ಕೇಳಿರಿ.

೫. ಹಿಂದೆ ಇದೇ ವೃತ್ತಾಂತವನ್ನು ಕೇಳಲಿಚ್ಛೆಯಿಂದ ಸಗರರಾಜನು ಔರ್ವ ಮುನಿಯನ್ನು ಪ್ರಶ್ನಿಸಿದ್ದನು. ಆಗ ಆ ಔರ್ವ ಮುನಿಯು ಸಗರನಿಗೆ ಹೇಳಿದುದನ್ನೇ ನಿಮಗೆ ಹೇಳುವೆನು.

೬-೭. ಹಿಂದೆ ಚಂದ್ರವಂಶದಲ್ಲಿ ಸಗರನೆಂಬ ರಾಜನಿದ್ದನು. ಅವನು ಶ್ರೀಮಂತನೂ, ಬಲಿಷ್ಠನೂ, ಸಮರ್ಥನೂ, ಸಕಲ ಶಾಸ್ತ್ರಾರ್ಥಗಳನ್ನು ಬಲ್ಲವನೂ ಆಗಿದ್ದನು. ಸಕಲ ರಾಜಲಕ್ಷಣಗಳಿಂದ ಕೂಡಿದ್ದನು. ಅವನು ತನ್ನ ರಥದಲ್ಲಿ ಕುಳಿತು ತಾನೊರ್ವನೇ ಎಲ್ಲಾ ರಾಜರನ್ನೂ ಜಯಿಸಿ ಚಕ್ರವರ್ತಿಯಾಗಿದ್ದನು.

೮-೯. ಚಕ್ರವರ್ತಿಯಾಗಿ ರಾಜ್ಯಭಾರ ಮಾಡುತ್ತಿರುವಾಗ ಅವನನ್ನು ಅಭಿನಂದಿಸಲು ಮುನಿಗಳು ಅವನ ಬಳಿಗೆ ಬಂದರು. ಅವರಲ್ಲಿ ಕೆಲವರು ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ವಾಸಿಸುವವರು. ಮತ್ತೆ ಕೆಲವರು ದಕ್ಷಿಣೋತ್ತರದಿಕ್ಕಿನವರು. ಮಹಾತ್ಮ

ಪ್ರಾಚ್ಯೋದೀಚ್ಯಾ ಮಹಾತ್ಮನೋ ಬಾಹ್ಲಿಕಾತ್ಯಸ್ತಥೋತ್ತರಾಃ ।
ಮುನಯೋ ಬ್ರಾಹ್ಮಣಾಶ್ಚೈವ ನೃಪಂ ದ್ರಷ್ಟುಂ ಸಮಾಗಮನ್ ॥ ೯ ॥

ಆಗತೇಷ್ವಥ ಸರ್ವೇಷು ಮಹಾತ್ಮಾ ಜ್ವಲನೋಪಮಃ ।
ಔರ್ವೋ ನಾಮ ಮುನಿಃ ಶ್ರೀಮಾನಾಗತೋ ನಂದಿತುಂ ನೃಪಂ ॥ ೧೦ ॥

ತಮಾಗತಂ ಮುನಿಂ ದೃಷ್ಟ್ವಾ ಜ್ವಲಂತಮಿವ ಪಾವಕಂ ।
ಸಪಯು ಯಾ ಮಹತ್ಯಾ ತು ಸಗರಸ್ತಮುಪೂಜಯತ್ ॥ ೧೧ ॥

ಪಾದ್ಯಮಾಚಮನೀಯಂ ಚ ದತ್ತ್ವಾರ್ಘ್ಯಪುರೋಗಮಂ ।
ನಿವೇಶಯಾಮಾಸ ಚ ತಂ ಮುನಿಶ್ರೇಷ್ಠಂ ವರಾಸನೇ ॥ ೧೨ ॥

ಉವಾಚ ಚ ಮಹಾತ್ಮಾನಮೌರ್ವಂ ಸ ಸಗರೋ ನೃಪಃ ।
ಪ್ರಣಮ್ಯ ಚ ಯಥಾಯೋಗ್ಯಂ ಕುಶಲಂ ತ ಇತಿ ದ್ವಿಜಂ ॥ ೧೩ ॥

ಸ ಚ ಪ್ರಾಹ ಮುನಿಶ್ರೇಷ್ಠೋ ನರರಾಜ ಸದಾ ಮಮ ।
ಸರ್ವತ್ರ ಕುಶಲಂ ತ್ವಾಂ ತು ದ್ರಷ್ಟುಂ ಕುಶಲಮುತ್ಸಹೇ ॥ ೧೪ ॥

ರಾದ ಮುನಿಗಳೂ, ಮಿಕ್ಕ ಬ್ರಾಹ್ಮಣರೂ ಸಹ ಆ ಸಗರರಾಜನನ್ನು ನೋಡಲು ಬಂದರು.

೧೦. ಅಲ್ಲಿಗೆ ಬಂದಿದ್ದ ಆ ಮಹಾತ್ಮರಲ್ಲೆಲ್ಲ ಔರ್ವನೆಂಬ ಮುನಿಯು ಅಗ್ನಿಯಂತೆ ಮಹಾತೇಜಸ್ವಿಯಾಗಿದ್ದನು. ಅವನೂ ಮಹಾರಾಜನನ್ನು ಅಭಿನಂದಿಸುವ ಕ್ಕಾಗಿಯೇ ಬಂದಿದ್ದನು.

೧೧-೧೨. ಈ ಮುನಿಯ ಅಪೂರ್ವ ತೇಜಸ್ಸನ್ನು ನೋಡಿ ಸಗರರಾಜನು ಅವನನ್ನು ಪಾದ್ಯ, ಅರ್ಘ್ಯ, ಆಚಮನ ಇವುಗಳಿಂದ ವಿಶೇಷರೀತಿಯಲ್ಲಿ ಅರ್ಚಿಸಿ ಶ್ರೇಷ್ಠವಾದ ಸುಖಾಸನದಲ್ಲಿ ಕುಳ್ಳಿರಿಸಿದನು.

೧೩. ಅನಂತರ ಸುಖಾಸನದಲ್ಲಿ ಕುಳಿತಿರುವ ಮಹಾತ್ಮನಾದ ಔರ್ವ ಮುನಿಯನ್ನು ಸಗರರಾಜನು ನಮಸ್ಕರಿಸಿ, ಯಥೋಚಿತವಾಗಿ ಕುಶಲಪ್ರಶ್ನೆಯನ್ನು ಮಾಡಿದನು.

೧೪-೧೫. ಆಗ ಆ ಮುನಿಶ್ರೇಷ್ಠನು ಹೀಗೆ ಹೇಳಿದನು :—ಎಲ್ಲೆ ಮಹಾರಾಜನೇ ! ನಾನು ಸದಾ ಕುಶಲದಿಂದಿರುವೆನು. ಸಮಸ್ತ ವಿಷಯಗಳಲ್ಲಿಯೂ ನೀನು

ತ್ವತ್ತಃ ಕೋಽನ್ಯೋಽಸ್ತಿ ಕುಶಲೀ ಪೃಥ್ವ್ಯಾಂ ಸರ್ವನೃಪೇಷು ।
ಯ ಏಕಃ ಸಂಜಿಗಾಯಾಶು ಭವಾನ್ ಸಕಲಪಾರ್ಥಿವಾನ್ ॥ ೧೫ ॥

ಕುಶಲಂ ವರ್ಧತಾಂ ನಿತ್ಯಂ ತವ ರಾಜ ವರೋತ್ತಮ ।
ಯಥಾ ನೀತ್ಯಾ ಸದಾಚಾರೈಃ ಪೃಥ್ವೀಂ ಶಾಧಿ ಭೂಪತೇ ॥ ೧೬ ॥

ತವ ವೃದ್ಧೌ ಜಗದ್ವೃದ್ಧಿರ್ವೃದ್ಧೌ ಚೇಷ್ಟಾಂ ತತಃ ಕುರು ।
ಶುಭ್ರಾಂಶುವೃದ್ಧೌ ಸತತಂ ಸಾಗರಸ್ಯೇವ ವರ್ಧನಂ ॥ ೧೭ ॥

ಪ್ರಥಮಂ ಸದ್ಗುಣೈರಾತ್ಮಾ ಕ್ರಿಯತಾಂ ನೃಪ ಯೋಜನಂ ।
ತತಃ ಸ್ವಭಾರ್ಯಾ ಮಹಿಷೀ ಕ್ರಿಯತಾಂ ತದ್ಗುಣೈರ್ಯುತಾ ॥ ೧೮ ॥

ನಿತ್ಯಾ ಸಂಯೋಜಿತಾ ಚೇತ್ಸ್ಯಾದ್ವನಿತಾ ಸ್ವಯಮೇವ ಹಿ ।
ಸ್ವಗುಣೇಷು ಪ್ರವೇಕ್ಷ್ಯಂತೀ ಮಹತ್ಯಪಿ ಧೃತವ್ರತಾ ॥ ೧೯ ॥

ಕುಶಲವಾಗಿರುವುದನ್ನು ನೋಡಬಯಸುವೆನು. ಭೂಮಿಯಲ್ಲಿರುವ ರಾಜರುಗಳಲ್ಲಿ ನಿನ್ನಷ್ಟು ಕುಶಲದಿಂದಿರುವ ರಾಜನು ಮತ್ತಾವನಿರುವನು ? ನೀನೋರ್ವನೇ ಸಕಲ ರಾಜರನ್ನೂ ಜಯಿಸಿ ರಾಜ್ಯವಾಳುತ್ತಿರುವೆ.

೧೬. ಎಲೈ ರಾಜೋತ್ತಮನೇ! ನಿನಗೆ ನಿತ್ಯವೂ ಕುಶಲವು ವೃದ್ಧಿಯನ್ನೈದು ತ್ತಿರಲಿ. ನೀತಿಯಿಂದಲೂ, ಒಳ್ಳೆಯ ಆಚಾರದಿಂದಲೂ ಭೂಮಿಯನ್ನು ಪಾಲಿಸು.

೧೭. ರಾಜನಾದ ನೀನು ಅಭಿವೃದ್ಧಿಯಿಂದಿದ್ದರೆ ಜಗತ್ತು ಅಭಿವೃದ್ಧಿಯನ್ನೈ ದುವುದು. ಆದುದರಿಂದ ಇನ್ನೂ ವೃದ್ಧಿಯಾಗುವಂತೆ ಯತ್ನವನ್ನು ಮಾಡು. ಚಂದ್ರನು ವೃದ್ಧಿಯನ್ನೈದಿದರೆ ಸಮುದ್ರವೂ ವೃದ್ಧಿಯನ್ನೈದುವುದು. ಅದರಂತೆ ನಿನ್ನ ವೃದ್ಧಿಯಿಂದಲೇ ಜನಗಳ ವೃದ್ಧಿಯೂ ಆಗುವುದು.

೧೮. ಮೊದಲು ರಾಜನಾದವನು ಸದ್ಗುಣಿಯಾಗಿರಬೇಕು. ಬಳಿಕ ಅವನ ಪಟ್ಟದ ರಾಣಿಯು ಅವನಂತೆಯೇ ಸದ್ಗುಣಗಳಿಂದ ಯುಕ್ತಳಾಗಿರುವಂತೆ ಯತ್ನಿಸ ಬೇಕು.

೧೯. ಹಾಗೆ ಸ್ತ್ರೀಯರನ್ನು ಒಳ್ಳೆಯ ಗುಣಗಳಲ್ಲಿ ಪ್ರವರ್ತಿಸುವಂತೆ ಮಾಡಿದರೆ ಅವರು ಮಹಾಕಾರ್ಯಗಳನ್ನೂ ಸಾಧಿಸಲು ಸಮರ್ಥರಾಗುವರು.

ಶ್ರೂಯತೇ ಹಿಮವತ್ಪುತ್ರೀ ಶಂಭುಸಂಗತಮಾನಸಾ ।
ಕ್ರಿಯಾಭ್ಯುಪಾಯೈರ್ಬಹುಭಿಃ ಶಂಭುನಾ ಸಾ ಪ್ರಯೋಜಿತಾ ॥ ೨೦ ॥

ತತೋಽತಿಮಹತಾ ಪ್ರೇಮ್ಣಾ ಶಂಕರಸ್ಯಾಥ ಪಾರ್ವತೀ ।
ಶರೀರಮರ್ಧಮಹರತ್ತಸ್ಯೈವಾನುಮತೇ ಸತೀ ॥ ೨೧ ॥

ಅರ್ಧನಾರೀಶ್ವರಸ್ತೇನ ತದಾಪ್ರಭೃತಿ ಶಂಕರಃ ।
ಅಭವನ್ನೃಪಶಾರ್ದೂಲ ನಾನ್ಯಾಂ ಭಾರ್ಯಾಂ ಗೃಹೀತವಾನ್ ॥ ೨೨ ॥

ತಸ್ಮಾತ್ತ್ವಮಪಿ ರಾಜೇಂದ್ರ ಸ್ವಜಾಯಾಮಾತ್ಮನೋತ್ತರೇ ।
ಗುಣೈಃ ಸಂಯೋಜಯ ಲಘು ಸಂಯೋಜಯ ತತಃ ಸುತಮ್ ॥ ೨೩ ॥

॥ ಮಾರ್ಕಂಡೇಯ ಉವಾಚ ॥

ಇತ್ಯೇವಮಭಾಷಿತಂ ಶ್ರುತ್ವಾ ಸಗರೋಽಪಿ ಮುದಾನ್ವಿತಃ ।
ಇದಂ ಮುನಿಮಪೃಚ್ಛತ್ಸ ನೃಪತಿಃ ಸ್ಮಿತಸಂತತಃ ॥ ೨೪ ॥

---

೨೦. ಹಿಂದೆ ಹಿಮವಂತನ ಪುತ್ರಿಯಾದ ಪಾರ್ವತಿಯು ಶಂಕರನನ್ನು ಪ್ರೀತಿಸುತ್ತಿದ್ದಳು. ಆ ಶಂಕರನ ಪ್ರೇರಣೆಯಿಂದಲೇ ಅತ್ಯುಗ್ರವಾದ ತಪಸ್ಸನ್ನಾಚರಿಸಿ ಸದ್ಗುಣಶೀಲೆಯಾದಳು. ಸಾಕ್ಷಾತ್ ಶಂಕರನೇ ಅವಳಿಗೆ ಪತಿಯಾದನು ಎಂದು ಕೇಳಿರುವೆವು.

೨೧. ಅನಂತರ ಆ ಪಾರ್ವತಿಯು ಮಹತ್ತಾದ ಪ್ರೀತಿಯಿಂದ ಶಂಕರನ ಅರ್ಧ ಶರೀರವನ್ನು ಅವನ ಅನುಮತಿಯಿಂದಲೇ ಪಡೆದಳು ಎಂದರೆ ಅರ್ಧಾಂಗಿಯಾದಳು.

೨೨. ಎಲೈ ರಾಜಶ್ರೇಷ್ಠನೇ! ಆ ಕಾಲ ಮೊದಲುಗೊಂಡು ಶಂಕರನು ಅರ್ಧನಾರೀಶ್ವರನೆಂದು ಪ್ರಸಿದ್ಧನಾದನು. ಪಾರ್ವತಿಯ ಹೊರತು ಬೇರೆ ಪತ್ನಿಯನ್ನನು ಪರಿಗ್ರಹಿಸಲಿಲ್ಲ.

೨೩. ಆದುದರಿಂದ ಎಲೈ ರಾಜೋತ್ತಮನೇ! ನೀನೂ ಸಹ ನಿನ್ನ ಪತ್ನಿಯನ್ನು ಒಳ್ಳೆಯ ಗುಣಶಾಲಿನಿಯನ್ನಾಗಿ ಮಾಡು. ಮುಂದೆ ನಿನ್ನ ಮಗನನ್ನು ಸರಿಯಾಗಿ ಶಿಕ್ಷಿಸಿ ಗುಣವಂತನನ್ನಾಗಿ ಮಾಡು.

೨೪. ಮಾರ್ಕಂಡೇಯನು ಹೇಳಿದನು :—ಈರೀತಿಯಾಗಿ ಪೂರ್ವಮುನಿಯು ಹೇಳಿದುದನ್ನು ಕೇಳಿ ಸಗರರಾಜನು ತುಂಬಾ ಸಂತುಷ್ಟನಾಗಿ ಮಂದಹಾಸದಿಂದ ಆ ಮುನಿಯನ್ನು ಮತ್ತೆ ಪ್ರಶ್ನಿಸಿದನು.

॥ ಸಗರ ಉವಾಚ ॥

ಕಥಂ ಸಾ ಗಿರಿಜಾ ದೇವೀ ಕಾಯಾರ್ಧಮುಪರತ್ಸತೀ ।
ಶಂಕರಸ್ಯ ದ್ವಿಜಶ್ರೇಷ್ಠ ತದಹಂ ಶ್ರೋತುಮುತ್ಸಹೇ ॥ ೨೫ ॥

ನೀತ್ಯಾ ಯುಯೂವಾ ಯೋಕ್ತವ್ಯಾ ಸ್ವಾತ್ಮಾ ಭಾರ್ಯಾ ಸುತೋಽಥವಾ ।
ತಾಂ ನೀತಿಂ ಚ ಸದಾಚಾರಂ ಸಂಹಿತಾಂ ಶ್ರೋತುಮುತ್ಸಹೇ ॥ ೨೬ ॥

ರಾಜನೀತಿಂ ಸತಾಂ ನೀತಿಮನ್ಯೇಷಾಂ ಚ ಕೃತಾತ್ಮನಾಂ ।
ಪೃಥಕ್ಪೃಥಕ್ ಶ್ರೋತುಮಿಚ್ಛುರಹಂ ತ್ವಾಂ ಪ್ರಾರ್ಥಯೇ ದ್ವಿಜ ॥ ೨೭ ॥

ಯದಿ ಗುಹ್ಯಮಿದಂ ಬ್ರಹ್ಮನ್ನ ತದಾ ಶ್ರೋತುಮುತ್ಸಹೇ ।
ತಥಾ ನಾಜ್ಞಾಪಯಾಮಿ ತ್ವಾಂ ಶ್ರೋತುಮಿಚ್ಛುಶ್ಚ ತತ್ಸಮಂ ॥ ೨೮ ॥

ಕೃಪಯಾ ಕಥನೀಯಂ ಚೇತ್ತದಾ ಕಥಯ ತನ್ಮುನೇ ।

೨೫-೨೬. ಸಗರರಾಜನು ಕೇಳಿದನು :- ಓ ಬ್ರಾಹ್ಮಣೋತ್ತಮನೇ ! ಪತಿವ್ರತೆಯಾದ ಆ ಗಿರಿಜಾದೇವಿಯು ಶಂಕರನ ಅರ್ಧಶರೀರವನ್ನು ಪಡೆದ ಬಗೆಯೆಂತು ? ಅಲ್ಲದೆ, ನಾನೂ ನನ್ನ ಪತ್ನಿಯೂ ಮಗನೂ ಸಹ ನೀತಿವಂತರಾಗಲು ಎಂತಹ ನೀತಿಯನ್ನೂ ಮತ್ತು ಸದಾಚಾರವನ್ನೂ ಅನುಸರಿಸಬೇಕು ? ಇವೆಲ್ಲವನ್ನೂ ಕೇಳಲಿಚ್ಛೆಸುವೆನು.

೨೭. ಓ ಬ್ರಾಹ್ಮಣನೇ ! ರಾಜನೀತಿಯನ್ನೂ, ಸತ್ಪುರುಷರು ಮತ್ತು ಮಿಕ್ಕ ಗುಣವಂತರು ಆಚರಿಸಬೇಕಾದ ನೀತಿಯನ್ನೂ, ಸಹ ಬೇರೆಬೇರೆಯಾಗಿ ಕೇಳಲು ಬಯಸುವೆನು. ಅದಕ್ಕಾಗಿ ನಿನ್ನನ್ನು ಪ್ರಾರ್ಥಿಸುತ್ತಲಿರುವೆನು.

೨೮. ನಾನು ಕೇಳುವ ಈ ವಿಷಯವು ತುಂಬಾ ರಹಸ್ಯವಾದುದಾದರೆ ಕೇಳಲು ಬಯಸುವುದೇ ಇಲ್ಲ. ಕೇಳಲು ಕುತೂಹಲವಿದ್ದರೂ ಹೇಳಲೇಬೇಕೆಂದು ನಿನ್ನನ್ನು ನಿರ್ಬಂಧಪಡಿಸುವುದೂ ಇಲ್ಲ. ಹೇಳುವಂತಹ ವಿಷಯವಾಗಿದ್ದರೆ ಮಾತ್ರ ಅದನ್ನು ದಯವಿಟ್ಟು ನನಗೆ ಹೇಳಬೇಕು.

೨೯. ಮಾರ್ಕಂಡೇಯನು ಹೇಳಿದನು :— ಈರೀತಿಯಾಗಿ ಸಗರರಾಜನು

॥ ಮಾರ್ಕಂಡೇಯ ಉವಾಚ ॥

ಇತ್ಯೇವಂ ಸಗರೇಣೋಕ್ತ ಔರ್ವೋಽಪಿ ದ್ವಿಜಸತ್ತಮಃ ॥ ೨೯ ॥

ಪ್ರತ್ಯುವಾಚ ಮಹಾತ್ಮಾನಂ ಕೃಪಾಲುಸ್ತತ್ರ ಭೂಪತೌ ।

॥ ಔರ್ವ ಉವಾಚ ॥

ಶೃಣು ರಾಜನ್ ಪ್ರವಕ್ಷ್ಯಾಮಿ ಯದ್ಯತ್ಪೃಷ್ಟಮಿಹ ತ್ವಯಾ ॥ ೩೦ ॥

ಯಥಾ ಹರಸ್ಯ ತನ್ವರ್ಧಂ ಭೂಭೃತ್ಪುತ್ರೀ ಪುರಾಹರತ್ ।
ಯಥಾ ನೀತಿಸ್ತ್ವಯಾ ಕಾರ್ಯಾ ಯತ್ರ ಯತ್ರ ನೃಪೋತ್ತಮ ॥ ೩೧ ॥

ಸರ್ವೇಷಾಂ ಚ ಸದಾಚಾರಂ ಕ್ರಮಾದ್ವಕ್ಷ್ಯಾಮಿ ತಚ್ಛೃಣು ।
ಯಥೋಢಾ ಹಿಮವತ್ಪುತ್ರೀ ಶಂಕರೇಣ ಮಹಾತ್ಮನಾ ॥ ೩೨ ॥

ಕಿಯಂತಂ ಸ ತದಾ ಕಾಲಂ ತತ್ರ ನಿನ್ಯೇ ಸಹೋಮಯಾ ।
ರಮಮಾಣಸ್ತಯಾ ಸಾರ್ಧಂ ಸಾನೌ ಕುಂಜೇ ದರೀಷು ಚ ॥ ೩೩ ॥

ಕೇಳಲು ಆಗ ಬ್ರಾಹ್ಮಣೋತ್ತಮನಾದ ಔರ್ವ ಮುನಿಯು ಆ ರಾಜನಲ್ಲಿ ದಯೆಯಿಂದ ಅವನಿಗೆ ಹೀಗೆ ಹೇಳಿದನು.

೩೦-೩೧. ಔರ್ವ ಮುನಿಯು ಹೇಳತೊಡಗಿದನು:—ಎಲ್ಲಿ ಸಗರರಾಜನೇ ! ನೀನು ಕೇಳಿದುದೆಲ್ಲವನ್ನೂ ಹೇಳುವೆನು. ಹಿಂದೆ ಪಾರ್ವತಿಯು ಶಂಕರನ ಶರೀರಾರ್ಧವನ್ನು ಪಡೆದ ರೀತಿಯನ್ನೂ ಹೇಳುವೆನು. ಅಲ್ಲದೆ, ಯಾವಯಾವ ಸ್ಥಳದಲ್ಲಿ ಎಂತೆಂತಹ ನೀತಿಯನ್ನು ಆಚರಿಸಬೇಕೆಂಬುದನ್ನೂ, ಸರ್ವರೂ ಅನುಸರಿಸಬೇಕಾದ ಸದಾಚಾರವಿಧಾನವನ್ನೂ ಸಹ ಕ್ರಮವಾಗಿ ಹೇಳುವೆನು ಕೇಳು.

೩೨-೩೩. ಮಹಾತ್ಮನಾದ ಶಂಕರನು ಪಾರ್ವತಿಯನ್ನು ಮದುವೆಯಾದಮೇಲೆ ಅವಳೊಡನೆ ಹಿಮವದ್ಗಿರಿಯ ತಪ್ಪಲಲ್ಲಿಯೂ, ಲತಾಗೃಹಗಳಲ್ಲಿಯೂ ಗುಹೆಗಳಲ್ಲಿಯೂ ವಿಹರಿಸುತ್ತಲೂ ಪಾರ್ವತಿಯನ್ನು ವಿವಿಧ ಕ್ರೀಡಾವಿನೋದಗಳಿಂದ ಸಂತೋಷಗೊಳಿಸುತ್ತಲೂ ಶಂಕರನು ಬಹಳಕಾಲ ಕಳೆದನು.

ವಿಜಹಾರ ಚಿರಂ ತತ್ರ ಪಾರ್ವತೀಂ ಮೋದಯನ್ ಹರಃ ।
ಅಥ ಕಾಲೇ ತು ಸಂಪ್ರಾಪ್ತೇ ಶಂಭುಃ ಕೈಲಾಸಪರ್ವತಂ ॥ ೩೪ ॥

ಸಗಣೋ ಭಾರ್ಯಯಾ ಸಾರ್ಧಮುಗಚ್ಛತ್ರಿದಿವೋಪಮಂ ।
ಸ ತಯಾ ಕ್ರೀಡಮಾನಸ್ತು ತ್ಯಕ್ತಧ್ಯಾನಾತ್ಮಚಿಂತನಃ ॥ ೩೫ ॥

ತದ್ವಕ್ತ್ರಚಂದ್ರೇ ನೇತ್ರಾಣಿ ಚಕೋರಾನಿವ ಚಾಕರೋತ್ ।
ಪುಷ್ಪಾಣಿ ಕ್ವಚಿದಾಹೃತ್ಯ ಗಿರಿಜಾಂ ಪ್ರತಿ ಶಂಕರಃ ॥ ೩೬ ॥

ಸರ್ವಾಂಗಸಂಗಿನೀಂ ಮಾಲಾಂ ವಿದಧೇsತಿಮನೋಹರಾಂ ।
ಕದಾಚಿದಾದರ್ಶತಲೇ ಯುಗಪಚ್ಚಾತ್ಮನೋ ಮುಖಂ ॥ ೩೭ ॥

ಮುಖಂ ತಥೈವಾಪರ್ಣಾಯಾ ವೀಕ್ಷ್ಯಾಂಚಕ್ರೇ ವೃಷಧ್ವಜಃ ।
ಕದಾಚಿನ್ಮೃಗನಾಭೀನಾಂ ವಿಲೇಪೈರ್ಗಂಧಪತ್ರಕಂ ॥ ೩೮ ॥

---

೩೪. ಕೆಲವುಕಾಲಾನಂತರ ಶಂಕರನು ತನ್ನ ಗಣಗಳೊಂದಿಗೂ ಪತ್ನಿಯಾದ ಪಾರ್ವತಿಯೊಡನೆಯೂ ಸಹ ಸ್ವರ್ಗದಂತೆ ಇರುವ ಕೈಲಾಸಪರ್ವತಕ್ಕೆ ತೆರಳಿದನು.

೩೫. ಅಲ್ಲಿ ಪಾರ್ವತಿಯೊಡನೆ ಬಗೆಬಗೆಯಾದ ಕ್ರೀಡಾದಿಗಳಿಂದ ವಿಹರಿಸುತ್ತಿದ್ದನು. ಧ್ಯಾನ, ಪರಮಾತ್ಮ ಚಿಂತನೆ, ತಪಸ್ಸು ಇವುಗಳೊಂದೂ ಅವನಿಗೆ ಬೇಡವಾಯಿತು. ಚಕೋರಪಕ್ಷಿಯು ಚಂದ್ರನನ್ನೇ ನೋಡುವಂತೆ ಪಾರ್ವತಿಯು ಸುಂದರವಾದ ಮುಖಕಮಲವನ್ನು ಯಾವಾಗಲೂ ದಿಟ್ಟಿಸಿ ನೋಡುತ್ತಿದ್ದನು.

೩೬—೩೯. ಒಮ್ಮೆ ಶಂಕರನು ಪುಷ್ಪಗಳನ್ನು ತಂದು ಅವುಗಳಿಂದ ಮನೋಹರವಾದ ಹಾರವನ್ನು ಮಾಡಿ ಪಾರ್ವತಿಯ ಅಂಗಗಳನ್ನು ಅಲಂಕರಿಸುವನು. ಮತ್ತೊಮ್ಮೆ ಕನ್ನಡಿಯಲ್ಲಿ ತನ್ನ ಮುಖವನ್ನೂ ಪಾರ್ವತಿಯ ಮುಖವನ್ನೂ ಒಟ್ಟುಗೂಡಿಸಿ ಪ್ರತಿಬಿಂಬಿಸುವಂತೆ ಮಾಡಿನೋಡುವನು ಮಗದೊಮ್ಮೆ ಆ ಮದನಾರಿಯು ಕಸ್ತೂರಿಯ ಲೇಪನದಿಂದ ಸುವಾಸನೆಯುಳ್ಳಂತಹ ಚಿತ್ರಗಳನ್ನು ಪಾರ್ವತಿಯ ದುಂಡಾದ ಕುಚಗಳಲ್ಲಿ ಬಿಡೆಯುವನು. ಅಲ್ಲದೆ ಪಾರ್ವತಿಯ ಶರೀರದಲ್ಲಿಯೂ ಹಣೆಯಲ್ಲಿಯೂ ಸುಗಂಧದಿಂದ ಸುಂದರವಾದ ಬೊಟ್ಟುಗಳನ್ನು ಇಡುವನು. ಅಲ್ಲಿ ಆ

ತಸ್ಯಾ ಘನಸ್ತನಯುಗೇ ವಿಲಿಲೇಖ ಸ್ಮರಾಂತಕಃ ।
ಗಂಧಸಾರವಿಲೇಪೇನ ತಿಲಕಾನ್ಯಂಬಿಕಾತನೌ ॥ ೪೯ ॥

ಲಲಾಡೇ ಚಾಕರೋಚ್ಚಾರು ಚಂದ್ರವದ್ಭುವನಸಂಧಿಷು ।
ಉಮಾನಿರ್ಯಾಸಸಂಸಕ್ತೇ ಕೇಶಪಾಶೇಷು ಚಿತ್ರಕೇ ॥ ೪೦ ॥

ಚಂದನಾಗರುಕಸ್ತೂರೀಕುಂಕುಮೈಃ ಸವಿಲೇಪನೈಃ ।
ಚಕಾರ ಯೇನ ತಸ್ಯಾಸ್ತು ಕೇಶಪಾಶೋ ವ್ಯರಾಜತ ॥ ೪೧ ॥

ವರ್ತನಾಯಾವಕೀರ್ಣಸ್ಯ ಶಿಖಿಪುಚ್ಛಸ್ಯ ಸಾಮ್ಯಧೃಕ್ ।
ಚಾಂಬೂನದಮಯಾನ್ ಶುದ್ಧಾನ್ ಕುಂಡಲಾದ್ಯಾನ್ಸಸೋಽಪರಾನ್ ॥ ೪೨ ॥

ಅಲಂಕಾರಾನುಮಾದೇಹೇ ಸಮಾಕರ್ಷೀದ್ವೃಷಧ್ವಜಃ ।
ತೈಶ್ಚಾಂಬೂನದಸಂಭೂತೈರ್ಯೋಜಿತೈರ್ಗಿರಿಜಾತನುಃ ॥ ೪೩ ॥

ವಿಭಾತಿ ಜಲದಾಪೂರ್ಣೇ ಕಾಲಿಕೇವ ತಟಿದ್ಗಣೈಃ ।
ಸರ್ವೈರ್ದಿವ್ಯೈರಲಂಕಾರೈರ್ನಾನಾರತ್ನೈಃ ಸದಂಶುಕೈಃ ॥ ೪೪ ॥

ಬೊಟ್ಟುಗಳು ಮೇಘಗಳ ಸಂದುಗಳಲ್ಲಿ ಕಾಣಿಸುವ ಚಂದ್ರಬಿಂಬದಂತೆ ಹೊಳೆಯುತ್ತಿದ್ದುವು.

೪೦-೪೧. ಚಂದನ, ಅಗರು, ಕಸ್ತೂರೀ, ಕುಂಕುಮ ಇವುಗಳ ಲೇಪನದಿಂದ ಪಾರ್ವತಿಯ ಬಿಚ್ಚಿದ ಕೇಶಪಾಶಗಳಲ್ಲಿ ಬಗೆಬಗೆಯ ಚಿತ್ರಗಳನ್ನು ರಚಿಸುವನು. ಆ ಚಿತ್ರಗಳಿಂದ ಪಾರ್ವತಿಯ ಕೇಶಪಾಶಗಳು ನರ್ತನಕಾಲದಲ್ಲಿ ಹರಡಿ ನಿಂತಿರುವ ನವಿಲಿನ ಗರಿಯಂತೆ ತೋರುವುದು.

೪೨. ಕುಂಡಲವೇ ಮೊದಲಾದ ಸುವರ್ಣಾಭರಣಗಳನ್ನೂ, ಅಲಂಕಾರಗಳನ್ನೂ ಪಾರ್ವತಿಯ ಶರೀರದಲ್ಲಿ ತಾನೇ ತೊಡಿಸುವನು.

೪೩. ಚಿನ್ನದ ಆಭರಣಗಳಿಂದ ಅಲಂಕೃತವಾದ ಪಾರ್ವತಿಯ ಶರೀರವು ವಿದ್ಯುತ್ತಿನಿಂದ ಕೂಡಿರುವ ವರ್ಷಾಕಾಲದ ನೀಲಮೇಘದಂತೆ ಪ್ರಕಾಶಿಸುತ್ತಲಿತ್ತು.

೪೪. ದಿವ್ಯವಾದ ಅಲಂಕಾರ, ರತ್ನಾಭರಣ, ಜೆಲಿಯುಳ್ಳ ಪಟ್ಟಿವಸ್ತ್ರ ಇವುಗಳಿಂದ ಅಲಂಕೃತಳಾದ ಆ ಕಾಳಿಯು ಸಾಕ್ಷಾತ್ ಆದಿಮಾಯೆಯಂತೆ ಕಂಗೊಳಿಸುತ್ತಿದ್ದಳು.

ಸಂಪೂರ್ಣಮಂಡಿತಾ ಕಾಳೀ ಸಾದೃಶ್ಯಂ ಪ್ರಕೃತೇರ್ದಧೌ ।
ಏವಂ ಸದಾ ಸಾನುರಾಗಸ್ತಸ್ಯಾಂ ಶಂಭುರ್ಜಗತ್ಪತಿಃ ॥ ೪೫ ॥

ಜಗದ್ಧಿತಾಯ ಚಿಕ್ರೀಡ ಕಾಲ್ಯಾ ದಯಿತಯಾ ಸಹ ।
ಕಾಲೀಚ ಜಗತಾಂ ಮಾತಾ ಮಹಾಮಾಯಾ ಜಗನ್ಮಯೀ ॥ ೪೬ ॥

ಯೋಗನಿದ್ರಾ ಜಗದ್ಬುದ್ಧಿರ್ವಿದ್ಯಾವಿದಾತ್ಮಿಕಾಖಿಲಾ ।
ಪ್ರಕೃತಿಃ ಪರಮಾ ಮೂರ್ತಿಃ ಸರ್ಗಾಂತಸ್ಥಿತಿಕಾರಿಣೀ ॥ ೪೭ ॥

ಸಮ್ಮೋಹ್ಯ ಶಂಕರಂ ಯತ್ನಾಜ್ಜಗತಾಂ ಚ ಹಿತೈಷಿಣೀ ।
ರೇಮೇ ತೇನ ಸಮಂ ದೇವೀ ಚಂದ್ರಿಕೇವ ಸುಧಾಂಶುನಾ ॥ ೪೮ ॥

ಅಥೈಕದಾ ಸ್ಮರಹರಃ ಕೈಲಾಸಾಗ್ರೇ ಸಹೋಮಯಾ ।
ರಮಮಾಣೋ ಮುದಾ ಯುಕ್ತೋ ದದರ್ಶೇऽಪ್ಸರಸಃ ಶುಭಾಃ ॥ ೪೯ ॥

ರೂಪಯೌವನಸಂಪನ್ನಾಃ ಸರ್ವಲಕ್ಷಣಸಂಯುತಾಃ ।
ತಾಸಾಂ ಮಧ್ಯಗತಾ ವೇಶ್ಯಾ ಊರ್ವಶೀ ಚ ಮನೋಹರಾ ॥ ೫೦ ॥

---

೪೫. ಹೀಗೆ ಜಗದೊಡೆಯನಾದ ಶಂಕರನು ಪಾರ್ವತಿಯಲ್ಲಿ ಸದಾ ಅನುರಕ್ತನಾಗಿ ಅವಳೊಡನೆ ವಿಹರಿಸುತ್ತಿದ್ದುದು ಜಗತ್ಕಲ್ಯಾಣಕ್ಕಾಗಿಯೇ ಹೊರತು ಬೇರೆಯಲ್ಲ.

೪೬-೪೮. ಆ ಶಂಕರನ ಪತ್ನಿಯಾದರೋ ಜಗನ್ಮಾತೆಯಾದ ಸಾಕ್ಷಾತ್ ಆದಿಮಾಯೆಯೇ ಅವಳು. ಜಗತ್ಸ್ವರೂಪಳು; ಯೋಗನಿದ್ರೆಯೆಂದು ಪ್ರಸಿದ್ಧಳಾದವಳು; ಜಗತ್ತಿನಲ್ಲಿರುವ ಪ್ರಾಣಿಗಳ ಬುದ್ಧಿ, ವಿದ್ಯೆ, ಅಜ್ಞಾನ ಇವುಗಳ ಸ್ವರೂಪಳು, ನಾಶರಹಿತಳು, ಪ್ರಕೃತಿಸ್ವರೂಪಳು, ಸೃಷ್ಟಿಸ್ಥಿತಿಲಯಗಳನ್ನು ಮಾಡುವವಳು, ಇಂತಹ ಸ್ವರೂಪವುಳ್ಳ ಆ ಕಾಳಿಯು ಶಂಕರನನ್ನು ಮೋಹಗೊಳಿಸಿ ಜಗತ್ತಿನ ಕ್ಷೇಮಕ್ಕಾಗಿಯೇ ಅವನೊಡನೆ ಚಂದ್ರನೊಂದಿಗೆ ಚಂದ್ರಿಕೆಯಂತೆ ಎಡಬಿಡದೆ ವಿಹರಿಸುತ್ತಿದ್ದಳು.

೪೯. ಹೀಗಿರಲೊಂದುದಿನ ಶಂಕರನು ಕೈಲಾಸಪರ್ವತದ ಮೇಲ್ಭಾಗದಲ್ಲಿ ಉಮೆಯೊಡನೆ ವಿಹರಿಸುತ್ತಿರುವಾಗ ಸುಂದರಿಯರಾದ ಅಪ್ಸರೆಯರನ್ನು ನೋಡಿದನು.

೫೦. ಆ ಅಪ್ಸರೆಯರೆಲ್ಲರೂ ರೂಪಯೌವನಶಾಲಿಗಳು, ಸರ್ವಲಕ್ಷಣಸಂಪನ್ನೆಯರು. ಅವರ ಮಧ್ಯದಲ್ಲಿ ಅತಿಮನೋಹರಳಾದ ಊರ್ವಶಿ ಎಂಬ ಅಪ್ಸರೆ ಇದ್ದಳು.

ತಾಃ ಸರ್ವಾ ರಕ್ತಗೌರಾಂಗ್ಯಃ ಸರ್ವಾಲಂಕಾರಭೂಷಿತಾಃ
ಮುನೀನಾಂ ಚ ಮನೋಽತ್ಯರ್ಥಂ ಶಕ್ತಾ ಮೋಹಯಿತುಂ ಪತಾತ್ ॥೫೧॥

ತಾಃ ಪ್ರಣಮ್ಯ ಹರಂ ದೃಷ್ಟ್ವಾ ಗಿರಿಜಾಂ ಚ ಮನೋಹರಾಂ ।
ಅಗ್ರೇ ಪ್ರಾಂಜಲಯಸ್ತಸ್ಥುಸ್ತದ್ಭೀತಿನತವಸ್ತ್ರಕಾಃ ॥ ೫೨ ॥

ಅಥ ಪ್ರಾಹ ತದಾ ಭರ್ಗಃ ಪಾರ್ವತೀಮಿದಮದ್ಭುತಂ ।
ತಾಸಾಂ ಸಮಕ್ಷಂ ತಸ್ಯಾಂ ತು ಭಾವಿತಂ ಸ್ಯಾದ್ಯದಪ್ರಿಯಂ ॥ ೫೩ ॥

ಕಾಲಿ ಭಿನ್ನಾಜನಶ್ಯಾಮೇ ಊರ್ವಶ್ಯಾದ್ಯಪ್ಸರೋಗಣೈಃ ।
ತ್ವಯೇಹ ಸ್ತ್ರೀಸ್ವಭಾವೇನ ಸಲ್ಲಾಪಃ ಕ್ರಿಯತಾಮಿತಿ ॥ ೫೪ ॥

ತಚ್ಛ್ರುತ್ವಾ ವಚನಂ ತಸ್ಯ ಯಥಾಯೋಗ್ಯಂ ಚ ಸೋರ್ವಶೀ ।
ಅಪ್ಸರಸಃ ಸಮಾಭಾಷ್ಯ ವಿಸೃಷ್ಟಾ ಗಿರಿಜಾತಯಾ ॥ ೫೫ ॥

---

೫೧. ಅವರು ಕೆಂಪು ಮಿಶ್ರವಾದ ಬಿಳಿಯಬಣ್ಣದ ಶರೀರಕಾಂತಿಯಿಂದ ಒಪ್ಪುತ್ತಿದ್ದರು. ಸರ್ವಾಲಂಕಾರಭೂಷಿತೆಯರು; ಜಿತೇಂದ್ರಿಯರಾದ ಮುನಿಗಳ ಮನಸ್ಸನ್ನೂ ಸಹ ಮೋಹಗೊಳಿಸುವಷ್ಟು ಸುಂದರಿಯರಾಗಿದ್ದರು.

೫೨. ಆ ಅಪ್ಸರೆಯರು ಶಂಕರನನ್ನು ನಮಸ್ಕರಿಸಿದರು. ಸುಂದರಿಯಾದ ಗಿರಿಜೆಯನ್ನು ನೋಡಿ ಕೈಗಳನ್ನು ಮುಗಿದುಕೊಂಡು ಭಯಭಕ್ತಿಗಳಿಂದ ತಲೆಬಾಗಿ ನಿಂತುಕೊಂಡರು.

೫೩. ಅನಂತರ ಶಂಕರನು ಆಗ ಪಾರ್ವತಿಯನ್ನು ಕುರಿತು ಅಪ್ಸರೆಯರೆದುರಿಗೆ ಹೇಳಿದ ಮಾತು ಪಾರ್ವತಿಗೆ ಅಪ್ರಿಯವಾಗಿ ತೋರಿತು.

೫೪. ಎಲೌ ಕಾಳಿ! ನೀನು ಅಂಜನಪರ್ವತದಂತೆ ಕಪ್ಪಾದ ಶರೀರಕಾಂತಿಯಿಂದ ಒಪ್ಪುತ್ತಿರುವೆ. ಸ್ತ್ರೀಯರೊಡನೆ ಸ್ತ್ರೀಯರು ಸಲ್ಲಾಪಗಳನ್ನು ಮಾಡುವುದು ಸಹಜವಷ್ಟೆ. ಇಲ್ಲಿ ಬಂದಿರುವ ಊರ್ವಶಿಯೇ ಮೊದಲಾದ ದೇವತಾಸ್ತ್ರೀಯರೊಡನೆ ಸಂಭಾಷಿಸು.

೫೫. ಶಂಕರನ ಆ ಮಾತುಗಳನ್ನು ಕೇಳಿ ಪಾರ್ವತಿಯು, ಊರ್ವಶಿಯೇ ಮೊದಲಾದ ಅಪ್ಸರೆಯರೊಡನೆ ಯಥೋಚಿತವಾಗಿ ಮಾತನಾಡಿ ಕುಶಲಪ್ರಶ್ನೆಯನ್ನು ಮಾಡಿ, ಅವರೆಲ್ಲರನ್ನೂ ಬೀಳ್ಕೊಟ್ಟಳು.

ಅಥ ಸಾ ಕ್ರೋಧವತಗಾ ಪಾರ್ವತೀ ಭರ್ಗಭಾವಿತಾತ್ ।
ಕಾಲಿ ಭಿನ್ನಾಂಜನಶಾಮೇತ್ಯುದಿತಾ ಭ್ಯಭವತ್ಕ್ಷಣಾತ್ ॥ ೫೬ ॥

ಸಾ ಚಾಪ್ಸರಸಾಂ ಪುರತೋ ವರ್ಣೋದ್ದೇಶವಿಕತ್ಥನಂ ।
ನ ಸೇಹೇ ಮನ್ಯುನಾ ಯುಕ್ತಾ ಗಿರಿಜೇಂದುಕಲಾಭೃತಃ ॥ ೫೭ ॥

ಅಥ ಸಾ ರೋಷಸಂಯುಕ್ತಾ ತ್ಯಕ್ತ್ವಾ ವೃಷಭವಾಹನಂ ।
ಅಪಸ್ಥಿತೇ ಶೈಲಸಾನೌ ರೋಷಾಪಹ್ನುತಿಮಾಗತಾ ॥ ೫೮ ॥

ಮಾರ್ಗಮಾರ್ಗೋಽಥ ವಿರಹವ್ಯಾಕುಲೋ ವೃಷವಾಹನಃ ।
ನಾಸಸಾದ ಕಿಯತ್ಕಾಲಂ ಪಾರ್ವತೀಂ ಪರ್ವತೋತ್ತಮೇ ॥ ೫೯ ॥

ವಿರಹವ್ಯಾಕುಲಂ ಜ್ಞಾತ್ವಾ ಸ್ವಯಂ ಸಾ ಪಾರ್ವತೀ ಹರಂ ।
ಆತ್ಮಾನಂ ದರ್ಶಯಾಮಾಸ ಗಿರಿಸಾನಾವಪಹ್ನುತೇ ॥ ೬೦ ॥

---

೫೬. ಆ ಅಪ್ಸರೆಯರು ತೆರಳಿದಮೇಲೆ ಪಾರ್ವತಿಯು ಅಂಜನಪರ್ವತದಂತೆ ಕಪ್ಪಾದ ಕಾಂತಿಯಿಂದ ಒಪ್ಪುತ್ತಿರುವೆ ಎಂಬ ಶಂಕರನು ಆಡಿದ ಮಾತಿನಿಂದ ತುಂಬಾ ಕೋಪಗೊಂಡಳು.

೫೭-೫೮. ಅಪ್ಸರೆಯರೆದುರಿಗೆ ಈರೀತಿ ತನ್ನ ವರ್ಣದ ವಿಚಾರದಲ್ಲಿ ಶಂಕರನು ಮಾಡಿದ ವರ್ಣನೆಯನ್ನು ಆ ಕಾಳಿಯು ಸಹಿಸದೆ ತನ್ನನ್ನು ಅಪಹಾಸ್ಯಮಾಡುತ್ತಿರುವನೆಂದು ತಿಳಿದು ಕೋಪಗೊಂಡಳು. ಕೈಲಾಸಪರ್ವತದ ತಪ್ಪಲಲ್ಲಿ ಸಿಟ್ಟಿನಿಂದ ಅವಿತುಕೊಂಡಳು.

೫೯. ಆಗ ಶಂಕರನು ಪಾರ್ವತಿಯ ವಿರಹದಿಂದ ದುಃಖಪಡುತ್ತಾ ಆ ಪರ್ವತದಲ್ಲಿ ಎಷ್ಟು ಹುಡುಕಿದರೂ ಅವಳು ಕಾಣಲೇ ಇಲ್ಲ.

೬೦. ಇತ್ತ ಪಾರ್ವತಿಯೂ ಸಹ ಶಂಕರನು ತನ್ನ ವಿಯೋಗದಿಂದ ದುಃಖಿತನಾಗಿರುವನೆಂದು ತಿಳಿದು ತಾನು ಅಡಗಿ ಕುಳಿತಿದ್ದ ತಪ್ಪಲಲ್ಲಿ ಶಂಕರನಿಗೆ ತಾನಾಗಿಯೇ ಕಾಣಿಸಿಕೊಂಡಳು.

ತಾಮುಸಾದ್ಯ ತತಃ ಶಂಭುಃ ಕಿಮರ್ಥಮಭವಃ ಪ್ರಿಯೇ ।
ಮಾನಂ ಮನೋನುದಂ ದೇವಿ ವಿಶೀರ್ಣ ಇವ ಚಾಬ್ರವೀತ್ ॥ ೬೧ ॥

ಭರ್ತುರಾಗಃ ಪುರಂಧ್ರೀಣಾಂ ಮಾನಂ ಗ್ರಹಣಕಾರಣಂ ।
ತದ್ವಿನಾ ಗ್ರಹಣಾತ್ತಸ್ಯ ಭೀರು ಪ್ರಾಪ್ನೋತಿ ವಾಚ್ಯತಾಂ ॥ ೬೨ ॥

ತಸ್ಮಾತ್ಕಿಮರ್ಥಮಕರೋ ರೋಷಂ ತ್ವಂ ಜಲಜಾನನೇ ।
ತದಾಚಕ್ಷ್ವದ್ಭುತಂ ಕಾಂತೇ ಮನೋ ಮೇ ನ ಪ್ರಸೀದತಿ ॥ ೬೩ ॥

ಇತ್ಯುಕ್ತ್ವಾ ಶಂಕರೋ ದೇವೀಂ ತಾಮಾಲಿಂಗಿತುಮುದ್ಯಮಃ ।
ಕಾಲೀ ತಂ ವಾರಯಾಮಾಸ ವಚನಂ ಚಾಬ್ರವೀದಿದಂ ॥ ೬೪ ॥

ನ ದೃಷ್ಟಪೂರ್ವಾ ಕಿಮಹಂ ಯೇನ ಭಿನ್ನಾಂಜನೋಪಮಾ ।
ಕ್ರಿಯತೇ ಮಯಿ ಭೂತೇಶ ಭವತಾಪ್ಸರಸಾಂ ಪುರಃ ॥ ೬೫ ॥

ಜಾತಿಹೀನಂ ವೃತ್ತಿಹೀನಂ ರೂಪಹೀನಮದಕ್ಷಿಣಂ ।
ಹೀನಾಂಗಮತಿರಿಕ್ತಾಂಗಂ ತೇನ ದೋಷೇಣ ನಾಕ್ಷಿಪೇತ್ ॥ ೬೬ ॥

೬೧-೬೩. ಕೂಡಲೇ ಶಂಕರನು ಪಾರ್ವತಿಯ ಬಳಿಗೆ ಬಂದು ಎಲೌ ಪ್ರಿಯಳೆ! ನನ್ನ ಮೇಲೆ ಈ ಕೋಪವೇಕೆ? ನನ್ನ ಮನಸ್ಸು ಬಹು ತಲ್ಲಣಗೊಳ್ಳುತ್ತಿರುವುದು. ಪತಿಯು ಅಪರಾಧಮಾಡಿದರೆ ಸ್ತ್ರೀಯರು ಕೋಪಿಸಿಕೊಳ್ಳುವುದು ಸ್ವಭಾವವಷ್ಟೆ. ಹಾಗೆ ಅಪರಾಧವೇನೂ ಇಲ್ಲದಿರುವಾಗ ಕೋಪಿಸಿಕೊಂಡರೆ ಸ್ತ್ರೀಯರು ನಿಂದೆಗೆ ಗುರಿಯಾಗುವರು. ಆದಕಾರಣ ಎಲೌ ಕಮಲಮುಖಿ! ನೀನು ಕೋಪಗೊಂಡಿರುವ ಕಾರಣವಾದರೂ ಏನು? ನೀನು ನನ್ನ ಪ್ರಿಯಮಡದಿಯು. ಬೇಗ ಅದರ ಕಾರಣವನ್ನು ಹೇಳು. ನನ್ನ ಮನಸ್ಸು ತಳಮಳಗೊಳ್ಳುತ್ತಿರುವುದು ಎಂದು ಕೇಳಿದನು.

೬೪-೬೫. ಹೀಗೆ ಹೇಳಿ ಶಂಕರನು ಕಾಳಿಕಾದೇವಿಯನ್ನು ಆಲಿಂಗಿಸಲುದ್ಯುಕ್ತನಾಗಲು ಕಾಳಿಯು ಅವನನ್ನು ತಡೆದು, ಓ ಶಂಕರನೇ! ನನ್ನನ್ನು ನೀನು ಹಿಂದೆ ನೋಡಿಯೇ ಇರಲಿಲ್ಲವೇ? ಹಾಗಿಲ್ಲದಿದ್ದರೆ, ಆ ಅಪ್ಸರೆಯರ ಎದುರಿಗೆ ನನ್ನನ್ನು ಕಾಡಿಗೆಯ ಉಪಮಾನದಿಂದ ಕರೆದು, ಅಪಮಾನ್ಯವನ್ನೇಕೆಮಾಡಿದೆ ಎಂದಳು.

೬೬—೬೯. ಹೀನಜಾತಿಯವನನ್ನೂ, ಹೀನವೃತ್ತಿಯವನನ್ನೂ, ರೂಪವಿಲ್ಲದವನನ್ನೂ, ಕೃಪಣನನ್ನೂ, ಅಂಗಹೀನನನ್ನೂ, ಅಂಗವಿಕಲನನ್ನೂ, ಸಂಬೋಧಿಸುವಾಗ

ಇತಿ ಬ್ರಹ್ಮಾ ಪುರಾ ಪ್ರಾಹ ವೇದೌಘಾರ್ಥವಿನಿಶ್ಚಯಂ ।
ತಂ ಚಾವಮನ್ಯ ಭವತಾ ಪರಿಹಾಸೋಽಭ್ಯಭಾಷತ ॥ ೬೬ ॥

ಯಾವನ್ನ ಮೇ ಶರೀರಸ್ಯ ಭವಿತ್ರೀ ಸ್ವರ್ಣಗೌರತಾ ।
ನ ಸಮೇಷ್ಯೇ ತ್ವಯಾ ತಾವದಿತಿ ಸತ್ಯಂ ಬ್ರವೀಮಿ ತೇ ॥ ೬೭ ॥

ಶರೀರಗೌರತಾಂ ಶಂಭೋ ನ ಸಮೇಷ್ಯೆ ತ್ವಯಾ ವಿನಾ ।
ತತ್ರ ಮೇ ಶೃಣು ಸಂಧಾಯ ಆತ್ಮನಃ ಶಿರಸಾ ಶಪೇ ॥ ೬೮ ॥

ಇತ್ಯುಕ್ತ್ವಾ ಸಾ ತದಾ ದೇವೀ ತಸ್ಯೈವ ಪುರತೋ ಯಯೌ ।
ಮಹಾಕೌಷೀಪ್ರಪಾತಾಖ್ಯಂ ಹಿಮವತ್ಸಾನುಮುತ್ತಮಂ ॥ ೬೯ ॥

ಮಹಾದೇವೋಽಪಿ ತಂ ಭಾವ್ಯಂ ಜ್ಞಾನೇನ ಕೃತನಿಶ್ಚಯಂ ।
ಅರ್ಥಂ ಜ್ಞಾತ್ವಾ ತದಾಪರ್ಣಾಂ ಸರ್ವಜ್ಞೋ ನಾಪ್ಯವಾರಯತ್ ॥ ೭೦ ॥

ಅಂತವರೆಂದು ಅವರನ್ನು ಹಾಸ್ಯಮಾಡಬಾರದು. ವೇದಾರ್ಥಗಳ ನಿಶ್ಚಯವೇ ಹೀಗಿರುವುದು. ಇದನ್ನು ಬ್ರಹ್ಮನೇ ಹಿಂದೆ ಹೇಳಿರುವನು. ಅವನ ಮಾತನ್ನೂ ತಿರಸ್ಕರಿಸಿ, ನೀನು ಈಗ ನನ್ನ ರೂಪವನ್ನು ವ್ಯಂಗವಾಗಿ ವರ್ಣಿಸಿ ಹಾಸ್ಯಮಾಡಿರುವೆ. ಆದುದರಿಂದ ನೀಲವಾದ ಈ ನನ್ನ ಶರೀರವು ಚಿನ್ನದಂತೆ ಗೌರವರ್ಣವುಳ್ಳದ್ದಾಗಬೇಕು. ಅದಾಗುವವರೆಗೂ ನಿನ್ನೊಡನೆ ನಾನು ಬರುವುದೇ ಇಲ್ಲ. ಈ ಮಾತು ನಿಶ್ಚಯವು. ಹೀಗೆ ಸುಮ್ಮನೆ ಹೇಳುವೆನೆಂದು ತಿಳಿಯಬೇಡ. ನನ್ನ ಶಿರಸ್ಸಿನ ಆಣೆಗೂ ನಿನ್ನೊಡನೆ ಬರುವುದಿಲ್ಲ ಎಂದು ರೋಷದಿಂದ ನುಡಿದಳು.

೬೯. ಹೀಗೆ ಹೇಳಿ ಕಾಳಿಕಾದೇವಿಯು, ಆಗ ಶಂಕರನು ನೋಡುತ್ತಿರುವಂತೆಯೇ ಮಹಾಕೌಷೀಪ್ರಪಾತವೆಂಬ ಹಿಮಾಲಯದ ತಪ್ಪಲಿಗೆ ಹೊರಟುಹೋದಳು.

೭೦. ಶಂಕರನು ಸರ್ವಜ್ಞನಾದುದರಿಂದ, ಪಾರ್ವತಿಯು ಹೇಳಿದಂತೆ ಅವಳ ಶರೀರವು ಮುಂದೆ ಗೌರವರ್ಣವಾಗುವುದೆಂದು ಜ್ಞಾನದೃಷ್ಟಿಯಿಂದ ತಿಳಿದೇ ಇದ್ದನು. ಆದುದರಿಂದಲೇ ಮಹಾಕೌಷೀಪ್ರಪಾತಕ್ಕೆ ಹೊರಟ ಪಾರ್ವತಿಯನ್ನು ಅವನು ತಡೆಯಲಿಲ್ಲ.

ಸಾ ಗತ್ವಾ ಪೂರ್ವವತ್ತತ್ರ ಶಂಭುಸಂಗತಮಾನಸಾ ।
ಶತಮಾರಾಧಯಾಮಾಸ ವರ್ಷಾಣಿ ವೃಷಭಧ್ವಜಂ ॥ ೭೨ ॥

ಏಕಂ ಪಾದಂ ಸಮುತ್ಕ್ಷಿಪ್ಯ ವಾಮೇನಾಕ್ರಮ್ಯ ಸಾ ಕ್ಷಿತಿಂ ।
ಉತ್ತರಾಭಿಮುಖೀ ಭೂತ್ವಾ ನಿರಾಹಾರಾ ನಿರಂತರಂ ॥ ೭೩ ॥

ವೈಯಾಘ್ರಚರ್ಮವಸನಾ ಸೋರ್ಧ್ವಮೂರ್ಧಾನನಾ ಸತೀ ।
ಜ್ಯೋತಿರ್ಮಯಂ ಪರಂ ಶಾಂತಂ ಶಿವಂ ಶಿವಕರಂ ವರಂ ॥ ೭೪ ॥

ಆತ್ಮಸ್ವರೂಪತತ್ತ್ವಜ್ಞಾ ತತ್ತ್ವೇನಾರಧಯದ್ಧರಂ
ತಾಂ ಚಿಂತಯಂತೀ ಪರಮಂ ನಿಶ್ಚಲಾಂ ತತ್ವಮಾನಸಾಂ ॥ ೭೫ ॥

ಮೇನೇ ಮುನಿಗಣಃ ಸ್ಥಾಣುರ್ಯೋ ನ ಜಾನಾತಿ ತತ್ತ್ವತಃ ।
ಏವಂ ತಸ್ಯಾಸ್ತಪಸ್ಯಂತ್ಯಾ ಜಗ್ಮುರ್ವರ್ಷಾಣಿ ವೈ ಶತಂ ॥ ೭೬ ॥

ಅನ್ಯೇಷಾಂ ಚ ಯಥಾ ಶಶ್ವದೇಕಂ ನೃಪತಿಸತ್ತಮ ।
ತತಸ್ತಾಂ ಶತವರ್ಷಾಂತೇ ಶಂಕರೋ ಯೋಗತತ್ಪರಃ ॥ ೭೭ ॥

೭೨-೭೩. ಇತ್ತ ಪಾರ್ವತಿಯು ಆ ತಪ್ಪಲಿಗೆ ಹೋಗಿ, ಮೊದಲಿನಂತೆಯೇ ಶಂಕರನಲ್ಲಿ ನೆಟ್ಟಮನಸ್ಸಿನಿಂದ ಉತ್ತರಾಭಿಮುಖವಾಗಿ ಒಂದು ಕಾಲಿನಿಂದ ನಿಂತು ತಪಸ್ಸುಮಾಡುತ್ತಿದ್ದಳು. ಆಹಾರವನ್ನೇ ಸೇವಿಸುತ್ತಿರಲಿಲ್ಲ. ಈರೀತಿ ಒಂದು ನೂರು ವರ್ಷಗಳಕಾಲ ಶಂಕರನನ್ನು ಆರಾಧಿಸಿದಳು.

೭೪. ಆಗ ಹುಲಿಯ ಚರ್ಮವನ್ನು ಧರಿಸಿ, ಊರ್ಧ್ವಮುಖವಾಗಿ ನಿಂತು, ಜ್ಯೋತಿಸ್ವರೂಪನೂ, ಪ್ರಸನ್ನವದನನೂ, ಮಂಗಳಸ್ವರೂಪನೂ, ಪರತತ್ತ್ವಸ್ವರೂಪನೂ ಆದ ಪರಮೇಶ್ವರನನ್ನು ಆತ್ಮತತ್ತ್ವಜ್ಞಾನದಿಂದ ಆರಾಧಿಸಿದಳು.

೭೫. ಪಾರ್ವತಿಯು ಪರತತ್ತ್ವಸ್ವರೂಪನಾದ ಶಂಕರನಲ್ಲಿ ನೆಟ್ಟಮನಸ್ಸಿನಿಂದ ಬಹುಕಾಲ ಚಿಂತಿಸುತ್ತಿದ್ದರೂ ಶಂಕರನು ಇದನ್ನು ಅರಿಯದವನಂತೆಯೇ ಇದ್ದನು. ಇದನ್ನು ನೋಡಿ ಮುನಿಗಳು ಇವೇನು? ಈ ಶಂಕರನಿಗೆ ತಿಳಿವಳಿಕೆ ಇಲ್ಲವೇ? ಬೋಳು ಮರದಂತೆ ತೆಪ್ಪಗಿರುವನಲ್ಲ. ಆದುದರಿಂದ ಇವನು ಸ್ಥಾಣುವು ಎಂದು ತಿಳಿದರು.

೭೬-೭೭. ಎಲೈ ಸಗರರಾಜನೇ! ಹೀಗೆ ಆ ಪಾರ್ವತಿಯು ತಪಸ್ಸನ್ನಾಚರಿಸುತ್ತಿರಲು ನೂರುವರ್ಷಗಳು ಕಳೆದುವು. ಕಡೆಯಲ್ಲಿ ಯೋಗನಿಷ್ಠನಾದ ಶಂಕರನು

ಆತ್ಮಾನಂ ದರ್ಶಯಾಮಾಸ ಕ್ರಮಾದೇಕಂ ಸತತ್ತ್ವಕಂ ।
ಪ್ರಥಮಂ ದರ್ಶಯಾಮಾಸ ಬ್ರಹ್ಮಾಣಂ ಚ ಪರಿಂ ತತಃ ॥ ೭೮ ॥

ತತಸ್ತು ಶಾಂಭವಂ ದೇಹಂ ತತಸ್ತೇಷಾಮಭೈಕತಾಂ ।
ಜ್ಯೋತಿರ್ಮಯತ್ವಂ ಶುದ್ಧತ್ವಂ ಸರ್ವೇಷಾಂ ಹೇತುತಾಂ ತಥಾ ॥ ೭೯ ॥

ತತಸ್ತು ಶಂಭುರೂಪಂ ಸ ದರ್ಶಯಾಮಾಸ ಶಂಕರಃ ।
ಯೋಗನಿದ್ರಾಂ ಮಹಾಮಾಯಾಂ ಯೋಗಿನೀಂ ಕಾಳಿಕಾಂಬಿಕಾಂ ॥ ೮೦ ॥

ಪ್ರಥಮಂ ದರ್ಶಯಿತ್ವಾ ತು ತಸ್ಯಾಃ ಪ್ರಕೃತಿರೂಪತಾಂ ।
ಪಶ್ಚಾತ್ತಾಸ್ಯಾ ಪಾರ್ವತೀತ್ಯೇವಂ ಕ್ರಮಾತ್ತಸ್ಯಾ ಅದರ್ಶಯತ್ ॥ ೮೧ ॥

ತಪಸಾ ಸಂಭೃತೇನಾಶು ಜ್ಞಾನಮಾಸಾದ್ಯ ಪಾರ್ವತೀ ।
ಅಂತರ್ದೃಷ್ಟ್ಯಾ ಬಹಿರ್ದೃಷ್ಟ್ಯಾ ತತ್ತ್ವಂ ಜ್ಞಾತ್ವಾ ಯಥಾತಥಂ ॥ ೮೨ ॥

ಶಂಭುಂ ಜಗನ್ಮಯಂ ಮೇನೇ ತಥಾತ್ಮಾನಂ ಜಗನ್ಮಯಾಂ ।
ಬ್ರಹ್ಮಾ ವಿಷ್ಣುರ್ಹರಶ್ಚಾಪಿ ತತಃ ಸರ್ವಮಿದಂ ಜಗತ್ ॥ ೮೩ ॥

ಆ ಪಾರ್ವತಿಗೆ ಕ್ರಮವಾಗಿ, ರಹಸ್ಯವಾದ ತನ್ನ ಆತ್ಮಸ್ವರೂಪವನ್ನು ಸಂಪೂರ್ಣವಾಗಿ ತೋರಿಸಿದನು.

೭೮-೭೯. ಮೊದಲು ಬ್ರಹ್ಮನನ್ನೂ, ಅನಂತರ ಹರಿಯನ್ನೂ, ಆಮೇಲೆ ತನ್ನ ಶರೀರವನ್ನೂ, ಮತ್ತು ಆ ತ್ರಿಮೂರ್ತಿಗಳಿಗೆ ಭೇದವಿಲ್ಲದಿರುವಿಕೆಯನ್ನೂ ತೋರಿಸಿ ಆ ತ್ರಿಮೂರ್ತಿಗಳೆಲ್ಲರೂ ಪ್ರಕಾಶಸ್ವರೂಪರೂ, ಶುದ್ಧರೂ, ಜಗತ್ತಿಗೆ ಕಾರಣರೂ ಎಂಬುದನ್ನೂ, ತನ್ನ ನಿಜವಾದ ಶಂಕರಸ್ವರೂಪವನ್ನೂ ಸಹ ಆ ಪಾರ್ವತಿಗೆ ತೋರಿಸಿದನು.

೮೨. ಆ ತಪಸ್ಸಿನಿಂದ ಪಾರ್ವತಿಯು ಉತ್ತಮವಾದ ಜ್ಞಾನವನ್ನು ಹೊಂದಿ, ಅದರಿಂದ ಎಲ್ಲಾ ವಸ್ತುಗಳ ಆಂತರಿಕಸ್ವರೂಪವನ್ನೂ, ಬಾಹ್ಯಸ್ವರೂಪವನ್ನೂ, ಶಂಕರನು ಜಗನ್ಮಯನೆಂದೂ, ತಾನು ಜಗದ್ರೂಪಳೆಂದೂ ಸಹ ತಿಳಿದುಕೊಂಡಳು.

೮೩-೮೪. ಬ್ರಹ್ಮ, ವಿಷ್ಣು, ಶಂಕರ ಇವರು ಮೂವರೂ ಜಗದ್ರೂಪರು. ಇವರಿಂದ ಜಗತ್ತೆಲ್ಲವೂ ಜನಿಸುವುದು: ನಾನು ಜಗತ್ತಿಗೆ ಪ್ರಕೃತಿಯು (ಕಾರಣಳು) ಅಲ್ಲದೆ ಯೋಗನಿದ್ರೆಯಾದ ಮಹಾಮಾಯೆಯೂ, ಸತೀದೇವಿಯೂ ನಾನೇ ಆಗಿರು

ಅಹಂ ಸಮಸ್ತಪ್ರಕೃತಿರ್ಯೋಗನಿದ್ರಾ ತಥಾ ಸತೀ ।
ಇತಿ ಧ್ಯಾನೇನ ಸಾ ದೇವೀ ಜ್ಞಾತ್ವಾ ಧ್ಯಾನಂ ತದಾತ್ಯಜತ್ ॥ ೪೪ ॥

ಉನ್ಮೀಲ್ಯ ನಯನದ್ವಂದ್ವಂ ಬಹಿಃ ಶಂಭುಂ ದದರ್ಶ ಹ ।
ಸಾ ದೃಷ್ಟ್ವಾ ಶಂಕರಂ ದೇವಂ ದೇವದೇವಮುಮಾಪತಿಂ ।
ತುಷ್ಟಾವ ವಾಗ್ಭಿರಷ್ಟಾಭಿರ್ಯಮಿನಂ ಯೋಗತತ್ಪರಂ ॥ ೪೫ ॥

॥ ಪಾರ್ವತ್ಯುವಾಚ ॥

ನಮಸ್ತೇ ಜಗತಾಂ ನಾಥ ನಮಸ್ತೇ ಕೇಶವಾವ್ಯಯ ।
ಪ್ರಧಾನಪುರುಷಾತೀತ ಕಾರಣತ್ರಯಕಾರಣ ॥ ೪೬ ॥

ಯೋಗಮೋಹಮನೋರಾಗಧರ್ಮಾಧರ್ಮಮಯಸ್ತಥಾ ।
ವಿದ್ಯಾವಿದ್ಯಾಸ್ವರೂಪಶ್ಚ ಶಾಂಭವಃ ಕಾಯ ಏಷ ತೇ ॥ ೪೭ ॥

ತ್ವಂ ನಿಶ್ಚಯೀಯಃ ಶ್ರೇಯಸಾ ಯುಜ್ಯಮಾನೋ
ದೃಶ್ಯೋಽದೃಶ್ಯೋ ಯೋಗಮೂರ್ತಿರ್ಮನೀಷೀ ॥

ವೆನು. ಹೀಗೆಂದು ನಿಶ್ಚಯಜ್ಞಾನವನ್ನು ಹೊಂದಿ ತಪಸ್ಸನ್ನು ಬಿಟ್ಟು ಬಹಿರ್ಮುಖಳಾದಳು. ಕಣ್ಣುಗಳನ್ನು ಬಿಟ್ಟು ತನ್ನ ಎದುರಿಗೆ ನಿಂತಿರುವ ದೇವದೇವನೂ, ಉಮಾಪತಿಯೂ, ಯೋಗನಿಷ್ಠನೂ ಜಿತೇಂದ್ರಿಯನೂ ಆದ ಶಂಕರನನ್ನು ನೋಡಿ, ಪ್ರಿಯವಾದ ವಾಕ್ಯಗಳಿಂದ ಈರೀತಿ ಸ್ತೋತ್ರಮಾಡಿದಳು.

೪೬. ಪಾರ್ವತಿಯು ಹೇಳಿದಳು ;—ಓ ಜಗದೊಡೆಯನೇ! ನಿನಗೆ ನಮಿಸುವೆನು. ವಿಷ್ಣುಸ್ವರೂಪನೂ, ನಾಶವಿಲ್ಲದವನೂ ಆದ ನಿನಗೆ ನಮಿಸುವೆನು. ಪ್ರಕೃತಿ ಪುರುಷರುಗಳಿಗಿಂತಲೂ ಭಿನ್ನನೂ, ಬ್ರಹ್ಮ ವಿಷ್ಣು ಮಹೇಶ್ವರರಿಗೂ ಕಾರಣನಾದ ಪರಬ್ರಹ್ಮಸ್ವರೂಪನೂ ಆದ ನಿನಗೆ ನಮಸ್ಕಾರವು.

೪೭. ನಿನ್ನ ಈ ಶಂಕರ ಶರೀರವು ಯೋಗ, ಮೋಹ, ಅನುರಾಗ, ಧರ್ಮ, ಅಧರ್ಮ, ವಿದ್ಯೆ, ಅಜ್ಞಾನ ಇವುಗಳ ಸ್ವರೂಪವಾದುದು.

೪೮. ನೀನು ಮುಕ್ತಿಸ್ವರೂಪನು ; ಮುಕ್ತಿಯನ್ನು ಕೊಡುವವನು ; ದೃಶ್ಯ (ಕಾಣುವ) ಮತ್ತು ಅದೃಶ್ಯ (ಕಾಣಿಸದಿರುವ) ಪ್ರಪಂಚಸ್ವರೂಪನು ; ಅಥವಾ ನೀನು

ಸಮ್ಯಕ್ ಶ್ರದ್ಧಾಪೌರುಷೇ ತತ್ತ್ವರೂಪಂ ।
ತ್ವಂ ವೈ ಜ್ಯೋತಿಃ ಶಾಂತಿರೂಪಂ ಪುರಸ್ತಾತ್ ॥ ೮೮ ॥

ಬ್ರಹ್ಮಾ ವಿಷ್ಣುಸ್ತ್ವಂ ಹರಸ್ತ್ವಂ ಮಹೇಂದ್ರಃ
ಸೂರ್ಯಃ ಸೋಮೋ ವಾಯುರಗ್ನಿರ್ಧನೇಶಃ ॥
ತ್ವಂ ಕೋಯೇಷಃ ಶಮನೋ ರಾಕ್ಷಸಶ್ಚ
ಶೇಷಸ್ತ್ವತ್ತೋ ಭಿದ್ಯತೇ ಕೋಪಿ ನಾಸ್ಮಿನ್ ॥ ೮೯ ॥

ತ್ವಂ ಭೂಮಿರ್ದ್ಯೌರ್ದ್ಯುಸದಾಂ ಚಾಪಿ ಪಂಥಾಃ
ತ್ವಂ ಸ್ಥಾವರೋ ಜಂಗಮೋ ಭೂರ್ಜಲಸ್ಥಃ ॥
ಜ್ಞಾನಂ ಜ್ಞೇಯಂ ಧ್ಯಾನಗಮ್ಯಂ ಚ ತತ್ತ್ವಂ
ಪರಾತ್ಪರಂ ವ್ಯಕ್ತರೂಪಂ ಪರೇಷಾಂ ॥ ೯೦ ॥

ಜ್ಞಾನಿಗಳಿಗೆ ಗೋಚರನಾಗುವೆ. ಅಜ್ಞಾನಿಗಳಿಗೆ ಕಾಣಿಸುವುದಿಲ್ಲ. ಯೋಗ, ಬುದ್ಧಿ, ಶ್ರದ್ಧೆ, ಮತ್ತು ಪೌರುಷ ಇವುಗಳ ಸ್ವರೂಪನು, ನೀನೇ ತತ್ತ್ವಸ್ವರೂಪನೂ, ಜ್ಯೋತಿಸ್ಸ್ವರೂಪನೂ, ಶಾಂತಸ್ವರೂಪನೂ ಆಗಿರುವೆ.

೮೯. ನೀನೇ ಬ್ರಹ್ಮನು ; ವಿಷ್ಣುವೂ, ಶಿವನೂ ನೀನೇ ; ಮಹೇಂದ್ರ, ಸೂರ್ಯ, ಚಂದ್ರ, ವಾಯು, ಅಗ್ನಿ, ಕುಬೇರ, ವರುಣ, ಯಮ, ನಿಋತಿ, ಶೇಷ ಇವರೆಲ್ಲರೂ ನಿನ್ನ ಸ್ವರೂಪವೇ. ನಿನ್ನಿಂದ ಬೇರೆಯಾದ ವಸ್ತುವು ಈ ಜಗತ್ತಿನಲ್ಲಿ ಯಾವುದೂ ಇಲ್ಲ.

೯೦. ಭೂಮಿ, ಸ್ವರ್ಗ, ದೇವತೆಗಳು ಸಂಚರಿಸುವ ಆಕಾಶ, ಭೂಮಿಯಲ್ಲಿಯೂ, ಜಲದಲ್ಲಿಯೂ ಇರುವಂತಹ ಚರಾಚರಾತ್ಮಕವಾದ ಸಕಲ ವಸ್ತುಗಳು ಇವೆಲ್ಲವೂ, ನೀನೇ. ಜ್ಞಾನ, ಜ್ಞೇಯ, ಜ್ಞಾತೃಗಳೆಂಬ ಮೂರು ವಸ್ತುಗಳೂ ನೀನೇ ; ಚರ್ಮಚಕ್ಷುಸ್ಸಿನಿಂದ ನಿನ್ನನ್ನು ನೋಡುವುದು ಸಾಧ್ಯವಲ್ಲ, ಧ್ಯಾನದಿಂದ ಮಾತ್ರವೇ ತಿಳಿಯಲ್ಪಡತಕ್ಕವನು. ಮನಸ್ಸಿನಿಂದಲೂ ಸಹ ಚಿಂತಿಸಿ ತಿಳಿಯಲು ಸಾಧ್ಯವಲ್ಲದ ಪರತತ್ತ್ವಸ್ವರೂಪನಾಗಿದ್ದರೂ ಎಂದರೆ ನಿರ್ಗುಣಸ್ವರೂಪನಾಗಿದ್ದರೂ ನಿನಗೆ ಇಷ್ಟ ಬಂದಾಗ ಸಗುಣ ಎಂದರೆ ವ್ಯಕ್ತ (ಕಾಣಿಸುವ) ರೂಪದಿಂದ ಸಾಮಾನ್ಯ ಜನರಿಗೆ ಗೋಚರನಾಗುವೆ.

ತ್ವಂ ಪೂರುಷಃ ಪರಮಾತ್ಮಾ ಪ್ರಧಾನಂ
ತ್ವಂ ಹಿಜ್ಞಾಯಾನಾಗಮೋ ಜ್ಞಾನಗಮ್ಯಃ ॥
ಭಾವಃ ಕೃತ್ಯಂ ಪಂಚರೂಪಾ ಸಮಸ್ತೈ ।
ರಾಸಾದ್ಯಸ್ತೇ ಗೋಚರಾಸ್ತದ್ಭವಾಯ ॥ ೯೦ ॥

ಕೀರ್ತಿಃ ಕೀರ್ತ್ಯಸ್ತುತ್ಯರೂಪೀ ಸ್ತುತಿಶ್ಚ
ದೃಷ್ಟಾ ದೃಶ್ಯಃ ಸ್ಥೈರ್ಯಧೃಕ್ಸ್ಥಾವರಶ್ಚ ॥ ೯೧ ॥

ನಿತ್ಯೋಽನಿತ್ಯೋ ಮುಕ್ತಯೋಗೋ ವಿಯೋಗೋ
ದಾನಾಽದಾನೇ ಭೇದಸಾಮಪ್ರಯೋಗಃ ॥

---

೯೦. ಸಾಂಖ್ಯರು ಹೇಳುವ ಪ್ರಕೃತಿ ಮತ್ತು ಪುರುಷರೂ ನೀನಾಗಿರುವೆ. ನೀನು ವ್ಯಾಪಕನು, ವೇದಸ್ವರೂಪನು, ಜ್ಞಾನದಿಂದ ಮಾತ್ರವೇ ತಿಳಿಯಲ್ಪಡತಕ್ಕವನು. ನಿನ್ನ ಸ್ವರೂಪವೂ, ಕಾರ್ಯವೂ ಐದುವಿಧಗಳಾಗಿರುವುವು. ಸಕಲರಿಂದಲೂ ನೀನೇ ಪಡೆಯಲ್ಪಡತಕ್ಕವನು.

೯೧-೯೩. ಕೀರ್ತಿಯೂ ನೀನು, ಕೀರ್ತಿಸಲ್ಪಡುವ ವಸ್ತುವೂ ನೀನು; ಸ್ತುತಿಯೂ ನೀನು, ಸ್ತುತಿಸಲ್ಪಡುವವನೂ ನೀನು; ನೀನು ಎಲ್ಲವನ್ನೂ ಸಾಕ್ಷೀಭೂತನಾಗಿ ನೋಡುತ್ತಿರುವೆ, ನೋಡಲ್ಪಡುವವನೂ ನೀನು; ಚಲಿಸದಿರುವ ಬೆಟ್ಟವೇ ಮೊದಲಾದ ವಸ್ತುವು ನೀನು. ದಾನಾದಾನಗಳು ನೀನು; ನೀತಿಯೂ, ನೀತಿಗೆ ವಿಷಯವಸ್ತುವೂ ನೀನು; ಯಜ್ಞದಲ್ಲಿ ದೀಕ್ಷಿತನಾದ ಯಜಮಾನನು ನೀನು; ಅಲ್ಲಿ ಕೊಡುವ ದಕ್ಷಿಣೆಯೂ ನೀನು; ಜಗತ್ತಿನಲ್ಲಿರುವ ಎಲ್ಲಾ ಸಾರವಾದ ವಸ್ತುಗಳಿಗಿಂತಲೂ ನೀನು ಸಾರವಾದವನು; ಪಾಪಪುಣ್ಯಗಳನ್ನು ಕೊಡುವವನೂ, ಆ ಫಲಸ್ವರೂಪನೂ ನೀನೇ ಆಗಿರುವೆ. ಈ ಶ್ಲೋಕದಲ್ಲಿಯೂ, ಮುಂದಿನ ಐದು ಶ್ಲೋಕಗಳಲ್ಲಿಯೂ ಪರತತ್ತ್ವ ಸ್ವರೂಪನಾದ ಮಹೇಶ್ವರನಿಗೂ ಜಗತ್ತಿಗೂ ಅಭೇದಸ್ವರೂಪವನ್ನು ವಿವರಿಸಿರುವುದು. ಉದಾಹರಣೆಗಾಗಿ ಕೀರ್ತಿ, ಸ್ತುತಿ ಮೊದಲಾದ ಕೆಲವು ವಿಷಯಗಳನ್ನು ಮಾತ್ರ ವಿವರಿಸಿ ಅದಕ್ಕೂ ಅವುಗಳ ವಿಷಯಕ್ಕೆ ಪಾತ್ರನಾದ ನಿನಗೂ ಭೇದವಿಲ್ಲವೆಂದು ಹೇಳಿದ್ದರೂ ಪ್ರಪಂಚದಲ್ಲಿರುವ ಸಮಸ್ತ ಚರಾಚರಾತ್ಮಕವಾದ ವಸ್ತುಗಳನ್ನೂ ಇಲ್ಲಿ ನಿರ್ದೇಶಿಸಿರುವುದೆಂದು ತಿಳಿಯಬೇಕು. ಏಕೆಂದರೆ ಎಲ್ಲವನ್ನೂ ಪ್ರತ್ಯೇಕವಾಗಿ ಹೇಳಲು ಸಾಧ್ಯವಿಲ್ಲ, ಮುಖ್ಯ ವಿಷಯವೇನೆಂದರೆ ಪರಬ್ರಹ್ಮವಸ್ತು ಒಂದುಹೊರತು, ಬೇರೆ ಯಾವ ವಸ್ತುವೂ ಸ್ವತಂತ್ರವಾಗಿ ಇರುವುದಿಲ್ಲ. ನಮಗೆ ಕಾಣಿಸುವ ವಸ್ತುಗಳು

ನೀತಿರ್ನೇಯೋ ದೀಕ್ಷಿತೋ ದಕ್ಷಿಣಾಶ್ಚ
ಸಾರತ್ಸಾರಃ ಸಂವಿಧಾತಾ ವಿಧೇಯಃ ॥ ೯೩ ॥

ಆರೋಗ್ಯೋನಾರೋಗ್ಯ ರೂಪಶ್ಚಗ್ರಾಪಹೀನೋ
ದಿವ್ಯೋ ದೇವೋ ಮಾನುಷೋಽ ಮಾನುಷಶ್ಚ ॥
ಸೃಜ್ಯಃ ಸ್ರಷ್ಟಾ ಪಾಲಕಃ ಪಾಲ್ಯರೂಪ
ಶ್ಚೇತಾ ಚೇಯೋ ನೋನಿರ್ಗುಯುಕ್ತಸ್ತಥೋನಿರ್ಗುಃ ॥ ೯೪ ॥

ವಿದ್ಯಾಽವಿದ್ಯಾ ವೇದವಾದ್ಯೈಕರೂಪೋ
ರೂಪಾರೂಪಸ್ತೀಕ್ಷ್ಣಸೌಮ್ಯೈಕರೂಪಃ ॥
ಭಾವಾಭಾವಃ ಶೋಭನಃ ಶುದ್ಧರೂಪೀ
ಶಶ್ವದ್ದಾಂತಃ ಶಾಂತಿರುಗ್ರಾ ಮುನೀನಾಂ ॥ ೯೫ ॥

ಬೇರೆಬೇರೆಯಾಗಿ ತೋರುತ್ತಿದ್ದರೂ ಎಲ್ಲವೂ ಆ ಬ್ರಹ್ಮವಸ್ತುಸ್ವರೂಪವೇ. ಏಕೆಂದರೆ ಸಮಸ್ತ ವಸ್ತುಗಳೂ ಪರಬ್ರಹ್ಮದಿಂದಲೇ ಉತ್ಪನ್ನವಾಗಿ, ಕೆಲವುಕಾಲ ಬೇರೆಬೇರೆ ಯಾದ ವಸ್ತುಗಳಂತೆ ನಮಗೆ ತೋರಿ, ಕಡೆಯಲ್ಲಿ ಆ ಬ್ರಹ್ಮದಲ್ಲಿಯೇ ಲೀನವಾಗು ವುವು.

೯೪. ನೀನು ಸಜ್ಜನನೂ, ದುಷ್ಟನೂ ಆಗಿರುವೆ; ನೀನು ಮಾಯಾಮಯ ರೂಪವುಳ್ಳವನು; ವಸ್ತುತಃ ರೂಪವಿಲ್ಲದವನು; ಮನೋಹರನು; ದೇವತೆಯು; ರಾಕ್ಷಸನು; ಪ್ರಾಣಿಯೂ ನೀನು; ಸೃಷ್ಟಿಸುವ ವಸ್ತುವೂ ಸೃಷ್ಟಿಸುವವನೂ ನೀನು; ಈ ಜಗತ್ತನ್ನು ಸಲಹುವವನೂ ನೀನು; ನೀನು ಚೇತನನು; ಜ್ಞಾನಕ್ಕೆ ವಿಷಯನು; ಸುಖದುಃಖಗಳ ಸಂಬಂಧವಿಲ್ಲದವನು; ಸುಖದುಃಖಗಳೆಂಬ ಅಲೆಗಳೂ ನೀನಾಗಿರುವೆ.

೯೫. ಮತ್ತು ನೀನು ವಿದ್ಯೆ, ಅವಿದ್ಯೆ, ವೇದವಾಕ್ಯಗಳು ಇವುಗಳ ಸ್ವರೂಪನು; ಸಗುಣನು ಮತ್ತು ನಿರ್ಗುಣನು; ಉಗ್ರವಾದ ಮತ್ತು ಸೌಮ್ಯವಾದ ರೂಪವುಳ್ಳ ವನು; ಭಾವ (ಇರುವಿಕೆ), ಅಭಾವ (ಇಲ್ಲದಿರುವಿಕೆ) ಇವುಗಳ ಸ್ವರೂಪನು. ಮಂಗಳ ಸ್ವರೂಪನು, ಶುದ್ಧವಾದ ಸ್ವರೂಪನು, ಜಿತೇಂದ್ರಿಯನು; ಮುನಿಗಳ ಶ್ರೇಷ್ಠನಾದ ಶಾಂತತೆಯೂ ನೀನಾಗಿರುವೆ.

೯೬. ನೀನು ದ್ವಂದ್ವ ಮತ್ತು ಅದ್ವಂದ್ವಗಳ ಸ್ವರೂಪನು. ದ್ವಂದ್ವವೆಂದರೆ ಒಂದಕ್ಕೊಂದು ವಿರೋಧವಾದ ಎರಡು ವಸ್ತುಗಳು. ಉದಾ:—ಸುಖ ದುಃಖ;

ದ್ವಂದ್ವೋಽದ್ವಂದಃ ಸರ್ವಗೋಽಸರ್ವಗಶ್ಚ
ಭ್ರಾಂತೋಽಭ್ರಾಂತಃ ಸಿದ್ಧಸಿದ್ಧಿಪ್ರದಶ್ಚ ॥
ಏಕಸ್ತ್ವಂ ಸರ್ವಗೋಽಪ್ತಾ ಸುದೇಹೋ
ನಿರ್ದೇಹಸ್ತ್ವಂ ದೇಹ ಏಕಃ ಸುರಾಣಾಂ ॥ ೯೬ ॥

ಸ್ಥೂಲಃ ಸೂಕ್ಷ್ಮೋ ನಿರ್ವಿಕಾರಃ ಶರೀರೀ
ವಿಶ್ವಾತ್ಮಾ ತ್ವಂ ನಾಸ್ತಿ ಭಿನ್ನೋ ಭವತ್ತಃ ॥
ಕಾರ್ಯಾಕಾರ್ಯೇ ಯಸ್ಯ ರೂಪೇ ಸಮಸ್ತೇ
ವ್ಯಾಪ್ಯವ್ಯಾಪ್ಯೇ ಭಾಗಹೀನೋತಿಪೂರ್ಣಃ ॥ ೯೭ ॥

ಯೋಗಜ್ಞಾನಸಂಸ್ಥಾತ್ಮಕಂ ಯಸ್ಯ ನಿತ್ಯಂ
ರೂಪಂ ಯಸ್ಯ ಶ್ರೀದ ತಸ್ಮೈ ನಮಸ್ತೇ ॥

ಶೀತ ಉಷ್ಣ; ಸ್ಥೂಲ ಸೂಕ್ಷ್ಮ ಇತ್ಯಾದಿ. ಆದುದರಿಂದ ಸರ್ವವ್ಯಾಪಕನಾಗಿದ್ದರೂ. ಅಜ್ಞಾನದಿಂದ ವ್ಯಾಪಕನಲ್ಲದವನಂತೆ ಇರುವೆ; ಮಾಯಾಭ್ರಾಂತಿಯುಳ್ಳವನು; ವಸ್ತುತಃ ಭ್ರಾಂತಿ ಇಲ್ಲದವನು; ಅಣಿಮವೇ ಮೊದಲಾದ ಎಂಟು ಸಿದ್ಧಿಗಳುಳ್ಳವನು; ಆ ಸಿದ್ಧಿಗಳನ್ನು ಭಕ್ತರಿಗೆ ನೀನೇ ಕೊಡುತ್ತಿರುವೆ. ಈ ಜಗತ್ತಿನಲ್ಲಿ ಸತ್ಯವಾಗಿ ಯಾವಾಗಲೂ ಇರುವವನು ನೀನೊಬ್ಬನೇ; ನೀನು ಸಕಲರನ್ನೂ ಸಲಹುವವನು; ಸುಂದರ ದೇಹವುಳ್ಳವನು, ವಸ್ತುತಃ ಶರೀರವಿಲ್ಲದವನು; ಸಕಲ ದೇವತೆಗಳಿಗೂ ನೀನು ಶರೀರವು; ದೇವತೆಗಳೆಲ್ಲರೂ ನಿನ್ನ ಶರೀರದಲ್ಲೇ ಸೇರಿರುವರು.

೯೬. ನೀನು ಸ್ಥೂಲ ಮತ್ತು ಸೂಕ್ಷ್ಮವಾದ ವಸ್ತುಸ್ವರೂಪನು; ಶರೀರವಿಲ್ಲದುದರಿಂದ ಉತ್ಪತ್ತಿ, ಸ್ಥಿತಿ, ವೃದ್ಧಿ, ಪರಿಣಾಮ, ಅಪಕ್ಷಯ ನಾಶಗಳೆಂಬ ಆರು ವಸ್ತುವಿಕಾರವಿಲ್ಲದವನು, ಆದರೆ ಮಾಯಾಮಯವಾದ ಶರೀರವುಳ್ಳವನು, ಜಗದ್ರೂಪನು. ನಿನ್ನಿಂದ ಬೇರೆಯದಾದ ಒಂದು ವಸ್ತುವೂ ಇಲ್ಲ. ಕಾರ್ಯ ಮತ್ತು ಅಕಾರ್ಯ ಸ್ವರೂಪನು, ವ್ಯಾಪ್ಯ ಎಂದರೆ ಅಗ್ನಿಯನ್ನು ಹೊಗೆಯು ಅನುಸರಿಸಿರುವಂತೆ ವ್ಯಾಪಕವಾದ ವಸ್ತುವನ್ನು ಅನುಸರಿಸಿ ಇರುವ ವಸ್ತುವೂ, ಅನುಸರಿಸದೇ ಇರುವ ವಸ್ತುವೂ ನೀನು. ನೀನು ಒಂದು ವಸ್ತುವಿನ ಒಂದು ಭಾಗಮಾತ್ರವಲ್ಲ, ಪೂರ್ಣವಸ್ತುವೇ ನೀನು, ನೀನು ಆನಂದಸ್ವರೂಪನು.

೯೭. ನಿನ್ನ ನಿತ್ಯವಾದ ಸ್ವರೂಪವು ಯೋಗ ಮತ್ತು ಜ್ಞಾನಗಳಲ್ಲಿರುವುದು. ಎಂದರೆ, ಯೋಗ ಮತ್ತು ಜ್ಞಾನಗಳಿಂದ ಮಾತ್ರವೇ ಪಡೆಯಲು ಸಾಧ್ಯವು. ಬೇರೆ

ಪ್ರಧಾನಪುಂಸೋರಪಿ ಯೋ ವಿಧಾತಾ
ಯಃ ಕಾಲರೂಪೀ ಪುರುಷಃ ಪರೇಶಃ ॥ ೯೮ ॥

ತಮಿಶಮುಗ್ರಂ ವರದಂ ವರೇಣ್ಯಂ
ನಮಾಮಿ ಚಿನ್ಮೀತಿವಿತಾನಕಂ ತ್ವಾಂ ॥
ಅಕ್ಷಯೋಽಯೋಽವ್ಯಯಃ ಸಾಕ್ಷೀ ಕ್ಷೇತ್ರಜ್ಞಃ ಕ್ಷೇತ್ರಧೃಗ್ವರಃ ॥ ೯೯ ॥

ತಸ್ಮೈ ನಮಸ್ತೇ ವಿಶ್ವಾತ್ಮನ್ವೃಷಧ್ವಜ ಮಹೇಶ್ವರ।
ಜ್ಞಾನಾಮೃತವಿನಿಸ್ಯಂದಿ ಯಸ್ಯ ವಿಚ್ಚಂದ್ರಮಾಃ ಸದಾ ॥ ೧೦೦ ॥

ಮಾರ್ಗವಿಲ್ಲ. ಐಶ್ವರ್ಯವನ್ನು ಕೊಡುವ ಓ ಶಂಕರನೇ! ನಿನಗೆ ನಮಸ್ಕಾರವು. ಪ್ರಕೃತಿಪುರುಷರಿಗೂ ನೀನು ನಿಯಾಮಕನು, ಕಾಲಪುರುಷನು ಮತ್ತು ಪರಮೇಶ್ವರನು.

೯೯. ದುಷ್ಪರ ವಿಷಯದಲ್ಲಿ ಉಗ್ರನೂ, ಭಕ್ತರಿಗೆ ವರವನ್ನು ಕೊಡುವವನೂ, ಸರ್ವೋತ್ತಮನೂ, ಜ್ಞಾನ ಮತ್ತು ನೀತಿಗಳ ಸ್ವರೂಪನೂ, ಪರಮೇಶ್ವರನೂ ಆದ ನಿನ್ನನ್ನು ನಮಿಸುವೆನು. ಅಲ್ಲದೇ ಯಾವವಿಧವಾದ ನಾಶಗಳೂ ಇಲ್ಲದವನು, ಜಗತ್ತಿನಲ್ಲಿನ ಆಗುಹೋಗುಗಳಿಗೆಲ್ಲಾ ಸಾಕ್ಷಿಯು. ಜೀವಸ್ವರೂಪನೂ, ಶರೀರವನ್ನು ಧರಿಸಿರುವ ಪ್ರಾಣಸ್ವರೂಪನೂ ನೀನೇ ಆಗಿರುವೆ.

೧೦೦. ಓ ಶಂಕರನೇ! ನಿನ್ನ ತಿಳಿವಳಿಕೆ ಎಂಬ ಚಂದ್ರನು ಜ್ಞಾನವೆಂಬ ಅಮೃತವನ್ನು ಸದಾ ಸುರಿಸುವನು. ವೃಷಭನಾಹನನೂ, ಜಗದ್ರೂಪನೂ ಆದ ನಿನಗೆ ನಮಸ್ಕಾರವು. ನಿನ್ನ ಅಪಾರವಾದ ಜ್ಞಾನವೇ ಯಾವಾಗಲೂ ಸ್ವಲ್ಪಸ್ವಲ್ಪವಾಗಿ ಸಮಸ್ತ ಪ್ರಾಣಿಗಳಲ್ಲೂ ಸ್ಫುರಿಸುತ್ತಿರುವುದು "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂಬ ಶ್ರುತಿವಾಕ್ಯದಂತೆ ಪರಬ್ರಹ್ಮನು ಜ್ಞಾನಸ್ವರೂಪನು ಎಂದರೆ, ಪ್ರಪಂಚದಲ್ಲಿರುವ ನೀರಿಗೆಲ್ಲ ಸಮುದ್ರವು ಹೇಗೆ ಮೂಲವೋ ಚರಾಚರಾತ್ಮಕವಾದ ವಸ್ತುಗಳ ಮತ್ತು ಪ್ರಾಣಿಗಳ ಚಲನವಲನಕ್ಕೆ ಕಾರಣವಾದ ತೇಜಸ್ಸಿಗೆ ಸೂರ್ಯನು ಹೇಗೆ ಮೂಲವೋ, ಹಾಗೆ ಸಮಸ್ತ ಪ್ರಾಣಿಗಳಿಗೂ ಇರುವ ಜ್ಞಾನ, ತಿಳಿವಳಿಕೆ, ಇವುಗಳಿಗೆ ಮೂಲವು ಆ ಬ್ರಹ್ಮವಸ್ತುವೇ. ಆ ವಸ್ತುವಿನ ಅನಂತವಾದ ಜ್ಞಾನದ ಒಂದು ಸಣ್ಣ ಅಂಶಮಾತ್ರ ಪ್ರಾಣಿಗಳಲ್ಲಿ ಸ್ಫುರಿಸಿ, ಅವುಗಳು ತಮ್ಮ ಕಾರ್ಯಗಳನ್ನು ಮಾಡಲು ತಕ್ಕ ಜ್ಞಾನವನ್ನು

ತದ್ರೂಪಂ ಮೇ ಕಥಂ ಜ್ಞೇಯಂ ಭಕ್ತಿಮಾತ್ರಂ ನಮೋಽಸ್ತು ತೇ ।

॥ ಔರ್ವ ಉವಾಚ ॥

ಇತಿ ಸ್ತುತೋ ಮಹಾದೇವಃ ಸರ್ವಭೂತಾನುಕಂಪಕಃ ॥ ೧೦೧ ॥

ಪ್ರಸನ್ನವದನಃ ಪ್ರಾಹ ಪಾರ್ವತೀಂ ಪ್ರತಿ ಹರ್ಷಯನ್ ।

॥ ಈಶ್ವರ ಉವಾಚ ॥

ಪ್ರೀತೋಽಸ್ಮಿ ದೇವಿ ಭದ್ರಂ ತೇ ವರಂ ವರಯ ವಾಂಛಿತಂ ॥ ೧೦೨ ॥

ತಪಸಾಪ್ಯಾಯಿತಶ್ಚಾಹಂ ತ್ವಯಾ ಬ್ರಹ್ಮಾ ತಥಾ ಹರಿಃ ।
ತಪಸಾ ತ್ವತ್ಸಮೋ ನಾಸ್ತಿ ಶೀಲೇನ ಚ ಗುಣೇನ ಚ ॥ ೧೦೩ ॥

ತ್ವಾಂ ವಿನಾ ನ ಹಿ ತೃಪ್ಯಾಮಿ ಪ್ರಿಯೇ ಕುರು ಯಥೇಪ್ಸಿತಂ ।
ತತಃ ಸಾ ಮೋಹಿತಾ ಪ್ರಾಹ ಮಾಯಯಾ ಹಿಮವತ್ಸುತಾ ॥ ೧೦೪ ॥

ಉಂಟುಮಾಡುವುದು. ಎಂದರೆ ಪ್ರಾಣಿಗಳಲ್ಲಿಯೂ, ಜನರಲ್ಲಿಯೂ ಇರುವ ಜ್ಞಾನವೆಲ್ಲವೂ ಆ ಪರಬ್ರಹ್ಮದ ಅಂಶವೇ ಹೊರತು ಬೇರೆಯಲ್ಲ.

೧೦೧. ಈ ವಿಧವಾಗಿ ಅತಿ ಮಹತ್ತಾದ ನಿನ್ನ ರೂಪವನ್ನು ನಾನು ಹೇಗೆ ತಿಳಿಯಬಲ್ಲೆನು ? ಕೇವಲ ಭಕ್ತಿಯಿಂದ ನಿನ್ನನ್ನು ನಮಿಸುವೆನು.

೧೦೨. ಔರ್ವ ಮುನಿಯು ಹೇಳಿದನು :—ಹೀಗೆ ಪಾರ್ವತಿಯು ಸ್ತುತಿಸಲು ಎಲ್ಲರಲ್ಲಿಯೂ ದಯೆಯುಳ್ಳ ಶಂಕರನು ಪ್ರಸನ್ನವದನನಾಗಿ ಪಾರ್ವತಿಯನ್ನು ಸಂತೋಷಗೊಳಿಸುವಂತೆ ಹೀಗೆ ಹೇಳಿದನು.

೧೦೩. ಈಶ್ವರನು ಹೇಳಿದನು :—ಎಲೌ ದೇವಿ ! ನಾನು ಪ್ರಸನ್ನನಾಗಿರುವೆನು. ನಿನಗೆ ಬೇಕಾದ ವರವನ್ನು ಕೇಳಿಕೋ. ನಿನ್ನ ತಪಸ್ಸಿನಿಂದ ನಾನೂ, ಬ್ರಹ್ಮನೂ, ಹರಿಯೂ, ಸಂತುಷ್ಟರಾಗಿರುವೆವು.

೧೦೪. ನಿನ್ನಂತೆ ತಪಸ್ಸನ್ನು ಆಚರಿಸುವವರಿಲ್ಲ. ನಿನ್ನಂತೆ ಶೀಲವಂತರೂ, ಗುಣಶಾಲಿಗಳೂ ಯಾರೂ ಇಲ್ಲವು. ನಿನ್ನನ್ನು ಬಿಟ್ಟರೆ ನನಗೆ ಸಂತೋಷವೇ ಆಗುವುದಿಲ್ಲ. ಆದಕಾರಣ ಎಲೈ ಪ್ರಿಯಳೇ, ನಿನಗೆ ಬೇಕಾದುದನ್ನು ಕೇಳಿಕೋ.

ತ್ವಾಂಬೂನದಾಭಗೌರೋ ಮೇ ವೇಷೋ ಭವತು ಸಾಂಪ್ರತಂ ।
ಅನನ್ಯಕಾಂತಸ್ತ್ವಂ ಚಾಪಿ ಭೂಯೋ ಮತ್ತೋ ವಿನಾ ಹರ ॥ ೧೦೫ ॥

ಏವಮುಕ್ತ್ವೋ ಮಹಾದೇವಃ ಪಾರ್ವತ್ಯಾ ಪಾರ್ವತೀಂ ತತಃ ।
ಆಕಾಶಗಂಗಾತೋಯೌಘೇ ಮಜ್ಜಯಾಮಾಸ ಭಾಮಿನೀಂ ॥ ೧೦೬ ॥

ಸಾ ನಿಮಜ್ಯ ಸಮುತ್ತೀರ್ಣಾ ವಿದ್ಯುದ್ಗೌರೀ ವ್ಯಜಾಯತ ।
ಸಿತಾಂಭೋಮಧ್ಯಗಾ ದೇವೀ ಶಾರದಾಭ್ರೇ ತಡಿದ್ಯಥಾ ॥ ೧೦೭ ॥

ಶಂಭುಶ್ಚಾಂಗೀಚಕಾರಾಶು ನಾಪಂ ತ್ವತ್ತೋ ವಿನಾ ಪ್ರಿಯೇ ।
ಮನಸಾಪಿ ಗ್ರಹೀಷ್ಯಾಮಿ ನಾನ್ಯಾಂ ಸತ್ಯಂ ಬ್ರವೀಮಿ ತೇ ॥ ೧೦೮ ॥

॥ ಔರ್ವ ಉವಾಚ ॥

ಅಥ ತೋಯಾತ್ಸಮುತ್ತೀರ್ಣಾ ಪಾರ್ವತೀ ನೋದಸಂಯುತಾ ।
ತಪಃಕ್ಲೇಶಂ ಪರಿತ್ಯಜ್ಯ ಚಂದ್ರಿಕೇವ ವಿಧೋರ್ಯಥಾ ॥ ೧೦೯ ॥

---

೧೦೫. ಅನಂತರ ಆ ಪಾರ್ವತಿಯು ಮಾಯೆಯಿಂದ ಮೋಹಿತಳಾಗಿ ಹೀಗೆ ಹೇಳಿದಳು—ಓ ಶಂಕರನೇ! ಈಗಲೇ ನನ್ನ ಶರೀರವು ಚಿನ್ನದಂತೆ ಹಳದಿಯ ವರ್ಣವುಳ್ಳದುದಾಗಬೇಕು. ನೀನೂ ಸಹ ನನ್ನ ಹೊರತು ಇನ್ನಾವ ಸ್ತ್ರೀಯನ್ನೂ ಅಪೇಕ್ಷಿಸ ಕೂಡದು.

೧೦೬. ಪಾರ್ವತಿಯು ಹೀಗೆ ಹೇಳಲು, ಮಹಾದೇವನು ಅವಳನ್ನು ಆಕಾಶ ಗಂಗೆಯ ನೀರಿನ ಪ್ರವಾಹದಲ್ಲಿ ಮುಳುಗಿಸಿ ಸ್ನಾನಮಾಡಿಸಿದನು.

೧೦೭. ಆಕಾಶಗಂಗೆಯ ನೀರಿನಲ್ಲಿ ಸ್ನಾನಮಾಡಿ ಮೇಲಕ್ಕೆದ್ದು ಬಂದಕೂಡಲೇ ಆ ಕಾಳಿಯು ಮಿಂಚಿನಂತೆ ಅತಿಪ್ರಕಾಶಮಾನವಾದ ಗೌರ (ಹಳದಿ) ವರ್ಣದಿಂದ ಕೂಡಿದ ಶರೀರವುಳ್ಳವಳಾದಳು. ಆಕಾಶಗಂಗೆಯ ಮಧ್ಯದಲ್ಲಿ ನಿಂತಿರುವ ಆ ಗೌರಿಯು, ಶರದೃತುವಿನಲ್ಲಿ ಬಿಳಿಯ ಮೇಘ ಮಧ್ಯದಲ್ಲಿರುವ ಮಿಂಚಿನಂತೆ ಪ್ರಕಾಶಿಸಿದಳು.

೧೦೮. ಎಲೈ ಪ್ರಿಯಳೇ! ನಿನ್ನ ಹೊರತು ಇನ್ನಾವ ಸ್ತ್ರೀಯನ್ನೂ ಮನಸ್ಸಿನಲ್ಲಿಯೂ ನಾನು ಅಪೇಕ್ಷಿಸುವುದಿಲ್ಲ ಇದು ಸತ್ಯವು ಎಂದು ಶಂಕರನು ಆಗ ಪಾರ್ವತಿಯೊಡನೆ ಒಪ್ಪಿಕೊಂಡನು.

೧೦೯. ಔರ್ವಮುನಿಯು ಹೇಳಿದನು :- ಅನಂತರ ಗಂಗೆಯ ನೀರಿನಿಂದೆದ್ದು, ಪಾರ್ವತಿಯು ತನ್ನ ಇಷ್ಟಾರ್ಥವು ನೆರವೇರಿದುದರಿಂದ ತುಂಬಾ ಹರ್ಷಗೊಂಡವಳಾಗಿ,

ಅಥ ತಾಂ ಪಾರ್ವತೀಂ ದೇವೀಮಾದಾಯ ವೃಷಭಧ್ವಜಃ ।
ಜಗಾಮ ಶೈಲಂ ಕೈಲಾಸಂ ಸ್ವಮಾಶ್ರಮಪದಂ ಲಘು ॥ ೧೧೦ ॥

ತದಾ ಗತ್ವಾ ಹರೋ ದೇವೀಮುಧಿವಾಸ್ಯ ವಿಭೂಷ್ಯಚ ।
ಪೂರ್ವವನ್ಮೋದಯಾಮಾಸ ನರ್ಮಹಾಸಕಥಾದಿಭಿಃ ॥ ೧೧೧ ॥

ಸಾಪಿ ಸೌವರ್ಣಗೌರಾಂಗೀ ವೀಕ್ಷ್ಯ ರೂಪಂ ಮನೋಹರಂ ।
ಗೃಹೀತಸನುಯಂ ಶಂಭುಂ ಪ್ರಾಪ್ಯಾತೀವ ಮುಮೋದ ಹ ॥ ೧೧೨ ॥

ಏವಂ ತಯೋಸ್ತು ಶಿವಯೋರನ್ಯೋನ್ಯಂ ರಮಮಾಣಯೋಃ ।
ಜಗಾಮ ಸುಚಿರಂ ಕಾಲಂ ಕೈಲಾಸೇ ಪರ್ವತೋತ್ತಮೇ ॥ ೧೧೩ ॥

ಅಥೈಕದಾ ಮಹಾದೇವಸಮೀಪೇ ಹಿಮವತ್ಸುತಾ ।
ಆಸೀನಾ ಪತ್ಯುಶೇ ತಸ್ಯ ಸ್ವಾಂ ಛಾಯಾಮುರಸಿ ಸ್ಥಿತಾಂ ॥ ೧೧೪ ॥

ತಪಸ್ಸಿನಿಂದಾದ ಕ್ಲೇಶವನ್ನೆಲ್ಲಾ ಮರೆತು, ಬೆಳದಿಂಗಳಿಂದ ಚಂದ್ರನು ಪ್ರಕಾಶಿಸುವಂತೆ ಹರನೊಡನೆ ಸೇರಿ ಪ್ರಕಾಶಿಸಿದಳು.

೧೧೦-೧೧೧. ಆಮೇಲೆ ಶಂಕರನು ಪಾರ್ವತಿಯನ್ನು ಕರೆದುಕೊಂಡು, ಕೈಲಾಸ ಗಿರಿಯಲ್ಲಿರುವ ತನ್ನ ಆಶ್ರಮಕ್ಕೆ ಜಾಗ್ರತೆಯಾಗಿ ತೆರಳಿ, ಅಲ್ಲಿ ಅವಳನ್ನು ಆಭರಣಗಳಿಂದಲೂ ಹೂವುಗಳಿಂದಲೂ ಅಲಂಕರಿಸಿ, ಮೊದಲಿನಂತಯೇ ಹಾಸ್ಯ ಕಥೆ ಮುಂತಾದುವುಗಳಿಂದ ಸತೋಷಗೊಳಿಸಿದನು.

೧೧೨-೧೧೩. ಚೆನ್ನದಂತೆ ಗೌರವರ್ಣದ ಶರೀರದಿಂದ ಶೋಭಿಸುತ್ತಿರುವ ಆ ಪಾರ್ವತಿಯೂ ಸಹ ಮನೋಹರವಾದ ತನ್ನ ರೂಪವನ್ನು ನೋಡಿಕೊಂಡು, ತನ್ನ ಹೊರತು ಇನ್ನಾವ ಸ್ತ್ರೀಯನ್ನೂ ಅಪೇಕ್ಷಿಸುವುದಿಲ್ಲವೆಂದು ಶಂಕರನು ಮಾಡಿದ ಪ್ರತಿಜ್ಞೆಯಿಂದ ತುಂಬ ಹರ್ಷಗೊಂಡು, ಅವನೊಡನೆ ವಿಹರಿಸುತ್ತಿದ್ದಳು. ಹೀಗೆ ಪರ್ವತಶ್ರೇಷ್ಠವಾದ ಕೈಲಾಸದಲ್ಲಿ ಅನ್ಯೋನ್ಯವಾಗಿ ಆ ಪಾರ್ವತೀಪರಮೇಶ್ವರರು ವಿಹರಿಸುತ್ತಿರಲು, ಬಹಳ ಕಾಲ ಕಳೆದುಹೋಯಿತು.

೧೧೪. ಆಮೇಲೊಂದು ದಿವಸ ಪಾರ್ವತಿಯು ಶಂಕರನ ಬಳಿಯಲ್ಲಿರುವಾಗ ಶಂಕರನ ಎದೆಯಲ್ಲಿ ಮೂಡಿರುವ ತನ್ನ ಪ್ರತಿಬಿಂಬವನ್ನು ನೋಡಿದಳು.

ಸ್ಫಟಿಕಾಭ್ರಸಮೇ ಸ್ವಚ್ಛೇ ಹೃದಿ ಶಂಭೋರ್ಮನೋಹರೇ ।
ಯೋಗಿಜ್ಞಾನಾದರ್ಶತಲೇ ಚಾರ್ವಂಗೀಂ ಪ್ರತಿಬಿಂಬಿತಾಂ ॥ ೧೧೫ ॥

ಆತ್ಮಚ್ಛಾಯಾಂ ಗಿರಿಸುತಾ ವಾಮಭಾಗೇ ಮನೋಹರೇ ।
ದದರ್ಶ ವನಿತಾರೂಪಾಂ ಸ್ಮಿತವಕ್ತ್ರಾಂ ಮನೋಹರಾಂ ॥ ೧೧೬ ॥

ಭ್ರಾಂತ್ಯಾ ದೃಷ್ಟ್ವಾಥ ಪಾರ್ವತ್ಯಾಸ್ತದಾಽಜ್ಞಾನಮಜಾಯತ ।
ಕೃತಸಙ್ಕೋಽಪಿ ಗಿರಿಶಃ ಕಪಸ್ಯಾಂ ವನಿತಾಂ ದಧೌ ॥ ೧೧೭ ॥

ಮಾಯಯಾ ಸ್ಥಾಪಿತಾಂ ಗಾತ್ರೇ ವೀಕ್ಷಂತೀಂ ಕುಟಿಲಂ ಚ ಮಾಂ ।
ಇತಿ ತಸ್ಯಾಸ್ತದಾ ವಕ್ತ್ರಂ ಮಲಿನಂ ಭ್ರುಕುಟೀಯುತಂ ॥ ೧೧೮ ॥

ಬಭೂವ ವೃಷಕೇತುಶ್ಚ ಶ್ಯಾಮ ಉತ್ಪಾತಕೋಪ ಯುಥಾ ।
ಸಾ ದೃಷ್ಟ್ವಾಥ ತದಾ ಛಾಯಾಂ ವಿಷ್ಣುಮಾಯಾವಿಮೋಹಿತಾ ॥ ೧೧೯ ॥

೧೧೫-೧೧೬. ಆ ಶಂಕರನ ಎದೆಯು ಯೋಗಿಗಳ ಜ್ಞಾನಕ್ಕೆ ಕನ್ನಡಿಯಂತೆಯೂ, ಶುದ್ಧವಾದ ಸ್ಫಟಿಕದಂತೆ ನಿರ್ಮಲವಾಗಿಯೂ, ಸುಂದರವಾಗಿಯೂ ಇದ್ದಿತು. ಇಂತಹ ಎದೆಯ ಎಡಭಾಗದಲ್ಲಿ ಸುಂದರಾವಯವಗಳಿಂದಲೂ, ಮಂದ ಹಾಸಯುಕ್ತವಾದ ಮುಖದಿಂದಲೂ ಸ್ತ್ರೀ ಸೌಂದರ್ಯದಿಂದಲೂ ಬೆಳಗುತ್ತಿರುವ ತನ್ನ ಪ್ರತಿಬಿಂಬವನ್ನು ಪಾರ್ವತಿಯು ನೋಡಿದಳು.

೧೧೭. ಆಗ ಪಾರ್ವತಿಗೆ ಹೀಗೆ ಭ್ರಾಂತಿಜ್ಞಾನವುಂಟಾಯಿತು—ಶಂಕರನು ನನ್ನೊಡನೆ ಪ್ರತಿಜ್ಞೆಮಾಡಿದ್ದರೂ ವಕ್ರದೃಷ್ಟಿಯಿಂದ ನನ್ನನ್ನೇ ನೋಡುತ್ತಲಿರುವ ಈ ಬೇರೊಬ್ಬ ಸ್ತ್ರೀಯನ್ನು ಮೋಸದಿಂದ ತನ್ನ ಶರೀರದಲ್ಲಿಟ್ಟುಕೊಂಡಿರುವನೇ ?

೧೧೮. ಈ ರೀತಿಯಾದ ತಪ್ಪುತಿಳಿವಳಿಕೆಯಿಂದ ಉಂಟಾದ ಕೋಪದಿಂದ ಹುಬ್ಬುಗಂಟಿಕ್ಕಿ ಅವಳ ಮುಖವು ಮಲಿನವಾಯಿತು. ಇದನ್ನು ನೋಡಿದ ಶಂಕರನ ಮುಖವೂ ಕಾಂತಿಹೀನವಾಯಿತು.

೧೧೯. ಶಂಕರನ ಎದೆಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ, ವಿಷ್ಣುಮಾಯೆಯಿಂದ ಮೋಹಿತಳಾದುದರಿಂದ ಆ ಪ್ರತಿಬಿಂಬವನ್ನು ಬೇರೆ ಸ್ತ್ರೀಯೆಂದು ತಿಳಿದು, ಕೋಪದಿಂದ ಹೊರಟು, ಹಿಂದೆ ತಾನು ಅಡಗಿಕೊಂಡಿದ್ದ ಪರ್ವತದ ಶಿಖರವನ್ನು ಪ್ರವೇಶಿಸಿದಳು.

ಅಪಹ್ನುತಂ ಗಿರೇಃ ಶೃಂಗಂ ಮಾನಾದ್ರೋಷಾದ್ವಿವೇಶ ಹ
ಅಥ ತಾಂ ಮಾರ್ಗಮಾಣಸ್ತು ಶಂಕರೋ ವಿರಹಾಕುಲಃ ॥ ೧೨೦ ॥

ಚಿರಾದಪಶ್ಯತ್ತಾಂ ದೇವೀಮಾಸಸಾದ ತತೋ ಹರಃ ।
ತಾಮಾಸಾದ್ಯ ಮಹಾದೇವೋ ವಿವರ್ಣವದನಾಂ ಪ್ರಿಯಾಂ ॥ ೧೨೧ ॥

ಉವಾಚ ರೋಷಣೇ ಹೇತುಂ ಜ್ಞಾತುಮಿಚ್ಛುರ್ಯಥಾತಥಂ ।

॥ ಈಶ್ವರ ಉವಾಚ ॥

ಕಮರ್ಥಂ ತ್ವಂ ವರಾರೋಹೇ ಮಹ್ಯಂ ಕುಪ್ಯಸಿ ಕೋಪನೇ ॥ ೧೨೨ ॥

ರೋಷಹೇತುಮಹಂ ವಕ್ತುಂ ತವೇಚ್ಛಾಮೀಹ ವಲ್ಲಭೇ ।
ನ ತುಭ್ಯಮುಪರಾಧ್ಯಾಮಿ ವಾಚಾ ವಾ ಮನಸಾ ಧವಾ ॥ ೧೨೩ ॥

ಕಾಯೇನ ವಾ ಕಥಂ ಕೋಪಂ ಕರ್ತುಮರ್ಹಸಿ ಭಾಮಿನಿ ।

॥ ದೇವ್ಯುವಾಚ ॥

ಸಮಯೇನ ಮಯಾ ಪೂರ್ವಂ ತಥಾ ಸಂಪ್ರಾರ್ಥಿತೋ ಭವಾನ್ ॥೧೨೪॥

೧೨೦-೧೨೧. ಇತ್ತ ಶಂಕರನು ಪತ್ನೀವಿರಹದಿಂದ ಪಾರ್ವತಿಯನ್ನು ಹುಡುಕುತ್ತಾ ಬಹಳ ಕಾಲದ ಮೇಲೆ ಅವಳು ಆ ಶಿಖರದಲ್ಲಿ ಅಡಗಿ ಕುಳಿತಿರುವುದನ್ನು ಕಂಡು, ಅವಳ ಬಳಿಗೆ ಬಂದು ಕೋಪದಿಂದ ಮಲಿನವಾದ ಮುಖವುಳ್ಳ ತನ್ನ ಪ್ರಿಯೆಯನ್ನು ಕುರಿತು, ಅವಳ ಸಿಟ್ಟಿಗೆ ಕಾರಣವನ್ನು ತಿಳಿಯಲುದ್ದೇಶದಿಂದ ಹೀಗೆ ಕೇಳಿದನು.

೧೨೨-೧೨೩. ಈಶ್ವರನು ಕೇಳಿದನು—ಓ ಸುಂದರಿ, ಕೋಪಿಸಿಕೊಳ್ಳುವುದು ಸ್ತ್ರೀ ಸ್ವಭಾವವಷ್ಟೆ? ಆದರೂ ಈಗ ನೀನು ನನ್ನಲ್ಲಿ ಏತಕ್ಕಾಗಿ ಕೋಪಗೊಂಡಿರುವೆ? ಎಲೌ ಪ್ರಿಯೆ, ಅದರ ಕಾರಣವನ್ನು ನನಗೆ ಹೇಳು, ಅದನ್ನು ಕೇಳಲಿಚ್ಛಿಸುವೆನು. ನುಸೋವಾಕ್ಕಾಯಗಳಿಂದಲೂ ನಿನಗೆ ನಾನು ಯಾವ ಅಪರಾಧವನ್ನೂ ಮಾಡಿರುವುದಿಲ್ಲ. ಹೀಗಿದ್ದರೂ ಎಲೈ ಪಾರ್ವತಿಯೇ! ನೀನು ಕೋಪಿಸಿಕೊಳ್ಳಲು ಕಾರಣವೇನು?

೧೨೪-೧೨೬. ದೇವಿಯು ಹೇಳಿದಳು—ಶಂಕರನೇ! ನನ್ನ ಹೊರತು ಇನ್ನಾವ ಸ್ತ್ರೀಯನ್ನೂ ನೀನು ಅಪೇಕ್ಷಿಸಕೂಡದೆಂಬ ನಿಬಂಧನೆಯನ್ನು ಮಾಡಿ, ಅದರಂತೆ

ಕಥಂ ತಂ ಪರಿಹಾಯ ತ್ವಮನ್ಯಾಂ ಭಾರ್ಯಾಂ ಸಮಾಹಸೇ ।
ಪ್ರತ್ಯಕ್ಷೇಣ ಮಯಾ ದೃಷ್ಟಾ ತವ ಹೃದ್ಯಂತರೇ ಹರ ॥ ೧೨೫ ॥

ಚಾರ್ವಂಗೀ ವನಿತಾ ಕಾಚಿತ್ತ್ರೈಯನಿರ್ಯಾತಭಸ್ಮನಿ ।
ಭವಾನ್ ಸರ್ವಜ್ಞಾನಮಯಃ ಸರ್ವಗಃ ಪರಮೇಶ್ವರಃ ॥ ೧೨೬ ॥

ತೋಷಿತೋ ಮೇ ತಪೋವ್ರಾತೈರ್ನತುಷ್ಟಸ್ತ್ವಂ ಮಹೇಶ್ವರ ।
ತಸ್ಮಾದಪಂ ತಪಸ್ತಪ್ತುಂ ಶಶ್ವದ್ಗಂತುಂ ಸಮುತ್ಸಹೇ ॥ ೧೨೭ ॥

ಅನುಜಾನೀಹಿ ಮಾಂ ಶಂಭೋ ಮಾನಿಲಂಬಂ ವೃಥಾ ಕೃಥಾಃ ।
ಇತಿ ಶ್ರುತ್ವಾ ಪಚಸ್ತಸ್ಯಾಃ ಸ್ಮಿತವಿಸ್ತಾರಿತಾನನಃ ॥ ೧೨೮ ॥

ಶಂಕರಃ ಪಾರ್ವತೀಂ ಪ್ರಾಹ ಸಂದಿಗ್ಧಮಿವ ಭಾಮಿನೀಂ ।

॥ ಈಶ್ವರ ಉವಾಚ ॥

ನಾಹಮನ್ಯಾಂ ಸ್ತ್ರಿಯಂ ವೋಢಾ ನಾಪಂ ಸಮಯಭೇದಕಃ ॥ ೧೨೯ ॥

ನಡೆಸಬೇಕೆಂದು ವರವನ್ನು ನಾನು ನಿನ್ನೊಡನೆ ಕೇಳಿಕೊಂಡಿದ್ದೆನಷ್ಟೆ? ಆಗ ನೀನು ಹಾಗೆಯೇ ಆಗಲೆಂದು ಪ್ರತಿಜ್ಞೆ ಮಾಡಿದ್ದರೂ ಈಗ ಅದನ್ನು ಬಿಟ್ಟು, ಮತ್ತೊಬ್ಬ ಪತ್ನಿಯನ್ನು ಹೇಗೆ ಪರಿಗ್ರಹಿಸಿರುವೆ? ಓ ಶಂಕರನೇ! ಹಿಂದೆ ಜಲಾಭಿಷೇಕದಿಂದ ನಿನ್ನ ಎದೆಯು ಭಸ್ಮಲೇಪನವಿಲ್ಲದೆ ಶುದ್ಧವಾಗಿತ್ತು. ಆಗ ಆ ನಿನ್ನ ಎದೆಯ ಮಧ್ಯದಲ್ಲಿ ಸುಂದರಾಂಗಿಯಾದ ಓರ್ವ ಸ್ತ್ರೀಯನ್ನು ನಾನೇ ಪ್ರತ್ಯಕ್ಷವಾಗಿ ನೋಡಿರುವೆನು. ಸರ್ವಜ್ಞನೂ, ವ್ಯಾಪಕನೂ, ಪರಮೇಶ್ವರನೂ ಆದ ನಿನ್ನನ್ನು ಅನೇಕ ವಿಧವಾದ ತಪಸ್ಸುಗಳಿಂದ ನಾನು ಸಂತೋಷಗೊಳಿಸಿರುವೆನು. ಆದರೆ ನೀನು ನನ್ನಲ್ಲಿ ಸಂತುಷ್ಟನಾಗಲಿಲ್ಲ. ಆದುದರಿಂದ ತಿರುಗಿ ನಾನು ತಪಸ್ಸನ್ನಾಚರಿಸಲು ಹೋಗುವೆನು. ಓ ಶಂಭುವೇ, ನನಗನುಮತಿಯನ್ನುಕೊಡು. ವ್ಯರ್ಥವಾಗಿ ಕಾಲ ವಿಳಂಬವನ್ನು ಮಾಡಬೇಡ.

೧೨೮. ದೇವಿಯು ಹೇಳಿದ ಈ ಮಾತುಗಳನ್ನು ಕೇಳಿ, ಶಂಕರನು ಮಂದ ಹಾಸದಿಂದ ಅರಳಿದ ಮುಖವುಳ್ಳವನಾಗಿ, ತುಂಬಾ ಸಂದೇಹಗೊಂಡಿರುವ ಅವಳನ್ನು ಕುರಿತು ಹೀಗೆ ಹೇಳಿದನು.

೧೨೯-೧೩೦. ಈಶ್ವರನು ಹೇಳಿದನು---ಎಲೈ ಮುಗ್ಧೆಯೇ, ನಾನು ಬೇರೆ ಸ್ತ್ರೀಯನ್ನು ಪರಿಗ್ರಹಿಸುವವನಲ್ಲ. ಪ್ರತಿಜ್ಞೆಯನ್ನೂ ಮೀರತಕ್ಕವನಲ್ಲ. ಅಜ್ಞಾನ

ತವ ಮಿಥ್ಯಾ ಮತಿರ್ಜಾತಾ ಮುಗ್ಧೇ ಮೂಢತಯಾಧುನಾ ।
ತ್ವಮಿಚ್ಛಸಿ ಯದಿ ಶ್ರೋತುಂ ತತ್ರ ಹೇತುಂ ಚ ಪಾರ್ವತಿ ॥ ೧೩೦ ॥

ತದಹಂ ಕಥಯೇ ತತ್ತ್ವಂ ಮಾನಂ ಮಾನಿನಿ ಮಾಕೃಥಾಃ ।
ಮಮ ವಕ್ಷಸಿ ವಿಸ್ತೀರ್ಣೇ ದರ್ಪಣಸ್ವಚ್ಛಭಾಸಿನಿ ॥ ೧೩೧ ॥

ತವೈವ ವಪುಷಶ್ಚಾಯಾ ಬಿಂಬಿತಾऽಽಲೋಕಿತಾ ತ್ವಯಾ ।
ಇದಾನೀಮೇವ ಬುಧ್ಯಸ್ವ ತ್ವಾಮೃತೇ ನಾಸ್ತಿ ಸಾ ಮಯಿ ॥ ೧೩೨ ॥

ನಾತ್ರ ಮಾನಸ್ತ್ವಯಾಕಾರ್ಯೋ ಹೃದಯಾಂತರಸಂಸ್ಥಿತೇ ।

॥ ದೇವ್ಯುವಾಚ ॥

ಮಯಿ ಸ್ಥಿತಾಯಾಂ ಛಾಯಾಸ್ತಿ ಮಾಮೃತೇ ನಾಸ್ತಿ ಸಾ ಪುನಃ ॥ ೧೩೩ ॥

ಕಥಮೇತನ್ಮಯಾ ಜ್ಞೇಯಂ ತನ್ಮೇ ವದ ವೃಷಧ್ವಜ ॥

॥ ಈಶ್ವರ ಉವಾಚ ॥

ಗವಾಕ್ಷಾಭ್ಯಂತರೇ ಸ್ಥಿತ್ವಾ ತಜ್ಜಾಲೇನ ಮನೋಹರೇ ॥ ೧೩೪ ॥

ಂದ ನಿನಗೆ ಈಗ ಭ್ರಾಂತಿಯುಂಟಾಗಿರುವುದು. ಎಲೈ ಪಾರ್ವತಿಯೇ! ನನ್ನೆದೆಯಲ್ಲಿ ಸ್ತ್ರೀರೂಪವು ಕಾಣಲು ಕಾರಣವನ್ನು ಕೇಳಲು ನೀನು ಇಚ್ಛಿಸಿದರೆ, ಅದರ ನಿಜಾಂಶವನ್ನು ಹೇಳುವೆನು. ಸುಮ್ಮನೆ ಕೋಪಿಸಿಕೊಳ್ಳಬೇಡ. ಕನ್ನಡಿಯಂತೆ ಸ್ವಚ್ಛವಾದ ಕಾಂತಿಯುಳ್ಳ ನನ್ನ ವಿಶಾಲವಾದ ಎದೆಯಲ್ಲಿ ನಿನ್ನ ಸ್ವರೂಪವೇ ಆಗ ಪ್ರತಿಬಿಂಬಿಸಿದ್ದಿತು. ಅದನ್ನು ನೀನು ನೋಡಿ ಹೀಗೆ ಭ್ರಾಂತಿಪಟ್ಟಿರುವೆ. ಈಗಲೂ ತಿಳಿದುಕೋ, ಅದು ನಿನ್ನ ಪ್ರತಿಬಿಂಬವೇ ಹೊರತು ಬೇರೆ ಸ್ತ್ರೀಯಲ್ಲ. ಹೃದಯ ಮಧ್ಯದಲ್ಲಿರುವ ಈ ಪ್ರತಿಬಿಂಬದ ವಿಷಯದಲ್ಲಿ ವೃಥಾ ನೀನು ಕೋಪಗೊಳ್ಳಬಾರದು.

೧೩೩. ದೇವಿಯು ಹೇಳಿದಳು—ಓ ಶಂಕರನೇ! ನಾನಿರುವಾಗ ನನ್ನೆದುರಿನಲ್ಲಿ ರೂಪವು ಕಾಣಿಸುವುದು. ನಾನಿಲ್ಲದಿರುವಾಗ ಕಾಣಿಸುವುದಿಲ್ಲ. ಅದು ನನ್ನ ಪ್ರತಿಬಿಂಬವೇ ಹೊರತು ಬೇರೆ ಸ್ತ್ರೀಯಲ್ಲವೆಂದು ನಾನು ಹೇಗೆ ತಿಳಿಯಲಿ ?

೧೩೪-೧೩೫. ಈಶ್ವರನು ಹೇಳಿದನು—ಎಲೈ ಮನೋಹರೆಯೆ! ಕಿಟಕಿಯ ಒಳಗೆ ನಿಂತು ಅದರ ಕಂಡಿಯ ಮೂಲಕ ಜಲದಿಂದ ತೊಳೆದ ನನ್ನ ಎದೆಯನ್ನು

ಪಶ್ಯ ತೋಯೌಘನಿರ್ಯಾತಭೂತಿಲೇಪಮುರೋ ಮನು ।
ತಥಾ ತ್ವಂ ಮಂಡಿತಂ ದೇಹಂ ನೀಕ್ಷ್ಯಾದರ್ಶತಲೇ ಪುನಃ ॥ ೧೩೫ ॥

ಮದ್ಧೃದಾಸನ್ನಮಾಸಾದ್ಯ ತಾದೃಕ್ಛಾಯಾಂ ವಿಲೋಕಯ ।
ಯಥಾ ದ್ರಕ್ಷ್ಯಸಿ ದೇಹೇ ಸ್ವಂ ತತ್ಕುರು ತ್ವಂ ತಥಾ ಮನು ॥ ೧೩೬ ॥

ಆಲೋಕಯ ನಿಜಾಂ ಛಾಯಾಂ ತ್ವಾಂ ವಿನಾ ನಾಸ್ತಿ ತತ್ಪುತಃ ।
ತ್ವಮೇವ ಜ್ಞಾಸ್ಯಸಿ ಛಾಯಾಂ ಮದ್ವಕ್ಷಸಿ ಮನೋಹರೇ ॥ ೧೩೭ ॥

ಜ್ಞಾತ್ವಾ ವಿಸೃಜ್ಯ ಮಾನಂ ತು ಮಾಂ ತ್ವಂ ಚಾಪ್ಯುಪಪತ್ಸ್ಯಸಿ ।

॥ ಔರ್ವ ಉವಾಚ ॥

ಏವಮುಕ್ತಾ ಹರೇಣಾಥ ಪಾರ್ವತೀಂದುಕಲಾಭೃತಃ ॥ ೧೩೮ ॥

ತೋಯೈರ್ನಿರ್ಧಾವ್ಯ ಹೃದಯಂ ಸ್ವಾಂ ಛಾಯಾಂ ಪುನರೈಕ್ಷತ ।
ದೃಷ್ಟ್ವಾದರ್ಶತಲೇ ವಕ್ತ್ರಂ ನಿಜಂ ದೇಹಂ ಚ ಪಾರ್ವತೀ ॥ ೧೩೯ ॥

ನೋಡು. ಭಸ್ಮಲೇಪನವಿಲ್ಲದೆ ಸ್ವಚ್ಛವಾಗಿ ಇರುವುದಲ್ಲದೆ, ಅದರಲ್ಲಿ ಯಾವ ಪ್ರತಿಬಿಂಬವೂ ಕಾಣಿಸುವುದಿಲ್ಲ. ಬಳಿಕ ಅಲಂಕೃತವಾದ ಈ ನಿನ್ನ ದೇಹವನ್ನು ಬೇರೊಂದು ಕನ್ನಡಿಯಲ್ಲಿಯೂ ನೋಡು. ಆಮೇಲೆ ಬಂದು ನನ್ನ ಎದೆಯಲ್ಲಿ ನೋಡು. ಅಲ್ಲಿ ಅದೇರೀತಿಯಾದ ಛಾಯೆಯನ್ನು (ಪ್ರತಿಬಿಂಬ) ನೋಡುವೆ.

೧೩೬-೧೩೭. ನಿನ್ನ ರೂಪವನ್ನು ನನ್ನ ಶರೀರದಲ್ಲಿ ಪ್ರತಿಬಿಂಬವಾಗುವಂತೆ ಮಾಡು, ಆಗ ನಿನ್ನ ನೆರಳನ್ನೇ ನೋಡುವೆ, ಅದು ನಿನ್ನ ಪ್ರತಿಬಿಂಬವಲ್ಲದೆ ಬೇರೆಯಲ್ಲ. ಆಗ ನೀನೇ ಮನೋಹರವಾದ ನನ್ನ ಎದೆಯಲ್ಲಿ ನಿನ್ನ ಛಾಯೆಯನ್ನು ನೋಡುವೆ. ಅದು ಛಾಯೆಯೆಂದು ತಿಳಿದಮೇಲೆ, ಕೋಪವನ್ನು ಬಿಟ್ಟು ನನ್ನ ಮಾತು ನಿಜವೆಂದು ತಿಳಿಯುವೆ.

೧೩೮-೧೩೯. ಔರ್ವಮುನಿಯು ಹೇಳಿದನು—ಹೀಗೆ ಶಂಕರನು ಹೇಳಲು, ಪಾರ್ವತಿಯು ಶಂಕರನ ಎದೆಯನ್ನು ಜಲದಿಂದ ತೊಳೆದು, ಅಲ್ಲಿ ತನ್ನ ಪ್ರತಿಬಿಂಬವನ್ನು ನೋಡಿದಳು. ಆಮೇಲೆ ಬೇರೊಂದು ಕನ್ನಡಿಯಲ್ಲಿ ತನ್ನ ಮುಖವನ್ನೂ ಶರೀರವನ್ನೂ ನೋಡಿಕೊಂಡಳು. ಆಮೇಲೆ ತಿರುಗಿ ಶಂಕರನ ಎದೆಯಲ್ಲಿ ತನ್ನ ರೂಪವನ್ನು ನೋಡಿಕೊಂಡಳು ಹೀಗೆ ಅನೇಕಬಾರಿ ಮಾಡಿದಳು.

ಆಲೋಕಯಾಮಾಸ ತದಾ ಶಶ್ವಚ್ಛಂಕರವಕ್ಷಸಿ ।
ಯಥಾ ಸಾ ಕುರುತೇ ದೇವೀ ಕಾಪಟ್ಯಂ ನೇತ್ರವಿಭ್ರಮಂ ॥ ೧೪೦ ॥

ತಥಾ ಸಾ ಕುರುತೇ ಛಾಯಾ ಕರಕಂಪಾದಿಕಂ ಪುನಃ ।
ತತಃ ಪುನರ್ಗವಾಕ್ಷಸ್ಯ ಜಾಲೇ ಸ್ಥಿತ್ವಾ ಹಿಮಾದ್ರಿಜಾ ॥ ೧೪೧ ॥

ತಥಾ ವ್ಯಲೋಕಯಚ್ಛಂಭೋರ್ಹೃದಯಂ ವೀತಭೂತಿಕಂ ।
ತಯಾ ತತ್ರ ತು ಸಾರ್ವತ್ಯಾ ವೃಷಭಧ್ವಜವಕ್ಷಸಿ ॥ ೧೪೨ ॥

ನ ಕಾಪಿ ದೃಷ್ಟಾ ವನಿತಾ ದೃಷ್ಟಂ ಜಾಲಸ್ಯ ಮಂಡಲಂ ।
ಏವಂ ಬಹುವಿಧೈರ್ದೇವೀ ತದೋಪಾಯೈಸ್ತಥೇತರೈಃ ॥ ೧೪೩ ॥

ನಿರ್ಯಾತಸಂಶಯಾ ಭೂತ್ವಾ ಲಜ್ಜಾಂ ಪ್ರಾಪ ವರಾಂಗನಾ ।
ತಾಂ ಲಜ್ಜಿತಾಂ ಗಿರಿಸುತಾಮಿಷದ್ಧೀತಾಮಧೋಮುಖೀಂ ॥ ೧೪೪ ॥

---

೧೪೦. ಆ ದೇವಿಯು ಕೃತ್ರಿಮವಾದ ನೇತ್ರವಿಭ್ರಮ (ಕಣ್ಣು ತಿರುಗಿಸುವುದು) ಮುಂತಾದ ಚೇಷ್ಟೆಗಳನ್ನು ಮಾಡಿದಂತೆಯೇ ಅವಳ ಛಾಯೆಯೂ ಸಹ ನೇತ್ರ ವಿಭ್ರಮ ಕೈ ನಡುಗಿಸುವುದು ಮುಂತಾದ ಚೇಷ್ಟೆಗಳನ್ನು ಮಾಡಿತು.

೧೪೧-೧೪೨. ಆಮೇಲೆ ತಿರುಗಿ ಕಿಟಕಿಯ ಒಳಗೆ ನಿಂತು ಗಿರಿಜೆಯು ಆದರ ಕಂಡಿಯಲ್ಲಿ ಭಸ್ಮಲೇಪನವಿಲ್ಲದೆ ಸ್ವಚ್ಛವಾದ ಶಂಕರನ ಎದೆಯನ್ನು ನೋಡಿದಳು. ಆಗ ಪಾರ್ವತಿಗೆ ಹರನ ಎದೆಯಲ್ಲಿ ಯಾವ ವನಿತೆಯೂ ಕಾಣಿಸಲಿಲ್ಲ. ಕಿಟಕಿಯ ಪ್ರತಿಬಿಂಬವು ಮಾತ್ರ ಕಾಣಿಸಿತು.

೧೪೩. ಹೀಗೆ ಅನೇಕವಿಧವಾದ ಉಪಾಯಗಳಿಂದ ಪರೀಕ್ಷಿಸಿ ಸಂಶಯವು ನಿವಾರಣೆಯಾಗಲು, ಉತ್ತಮಸ್ತ್ರೀಯಾದ ಆ ಪಾರ್ವತಿಯು ತನ್ನ ತಪ್ಪು ತಿಳುವಳಿಕೆಗಾಗಿ ತುಂಬಾ ಲಜ್ಜೆಗೊಂಡಳು.

೧೪೪. ಲಜ್ಜೆಯಿಂದ ಸ್ವಲ್ಪ ಹೆದರಿ ಮುಖವನ್ನು ಬಗ್ಗಿಸಿ ನಿಂತಿರುವ ಗಿರಿಜೆಯನ್ನು ಶಂಕರನು ತನ್ನ ಕೈಗಳಿಂದ ಆಲಿಂಗಿಸಿಕೊಂಡು, ಅವಳ ಮುಖವನ್ನು ಚುಂಬಿಸಿದನು.

ಶಂಭುರಾಲಿಂಗ್ಯ ಪಾಣಿಭ್ಯಾಂ ಮುಖಂ ಚಾಸ್ಯಾಶ್ಚುಚುಂಬ ಚ ।
ಸ ತಾಮಾಪ ಮಹಾದೇವೋ ದೇವೀಮಾಶ್ವಾಸಯನ್ಮುಹುಃ ॥ ೧೪೫ ॥

ಮಾ ವ್ರೀಡಸ್ವ ಮಹಾಭಾಗೇ ಭ್ರಾಂತಿಃ ಕಸ್ಯ ನ ಜಾಯತೇ ।
ಮಾನಸ್ತ್ವಯಿ ವರಸ್ತ್ರೀಭಿಃ ಕಾರ್ಯಃ ಪ್ರೇಮಕರೋ ಯತಃ ॥ ೧೪೬ ॥

ತ್ವಯಾಪಿ ವಿರಲಃ ಕಾರ್ಯೋ ಮಾನೋ ದೇವಿ ನ ಸರ್ವದಾ ।
ಇತ್ಯುಕ್ತಾ ದೇವದೇವೇನ ಮೈನಾಕಸಹಜಾಂಬಿಕಾ ॥ ೧೪೭ ॥

ಶಂಕರಂ ಪ್ರಣಯಾತ್ಪ್ರಾಹ ಸೂನೃತಂ ಮಧುರಂ ವಚಃ ।

॥ ದೇವ್ಯುವಾಚ ॥

ಯಥಾ ತವಾಹಂ ಸತತಂ ಛಾಯೇವಾನುಗತಾ ಹರ ॥ ೧೪೯ ॥

ಭವೇಯಂ ಸಾಹಚರ್ಯೇಣ ತಥಾ ಮಾಂ ಕರ್ತುಮರ್ಹಸಿ ।
ಸರ್ವಗಾತ್ರೇಣಸಂಸ್ಪರ್ಶಂ ನಿತ್ಯಾಲಿಂಗನವಿಭ್ರಮಂ ॥ ೧೪೯ ॥

೧೪೫-೧೪೬. ಮತ್ತು ಆ ಪಾರ್ವತಿಯನ್ನು ಸಮಾಧಾನಗೊಳಿಸಲು ಹರನು ಹೀಗೆ ಹೇಳಿದನು:—ಎಲೈ ಭಾಗ್ಯಶಾಲಿನಿಯೇ! ಲಜ್ಜೆಗೊಳ್ಳಬೇಡ. ಭ್ರಾಂತಿಯು ಯಾರಿಗೆ ಆಗುವುದಿಲ್ಲ. ಸಾಧಾರಣವಾಗಿ ಎಲ್ಲರಿಗೂ ಆಗಿಯೇ ಆಗುವುದು. ಎಲೌ ದೇವಿಯೇ! ಉತ್ತಮ ಸ್ತ್ರೀಯರು ಕೋಪವನ್ನು ಮಾಡಲೇಬೇಕು. ಆ ಕೋಪವು ಪ್ರೇಮವನ್ನು ವೃದ್ಧಿಗೊಳಿಸುವುದು. ನೀನೂ ಸಹ ಆಗಾಗ ಕೋಪವನ್ನು ಮಾಡ ಬೇಕು. ಆದರೆ ಯಾವಾಗಲೂ ಮಾಡಬಾರದು.

೧೪೭. ಹೀಗೆ ದೇವದೇವನಾದ ಶಂಕರನು ಹೇಳಲು, ಮೈನಾಕನ ತಂಗಿಯಾದ ಪಾರ್ವತಿಯು ಪ್ರೀತಿಯಿಂದ ಮಧುರವಾದುದೂ, ಸತ್ಯವಾದುದೂ ಆದ ಮಾತನ್ನು ಶಂಕರನಿಗೆ ಹೇಳಿದಳು.

೧೪೮-೧೪೯. ದೇವಿಯು ಹೇಳಿದಳು:—ಓ ಶಂಕರನೇ! ನೆರಳಿನಂತೆ ನಾನು ನಿನ್ನೊಡನೆ ಯಾವಾಗಲೂ ಇರುವಂತೆ ನೀನು ಮಾಡಬೇಕು. ನಿನ್ನ ಎಲ್ಲಾ ಅಂಗ ಗಳೊಡನೆ ಸದಾ ಸೇರಿಹೋಗಿ ನಿತ್ಯವಾದ ಆಲಿಂಗನದ ವಿಲಾಸವನ್ನು ಅನುಭವಿಸಲು ಇಚ್ಛಿಸುವೆನು. ಈ ಇಷ್ಟವನ್ನು ನೀನು ನೆರವೇರಿಸಿಕೊಡಬೇಕು.

ಅಹಮಿಚ್ಛಾಮಿ ಭವತಸ್ತತ್ತ್ವಂ ಚೇತ್ಕರ್ತುಮರ್ಹಸಿ ।

॥ ಶ್ರೀ ಭಗವಾನುವಾಚ ॥

ರೋಚತೇ ತನ್ಮಹ್ಯಮಪಿ ಯತ್ತ್ವಮಿಚ್ಛಸಿ ಭಾಮಿನಿ ॥ ೧೫೦ ॥

ತತ್ಪ್ರೋಪಾಯಮಹಂ ವಕ್ಷ್ಯೇ ಯದಿ ಶಕ್ನೋಷಿ ತತ್ಕುರು ।
ಅರ್ಧಂ ಮಮ ಗೃಹಾಣ ತ್ವಂ ಶರೀರಸ್ಯ ಮನೋಹರೇ ॥ ೧೫೧ ॥

ಅರ್ಧಂ ಭವತು ಮೇ ನಾರೀ ತಥೈವಾರ್ಧಂ ಪುಮಾನಿತಿ ।
ಯದಿ ತ್ವಂ ನಹಿ ಶಕ್ನೋಷಿ ಕರ್ತುಂ ತನ್ಮೇ ಧೃತಿರ್ವಿಶಂ ॥ ೧೫೨ ॥

ತದಾಹಂ ತೇ ಹರಿಷ್ಯಾಮಿ ಶರೀರಾರ್ಧಂ ವರಾನನೇ ।
ತವೈವಾರ್ಧಂ ತಥಾ ನಾರೀ ಹ್ಯರ್ಧಂ ಭವತು ಪೂರುಷಃ ॥ ೧೫೩ ॥

ವಿದ್ಯತೇ ತತ್ರ ಶಕ್ತಿರ್ಮೇ ತ್ವಮನುಜ್ಞಾತುಮರ್ಹಸಿ ।

॥ ದೇವ್ಯುವಾಚ ॥

ತವೈವಾಹಂ ಹರಿಷ್ಯಾಮಿ ಶರೀರಾರ್ಧಂ ವೃಷಧ್ವಜ ॥ ೧೫೪ ॥

೧೫೦-೧೫೩. ಭಗವಂತನಾದ ಶಂಕರನು ಹೇಳಿದನು:—ಎಲೈ ಪ್ರಿಯಳೇ! ನೀನು ಅಪೇಕ್ಷಿಸುವಂತಹುದು ನನಗೂ ಇಷ್ಟವಾದುದೇ. ಅದು ಸಿದ್ಧಿಸಲು ಒಂದು ಉಪಾಯವನ್ನು ಹೇಳುವೆನು, ಸಾಧ್ಯವಾದರೆ ಮಾಡು. ಎಲ್ಲೆ ಮನೋಹರಿಯೇ! ನನ್ನ ಶರೀರದ ಅರ್ಧವನ್ನು ನೀನು ಪರಿಗ್ರಹಿಸು. ನನ್ನ ಶರೀರವು ಅರ್ಧಪುರುಷನೂ ಅರ್ಧಸ್ತ್ರೀಯೂ ಆಗಲಿ. ಎಲೌ ಸುಂದರಿ! ನನ್ನ ಅರ್ಧಶರೀರವನ್ನು ಸ್ವೀಕರಿಸಲು ನಿನಗೆ ಸಾಧ್ಯವಿಲ್ಲದಿದ್ದರೆ ನಾನೇ ನಿನ್ನ ಅರ್ಧಶರೀರವನ್ನು ಸ್ವೀಕರಿಸುವೆನು. ನಿನ್ನ ಅರ್ಧಶರೀರವೇ ಸ್ತ್ರೀಯಾಗಲಿ ಅರ್ಧಶರೀರವು ಪುರುಷನಾಗಲಿ ಆರೀತಿ ನಿನ್ನ ಅರ್ಧ ಶರೀರವನ್ನು ಸ್ವೀಕರಿಸಲು ನನಗೆ ಶಕ್ತಿ ಇರುವುದು. ನೀನು ಒಪ್ಪಿಗೆಯನ್ನು ಕೊಡು.

೧೫೪—೧೫೬. ದೇವಿಯು ಹೇಳಿದಳು:—ಓ ಶಂಕರನೇ! ನಾನೇ ನಿನ್ನ ಅರ್ಧಶರೀರವನ್ನು ಸ್ವೀಕರಿಸುವೆನು. ಆದರೇ ನಾವೀರ್ವರೂ ಒಂದೇ ಶರೀರವುಳ್ಳವರಾಗಿರಬೇಕು. ಇದನ್ನು ನೀನೂ ಅಪೇಕ್ಷಿಸುವೆಯಷ್ಟೆ. ನಾನೂ ನಿನ್ನ ಅರ್ಧಶರೀರ

ಕಿಂ ತ್ವಹಂ ತ್ವೀಕಮಿಚ್ಛಾಮಿ ತಚ್ಚೈತ್ತ್ವಂ ಕರ್ತುಮಿಚ್ಛಸಿ ।
ಯದಾಹಮರ್ಧಂ ಭವತೋ ಭೂತ್ವಾ ತಿಷ್ಠಾಮಿ ತಾವತಾ ॥ ೧೫೫ ॥

ತ್ಯಜಾಮ್ಯಹಂ ಯದಾ ತೇಽರ್ಧಂ ಸಂಪೂರ್ಣಂ ಸ್ಯಾತ್ತದಾದ್ವಯಂ ।
ಇತ್ಯರ್ಧಭಾಗಹರಣಂ ಭವೇದ್ಯದಿ ಯಥೇಪ್ಸಿತಂ ॥ ೧೫೬ ॥

ತವೈವಾಹಂ ತದಾ ಶಂಭೋ ಶರೀರಾರ್ಧಂ ಹರಾಮ್ಯಹಂ ।

॥ ಈಶ್ವರ ಉವಾಚ ॥

ಏವಮಸ್ತು ಭವೇನ್ನಿತ್ಯಂ ಯಥಾರ್ಧಂ ಹರ್ತುಮರ್ಹಸಿ ॥ ೧೫೭ ॥

ಶರೀರಸ್ಯಾರ್ಧಹರಣಂ ಭೂಯಸ್ತವ ಯಥೇಪ್ಸಿತಂ ।

॥ ಔರ್ವ ಉವಾಚ ॥

ಅಥ ಗೌರೀ ತದಾ ಪೂರ್ವಮನುಭೂತಂ ತಪಃಸ್ಥಿತೌ ॥ ೧೫೮ ॥

ಯೋಗನಿದ್ರಾಸ್ವರೂಪಂ ತದಾತ್ಮನೋಽಚಿಂತಯದ್ಧಿಯಾ ।
ಹರಂ ಪ್ರಣಮ್ಯ ಪ್ರಥಮಂ ಬ್ರಹ್ಮಾಣಂ ಚ ತತಃ ಪರಂ ॥ ೧೫೯ ॥

ವಾಗಲು ನಿನ್ನ ಅರ್ಧಶರೀರವನ್ನು ತೆಗೆದುಹಾಕುವೆನು. ಆಗ ಸಂಪೂರ್ಣವಾಗಿ ನಮ್ಮಿರ್ವರ ಶರೀರವೂ ಒಂದಾಗುವುದು. ಹೀಗೆ ನನ್ನ ಶರೀರದ ಅರ್ಧವನ್ನು ತೆಗೆದುಹಾಕುವುದು ನಿನಗೆ ಇಷ್ಟವಾದರೆ ನಾನೇ ನಿನ್ನ ಅರ್ಧಶರೀರವನ್ನು ಸ್ವೀಕರಿಸುವೆನು.

೧೫೬. ಈಶ್ವರನು ಹೇಳಿದನು:—ಎಲೌ ಪಾರ್ವತಿಯೇ ! ಹಾಗೆಯೇ ಆಗಲಿ. ನಿನ್ನ ಇಷ್ಟದಂತೆ ನೀನೇ ನನ್ನ ಶರೀರದ ಅರ್ಧವನ್ನು ಸ್ವೀಕರಿಸು.

೧೫೯. ಔರ್ವಮುನಿಯು ಹೇಳಿದನು:—ಅನಂತರ ಗೌರಿಯು ಆಗ ತಾನು ತಪಸ್ಸಿನಲ್ಲಿ ನೋಡಿದ ತನ್ನ ಯೋಗನಿದ್ರಾ (ಆದಿಮಾಯೆಯ) ರೂಪವನ್ನು ಮನಸ್ಸಿನಲ್ಲಿ ಚಿಂತಿಸಿದಳು.

೧೫೯-೧೬೦. ಮೊದಲು ಆ ಪಾರ್ವತಿಯು ಶಂಕರನನ್ನು ವಂದಿಸಿ, ಅನಂತರ ಬ್ರಹ್ಮನೂ, ಜಗದೊಡೆಯನೂ ಪಾಪನಾಶಕನೂ ಆದ ನಾರಾಯಣನೂ, ಇವರೆಲ್ಲರೂ

ತತಸ್ತ್ರಿಜಗತಾಂ ನಾಥಂ ಹರಿಂ ನಾರಾಯಣಂ ಪ್ರಭುಂ।
ಚಿಂತಯಿತ್ವಾ ತದಾ ತೇಷಾಮೇಕತಾಂ ಚ ಜಗನ್ಮಯಿಾ ॥ ೧೬೦ ॥

ಆತ್ಮಾನಂ ಯೋಗನಿದ್ರಾಂ ಚ ಚಿಂತಯಿತ್ವಾ ತಪಸ್ವಿನೀ।
ದಕ್ಷಿಣೇ ಸ್ವಶರೀರಸ್ಯ ಭಾಗಾರ್ಧಂ ಶಶಭೃದ್ಭೃತಃ ॥ ೧೬೧ ॥

ಶರೀರಸ್ಯ ತದಾ ವಾಮಮುತಿಪ್ರೇಮ್ಣಾ ನಿಜಂ ಹರೇ।
ಹರೋಽಪಿ ಸ್ವಶರೀರಾರ್ಧಂ ಗೌರೀಕಾಯೇ ತದಾ ಸ್ವಯಂ ॥ ೧೬೨ ॥

ಪ್ರೇಮ್ಣಾ ನ್ಯವೇಶಯತ್ತಸ್ಯಾಶ್ಚಿಕೀರ್ಷುಃ ಪ್ರಿಯಮದ್ಭುತಂ।
ಅಥ ಸ್ಥಿತ್ವಾ ತದಾ ಭರ್ಗಃ ಕಾಲ್ಯಾ ಸಹ ಚಿರಂ ತದಾ ॥ ೧೬೩ ॥

ಪರಿತ್ಯಜ್ಯ ಶರೀರಾರ್ಧಂ ಪೃಥಗೇವ ಬಭೌ ರುಚಾ।
ಕಾಲೀ ಭೂತ್ವಾ ಸ್ವರ್ಣಗೌರೀ ಶರೀರಾರ್ಧಂ ಚ ಶಂಕರಂ ॥ ೧೬೪ ॥

ಪ್ರಾಪ್ತನೋದಾ ತದಾತ್ಮಾನಂ ಸಂತುಷ್ಟಾ ಚ ಜಗನ್ಮಯಿಾ।
ಏವಂ ಯದಾ ಶರೀರಾರ್ಧಮಾದಾಯ ಪರಮೇಶ್ವರೀ ॥ ೧೬೫ ॥

ಒಂದೇ ಸ್ವರೂಪವೆಂಬುದನ್ನೂ ಚಿಂತಿಸಿದಳು.

೧೬೦-೧೬೨. ಜಗದ್ರೂಪವೂ, ಸುಹಾಮಾಯೆಯೂ ಆದ ತನ್ನ ಸ್ವರೂಪವನ್ನೂ ಚಿಂತಿಸಿ, ತಪಸ್ವಿನಿಯಾದ ಆ ಪಾರ್ವತಿಯು ತನ್ನ ಶರೀರದ ಬಲಗಡೆಯ ಅರ್ಧಭಾಗವನ್ನು ಶಂಕರನ ವಾಮಭಾಗದಲ್ಲಿ ಸೇರಿಸಿದಳು. ಶಂಕರನೂ ಸಹ ತನ್ನ ಅರ್ಧಶರೀರವನ್ನು ಪಾರ್ವತಿಗೆ ಪ್ರಿಯವನ್ನು ಮಾಡಲಿಚ್ಛೆಯಿಂದ ತಾನೇ ಅವಳ ಶರೀರದಲ್ಲಿ ಸೇರಿಸಿದನು.

೧೬೩. ಬಳಿಕ ಶಂಕರನು ತನ್ನ ಅರ್ಧಶರೀರವನ್ನು ತ್ಯಜಿಸಿ, ಕಾಳಿಕಾದೇವಿಯೊಡಗೂಡಿ ಬಹುಕಾಲದವರಿಗೂ ಶೋಭಿಸುತ್ತಿದ್ದನು.

೧೬೪. ಶಂಕರನ ಪತ್ನಿಯಾದ ಕಾಳಿಯು ಈರೀತಿ ಸ್ವರ್ಣಗೌರಿ (ಚಿನ್ನದಂತೆ ಹಳದಿವರ್ಣದವಳು) ಯೂ, ಶಂಕರನ ಅರ್ಧಾಂಗಿಯೂ ಆಗಿ ತುಂಬಾ ಪ್ರೀತಿಯಿಂದ ಹರ್ಷಗೊಂಡಳು.

೧೬೫. ಹೀಗೆ ಮಂಗಳಕರಳಾದ ಪಾರ್ವತಿಯು ಶಂಕರನ ಅರ್ಧಶರೀರವನ್ನು ಪರಿಗ್ರಹಿಸಿ ಅರ್ಧಾಂಗಿಯಾಗಿರುತ್ತಾ ತುಂಬಾ ಪ್ರಕಾಶಿಸಿದಳು.

ಪರಸ್ಯ ತಿಷ್ಠತಿ ತದಾ ರಾಜತೇೀತೀವ ಶೋಭನಾ ।
ಅರ್ಧಂ ಧಮಿಲ್ಲಸಂಯುಕ್ತಂ ಜಟಾಜೂಟಾರ್ಧಸಂಯುತಂ ॥ ೧೬೬ ॥

ಏಕಸ್ಮಿನ್ ಶ್ರವಣೇ ಭೋೀಗೀ ಭಾಗೇ ಜಾಂಬೂನದಾರ್ಚಿತಂ ।
ಕುಂಡಲಂ ಶ್ರವಣೇೀsನ್ಯಸ್ಮಿನ್ ವೀರ್ಹೀ ತಸ್ಯಾ ವ್ಯರಾಜತ ॥ ೧೬೭ ॥

ಅರ್ಧಂ ಮೃಗಾಕ್ಷಿ ಚಾನ್ಯಾರ್ಧಂ ವೃಷಭಾಕ್ಷಿ ವ್ಯಜಾಯತ ।
ಅರ್ಧಂ ಸ್ಥೂಲಂ ನಸಂ ಚಾರು ತಿಲಪುಷ್ಪನಸಂ ಪರಂ ॥ ೧೬೮ ॥

ದೀರ್ಘಶ್ಮಶ್ರು ತಥೈವಾರ್ಧಮರ್ಧಂ ಶ್ಮಶ್ರುವಿವರ್ಜಿತಂ ।
ಆರಕ್ತಚಾರುದಶನಂ ರಕ್ತೌಷ್ಠಮೇಕತಸ್ತಥಾ ॥ ೧೬೯ ॥

ಅಪರಂ ಶುಕ್ಲವಿಪುಲಂ ದೀರ್ಘಾಕೃತಿರದಂ ಪರಂ ।
ಅರ್ಧನೀಲಗಲಂ ಚಾರ್ಧಮಪರಂ ಹಾರಸಂಯುತಂ ॥ ೧೭೦ ॥

೧೬೬-೧೬೭. ಆಗ ಪಾರ್ವತಿಯ ಶಿರಸ್ಸು ಅರ್ಧ ಕೇಶಪಾಶಗಳುಳ್ಳದುದೂ, ಅರ್ಧ ಜಡೆಗಳುಳ್ಳದುದೂ ಆಗಿದ್ದಿತು. ಒಂದು ಕಿವಿಯಲ್ಲಿ ಸರ್ಪವೇ ಕುಂಡಲವಾಗಿದ್ದಿತು, ಮತ್ತೊಂದು ಕಿವಿಯಲ್ಲಿ ಕುಂಡಲವಿದ್ದಿತು.

೧೬೮. ಮುಖದ ಅರ್ಧಭಾಗದಲ್ಲಿ ಜಿಂಕೆಯಂತೆ ಚಂಚಲವಾದ ನೋಟವೂ, ಮತ್ತರ್ಧಭಾಗದಲ್ಲಿ ವೃಷಭದಂತೆ ಗಂಭೀರನೋಟವೂ ಇದ್ದಿತು. ಮತ್ತು ನಾಸಿಕದ ಅರ್ಧಭಾಗವು ದಪ್ಪವಾಗಿಯೂ, ಉಳಿದರ್ಧಭಾಗವು ಸುಂದರವಾದ ತಿಲಪುಷ್ಪದಂತೆಯೂ ಇದ್ದಿತು.

೧೬೯. ಮತ್ತು ಮುಖದ ಅರ್ಧಭಾಗವು ನೀಳವಾದ ಗಡ್ಡದಿಂದಲೂ, ಅರ್ಧಭಾಗವು ಕೂದಲಿಲ್ಲದೆ ನುಣುಪಾಗಿಯೂ ಇದ್ದಿತು. ಅರ್ಧಭಾಗದ ಹಲ್ಲುಗಳು ನಸುಗೆಂಪಾಗಿಯೂ ಸುಂದರವಾಗಿಯೂ ಇದ್ದುವು. ಉಳಿದರ್ಧಭಾಗದಲ್ಲಿ ಹಲ್ಲುಗಳು ಉದ್ದವಾಗಿದ್ದವು. ಒಂದುಕಡೆ ಕೆಂಪಾದ ತುಟಿಯೂ, ಮತ್ತೊಂದುಕಡೆ ಬಿಳ್ಳಗೂ. ದಪ್ಪನಾಗಿಯೂ ಇರುವ ತುಟಿಯೂ ಇದ್ದವು.

೧೭೦-೧೭೧. ಅರ್ಧಕಂಠವು ನೀಲವರ್ಣವಾದುದು, ಇನ್ನರ್ಧವು ಹಾರದಿಂದ ಶೋಭಿಸುವುದು ಮತ್ತು ಗೌರವರ್ಣವಾದುದು, ಒಂದರ್ಧದಲ್ಲಿ ಕಡಗ, ಒಂಕೆ

ಅರ್ಧಂ ಕೆಂಕಣಕೇಯೂರಯುಕ್ತಬಾಹು ತಥಾ ಪರಂ ।
ನಾಗಕೇಯೂರಸಂಯುಕ್ತಂ ಸ್ಥೂಲಬಾಹು ನಿರೂರ್ಮಿಕಂ ॥ ೧೭೧ ॥

ಅರ್ಧಂ ವಿಲೋಲಸುಭುಜಂ ಕರಿಹಸ್ತಭುಜಂ ಪರಂ ।
ಏಕತ್ರ ಸೋರ್ಮಿಕಾ ಶಾಖಾ ಕರಸ್ಯಾನ್ಯತ್ರ ತಾಂ ವಿನಾ ॥ ೧೭೨ ॥

ಏಕಸ್ತನಂ ತು ಹೃದಯಂ ರೋಮಾವಳ್ಯರ್ಧಸಂಯುತಂ ।
ರಂಭಾಸ್ತಂಭಸಮಾನೋರು ಸುಪಾರ್ಷ್ಣಿಮೃದುಪಾದಕಂ ॥ ೧೭೩ ॥

ಏಕಂ ತಥಾ ಪರಂ ಸ್ಥೂಲಂ ಸಂಹತೋರು ಪದಾಂಬುಜಂ ।
ಏಕಂ ಚಾರು ಮೃದು ಸ್ಥೂಲಜಘನಂ ಸುಮನೋಹರಂ ॥ ೧೭೪ ॥

ತಥಾಪರಂ ದೃಢಕಟಿಸಂಹತೋರ್ಧ್ವಪದಾನ್ವಯಂ ।
ಏಕಂ ವೈಯಾಘ್ರಚರ್ಮೌಘಯುಕ್ತಂ ಭೂತಿವಿಲೇಪನಂ ॥ ೧೭೫ ॥

ಮುಂತಾದವುಗಳಿಂದ ಅಲಂಕೃತವಾದ ಬಾಹುವಿದ್ದಿತು. ಇನ್ನೊಂದರ್ಧದಲ್ಲಿ ಸರ್ಪವೇ ಒಂಕೆಯಾಗಿ ಉಳ್ಳ ನೀಳವೂ, ದಪ್ಪವೂ, ಕಡಗವಿಲ್ಲದುದೂ ಆದ ಬಾಹುವಿದ್ದಿತು.

೧೭೨. ಅರ್ಧಭಾಗವು ಚಂಚಲವಾದ ಭುಜವುಳ್ಳದುದು. ಅರ್ಧಭಾಗವು ಆನೆಯ ಸೊಂಡಲಿನಂತಹ ಭುಜವುಳ್ಳದುದು. ಒಂದು ಭಾಗದ ಕೈಬೆರಳಿನಲ್ಲಿ ಉಂಗುರಗಳಿದ್ದವು. ಇನ್ನೊಂದರಲ್ಲಿ ಉಂಗುರಗಳೇ ಇರಲಿಲ್ಲ.

೧೭೩. ಎದೆಯ ಒಂದು ಭಾಗದಲ್ಲಿ ಮಾತ್ರ ಒಂದು ಸ್ತನವಿದ್ದಿತು. ಉಳಿದರ್ಧ ಭಾಗವು ರೋಮಗಳಿಂದ ತುಂಬಿದ್ದಿತು. ಅರ್ಧಭಾಗದಲ್ಲಿ ಬಾಳೆಯಕಂಬದಂತೆ ಇರುವ ತೊಡೆಯೂ, ಸುಂದರವಾದ ಹಿಮ್ಮಡಿಯೂ, ಮೃದುವಾದ ಹೆಜ್ಜೆಯೂ, ಇನ್ನೊಂದು ಭಾಗದಲ್ಲಿ ಸ್ಥೂಲವೂ, ಒಂದಕ್ಕೊಂದು ಸೇರಿರುವುದೂ ಆದ ತೊಡೆಗಳೂ, ದಪ್ಪವಾದ ಮತ್ತು ದೊಡ್ಡದಾದ ಹೆಜ್ಜೆಗಳೂ ಇದ್ದವು.

೧೭೪. ಒಂದು ಭಾಗದ ಜಘನಪ್ರದೇಶವು ಸುಂದರವೂ, ಮೃದುವೂ, ಸ್ಥೂಲವೂ, ಮನೋಹರವೂ, ಇನ್ನೊಂದು ಭಾಗದ ಜಘನವು ದೃಢವಾಗಿಯೂ, ಒರಟಾಗಿಯೂ ಇದ್ದವು.

೧೭೫-೧೭೬. ಅರ್ಧಭಾಗವು ಹುಲಿಯಚರ್ಮವನ್ನುಟ್ಟು ಭಸ್ಮದ ಲೇಪನದಿಂದ ಶೋಭಿಸುತ್ತಲಿದ್ದಿತು. ಉಳಿದರ್ಧಭಾಗವು ಮೃದುವಾದ ರೇಶ್ಮೆಯ ವಸ್ತ್ರ

ಅಪರಂ ಮೃದುಕೌಶೇಯವಸನಂ ಚಂದನೋಕ್ಷಿತಂ ॥ ೧೭೬ ॥

ಏವಮರ್ಧಂ ತಥಾ ಜಾತಂ ಯೋಷಿಲ್ಲಕ್ಷಣಸಂಯುತಂ ।
ಅಪರಂ ಬಲವದ್ಭೂರಿ ಸುಗೂಢಂ ಪುರುಷಾಕೃತಿ ॥ ೧೭೭ ॥

ಏವಮರ್ಧಂ ಸ್ಮರರಿಪೋರ್ಜಹಾರ ಗಿರಿಜಾ ಸತೀ ।
ಹಿತಾಯ ಸರ್ವಜಗತಾಂ ಕಾಲಿಕಾ ಕಾಲಿಕೋಪಮಾ ॥ ೧೭೮ ॥

ತಸ್ಯಾಃ ಶರೀರಂ ರಾಜೇಂದ್ರ ಪರತನ್ವರ್ಧಸಂಯುತಂ ।
ಯೇನೋಪಮೇಯಂ ತನ್ನಾಸ್ತಿ ಮಾರ್ಗಿತುಂ ಭುವನತ್ರಯೇ ॥ ೧೭೯ ॥

ಸಂತಾನಃ ಪಾರಿಜಾತೋ ವಾ ಏಕಾಂತವಿಶದಸ್ತರುಃ ।
ಅನೋಘಯಾ ಯಥಾ ವಲ್ಯಾ ತೌ ಚಾಪಿ ಯಯತುರ್ನ ಹಿ ॥ ೧೮೦ ॥

ವನ್ನುಟ್ಟು ಚಂದನದ ಲೇಪನದಿಂದ ಸುವಾಸಿತವಾಗಿತ್ತು.

೧೭೭. ಈರೀತಿಯಾಗಿ ಶಂಕರನ ಅರ್ಧಶರೀರವು ಕೋಮಲವಾದ ಸ್ತ್ರೀಲಕ್ಷಣಗಳಿಂದ ಕೂಡಿಯೂ, ಉಳಿದರ್ಧಭಾಗವು ಶಕ್ತಿಯುಕ್ತವಾಗಿ ಪುರುಷಾಕಾರದಿಂದ ಕೂಡಿಯೂ ಶೋಭಿಸಿತು.

೧೭೮. ಹೀಗೆ ಪರ್ವತಪುತ್ರಿಯೂ, ಕಾಳಿಕಾದೇವಿಯಂತೆ ಇರುವವಳೂ, ಪತಿವ್ರತೆಯೂ ಆದ ಪಾರ್ವತಿಯು ಜಗತ್ತಿನ ಹಿತಕ್ಕಾಗಿ ಹರನ ಅರ್ಧಶರೀರವನ್ನು ಸ್ವೀಕರಿಸಿದಳು.

೧೭೯. ಎಲೈ ರಾಜೋತ್ತಮನೇ ! ಶಂಕರನ ಅರ್ಧಶರೀರದಿಂದ ಕೂಡಿರುವ ಆ ಪಾರ್ವತಿಯ ಶರೀರಕ್ಕೆ ಉಪಮಾನವು ಮೂರು ಲೋಕಗಳಲ್ಲಿ ಹುಡುಕಿದರೂ ಇಲ್ಲವೇ ಇಲ್ಲ.

೧೮೦. ಅತ್ಯಂತ ನಿರ್ಮಲವಾದ ಸಂತಾನವೃಕ್ಷವಾಗಲೀ ಅಥವಾ ಕಲ್ಪವೃಕ್ಷವಾಗಲೀ ಅಮೂಲ್ಯವಾದ ಲತೆಯೊಡನೆ ಅಕಸ್ಮಾತ್ತಾಗಿ ಸೇರಿದರೂ ಆ ಪಾರ್ವತಿಯ ಶರೀರಕ್ಕೆ ತಕ್ಕ ಉಪಮಾನವನ್ನು ಹೊಂದಲಾರದು.

ಬಹುಧಾ ಚ ಸ್ಮಥಕ್ತ್ವೇನ ತೌ ರೇಮಾತೇ ನರೇಶ್ವರ ।
ಅರ್ಧನಾರೀಶ್ವರೋ ಭೂತ್ವಾ ಸ ತು ರೇಮೇ ಕದಾಚನ ॥ ೧೪೧ ॥

ಇತಿ ಯದ್ಯಪಿ ಭೂತೇಶಃ ಸ್ವಯಂ ಶಕ್ನೋತಿ ಕಾಲಿಕಾಂ ।
ಗೌರೀಂ ಕರ್ತುಂ ತದಾ ಸರ್ವಂ ಭೂತಕಾರಣಕಾರಣಃ ॥ ೧೪೨ ॥

ತಥಾಪಿ ತಾಂ ಗಿರಿಸುತಾಂ ಸಂಯೋಜ್ಯ ವಿವಿಧೈಃ ಪುರಾ ।
ತಪಸ್ಯಯೋಜಯದ್ದೇವಃ ಕ್ರಿಯೋಪಾಯೈರನೇಕಶಃ ॥ ೧೪೩ ॥

ತಪೋನಿರ್ಧೂತಸರ್ವಾಂಗೀಂ ಪಶ್ಚಾದ್ಗೌರೀಮಥಾಕರೋತ್ ।
ಅರ್ಧಂ ಚ ಪ್ರದದೌ ತಸ್ಯೈ ಶರೀರಸ್ಯ ಮಹೇಶ್ವರಃ ॥ ೧೪೪ ॥

ನೈವಾಸ್ಯ ತತ್ತ್ವಂ ಜಾನಂತಿ ಶಕ್ರಾದ್ಯಾಃ ಸಕಲಾಃ ಸುರಾಃ ।
ಶರೀರಾರ್ಧಪ್ರದಾನಸ್ಯ ತಪಸೇ ಯೋಜನಸ್ಯ ಚ ॥ ೧೪೫ ॥

---

೧೪೧. ಆ ಪಾರ್ವತೀಪರಮೇಶ್ವರರು ಅನೇಕವೇಳೆ ಬೇರೆಬೇರೆಯಾಗಿಯೇ ಇದ್ದು ವಿಹರಿಸುತ್ತಲಿದ್ದರು. ಕೆಲವೊಮ್ಮೆ ಅರ್ಧನಾರೀಶ್ವರ ರೂಪದಿಂದ ವಿಹರಿಸುತ್ತಲಿದ್ದರು.

೧೪೨—೧೪೪. ಜಗತ್ತಿಗೆ ಕಾರಣನಾದ ಬ್ರಹ್ಮನಿಗೂ ಕಾರಣನಾದ ಪರಮೇಶ್ವರನು ತಾನೇ ಪಾರ್ವತಿಯನ್ನು ಗೌರವರ್ಣವುಳ್ಳವಳನ್ನಾಗಿ ಮಾಡಲು ಶಕ್ತನು. ಆದರೂ ಆ ದೇವನು ಗಿರಿಜೆಯನ್ನು ಅನೇಕ ಕ್ರಿಯೆ ಮತ್ತು ಉಪಾಯಗಳಿಂದ ತಪಸ್ಸಿನಲ್ಲಿ ನಿಯೋಗಿಸಿ ಆ ತಪಸ್ಸಿನಿಂದ ಅವಳು ಶುದ್ಧವಾದ ಶರೀರವುಳ್ಳವಳಾದಮೇಲೆ ಗೌರಿಯನ್ನಾಗಿ ಮಾಡಿದನು. ತನ್ನ ಅರ್ಧಶರೀರವನ್ನೂ ಅವಳಿಗೆ ಪರಮೇಶ್ವರನು ಕೊಟ್ಟನು.

೧೪೫. ಹೀಗೆ ಶಂಕರನು ಪಾರ್ವತಿಯನ್ನು ತಪಸ್ಸಿನಲ್ಲಿ ನಿಯೋಗಿಸಿದ ಮತ್ತು ಅವಳಿಗೆ ತನ್ನ ಅರ್ಧಶರೀರವನ್ನು ದಾನಮಾಡಿದ ನಿಜಾಂಶವು ಇಂದ್ರನೇ ಮೊದಲಾದ ದೇವತೆಗಳಿಗೂ ತಿಳಿಯದು.

ಏತಸ್ಯ ತತ್ತ್ವಂ ಚಾನಂತಿ ಮಹಾತ್ಮಾನೋ ಮಹಾಬಲಾಃ ।
ನಂದೀ ಭೃಂಗೀ ಮಹಾಕಾಲೋ ವೇತಾಲೋ ಭೈರವಸ್ತಥಾ ॥ ೧೮೬ ॥

ಅಂಗಭೂತಾ ಮಹೇಶಸ್ಯ ವೀತಭೀತಾಸ್ತಪೋಧನಾಃ ।
ಯೇ ಮಾನುಷಶರೀರೇಣ ಪ್ರಾಪಿರೇ ತಪಸೋ ಬಲಾತ್ ॥ ೧೮೭ ॥

ಗಣಾನಾಮಾಧಿಪತ್ಯಂ ತು ತೇ ಜಾನಂತಿ ಪರಂ ಪರಂ ।
ಏವಂ ಸದಾ ತ್ವಯಾ ಯೋಜ್ಯಾಃ ಸಾನುಗಾ ನೃಪಸತ್ತಮ ॥ ೧೮೮ ॥

ವನಿತಾಃ ಸತ್ಕ್ರಿಯೋಪಾಯೈಸ್ತತೋ ಭದ್ರಮವಾಪ್ಸ್ಯಸಿ ।
ಯ ಇದಂ ಶೃಣುಯಾನ್ನಿತ್ಯಮದ್ಭುತಂ ಪುಣ್ಯದಾಯಕಂ ॥ ೧೮೯ ॥

ಶಿವಯೋಃ ಪ್ರೀತಿಕರಣಂ ಶರೀರಾರ್ಧಗ್ರಹಂ ತಥಾ ।
ಗೌರೀತ್ವಸಾಧನಂ ಚೈವ ಕಾಲಿಕಾಯಾಃ ಶುಭಾವಹಂ ॥ ೧೯೦ ॥

೧೮೬—೧೮೭. ಇದರ ನಿಜಾಂಶವನ್ನು ಮಹಾತ್ಮರೂ, ಬಲಿಷ್ಠರೂ, ಶಂಕರನ ಅಂಗಭೂತರೂ, ಭಯರಹಿತರೂ, ತಪಸ್ವಿಗಳೂ ಆದ ನಂದಿಕೇಶ್ವರ, ಭೃಂಗಿ, ಮಹಾಕಾಳ, ಇವರೂ, ತಪಸ್ಸಿನ ಬಲದಿಂದ ಮನುಷ್ಯಶರೀರದಿಂದಲೇ ಗಣನಾಯಕತ್ವವನ್ನು ಪಡೆದ ವೈತಾಳ, ಭೈರವರು ಇವರುಗಳು ಮಾತ್ರ ಶಂಕರನನ್ನು ತಿಳಿಯುವರು.

೧೮೮. ಎಲೈ ರಾಜೋತ್ತಮನೇ ! ನೀನು ಸಹ ಇದೇರೀತಿಯಾಗಿ ನಿನ್ನ ಪರಿವಾರವನ್ನೂ, ಪತ್ನಿಯನ್ನೂ, ಸುತರನ್ನೂ ಸಹ ಒಳ್ಳೆಯ ಕರ್ಮ ಮತ್ತು ಉಪಾಯ ಗಳಿಂದ ಶಿಕ್ಷಿಸು. ಅದರಿಂದ ನಿನಗೆ ಮಂಗಳವಾಗುವುದು.

೧೮೯—೧೯೦. ಅದ್ಭುತವೂ, ಪುಣ್ಯಪ್ರದವೂ, ಪಾರ್ವತೀಪರಮೇಶ್ವರರಿಗೆ ಪ್ರೀತಿಯನ್ನುಂಟುಮಾಡುವಂತಹದೂ, ಮಂಗಳಕರವೂ ಆದ ಈ ಪಾರ್ವತಿಯು ಶಂಕರಾರ್ಧಶರೀರದ ಸ್ವೀಕಾರವನ್ನೂ, ನೀಲವರ್ಣಳಾದ ಅವಳಿಗೆ ಗೌರವರ್ಣವು ಬಂದುದನ್ನೂ, ಕೇಳಿದವನಿಗೆ ಯಾವ ಕಾರ್ಯದಲ್ಲಿಯೂ ವಿಘ್ನವು ಉಂಟಾಗುವುದಿಲ್ಲ. ಅವನು ತುಂಬಾ ಪುಣ್ಯಶಾಲಿಯು. ಅಲ್ಲದೆ ಅವನು ದೀರ್ಘಾಯುವೂ, ಸದಾ

ನ ತಸ್ಯ ವಿಘ್ನಾ ಜಾಯಂತೇ ಸ ಚ ಪುಣ್ಯತಮೋ ಮತಃ ।
ದೀರ್ಘಾಯುಃ ಸ ಸುಖೀ ಭೂಯಾತ್ಪುತ್ರಪೌತ್ರಸಮನ್ವಿತಃ ॥ ೧೯೧ ॥

ಸತತಂ ಪರಿಶೃಣ್ವಾನಃ ಶಿವಯೋಶ್ಚರಿತಂ ಮಹತ್ ।
ಶಿವಲೋಕಮವಾಪ್ನೋತಿ ಸುಚಿರಂ ಶಿವವಲ್ಲಭಃ ॥ ೧೯೨ ॥

॥ ಇತಿ ಶ್ರೀ ಕಾಲಿಕಾಪುರಾಣೇ ಸಪ್ತಚತ್ವಾರಿಂಶೋಽಧ್ಯಾಯಃ ॥

ಸುಖಿಯೂ ಪುತ್ರಪೌತ್ರಾದಿಗಳುಳ್ಳವನೂ ಆಗುವನು. ಪಾರ್ವತೀಪರಮೇಶ್ವರರ ಈ ಮಹತ್ತಾದ ಚರಿತ್ರೆಯನ್ನು ಸದಾ ಕೇಳುವವನು, ಶಿವನಿಗೆ ಪ್ರಿಯನಾಗಿದ್ದು ಕೊನೆಗೆ ಶಿವಲೋಕವನ್ನು ಹೊಂದುವನು.

ಇಲ್ಲಿಗೆ ನಲವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀ ಕಾಲಿಕಾಪುರಾಣೇ

ಅಷ್ಟಚತ್ವಾರಿಂಶತ್ತಮೋಽಧ್ಯಾಯಃ

॥ ಸಗರ ಉವಾಚ ॥

ಕೋಽಸೌ ಭೈರವನಾಮಾಽಭೂತ್ಕೋವಾ ವೇತಾಳಸಂಜ್ಞಕಃ ।
ಕಥಂ ವಾ ತೌ ಶರೀರೇಣ ಮಾನುಷೇಣ ಗಣಾಧಿಪೌ ॥ ೧ ॥

ಅಭೂತಾಂ ದ್ವಿಜಶಾರ್ದೂಲ ತನ್ಮೇ ವದ ಮಹಾಮುನೇ ।
ಜಾನಾಮಿ ನಂದಿನಂ ವಿಪ್ರ ಸಹಾಯಂ ಶಶಭೃದ್ಭೃತಃ ॥ ೨ ॥

ಯಥಾಭವದ್ಗಣಾಧ್ಯಕ್ಷಸ್ತನ್ನಾರದಮುಖಾಚ್ಛ್ರುತಂ ।
ಯಥಾ ಭೃಂಗಿಮಹಾಕಾಲೌ ವಿಶ್ರುತೌ ಹಿ ಹರಾತ್ಮಜೌ ॥ ೩ ॥

॥ ನಲವತ್ತೆಂಟನೆಯ ಅಧ್ಯಾಯವು ॥

೧. ಸಗರರಾಜನು ಪ್ರಶ್ನಿಸಿದನು :--ಓ ಔರ್ವಮುನಿಯೇ! ಭೈರವನೆಂಬುವವನು ಯಾರು? ವೇತಾಳನು ಯಾರು? ಇವರೀರ್ವರು ಮನುಷ್ಯಶರೀರದಿಂದಿದ್ದರೂ ಹೇಗೆ ಗಣಗಳಿಗೆ ಅಧಿಪತಿಗಳಾದರು?

೨. ಮಹಾಮುನಿಯಾದ ಓ ಔರ್ವನೇ! ನಾನು ಕೇಳಿದುದನ್ನು ಹೇಳು. ಶಂಕರನ ವಾಹನವಾದ ನಂದಿಕೇಶ್ವರನನ್ನು ನಾನು ಬಲ್ಲೆನು. ಅವನು ಗಣಾಧ್ಯಕ್ಷನು ಹೇಗೆ ಆಗಿರುವನೆಂಬುದನ್ನೂ ನಾರದಮುನಿಯ ಮುಖದಿಂದ ಕೇಳಿರುವೆನು.

೩. ಭೃಂಗಿ ಮತ್ತು ಮಹಾಕಾಲರು ಶಂಕರನ ಪುತ್ರರೆಂದು ಪ್ರಸಿದ್ಧರಷ್ಟೆ. ಆದರೆ ಅವರು ಶಂಕರನಿಂದ ಹೇಗೆ ಜನಿಸಿದರೆಂಬುದನ್ನೂ ನಿನ್ನಿಂದ ಕೇಳಲಿಚ್ಛಿಸುವೆನು.

ಕಥಂ ವಾ ತೌ ಸಮುತ್ಪನ್ನೌ ತ್ವತ್ತಃ ಶ್ರೋತುಂ ಸಮುತ್ಸಹೇ ।
ಯೋಽಸೌ ಶರಭರೂಪಸ್ಯ ಮಹಾದೇವಸ್ಯ ವೈ ಪುರಾ ॥ ೪ ॥

ಕಾಯಭಾಗಃ ಶ್ರುತಃ ಪೂರ್ವಂ ಸ ಮಹಾಭೈರವಾಹ್ವಯಃ ।
ಸ ಏವ ಕಿಂ ಭೈರವಾಖ್ಯಃ ಕಿಂ ವಾನ್ಯೋ ದ್ವಿಜಸತ್ತಮ ॥ ೫ ॥

ವೇತ್ತುಂ ತತ್ತ್ವೇನ ತತ್ಸರ್ವಮಿಚ್ಛಾಮಿ ದ್ವಿಜಸತ್ತಮ ।
ಕಸ್ಯ ವಾ ತನಯೌ ಭೂತ್ವಾ ಗಣಾಧ್ಯಕ್ಷತ್ವಮಾಗತೌ ॥ ೬ ॥

ತಚ್ಚಾಪಿ ಕಥಯಸ್ವಾದ್ಯ ಯಥಾ ತೌ ವಾನರಾನನೌ ।

॥ ಔರ್ವ ಉವಾಚ ॥

ಶೃಣು ರಾಜನ್ ಪ್ರವಕ್ಷ್ಯಾಮಿ ಮಹಾಕಾಲಸ್ಯ ಭೃಂಗಿಣಃ ॥ ೭ ॥

ಭೈರವಸ್ಯಾಪಿ ಚರಿತಂ ವೇತಾಳಸ್ಯ ಮಹಾತ್ಮನಃ ।
ಯೋಽಸೌ ಭೃಂಗೀ ಹರಸುತೋ ಮಹಾಕಾಲೋಽಪಿ ಭರ್ಗಜಃ ॥ ೮ ॥

ತಾವೇವ ಗೌರೀಶಾಪೇನ ಸಂಭೂಯ ನರಯೋನಿಜೌ ।
ವೇತಾಲಭೈರವೌ ಜಾತೌ ಪೃಥಿವ್ಯಾಂ ನೃಪವೇಶ್ಮನಿ ॥ ೯ ॥

೪—೬. ಹಿಂದೆ ಶರಭರೂಪನಾದ ಶಂಕರನ ಶರೀರದಿಂದ ಮಹಾಭೈರವನೆಂಬುವನು ಜನಿಸಿರುವನೆಂದು ಕೇಳಿರುವೆನು. ಈ ಮಹಾಭೈರವನೇ ಹೀಗೆ ಹೇಳಿದ ಗಣಾಧ್ಯಕ್ಷನಾದ ಭೈರವನೇ? ಅಥವಾ ಬೇರೆಯೆ? ಓ ಬ್ರಾಹ್ಮಣೋತ್ತಮನೇ! ಈ ವಿಷಯಗಳ ನಿಜಾಂಶವನ್ನು ತಿಳಿಯಲಪೇಕ್ಷಿಸುವೆನು. ಆ ವೇತಾಳ ಮತ್ತು ಭೈರವರು ಯಾರಿಂದ ಜನಿಸಿ ಮುಂದೆ ಗಣಾಧ್ಯಕ್ಷರಾದರು ಮತ್ತು ಅವರು ಕಪಿಯಂತೆ ಮುಖ ವುಳ್ಳವರಾದುದು ಹೇಗೆ? ಇದೆಲ್ಲವನ್ನೂ ಈಗ ಹೇಳುವವನಾಗು.

೭. ಔರ್ವಮುನಿಯು ಹೇಳಿದನು:—ಎಲೈ ರಾಜನೇ! ಮಹಾತ್ಮರಾದ ಮಹಾಭೈರವ, ಭೃಂಗಿ, ವೇತಾಳ ಇವರ ಚರಿತ್ರೆಯನ್ನು ಹೇಳುವೆನು ಕೇಳು.

೮-೯. ಭೃಂಗಿ ಮತ್ತು ಮಹಾಕಾಲರು ಶಂಕರನ ಪುತ್ರರು. ಅವರೇ ಪಾರ್ವತಿಯ ಶಾಪದಿಂದ ಭೂಲೋಕದಲ್ಲಿ ಮನುಷ್ಯರಾಗಿ ರಾಜನ ಮನೆಯಲ್ಲಿ ವೇತಾಳ ಮತ್ತು ಭೈರವರೆಂಬುದಾಗಿ ಜನಿಸಿದರು. ಅವರು ಆರೀತಿ ಹೇಗೆ ಜನಿಸಿದರೆಂಬುದನ್ನು ಹೇಳುವೆನು, ಕೇಳು.

ಯಥಾ ಭೃಂಗಿಮಹಾಕಾಲಾವುತ್ಪನ್ನೌ ಪ್ರಾಕ್ತಥಾ ಶೃಣು ।
ಯೋಽಸೌ ಮಹಾಭೈರವಾಖ್ಯಃ ಸ ಕಾಯಃ ಶರಭೋ ಹರಃ ॥ ೧೦ ॥

ಭೈರವಃ ಪೃಥಗೇವಾಯಂ ಗಣಾಧ್ಯಕ್ಷೋ ಹರಾತ್ಮಜಃ ।
ಊಢಾಯಾಂ ಹಿಮವತ್ಪುತ್ರ್ಯಾಂ ಭಗೇನ ಸುಮಹಾತ್ಮನಾ ॥ ೧೧ ॥

ತಾರಕಸ್ಯ ವಧಾರ್ಥಾಯ ದೈವೈಃ ಶಕ್ರಪುರೋಗಮೈಃ ।
ಸ್ತುತಿಭಿರ್ನುತಿಭಿಃ ಶಂಭುಂ ಸಂತತಿರ್ಯಾಚಿತಾ ಪುರಾ ॥ ೧೨ ॥

ಸ ಯಾಚಿತೋ ದೇವಗಣೈರ್ಭಗವಾನ್ ವೃಷಭಧ್ವಜಃ ।
ಮಹಾಮೈಥುನಮಾರೇಭೇ ಸಂತಾನಾಯೋಮಯಾ ಸಹ ॥ ೧೩ ॥

ಆರಬ್ಧೇ ಮೈಥುನೇ ತೇನ ನರವರ್ಷೇಣ ವೈ ಯಯುಃ ।
ದ್ವಾತ್ರಿಂಶದ್ವತ್ಸರಾ ರಾಜನ್ ಕ್ಷಣವಚ್ಛಂದ್ರಧಾರಿಣಃ ॥ ೧೪ ॥

ಸ ಮಹಾಮೈಥುನಂ ಕುರ್ವನ್ ತೃಪ್ತಿಂ ನಾಪ ಮಹೇಶ್ವರಃ ।
ನಾಪ್ಯಸ್ಯ ಪ್ರಚ್ಯುತಿಂ ತೇಜೋ ನ ತೃಪ್ತಿಂ ಪ್ರಾಪ ಪಾರ್ವತೀ ॥ ೧೫ ॥

---

೧೦. ಶಂಕರನ ಶರಭಶರೀರದಿಂದ ಜನಿಸಿದ ಮಹಾಭೈರವನು ಸಾಕ್ಷಾತ್ ಶಂಕರನೇ. ಗಣಾಧ್ಯಕ್ಷನಾದ ಈ ಭೈರವನು ಬೇರೆ. ಇವನು ಶಂಕರನ ಪುತ್ರನು.

೧೧-೧೨. ಮಹಾತ್ಮನಾದ ಶಂಕರನು ಪಾರ್ವತಿಯನ್ನು ಮದುವೆಯಾದ ಮೇಲೆ, ಇಂದ್ರನೇ ಮೊದಲಾದ ದೇವತೆಗಳು ತಾರಕನೆಂಬ ಅಸುರರನ್ನು ಸಂಹರಿಸುವುದಕ್ಕಾಗಿ, ಶಂಕರನು ಒಬ್ಬ ಪುತ್ರನನ್ನು ಉತ್ಪಾದನೆಮಾಡಬೇಕೆಂದು ಸ್ತ್ರೋತ್ರಗಳಿಂದಲೂ, ನಮಸ್ಕಾರಗಳಿಂದಲೂ ಸಹ ಶಂಕರನನ್ನು ಪ್ರಾರ್ಥಿಸಿದರು.

೧೩. ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿ, ಭಗವಂತನಾದ ಶಂಕರನು ಪುತ್ರೋತ್ಪತ್ತಿಗಾಗಿ ಪಾರ್ವತಿಯೊಡನೆ ಮಹಾಮೈಥುನವೆಂಬ ರತಿಕ್ರೀಡೆಯನ್ನು ಆರಂಭಿಸಿದನು.

೧೪. ರತಿಕ್ರೀಡಾಸಕ್ತನಾಗಿರಲು ಆ ಶಂಕರನಿಗೆ ಮನುಷ್ಯದೃಷ್ಟಿಯಿಂದ ಮೂವತ್ತೆರಡುವರ್ಷಗಳು ಒಂದುಕ್ಷಣದಂತೆ ಕಳೆದುಹೋದವು.

೧೫. ಇಷ್ಟೊಂದು ವರ್ಷಗಳವರಿಗೂ ರತಿಕ್ರೀಡೆಯನ್ನೆಸಗಿದರೂ ಆ ಶಂಕರನಿಗೂ ಪಾರ್ವತಿಗೂ ತೃಪ್ತಿಯೇ ಆಗಲಿಲ್ಲ, ಅವನ ವೀರ್ಯವೂ ಸ್ಖಲಿತವಾಗಲಿಲ್ಲ.

ತನ್ಮಹಾಸಂಗಸಮಯೇ ಚಕಂಪೇ ವಸುಧಾ ಸ್ಫುಟಂ ।
ಆಕುಲಾಃ ಸಕಲಾ ದೇವಾಃ ಸ್ಯುಃ ಸ್ವರ್ಗಸ್ಥಾಶ್ಚ ಯೇ ಪರೇ ॥ ೧೬ ॥

ಸರ್ವಂ ಜಗತ್ತದಾ ಭೂತಮಾಕುಲಂ ಶಿವಯೋಸ್ತಯೋಃ ।
ತತೋಽನಿವೃತ್ತಿಜಾತೇನ ಮಹಾಮೈಥುನಕರ್ಮಣಾ ॥ ೧೭ ॥

ಅಥ ಸೇಂದ್ರಾಃ ಸುರಾಃ ಸರ್ವೇ ಬ್ರಹ್ಮಾಣಂ ಜಗತಾಂ ಪತಿಂ ।
ಶರಣ್ಯಂ ಶರಣಂ ಜಗ್ಮುರ್ಭೀತಾಃ ಶಂಕರಕೇಳಿಭಿಃ ॥ ೧೮ ॥

ತೇ ಸಂಭೂಯಾಥ ಧಾತಾರಂ ಪ್ರಣಮ್ಯ ಚ ಸುರೋತ್ತಮಾಃ ।
ಆಕುಲಂ ಸರ್ವಮಾಚಖ್ಯುರ್ಹರಮೈಥುನಕರ್ಮಣಾ ॥ ೧೯ ॥

ತತಃ ಸರ್ವಾನ್ದೇವಗಣಾನ್ ಪಶ್ಚಾತ್ಕೃತ್ವೈವ ವೃತ್ರಹಾ ।
ಸ್ವಯಮಾಹ ವಿಧಾತಾರಂ ತತ್ಕಾಲಭಯಭಾಷಿತಂ ॥ ೨೦ ॥

॥ ಇಂದ್ರ ಉವಾಚ ॥

ಆಕುಲಾಃ ಸಕಲಾ ಲೋಕಾ ಹರಮೈಥುನಕರ್ಮಣಾ ।
ಅಜಂ ಮಹದ್ಭಯಂ ಪ್ರಾಪ್ಯ ಶರಣಂ ತ್ವಾಮಿಹಾಗತಃ ॥ ೨೧ ॥

೧೬-೧೭. ಇಂತಹ ಈ ಮಹತ್ತಾದ ಮೈಥುನಕಾಲದಲ್ಲಿ ಭೂಮಿಯು ಅದುರಿತು. ಸ್ವರ್ಗದಲ್ಲಿರುವ ದೇವತೆಗಳೂ, ಇತರರೂ ಸಹ ಭಯಗೊಂಡರು. ಅವಿಚ್ಛಿನ್ನವಾಗಿ ನಡೆಯುತ್ತಿರುವ ಪಾರ್ವತೀಪರಮೇಶ್ವರರ ಮೈಥುನಕರ್ಮದಿಂದ ಸಕಲ ಜಗತ್ತೂ ಅಲ್ಲೋಲಕಲ್ಲೋಲವಾಯಿತು.

೧೮—೨೦. ಆನಂತರ ಇಂದ್ರನೇ ಮೊದಲಾದ ದೇವತೆಗಳು ಶಂಕರನ ಮೈಥುನಕ್ರೀಡೆಯಿಂದ ಭೀತರಾಗಿ, ಜಗದೊಡೆಯನೂ, ರಕ್ಷಕನೂ ಆದ ಬ್ರಹ್ಮನನ್ನು ಮರೆಹೋಗುವ ಉದ್ದೇಶದಿಂದ ಅವನ ಬಳಿಗೆ ಬಂದು ನಮಸ್ಕರಿಸಿ, ಅವನಿಗೆ ಶಂಕರನ ಮೈಥುನವಿಹಾರದಿಂದ ಸಕಲ ಜಗತ್ತೂ ಆಕುಲವಾಗಿರುವ ಸಮಾಚಾರವನ್ನು ತಿಳಿಸಿದರು. ದೇವತೆಗಳು ಮಾತನಾಡಲು ಭಯಪಡುತ್ತಿರಲು, ಇಂದ್ರನೇ ಮುಂದೆ ಬಂದು ಹೀಗೆ ಹೇಳಿದನು.

೨೧. ಇಂದ್ರನು ಹೇಳಿದನು:—ಓ ಬ್ರಹ್ಮನೇ! ಲೋಕಗಳೆಲ್ಲವೂ ಶಂಕರನ ಮೈಥುನಕ್ರೀಡೆಯಿಂದ ಭಯಭೀತವಾಗಿವೆ. ನಾನೂ ತುಂಬಾ ಭಯಗೊಂಡು ನಿನ್ನನ್ನು ಮರೆಹೊಕ್ಕಿರುವೆನು.

ಏವಂ ಭೂತೇ ಸಂಗಮೇ ಚ ಶಂಕರಸ್ಯೋಮಯಾ ಸಹ ।
ಯಃ ಪುತ್ರೋ ಜಾಯತೇ ಬ್ರಹ್ಮನ್ ಸ ಮಾಮಭಿಭವಿಷ್ಯತಿ ॥ ೨೨ ॥

ತಸ್ಯಾಶ್ಚಾಯಾದರ್ಶನಾದೇವ ಸೂತ್ಪನ್ನಾದಪಿ ತತ್ಸುತಾತ್ ।
ಭಯಂ ಮೇ ಜಾಯತೇ ಬ್ರಹ್ಮನ್ ತಾರಕಾದಪಿ ಚಾಧಿಕಂ ॥ ೨೩ ॥

ತಸ್ಮಾದೇವಂ ತ್ವಂ ವಿಧೇಹಿ ತತ್ಸುತೋಽಯಂ ಸುರಾನ್ ಯಥಾ ।
ನ ಬಾಧತೇ ತಥಾ ಯತ್ನಾತ್ತಾರಯಾಸ್ಮಾನ್ಮಹಾಭಯಾತ್ ॥ ೨೪ ॥

॥ ಬ್ರಹ್ಮೋವಾಚ ॥

ಉಮಾಯಾಂ ಜಾಯತೇ ಪುತ್ರೋ ಯದಿ ಶಂಕರತೇಜಸಾ ।
ಅಶಕ್ಯಃ ಸರ್ವಲೋಕೇ ಸ ಸೇಂದ್ರೈರಪಿ ಸುರಾಸುರೈಃ ॥ ೨೫ ॥

ತಸ್ಮಾದ್ಧರೋ ಯಥೋಮಾಯಾಂ ನ ಪ್ರಸೂತೋ ಭವಿಷ್ಯತಿ ।
ತಥಾಹಂ ಸಂವಿಧಾಸ್ಯಾಮಿ ಗತ್ವಾ ದೇವೈರ್ಹರಾಂತಿಕಂ ॥ ೨೬ ॥

ತಾರಕಸ್ಯ ವಿಘಾತಶ್ಚ ಯಥಾ ಸ್ಯಾದ್ಧರತೇಜಸಾ ।
ತಚ್ಚಾಪ್ಯಹಂ ಕರಿಷ್ಯಾಮಿ ಮ್ಯೇತು ತೇ ಮಾನಸೋ ಜ್ವರಃ ॥ ೨೭ ॥

೨೨—೨೪. ಶಂಕರಪಾರ್ವತಿಯರ ಮಹಾಮೈಥುನದಿಂದ ಪುತ್ರನು ಜನಿಸಿದರೆ ಅವನು ನನ್ನನ್ನು ಜಯಿಸುವನು. ಈ ಮಹತ್ತಾದ ಮೈಥುನವನ್ನು ನೋಡಿ ಮುಂಚೆ ಅದರಿಂದ ಜನಿಸುವ ಪುತ್ರನಿಂದ ತಾರಕಾಸುರನಿಗಿಂತಲೂ ಹೆಚ್ಚಾದ ಭಯವುಂಟಾಗ ಬಹುದು. ಆದುದರಿಂದ ಓ ಬ್ರಹ್ಮನೇ ! ಶಂಕರನಿಂದ ಜನಿಸುವ ಸುತನು ನನ್ನನ್ನೂ ದೇವತೆಗಳನ್ನೂ ಬಾಧಿಸದಂತೆ ಮಾಡಿ, ಈ ಭೀತಿಯಿಂದ ನಮ್ಮನ್ನು ಪಾರುಮಾಡಿಸು.

೨೫. ಬ್ರಹ್ಮನು ಹೇಳಿದನು:—ಶಂಕರನ ವೀರ್ಯದಿಂದ ಪಾರ್ವತಿಯಲ್ಲಿ ಪುತ್ರನು ಜನಿಸಿದುದೇ ಆದರೆ, ಅವನನ್ನು ಲೋಕಗಳಲ್ಲಿ ಇಂದ್ರನೇ ಮೊದಲಾದ ದೇವತೆಗಳಾಗಲೀ, ರಾಕ್ಷಸರಾಗಲೀ ಯಾರೂ ತಡೆಯಲಾರರು.

೨೬-೨೭. ಆದುದರಿಂದ ಶಂಕರನು ಪಾರ್ವತಿಯಲ್ಲಿ ಮಕ್ಕಳನ್ನು ಪಡೆಯದಿರುವಂತೆ ಮಾಡಲು ನಾನು ದೇವತೆಗಳೊಡನೆ ಶಂಕರನ ಬಳಿಗೆ ಹೋಗಿ, ಶಂಕರನ ತೇಜಸ್ಸಿನಿಂದಲೇ ತಾರಕಾಸುರನ ಸಂಹಾರವಾಗುವಂತೆ ಪ್ರಯತ್ನಮಾಡುವೆನು. ನೀನು ಮನೋವ್ಯಥೆಯನ್ನು ಬಿಟ್ಟು ನಿಶ್ಚಿಂತನಾಗಿರು.

ಇತ್ಯುಕ್ತ್ವಾ ಸಹ ದೇವೌಘೈಃ ಕೈಲಾಸಾದ್ರಿಂ ಪ್ರಜಾಪತಿಃ ।
ಜಗಾಮ ರೇಮೇ ಗಿರಿಶೋ ಗಿರಿಪುತ್ರ್ಯಾ ಸಮಂ ಭೃಶಂ ॥ ೨೮ ॥

ತತ್ರ ಗತ್ವಾ ಮಹಾದೇವಂ ಬ್ರಹ್ಮಾ ಲೋಕಪಿತಾಮಹಃ ।
ಸರ್ವೈಃ ಸುರಗಣೈಃ ಸಾರ್ಧಂ ತುಷ್ಟಾವ ವೃಷಭಧ್ವಜಂ ॥ ೨೯ ॥

॥ ದೇವಾ ಊಚುಃ ॥

ಪ್ರೀತಯೇ ಯಸ್ಯ ನ ರತಿಃ ನ ಕಾಮೋ ಯನ್ಮನೋಭವಃ ।
ನ ಯಸ್ಯ ಜನ್ಮನೋ ಹೇತುಸ್ತಸ್ಮೈ ತುಭ್ಯಂ ನಮೋನಮಃ ॥ ೩೦ ॥

ಯಸ್ಯ ಲೋಕಹಿತಾಯೈವ ಜಾತೋ ಜಾಯಾಪರಿಗ್ರಹಃ ।
ತ್ರ್ಯಂಬಕಾಯ ನಮಸ್ತಸ್ಮೈ ಸ ಶಿವೋ ನಃ ಪ್ರಸೀದತು ॥ ೩೧ ॥

ಯಂ ಮನ್ಮಥಂ ವಿನಾ ದೇವಂ ಶೃಂಗಾರಾದ್ಯಾ ವಿಶಂತಿ ಚ ।
ಸ್ವಬಲೇನೈವ ತಂ ದೇವಂ ತ್ವಾಂ ವಯಂ ಪ್ರಣತಾ ಹರಂ ॥ ೩೨ ॥

ಹಿರಣ್ಯರೇತಾಃ ಸ್ವರ್ಣಾಭೋ ಯೋ ಹಿರಣ್ಯಭುಜಾಹ್ವಯಃ ।
ಸ ತ್ವಂ ಸರ್ಗಹರೋ ದೇವೋ ನಿತ್ಯಂ ನೋಽಭಿಪ್ರಸೀದತು ॥ ೩೩ ॥

೨೮-೨೯. ಹೀಗೆ ಹೇಳಿ, ಬ್ರಹ್ಮನು ದೇವತೆಗಳೊಡನೆ ಕೈಲಾಸಗಿರಿಯಲ್ಲಿ ಶಂಕರನು ಪಾರ್ವತಿಯೊಡನೆ ವಿಹರಿಸುತ್ತಿರುವಲ್ಲಿಗೆ ಹೋಗಿ, ದೇವತೆಗಳೊಡನೆ ಆ ಉಮಾದೇವನನ್ನು ಈರೀತಿಯಾಗಿ ಸ್ತುತಿಸಿದನು.

೩೦—೩೪. ದೇವತೆಗಳು ಹೀಗೆ ಸ್ತೋತ್ರಮಾಡಿದರು:—ಓ ಶಂಕರನೇ! ರತಿಯಾಗಲೀ, ಮನ್ಮಥನಾಗಲೀ, ನಿನಗೆ ಕಾಮವಿಕಾರವನ್ನುಂಟುಮಾಡಲು ಅಸಮರ್ಥರು. ನಿನಗೆ ಉತ್ಪತ್ತಿಗೆ ಕಾರಣರಾರೂ ಇಲ್ಲ. ಇಂತಹ ನಿನ್ನನ್ನು ನಮಸ್ಕಾರ ಮಾಡುವೆವು. ಲೋಕಕಲ್ಯಾಣಕ್ಕಾಗಿ ಪತ್ನಿಯನ್ನು ನೀನು ಸ್ವೀಕರಿಸಿರುವೆಯೇ ಹೊರತು ಅನ್ಯಥಾ ಇಲ್ಲ. ಎಲ್ಲೆ ಮಂಗಳಸ್ವರೂಪನೇ! ನಮಗೆ ಪ್ರಸನ್ನನಾಗು. ನೀನು ರತಿಕ್ರೀಡೆಯಲ್ಲಾಸಕ್ತನಾದರೆ ಸಾಮಾನ್ಯಜನರಂತೆ ಮನ್ಮಥನ ಸಹಾಯವು ಅಗತ್ಯವಿಲ್ಲ. ಶೃಂಗಾರಾದಿಭಾವಗಳು ತಾವೇ ಬಂದು ನಿನ್ನನ್ನು ಸೇವಿಸುವುವು. ನಿನ್ನ ವೀರ್ಯವು ಸುವರ್ಣಮಯವಾದುದು, ಚಿನ್ನದಂತೆಯೇ ಶರೀರಕಾಂತಿಯು, ಭುಜಗಳೂ ಸುವರ್ಣಮಯವೇ. ಇಂತಹ ನೀನು ಸೃಷ್ಟಿಯಾಗಿರುವ ಜಗತ್ತನ್ನು ಉಪ

ಜಗನ್ಮಯಾ ಯೋಗನಿದ್ರಾ ವಿಷ್ಣುಮಯಾ ಬಲೀಯಸೀ ।
ಯಸ್ಯಾಭವತ್ಸ್ವಯಂ ಜಾಯಾ ತಸ್ಮೈ ತುಭ್ಯಂ ನಮೋನಮಃ ॥ ೩೪ ॥

ಪಂಚಭೂತಮಯಂ ಯಸ್ಯ ಪಂಚಶೀರ್ಷಂ ವಿರಾಜತೇ ।
ತಂ ಪಂಚವದನಂ ದೇವಂ ಭಕ್ತ್ಯಾ ತ್ವಾಂ ಪ್ರಣಮಾಮ್ಯಹೇ ॥ ೩೫ ॥

ಸದ್ಯೋಜಾತಮಘೋರಂ ಚ ವಾಮದೇವಮುಮಾಪತಿಂ ।
ಈಶಾನಂ ಪ್ರಣಮಾಮೋಽದ್ಯ ಯಂ ತತ್ಪುರುಷಮಾಹ ವೈ ॥ ೩೬ ॥

ಯೋಽಸತಾಮಶಿವೋ ನಿತ್ಯಂ ಯೋವಾ ಭಕ್ತಿಮತಾಂ ಶಿವಃ ।
ಶಿವಾಶಿವಸ್ವರೂಪಾಯ ನಮಸ್ತಸ್ಮೈ ಶಿವಾಯ ತೇ ॥ ೩೭ ॥

ರೂಪೈಸ್ತ್ರಿಭಿರ್ಯಃ ಸ್ಥಿತಿಸೃಷ್ಟಿನಾಶಂ
ವಿಷ್ಣ್ವಾತ್ಮ ಭೂಃ ಶಂಭುರಿತಿ ಪ್ರಸಿದ್ಧೈಃ ॥
ಕರೋತಿ ಶಶ್ವಜ್ಜಗತಾಂ ನುಮಸ್ತಂ
ಶಿವಂ ವಿರೂಪಾಕ್ಷಮಮುಂ ಶಿವೇಶಂ ॥ ೩೮ ॥

ಸಂಹರಿಸುವೆ. ಯೋಗನಿದ್ರೆಯೆಂದು ಪ್ರಸಿದ್ಧಳೂ, ಜಗದ್ರೂಪಳೂ ಆದ ಸಾಕ್ಷಾದ್ವಿಷ್ಣು ಮಾಯೆಯು ತಾನಾಗಿಯೇ ನಿನಗೆ ಪತ್ನಿಯಾಗಿರುವಳು. ಇಂತಹ ನಿನ್ನನ್ನು ನಮಿಸುವೆವು. ಓ ಶಂಕರನೇ ! ನಮಗೆ ಪ್ರಸನ್ನನಾಗು.

೩೫. ನೀನು, ಪೃಥಿವೀ, ಜಲ, ಅಗ್ನಿ, ವಾಯು, ಆಕಾಶಗಳೆಂಬ ಐದು ಭೂತವಾದ ಐದು ಶಿರಸ್ಸುಗಳುಳ್ಳವನು, ಇಂತಹ ಪಂಚಮುಖ ದೇವನಾದ ನಿನ್ನನ್ನು ಭಕ್ತಿಯಿಂದ ನಮಸ್ಕರಿಸುವೆನು.

೩೬-೩೭. ಸದ್ಯೋಜಾತನೆಂದೂ, ಅಘೋರನೆಂದೂ, ವಾಮದೇವನೆಂದೂ, ಉಮಾಪತಿಯೆಂದೂ, ಈಶಾನನೆಂದೂ, ತತ್ಪುರುಷನೆಂದೂ, ವೇದದಿಂದ ಸ್ತುತಿಸಲ್ಪಡುವೆ. ನೀನು ದುಷ್ಟರಿಗೆ ಅಮಂಗಳಸ್ವರೂಪನು, ಭಕ್ತಿಯುಳ್ಳ ಸಜ್ಜನರಿಗೆ ಮಂಗಳರೂಪನು. ಹೀಗೆ ಮಂಗಳ ಮತ್ತು ಅಮಂಗಳರೂಪನಾದ ನಿನಗೆ ನಮಸ್ಕಾರವು.

೩೮. ಅಲ್ಲದೆ ನೀನು ವಿಷ್ಣು, ಬ್ರಹ್ಮ, ಶಂಕರರೆಂದು ಪ್ರಸಿದ್ಧವಾದ ನಿನ್ನ ರೂಪಗಳಿಂದ ಜಗತ್ತಿನ ಸೃಷ್ಟಿ, ಸ್ಥಿತಿ, ನಾಶಗಳನ್ನು ಮಾಡುವವನೂ, ಮೂರು ಕಣ್ಣುಗಳುಳ್ಳವನೂ, ಮಂಗಳದಾಯಕನೂ ಆಗಿರುವೆ.

ಯಃ ಶೂಲಖಟ್ವಾಂಗಮೃಗಾಂಕಧಾರೀ
ಯೋಗೋ ಧ್ವಜಃ ಶಕ್ತಿಮಾನ್ ಪಂಚರೂಪೀ ॥
ತಸ್ಮೈ ತುಭ್ಯಂ ಜಾತವೇದಃಪ್ರಭಾಯ
ಭೂಯೋ ಭೂಯೋ ನೋ ನಮಃ ಶಂಕರಾಯ ॥ ೩೯ ॥

ಬ್ರಹ್ಮಾರ್ಕಷ್ಣಾನ್ ಭೋಗಭೃದ್ದೈತ್ಯಹಂತಾ
ಯಂತಾ ಯೋದ್ಧಾ ವೀತಗರ್ಭೋ ಜಗತ್ಯಾಂ ॥
ಸ ತ್ವಂ ಸ್ತುತೋ ನಃ ಪ್ರಸೀದತ್ವನಂತೋ
ನಿತ್ಯೋದ್ರೇಕೀ ಮುಕ್ತೆರೂಪಃ ಪ್ರಧಾನಃ ॥ ೪೦ ॥

ಪರಬ್ರಹ್ಮರೂಪೀ ನಿಯತೈಕಮುಕ್ತಃ
ಪರಂಜ್ಯೋತಿರೂಪೀ ನಿಯತಸ್ತ್ವನಂತಃ ॥
ಪರಃ ಪಾರರೂಪೀ ನಿಯತಾತ್ಮಭಾಗೀ
ಸ ನೋ ಭರ್ಗರೂಪೀ ಗಿರಿಶೋऽಸ್ತು ಭೂತ್ಯೈ ॥ ೪೧ ॥

---

೩೯. ತ್ರಿಶೂಲ, ಖಟ್ವಾಂಗ, ಚಂದ್ರರೇಖೆ ಇವುಗಳನ್ನು ಧರಿಸಿ ಬೆಳಗುತ್ತಿರುವೆ. ಯೋಗಧ್ವಜ, ಶಕ್ತಿ, ಪಂಚಭೂತ ಇವುಗಳ ಸ್ವರೂಪನೂ, ಅಗ್ನಿಯಂತೆ ತೇಜಸ್ವಿಯೂ ಆದ ನಿನ್ನನ್ನು ಪುನಃಪುನಃ ನಮಸ್ಕಾರಮಾಡುವೆವು.

೪೦-೪೧. ಬ್ರಹ್ಮ, ಸೂರ್ಯ, ಆದಿಶೇಷ, ವಿಷ್ಣು, ಯಮ, ಜಗತ್ತನ್ನು ಸಂಹಾರಮಾಡುವ ಹರ, ಯಾವಾಗಲೂ ವಿಕಾರವನ್ನು ಹೊಂದುವ ಸ್ವಭಾವವುಳ್ಳ ಪ್ರಕೃತಿ, ಪುರುಷ, ಸಂಸಾರಬಂಧರಹಿತರಾದ ಮುಕ್ತರು, ಇವರೆಲ್ಲರೂ ನಿನ್ನ ಸ್ವರೂಪವೇ ಹೊರತು ಬೇರೆಯಲ್ಲ. ನೀನು ಪರಬ್ರಹ್ಮರೂಪಿಯಾಗಿರುವುದರಿಂದ ನಿತ್ಯಮುಕ್ತನು, ಸಂಸಾರಬಂಧನವೆಂಬುದೇ ನಿನಗಿಲ್ಲ, ಪರಂಜ್ಯೋತಿಸ್ವರೂಪನು, ನಾಶರಹಿತನು, ಎಲ್ಲರಿಗಿಂತಲೂ ಮಿಗಿಲಾದವನು, ಆದ್ಯಂತರಹಿತನು, ಸಂಸಾರದಲ್ಲಿ ತೊಳಲುತ್ತಿರುವವರಿಗೆ ಮುಕ್ತಿದಾಯಕನು, ಇಂತಹ ನೀನು ಈಗ ಕೈಲಾಸಾಧಿಪತಿಯಾಗಿ ಶಂಕರನೆಂದು ಹೇಳಲ್ಪಡುವೆ. ಆದುದರಿಂದ ನಮಗೆ ಈಗ ಮಂಗಳವನ್ನುಂಟುಮಾಡು.

ಉಮಾಪತಿಂ ಮಹಾಮಾಯಂ ಮಹಾದೇವಂ ಜಗತ್ಪತಿಂ ।
ಶಿವಂ ಶಿವಕರಂ ಶಾಂತಂ ನಮಾಮಃ ಸ ಪ್ರಸೀದತು ॥ ೪೨ ॥

ಇತಿ ಸ್ತುತೋ ಮಹಾದೇವಃ ಶಕ್ರಾದ್ಯೈಸ್ತ್ರಿದಶೈಃ ಸ್ವಯಂ ।
ಉಮಾಸಂಗಂ ಪರಿತ್ಯಜ್ಯ ಭಗೋಽಗಾತ್ತ್ರಿದಿವೌಕಸಃ ॥ ೪೩ ॥

ಯೇನ ಭಾವೇನ ಸ ತದಾ ಮಹಾಮೈಥುನತತ್ಪರಃ ।
ಆಸೀತ್ತೇನೈವ ಭಾವೇನ ಬ್ರಹ್ಮಾದೀನಾ ಸಸಾದ ಹ ॥ ೪೪ ॥

ಅಥ ತಾನ್ ಸ ಸುರಾನ್ ಪ್ರಾಹ ಮಹಾದೇವಸ್ತ್ವರನ್ನಿವ ।
ಕಿಮರ್ಥಮಾಗತಾ ಯೂಯಂ ತನ್ಮೇ ವದತ ನಿರ್ಜರಾಃ ॥ ೪೫ ॥

ತಮೂಚುಸ್ತ್ರಿದಶಾಃ ಸರ್ವೇ ಬ್ರಹ್ಮಶಕ್ರಪುರೋಗಮಾಃ ।
ತ್ವನ್ಮಹಾಮೈಥುನಾದ್ಭರ್ಗ ವ್ಯಾಕುಲಂ ಸಕಲಂ ಜಗತ್ ॥ ೪೬ ॥

---

೪೨. ಪಾರ್ವತೀಪತಿಯೂ, ಮಾಯಾಮಯನೂ, ದೇವದೇವನೂ, ಜಗದೊಡೆಯನೂ, ಮಂಗಳಸ್ವರೂಪನೂ, ಮಂಗಳಕರನೂ ಆದ ಓ ಶಂಕರನೇ ! ನಿನ್ನನ್ನು ನಮಿಸುವೆವು, ನಮಗೆ ಪ್ರಸನ್ನನಾಗು.

೪೩-೪೪. ಈ ರೀತಿಯಾಗಿ ಇಂದ್ರನೇ ಮೊದಲಾದ ದೇವತೆಗಳು ಸ್ತುತಿಸಲು ಮಹಾದೇವನು ಆ ಕೂಡಲೇ ಪಾರ್ವತಿಯ ಸಂಗವನ್ನು ಬಿಟ್ಟು, ಮೈಥುನಾಸಕ್ತನಾಗಿರುವಾಗ ಯಾವ ವೇಷದಿಂದಿದ್ದನೋ ಆ ವೇಷದಿಂದಲೇ ಬ್ರಹ್ಮನೇ ಮೊದಲಾದ ದೇವತೆಗಳ ಬಳಿಗೆ ಬಂದನು.

೪೫. ಆಮೇಲೆ ಶಂಕರನು ದೇವತೆಗಳನ್ನು ಕುರಿತು ತುಂಬಾ ಆತುರಗೊಂಡವನಂತೆ, ಎಲೈ ದೇವತೆಗಳೇ ! ನೀವು ನನ್ನಲ್ಲಿ ಬಂದುದೇಕೆ ? ಅದನ್ನು ಬೇಗನೆ ಹೇಳಿರಿ ಎಂದು ಕೇಳಿದನು.

೪೬—೪೯. ಆಗ ಬ್ರಹ್ಮ, ಇಂದ್ರ ಮೊದಲಾದ ದೇವತೆಗಳು ಶಂಕರನನ್ನು ಕುರಿತು ಹೀಗೆ ಹೇಳಿದರು :— ಓ ಶಂಕರನೇ ! ನಿನ್ನ ಮಹತ್ತಾದ ಮೈಥುನದಿಂದ ಸಕಲ ಜಗತ್ತೂ ವ್ಯಾಕುಲವಾಗಿರುವುದು. ಬೆಟ್ಟ, ಕಾಡು ಮುಂತಾದವುಗಳೊಡನೆ ಭೂಮಿಯು ಅದುರುತ್ತಿರುವುದು. ನದಿಗಳೂ, ನದಗಳೂ, ಸಮುದ್ರಗಳೂ ಕ್ಷೋಭೆ

ಪೃಥಿವೀ ಕಂಪತೇಽ ತೀವ ಸಶೈಲವನಕಾನನಾ ।
ಸಾಗರಾಃ ಕ್ಷುಭಿತಾಃ ಸರ್ವೇ ನದಾ ನದ್ಯಶ್ಚ ಶಂಕರ ॥ ೪೭ ॥

ದೇವಾಶ್ಚ ಸರ್ವೇ ದಿಕ್ಪಾಲಾ ನ ಶಾಂತಿಂ ಪ್ರಾಪ್ನುವಂತಿ ವೈ ।
ತಸ್ಮಾತ್ತ್ವಂ ಸರ್ವಲೋಕೇಶ ಸಕಲಾನನುಕಂಪಯ ॥ ೪೮ ॥

ತ್ಯಕ್ತ್ವಾ ಮಹಾಮೈಥುನಂ ತು ರತಿಮಾತ್ರಂ ನಿಯೋಜಯ ।
ಏತಚ್ಛ್ರುತ್ವಾ ವಚಸ್ತಸ್ಯ ಬ್ರಹ್ಮಣಃ ಪರಮಾತ್ಮನಃ ॥ ೪೯ ॥

ಉವಾಚ ಶಂಕರೋ ದೇವೋ ನಾತಿಹೃಷ್ಟಮನಾ ಇವ ।

॥ ಈಶ್ವರ ಉವಾಚ ॥

ಇಯಂ ಪ್ರವೃತ್ತಿರ್ಭವತಾಂ ಶಿವಾಯಾಮರಸತ್ತಮಾಃ ॥ ೫೦ ॥

ತ್ಯಕ್ತೇ ಮಹಾಮೈಥುನೇ ತು ರತಿಮಾತ್ರಪ್ರಯೋಜಿತೇ ।
ನೋಮಾಯಾಂ ಭವಿತಾ ಪುತ್ರಸ್ತದರ್ಥಮಯಮುದ್ಯಮಃ ॥ ೫೧ ॥

ಉಮಾಶರೀರಜಃ ಪುತ್ರೋ ಯೋ ಭವೇನ್ಮಮ ತೇಜಸಾ ।
ಸ ಏವ ತು ರಿಪೂನ್ ಹತ್ವಾ ತ್ರಿದಶಾನ್ವರ್ಧಯಿಷ್ಯತಿ ॥ ೫೨ ॥

ಗೊಂಡಿವೆ. ದೇವತೆಗಳೂ, ದಿಕ್ಪಾಲಕರೂ ಸಹ ಶಾಂತಿಯಿಲ್ಲದೆ ತಳಮಳಗೊಂಡಿರುವರು. ಆದಕಾರಣ ಓ ಜಗದೊಡೆಯನೇ! ನೀನು ಎಲ್ಲರನ್ನೂ ಅನುಗ್ರಹಿಸು. ಈ ಮಹಾಮೈಥುನವನ್ನು ಬಿಟ್ಟು, ಸಾಮಾನ್ಯವಾದ ರತಿಕ್ರೀಡೆಯನ್ನು ಮಾಡುವವನಾಗು. ಪರಮಾತ್ಮರೂಪಿಯಾದ ಬ್ರಹ್ಮನ ಈ ಮಾತುಗಳನ್ನು ಕೇಳಿ ಶಂಕರನಿಗೆ ಅಷ್ಟೇನೂ ಸಂತೋಷವಾಗಲಿಲ್ಲ. ಆದರೂ ಆ ಬ್ರಹ್ಮನನ್ನು ಕುರಿತು ಹೀಗೆ ಹೇಳಿದನು.

೫೦—೫೩. ಈಶ್ವರನು ಹೇಳಿದನು:-ಎಲೈ ದೇವಶ್ರೇಷ್ಠರೇ! ಈ ಮೈಥುನದಲ್ಲಿ ನಾನು ನಿಮ್ಮ ಹಿತಕ್ಕಾಗಿಯೇ ಪ್ರವೃತ್ತನಾಗಿರುವೆನು. ಈ ಮಹಾಮೈಥುನವನ್ನು ಬಿಟ್ಟು ಕೇವಲ ರತಿಯನ್ನು ಪ್ರಯೋಗಿಸಿದರೆ, ಪಾರ್ವತಿಯಲ್ಲಿ ಪುತ್ರನು ಜನಿಸುವುದಿಲ್ಲ. ಅದಕ್ಕಾಗಿಯೇ ಈ ಯತ್ನವು. ನನ್ನ ವೀರ್ಯದಿಂದ ಪಾರ್ವತಿಯಲ್ಲಿ ಪುತ್ರನು ಜನಿಸಿದರೆ ಅವನು ನಿಮ್ಮ ಶತ್ರುಗಳನ್ನೆಲ್ಲಾ ಸಂಹರಿಸಿ ದೇವತೆಗಳನ್ನು ವೃದ್ಧಿಗೊಳಿ

ತಸ್ಮಾನ್ಮಹಾಮೈಥುನೇ ಮೇ ವೀತಭೀತಾಃ ಸುರೋತ್ತಮಾಃ ।
ಸ್ವಂ ಸ್ವಂ ಸ್ಥಾನಂ ಪ್ರಯುಚ್ಛಂತು ಅಪಂ ತಪನುಚಿಂತಯೇ ॥ ೫೩ ॥

॥ ದೇವಾ ಊಚುಃ ॥

ಉಮಾಶರೀರಜಃ ಪುತ್ರೋ ಯಥಾ ನ ಭವಿತಾ ಪರ ।
ತಥಾ ಕುರು ಜಗನ್ನಾಥ ತನ್ಮಹಾಮೈಥುನಂ ತ್ಯಜ ॥ ೫೪ ॥

॥ ಈಶ್ವರ ಉವಾಚ ॥

ರತಿಮಾತ್ರೇಣ ನೋಮಾಯಾಂ ಮತ್ಪುತ್ರಃ ಸಂಭವಿಷ್ಯತಿ ।
ಮಹಾಮೈಥುನಸಂತ್ಯಾಗಾತ್ಸಾ ಽದಪುತ್ರೀ ತು ಸಾರ್ವತೀ ॥ ೫೫ ॥

ತಸ್ಮಾದಹಂ ತು ದೇವಾನಾಂ ವಚನಾದ್ಬ್ರಹ್ಮಣಸ್ತಥಾ ।
ತ್ಯಕ್ಷೇ ಮಹಾಮೈಥುನಂ ತು ಕಿಂತ್ವೇಕಂ ಕುರುತಾಮರಾಃ ॥ ೫೬ ॥

ಯೇನ ಮೇ ಪ್ರಸೃತಂ ತೇಜೋ ಮಹಾಮೈಥುನಕಾರಣಾತ್ ।
ಧಾರ್ಯಂ ತೇಜಸ್ವಿನಂ ದೇವಮಾನಯಂತ್ವಮರಾಸ್ತು ತಂ ॥ ೫೭ ॥

ಸುವನು. ಆದುದರಿಂದ ಎಲ್ಲೆ ದೇವತೆಗಳಿರಾ ! ಈ ನನ್ನ ಮಹಾಮೈಥುನದಿಂದ ನೀವು ಭಯಪಡಬೇಡಿ ; ನಿಮ್ಮನಿಮ್ಮ ಸ್ಥಾನಕ್ಕೆ ತೆರಳಿರಿ. ಮುಂದೆ ಮಾಡಬೇಕಾದು ದನ್ನು ನಾನೇ ಯೋಚಿಸುವೆನು.

೫೪. ದೇವತೆಗಳು ಹೇಳಿದರು :-ಓ ಜಗದ್ಗೊಡೆಯನಾದ ಹರನೆ ! ಪಾರ್ವತಿಯ ಗರ್ಭದಿಂದ ಪುತ್ರನು ಜನಿಸದಿರುವಂತೆ ಮಾಡು. ಅದಕ್ಕಾಗಿ ಈ ಮಹಾಮೈಥುನ ವನ್ನು ಬಿಡು.

೫೫—೫೭. ಈಶ್ವರನು ಹೇಳಿದನು :—ಕೇವಲ ರತಿಕ್ರೀಡೆಯಿಂದ ಪಾರ್ವತಿ ಯಲ್ಲಿ ನನಗೆ ಪುತ್ರನು ಜನಿಸುವುದಿಲ್ಲ. ಈ ಮಹಾಮೈಥುನವನ್ನು ಬಿಟ್ಟರೆ ಪಾರ್ವತಿಯು ಪುತ್ರವತಿಯಾಗುವುದಿಲ್ಲ. ಆದಕಾರಣ ನಾನು ದೇವತೆಗಳ ಮತ್ತು ಬ್ರಹ್ಮನ ಮಾತಿ ನಂತೆ ಈ ಮಹಾಮೈಥುನವನ್ನು ಬಿಡಲಾರೆನು. ಆದರೆ ಎಲ್ಲೆ ದೇವತೆಗಳಿರಾ ! ನೀವೊಂದು ಕೆಲಸವನ್ನು ಮಾಡಿರಿ. ಈ ಮಹಾಮೈಥುನದಿಂದ ನನ್ನ ವೀರ್ಯವು ಸ್ಖಲಿಸಿದರೆ ಅದನ್ನು ಧರಿಸಲು ಸಮರ್ಥನಾಗಿಯೂ ತೇಜಸ್ವಿಯಾಗಿಯೂ ಇರುವ

ಯೋ ನಿಷ್ಕಂಪೋ ನಿರ್ವಿಕಾರೋ ಭೂತ್ವಾ ತೇಜೋ ಗ್ರಹೀಷ್ಯತಿ ।
ತಸ್ಮೈ ವದಂತು ತ್ರಿದಶಾಸ್ತ್ಯಜ್ಯೇ ತೇಜಃ ಶರೀರಜಂ ॥ ೫೮ ॥

॥ ಔರ್ವ ಉವಾಚ ॥

ವೃಷಧ್ವಜವಚಃ ಶ್ರುತ್ವಾ ದೇವಾ ಬ್ರಹ್ಮಪುರೋಗಮಾಃ ।
ಹರತೇಜೋಗ್ರಹಾಯಾಥ ವೀತಿಹೋತ್ರಂ ಯಯುರ್ಧಿಯಾ ॥ ೫೯ ॥

ಅಥ ಬ್ರಹ್ಮಾಣಮಾಮಂತ್ರ್ಯ ತಥಾಽನುಜ್ಞಾಪ್ಯ ಪಾವಕಂ ।
ಸೇಂದ್ರಾ ದೇವಗಣಾಃ ಸರ್ವೇ ಪರಮೂಚುರಿದಂ ವಚಃ ॥ ೬೦ ॥

॥ ದೇವಾ ಊಚುಃ ॥

ಏಷ ವೈಶ್ವಾನರಃ ಶ್ರೀಮಾನ್ಭೂರಿತೇಜೋಮಯೋ ಬಲೀ ।
ಮಹಾಮೈಥುನಬೀಜಂ ತು ತ್ವತ್ತೇಜಃ ಸಂಗ್ರಹೀಷ್ಯತಿ ॥ ೬೧ ॥

ಒಬ್ಬ ದೇವನನ್ನು ನೀವುಗಳು ಕರೆದುಕೊಂಡು ಬನ್ನಿರಿ. ಅಚಲನಾಗಿಯೂ, ವಿಕಾರ ವಿಲ್ಲದವನಾಗಿಯೂ, ನನ್ನ ವೀರ್ಯವನ್ನು ಯಾವನು ಧರಿಸಬಲ್ಲನೋ ಅಂತಹ ದೇವ ನಾರೆಂಬುವದನ್ನು ಹೇಳಿರಿ. ಅವನಲ್ಲಿ ನನ್ನ ವೀರ್ಯವನ್ನು ತ್ಯಜಿಸುವೆನು ಎಂದನು.

೫೯. ಔರ್ವಮುನಿಯು ಹೇಳಿದನು :—ಶಂಕರನ ಮಾತುಗಳನ್ನು ಕೇಳಿ ಬ್ರಹ್ಮನೇ ಮೊದಲಾದ ದೇವತೆಗಳು ಶಂಕರನ ತೇಜಸ್ಸನ್ನು ಧರಿಸಲು ಅಗ್ನಿಯೇ ಸಮರ್ಥನೆಂದು ಮನಸ್ಸಿನಲ್ಲಿ ನಿಶ್ಚಯಿಸಿದರು.

೬೦. ಬಳಿಕ ಇಂದ್ರಾದಿ ದೇವತೆಗಳು ಈ ವಿಷಯವನ್ನು ಬ್ರಹ್ಮನಿಗೆ ತಿಳಿಸಿ, ಶಂಕರನ ತೇಜಸ್ಸನ್ನು ಧರಿಸುವಂತೆ ಅಗ್ನಿಯನ್ನು ಒಪ್ಪಿಸಿದರು. ಅನಂತರ ಶಂಕರನನ್ನು ಕುರಿತು ಹೀಗೆ ಹೇಳಿದರು.

೬೧. ದೇವತೆಗಳು ಹೇಳಿದರು :—ಈ ಅಗ್ನಿಯು ತುಂಬಾ ತೇಜಸ್ವಿಯೂ, ಬಲಿಷ್ಠನೂ, ಶ್ರೀಮಂತನೂ ಆಗಿರುವನು. ಇವನು ನಿನ್ನ ಈ ಮಹಾಮೈಥುನದಿಂದ ಸ್ಖಲಿಸಿದ ರೇತಸ್ಸನ್ನು ಧರಿಸುವನು.

ಇತ್ಯುಕ್ತ್ವಾ ತ್ರಿದಶಾಃ ಸರ್ವೇ ವೀತಿಹೋತ್ರಂ ಪುರಸ್ಥಿತಂ ।
ತಸ್ಮೈ ನಿವೇದಯಾಮಾಸುಃ ಶಂಭವೇ ಸರ್ವಹೇತವೇ ॥ ೬೨ ॥

ತತಃ ಷಡಂಗಂ ಸ್ವಂ ರೇತೋ ವ್ಯಾದಿತೇ ಜಹನಾನನೇ ।
ಉತ್ಸಸರ್ಜ ಮಹಾಬಾಹುರ್ಮಹಾಮೈಥುನಕಾರಣಂ ॥ ೬೩ ॥

ಅಗ್ನಾವುತ್ಸೃಜ್ಯಮಾನಸ್ಯ ರೇತಸಃ ಶಶಭೃದ್ಧೃತಃ ।
ಅಣುದ್ವಯಮತಿಸ್ಫಲ್ಪಂ ಗಿರಿಪ್ರಸ್ಥೇ ಪಪಾತ ಹ ॥ ೬೪ ॥

ತಯೋಸ್ತು ಕಣಯೋಃ ಸದ್ಯಃ ಸಂಭೂತೌ ಶಂಕರಾತ್ಮಜೌ ।
ಏಕೋ ಭೃಂಗಸಮಃ ಕೃಷ್ಣೋ ಭಿನ್ನಾಂಜನನಿಭೋಪರಃ ॥ ೬೫ ॥

ಭೃಂಗಾಭಸ್ಯ ತದಾ ಬ್ರಹ್ಮಾ ನಾಮ ಭೃಂಗೀತಿ ಚಾಕರೋತ್ ।
ಮಹಾಕೃಷ್ಣೈಕರೂಪಸ್ಯ ಮಹಾಕಾಲೇತಿ ಲೋಕಕೃತ್ ॥ ೬೬ ॥

---

೬೨. ಹೀಗೆ ಹೇಳಿ ದೇವತೆಗಳು ಎದುರಿಗೆ ನಿಂತಿದ್ದ ಅಗ್ನಿಯನ್ನು ಸರ್ವಕಾರಣನಾದ ಶಂಕರನಿಗೆ ತೋರಿಸಿದರು.

೬೩. ಅನಂತರ ಬಲಿಷ್ಠನಾದ ಆ ಶಂಕರನು ಆರು ಅಂಗಗಳುಳ್ಳ ಮಹಾ ಮೈಥುನಕ್ಕೆ ಕಾರಣವಾದ ತನ್ನ ರೇತಸ್ಸನ್ನು ಅಗ್ನಿಯ ತೆರೆದ ಬಾಯಲ್ಲಿ ವಿಸರ್ಜಿಸಿದನು.

೬೪. ಆ ಶಂಕರನು ತನ್ನ ರೇತಸ್ಸನ್ನು ಅಗ್ನಿಯಲ್ಲಿ ತ್ಯಜಿಸುವಾಗ ಆ ರೇತಸ್ಸಿನ ಸಣ್ಣ ಎರಡು ತುಂತುರುಗಳು ಆ ಕೈಲಾಸಪರ್ವತದ ತಪ್ಪಲಲ್ಲಿ ಬಿದ್ದುವು.

೬೫. ಆ ತುಂತುರುಗಳಿಂದ ಆ ಕೂಡಲೇ ಈರ್ವರು ಪುತ್ರರು ಜನಿಸಿದರು. ಅವರಲ್ಲಿ ಒಬ್ಬನು ದುಂಬಿಯಂತೆ ಕಪ್ಪಾದ ಶರೀರ ಕಾಂತಿಯುಳ್ಳವನು. ಇನ್ನೊಬ್ಬನ ಶರೀರವು ಕಾಡಿಗೆಯಂತೆ ಅತಿ ಕಪ್ಪಾಗಿದ್ದಿತು.

೬೬. ದುಂಬಿಯಂತೆ (ಭೃಂಗ) ಕಾಂತಿಯುಳ್ಳವನಿಗೆ ಭೃಂಗಿಯೆಂಬ ಹೆಸರನ್ನು ಬ್ರಹ್ಮನು ಇಟ್ಟನು. ಕಾಡಿಗೆಯಂತೆ ತುಂಬಾ ಕಪ್ಪಾಗಿರುವ ಶರೀರವುಳ್ಳ ಇನ್ನೊಬ್ಬನಿಗೆ ಮಹಾಕಾಲನೆಂದು ಹೆಸರಿಟ್ಟನು.

ತತಸ್ತೌ ಪಾಲಯಾಮಾಸ ಶಂಕರಃ ಪ್ರಮಥೋತ್ತಮೈಃ ।
ಅಪರ್ಣಯಾ ಚಾಪಿ ತಥಾ ಕ್ರಮಾತ್ತಾವತಿವರ್ಧಿತೌ ॥ ೬೭ ॥

ಪ್ರವೃದ್ಧೌ ತೌ ಮಹಾತ್ಮಾನೌ ಹರೋಮಾಪ್ರತಿಪಾಲಿತೌ ।
ಕೃಮಾದ್ಗಣೇಶೌ ಕೃತ್ವಾ ತೌ ಹರೋ ದ್ವಾರಿ ನ್ಯಯೋಜಯತ್ ॥ ೬೮ ॥

॥ ಸಗರ ಉವಾಚ ॥

ಉತ್ಸೃಷ್ಟಮಗ್ನೌ ಯತ್ತೇಜಸ್ತತ್ಕಿಂ ವೃತ್ತಂ ದ್ವಿಜೋತ್ತಮ ।
ತದಹ್ಯಹಂ ಶ್ರೋತುಮಿಚ್ಛುಃ ಸಂಪ್ಲೇಷಾತ್ತದ್ವದಸ್ವ ಮೇ ॥ ೬೯ ॥

॥ ಔರ್ವ ಉವಾಚ ॥

ಅಗ್ನಾವುತ್ಸೃಜ್ಯ ತೇಜಾಂಸಿ ತಾವತ್ಕಾಲಂ ವೃಷಧ್ವಜಃ ।
ಆಕಾಶಗಂಗಾಮುದ್ದಿಶ್ಯ ದೇವಾನಿದಮುವಾಚ ಹ ॥ ೭೦ ॥

ಏತತ್ತೇಜೋ ದುರಾಧರ್ಷಂ ಸ್ತ್ರೀಭಿರನ್ಯೈಃ ಸುರೋತ್ತಮಾಃ ।
ಯೋಗನಿದ್ರಾಮೃತೇ ದೇವೀಂ ಶೈಲಪುತ್ರೀಮೃತೇಽಥವಾ ॥ ೭೧ ॥

---

೬೭. ಅಮೇಲೆ ಆ ಭೃಂಗಿ ಮಹಾಕಾಲರನ್ನು ಶಂಕರನು ತನ್ನ ಪ್ರಮಥಗಣ ಗಳೊಡನೆ ಪೋಷಿಸಿದನು. ಪಾರ್ವತಿಯ ಪೋಷಣೆಯಿಂದಲೂ ಆ ಕುಮಾರರು ಕ್ರಮ ವಾಗಿ ಬೆಳೆದರು.

೬೮. ಭೃಂಗಿ ಮಹಾಕಾಲರು ಶಂಕರ ಪಾರ್ವತಿಯರ ಪೋಷಣೆಯಿಂದ ವೃದ್ಧಿ ಯನ್ನೈದಿದರು. ಒಳಿಕ ಶಂಕರನು ಅವರನ್ನು ಗಣಾಧ್ಯಕ್ಷರನ್ನಾಗಿ ಮಾಡಿ ತನಗೆ ದ್ವಾರಪಾಲಕರಾಗಿರುವಂತೆ ನಿಯಮಿಸಿದನು.

೬೯. ಸಗರರಾಜನು ಹೇಳಿದನು:—ಅಗ್ನಿಯಲ್ಲಿ ತ್ಯಜಿಸಿದ ಶಂಕರನ ರೇತಸ್ಸು ಮುಂದೇನಾಯಿತೆಂಬುದನ್ನು ಕೇಳಲಿಚ್ಛಿಸುವೆನು. ಓ ಬ್ರಾಹ್ಮಣೋತ್ತಮನೇ ! ಆ ವೃತ್ತಾಂತವನ್ನು ನನಗೆ ಹೇಳು.

೭೦. ಔರ್ವಮುನಿಯಿಂತೆಂದನು:—ಶಂಕರನು ತನ್ನ ವೀರ್ಯವನ್ನು ಅಗ್ನಿ ಯಲ್ಲಿ ತ್ಯಜಿಸಿದ ಬಳಿಕ ಆಕಾಶಗಂಗೆಯನ್ನುದ್ದೇಶಿಸಿ, ದೇವತೆಗಳನ್ನು ಕುರಿತು ಹೀಗೆ ಹೇಳಿದನು.

೭೧. ಎಲೈ ದೇವಶ್ರೇಷ್ಠರೇ ! ಧರಿಸಲಶಕ್ಯವಾದ ಈ ವೀರ್ಯವನ್ನು ವಿಷ್ಣು ಮಾಯೆ ವ.ತ್ತು ಪಾರ್ವತಿ ಇವರನ್ನು ಹೊರತು ಇನ್ನಾವ ಸ್ತ್ರೀಯರೂ ಧರಿಸಲಾರರು.

ತಸ್ಮಾದಹಂ ಪ್ರವಕ್ಷ್ಯಾಮಿ ಯಥೇದಂ ತೇಜಸಾ ಸುತಃ ।
ಯತ್ರ ವಾ ಭವಿತಾ ದೇವೋ ಯಾ ಚ ವಾ ತದ್ಗ್ರಹೀಷ್ಯತಿ ॥ ೭೨ ॥

ಇಯಂ ತ್ವಾಕಾಶಗಾ ಗಂಗಾ ಶೈಲರಾಜಸುತಾಪರಾ ।
ಉಮಾಯಾ ಭಗಿನೀ ಜ್ಯೇಷ್ಠಾ ತತೋಽಪತ್ಯಂ ಹುತಾಶನಾತ್ ॥ ೭೩ ॥

ಜನಿಷ್ಯತ್ಯಾತ್ಮವೀರ್ಯೇಣ ತೇಜಸಾನುಪಮದ್ಯುತಿಃ ।
ಭವಿಷ್ಯತಿ ಸ ವಃ ಶ್ರೀಮಾನ್ಸೇನಾಪತಿರರಿಂದಮಃ ॥ ೭೪ ॥

ಸ ತಾರಕಂ ವಃ ಪುರತೋ ವಿಜೇಷ್ಯತಿ ಶಿಖಿಧ್ವಜಃ ।
ಅಮೋಘಯಾ ಮಹಾಶಕ್ತ್ಯಾ ಮಯೈವ ಪ್ರತಿವರ್ಧಿತಃ ॥ ೭೫ ॥

ಇತ್ಯುಕ್ತ್ವಾ ಸ ಮಹಾದೇವೋ ವಿಸೃಜ್ಯ ಸಕಲಾನ್ಸುರಾನ್ ।
ಪಾರ್ವತೀಮಭಿಸಂಮಂತ್ರ್ಯ ಶೌಚಾರ್ಥಂ ಗತವಾಂಸ್ತದಾ ॥ ೭೬ ॥

---

೭೨. ಆದಕಾರಣ ಈ ನನ್ನ ತೇಜಸ್ಸಿನಿಂದ ಪುತ್ರನು ಹೇಗೆ ಎಲ್ಲಿ ಜನಿಸುವನೆಂದೂ ಮತ್ತು ಈ ತೇಜಸ್ಸನ್ನು ಯಾವ ಸ್ತ್ರೀಯು ಧರಿಸುವಳೆಂಬುದನ್ನೂ ಹೇಳುವೆನು.

೭೩. ಇಲ್ಲಿ ಕಾಣಿಸುತ್ತಿರುವ ಆಕಾಶಗಂಗೆಯು ಹಿಮವಂತನ ಮತ್ತೊರ್ವ ಮಗಳು; ಪಾರ್ವತಿಯ ಹಿರಿಯ ಸಹೋದರಿಯು; ತುಂಬಾ ತೇಜಸ್ವಿನಿಯಾದ ಆ ಗಂಗೆಯು ಅಗ್ನಿಯಿಂದ ನನ್ನ ವೀರ್ಯವನ್ನು ಸ್ವೀಕರಿಸಿ, ತನ್ನ ಶಕ್ತಿಯಿಂದ ಅದನ್ನು ಧರಿಸಿ ಪುತ್ರನನ್ನು ಪಡೆಯುವಳು.

೭೪-೭೫. ಆ ಕುಮಾರನು ನನ್ನಿಂದಲೇ ಪೋಷಿಸಲ್ಪಟ್ಟು ಬೆಳೆಯುವನು. ಅವನು ಶ್ರೀಮಂತನೂ, ಶತ್ರುಗಳನ್ನು ಸಂಹರಿಸುವ ಮಹಾಪರಾಕ್ರಮಿಯೂ, ನಿಮಗೆ ಸೇನಾಪತಿಯೂ ಆಗುವನು. ನವಿಲೇ ಅವನ ವಾಹನವು. ನಾನು ಕೊಡುವ ಮಹಾ ಶಕ್ತಿಯಿಂದ ಅವನು ತಾರಕಾಸುರನನ್ನು ನಿಮ್ಮೆದುರಿನಲ್ಲಿಯೇ ಸಂಹರಿಸುವನು.

೭೬. ಹೀಗೆ ಹೇಳಿ ಆ ಮಹಾದೇವನು ದೇವತೆಗಳನ್ನೆಲ್ಲಾ ಕಳುಹಿಸಿ, ಪಾರ್ವತಿಯೊಡನೆ ನಡೆದ ಸಮಾಚಾರವನ್ನು ತಿಳಿಸಿದನು. ಬಳಿಕ ಶೌಚಕ್ಕಾಗಿ ಹೊರಟು ಹೋದನು.

ಪಾರ್ವತೀ ವಚನಂ ಶ್ರುತ್ವಾ ದೇವಾನಾಮಪ್ರಿಯಂ ಸತೀ ।
ಚುಕೋಪ ತ್ರಿದಶಾಘಾಯ ಪುತ್ರಾಶಾಪರಿವರ್ಜಿತಾ ॥ ೭೭ ॥

ಮನ್ಯುನಾ ದಹ್ಯಮಾನೇವ ಸ್ಫುರದೋಷ್ಠಾಧರಾ ತದಾ ।
ಇದಮಾಹ ಸುರಾನ್ದೃಷ್ಟ್ವಾ ಪರಂ ಚ ತ್ಯಕ್ತವೈಥುನಂ ॥ ೭೮ ॥

॥ ದೇವ್ಯುವಾಚ ॥

ಯಸ್ಮಾದ್ವಿಯೋಜಿತಃ ಶಂಭುರ್ಯುಷ್ಮಾಭಿರ್ಮಮ ವೈಥುನೇ ।
ಅಜಾತಪುತ್ರಾ ಚ ಕೃತಾ ವಾರಸ್ತ್ರೀವಾಹನುರ್ದಿತಾ ॥ ೭೯ ॥

ತಸ್ಮಾತ್ಸರ್ವೇ ಸುರಗಣಾ ಅದ್ಯಾವಧಿ ನಿರಂತರಂ ।
ಮಹಾವೈಥುನವಿಭ್ರಷ್ಟಾ ಭವಂತು ನಿಜಯೋಷಿತಿ ॥ ೮೦ ॥

ತೇಷಾಮಪಿ ತಥಾ ಪುತ್ರಾ ನ ಜನಿಷ್ಯಂತಿ ಮೇ ಯಥಾ ।
ಭಾರ್ಯಾಶ್ಚ ಸಂತ್ವಪತ್ಯೇನ ಹೀನಾ ದೇವ್ಯೋ ವರಾಂಗನಾಃ ॥ ೮೧ ॥

ಯುಷ್ಮಾಸುಂ ಪರಿತಪ್ಸ್ಯಾಮಿ ಪುತ್ರಾಶಾಪರಿವರ್ಜಿತಾ ।
ತಥಾ ಸಂತು ಸಮಸ್ತಾಸ್ತಾ ದೇವ್ಯಃ ಪುತ್ರಾಶಯಾ ಚ್ಯುತಾಃ ॥ ೮೨ ॥

೭೭-೭೮. ದೇವತೆಗಳಾಡಿದ ಈ ಮಾತುಗಳಿಂದ ಪತಿವ್ರತೆಯಾದ ತನಗೆ ಪುತ್ರ ಪ್ರಾಪ್ತಿಯು ಆಗುವುದಿಲ್ಲವೆಂದು ನಿರಾಶಳಾಗಿ, ಆ ಪಾರ್ವತಿಯು ಅವರಮೇಲೆ ತುಂಬ ಕೋಪಗೊಂಡಳು. ಹರನು ರತಿಕ್ರೀಡೆಯನ್ನು ತ್ಯಜಿಸಿ ಹೊರಟುಹೋದುದನ್ನು ನೋಡಿದಮೇಲಂತೂ ಅವಳ ಕೋಪವು ಇಮ್ಮಡಿಯಾಯಿತು; ತುಟಿಗಳು ಅದುರ ತೊಡಗಿದವು. ಹೀಗೆ ಕೋಪಾವಿಷ್ಟಳಾಗಿ ಅಲ್ಲಿರುವ ದೇವತೆಗಳಿಗೆ ಹೀಗೆ ಹೇಳಿದಳು.

೭೯—೮೨. ಎಲೈ ದೇವತೆಗಳಿರಾ! ನೀವು ನನ್ನೊಡನೆ ಶಂಕರನು ನಡೆಸುತ್ತಿದ್ದ ರತಿಕ್ರೀಡೆಗೆ ವಿಘ್ನವನ್ನುಂಟುಮಾಡಿ ಅದನ್ನು ನಿಲ್ಲಿಸಿದಿರಿ. ಈ ನಿಮ್ಮ ಅಯೋಗ್ಯ ವರ್ತನೆಯಿಂದ ನಾನು ವೇಶ್ಯೆಯಂತೆ ಮಕ್ಕಳಿಲ್ಲದೆ ತುಂಬ ದುಃಖಕ್ಕೊಳಗಾಗಿರುವೆನು. ಆದಕಾರಣ ನೀವೂ ಸಹ ಈ ಮೊದಲ್ಗೊಂಡು ಯಾವಾಗಲೂ ನಿಮ್ಮ ಪತ್ನಿಯರಲ್ಲಿ ಮಹಾಮೈಥುನವಿಲ್ಲದವರಾಗಿರಿ. ಆ ನಿಮ್ಮ ಪತ್ನಿಯರೂ ಕೂಡ ನನ್ನಂತೆ ಮಕ್ಕಳಿಲ್ಲದೆ ಅಪುತ್ರವತಿಯರಾಗಲಿ. ಅಲ್ಲದೇ ನಾನು ಪುತ್ರರಲ್ಲಿ ನಿರಾಶಳಾಗಿ ಹೇಗೆ ದುಃಖಿಸುತ್ತಿರುವೆನೋ ಅದರಂತೆ ಆ ನಿಮ್ಮ ಪತ್ನಿಯರೂ ಪುತ್ರರಿಲ್ಲದೆ ದುಃಖಿಸಲಿ.

॥ ಔರ್ವ ಉವಾಚ ॥

ಏವಂ ಸರ್ವಾನ್ಸುರಿಸುತಾ ಶಶಾಪ ಕುಪಿತಾ ಭೃಶಂ ।
ತತ್ಕಾಲಾವಧಿ ನ ಸ್ವರ್ಗೇ ಜಾಯಂತೇ ದೇವಪುತ್ರಕಾಃ ॥ ೮೩ ॥

ನಾದ್ಯಾಪಿ ಸಂಪ್ರಜಾಯಂತೇ ಪುತ್ರಾಸ್ತಾಸು ಸುಧಾಶಿನಾಂ ।
ದಪನೋಽಪಿ ತಥಾ ಕಾಲೇ ಪ್ರಾಪ್ತೇ ಗಂಗೋದರೇ ಸ್ವಯಂ ॥ ೮೪ ॥

ರೇತಃ ಸಂಕ್ರಾಮಯಾಮಾಸ ಶಾಂಭವಂ ಸ್ವರ್ಣಸನ್ನಿಭಂ ।
ಸಾ ತೇನ ರೇತಸಾ ದೇವೀ ಸರ್ವಲಕ್ಷಣಸಂಯುತಂ ॥ ೮೫ ॥

ಪೂರ್ಣಕಾಲೇಽಥ ಸುಷುವೇ ಪುತ್ರಯುಗ್ಮಂ ಮನೋಹರಂ ।
ಏಕಃ ಸ್ಕಂದೋ ವಿಶಾಖಾಖ್ಯೋ ದ್ವಿತೀಯಶ್ಚಾರುರೂಪಧೃಕ್ ॥ ೮೬ ॥

ಶಕ್ತಿದ್ವಯಧರೌ ತೌ ದ್ವೌ ತೇಜಃ ಕಾಂತಿವಿವರ್ಧಿತೌ ।
ತಾವೇಕತ್ವಂ ಜಗಾಮಾಶು ವಿಶಾಖಃ ಸ್ಕಂದ ಏವಚ ॥ ೮೭ ॥

---

೮೩. ಔರ್ವಮುನಿಯು ಹೇಳಿದನು :—ಹೀಗೆ ಕೋಪಗೊಂಡು ಪಾರ್ವತಿಯು ದೇವತೆಗಳನ್ನು ಶಪಿಸಿದಳು. ಆ ಕಾಲ ಮೊದಲುಗೊಂಡು ಸ್ವರ್ಗದಲ್ಲಿ ಕುಮಾರರೇ ಜನಿಸುವುದಿಲ್ಲವು. ಈಗಲೂ ಸಹ ದೇವತೆಗಳಿಗೆ ತಮ್ಮ ಪತ್ನಿಯರಲ್ಲಿ ಪುತ್ರರೇ ಜನಿಸುವುದಿಲ್ಲ.

೮೪. ಮುಂದೆ ಅಗ್ನಿಯೂ ಸಹ ಪ್ರಾಪ್ತಕಾಲದಲ್ಲಿ ಆ ಶಂಕರನ ಸುವರ್ಣಸದೃಶವಾದ ರೇತಸ್ಸನ್ನು ಗಂಗೆಯ ಉದರದಲ್ಲಿ ಸೇರಿಸಿದನು.

೮೫. ದಿನಗಳು ತುಂಬಲು, ಆ ಗಂಗಾದೇವಿಯು ಆ ರೇತಸ್ಸಿನಿಂದ ಸಕಲ ಲಕ್ಷಣಸಂಪನ್ನರೂ, ಮನೋಹರರೂಪುಳ್ಳವರೂ ಆದ ಈರ್ವರು ಪುತ್ರರನ್ನು ಹಡೆದಳು.

೮೬. ಆ ಪುತ್ರರಲ್ಲಿ ಒಬ್ಬನು ಸ್ಕಂದ (ಷಣ್ಮುಖ) ನು, ಮತ್ತೊಬ್ಬನು ಸುಂದರ ರೂಪಿಯಾದ ವಿಶಾಖನೆಂಬುವನು. ಅವರೀರ್ವರೂ ಶಕ್ತಿಯನ್ನು ಧರಿಸಿ ತೇಜಸ್ಸು ಕಾಂತಿ ಇವುಗಳಿಂದ ತುಂಬಾ ಶೋಭಿಸುತ್ತಲಿದ್ದರು.

೮೭. ಆ ಈರ್ವರು ಕುಮಾರರೂ ಸಹ ಕೂಡಲೇ ಒಂದೇ ಶರೀರವಾಗಿ ಸಾಮಾನ್ಯ ಮಗುವಿನಂತೆ ಬಾಲಭಾವವುಳ್ಳ ಶಿಶುವಾಯಿತು.

ಶಿಶುಶ್ಚಾಪ್ಯಭವದ್ಯಾತೋ ಯಥಾನ್ಯಸ್ಯ ಸುತಸ್ತಥಾ ।
ತತಸ್ತಂ ತನಯಂ ಜಾತಂ ತಥಾ ವೃಷ್ಟ್ವಾತಿವಿಸ್ಮಿತಾ ॥ ೮೮ ॥

ಮಧ್ಯೇ ಶರವಣಸ್ಯಾಶು ಗಂಗಾ ತಂ ವ್ಯಸೃಜದ್ಭತಾತ್ ।
ವಿಸೃಜ್ಯ ಗರ್ಭಂ ತಂ ಗಂಗಾ ಬಹುಲಾಯೈ ನ್ಯಯಂ ತದಾ ॥ ೮೯ ॥

ಗರ್ಭವೃತ್ತಾಂತಮಾಚಖ್ಯೌ ಜಾತಂ ಚ ವ್ಯಸೃಜದ್ಯಥಾ ।
ತಚ್ಛ್ರುತ್ವಾ ಬಹುಲಾ ಜ್ಞಾತ್ವಾ ಮಹಾದೇವತನೂದ್ಭವಂ ॥ ೯೦ ॥

ಪರಿಗೃಹ್ಯ ಸುತಂ ತಂ ತು ಪಾಲಯಾಮಾಸ ಕೃತ್ತಿಕಾ ।
ಉಮಾಯಾಃ ಶಂಕರಸ್ಯಾಪಿ ವಿಜ್ಞಾಪ್ಯಾನುಮತೇ ತಯೋಃ ॥ ೯೧ ॥

ತತೋ ನೀತ್ವಾ ದದೌ ದೇವ್ಯೈ ತಂ ಪುತ್ರಮರಿಮರ್ದನಂ ।
ಸೋಽತಿವೃದ್ಧಃ ಶಕ್ತಿಧರೋ ಮಹಾಬಲಪರಾಕ್ರಮಃ ॥ ೯೨ ॥

---

೮೮. ಹೀಗೆ ಜನಿಸಿದ ಶಿಶುವನ್ನು ನೋಡಿ ತುಂಬಾ ಆಶ್ಚರ್ಯಗೊಂಡು, ಗಂಗೆಯು ಅಲ್ಲಿದ್ದ ಶರವಣ ಎಂದರೆ ಜೊಂಡುಹುಲ್ಲಿನ ಮಧ್ಯದಲ್ಲಿ ಆ ಶಿಶುವನ್ನಿಟ್ಟು ಹೊರಟುಹೋದಳು.

೮೯. ಶಿಶುವನ್ನು ತ್ಯಜಿಸಿದಮೇಲೆ ಆ ಗಂಗೆಯು ಅಲ್ಲಿಂದ ಹೊರಟು ಬಹುಲಾ ದೇವಿಯ ಸಮೀಪವನ್ನೈದಿ ತಾನು ಗರ್ಭ ಧರಿಸಿದ ವಿವರವನ್ನೂ, ತನಗೆ ಪುತ್ರನು ಜನಿಸಿದುದನ್ನೂ, ಆ ಪುತ್ರನನ್ನು ತಾನು ಶರಮಧ್ಯದಲ್ಲಿ ಬಿಟ್ಟುಬಂದುದನ್ನೂ, ಹೇಳಿದಳು.

೯೦-೯೧. ಗಂಗೆ ಹೇಳಿದ ಈ ಸಮಾಚಾರವೆಲ್ಲವನ್ನೂ ಕೇಳಿ, ಮಹಾದೇವನ ಪುತ್ರನು ಜನಿಸಿದನೆಂದು ತಿಳಿದು, ಆ ಕೃತ್ತಿಕೆಯು ಪಾರ್ವತೀಪರಮೇಶ್ವರರಿಗೆ ಈ ವಿಷಯವನ್ನು ವಿಜ್ಞಾಪಿಸಿ ಅವರ ಅನುಮತಿಯನ್ನು ಪಡೆದು, ಆ ಕುಮಾರನನ್ನು ತಾನೇ ಸ್ವೀಕರಿಸಿ ಪೋಷಿಸಿದಳು.

೯೨. ಆಮೇಲೆ ಶತ್ರುಸಂಹಾರಕನಾದ ಆ ಕುಮಾರನನ್ನು ಕರೆದುಕೊಂಡು ಹೋಗಿ ಪಾರ್ವತೀದೇವಿಗೆ ಸಮರ್ಪಿಸಿದಳು. ಅಲ್ಲಿ ಶಕ್ತ್ಯಾಯುಧಧಾರಿಯಾದ ಆ ಕುಮಾರನು ಪಾರ್ವತೀಪರಮೇಶ್ವರರಿಂದ ಪೋಷಿತನಾಗಿ ಬಲಪರಾಕ್ರಮಗಳಲ್ಲಿ ವೃದ್ಧಿಗೊಂಡು, ಮುಂದೆ ದೇವಸೇನೆಗೆ ಸೇನಾಪತಿಯಾದನು.

ವರ್ಧಿತಃ ಶಂಕರೇಣಾಶು ದೇವಸೇನಾಧಿಪೋಽಭವತ್ ।
ತತಃ ಸುರಾರಿಂ ಸಗಣಂ ತಾರಕಂ ಲೋಕತಾರಕಂ ॥ ೯೩ ॥

ಶಕ್ತಿಹಸ್ತೋ ಹರಸುತಃ ಪ್ರಮಮಾಥ ಮಹಾಬಲಂ ।
ಏವಮಗ್ನೌ ಸಮುತ್ಸೃಷ್ಟಂ ತೇಜೋ ಭರ್ಗೇಣ ಸಂಗತಂ ॥ ೯೪ ॥

ಯಥಾ ವೃತ್ತಂ ತಥಾ ತೇಽದ್ಯ ಕಥಿತಂ ನೃಪಸತ್ತಮ ।
ಸಾಂಪ್ರತಂ ಪ್ರಸ್ತುತಂ ಶ್ರಾವ್ಯಂ ಮಹಾಕಾಲಸ್ಯ ಭೃಂಗಿಣಃ ॥ ೯೫ ॥

ವೃತ್ತಾಂತಂ ಶೃಣು ರಾಜೇಂದ್ರ ತೌ ಭೂತೌ ಮನುಜೌ ಯಥಾ ॥ ೯೬ ॥

॥ ಇತಿ ಶ್ರೀ ಕಾಲಿಕಾಪುರಾಣೇ ಅಷ್ಟಚತ್ವಾರಿಂಶೋಽಧ್ಯಾಯಃ ॥

---

೯೩. ಮುಂದೆ ಶಕ್ತಿಧರನಾದ ಆ ಶಂಕರನ ಪುತ್ರನು ದೇವಶತ್ರುವೂ, ಲೋಕ ನಾಶಕನೂ, ತುಂಬಾ ಬಲಶಾಲಿಯೂ ಆದ ತಾರಕಾಸುರನನ್ನು, ಅವನ ಸಕಲ ಸೈನ್ಯ ಗಳೊಡನೆ ಸಂಹರಿಸಿದನು.

೯೪. ಎಲೈ ರಾಜೇಂದ್ರನೇ! ಹೀಗೆ ಶಂಕರನು ಅಗ್ನಿಯಲ್ಲಿ ವಿಸರ್ಜಿಸಿದ ವೀರ್ಯವು ಮುಂದೇನಾಯಿತು ಎಂಬುದನ್ನು ನಡೆದಂತೆಯೇ ಈಗ ನಿನಗೆ ತಿಳಿಸಿ ರುವೆನು.

೯೫-೯೬. ಎಲೈ ರಾಜೇಂದ್ರನೇ ! ಈಗ ಮಹಾಕಾಲ ಮತ್ತು ಭೃಂಗಿಗಳು ಮನುಷ್ಯರಾಗಿ ಹೇಗೆ ಹುಟ್ಟಿದರೆಂಬುದೇ ಮೊದಲಾದ ಮನೋಹರವಾದ ವೃತ್ತಾಂತ ವನ್ನು ಹೇಳುವೆನು, ಕೇಳುವವನಾಗು.

ಇಲ್ಲಿಗೆ ನಲವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ ಶ್ರೀ ಕಾಲಿಕಾಪುರಾಣೇ

ಏಕೋನಪಂಚಾಶತ್ತಮೋಧ್ಯಾಯಃ

॥ ಔರ್ವ ಉವಾಚ ॥

ಹರೋ ಯಾವಜ್ಜಗತ್ಯರ್ಥೇ ದೇವವರ್ಗೈಃ ಪ್ರಸಾದಿತಃ ।
ತಾವನ್ಮಹಾಮೈಥುನೇನ ಹೀನೋಽಭೂದುಮಯಾ ಸಹ ॥ ೧ ॥

ವರ್ತತೇ ರತಿಮಾತ್ರೇಣ ಸ್ವೇಚ್ಛಾಂ ಸಂಪೂರಯನ್ ಸದಾ ।
ಯಥಾ ಮನೋರಥಂ ದೇವ್ಯಾಃ ಸತತಂ ಪೂರಯನ್ಮೃಡಃ ॥ ೨ ॥

ಅಥೈಕದೋಮಯಾ ಸಾರ್ಧಂ ನಿಗೂಢೇ ರತಿಮಂದಿರೇ ।
ನರ್ಮಾಽಕರೋನ್ಮಹಾದೇವೋ ಮೋದಯುಕ್ತೋ ರತಿಪ್ರಿಯಃ ॥ ೩ ॥

॥ ನಲವತ್ತೊಂಭತ್ತನೆಯ ಅಧ್ಯಾಯವು ॥

೧-೨. ಔರ್ವಮುನಿ ಇಂತೆಂದನು:-ಜಗತ್ಕಲ್ಯಾಣಕ್ಕಾಗಿ ದೇವತೆಗಳು ಮಹಾ ಮೈಥುನವನ್ನು ತ್ಯಜಿಸುವಂತೆ ಶಂಕರನನ್ನು ಸ್ತೋತ್ರಮಾಡಲು, ಶಂಕರನು ಅವರ ಸ್ತೋತ್ರಕ್ಕೆ ಮೆಚ್ಚಿ ಆಕಾಲ ಮೊದಲುಗೊಂಡು ಪಾರ್ವತಿಯಲ್ಲಿ ಮಹಾಮೈಥುನವನ್ನು ತ್ಯಜಿಸಿ, ಕೇವಲ ರತಿಕ್ರೀಡೆಗಳಿಂದಲೇ ಪಾರ್ವತಿಯನ್ನು ಸಂತೋಷಗೊಳಿಸುತ್ತಾ ವಿಹರಿಸುತ್ತಿದ್ದನು.

೩. ಹೀಗಿರಲೊಂದುದಿನ ಶಂಕರನು ರಹಸ್ಯವಾದ ಕ್ರೀಡಾಗೃಹದಲ್ಲಿ ಪಾರ್ವತಿಯೊಡನೆ ಕೂಡಿ, ಸಂತೋಷದಿಂದ ಕಾಮಕೇಳಿಯಲ್ಲಾ ಸಕ್ತನಾಗಿದ್ದನು.

ಯದಾ ಸಾ ನರ್ಮಣೇ ಯಾತಾ ಗೌರೀ ಸ್ಮರಹರಾಂತಿಕಂ ।
ತದಾ ಭೃಂಗಿಮಹಾಕಾಲೌ ದ್ವಾ ಸ್ಥೌ ದ್ವಾರಿ ಪ್ರತಿಷ್ಠಿತೌ ॥ ೪ ॥

ನರ್ಮಾವಸಾನೇ ಸಾ ದೇವೀ ಮುಕ್ತಧಮ್ಮಿಲ್ಲಬಂಧನಾ ।
ಬಂಧಹೀನಂ ಗಲದ್ಗಾತ್ರಾದ್ವಸ್ತ್ರಮಾಲಂಬ್ಯ ಪಾಣಿನಾ ॥ ೫ ॥

ವ್ಯಸ್ತಹಾರಾ ಗಂಧಪುಷ್ಪೈರಾಕುಲಾ ನಾತಿಶೋಭನಾ ।
ವಿಲುಪ್ತಕುಂಕುಮಾ ದಷ್ಟದಶನಚ್ಛದವಿಭ್ರಮಾ ॥ ೬ ॥

ನಿಃಸೃತಾ ರತಿಸಂಕೇಲಿನಿಲಯಾಜ್ಜಲಜಾನನಾ ।
ಈಷದಾಘೂರ್ಣನಯನಾ ನಿಚಿತಾ ಸ್ವೇದಬಿಂದುಭಿಃ ॥ ೭ ॥

ತಾಂ ನಿಃಸರಂತೀಂ ಸದನಾತ್ತಥಾಭೂತಾಮನಿಂದಿತಾಂ ।
ಅಯೋಗ್ಯಂ ವೀಕ್ಷಿತುಂ ಚಾನ್ಯೈರ್ವೃಷಧ್ವಜಮೃತೇ ಪತಿಂ ॥ ೮ ॥

---

೪. ರತಿಕ್ರೀಡೆಗೆ ಶಂಕರನ ಬಳಿಗೆ ಪಾರ್ವತಿಯು ಹೋಗಿದ್ದಾಗ ಭೃಂಗಿ ಮತ್ತು ಮಹಾಕಾಲರು ಬಾಗಿಲಲ್ಲಿ ದ್ವಾರಪಾಲಕರಾಗಿದ್ದರು.

೫—೭. ರತಿಕ್ರೀಡೆಯು ಮುಗಿಯಲು ಪಾರ್ವತಿಯು ಕ್ರೀಡಾಗೃಹದಿಂದ ಹೊರಹೊರಟಳು. ಆಗ ಪಾರ್ವತಿಯ ತುರುಬು ಬಿಚ್ಚಿಹೋಗಿ, ಕೇಶರಾಶಿಯು ಕೆದರಿ ಹೋಗಿದ್ದಿತು. ಉಟ್ಟಿದ್ದ ಸೀರೆಯು ಬಿಚ್ಚಿಹೋಗಿ ಜಾರುತ್ತಿರಲು, ಕೈಯ್ಯಿಂದ ಸೆರಗನ್ನು ಎಳೆದುಕೊಂಡು ಶರೀರವನ್ನು ಮುಚ್ಚಿಕೊಳ್ಳುತ್ತಿದ್ದಳು. ಕಂಠದಲ್ಲಿದ್ದ ಮುತ್ತಿನಹಾರವೂ, ಗಂಧಪುಷ್ಪಾದ್ಯಲಂಕಾರಗಳೂ ಅಸ್ತವ್ಯಸ್ತವಾಗಿದ್ದವು. ಪಣೆಯಲ್ಲಿದ್ದ ಕುಂಕುಮವು ಅಳಿಸಿಹೋಗಿದ್ದಿತು. ಕೆಳತುಟಿಯಲ್ಲಿ ದಂತಕ್ಷರವು ಕಾಣುತ್ತಲಿದ್ದಿತು. ಕಣ್ಣುಗಳು ಸ್ವಲ್ಪ ಕೆಂಪಾಗಿಯೂ, ಶರೀರವು ಬೆವರುಹನಿಗಳಿಂದ ಕೂಡಿಯೂ ಇದ್ದವು. ರತಿಕೇಳಿಯಿಂದ ಶ್ರಾಂತಳಾಗಿ ಇಂತಹ ಸ್ಥಿತಿಯಿಂದಿರುವ ಆ ಕಮಲ ಮುಖಿಯು ಕೇಳೀಗೃಹದಿಂದ ಹೊರಟಳು.

೮—೧೦. ಇಂತಹ ಸ್ಥಿತಿಯಲ್ಲಿರುವ ಪತಿವ್ರತೆಯಾದ ಆ ಪಾರ್ವತಿಯನ್ನು ಶಂಕರನು ಹೊರತು ಮತ್ತಾರೂ ನೋಡುವುದು ಅನುಚಿತವೆಂದು ಹೇಳಬೇಕಾದದ್ದಿಲ್ಲವಷ್ಟೆ. ದ್ವಾರಪಾಲಕರಾಗಿದ್ದ ಭೃಂಗಿಮಹಾಕಾಲರು ಕ್ರೀಡಾಮಂದಿರದಿಂದ ಹೊರಟು

ದದರ್ಶತುರ್ಮಹಾತ್ಮಾನೌ ನಾತಿಪ್ರೀತ್ಯಾತ್ಮಮಾನಸೌ ।
ಭೃಂಗೀ ಚಾಪಿ ಮಹಾಕಾಲಃ ಪ್ರಾಪ್ತಕಾಲಂ ಚುಕೋಪತುಃ ॥ ೯ ॥

ದೃಷ್ಟ್ವಾ ತಾಂ ಮಾತರಂ ದೀನೌ ತಥಾಭೂತಾವಧೋಮುಖೌ ।
ಚಿಂತಾಂ ಚ ಜಗ್ಮತುಸ್ತೀವ್ರಾಂ ನಿಶ್ವಸತುರುತ್ತಮೌ ॥ ೧೦ ॥

ತೌ ಪಶ್ಯಂತೌ ತದಾ ದೇವೀ ದದರ್ಶ ಹಿಮವತ್ಸುತಾ ।
ಚುಕೋಪ ಚ ತದಾಪರ್ಣಾ ವಾಕ್ಯಂ ಚೈತದುವಾಚ ಹ ॥ ೧೧ ॥

ಏವಂಭೂತಾಂ ಚ ಮಾಂ ಕಸ್ಮಾದಸಂಬದ್ಧಾವಪಶ್ಯತಾಂ ।
ಭವಂತೌ ತನಯೌ ಶುದ್ಧೌ ಹ್ರೀಮರ್ಯಾದಾವಿವರ್ಜಿತೌ ॥ ೧೨ ॥

ಯಸ್ಮಾದಿಮಾಮಮರ್ಯಾದಾಂ ಭವಂತೌ ನಿರಪತ್ರಪೌ ।
ಅಕುರ್ವತಾಂ ತತೋ ಭೂಯಾದ್ಭವತೋರ್ಜನ್ಮಮಾನುಷೇ ॥ ೧೩ ॥

ಮಾನುಷೀಂ ಯೋನಿಮಾಸಾದ್ಯ ಮದವೇಕ್ಷಣದೋಷತಃ ।
ಭವಿಷ್ಯತೋ ಭವಂತೌ ತು ಶಾಖಾಮೃಗಮುಖೌ ಭುವಿ ॥ ೧೪ ॥

ಬರುತ್ತಿರುವ ಪಾರ್ವತಿಯನ್ನು ಯತ್ನವಿಲ್ಲದೆ ನೋಡಬೇಕಾಗಿ ಬಂದುದರಿಂದ ದುಃಖದಿಂದಲೂ, ಕೋಪದಿಂದಲೂ, ಮುಖವನ್ನು ತಗ್ಗಿಸಿ, ಬಹಳವಾದ ಚಿಂತೆಯಿಂದ ನಿಟ್ಟುಸುರುಬಿಟ್ಟರು.

೧೧-೧೪. ಆಗ ಪಾರ್ವತಿಯು ಆ ಭೃಂಗಿ ಮಹಾಕಾಲರು ತನ್ನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತಿರುವುದನ್ನು ನೋಡಿ ಕೋಪಗೊಂಡು, ಅವರನ್ನು ಕುರಿತು ಎಲೈ ಭೃಂಗಿ ಮಹಾಕಾಲರೇ ! ಈ ಸ್ಥಿತಿಯಲ್ಲಿರುವ ನನ್ನನ್ನು ನೀವು ಅಶ್ಲೀಲದೃಷ್ಟಿಯಿಂದ ನೋಡುತ್ತಿರುವುದೇಕೆ ? ನೀವು ನಮ್ಮ ಪುತ್ರರು ; ಒಳ್ಳೆಯ ನಡತೆಯುಳ್ಳವರು ; ಹೀಗಿದ್ದರೂ ಮಾನಮರ್ಯಾದೆಗಳನ್ನು ಬಿಟ್ಟು ಲಜ್ಜಾಸ್ಪದವಾದ ಈ ಕಾರ್ಯವಲ್ಲಿ ಹೇಗೆ ಪ್ರವೃತ್ತರಾದಿರಿ ? ಈ ಅವಸ್ಥೆಯಲ್ಲಿರುವ ನನ್ನನ್ನು ನೋಡಿ ಲಜ್ಜೆಯಿಲ್ಲದೇ ಮರ್ಯಾದೆಯನ್ನು ಮೀರಿರುವುದರಿಂದ ನೀವು ಮನುಷ್ಯ ಜನ್ಮವನ್ನು ಹೊಂದಿ, ಕಪಿಮುಖವುಳ್ಳವರಾಗಿರಿ.

ಇತಿ ತಾವುಮಯಾ ಶಪ್ತೌ ಪರಪುತ್ರೌ ಮಹಾಮತೀ ।
ಭೃಂಗೀ ಚೈವ ಮಹಾಕಾಲಃ ಸ್ವಮಾತುರಂತಿಕಂ ತದಾ ॥ ೧೫ ॥

ತೌ ಸ್ಮಾಸ್ತದುಃಖೌ ತು ತದಾ ದುರ್ಮನಸ್ಕೌ ಹರಾತ್ಮಜೌ ।
ಶಾಪಂ ತಸ್ಯಾ ನ ಸೇಹಾತೇ ಪ್ರೋಚತುಶ್ಚೇದಮದ್ರಿಜಾಂ ॥ ೧೬ ॥

ಅನಾಗಸೌ ಸದೈವಾವಾಂ ಭವತ್ಯಾ ಹಿಮುವತ್ಸುತೇ ।
ಕಥಂ ಶಪ್ತೌ ತ್ವಯಾ ಮಾತರ್ಹತಾದೇವಂ ಪ್ರಕೋಪಿತೌ ॥ ೧೭ ॥

ನಿಯೋಜಿತೌ ಯಥಾ ದ್ವಾರಿ ಮಹೇಶೇನ ತ್ವಯಾ ಸಹ ।
ತಥಾ ನಿಯೋಗಂ ಕುರ್ವಂತೌ ತಿಷ್ಠಾವೋ ದ್ವಾರಿ ಸಂಯುತೌ ॥ ೧೮ ॥

ಹಠಾನ್ನಿಃಸರಣಂ ಗೇಹಾತ್ತವೈವ ನ ಹಿ ಯುಜ್ಯತೇ ।
ಆಗಚ್ಛಂತ್ಯಾ ಭವತ್ಯಾ ತು ದೃಷ್ಟ್ವಾವಾಂ ಸುಸಂಯುತೌ ॥ ೧೯ ॥

ತಸ್ಮಾನ್ನಿರರ್ಥಕಃ ಕೋಪಃ ಕೋ ದೋಷಸ್ತತ್ರ ಚಾವಯೋಃ ।
ತಸ್ಮಾತ್ತತ್ರ ಪ್ರತೀಕಾರಂ ಶೃಣು ಮಾತರನಿಂದಿತೇ ॥ ೨೦ ॥

೧೫-೧೬. ತನ್ನ ಮಕ್ಕಳಾದ ಭೃಂಗಿ ಕಾಲಭೈರವರನ್ನು ಪಾರ್ವತಿಯು ಹೀಗೆ ಶಪಿಸಲು, ಅವರು ಈ ವ್ಯಥೆಯನ್ನು ಸಹಿಸಲಾರದೆ ದುಃಖದಿಂದ ತಾಯಿಯಾದ ಪಾರ್ವತಿಯನ್ನು ಬೇಡಿಕೊಂಡರು.

೧೭-೧೮. ಹಿಮವತ್ಪುತ್ರಿಯಾದ ಓ ಮಾತೆಯೇ! ನಿನ್ನ ವಿಷಯದಲ್ಲಿ ನಾವು ಯಾವಾಗಲೂ ನಿರಪರಾಧಿಗಳು. ಹೀಗಿರುವಾಗ ಅಕಸ್ಮಾತ್ತಾಗಿ ಕೋಪದಿಂದ ನೀನು ನಮ್ಮನ್ನೇಕೆ ಶಪಿಸಿರುವೆ? ನೀನೂ ಶಂಕರನೂ ನಮ್ಮನ್ನು ಬಾಗಿಲಲ್ಲಿ ದ್ವಾರ ಪಾಲಕರನ್ನಾಗಿ ನಿಯಮಿಸಿರುವಿರಿ. ಅದರಂತೆ ನಿಮ್ಮ ಆಜ್ಞೆಯನ್ನು ಪಾಲಿಸುತ್ತಾ ನಾವು ಸದಾ ಬಾಗಿಲಲ್ಲಿ ಎಚ್ಚರಿಕೆಯಿಂದಿರುವೆವು.

೧೯-೨೦. ಆದರೆ ಇಂದು ಇಂತಹ ಸ್ಥಿತಿಯಲ್ಲಿ ಅಕಸ್ಮಾತ್ತಾಗಿ ರತಿಮಂದಿರದಿಂದ ಹೊರಟುಬಂದುದು ನ್ಯಾಯವಲ್ಲ. ನಾವು ಯತ್ನವಿಲ್ಲದೆ ನೋಡಬೇಕಾಯಿತು. ಇದರಲ್ಲಿ ನಮಗೆ ಯಾವ ದುರುದ್ದೇಶವೂ ಇಲ್ಲ. ಹಠಾತ್ತಾಗಿ ಬಂದ ನಿನ್ನನ್ನು ನೋಡಿದಮೇಲೆ ನಾವು ಎಚ್ಚರಗೊಂಡೆವು. ಆದುದರಿಂದ ನಿನ್ನ ಕೋಪವು ನ್ಯಾಯ

ತ್ವಂ ಮಾನುಷೀ ಕ್ಷಿತೌ ಭೂಯಾ ಹರೋ ಭವತು ಮಾನುಷಃ ।
ಮಾನುಷಸ್ಯ ಹರಸ್ಯಾಥ ಜಾಯಾಯಾಂ ಹರತೇಜಸಾ ॥ ೨೧ ॥

ಭವತ್ಯಾಶ್ಚಾಪಿ ಮಾನುಷ್ಯಾ ಭವಿಷ್ಯಾಮಸ್ತಥೋದರೇ ।
ಯದಿ ಸತ್ಯಂ ಹರಸುತಾವಾವಾಂ ಯದಿ ನಿರಾಗಸೌ ॥ ೨೨ ॥

ತದಾವಯೋರಿದಂ ವಾಕ್ಯಂ ಸತ್ಯಮಸ್ತು ಗಿರೀಃ ಸುತೇ ।
ಇತ್ಯನ್ಯೋನ್ಯಮಥೋ ಶಾಪಂ ದತ್ತ್ವಾ ದತ್ತ್ವಾ ಸುದಾರುಣಂ ॥ ೨೩ ॥

ವಿವಿಶುರ್ನೃಪಶಾರ್ದೂಲ ಗೌರೀ ಹರಸುತೌ ಚ ತೌ ।
ಅಥ ಕಾಲೇ ವ್ಯತೀತೇ ತು ಸರ್ವಜ್ಞೋ ವೃಷಭಧ್ವಜಃ ॥ ೨೪ ॥

ತದ್ಭಾವಿ ಕರ್ಮ ಜ್ಞಾತ್ವೈವ ಮಾನುಷೋಽಭ್ಯಭವತ್ಸ್ವಯಂ ।
ಬ್ರಹ್ಮಣೋ ದಕ್ಷಿಣಾಂಗುಷ್ಠಾದ್ದಕ್ಷೋ ಬ್ರಹ್ಮಸುತೋಽಭವತ್ ॥ ೨೫ ॥

ವಾದುದಲ್ಲ. ಈ ವಿಷಯದಲ್ಲಿ ನಮ್ಮ ದೋಷವೇನು ? ಸಾಧ್ವಿಯಾದ ಓ ಮಾತೆಯೆ! ಈ ನಿನ್ನ ಶಾಪಕ್ಕೆ ಪ್ರತೀಕಾರವನ್ನು ಹೇಳುವೆವು ಕೇಳು. ನೀನೂ ಸಹ ಮನುಷ್ಯ ಸ್ತ್ರೀಯಾಗಿ ಜನಿಸು. ಶಂಕರನೂ ಸಹ ಮನುಷ್ಯ ಜನ್ಮವನ್ನು ಹೊಂದಲಿ. ಆಗ ನಿನ್ನ ಶಾಪದಂತೆ ಮನುಷ್ಯನಾದ ಹರನ ತೇಜಸ್ಸಿನಿಂದ ಮನುಷ್ಯಸ್ತ್ರೀಯಾವ ನಿನ್ನ ಉದರ ದಲ್ಲಿ ನಾವೂ ಮನುಷ್ಯರಾಗಿ ಜನಿಸುವೆವು. ಎಲೈ ಗಿರಿಜೆಯೇ! ಹರಸುತರಾದ ನಾವು ನಿಜವಾಗಿ ಯಾವ ತಪ್ಪೂ ಇಲ್ಲದವರಾದರೆ, ಈ ನಮ್ಮ ವಾಕ್ಯವು ಸತ್ಯವಾಗಲಿ, ಎಂದು ನುಡಿದರು.

೨೩. ಎಲೈ ರಾಜೇಂದ್ರನೇ! ಹೀಗೆ ಪರಸ್ಪರವಾಗಿ ಭಯಂಕರವಾದ ಶಾಪ ಗಳನ್ನು ಕೊಟ್ಟುಗೊಂಡು ಆ ಗೌರೀ ಮತ್ತು ಭೃಂಗಿ ಮಹಾಕಾಲರು ತಮ್ಮತಮ್ಮ ಮಂದಿರಗಳಿಗೆ ತೆರಳಿದರು.

೨೪. ಅನಂತರ ಕೆಲವುಕಾಲ ಕಳೆಯಲು, ಸರ್ವಜ್ಞನಾದ ಶಂಕರನು ಮುಂದಾಗ ಬೇಕಾದ ಕಾರ್ಯವನ್ನು ತಿಳಿದವನಾದುದರಿಂದ ತಾನೇ ಮನುಷ್ಯನಾಗಿ ಅವತರಿ ಸಿದನು.

೨೫. ಬ್ರಹ್ಮನ ಬಲಗಾಲಿನ ಹೆಬ್ಬೆರಳಿನಿಂದ ಬ್ರಹ್ಮನ ಮಾನಸಪುತ್ರನಾದ ದಕ್ಷಬ್ರಹ್ಮನು ಜನಿಸಿದನು. ಅವನಿಗೆ ಅದಿತಿ ಎಂಬ ಮಗಳು ಜನಿಸಿದಳು. ಅವಳಿಗೆ ಪೂಷಾ ಎಂಬುವನು ಪುತ್ರನಾದನು.

ಅದಿತಿಸ್ತತ್ಸುತಾ ಜಾತಾ ತತಃ ಪೂಷಾಪ್ಯಯೋಽಭವತ್ ।
ಪೂಷ್ಣಃ ಪುತ್ರೋಽಭವತ್ಪೌಷ್ಯಃ ಸರ್ವಶಾಸ್ತ್ರಾರ್ಥಪಾರಗಃ ॥ ೨೬ ॥

ಯಸ್ಯ ತುಲ್ಯೋ ನೃಪೋ ಭೂಮೌ ನ ಭೂತೋ ನ ಭವಿಷ್ಯತಿ ।
ಸ ಪುತ್ರಹೀನೋ ರಾಜಾಭೂತ್ಪೌಷ್ಯೋ ನೃಪತಿಸತ್ತಮಃ ॥ ೨೭ ॥

ಶೇಷೇ ವಯಸಿ ಸಂಪ್ರಾಪ್ತೇ ಭಾರ್ಯಾಭಿಸ್ತಿಸೃಭಿಃ ಸಹ ।
ಪೌಷ್ಯಃ ಪರಮಯಾ ಭಕ್ತ್ಯಾ ಬ್ರಹ್ಮಾಣಂ ಪರ್ಯತೋಷಯತ್ ॥ ೨೮ ॥

ತಸ್ಯ ಪ್ರಸನ್ನೋ ಭಗವಾನ್ಬ್ರಹ್ಮಾ ಲೋಕಪಿತಾಮಹಃ ।
ತಮುವಾಚ ಚ ರಾಜಾನಂ ಕಿಮಿಚ್ಛಸಿ ವದಸ್ವಮೇ ॥ ೨೯ ॥

ಪ್ರಸನ್ನೋಽಸ್ಮಿ ನೃಪಶ್ರೇಷ್ಠ ಪ್ರದಾಸ್ಯಾಮಿ ಯಥೇಪ್ಸಿತಂ ।
ಯದಿಷ್ಟಂ ತವ ಜಾಯಾನಾಂ ತದ್ವದಿಷ್ಯಸಿ ಸಾಂಪ್ರತಂ ॥ ೩೦ ॥

ಪೌಷ್ಯ ಉವಾಚ

ಹಿರಣ್ಯಗರ್ಭಾಪುತ್ರೋಽಹಂ ಪುತ್ರಾರ್ಥೀ ತ್ವಮುಪಾಗತಃ ।
ತ್ವಯಿ ಪ್ರಸನ್ನೇ ಪುತ್ರೋ ಮೇ ಭೂಯಾಲ್ಲಕ್ಷಣಸಂಯುತಃ ॥ ೩೧ ॥

೨೬-೨೭. ಆ ಪೂಷನಿಗೆ ಸಕಲಶಾಸ್ತ್ರಪಂಡಿತನಾದ ಪೌಷ್ಯನೆಂಬ ಪುತ್ರನು ಜನಿಸಿದನು. ಆ ಪೌಷ್ಯನಂತಹ ರಾಜನು ಭೂಮಿಯಲ್ಲಿ ಹಿಂದೆ ಜನಿಸಿರಲಿಲ್ಲ; ಮುಂದ ಜನಿಸುವುದೂ ಇಲ್ಲ. ಆದರೆ ಆ ರಾಜೋತ್ತಮನಾದ ಪೌಷ್ಯನಿಗೆ ಮಕ್ಕಳೇ ಇರಲಿಲ್ಲ.

೨೮. ಇಳಿಯ ವಯಸ್ಸು ಪ್ರಾಪ್ತವಾಗಲು ಆ ಪೌಷ್ಯರಾಜನು ತನ್ನ ಮೂವರು ಹೆಂಡತಿಯರೊಡನೆ ತುಂಬಾ ಭಕ್ತಿಯಿಂದ ಬ್ರಹ್ಮನನ್ನು ಆರಾಧನೆಯಿಂದ ಸಂತೋಷ ಗೊಳಿಸಿದನು.

೨೯-೩೦. ಲೋಕಪಿತಾಮಹನಾದ ಭಗವಾನ್ ಬ್ರಹ್ಮನು ಈ ರಾಜನ ಆರಾಧನೆಗೆ ಮೆಚ್ಚಿ ಅವನನ್ನು ಕುರಿತು, ಎಲೈ ರಾಜೇಂದ್ರನೇ! ನಿನಗೇನು ಬೇಕು? ಇಗೋ ನಾನು ಪ್ರಸನ್ನನಾಗಿರುವೆನು. ನಿನಗೂ ನಿನ್ನ ಪತ್ನಿಯರಿಗೂ ಬೇಕಾದ ವರ ವನ್ನು ಕೇಳಿಕೋ. ಅದನ್ನು ಅವಶ್ಯವಾಗಿ ಕೊಡುವೆನು ಎಂದು ಹೇಳಿದನು.

೩೧-೩೩. ಪೌಷ್ಯನಿಂತೆಂದನು:-ಓ ಬ್ರಹ್ಮನೇ! ನನಗೆ ಮಕ್ಕಳಿಲ್ಲವಾದ್ದರಿಂದ ನಿನ್ನನ್ನು ಭಕ್ತಿಯಿಂದ ಆರಾಧಿಸಿರುವೆನು. ನೀನು ಪ್ರಸನ್ನನಾಗಿದ್ದರೆ ಲಕ್ಷಣವಂತನಾದ

ಏತದರ್ಥೇ ಸಭಾರ್ಯೋಽಹಂ ಭಕ್ತ್ಯಾ ತ್ವಾಂ ಸಮುಪಸ್ಥಿತಃ
ಯಥಾ ಮೇ ಜಾಯತೇ ಪುತ್ರಸ್ತಥಾ ಕುರು ಜಗತ್ಪತೇ ॥ ೩೨ ॥

ಪುನ್ನಾನ್ನೋ ನರಕಾತ್ಪುತ್ರಸ್ತ್ರಾಯತೇ ಪಿತರಂ ಪ್ರಸೂಂ।
ಅತಸ್ತಸ್ಮಾದ್ಭಯಂ ಬಹ್ಮಂಸ್ತ್ವ ನಾಶಯಿತುಮರ್ಹಸಿ ॥ ೩೩ ॥

॥ ಬ್ರಹ್ಮೋವಾಚ ॥

ಶೃಣು ಪೌಷ್ಯ ಯಥಾ ಭಾವೀ ಪುತ್ರಸ್ತವ ಕುಲೋದ್ವಹಃ।
ತದಹಂ ತೇ ವದಾಮ್ಯದ್ಯ ಭಾರ್ಯಾಭಿಸ್ತತ್ಸಮಾಚರ ॥ ೩೪ ॥

ಇದಂ ಫಲಂ ಗೃಹಾಣ ತ್ವಂ ಮಯಾ ದತ್ತಂ ನೃಪೋತ್ತಮ।
ಅಜೀರ್ಣಂ ಬಹುಲೇ ಕಾಲೇ ಪ್ರಾಪ್ತೇಽಪಿ ಸುರಸಂಸದಾ ॥ ೩೫ ॥

ಫಲಮೇತತ್ಸಮಾದಾಯ ಯಾವತ್ಸಂವತ್ಸರತ್ರಯಂ।
ಆರಾಧಯ ಮಹಾದೇವಂ ಸ ಪ್ರಸನ್ನೋ ಭವಿಷ್ಯತಿ ॥ ೩೬ ॥

ಯಥಾ ಸಂಭಾಷತೇ ಭರ್ಗಃ ಫಲಮೇತತ್ತಥಾ ಭವಾನ್।
ಕರಿಷ್ಯತಿ ಫಲಂ ರಾಜನ್ಭಾರ್ಯಾಭಿಸ್ತ್ರಿಭಿಃ ಸಹ ॥ ೩೭ ॥

ಪುತ್ರನನ್ನು ನನಗೆ ಅನುಗ್ರಹಿಸು. ನನ್ನ ಪತ್ನಿಯರಿಗೂ ಇದೇ ಅಭಿಲಾಷೆ ಇರುವುದು. ಪುತ್ ಎಂಬ ನರಕದಿಂದ ತನ್ನ ತಂದೆತಾಯಿಗಳನ್ನು ರಕ್ಷಿಸುವ ಮಗನಿಗೆ ಪುತ್ರನೆಂದು ಹೆಸರು ಪ್ರಸಿದ್ಧವಷ್ಟೆ. ಅಂತಹ ಪುತ್ರನನ್ನು ನಮಗೆ ಕರುಣಿಸಿ ನರಕವ ಭಯವನ್ನು ನಮಗೆ ತಪ್ಪಿಸು ಎಂದು ಪ್ರಾರ್ಥಿಸಿದನು.

೩೪-೩೫. ಬ್ರಹ್ಮನು ಹೇಳಿದನು:—ಎಲೈ ಪೌಷ್ಯರಾಜನೇ! ನಿನ್ನ ಕುಲ ನ್ನು ಉದ್ಧರಿಸುವಂತಹ ಪುತ್ರನು ಹೇಗೆ ಜನಿಸುವನೆಂಬುದನ್ನು ಹೇಳುವೆನು, ಕೇಳು. ನಾನು ಹೇಳಿದಂತೆ ಪತ್ನಿಯರೊಡನೆ ಅದನ್ನು ಆಚರಿಸು. ನಾನು ಕೊಡುವ ಈ ಫಲವನ್ನು ತೆಗೆದುಕೋ. ಈ ಫಲವನ್ನು ತಿಂದು ದೇವತೆಗಳೂ ಸಹ ಎಷ್ಟುಕಾಲವಾದರೂ ಜೀರ್ಣಿಸಿಕೊಳ್ಳಲಾರರು. ಇವರ ಮಹಿಮೆಯು ಅಂತಹುದು.

೩೬-೩೮. ಈ ಫಲವನ್ನು ತೆಗೆದುಕೊಂಡು, ಮೂರುವರ್ಷಗಳಕಾಲ ಮಹಾದೇವನನ್ನು ಆರಾಧಿಸು. ಅವನು ನಿನಗೆ ಪ್ರಸನ್ನನಾಗಿ ಏನು ಹೇಳುವನೋ ಅವರಂತೆ

ತಪಸ್ತೇ ಲಕ್ಷಣೋಪೇತಸ್ತನಯಃ ಕುಲವರ್ಧನಃ ।
ಭವಿಷ್ಯತಿ ಸ್ವಯಂ ಶಾಸ್ತಾ ಚಕ್ರವರ್ತೀ ವಸುಂಧರಾಂ ॥ ೩೮ ॥

ಇತ್ಯುಕ್ತ್ವಾ ಪ್ರಯಯೌ ಬ್ರಹ್ಮಾ ರಾಜಾಪಿ ಸಪ ಭೀರುಭಿಃ ।
ಹರಂ ಯಷ್ಟುಂ ಸಮಾರೇಭೇ ಭಕ್ತ್ಯಾ ಪರಮಯಾ ಯುತಃ ॥ ೩೯ ॥

ನಿರಾಶೀಃ ಸಂಯತಾಹಾರಃ ಕದಾಚಿತ್ಫಲಭೋಜನಃ ।
ವೃಷದ್ವತೀನದೀತೀರೇ ಫಲಂ ಸಂಸ್ಥಾಪ್ಯ ಚಾಗ್ರತಃ ॥ ೪೦ ॥

ಪುಷ್ಪಾರ್ಘ್ಯದೀಪಧೂಪೈಶ್ಚ ವೃಷಧ್ವಜಮತರ್ಪಯತ್ ।
ಸ ತು ವರ್ಷತ್ರಯೇೞತೀತೇ ಮಹಾದೇವೋ ಜಗತ್ಪತಿಃ ॥ ೪೧ ॥

ಪೌಷ್ಯಸ್ಯ ನೃಪತೇಃ ಸಮ್ಯಕ್ಪ್ರಸಸಾದಾರ್ಥಸಿದ್ಧಯೇ ।
ಪ್ರಸನ್ನಃ ಪ್ರಾಹ ನೃಪತಿಂ ಮಹಾದೇವೋ ಹಸನ್ನಿವ ॥ ೪೨ ॥

ನಿನ್ನ ಮೂವರು ಪತ್ನಿಯರೊಡನೆ ಈ ಫಲದ ವಿಷಯದಲ್ಲಿ ನಡೆಸು. ಅನಂತರ ಲಕ್ಷಣವಂತನೂ, ನಿನ್ನ ಕುಲವನ್ನುದ್ಧರಿಸುವವನೂ ಆದ ಪುತ್ರನು ನಿನಗೆ ಜನಿಸುವನು. ಅವನು ಚಕ್ರವರ್ತಿಯಾಗಿ ಭೂಮಂಡಲವನ್ನು ಆಳುವನು.

೩೯. ಹೀಗೆ ಹೇಳಿ ಬ್ರಹ್ಮನು ತೆರಳಿದನು. ರಾಜನೂ ಸಪ ತನ್ನ ಪತ್ನಿಯರೊಡನೆ ಶಂಕರನನ್ನು ಭಕ್ತಿಯಿಂದ ಆರಾಧಿಸಲುಪಕ್ರಮಿಸಿದನು.

೪೦. ಕೆಲವೊಮ್ಮೆ ಅವನು ಮಿತವಾದ ಆಹಾರವನ್ನು ಭುಜಿಸುತ್ತಲೂ, ಕೆಲವು ಕಾಲ ಹಣ್ಣುಗಳನ್ನು ಮಾತ್ರ ಸೇವಿಸುತ್ತಲೂ, ಕೆಲವುಕಾಲ ಯಾವ ಆಹಾರವನ್ನೂ ಸೇವಿಸದೇ ನಿರಾಹಾರಿಯಾಗಿಯೂ ಇದ್ದು, ವೃಷದ್ವತೀ ಎಂಬ ನದಿಯ ದಡದಲ್ಲಿ ಫಲವನ್ನು ಸ್ಥಾಪಿಸಿ, ಪುಷ್ಪ, ಅರ್ಘ್ಯ, ಪಾದ್ಯ, ಮಧುಪರ್ಕ, ಧೂಪ, ದೀಪ ಮುಂತಾದವುಗಳಿಂದ ಶಂಕರನನ್ನು ಆರಾಧಿಸಿದನು.

೪೧-೪೨. ಹೀಗೆ ಮೂರು ವರ್ಷಗಳು ಕಳೆಯಲು, ಜಗದೊಡೆಯನಾದ ಶಂಕರನು ಆ ಪೌಷ್ಯರಾಜನಿಗೆ ಪ್ರಸನ್ನನಾಗಿ, ಅವನ ಇಷ್ಟಾರ್ಥವನ್ನು ನೆರವೇರಿಸಿಕೊಡಲುದ್ದೇಶದಿಂದ ಆ ರಾಜನನ್ನು ಕುರಿತು ಮಂದಹಾಸದಿಂದ ಎಲೈ ರಾಜನೇ ! ನೀನು ಯಾವ ಪ್ರಯೋಜನಕ್ಕಾಗಿ ನನ್ನನ್ನು ಆರಾಧಿಸುತ್ತಿರುವೆ? ಅದನ್ನು ಹೇಳು. ನೆರವೇರಿಸಿಕೊಡುವೆನು ಎಂದು ಹೇಳಿದನು.

ಉಪಾಸಸೇ ಕಿಮುರ್ಥಂ ಮಾಂ ತನ್ಮೇ ವದ ದದಾಮಿ ತೇ ।

॥ ಪೌಷ್ಯ ಉವಾಚ ॥

ಅಪುತ್ರೋಽಹಂ ಪುತ್ರಕಾಮಸ್ತಚ್ಛೃಣುಷ್ವ ವೃಷಧ್ವಜ ॥ ೪೩ ॥

ಯಥಾಽಹಂ ಪುತ್ರವಾನ್ಸ್ಯಾಂ ವೃಷಧ್ವಜ ತಥಾ ಕುರು ।
ಇತಿ ಸ ನ್ಯಗದದ್ರಾಜಾ ಭಾರ್ಯಾಭಿಃ ಸಹ ಹರ್ಷಿತಃ ॥ ೪೪ ॥

ಪ್ರಣಮ್ಯ ಸ್ತುತಿಪೂರ್ವೇಣ ಭಕ್ತಿನಮ್ರಾತ್ಮಮಾನಸಃ ।
ತತಃ ಪುತ್ರಾರ್ಥಿನಂ ಭೂಪಂ ಪ್ರಸನ್ನೋ ವೃಷಭಧ್ವಜಃ ॥ ೪೫ ॥

ಬ್ರಹ್ಮದತ್ತಫಲಂ ಹಸ್ತೇ ಕೃತ್ವೇದಂ ತಮುವಾಚ ಹ ।

॥ ಈಶ್ವರ ಉವಾಚ ॥

ಇದಂ ಫಲಂ ಬ್ರಹ್ಮದತ್ತಂ ವಿಭಜ್ಯ ನೃಪತೇ ತ್ರಿಧಾ ॥ ೪೬ ॥

ಭೋಜಯೇಥಾಃ ಸ್ವಜಾಯಾಸ್ತ್ವಂ ಪ್ರಹೃಷ್ಟಃ ಸುಸ್ಥಮಾನಸಃ ।
ತತಃ ಪ್ರವೃತ್ತೇ ಭವತ ಏತಾಸು ಋತುಸಂಗಮೇ ॥ ೪೭ ॥

೪೩-೪೪. ಪೌಷ್ಯರಾಜನು ಹೇಳಿದದು :—ಓ ಶಂಕರನೇ! ನಾನು ಮಕ್ಕಳಿಲ್ಲದವನಾಗಿರುವೆನು. ಆದುದರಿಂದ ಪುತ್ರರನ್ನು ಅಪೇಕ್ಷಿಸುವೆನು. ನನಗೆ ಮಕ್ಕಳಾಗುವಂತೆ ಅನುಗ್ರಹಿಸು ಎಂದು ಭಕ್ತಿಯಿಂದ ನಮ್ರನಾಗಿ ಪತ್ನಿಯರೊಡನೆ ಶಂಕರನನ್ನು ಬೇಡಿಕೊಂಡನು.

೪೫-೪೭. ಬಳಿಕ ಶಂಕರನು ಆ ರಾಜನಿಗೆ ಪ್ರಸನ್ನನಾಗಿ, ಬ್ರಹ್ಮನು ಹಿಂದೆ ಕೊಟ್ಟ ಫಲವನ್ನು ರಾಜನ ಕೈಯ್ಯಲ್ಲಿಟ್ಟು, ಎಲೈ ರಾಜನೇ! ಈ ಫಲವನ್ನು ಹಿಂದೆ ಬ್ರಹ್ಮನು ಕೊಟ್ಟನಷ್ಟೆ. ಈಗ ನೀನು ಇದನ್ನು ತೆಗೆದುಕೊಂಡು ಸಂತೋಷಚಿತ್ತನಾಗಿ ನಿನ್ನ ಮೂವರು ಪತ್ನಿಯರಿಗೂ ಸಮವಾಗಿ ಹಂಚಿಕೊಡು. ಬಳಿಕ ಋತುಸ್ನಾನಾನಂತರ ನಿನ್ನ ಪತ್ನಿಯರೊಡನೆ ನಿನ್ನ ಸಮಾಗಮವು ನೆರವೇರಿದರೆ, ಈ ಫಲದ ಮಹಿಮೆಯಿಂದ ನಿನ್ನ ಮೂವರು ಪತ್ನಿಯರೂ ಏಕಕಾಲದಲ್ಲಿ ಗರ್ಭವನ್ನು ಧರಿಸಿ ಮೂವರೂ ಏಕಕಾಲದಲ್ಲಿ ಪುತ್ರರನ್ನು ಪ್ರಸುವಿಸುವರು.

ಆಧಾಸ್ಯಂತಿ ತು ಗರ್ಭಾಂಸ್ತು ಭಾರ್ಯಾಸ್ತೇ ಯುಗಪನ್ನೃಪ ।
ಕಾಲೇ ಪ್ರಾಪ್ತೇ ಚ ಯುಗಪತ್ಪ್ರಸವೋ ಯೋಷಿತಾಂ ತವ ॥ ೪೮ ॥

ಭವಿಷ್ಯತಿ ನೃಪಶ್ರೇಷ್ಠ ತತ್ರೈತ್ಥಂ ತ್ವಂ ಕರಿಷ್ಯಸಿ ।
ಏಕಸ್ಯಾ ಜಠರೇ ಶೀರ್ಷಭಾಗಸ್ತೇ ಸಂಭವಿಷ್ಯತಿ ॥ ೪೯ ॥

ಅಪರಸ್ಯಾಸ್ತದಾ ಕುಕ್ಷೇರ್ಮಧ್ಯಭಾಗೋ ಭವಿಷ್ಯತಿ ।
ಅಘೋನಾಭ್ಯಾಸ್ತು ಯೋ ಭಾಗಃ ಸೋಽಪರಸ್ಯಾಂ ಭವಿಷ್ಯತಿ ॥ ೫೦ ॥

ತಚ್ಚ ಖಂಡತ್ರಯಂ ಭೂಪಂ ಯಥಾಸ್ಥಾನಂ ಪೃಥಕ್ ಪೃಥಕ್ ।
ಯೋಜಯಿಷ್ಯತಿ ಪಶ್ಚಾತ್ತೇ ಪುತ್ರ ಏಕೋ ಭವಿಷ್ಯತಿ ॥ ೫೧ ॥

ತಸ್ಯ ಶೀರ್ಷೇ ಚಂದ್ರರೇಖಾ ಸಹಜಾ ಸಂಭವಿಷ್ಯತಿ ।
ತೇನೈವ ನಾಮ್ನಾ ಸ ಖ್ಯಾತಿಂ ಗಮಿಷ್ಯತಿ ಚ ಭೂತಲೇ ॥ ೫೫ ॥

ಇತ್ಯುಕ್ತ್ವಾ ಸ ಮಹಾದೇವ ಸ್ತಾಸಾಂ ಗರ್ಭಾನ್ ಸ್ವಯಂ ತದಾ ।
ಸಂಸ್ಕರ್ತುಂ ಜಾನ್ಹವೀತೋಯಮಾತ್ಮವಾಸಾಯ ವೈ ನ್ಯಧಾತ್ ॥ ೫೩ ॥

೪೮-೫೨. ಬಳಿಕ ನೀನು ಆಚರಿಸಬೇಕಾದ ಕಾರ್ಯವೊಂದಿರುವುದು. ನಿನ್ನ ಮೂವರು ಪತ್ನಿಯರೂ ಪುತ್ರರನ್ನು ಪ್ರಸುವಿಸುವಾಗ, ಓರ್ವ ಪತ್ನಿಯಲ್ಲಿ ಪುತ್ರನ ಶಿರಸ್ಸು ಮಾತ್ರ ಜನಿಸುವುದು. ಮತ್ತೋರ್ವ ಪತ್ನಿಯಲ್ಲಿ ನಾಭಿಯಿಂದ ಕಂಠದ ವರೆಗಿನ ಶರೀರದ ಮಧ್ಯಭಾಗವೂ, ಮೂರನೆಯ ಪತ್ನಿಯಲ್ಲಿ ನಾಭಿಯಿಂದ ಪಾದದ ವರೆಗೆ ಕೆಳಭಾಗದ ಶರೀರವೂ ಜನಿಸುವುದು. ಓ ರಾಜೇಂದ್ರನೇ ! ಬೇರೆಬೇರೆಯಾಗಿರುವ ಶರೀರದ ಆ ಮೂರು ಭಾಗಗಳನ್ನೂ ಆಯಾಯ ಸ್ಥಾನಗಳಲ್ಲಿ ಸೇರಿಸು. ಅದರಿಂದ ಆ ಮೂರುಭಾಗಗಳೂ ಒಂದಾಗಿ ಸೇರಿ ನಿನಗೆ ಓರ್ವ ಲಕ್ಷಣವಂತನಾದ ಪುತ್ರನಾಗುವನು. ಹುಟ್ಟುವಾಗಲೇ ಆ ಶಿಶುವಿನ ಶಿರಸ್ಸಿನಲ್ಲಿ ಚಂದ್ರಕಲೆಯು ಇರುವುದು. ಅದರಿಂದ ಆ ಪುತ್ರನು ಚಂದ್ರಶೇಖರನೆಂದು ಭೂಮಿಯಲ್ಲಿ ಪ್ರಸಿದ್ಧನಾಗುವನು ಎಂದು ಹೇಳಿದನು.

೫೩. ಹೀಗೆ ಹೇಳಿ ಆ ಮಹಾದೇವನು ಆ ರಾಜಪತ್ನಿಯರ ಗರ್ಭಕೋಶವನ್ನು ತನ್ನ ವಾಸಕ್ಕೋಸ್ಕರ ಶುದ್ಧಗೊಳಿಸಲು ಗಂಗಾಜಲದಿಂದ ಪ್ರೋಕ್ಷಿಸಿದನು.

ತತಃ ಫಲೇ ಸ್ವಯಂ ದೇವಃ ಪ್ರವಿವೇಶ ವೃಷಧ್ವಜಃ ।
ತತ್ಕ್ಷಣಾತ್ತತ್ಫಲಂ ಭೂತಂ ತ್ರಿಭಾಗಂ ಸ್ವಯಮೇವ ಹಿ ॥ ೫೪ ॥

ಪೌಷ್ಯಸ್ತತ್ಫಲಮಾದಾಯ ಮುದಿತಃ ಸಹ ಭಾರ್ಯಯಾ ।
ಪ್ರಯಯೌ ಮಂದಿರಂ ಹೃಷ್ಟೋ ಅನುಜ್ಞಾಪ್ಯ ವೃಷಧ್ವಜಂ ॥ ೫೫ ॥

ತತಃ ಸಮುಚಿತೇ ಕಾಲೇ ಪ್ರಾಪ್ತೇ ತಾಭಿಸ್ತು ಭಕ್ಷಿತಂ ।
ತತ್ಫಲಂ ನೃಪಶಾರ್ದೂಲ ಗರ್ಭಾಶ್ಚಾಪ್ಯಾಹಿತಾಃ ಶುಭಾಃ ॥ ೫೬ ॥

ಸಂಪೂರ್ಣೇ ಗರ್ಭಕಾಲೇ ತು ಗರ್ಭೇಭ್ಯಃ ಸಮುಜಾಯತ ।
ಖಂಡತ್ರಯಂ ಪೃಥಗ್ರಾಜನ್ ಯಥಾ ಭಗೀರಣ ಭಾಷಿತಂ ॥ ೫೭ ॥

ತಚ್ಚ ಖಂಡತ್ರಯಂ ಪೌಷ್ಯೋ ಯಥಾಸ್ಥಾನಂ ನಿಯೋಜ್ಯ ಚ ।
ಏಕಪಿಂಡಂ ಚಕಾರಾಶು ತತ್ರ ಪುತ್ರೋ ವ್ಯಜಾಯತ ॥ ೫೮ ॥

---

೫೪. ಅನಂತರ ಆ ಶಂಕರನು ಆ ಫಲದಲ್ಲಿ ತಾನೇ ಪ್ರವೇಶಿಸಿದನು. ಆ ಕೂಡಲೇ ಆ ಫಲವು ತಾನಾಗಿಯೇ ಮೂರು ಭಾಗವಾಯಿತು.

೫೫. ಪೌಷ್ಯರಾಜನು ಆ ಫಲವನ್ನು ಸ್ವೀಕರಿಸಿ ಸಂತುಷ್ಟನಾಗಿ, ಶಂಕರನ ಅನುಮತಿಯನ್ನು ಪಡೆದು ಪತ್ನಿಯರೊಡನೆ ತನ್ನ ಅರಮನೆಗೆ ಬಂದನು.

೫೬. ಎಲೈ ಸಗರರಾಜನೇ! ಅನಂತರ ಯೋಗ್ಯವಾದ ಕಾಲದಲ್ಲಿ ಆ ಫಲವನ್ನು ಪೌಷ ರಾಜನ ಪತ್ನಿಯರು ಭಕ್ಷಿಸಿ ಗರ್ಭವತಿಯರಾದರು.

೫೭. ನವಮಾಸಗಳು ಸಂಪೂರ್ಣವಾಗಿ ತುಂಬಲು, ಗರ್ಭವತಿಯರಾದ ಆ ರಾಜಪುತ್ರಿಯರು ಶಂಕರನು ಹೇಳಿದಂತೆ ಶಿಶುವಿನ ಮೂರು ಭಾಗಗಳನ್ನು ಬೇರೆ ಬೇರೆಯಾಗಿ ಹಡೆದರು.

೫೮. ಆ ಮೂರು ಭಾಗಗಳನ್ನು ಪೌಷ್ಯರಾಜನು ಆಯಾಯ ಸ್ಥಾನಗಳಲ್ಲಿ ಸೇರಿಸಿ ಒಂದೇ ಶರೀರವನ್ನಾಗಿ ಮಾಡಿದನು. ಆಗ ಅದು ಒಂದು ಶಿಶುವಾಯಿತು.

ತಸ್ಯ ಶೀರ್ಷೇ ತದಾ ರಾಜನ್ ಸಪಚೇಂದುಕಲಾ ಶುಭಾ ।
ವಿರರಾಜ ಯಥಾ ಖಸ್ಥಾ ಶರತ್ಕಾಲೇ ಕಲಾವಿಭೋಃ ॥ ೫೯ ॥

ತಂ ಸರ್ವಲಕ್ಷಣೋಪೇತಂ ಪೀನೋರಸ್ಕಂ ಸುನಾಸಿಕಂ ।
ಸಿಂಹಗ್ರೀವಂ ವಿಶಾಲಾಕ್ಷಂ ದೀರ್ಘಾಯುತಭುಜಂ ತಥಾ ॥ ೬೦ ॥

ದೃಷ್ಟ್ವಾ ಪೌಷ್ಯೋಽಥ ಭಾರ್ಯಾಭಿಸ್ತಿಸೃಭಿಃ ಸಹ ಸಂಮುದಂ ।
ಲೇಭೇ ದರಿದ್ರಃ ಸತ್ಕೋಶಂ ಪ್ರಾಪ್ಯೇವ ವಿಪುಲಂ ತತಃ ॥ ೬೧ ॥

ತಸ್ಯ ನಾಮಾಕರೋದ್ರಾಜಾ ಬ್ರಾಹ್ಮಣೈಃ ಸ್ವೈಃ ಪುರೋಹಿತೈಃ ।
ಚಂದ್ರಶೇಖರ ಇತ್ಯೇವ ಕಾಂತ್ಯಾ ಚಂದ್ರಮಸಃ ಸಮಃ ॥ ೬೨ ॥

ವವೃಧೇ ಸ ಮಹಾಭಾಗಃ ಪ್ರತ್ಯಹಂ ಚಂದ್ರವತ್ಸುತಃ ।
ಕಲಾಭಿರಿವ ತೇಜಸ್ವೀ ಶರದೀವ ನಿಶಾಕರಃ ॥ ೬೩ ॥

---

೫೯. ಎಲೈ ರಾಜನೇ ! ಹುಟ್ಟುವಾಗಲೇ ಆ ಶಿಶುವಿನ ಶಿರಸ್ಸಿನಲ್ಲಿ ಮನೋಹರವಾದ ಚಂದ್ರರೇಖೆಯು ಇದ್ದಿತು. ಅದು ಆಕಾಶದಲ್ಲಿ ಶೋಭಿಸುವ ಶರತ್ಕಾಲದ ಚಂದ್ರನ ಕಲೆಯಂತೆ ಶೋಭಿಸುತ್ತಲಿದ್ದಿತು.

೬೦-೬೧. ಆ ಪುತ್ರನು ಸರ್ವಲಕ್ಷಣಸಂಪನ್ನನಾಗಿದ್ದನು. ಅಗಲವಾದ ಎದೆ, ಸುಂದರವಾದ ನಾಸಿಕೆ, ಸಿಂಹದಂತಿರುದ ಕಂಠ, ವಿಶಾಲಬಾದ ನೇತ್ರಗಳು, ದಪ್ಪವೂ, ನೀಳವೂ ಆದ ಭುಜಗಳು, ಈ ಪುರುಷಲಕ್ಷಣಗಳಿಂದ ಕೂಡಿ ಶೋಭಿಸುತ್ತಿದ್ದನು. ಇಂತಹ ಸುಪುತ್ರನನ್ನು ಪಡೆದು, ಆ ಪೌಷ್ಯರಾಜನೂ ಅವನ ಪತ್ನಿಯರೂ ದರಿದ್ರನು ನಿಧಿಯನ್ನು ಪಡೆದಂತೆ ತುಂಬ ಹರ್ಷಗೊಂಡರು.

೬೨. ಆ ಪೌಷ್ಯರಾಜನು ಚಂದ್ರನಂತೆ ಕಾಂತಿಶಾಲಿಯಾದ ಆ ಪುತ್ರನಿಗೆ ತನ್ನ ಬ್ರಾಹ್ಮಣಪುರೋಹಿತರಿಂದ ಚಂದ್ರಶೇಖರನೆಂಬ ಹೆಸರನ್ನಿಡಿಸಿದನು.

೬೩. ಶರದೃತುವಿನ ಶುಕ್ಲಪಕ್ಷದ ಚಂದ್ರನು ತನ್ನ ಕಲೆಗಳಿಂದ ಅಭಿವೃದ್ಧಿಯನ್ನೈದುವಂತೆ ತೇಜಸ್ವಿಯಾದ ಆ ಕುಮಾರನು ದಿನದಿನವೂ ವೃದ್ಧಿಹೊಂದುತ್ತಲಿದ್ದನು.

ಏವಂ ತಿಸೃಣಾಮಂಬಾನಾಂ ಗರ್ಭೇ ಜಾತೋ ಯತೋ ಹರಃ ।
ಅತಸ್ತ್ರ್ಯಂಬಕನಾಮಾಭೂತ್ಪ್ರಥಿತೋ ಲೋಕವೇದಯೋಃ ॥ ೬೪ ॥

ಸ ರಾಜಪುತ್ರಃ ಕೌಮಾರೀಮವಸ್ಥಾಂ ಪ್ರಾಪಯತ್ತದಾ ।
ಸರ್ವಶಾಸ್ತ್ರಾರ್ಥತತ್ತ್ವಜ್ಞೋ ವಿಷ್ಣೋರಿವ ಬಭೂವ ಹ ॥ ೬೫ ॥

ಬಲೇ ವೀರ್ಯೇ ಪ್ರಹರಣೇ ಶಾಸ್ತ್ರೇ ಶೀಲೇ ಚ ತತ್ಸಮಃ ।
ನಾನ್ಯೋಽಭೂನ್ನೃಪಶಾರ್ದೂಲ ನೋ ವಾ ಭೂಮೌ ಭವಿಷ್ಯತಿ ॥ ೬೬ ॥

ಅಭಿಷಿಚ್ಯಾಥ ತಂ ರಾಜ್ಯೇ ಕುಮಾರಂ ಬಲವತ್ತರಂ ।
ಪಶಪಂಚೈಕವರ್ಷೀಯಂ ಸರ್ವರಾಜಗುಣೈರ್ಯುತಂ ॥ ೬೭ ॥

ತಿಸೃಭಿಃ ಸಹ ಭಾರ್ಯಾಭಿರ್ವನಂ ಪೌಷ್ಯೋ ವಿವೇಶ ಹ ।
ವೃದ್ಧೋಚಿತಾಂ ಕ್ರಿಯಾಂ ಕರ್ತುಂ ರಾಜಾ ಪರಮಧಾರ್ಮಿಕಃ ॥ ೬೮ ॥

---

೬೪. ಹೀಗೆ ಮೂವರು ಮಾತೆಯರ ಗರ್ಭದಲ್ಲಿ ಶಂಕರನು ಮನುಷ್ಯರೂಪದಿಂದ ಜನಿಸಿದುದರಿಂದ ಅವನಿಗೆ ತ್ರ್ಯಂಬಕ ಎಂದರೆ ಮೂರು ತಾಯಿಯುಳ್ಳವನು ಎಂದು ಲೋಕದಲ್ಲಿಯೂ ಮತ್ತು ವೇದಗಳಲ್ಲಿಯೂ ಪ್ರಸಿದ್ಧಿಯಾಯಿತು.

೬೫-೬೬. ಆ ಕುಮಾರನು ಕೌಮಾರಾವಸ್ಥೆಯನ್ನು ಪಡೆದು ಸಕಲ ಶಾಸ್ತ್ರ ರಹಸ್ಯಗಳನ್ನು ತಿಳಿದ ವಿಷ್ಣುವಿನಂತೆ ಸರ್ವಜ್ಞನಾದನು. ಬಲದಲ್ಲಿಯೂ, ಪರಾಕ್ರಮ ಮತ್ತು ಶಸ್ತ್ರಪ್ರಯೋಗಗಳಲ್ಲಿಯೂ, ಶಾಸ್ತ್ರದಲ್ಲಿಯೂ, ಶೀಲದಲ್ಲಿಯೂ ಆ ಪೌಷ್ಯ ರಾಜನ ಕುಮಾರನಂಥಹ ಪುರುಷನು ಇನ್ನೊಬ್ಬನಿರಲಿಲ್ಲ. ಭೂಮಿಯಲ್ಲಿ ಮುಂದೆ ಹುಟ್ಟುವುದೂ ಇಲ್ಲ.

೬೭-೬೮. ಅನಂತರ ಅತ್ಯಂತ ಧಾರ್ಮಿಕನಾದ ಪೌಷ್ಯರಾಜನು ಬಲಶಾಲಿಯೂ ಸಕಲ ರಾಜಲಕ್ಷಣಗಳಿಂದ ಕೂಡಿದವನೂ ಆದ ಆ ಹದಿನಾರುವರ್ಷದ ಚಂದ್ರಶೇಖರ ಕುಮಾರನನ್ನು ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿ, ತಾನು ತನ್ನ ಮೂವರು ಪತ್ನಿಯರೊಡನೆ ವಾನಪ್ರಸ್ಥಾಶ್ರಮವನ್ನು ಆಶ್ರಯಿಸಿ, ವಾರ್ಧಿಕ್ಯಾವಸ್ಥೆಗೆ ಯೋಗ್ಯವಾದ ಪರಬ್ರಹ್ಮಚಿಂತನವೇ ಮೊದಲಾದ ಸತ್ಕರ್ಮವನ್ನಾಚರಿಸಲು ತಪೋವನಕ್ಕೆ ತೆರಳಿದನು.

ಗತೇ ಪಿತರಿ ರಾಜಾ ಸ ವನವಾಸಂ ಮಹಾಬಲಃ ।
ಸರ್ವಾಂ ಕ್ಷಿತಿಂ ವಶೇ ಚಕ್ರೇ ಸೋಽಮಾತ್ಯೈಶ್ಚಂದ್ರಶೇಖರಃ ॥ ೬೯ ॥

ಸಾರ್ವಭೌಮೋ ನೃಪೋ ಭೂತ್ವಾ ರಾಜಭಿಃ ಪರಿಸೇವಿತಃ ।
ಅಮರೈರಿವ ದೇವೇಂದ್ರೋ ವಿಜಹಾರ ಶ್ರಿಯಾ ಯುತಃ ॥ ೭೦ ॥

ಏವಂ ಪೌಷ್ಯಸುತೋ ಭೂತ್ವಾ ತ್ರ್ಯಂಬಕಃ ಪುಣ್ಯನಿರ್ವೃತಃ ।
ಬ್ರಹ್ಮಾವರ್ತಾಭ್ವಯೇ ರಮ್ಯೇ ಕರವೀರಾಭ್ವಯೇ ಪುರೇ ॥ ೭೧ ॥

ದೃಷದ್ವತೀನದೀತೀರೇ ರಾಜಾ ಭೂತ್ವಾ ಮುನೋಪ ಹ ।
ಅಥೈಕದಾ ಸ ಪಿತರಂ ವನವಾಸಗತಂ ಸ್ವಯಂ ॥ ೭೨ ॥

ಮಾತ್ಯಶ್ಚಾಪಿ ನರಶ್ರೇಷ್ಠ ದ್ರಷ್ಟುಕಾಮೋಽಭವನ್ನೃಪಃ ।
ಸ ವಿಕಸ್ಯಂದನೇನೈವ ವಿಕಾಕೀ ಚಂದ್ರಶೇಖರಃ ॥ ೭೩ ॥

ವಿಪುಲಂ ಧನುರಾದಾಯ ಸಮಾರ್ಗಣಗಣಂ ತಥಾ ।
ತಪೋವನಂ ಪುಣ್ಯಮಯಂ ವಿಷಯಾಂತೇ ವ್ಯವಸ್ಥಿತಂ ॥ ೭೪ ॥

೬೯-೭೦. ತಂದೆಯಾದ ಪೌಷ್ಯನು ವನಕ್ಕೆ ತೆರಳಲು, ಮಹಾಬಲಿಷ್ಠನಾದ ಚಂದ್ರಶೇಖರಕುಮಾರನು ಮಂತ್ರಿಗಳೊಡನೆ ಸಕಲ ಭೂಮಂಡಲವನ್ನೂ ತನ್ನ ಅಧೀನವನ್ನಾಗಿ ಮಾಡಿಕೊಂಡು, ಚಕ್ರವರ್ತಿಯಾಗಿ ಸಾಮಂತರಾಜರುಗಳಿಂದ ಸೇವಿಸಲ್ಪಡುತ್ತಾ ಮಹದೈಶ್ವರ್ಯಸಂಪನ್ನನಾಗಿ, ದೇವತೆಗಳಿಂದ ಸೇವಿತನಾದ ಇಂದ್ರನಂತೆ ವಿಹರಿಸುತ್ತಿದ್ದನು.

೭೧. ಪೌಷ್ಯರಾಜನ ಪುತ್ರನಾಗಿ ಜನಿಸಿದ ಆ ತ್ರ್ಯಂಬಕನು (ಶಂಕರನು) ಪುಣ್ಯಶಾಲಿಯಾಗಿ ಬ್ರಹ್ಮಾವರ್ತವೆಂಬ ದೇಶದಲ್ಲಿ ದೃಷದ್ವತೀನದೀತೀರದಲ್ಲಿರುವ ಕರವೀರ ಪುರದಲ್ಲಿ ರಾಜನಾಗಿ, ರಾಜ್ಯವನ್ನಾಳುತ್ತಾ ಸಂತೋಷವಾಗಿದ್ದನು.

೭೨-೭೪. ಎಲೈ ರಾಜೇಂದ್ರನೇ ! ಆಮೇಲೊಂದುದಿನ ಆ ಚಂದ್ರಶೇಖರ ರಾಜನು ವನದಲ್ಲಿ ವಾಸಿಸುತ್ತಿರುವ ತನ್ನ ತಂದೆಯಾದ ಪೌಷ್ಯರಾಜನನ್ನೂ ತಾಯಿಯರನ್ನೂ ನೋಡಬೇಕೆಂಬ ಅಪೇಕ್ಷೆಯಿಂದ ದೊಡ್ಡದಾದ ತನ್ನ ಧನುಸ್ಸನ್ನೂ, ಬಾಣಗಳನ್ನೂ ತೆಗೆದುಕೊಂಡು ಯಾರ ಸಹಾಯವೂ ಇಲ್ಲದೆ ಏಕಾಂಗಿಯಾಗಿ ರಥದಲ್ಲಿ ಕುಳಿತು, ತನ್ನ ರಾಜ್ಯದ ಕೊನೆಯಲ್ಲಿರುವ ತಪೋವನಕ್ಕೆ ಹೋಗಿ, ಅಲ್ಲಿ ತಪಸ್ಸುಮಾಡುತ್ತಲಿದ್ದ ವೃದ್ಧನಾದ ತನ್ನ ತಂದೆಯನ್ನೂ ತಾಯಿಯರನ್ನೂ ಕಂಡನು.

ಆಸಸಾದ ದಿದೃಕ್ಷುಃ ಸ ತಾತಂ ವೃದ್ಧಂ ಸಮೂತ್ಥಕಂ ।
ಸ ಗಚ್ಛನ್ ಪಿತುರಭ್ಯಾಶಂ ನೃಪತಿಶ್ಚಂದ್ರಶೇಖರಃ ॥ ೭೫ ॥

ದದರ್ಶ ನಮುಚಂ ನಾಮ ತಪಸ್ಯಂತಂ ಮಹಾಮುನಿಂ ।
ಕೃಷ್ಣಾಜಿನೋತ್ತರೀಯೇಣ ಸಂವೀತಂ ಸೂರ್ಯಸನ್ನಿಭಂ ॥ ೭೬ ॥

ಊರ್ಧ್ವಗಾಭಿರ್ಜಟಾಭಿಶ್ಚ ಸಂಯುತಂ ಧ್ಯಾನಿನಂ ಕೃಶಂ ।
ತಪಸಾ ದ್ಯೋತಿತತನುಂ ನಿಶ್ಚಲಂ ಕುಶಚಾಸನಂ ॥ ೭೭ ॥

ತಂ ದೃಷ್ಟ್ವಾ ದೂರತೋ ವೀರೋ ರಥೋಪಸ್ಥಾದವಾತರತ್ ।
ಉಪತಸ್ಥೇ ಚ ವಿಪ್ರೇಂದ್ರಂ ವಿನಯಾನತಕಂಧರಃ ॥ ೭೮ ॥

ಪ್ರಣನಾಮ ಮುನಿಂ ತಂ ಚ ವಾಕ್ಯಮೇತದುದೀರಯನ್ ।
ಪೌಷ್ಯಸ್ಯ ತನಯೋ ಬ್ರಹ್ಮನ್ನಾಮ್ನಾಹಂ ಚಂದ್ರಶೇಖರಃ ॥ ೭೯ ॥

ಪ್ರಣಮಾಮಿ ಮಹಾಭಕ್ತ್ಯಾ ಭವಂತಂ ಮುನಿಸತ್ತಮಂ ।
ಇತ್ಯುಕ್ತ್ವಾ ಪ್ರಾಂಜಲಿಸ್ತಸ್ಥೌ ಮುನೇಸ್ತಸ್ಯಾಗ್ರತೋ ನೃಪ ॥ ೮೦ ॥

೭೫-೭೯. ತಂದೆತಾಯಿಗಳನ್ನು ನೋಡುವ ಆತುರದಿಂದ ಬರುತ್ತಿರುವ ಆ ಚಂದ್ರಶೇಖರರಾಜನಿಗೆ ಮಾರ್ಗಮಧ್ಯದಲ್ಲಿ ತಪಸ್ಸನ್ನು ಮಾಡುತ್ತಲಿರುವ ನಮುಚ ನೆಂಬ ಓರ್ವ ಮಹಾಮುನಿಯು ಗೋಚರನಾದನು. ಆ ಮುನಿಯು ಕೃಷ್ಣಾಜಿನವನ್ನು ಧರಿಸಿ ಸೂರ್ಯನಂತೆ ಅತಿ ತೇಜಸ್ವಿಯಾಗಿದ್ದನು. ಶಿರಸ್ಸಿನಲ್ಲಿ ಎತ್ತರವಾದ ಜಟೆಗಳು ಶೋಭಿಸುತ್ತಲಿದ್ದುವು. ತಪಸ್ಸಿನಿಂದ ಶರೀರವು ಕೃಶವಾಗಿದ್ದಿತು. ದರ್ಭಾಸನದಲ್ಲಿ ಕುಳಿತು ಧ್ಯಾನಮಗ್ನನಾಗಿ ತಪಸ್ಸಿನಿಂದ ಬೆಳಗುತ್ತಿರುವ ಆ ಮುನಿಯನ್ನು ನೋಡಿ ಚಂದ್ರಶೇಖರರಾಜನು ದೂರದಿಂದಲೇ ರಥದಿಂದಿಳಿದು ಮುನಿಯ ಬಳಿಗೈತಂದು ಭಕ್ತಿ ಭಾವದಿಂದ ನಮಸ್ಕರಿಸಿ ವಿನಯದಿಂದ ಹೀಗೆ ಹೇಳಿದನು.

೮೦-೮೧. ಓ ಬ್ರಾಹ್ಮಣೋತ್ತಮನೇ ! ನಾನು ಪೌಷ್ಯರಾಜನ ಪುತ್ರನು. ನನ್ನ ಹೆಸರು ಚಂದ್ರಶೇಖರನು. ಮುನಿಶ್ರೇಷ್ಠನಾದ ನಿನ್ನನ್ನು ನಮಸ್ಕರಿಸುವೆನು ಎಂದು ಹೇಳಿ, ಆ ಚಂದ್ರಶೇಖರರಾಜನು ನಮುಚಮುನಿಯನ್ನು ಭಕ್ತಿಭಾವದಿಂದ ನಮಸ್ಕರಿಸಿ

ನಮುಚಸ್ಯ ಮುಖಂ ವೀಕ್ಷ್ಯ ಭಕ್ತಿನಮ್ರಾತ್ಮಮಾನಸಃ ।
ಪೂರ್ವಮೇವ ಯದಾ ರಾಜಾ ಪ್ರಾವಿಶತ್ತಪಸೇ ವನಂ ॥ ೮೧ ॥

ತದೈವ ಸಹ ಭಾರ್ಯಾಭಿಃ ತಂ ಮುನಿಂ ಪ್ರತ್ಯಪೂಜಯತ್ ।
ಚಿರಮಾರಾಧ್ಯ ನಮುಚಂ ಪೌಷ್ಯಃ ಪರಮಪಂಡಿತಃ ॥ ೮೨ ॥

ಪ್ರಸಾದಯಾಮಾಸ ಮುನಿಂ ಪುತ್ರಾರ್ಥೇ ಸೂನೃತಾಕ್ಷರೈಃ ।
ವಿಷಯಾಂತೇ ತಪಃ ಕುರ್ವನ್ನಿಶ್ರೇಷ್ಠೇಽಪಿ ತಿಷ್ಠಸಿ ॥ ೮೩ ॥

ಏಕಂ ತು ಪ್ರಾರ್ಥಯೇ ತ್ವತ್ತೋ ಯದಿ ಮಾಂ ದಯಸೇ ಮುನೇ ।
ಶಿಶುರ್ಮೇ ತನಯೋ ರಾಜಾ ಚಂದ್ರಶೇಖರಸಂಜ್ಞಕಃ ॥ ೮೪ ॥

ಸಹಜೇಂದುಕಲಾಯುಕ್ತೋ ಬಾಲಭಾವಾಚ್ಚ ಚಂಚಲಃ ।
ಸ ಚೇದ್ಭವಂತಮಾಸಾದ್ಯ ಕದಾಚಿದಪರಾಧ್ಯತಿ ॥ ೮೫ ॥

ವಿನಯದಿಂದ ಕೈಗಳನ್ನು ಮುಗಿದುಕೊಂಡು, ಆ ಋಷಿಯ ಎದುರಿನಲ್ಲಿ ನಿಂತುಕೊಂಡನು.

೮೨. ಹಿಂದೆ ಪೌಷ್ಯರಾಜನು ತಪಸ್ಸಿಗಾಗಿ ವನವನ್ನು ಪ್ರವೇಶಿಸುವಾಗ ಆ ನಮುಚಮುನಿಯನ್ನು ಪತ್ನಿಯರೊಡನೆ ಪೂಜಿಸಿದ್ದನು. ಪುತ್ರನ ಶ್ರೇಯೋಭಿವೃದ್ಧಿಗಾಗಿ ಆ ನಮುಚಮುನಿಯನ್ನು ಬಹುಕಾಲ ಆರಾಧಿಸಿ ಸಂತೋಷಗೊಳಿಸಿದ್ದನು.

೮೩. ಓ ಮುನೀಂದ್ರನೇ ! ಈ ರಾಜ್ಯದ ಕೊನೆಯಾದ ಈ ಸ್ಥಳದಲ್ಲಿ ನೀನು ತಪಸ್ಸನ್ನಾಚರಿಸುತ್ತಲಿರುವೆ. ನೀನು ನನ್ನಲ್ಲಿ ದಯೆಯನ್ನು ತೋರಿಸುವವನಾದರೆ ಒಂದು ವಿಷಯವನ್ನು ನಿನ್ನಲ್ಲಿ ಪ್ರಾರ್ಥಿಸಿಕೊಳ್ಳಬೇಕೆಂದಿರುವೆನು.

೮೪–೮೫. ಈಗ ನನ್ನ ಪುತ್ರನಾದ ಚಂದ್ರಶೇಖರನೆಂಬುವನು ರಾಜನಾಗಿರುವನು. ಅವನಿನ್ನೂ ಕುಮಾರನು. ಹುಟ್ಟುವಾಗಲೇ ಅವನ ತಲೆಯಲ್ಲಿ ಚಂದ್ರಕಲೆಯಿದ್ದಿತು. ಹುಡುಗತನವಾದುದರಿಂದ ಇನ್ನೂ ಚಂಚಲಸ್ವಭಾವದವನು. ಅಪನೇನಾದರೂ ನಿನ್ನ ಬಳಿಗೆ ಬಂದು, ಬಾಲಭಾವದಿಂದ ತಿಳಿಯದೆ ಯಾವುದಾದರೂ ಅಪರಾಧವನ್ನು ಮಾಡಿದರೆ ಅವನನ್ನು ನೀನು ಕ್ಷಮಿಸಬೇಕು. ಇದನ್ನೇ ನಿನ್ನಲ್ಲಿ ಕೇಳಿಕೊಳ್ಳುವೆನು.

ತದಾ ಕ್ಷಮಿಷ್ಯಸಿ ಮುನೇ ಮಯ್ಯೇತತ್ಪ್ರಾರ್ಥಿತಂ ತ್ವಯಿ ।
ಪೌಷ್ಯಸ್ಯ ವಚನಂ ಶ್ರುತ್ವಾ ಮುನಿಶ್ಚಾಂಗೀಚಕಾರ ಹ ॥ ೮೬ ॥

ದೃಷ್ಟ್ವಾ ತತ್ತನಯಂ ವಿಪ್ರಃ ಪೌಷ್ಯವಾಕ್ಯಮಥಾಸ್ಮರತ್ ।
ಸ್ಮೃತ್ವಾಗ್ರತಃ ಸ್ಥಿತಂ ನಮ್ರಂ ಸುಚಿರಂ ಚಂದ್ರಶೇಖರಂ ॥ ೮೭ ॥

ಇದಂ ಪ್ರೋವಾಚ ಸ ಮುನಿರ್ದಯಾವಾನ್ನಮುಚಾಹ್ವಯಃ ।
ವಿನಯೇನಾದ್ಯ ತುಷ್ಟೋಽಸ್ಮಿ ಭವತಶ್ಚಂದ್ರಶೇಖರ ॥ ೮೮ ॥

ವರಂ ವರಯ ದಾಸ್ಯಾಮಿ ವಾಂಛಿತಂ ಮೇ ಮಹತ್ತರಂ ।
ತಸ್ಯ ಶ್ರುತ್ವಾ ತತೋ ವಾಕ್ಯಂ ನೃಪತಿಶ್ಚಂದ್ರಶೇಖರಃ ॥ ೮೯ ॥

ಪುನಃ ಪ್ರಣಮ್ಯ ನಮುಚಿಮಿದಮಾಹಾತಿಸೂನೃತಂ ।
ಕಾಯೇನ ಮನಸಾ ವಾಚಾ ಯಮಿತ್ಯರ್ಥಂ ದ್ವಿಜೋತ್ತಮ ॥ ೯೦ ॥

ತತ್ಸರ್ವಂ ವಿಷಯೇ ಮೇಽಸ್ತಿ ತ್ವಾದೃಶಾ ಯಸ್ಯ ದಕ್ಷಿಣಾಃ ।
ಮುನೇಽಗತಂ ಮೇ ದುಷ್ಪ್ರಾಪಂ ವಾಂಛನೀಯಂ ನ ವಿದ್ಯತೇ ॥ ೯೧ ॥

೮೬-೮೭. ಈರೀತಿಯಾವ ಪೌಷ್ಯರಾಜನ ಮಾತನ್ನು ಕೇಳಿ, ಮುನಿಯು ಹಾಗೆಯೇ ಆಗಲೆಂದು ಹೇಳಿ ಅವನ ಮಾತನ್ನು ಅಂಗೀಕರಿಸಿದ್ದನು. ಈಗ ಆ ಪೌಷ್ಯನ ಪುತ್ರ ಚಂದ್ರಶೇಖರನನ್ನು ನೋಡಿ, ನಮುಚಮುನಿಯು ಹಿಂದೆ ಪೌಷ್ಯನು ಹೇಳಿದ್ದ ವಾಕ್ಯವನ್ನು ಸ್ಮರಿಸಿ, ಎದುರಿನಲ್ಲಿ ಬಹಳ ಹೊತ್ತಿನಿಂದ ನಮ್ರನಾಗಿ ನಿಂತಿರುವ ಚಂದ್ರಶೇಖರನನ್ನು ನೋಡಿ ದಯೆಯಿಂದ ಹೀಗೆ ಹೇಳಿದನು.

೮೮-೯೧. ಎಲ್ಲೆ ಚಂದ್ರಶೇಖರನೇ! ನಿನ್ನ ಈ ವಿಧವಾವ ವಿನಯವರ್ತನೆಯಿಂದ ಸಂತುಷ್ಟನಾಗಿರುವೆನು. ನಿನಗೆ ಬೇಕಾದ ವರಗಳನ್ನು ಕೇಳಿಕೋ. ಕೊಡುವೆನು ಎಂದು ನಮುಚಮುನಿಯು ಹೇಳಲು, ಅದನ್ನು ಕೇಳಿ ರಾಜನಾವ ಚಂದ್ರಶೇಖರನು ತಿರುಗಿ ಆ ಮುನಿಯನ್ನು ನಮಸ್ಕರಿಸಿ, ಓ ಬ್ರಾಹ್ಮಣೋತ್ತಮನೇ! ಶರೀರದಿಂದಲೂ, ಮನಸ್ಸಿನಿಂದಲೂ, ವಾಕ್ಕಿನಿಂದಲೂ ಅಪೇಕ್ಷಿತವಾದ ಸಮಸ್ತ ವಸ್ತುಗಳೂ ನನ್ನ ರಾಜ್ಯದಲ್ಲಿರುವವು. ಅಲ್ಲದೇ ಈ ನನ್ನ ರಾಜ್ಯಕ್ಕೆ ತಮ್ಮಂತಹ ಮಹಾಮುನಿಗಳು ದಕ್ಷಿಣೆಯ ಸ್ವರೂಪರು. ಆದುದರಿಂದ ನಾನು ಪಡೆಯದಿರುವಂತಹ ಯಾವ ಮನೋಭೀಷ್ಟವೂ ಇರುವುದಿಲ್ಲ. ಆದರೆ ನನ್ನ ಮೇಲೆ ಅನುಗ್ರಹ ಮಾಡಿ ನೀನಾ

ತದೇವ ವರಣೀಯಂ ಮೇ ಯದ್ಪಜಾತಿ ಸ್ವಯಂ ಭವಾನ್ ॥

॥ ನಮುಚ ಉವಾಚ ॥

ತ್ವಂ ಸಪ್ತದಶವರ್ಷಾಣಾಂ ಪ್ರಾಪ್ತೇ ಸಂವತ್ಸರೇ ಪರೇ ॥ ೯೨ ॥

ಭವಿಷ್ಯಸಿ ನೃಪಶ್ರೇಷ್ಠ ವರರಾಮಾಪತಿಃ ಸ್ವಯಂ ।
ಯಥಾ ಗಿರಿಸುತಾ ಶಂಭೋರ್ಯಥಾ ಲಕ್ಷ್ಮ್ಯೀರ್ಗದಾಭೃತಃ ॥ ೯೩ ॥

ಯಥಾ ಸುರೇಶಸ್ಯ ಶಚೀ ತಥಾ ತೇಽಪಿ ಭವಿಷ್ಯತಿ ।
ಇತ್ಯುಕ್ತ್ವಾ ಸ ಮುನಿಭೂಪಂ ನಮುಚಸ್ತಪಸಾಂ ನಿಧಿಃ ॥ ೯೪ ॥

ವಿಸರ್ಜಯಾಮಾಸ ತದಾ ಸ ಚಾಪಿ ಮುದಿತೋ ಯಯೌ ।
ಸ ಗತ್ವಾ ಪಿತರಂ ಪ್ರಾಪ್ಯ ಮಾತೃಶ್ಚ ಚಂದ್ರಶೇಖರಃ ॥ ೯೫ ॥

ಗಿಯೇ ಯಾವುದಾದರೂ ವರವನ್ನು ಕೊಡುವುದಾದರೆ ಅದನ್ನು ಸ್ವೀಕರಿಸುವೆನು ಎಂದು ನಮ್ರತೆಯಿಂದ ನುಡಿದನು.

೯೨-೯೩. ನಮುಚಮುನಿಯು ಹೇಳಿದನು :—ಎಲೈ ಚಂದ್ರಶೇಖರನೇ ! ನಿನಗೆ ಹದಿನೆಂಟನೆಯ ವಯಸ್ಸು ಪ್ರಾಪ್ತವಾಗಲು ಸುಂದರಿಯಾದ ಉತ್ತಮ ಸ್ತ್ರೀಯೋರ್ವಳಿಗೆ ಭರ್ತನಾಗುತ್ತೀಯೆ. ಆ ನಿನ್ನ ಪತ್ನಿಯು, ಶಂಕರನಿಗೆ ಗಿರಿಜೆಯಿರುವಂತೆಯೂ, ವಿಷ್ಣುವಿಗೆ ಲಕ್ಷ್ಮಿಯಿರುವಂತೆಯೂ, ಇಂದ್ರನಿಗೆ ಶಚೀದೇವಿಯಿರುವಂತೆಯೂ ನಿನಗೆ ಅನುಕೂಲಳಾಗಿರುವಳು.

೯೪-೯೫. ಹೀಗೆ ಹೇಳಿ ಮಹಾತಪಸ್ವಿಯಾದ ಆ ನಮುಚಮುನಿಯು ಚಂದ್ರ ಶೇಖರರಾಜನನ್ನು ಕಳುಹಿಸಿಕೊಟ್ಟನು. ಆ ರಾಜನೂ ಸಹ ಸಂತೋಷಗೊಂಡು ಅಲ್ಲಿಂದ ಹೊರಟು ತನ್ನ ತಂದೆಯಾದ ಪೌಷ್ಯ ಮತ್ತು ಮಾತೆಯರ ಬಳಿಗೆ ಹೋಗಿ, ಯಥಾಯೋಗ್ಯವಾಗಿ ಅವರನ್ನು ಸೇವಿಸಿದನು. ಅವರೂ ಸಹ ಈ ಚಂದ್ರಶೇಖರನನ್ನು ವಿಶ್ವಾಸದಿಂದ ಸಂತೈಸಿದರು.

ಅಪೂಜಯದ್ಯಥಾರ್ಹಂ ತು ತೈರಪ್ಯಾಶ್ವಾಸಿತಃ ಸುತಃ ।
ಅಥಾಗತೋ ನೃಪಃ ಸ್ವೀಯಾಂ ಕರವೀರಪುರೀಂ ಪ್ರತಿ ॥ ೯೬ ॥

ಮುದಿತಃ ಸಚಿವೈಃ ಸಾರ್ಧಂ ರೇಮೇ ದೇವೇಂದ್ರಸನ್ನಿಭಃ ।

॥ ಇತಿ ಶ್ರೀ ಕಾಲಿಕಾಪುರಾಣೇ ಏಕೋನಪಂಚಾಶತ್ತಮೋಧ್ಯಾಯಃ ॥

---

೯೬. ಬಳಿಕ ಕೆಲವುಕಾಲದಮೇಲೆ ಆ ಚಂದ್ರಶೇಖರನು ತಂದೆತಾಯಂದಿರಿಂದ ಬೀಳ್ಕೊಂಡು, ತನ್ನ ರಾಜಧಾನಿಯಾದ ಕರವೀರಪುರಕ್ಕೆ ತೆರಳಿದನು. ಅಲ್ಲಿ ತನ್ನ ಮಂತ್ರಿಗಳಿಂದ ಯುಕ್ತನಾಗಿ, ದೇವೇಂದ್ರನಂತೆ ಸಂತೋಷದಿಂದ ವಿಹರಿಸುತ್ತಲಿದ್ದನು.

ಇಲ್ಲಿಗೆ ನಲವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.



॥ ಶ್ರೀಃ ॥

ಅಥ ಶ್ರೀ ಕಾಲಿಕಾಪುರಾಣೇ

ಪಂಚಾಶತ್ತಮೋಧ್ಯಾಯಃ

॥ ಔರ್ವ ಉವಾಚ ॥

ಅವತೀರ್ಣೇ ಮಹಾದೇವೇ ಪೌಷ್ಯಜಾಯಾ ಸುಖೇಚ್ಛಯಾ ।
ಮಾನುಷೇಣ ಪ್ರಮಾಣೇನ ಗತೇ ಸಂವತ್ಸರತ್ರಯೇ ॥ ೧ ॥

ಗಿರಿಜಾಪಿ ಕಕುತ್ಸ್ಥಸ್ಯ ರಾಜ್ಞೋ ಭಾರ್ಯಾಸ್ವಜಾಯತ ।
ಮೇನಕಾಯಾಂ ಯಥಾ ಪೂರ್ವಂ ಸ್ವೇಚ್ಛಯಾ ಪರಮೇಶ್ವರೀ ॥ ೨ ॥

ಅಥಾರ್ಯಾವರ್ತವಿಷಯೇ ಬ್ರಹ್ಮಣ್ಯಃ ಶೂರಸತ್ತಮಃ ।
ಇಕ್ಷ್ವಾಕುವಂಶಜೋ ರಾಜಾ ಕಕುತ್ಸ್ಥೋ ನಾಮ ಧಾರ್ಮಿಕಃ ॥ ೩ ॥

॥ ಐವತ್ತನೆಯ ಅಧ್ಯಾಯವು ॥

೧-೨. ಔರ್ವಮುನಿಯು ಹೇಳಿದನು :—ಹೀಗೆ ಶಂಕರನು ಪೌಷ್ಯರಾಜ ಮತ್ತು ಅವನ ಪತ್ನಿಯರ ಇಷ್ಟಾರ್ಥವನ್ನು ನೆರವೇರಿಸಲು ಅವರ ಪುತ್ರನಾಗಿ ಅವತರಿಸಿ, ಮನುಷ್ಯಪ್ರಮಾಣದಿಂದ ಮೂರುವರ್ಷಗಳು ಕಳೆಯಲು, ಪರಮೇಶ್ವರಿಯಾದ ಪಾರ್ವತಿಯೂ ಸಹ ಕಕುತ್ಸ್ಥರಾಜನ ಮಡದಿಯಲ್ಲಿ ಹಿಂದೆ ಮೇನಕೆಯಲ್ಲಿ ಜನಿಸಿದಂತೆ ಸ್ವೇಚ್ಛೆಯಿಂದ ಅವತರಿಸಿದಳು.

೩. ಬ್ರಾಹ್ಮಣರಕ್ಷಕನೂ, ಅತ್ಯಂತಶೂರನೂ, ಧಾರ್ಮಿಕನೂ ಆದ ಆ ಕಕುತ್ಸ್ಥರಾಜನು ಇಕ್ಷ್ವಾಕು (ರಘು) ವಂಶದಲ್ಲಿ ಜನಿಸಿ, ಆರ್ಯಾವರ್ತದಲ್ಲಿ ರಾಜ್ಯಭಾರ ಮಾಡುತ್ತಲಿದ್ದನು.

ಭೋಗವತ್ಯಾಪ್ವಯಾಯಾಂ ತು ಪುರ್ಯಾಂ ರಿಪುನಿಷೂದನಃ ।
ಸರ್ವಲಕ್ಷಣಸಂಪನ್ನೋ ಭೂಪಾಲಗುಣಸಂಯುತಃ ॥ ೪ ॥

ತಸ್ಯ ಭಾರ್ಯಾ ಮಹಾಭಾಗಾ ಭರ್ಗದೇವಸ್ಯ ಪುತ್ರಿಕಾ ।
ಸಾ ಮನೋನ್ಮಥಿನೀ ನಾಮ್ನಾ ಪೂಜಿತಾ ಪತಿವಲ್ಲಭಾ ॥ ೫ ॥

ತಸ್ಯಾಃ ಪುತ್ರಶತಂ ಜಜ್ಞೇ ದೇವಗರ್ಭಾಭಮಚ್ಯುತಂ ।
ಬಲವೀರ್ಯಸಮಾಯುಕ್ತಂ ಕಕುತ್ಸ್ಥನೃಪಸತ್ತಮಾತ್ ॥ ೬ ॥

ಪುತ್ರೀ ನ ವಿದ್ಯತೇ ತಸ್ಯಾಸ್ತದರ್ಥಂ ಸಾ ಗೃಹಾಂತರೇ ।
ನಿಭೃತಂ ಸ್ಥಂಡಿಲಂ ಕೃತ್ವಾ ಚಂಡಿಕಾಂ ಸಮಪೂಜಯತ್ ॥ ೭ ॥

ಪೂಜ್ಯಮಾನಾ ಮಹಾದೇವೀ ಚಂಡಿಕಾ ರಾಜಭಾರ್ಯಯಾ ।
ಪ್ರಸನ್ನಾ ಸಾ ತ್ರಿಭಿರ್ವರ್ಷೈಸ್ತಾಂ ಸ್ವಪ್ನೇ ಚಾಬ್ರವೀದಿದಂ ॥ ೮ ॥

---

೪. ಆ ರಾಜನು ಸಕಲ ಲಕ್ಷಣಗಳಿಂದ ಕೂಡಿದವನೂ, ರಾಜಗುಣಶೋಭಿತನೂ, ಶತ್ರುನಾಶಕನೂ ಆಗಿದ್ದು, ಭೋಗವತೀ ಎಂಬ ನಗರದಲ್ಲಿ ರಾಜ್ಯವಾಳುತ್ತಿದ್ದನು.

೫. ಆ ರಾಜನ ಪತ್ನಿಯು ಭರ್ಗದೇವನೆಂಬ ರಾಜನ ಪುತ್ರಿಯು, ಮಹಾ ಭಾಗ್ಯಶಾಲಿನಿಯು, ಪತಿವ್ರತೆಯು ಮತ್ತು ಪತಿಗೆ ಪ್ರಿಯಳಾದವಳು. ಅವಳ ಹೆಸರು " ಮನೋನ್ಮಥಿನೀ " ಎಂದು.

೬. ಆ ಮನೋನ್ಮಥಿನಿಯಲ್ಲಿ ಕಕುತ್ಸ್ಥರಾಜೇಂದ್ರನಿಂದ ದೇವಕುಮಾರ ಸದೃಶರೂ, ಬಲ ಮತ್ತು ಪರಾಕ್ರಮಶಾಲಿಗಳೂ ಆದ ನೂರುಜನ ಪುತ್ರರು ಜನಿಸಿದರು.

೭. ಆದರೆ ಅವಳಿಗೆ ಹೆಣ್ಣುಮಕ್ಕಳು ಜನಿಸಲಿಲ್ಲ. ಅದಕ್ಕಾಗಿ ಆ ಮನೋನ್ಮಥಿನಿಯು ತನ್ನ ಮನೆಯಲ್ಲಿಯೇ ರಂಗವಲ್ಲಿಯಿಂದ ಪೂಜಾಮಂಡಲವನ್ನು ಬರೆದು ಅಲ್ಲಿ ಚಂಡಿಕೆಯನ್ನು ಪೂಜಿಸಿದಳು.

೮. ಹೀಗೆ ಮೂರು ವರ್ಷಗಳಕಾಲ ಮಹಾದೇವಿಯಾದ ಚಂಡಿಕೆಯನ್ನು ಆ ರಾಜಪತ್ನಿಯು ಪೂಜಿಸಲು, ಚಂಡಿಕೆಯು ಅವಳಿಗೆ ಪ್ರಸನ್ನಳಾಗಿ ಸ್ವಪ್ನದಲ್ಲಿ ಅವಳನ್ನು ಕುರಿತು ಹೀಗೆ ಹೇಳಿದಳು.

ಯೋಷಿಲ್ಲಕ್ಷಣಸಂಪನ್ನಾ ಸಾರ್ವಭೌಮಸ್ಯ ಭಾಮಿನೀ ।
ನಕ್ಷತ್ರಮಾಲಯಾ ಯುಕ್ತಾ ಪುತ್ರೀ ತವ ಭವಿಷ್ಯತಿ ॥ ೯ ॥

ಸಾಪಿ ಸ್ವಪ್ನೇ ವರಂ ಪ್ರಾಪ್ಯ ಮುದಿತಾಭೂನ್ನೃಪಾಂಗನಾ ।
ಪಾರ್ವತ್ಯಪಿ ಸ್ವಯಂ ತಸ್ಯಾ ಗರ್ಭೇ ಕಾಲೇ ವಿವೇಶ ಹ ॥ ೧೦ ॥

ಸಾ ಮನೋನ್ಮಥಿನೀ ದೇವೀ ಪ್ರವೃತ್ತೇ ಭಾನುಸಂಗಮೇ ।
ಗರ್ಭಂ ದಧಾ ಮಹಾಸತ್ತ್ವಂ ಚಂದ್ರಿಕೇವಾಮೃತೋತ್ಕರಂ ॥ ೧೧ ॥

ಸಂಪೂರ್ಣೇ ತು ತತಃ ಕಾಲೇ ಪ್ರಾಪ್ತೇ ನಕ್ಷತ್ರಮಾಲಿನೀಂ ।
ಸಾ ಮನೋನ್ಮಥಿನೀ ದೇವೀ ಸುಷುವೇ ತನಯಾಂ ಶುಭಾಂ ॥ ೧೨ ॥

ತಾಂ ದೃಷ್ಟ್ವಾ ಹಾರಸಂಯುಕ್ತಾಂ ಶರಜ್ಜ್ಯೋತ್ಸ್ನೇಪಮಾಂ ಶುಭಾಂ ।
ಕಕುತ್ಸ್ಥೋ ಭಾರ್ಯಯಾ ಸಾರ್ಧಮತ್ಯರ್ಥಂ ಮುದಿತೋಽಭವತ್ ॥ ೧೩ ॥

---

೯. ಎಲೈ ರಾಣಿಯೇ! ಸರ್ವಸ್ತ್ರೀಲಕ್ಷಣಗಳಿಂದ ಶೋಭಿಸುವವಳೂ, ನಕ್ಷತ್ರ ಮಾಲೆಯಿಂದ ಕೂಡಿರುವವಳೂ, ಚಕ್ರವರ್ತಿಯನ್ನು ಮದುವೆಯಾಗುವವಳೂ ಆದ ಓರ್ವ ಪುತ್ರಿಯು ನಿನಗೆ ಜನಿಸುವಳು.

೧೦. ಹೀಗೆ ಸ್ವಪ್ನದಲ್ಲಿ ವರವನ್ನು ಪಡೆದು, ಉತ್ತಮಸ್ತ್ರೀಯಾದ ಆ ರಾಜ ಪತ್ನಿಯು ತುಂಬಾ ಸಂತೋಷಗೊಂಡಳು. ಮುಂದೆ ಪಾರ್ವತಿಯು ಸಕಾಲದಲ್ಲಿ ಆ ಮನೋನ್ಮಥಿನಿಯ ಗರ್ಭದಲ್ಲಿ ಪ್ರವೇಶಿಸಿದಳು.

೧೧-೧೨. ಆ ಮನೋನ್ಮಥಿನೀದೇವಿಯು ಪತಿಯೊಡನೆ ಸಮಾಗಮವನ್ನು ಹೊಂದಿ, ಶುಕ್ಲಪಕ್ಷದಲ್ಲಿ ಅಮೃತವನ್ನು ಸುರಿಸುವ ಬೆಳದಿಂಗಳಿಗೆ ನಿಧಿಯಾದ ಚಂದ್ರ ನುದಯನಾಗುವಂತೆ ಮಹಾಸತ್ತ್ವಶಾಲಿಯಾದ ಗರ್ಭವನ್ನು ಧರಿಸಿ, ಪ್ರಾಪ್ತಕಾಲ ವಾಗಿ ನವಮಾಸಗಳು ತುಂಬಲು, ಅತ್ಯಂತ ಮನೋಹರಳೂ, ಕತ್ತಿನಲ್ಲಿ ನಕ್ಷತ್ರಹಾರ ವನ್ನು ಧರಿಸಿರುವವಳೂ ಆದ ಓರ್ವ ಕನ್ಯೆಯನ್ನು ಹಡೆದಳು.

೧೩. ನಕ್ಷತ್ರಹಾರದಿಂದ ಕೂಡಿ ಶರತ್ಕಾಲದ ಚಂದ್ರಿಕೆಯಂತೆ ಮನೋಹರ ವಾಗಿರುವ ಆ ಪುತ್ರಿಯನ್ನು ನೋಡಿ, ಕಕುತ್ಸ್ಥರಾಜನು ಪತ್ನಿಯೊಡನೆ, ತುಂಬಾ ಹರ್ಷಗೊಂಡವನಾದನು.

ಸಹಜೇನಾಥ ಹಾರೇಣ ಭೂಷಿತಾ ತು ಕಕುತ್ಸ್ಥಜಾ ।
ವವೃಧೇ ಮಂದಿರೇ ತಸ್ಯ ವರ್ಷಾಸ್ವಿವ ಸುರಾಪಗಾ ॥ ೧೪ ॥

ತೇನೈವ ಹಾರಚಿನ್ಹೇನ ತಸ್ಯಾಸ್ತಾರಾವತೀತಿ ವೈ ।
ನಾಮಾಽಕರೋಽಪಿತಾ ಕಾಲೇ ಯಥೋಕ್ತೇ ನೃಪಸತ್ತಮ ॥ ೧೫ ॥

ಕಾಲಕ್ರಮೇಣ ಸಾ ಬಾಲ್ಯಂ ವ್ಯತೀತಾ ವರವರ್ಣಿನೀ ।
ಮಂಜುಲಂ ಯೌವನೋದ್ಭೇದಂ ಪ್ರಾಪ ಶ್ರೀರಿವ ಮಾಧವೇ ॥ ೧೬ ॥

ಸಾ ಶ್ರಿಯಾ ಶ್ರಿಯಮುನ್ನೇತಿ ಶೌಚೇನಾಥ ಸತೀ ಶುಭಾ ।
ಸುಶೀಲಾಂ ಶೀಲಚರಿತೈಃ ಸ್ವರೂಪೇಣ ಚ ಪಾರ್ವತೀಂ ॥ ೧೭ ॥

ತಸ್ಯಾಸ್ತು ಯೌವನೋದ್ಭೇದಂ ದೃಷ್ಟ್ವಾ ರಾಜಾ ಸುತೈಃ ಸಹ ।
ಕಕುತ್ಸ್ಥಃ ಕಾರಯಾಮಾಸ ಸಮಯೇಽಥ ಸ್ವಯಂವರಂ ॥ ೧೮ ॥

ಮಾಧವೇ ಮಾಸಿ ಸಂಪ್ರಾಪ್ತೇ ಚಂದ್ರವೃದ್ಧೌ ಶುಭೇ ದಿನೇ ।
ಸ್ವಯಂವರಸಭಾಂ ಚಕ್ರೇ ತಾರಾವತ್ಯಾಃ ಪಿತಾ ಸುತೈಃ ॥ ೧೯ ॥

೧೪-೧೫. ಹುಟ್ಟುವಾಗಲೇ ಆ ಕನ್ಯೆಯ ಕಂಠದಲ್ಲಿ ನಕ್ಷತ್ರಹಾರವಿದ್ದಿತು. ಅದರಿಂದ ತಂದೆಯಾದ ಕಕುತ್ಸ್ಥರಾಜನು ಆ ಕನ್ಯೆಗೆ ತಾರಾವತೀ ಎಂದು ನಾಮಕರಣ ಮಾಡಿದನು. ಮಳೆಗಾಲದಲ್ಲಿ ಗಂಗಾನದಿಯು ದೊಡ್ಡವಾಗುವಂತೆ, ಆ ಕನ್ಯೆಯು ತಂದೆಯ ಅರಮನೆಯಲ್ಲಿ ದಿನೇದಿನೇ ಬೆಳೆಯುತ್ತಿದ್ದಳು.

೧೬. ಕಾಲಕ್ರಮದಲ್ಲಿ ಉತ್ತಮ ಕನ್ಯೆಯಾದ ಆ ತಾರಾವತಿಯು ಬಾಲ್ಯವನ್ನು ದಾಟಿ, ವಸಂತಋತುವಿನಲ್ಲಿ ಪುಷ್ಪಲಕ್ಷ್ಮಿಯು ಉದಯಿಸುವಂತೆ ಮನೋಹರವಾದ ಯೌವನಾವಸ್ಥೆಯಲ್ಲಿ ಪದಾರ್ಪಣಮಾಡಿದಳು.

೧೭. ಆ ತಾರಾವತಿಯು ಕಾಂತಿಯಿಂದ ಲಕ್ಷ್ಮೀದೇವಿಯನ್ನೂ, ನಪತ್ತೆ, ಶೀಲ, ಗುಣ ಇವುಗಳಿಂದ ಸುಶೀಲೆಯೂ, ಸಾಧ್ವಿಯೂ ಆದ ಪಾರ್ವತಿಯನ್ನೂ ಸರಿಗಟ್ಟುತ್ತಿದ್ದಳು.

೧೮-೧೯. ಆ ತಾರಾವತಿಯು ಯೌವನವತಿಯಾದುದನ್ನು ನೋಡಿ ಕಕುತ್ಸ ರಾಜನು ತನ್ನ ಪುತ್ರರೊಡನೆ ಕೂಡಿ, ವೈಶಾಖಮಾಸದಲ್ಲಿ ಚಂದ್ರಬಲವಿರುವ ಒಂದಾನೊಂದು ಶುಭದಿನದಲ್ಲಿ ತಾರಾವತಿಗೆ ಸ್ವಯಂವರಸಭೆಯನ್ನು ಏರ್ಪಡಿಸಿದನು.

ವಾರ್ತಿಕಾಂಸ್ತು ಬಹೂನ್ರಾಜಾ ವಡವಾಭಿಕ್ರಮೇಣ ವೈ ।
ತೂರ್ಣಂ ಪ್ರಸ್ಥಾಪಯಾಮಾಸ ನಾನಾದೇಶನೃಪಾನ್ ಪ್ರತಿ ॥ ೨೦ ॥

ತೇ ರಾಜಾನಸ್ತದಾ ಶ್ರುತ್ವಾ ವಾರ್ತಾಂ ವೈ ವಾರ್ತಿಕಾನನಾತ್ ।
ತೂರ್ಣಮೇವ ಸಮಾಜಗ್ಮುಸ್ತಾರಾವತ್ಯಾಃ ಸ್ವಯಂವರಂ ॥ ೨೧ ॥

ತಂ ಶ್ರುತ್ವಾ ಪೌಷ್ಯತನಯಶ್ಚತುರಂಗಬಲೈರ್ಯುತಃ ।
ಸ್ವಯಂವರಂ ಜಗಾಮಾಶು ದಿವ್ಯಾಲಂಕಾರಸಂಯುತಃ ॥ ೨೨ ॥

ತತ್ರ ಗತ್ವಾ ನೃಪಶ್ರೇಷ್ಠಾಃ ಕಕುತ್ಸ್ಥೇನ ವಿನಿರ್ಮಿತೇ ।
ಸ್ವಯಂವರಸಭಾಮಧ್ಯೇ ಯಥಾಯೋಗ್ಯಮುಪಸ್ಥಿತಾಃ ॥ ೨೩ ॥

ಆಸೀನೇಷ್ವಥ ಭೂಪೇಷು ಕಕುತ್ಸ್ಥಃ ತನಯಾಂ ಸ್ವಕಾಂ ।
ಶುಭೇ ಮುಹೂರ್ತೇ ಸಂಪ್ರಾಪ್ತೇ ಸಭಾಂ ನೇತುಂ ಮನೋಽಕರೋತ್ ।

---

೨೦. ಅನಂತರ ಆ ಕಕುತ್ಸ್ಥರಾಜನು ಎಲ್ಲಾದೇಶದ ರಾಜರುಗಳನ್ನೂ ಆಹ್ವಾನಿಸಲು ಅವರ ಬಳಿಗೆ ಅನೇಕ ದೂತರನ್ನು ಜಾಗ್ರತೆಯಾಗಿ ಕಳುಹಿಸಿದನು.

೨೧. ಆ ರಾಜರುಗಳೆಲ್ಲರೂ ದೂತರ ಮುಖದಿಂದ ತಾರಾವತಿಯ ಸ್ವಯಂವರದ ವಾರ್ತೆಯನ್ನು ಕೇಳಿ ಜಾಗ್ರತೆಯಾಗಿ ಆ ಸ್ವಯಂವರಕ್ಕೆ ಹೊರಟುಬಂದರು.

೨೨. ಪೌಷ್ಯರಾಜನ ಸುತನಾದ ಚಂದ್ರಶೇಖರನು ಆ ಸ್ವಯಂವರವಾರ್ತೆಯನ್ನು ಕೇಳಿ, ದಿವ್ಯಾಲಂಕಾರಭೂಷಿತನಾಗಿ ತನ್ನ ಆನೆ, ಕುದುರೆ, ರಥ, ಕಾಲಾಳು, ಮುಂತಾದ ಸೇನೆಯೊಡನೆ ತಾರಾವತಿಯ ಸ್ವಯಂವರಕ್ಕೆ ಹೊರಟನು.

೨೩. ಕಕುತ್ಸ್ಥರಾಜಧಾನಿಗೆ ಬಂದ ರಾಜರೆಲ್ಲರೂ, ಆ ರಾಜನು ನಿರ್ಮಿಸಿದ ಸ್ವಯಂವರಸಭೆಯ ಮಧ್ಯದಲ್ಲಿ ಸೇರಿ ಯಥೋಚಿತವಾದ ಆಸನಗಳಲ್ಲಿ ಕುಳಿತರು.

೨೪. ರಾಜರೆಲ್ಲರೂ ಆಯಾಯ ಸ್ಥಳಗಳಲ್ಲಿ ಕುಳಿತುಕೊಳ್ಳಲು, ಕಕುತ್ಸ್ಥರಾಜನು ಶುಭಮುಹೂರ್ತದಲ್ಲಿ ಪುತ್ರಿಯಾದ ತಾರಾವತಿಯನ್ನು ಸ್ವಯಂವರಸಭೆಗೆ ಕರೆದುಕೊಂಡುಬರಲು ನಿಶ್ಚಯಿಸಿದನು.

ಏತಸ್ಮಿನ್ನಂತರೇ ರಾಜ್ಞಃ ಕುಮಾರೀ ವರವರ್ಣಿನೀ ।
ವೃದ್ಧಾಂ ಧಾತ್ರೀಂ ನಿಜಾಂ ಸಮ್ಯಕ್ಸಂಪೂರ್ಣಜ್ಞಾನಶಾಲಿನೀಂ ॥ ೨೫ ॥

ಸ್ವಯಂವರಸಭಾಂ ದ್ರಷ್ಟುಂ ಪ್ರಾಹಿಣೋತ್ಸದಸಂ ಪ್ರತಿ ।
ಉವಾಚ ಚ ತದಾ ಧಾತ್ರೀಂ ರಾಜಪುತ್ರೀ ಸುಮಂಗಲಾಂ ॥ ೨೬ ॥

ಸ್ವಯಂವರಸಭಾಂ ಗತ್ವಾ ಚಾರುರೂಪಂ ಸುಲಕ್ಷಣಂ ।
ನೃಪಂ ನಿರೂಪ್ಯ ಭೋ ಧಾತ್ರಿ ಸಮಕ್ಷಂ ಮೇ ನಿವೇದಯ ॥ ೨೭ ॥

ತ್ವಂ ಮಾತರ್ಮಮಕಲ್ಯಾಣಂ ಸೌಭಾಗ್ಯಮಪಿ ವಾಂಛಸಿ ।
ಯಥಾ ಸೌಭಾಗ್ಯದಃ ಸ್ವಾಮಿ ಮಮ ಸ್ಯಾತ್ತ್ವಂ ತಥಾ ಕುರು ॥ ೨೮ ॥

ಏವಂ ತಾಂ ಪ್ರೇಷಯಿತ್ವಾಥ ಧಾತ್ರೀಂ ನೃಪತಿಪುತ್ರಿಕಾ ।
ಸಾ ಮನೋನ್ಮಥಿನೀ ಯತ್ರ ಪ್ರಾರಾಧಯತಿ ಚಂಡಿಕಾಂ ॥ ೨೯ ॥

ತತ್ರ ಪ್ರಾಯಾನ್ಮಹಾಭಾಗಾ ಶುಭಾ ತಾರಾವತೀ ತದಾ ।
ತತ್ರ ಗತ್ವಾ ಮಹಾದೇವೀಂ ಪ್ರಣಮ್ಯ ಕಾಳಿಕಾಹ್ವಯಾಂ ॥ ೩೦ ॥

೨೫—೨೮. ಈ ಮಧ್ಯದಲ್ಲಿ ರಾಜಪುತ್ರಿಯಾದ ತಾರಾವತಿಯು, ಸಭೆಯನ್ನು ನೋಡಿಬರಲು ಬುದ್ಧಿಶಾಲಿನಿಯಾದ ತನ್ನ ವೃದ್ಧ ದಾದಿಯನ್ನು ಕರೆದು, ಎಲೈ ದಾದಿಯೇ ! ಸ್ವಯಂವರಸಭೆಗೆ ಹೋಗಿ ಅಲ್ಲಿ ಯಾವ ರಾಜನು ಸುಂದರನೂ, ಒಳ್ಳೇ ಲಕ್ಷಣವಂತನೂ ಆಗಿರುವನೆಂದು ತಿಳಿದು ನನಗೆ ಬಂದು ಹೇಳು. ಓ ಮಾತೆಯೆ ! ನೀನು ಯಾವಾಗಲೂ ನನ್ನ ಹಿತವನ್ನೇ ಕೋರುವವಳು, ನನಗೆ ಮಂಗಳವೂ, ಸೌಭಾಗ್ಯವೂ ಉಂಟಾಗಲೆಂದು ನಿನಗೆ ಅಪೇಕ್ಷೆಯಿರುವುದಷ್ಟೆ. ಆದುದರಿಂದ ನನಗೆ ಸೌಭಾಗ್ಯವನ್ನು ನೀಡುವಂತಹ ಪತಿಯು ಲಭಿಸುವಂತೆ ಮಾಡಬೇಕು ಎಂದು ಹೇಳಿ ಕಳುಹಿಸಿದಳು.

೨೯—೩೧. ಹೀಗೆ ಹೇಳಿ ಆ ದಾದಿಯನ್ನು ಕಳುಹಿಸಿ, ಶೋಭನಾಂಗಿಯಾದ ಆ ರಾಜಪುತ್ರಿಯು ತನ್ನ ತಾಯಿ ಮನೋನ್ಮಥಿನಿಯು ನಿತ್ಯವೂ ಚಂಡಿಕೆಯನ್ನು ಆರಾಧಿಸುವ ಚಂಡಿಕಾಮಂದಿರಕ್ಕೆ ಹೋಗಿ, ಕಾಳಿಕಾ ಎಂದು ಹೆಸರುಳ್ಳ ಆ ದೇವಿ

ಮಾನುಷೇಣಾಥ ಭಾವೇನ ತಾಂ ಚಾಪ್ಯತ್ವಾತ್ಮಾನಮಾತ್ಮನಾ ।
ಪ್ರಣನಾಮ ಮಹಾಭಕ್ತ್ಯಾ ವಾಕ್ಯಂ ಚೈತದುವಾಚ ಹ ॥ ೩೧ ॥

ಪ್ರಣಮಾಮಿ ಮಹಾಮಾಯಾಂ ಯೋಗನಿದ್ರಾಂ ಜಗನ್ಮಯಾಂ ।
ಸಾ ಮೇ ಪ್ರಸೀದತಾಂ ಗೌರೀ ಚಂಡಿಕಾ ಭಕ್ತವತ್ಸಲಾ ॥ ೩೨ ॥

ಯದಿ ಸತ್ಯಂ ಜನನ್ಯಾ ಮೇ ಮದರ್ಥೇ ತ್ವಂ ಪ್ರಪೂಜಿತಾ ।
ತೇನ ಸತ್ಯೇನ ಸುಭಗಃ ಪತಿರ್ಮಮ ನೃಪೋತ್ತಮಃ ॥ ೩೩ ॥

ಸ್ವಯಂವರೇಽದ್ಯ ಭವತು ಪ್ರಸೀದ ಹರವಲ್ಲಭೇ ।
ಇತಿ ತಸ್ಯಾ ವಚಃ ಶ್ರುತ್ವಾ ಚಂಡಿಕಾ ಹರಮೋಹಿನೀ ॥ ೩೪ ॥

ಮೋಹಯಂತೀ ನೃಪಸುತಾಂ ಯಥಾತ್ಮಾನಂ ನ ವೇತ್ತಿ ಚ ।
ತಥಾ ಪ್ರಾಹಾದೃಶ್ಯಮೂರ್ತಿರಿದಂ ಸಾ ಸೂನೃತಂ ವಚಃ ॥ ೩೫ ॥

ಯನ್ನು ನಮಸ್ಕರಿಸಿದಳು. ತಾನು ಆ ಕಾಳಿಕೆಯ ಮನುಷ್ಯರೂಪದ ಅವತಾರವೆಂದು ತಿಳಿದು, ಮಹಾಭಕ್ತಿಯಿಂದ ತಿರುಗಿ ನಮಸ್ಕರಿಸಿ ಪ್ರಾರ್ಥಿಸಿದಳು.

೩೨-೩೩. ಓ ಭಕ್ತವತ್ಸಲಳಾದ ಚಂಡಿಕಾದೇವಿಯೇ! ನೀನು ಜಗನ್ಮಾಪಳು, ಯೋಗನಿದ್ರಾ ಎಂದು ಪ್ರಸಿದ್ಧಳಾದವಳು, ಸಾಕ್ಷಾನ್ಮಹಾಮಾಯೆಯು, ನನಗೆ ಪ್ರಸನ್ನಳಾಗು. ಓ ಶಂಕರಪ್ರಿಯಳೇ! ನನ್ನ ತಾಯಿಯು ನನ್ನ ಕಲ್ಯಾಣಕ್ಕಾಗಿ ನಿನ್ನನ್ನು ಭಕ್ತಿಯಿಂದ ಆರಾಧಿಸಿರುವುದು ಸತ್ಯವಾದರೆ, ಈಗ ಇಲ್ಲಿ ನೆರದಿರುವ ಸ್ವಯಂವರಸಭೆಯಲ್ಲಿ ನನಗೆ ಅನುರೂಪನೂ, ಭಾಗ್ಯಶಾಲಿಯೂ, ಸಚ್ಚರಿತ್ರನೂ ಆದ ರಾಜೋತ್ತಮನು ನನಗೆ ಪತಿಯಾಗುವಂತೆ ಅನುಗ್ರಹಿಸು.

೩೪-೩೫. ಈರೀತಿಯಾಗಿ ಪ್ರಾರ್ಥಿಸುತ್ತಿರುವ ತಾರಾವತಿಯ ಮಾತನ್ನು ಕೇಳಿ ಶಂಕರಪ್ರಿಯೆಯಾದ ಚಂಡಿಕೆಯು ತನ್ನ ಸ್ವರೂಪವನ್ನು ರಾಜಪುತ್ರಿಯು ತಿಳಿಯದಂತೆ ಅವಳನ್ನು ಮೋಹಗೊಳಿಸಿ, ಅದೃಶ್ಯರೂಪದಲ್ಲಿದ್ದುಕೊಂಡೇ ಪ್ರಿಯವಾದ ಮಾತುಗಳಿಂದ ಆ ರಾಜಪುತ್ರಿಯನ್ನು ಕುರಿತು ಹೀಗೆ ಹೇಳಿದಳು.

॥ ದೇವ್ಯುವಾಚ ॥

ಪೌಷ್ಯಸ್ಯ ತನಯೋ ಯೋಽಸೌ ನಾಮ್ನಾ ಭೂಚ್ಚಂದ್ರಶೇಖರಃ ।
ಸ ಮನೋಹರರೂಪಸ್ತೇ ಪ್ರಿಯಃ ಸ್ವಾಮೀ ಭವಿಷ್ಯತಿ ॥ ೩೬ ॥

ತಮಿಂದುಕಲಯಾ ಶೀರ್ಷೇ ಚಿಹ್ನಿತಂ ನೃಪಸತ್ತಮಂ ।
ವರಯಸ್ವ ವರಾರೋಹೇ ಪಾರ್ವತೀವ ವೃಷಧ್ವಜಂ ॥ ೩೭ ॥

ಇತ್ಯುಕ್ತ್ವಾ ವಿರರಾಮಾಶು ಪಾರ್ವತೀ ನೃಪಪುತ್ರಿಕಾಂ ।
ಸಾಪಿ ನತ್ವಾ ತಥಾದೃಶ್ಯಾಂ ಹರ್ಷೋತ್ಫುಲ್ಲವಿಲೋಚನಾ ॥ ೩೮ ॥

ಜಗಾಮ ಮಂಗಲಗೃಹಂ ಜನನ್ಯಾ ಯತ್ರ ವಾಸಿತಾ ।
ಅಥಾಜಗಾಮ ಸಾ ಧಾತ್ರೀ ನಿರೂಪ್ಯ ಸದೃಶಂ ಪತಿಂ ॥ ೩೯ ॥

ತಾರಾವತ್ಯಾಸ್ತದಾಚಷ್ಟ ರಹಸ್ಯಂ ನೃಪಸತ್ತಮ ।
ದೃಷ್ಟ್ವಾ ತಾಮಗ್ರತೋ ಧಾತ್ರೀಂ ಪ್ರಹೃಷ್ಟಾಂ ನೃಪತೇಃ ಸುತಾ ॥ ೪೦ ॥

---

೩೬. ದೇವಿಯು ಹೇಳಿದಳು:—ಎಲೌ ತಾರಾವತಿಯೇ! ಪೌಷ್ಯರಾಜನ ಪುತ್ರನಾದ ಚಂದ್ರಶೇಖರನೆಂಬುವನು ಇಲ್ಲಿಗೆ ಬಂದಿರುವನು. ಅವನು ಸುಂದರವಾದ ರೂಪವುಳ್ಳವನು. ಅವನೇ ನಿನಗೆ ಪ್ರಿಯಪತಿಯಾಗುವನು.

೩೭. ಎಲೌ ವರವರ್ಣಿನಿ! ಶಿರಸ್ಸಿನಲ್ಲಿ ಚಂದ್ರಕಲೆಯುಳ್ಳ ಆ ರಾಜೇಂದ್ರನನ್ನು, ಪಾರ್ವತಿಯು ಶಂಕರನನ್ನು ವರಿಸುವಂತೆ ವರಿಸುವವಳಾಗು.

೩೮. ಹೀಗೆ ಪಾರ್ವತೀದೇವಿಯು ಅದೃಶ್ಯವಾಗಿ ರಾಜಪುತ್ರಿಗೆ ಹೇಳಿ, ಸುಮ್ಮನಾದಳು. ಆ ರಾಜಪುತ್ರಿಯೂ ಸಹ ಅದೃಶ್ಯಳಾದ ದೇವಿಗೆ ನಮಸ್ಕರಿಸಿ, ಸಂತೋಷದಿಂದ ವಿಕಸಿತನಯನೆಯಾಗಿ ತಾಯಿಯು ನಿಯಮಿಸಿದ ತನ್ನ ಮಂಗಳಗೃಹಕ್ಕೆ ತೆರಳಿದಳು.

೩೯. ಎಲೈ ಸಗರರಾಜೇಂದ್ರನೇ! ಅನಂತರ ಸ್ವಯಂವರಸಭೆಗೆ ಹೋಗಿದ್ದ ಆ ರಾಜಪುತ್ರಿಯ ದಾದಿಯು ತಾರಾವತಿಗೆ ಅನುರೂಪನಾದ ವರನನ್ನು ನೋಡಿಕೊಂಡು ಬಂದು ರಹಸ್ಯದಲ್ಲಿ ತಾರಾವತಿಗೆ ಹೇಳಿದಳು.

೪೦. ಆಗ ರಾಜಪುತ್ರಿಯು, ವರನನ್ನು ತಿಳಿಸಲು ತನ್ನೆದುರಿನಲ್ಲೇ ನಿಂತಿರುವ ಹರ್ಷಯುಕ್ತಳಾದ ದಾದಿಯನ್ನು ನೋಡಿ ಅವಳನ್ನು ಕುರಿತು ಮೆಲ್ಲಗೆ, ನೀನು

ಪಪ್ರಚ್ಛ ನಿಭೃತಂ ಕೀದೃಕ್ಕೋ ವಾ ದೃಷ್ಟಸ್ತ್ವಯಾ ನೃಪಃ ।
ಸಾ ಪ್ರಾಹ ಧಾತ್ರೀ ವಚನಾತ್ತನ ಭೂಪಾ ವಿಲೋಕಿತಾಃ ॥ ೪೧ ॥

ಚಾರುರೂಪಾಃ ಕುಲೀನಾಶ್ಚ ಶಾಸ್ತ್ರೇ ಶಸ್ತ್ರೇ ಚ ಪಾರಗಾಃ ।
ತೇಷಾಮಹಂ ನ ಶಕ್ನೋಮಿ ಪ್ರವಕ್ತುಂ ಸುಬಹೂನ್ ಗುಣಾನ್ ॥ ೪೨ ॥

ಯೇಷು ಮೇ ರೋಚತೇ ತಾಂಸ್ತು ಕಥಯಾಮಿ ಶುಭಪ್ರಭೇ ।
ಚಾರುರೂಪಾ ಮಯಾ ತೇಷು ಚತ್ವಾರಃ ಪುರುಷಾಃ ಶುಭೇ ॥ ೪೩ ॥

ದೃಷ್ಟಾಸ್ತತ್ರಾಪಿ ನಾಸತ್ಯೌ ದೇವೌ ದ್ವಾವಪರೌ ನರೌ ।
ದೇವಯೋಃ ಕಥನೇ ಕೃತ್ಯಂ ಕಿಂಚಿಚ್ಚಾಪಿ ನ ವಿದ್ಯತೇ ॥ ೪೪ ॥

ಯೌ ಪುನಃ ಪೃಥಿವೀಪಾಲೌ ತಯೋರೇಕಃ ಸದಾರಕಃ ।
ನಾಮ್ನಾ ಸರ್ವಾಂಗಕಲ್ಯಾಣೋಽಥಾಪರಶ್ಚಂದ್ರಶೇಖರಃ ॥ ೪೫ ॥

ಅನುರೂಪನಾದ ರಾಜನನ್ನು ನೋಡಿಕೊಂಡುಬಂದೆಯಾ? ಅವನಾರು? ಹೇಗಿರುವನು? ಎಂದು ಕೇಳಿದಳು.

೪೧-೪೫. ಆಗ ಆ ದಾದಿಯು ಹೀಗೆ ಹೇಳಿದಳು:—ಎಲೌ ರಾಜಪುತ್ರಿಯೇ! ನಿನ್ನ ಮಾತಿನಂತೆ ಸ್ವಯಂವರಸಭೆಗೆ ಹೋಗಿ ಅಲ್ಲಿ ಸೇರಿರುವ ಸುಂದರರೂ, ಸತ್ಕುಲ ಪ್ರಸೂತರೂ, ರಣಪಂಡಿತರೂ, ಶಾಸ್ತ್ರಪಂಡಿತರೂ ಆದಂತಹ ಅನೇಕ ರಾಜರನ್ನು ನೋಡಿದೆನು. ಆ ರಾಜರುಗಳೆಲ್ಲರ ಗುಣಗಳೆಲ್ಲವನ್ನೂ ನಾನು ಹೇಳಲಾರೆ. ಎಲೌ ಮಂಗಳಾಂಗಿಯೇ! ಆ ರಾಜರಲ್ಲಿ ನನಗೆ ಯಾರು ಉತ್ತಮವಾಗಿ ಕಂಡರೋ ಅವರ ವಿಚಾರವನ್ನು ಮಾತ್ರ ಹೇಳುವೆನು.

೪೩-೪೫. ಎಲೌ ಶೋಭನಾಂಗಿ! ಆ ಸ್ವಯಂವರಸಭೆಯಲ್ಲಿ ಕುಳಿತಿರುವ ರಾಜರಲ್ಲಿ ಸುಂದರರಾದ ನಾಲ್ಕು ಪುರುಷರನ್ನು ನೋಡಿದೆನು. ಅವರಲ್ಲಿ ಇಬ್ಬರು ಅಶ್ವಿನೀದೇವತೆಗಳು, ಇನ್ನಿಬ್ಬರು ಮನುಷ್ಯರು. ದೇವತೆಗಳ ವಿಷಯದಲ್ಲಿ ಹೇಳಬೇಕಾದುದೇನೂ ಇಲ್ಲ, ಹೇಳಿ ಪ್ರಯೋಜನವೂ ಇಲ್ಲ. ಮಿಕ್ಕ ಇಬ್ಬರು ರಾಜರುಗಳಲ್ಲಿ ಓರ್ವನು ಪತ್ನಿಯುಳ್ಳ ವಿವಾಹಿತನು. ಅವನಿಗೆ ಈಗಲೇ ಓರ್ವ ಪತ್ನಿ ಇರುವಳು. ಅವನ ಹೆಸರು "ಸರ್ವಾಂಗಕಲ್ಯಾಣನೆಂದು." ಇನ್ನೊಬ್ಬನು ಚಂದ್ರಶೇಖರನೆಂಬುವನು. ಇವರೀರ್ವರಿಗೂ ಅಶ್ವಿನೀಕುಮಾರರಿಗೂ ರೂಪದಲ್ಲಿ ಭೇದವೇ ಕಾಣುವುದಿಲ್ಲ.

ನಾಸತ್ಯಯೋರೇತಯೋಸ್ತು ವಿಶೇಷೋ ನಾಸ್ತಿ ಕಶ್ಚನ ।
ರೂಪೇ ಶರೀರೇ ಸೌಭಾಗ್ಯೇ ಸರ್ವೇ ಚಾತಿಮನೋಹರಾಃ ॥ ೪೬ ॥

ನೃಪೌ ಪುನರ್ಮಹಾಸತ್ತ್ವೌ ಸಿಂಹಸ್ಕಂಧೌ ಮಹಾಭುಜೌ ।
ಆರಕ್ತಪಾಣಿನಯನಮುಖಪಾದಕರೋದ್ಭವೌ ॥ ೪೭ ॥

ಪೀನೋರಸ್ಕೌ ವಿಶಾಲಾಕ್ಷೌ ಲಗ್ನಭ್ರೂಯುಗಲಾವುಭೌ ।
ಸರ್ವಲಕ್ಷಣಸಂಪೂರ್ಣೌ ದೇವಾಲಂಕಾರಮಂಡಿತೌ ॥ ೪೮ ॥

ತಯೋರಪಿ ವಯಃಸ್ಥತ್ವಾತ್ಪ್ರಶಸ್ತಶ್ಚಂದ್ರಶೇಖರಃ ।
ಸುಶೀಲಃ ಸೂನೃತವಚಾಃ ಶಾಸ್ತ್ರೇ ಶಸ್ತ್ರೇ ಚ ಸಮ್ಮತಃ ॥ ೪೯ ॥

ಈಷದುದ್ಭಿನ್ನರೋಮ್ಣಾ ತು ನಿಲೀನೇನ ಚಾರು ನಿರ್ಮಲಂ ।
ರಾಜತೇ ವದನಂ ತಸ್ಯ ಲಕ್ಷ್ಮಣೇವ ನಿಶಾಕರಃ ॥ ೫೦ ॥

ರೂಪದಲ್ಲಿಯೂ, ಶರೀರದಲ್ಲಿಯೂ, ಸೌಭಾಗ್ಯದಲ್ಲಿಯೂ, ಆ ರಾಜರೆಲ್ಲರೂ ಮನೋಹರರಾಗಿದ್ದರು. ಆದರೆ ಚಂದ್ರಶೇಖರ ಮತ್ತು ಸರ್ವಾಂಗಕಲ್ಯಾಣ ಎಂಬ ರಾಜರ್ಷಿಗಳು ತುಂಬಾ ಬಲಶಾಲಿಗಳು. ಸಿಂಹದಂತಿರುವ ಹೆಗಲು, ನೀಳವೂ, ದಪ್ಪವೂ ಆದ ಭುಜಗಳು, ಕೆಂಪಾದ ಅಂಗೈ, ನಯನ, ಮುಖ, ಅಂಗಾಲು, ನಖಾಗ್ರ ಇವುಗಳಿಂದ ಶೋಭಿಸುತ್ತಿರುವರು. ಅಲ್ಲದೆ ಅವರು ದಪ್ಪವೂ ಅಗಲವೂ ಆದ ಎದೆಯುಳ್ಳವರು, ವಿಶಾಲವಾದ ಕಣ್ಣುಗಳುಳ್ಳವರು, ಒಂದಕ್ಕೊಂದು ಸೇರಿದ ಹುಬ್ಬುಗಳುಳ್ಳವರು. ಸಕಲ ಪುರುಷಲಕ್ಷಣಗಳಿಂದ ತುಂಬಿದ ಅವರೀರ್ವರೂ ದಿವ್ಯವಾದ ಅಲಂಕಾರಗಳನ್ನು ಧರಿಸಿ ಅಲ್ಲಿ ಕುಳಿತಿರುವರು.

೪೯-೫೦. ಆ ಇಬ್ಬರು ರಾಜರಲ್ಲಿಯೂ ಯೌವನವಂತನಾಗಿರುವ ಚಂದ್ರಶೇಖರನೇ ಉತ್ತಮನು. ಅವನು ಒಳ್ಳೆಯ ಶೀಲವುಳ್ಳವನು. ಪ್ರಿಯವಾಗಿಯೂ ಸತ್ಯವಾಗಿಯೂ ಮಾತನಾಡುವ ಸ್ವಭಾವದವನು. ಯುದ್ಧಕುಶಲನು ಮತ್ತು ಶಾಸ್ತ್ರದಲ್ಲಿಯೂ ಪಂಡಿತನು. ಈಗತಾನೇ ಸ್ವಲ್ಪಸ್ವಲ್ಪವಾಗಿ ತಲೆದೋರುತ್ತಿರುವ ಕಪ್ಪಾದ ರೋಮದಿಂದ ಅವನ ಮುಖವು ಕಪ್ಪಾದ ಕಲೆಗಳಿಂದ ಶೋಭಿಸುವ ಚಂದ್ರನಂತೆ ಬಹು ಸುಂದರವಾಗಿ ಪ್ರಕಾಶಿಸುತ್ತಲಿದೆ. ಅಲ್ಲದೆ ಅವನು ಹುಟ್ಟುವಾಗಲೇ ಅವನ ಶಿರಸ್ಸಿನಲ್ಲಿ ಪ್ರಕಾಶಮಾನವಾದ ಚಂದ್ರಕಲೆಯಿದ್ದಿತು. ಆ ಚಂದ್ರಕಲೆಯಿಂದ ಅವನು ಸಾಕ್ಷಾತ್ ಚಂದ್ರಶೇಖರ (ಶಂಕರ) ನಂತೆ ಶೋಭಿಸುತ್ತಲಿರುವನು. ಎಲ್ಲಾ ಸುಂದರ !

ದೀಪ್ತಿಮತ್ಯಾಪಿ ಕಲಯಾ ರಾಜತೇ ಸ ನಿಶಾಪತೇಃ ।
ಸಹಜೇನ ಶಿರಸ್ಸ್ಥೇನ ಸಾಕ್ಷಾತ್ಸ ಚಂದ್ರಶೇಖರಃ ॥ ೫೧ ॥

ಸ ಏವ ತೇ ಪತಿರ್ಯೋಗ್ಯಶ್ಚಿಹ್ನೇನಾನೇನ ಸುಂದರಿ ।
ತಂ ತ್ವಂ ವರಯ ರಾಜಾನಂ ತವ ಯೋಗ್ಯಂ ಶುಭೋದಯಂ ॥ ೫೨ ॥

ಧಾತ್ರ್ಯಾಶ್ಚೈವಂ ವಚಃ ಶ್ರುತ್ವಾ ರಾಜಪುತ್ರೀ ಜಗಾದ ತಾಂ ।
ಗತ್ವಾಶ್ವಬಾರಿಣೀ ಭೂತ್ವಾ ನಿರ್ದೇಶಯ ನೃಪೋತ್ತಮಂ ॥ ೫೩ ॥

ಧಾತ್ರಿ ಸ್ವಯಂವರಸಭಾಪ್ರವೇಶಸಮಯೇ ಪುನಃ ।
ತಯೋರಾಯಾತ್ತದಾ ರಾಜಾ ತ್ವನ್ಯೋನ್ಯಂ ಭಾಷಮಾಣಯೋಃ ॥ ೫೪ ॥

ಸುತಾಂ ಸ್ವಯಂವರಸಭಾಂ ನೇತುಂ ಕಾಲೇ ಶುಭೋದಯೇ ।
ಸ್ವಯಂ ತದಾ ಕಕುತ್ಸ್ಥಸ್ತು ಸುತಾಯಾ ಮಂಗಲಾಲಯೇ ॥ ೫೫ ॥

ಈ ಎಲ್ಲಾ ಲಕ್ಷಣಗಳಿಂದ ಶೋಭಿಸುವ ಆ ಚಂದ್ರಶೇಖರನೇ ನಿನಗೆ ಅನುರೂಪನಾದವನು. ಸುಂದರಾಂಗನಾದ ಆ ರಾಜಕುಮಾರನನ್ನೇ ನೀನು ವರಿಸು ಎಂದು ಹೇಳಿದಳು.

೫೩. ದಾದಿಯ ಈರೀತಿಯಾದ ಮಾತುಗಳನ್ನು ಕೇಳಿ, ಆ ರಾಜಪುತ್ರಿಯು ತಿರುಗಿ ಅವಳನ್ನು ಕುರಿತು ಎಲೌ ದಾದಿಯೇ ! ಸ್ವಯಂವರಮಂಟಪಪ್ರವೇಶಕಾಲದಲ್ಲಿ ನನ್ನೊಡನೆಯೇ ಇದ್ದು, ನೀನು ಆ ರಾಜೇಂದ್ರನಾರೆಂಬುದನ್ನು ನನಗೆ ತೋರಿಸು ಎಂದು ಹೇಳಿದಳು.

೫೪. ಹೀಗೆ ಆ ದಾದಿ ರಾಜಪುತ್ರಿಯರು ಪರಸ್ಪರ ಮಾತನಾಡಿಕೊಳ್ಳುತ್ತಲಿರಲು ಕಕುತ್ಸ್ಥರಾಜನು ತನ್ನ ಪುತ್ರಿಯನ್ನು ಶುಭಮುಹೂರ್ತದಲ್ಲಿ ಸ್ವಯಂವರಸಭೆಗೆ ಕರೆದುಕೊಂಡು ಹೋಗಲು ತಾನೇ ಬಂದನು.

೫೫—೫೮. ಸುಮಂಗಲಿಯರು ಆ ತಾರಾವತಿಯನ್ನು ಚೆನ್ನಾಗಿ ಅಲಂಕರಿಸಿದ್ದರು. ಬಳಿಕ ರಾಜನು ಸುವಾಸನೆಯುಳ್ಳ ಪುಷ್ಪಗಳಿಂದ ಮಾಡಿದ ಒಂದು ಹಾರವನ್ನು ಆ ಕನ್ಯೆಯ ಕೈಯ್ಯಲ್ಲಿ ಕೊಟ್ಟು, ಎಲೌ ಮಂಗಳಾಂಗಿ ! ಈ ಹಾರವನ್ನು ತೆಗೆದುಕೊ. ಈಗ ನಾನು ನಿನ್ನನ್ನು ಸ್ವಯಂವರಮಂಟಪಕ್ಕೆ ಕರೆದುಕೊಂಡು ಹೋಗುವೆನು. ಅಲ್ಲಿ ಅನೇಕ ರಾಜರೂ, ಬ್ರಾಹ್ಮಣರೂ, ನೆರದಿರುವರು. ಅವರಲ್ಲಿ

ಆಸಾದ್ಯ ಪುತ್ರೀಂ ದಯಿತಾಂ ಯೋಷಿದ್ಭಿಃ ಕೃತಮಂಗಲಾಂ ।
ಮಾಲ್ಯಂ ಸುಗಂಧಿಪುಷ್ಪಾಣಾಂ ಕರೇಣಾದಾಯ ತತ್ಕರೇ ॥ ೫೬ ॥

ದತ್ತ್ವಾ ಚೇದಮುವಾಚಾಶು ಪ್ರಾಪಯನ್ಮಂಗಲಾಲಯಾತ್ ।
ಪ್ರವಿಶ್ಯ ಸಮಿತೌ ಮಾತರ್ಮಾಲ್ಯೇನಾನೇನ ಸತ್ತಮಂ ॥ ೫೭ ॥

ಯಂ ತ್ವಮಿಚ್ಛಸಿ ರಾಜಾನಂ ದ್ವಿಜಂ ವಾ ತಂ ವರಿಷ್ಯಸಿ ।
ಏವಮುಕ್ತ್ವಾ ಶಿಬಿಕಯಾ ಸ್ವಾಪ್ತೈರ್ವೃದ್ಧೈಶ್ಚ ಪೂರುಷೈಃ ॥ ೫೮ ॥

ಪ್ರವೇಶಯಾಮಾಸ ಸುತಾಂ ಕಕುತ್ಸ್ಥಃ ಸಮಿತಿಂ ತದಾ ।
ತಾಮಾಗತಾಂ ಸಭಾಂ ದೃಷ್ಟ್ವಾ ಶಕ್ರಾದ್ಯಾಸ್ತ್ರಿದಿವಾಸ್ತದಾ ॥ ೫೯ ॥

ಅನ್ಯೇ ದಿಕ್ಪತಯಶ್ಚಾಪಿ ಸಭಾಂ ತತ್ಕ್ಷಣಮಾಗತಾಃ ।
ಸಾವತೀರ್ಯ ತದಾವಾಪ್ಯ ಯಾನಾತಾರಾವತೀ ಮುದಾ ॥ ೬೦ ॥

ಧಾತ್ರ್ಯಾ ಚಾನುಗಯಾ ಯುಕ್ತಾ ವ್ಯಚರತ್ಸದಸೋಂತರೇ
ಸಭಾಮಧ್ಯೇ ಚಿರಂ ಸಾ ತು ವಿಪೃತ್ಯ ವರವರ್ಣಿನೀ ॥ ೬೧ ॥

ನಿನಗೆ ಇಚ್ಛೆಬಂದ ರಾಜನನ್ನಾಗಲಿ, ಬ್ರಾಹ್ಮಣನನ್ನಾಗಲಿ ವರಿಸಿ, ಅವನ ಕೊರಳಿಗೆ ಈ ಹಾರವನ್ನು ಹಾಕು ಎಂದು ಹೇಳಿ ಕಕುತ್ಸ್ಥರಾಜನು ಪಾಲಕ್ಕಿಯಲ್ಲಿ ಮಗಳನ್ನು ಕೂರಿಸಿಕೊಂಡು ಬಂಧುಗಳೊಡನೆಯೂ, ವೃದ್ಧರೊಡನೆಯೂ ಸಹ ಸ್ವಯಂವರಸಭೆಗೆ ಸಂತೋಷದಿಂದ ಕರೆದುಕೊಂಡುಬಂದನು.

೫೯. ಸಭೆಗೆ ಪ್ರವೇಶಿಸಿದ ಆ ತಾರಾವತಿಯನ್ನು ನೋಡಿ ಇಂದ್ರನೇ ಮೊದಲಾದ ದೇವತೆಗಳೂ, ಮಿಕ್ಕ ದಿಕ್ಪಾಲಕರೂ ಸಹ ಆ ಕೂಡಲೇ ಆ ಸ್ವಯಂವರಸಭೆಗೆ ಬಂದರು.

೬೦. ಪಾಲಕ್ಕಿಯಿಂದ ಇಳಿದು, ಆ ತಾರಾವತಿಯು ತನ್ನ ಸಖಿಯೊಡನೆ ಸ್ವಯಂವರಸಭೆಯಲ್ಲಿ ಸಂತೋಷದಿಂದ ಸಂಚರಿಸಿದಳು.

೬೧—೬೩. ಸಭೆಯ ಮಧ್ಯದಲ್ಲಿ ರಾಜಕುಮಾರರನ್ನು ನೋಡುತ್ತಾ ಆ ತಾರಾವತಿಯು ಬಹಳಹೊತ್ತು ಸಂಚರಿಸುತ್ತಿದ್ದುದರಿಂದ ಆಯಾಸಗೊಂಡ ಅವಳ ಮುಖದಲ್ಲಿ ಜಿನಗುತ್ತಿರುವ ಬೆವರು ಹನಿಗಳು ಆ ಕನ್ಯೆಯ ಸೌಂದರ್ಯವನ್ನು ಮತ್ತಷ್ಟು

ಭಾವಿತ್ವಾನ್ನಿಯತೇಯೋ೯ೀಗಾಚ್ಚಂಡಿಕಾಯಾಃ ಪ್ರಸಾದತಃ ।
ತಯೋಃ ಸಮುತ್ವಾದೇಕತ್ವಾತ್ತಯಾ ಧಾತ್ರ್ಯಾ ವಿಬೋಧಿತಾ ॥ ೬೨ ॥

ಗತಿಖೇದಜಘರ್ಮಾಂಭಃಕಣಿಕಾನಿಚಿತಾನನಾ ।
ಪತಿಂ ಪೂರ್ವತರಂ ಪುತ್ರೀ ರಾಜ್ಞಸ್ತಾರಾವತೀ ಸತೀ ॥ ೬೩ ॥

ಸ್ವಯಂ ಸಾ ಪಾರ್ವತೀ ದೇವೀ ವವ್ರೇ ಚ ಚಂದ್ರಶೇಖರಂ ।
ವೃತಂ ದೃಷ್ಟ್ವಾ ತದಾ ತಂ ತು ಬ್ರಾಹ್ಮಣಾಃ ಸಾಮುಗೀತಿಭಿಃ ॥ ೬೪ ॥

ತಯೋರ್ವೈವಾಹಿಕಂ ಚಕ್ರುರ್ಮಂಗಲಂ ಯತಮಾನಸಾಃ ।
ವೈತಾಳಿಕಾ ಗಾಯಕಾಶ್ಚ ತಥಾ ತೌರ್ಯತ್ರಿಕಾ ನೃಪ ॥ ೬೫ ॥

ಪ್ರಶಂಸಂತಿ ಸ್ಮ ಗಾಯಂತಿ ವಾದಯಂತಿ ಚ ಕೌತುಕಾತ್ ।
ಸರ್ವೇ ಚ ತ್ರಿದಶಾ ಮೋದಮುವಾಪುಶ್ಚಂದ್ರಶೇಖರೇ ॥ ೬೬ ॥

ತಾರಾವತ್ಯಾ ವೃತೇ ಚಾಥ ಕಕುತ್ಸ್ಥೇ ಪ್ಯತಿಪರ್ಷಿತಃ ।
ವೃತ್ತಾಂತಂ ವೀಕ್ಷ್ಯ ಯೇ ಭೂಪಾಃ ಸುಬಾಹುಪ್ರಮುಖಾಃ ಪರೇ ॥ ೬೭ ॥

ಹೆಚ್ಚಿಸುತ್ತಿದ್ದವು. ಬಳಿಕ ತನ್ನ ದಾದಿಯ ಸೂಚನೆಯಂತೆ ಚಂದ್ರಶೇಖರನು ಇಂಥ ವನೆಂದು ತಿಳಿದು ಅವನನ್ನು ವರಿಸಿದಳು. ಪೂರ್ವದಲ್ಲಿ ತಾನೇ ಪಾರ್ವತಿಯಾಗಿದ್ದಾಗ ಶಂಕರನನ್ನು ಪತಿಯನ್ನಾಗಿ ವರಿಸಿದಂತೆ, ಈಗ ಚಂಡಿಕಾದೇವಿಯ ಅನುಗ್ರಹದಿಂದ ತನುಗನುರೂಪನಾದ ಚಂದ್ರಶೇಖರರಾಜನನ್ನು ಪತಿಯನ್ನಾಗಿ ವರಿಸಿದಳು.

೬೪—೬೫. ರಾಜಪುತ್ರಿಯು ಚಂದ್ರಶೇಖರನನ್ನು ವರಿಸಿದುದನ್ನು ನೋಡಿ. ಬ್ರಾಹ್ಮಣರು ಸಾಮಗಾನದಿಂದ ಆ ವಧೂವರರಿಗೆ ಸಾವಧಾನದಿಂದ ವಿವಾಹವಿಧಿಯನ್ನು ನಿರ್ವೇರಿಸಿ ಮಂಗಳವನ್ನು ಮಾಡಿದರು. ಆಗ ವಂದಿಮಾಗಧರು ಹೊಗಳುತ್ತಿದ್ದರು. ಗಾಯಕರು ಹಾಡುತ್ತಿದ್ದರು. ವಾದ್ಯಗಾರರು ಮಂಗಳವಾದ್ಯಗಳನ್ನು ಉತ್ಸಾಹದಿಂದ ಬಾರಿಸುತ್ತಲಿದ್ದರು.

೬೬. ತಾರಾವತಿಯು ಚಂದ್ರಶೇಖರನನ್ನು ವರಿಸಲು, ದೇವತೆಗಳೆಲ್ಲರೂ ಹರ್ಷಗೊಂಡರು. ತಂದೆಯಾದ ಕಕುತ್ಸ್ಥರಾಜನಿಗೂ ತುಂಬಾ ಸಂತೋಷವಾಯಿತು.

೬೭. ರಾಜಪುತ್ರಿಯು ಚಂದ್ರಶೇಖರನನ್ನು ವರಿಸಿದುದನ್ನು ನೋಡಿ ಸುಬಾಹುವೇ ಮೊದಲಾದ ಅಲ್ಲಿ ಸೇರಿದ್ದ ರಾಜರು ತುಂಬಾ ಕೋಪಗೊಂಡರು. ಆದರೆ ಅವರೆಲ್ಲರನ್ನೂ ಚಂದ್ರಶೇಖರನು ತನ್ನ ಬಾಹುಬಲದಿಂದ ತಡೆದನು.

ರುಷ್ವಾಸ್ತಾನ್ವಾರಯಾಮಾಸ ಸಮಿತೌ ಚಂದ್ರಶೇಖರಃ ।
ತತೋ ಯಾತೇಷು ದೇವೇಷು ತ್ರಿದಿವಂ ಪ್ರತಿ ಸ್ವೇಚ್ಛಯಾ ॥ ೬೮ ॥

ಭೂಪೇಷು ಚ ಪ್ರಯಾತೇಷು ಕಕುತ್ಸ್ಥೇನಾರ್ಚಿತೇಷು ಚ ।
ವೈವಾಹಿಕೇನ ವಿಧಿನಾ ಸ ರಾಜಾ ಚಂದ್ರಶೇಖರಃ ॥ ೬೯ ॥

ತಾರಾವತೀಂ ತದಾ ಭಾರ್ಯಾಂ ಕಕುತ್ಸ್ಥಾನುಮತೇ ಪುನಃ ।
ಸಂಸ್ಕೃತ್ಯ ಚ್ಛಾಪಯಾಮಾಸ ದೇವೇಭ್ಯೋ ವೈದಿಕೈರ್ಮಖೈಃ ॥ ೭೦ ॥

ಪಾಣಿಗ್ರಹಣಸಂಸ್ಕಾರಾನ್ ಕೃತ್ವಾ ತಾಂ ಸಹಚಾರಿಣೀಂ ।
ಕರವೀರಪುರಾಯಾಶು ಪ್ರಯಯೌ ಚಂದ್ರಶೇಖರಃ ॥ ೭೧ ॥

ದ್ವಾವಿಂಶತ್ತು ಸಹಸ್ರಾಣಿ ದಾಸೀನಾಂ ಪ್ರದದೌ ಪುನಃ ।
ಕಕುತ್ಸ್ಥಾಜ್ಞೋ ವಿಟ್ಪತಯೇ ತಸ್ಮಿನ್ನುದ್ವಾಹಕರ್ಮಣಿ ॥ ೭೨ ॥

ಗವಾಂ ಷಷ್ಟಿಸಹಸ್ರಾಣಿ ಸೌರಭೀಣಾಂ ತಥೈವ ಚ ।
ದುಹಿತ್ರೇ ಪ್ರದದೌ ದಾಯಂ ದಾಸಾನ್ದಾಸೀಪ್ರಮಾಣತಃ ॥ ೭೩ ॥

೬೮—೭೦. ಅನಂತರ ದೇವತೆಗಳು ತಮ್ಮ ಸ್ಥಾನವಾದ ಸ್ವರ್ಗಕ್ಕೆ ಹೊರಟು ಹೋದರು. ಸ್ವಯಂವರಕ್ಕೆ ಬಂದಿದ್ದ ಮಿಕ್ಕ ರಾಜರುಗಳೂ ಸಹ ಕಕುತ್ಸ್ಥಮಹಾ ರಾಜನಿಂದ ಸತ್ಕರಿಸಲ್ಪಟ್ಟು ತಮ್ಮ ತಮ್ಮ ರಾಜಧಾನಿಗೆ ತೆರಳಿದರು. ಬಳಿಕ ಚಂದ್ರ ಶೇಖರರಾಜನು ವೈದಿಕಕರ್ಮಗಳಿಂದ ದೇವತೆಗಳನ್ನು ತೃಪ್ತಿಪಡಿಸಿ, ಕಕುತ್ಸ್ಥನ ಅನು ಮತಿಯನ್ನು ಪಡೆದು, ವಿವಾಹವಿಧಿಯಿಂದ ತಾರಾವತಿಯನ್ನು ಮದುವೆಯಾದನು.

೭೧. ವಿವಾಹಸಂಸ್ಕಾರಗಳೆಲ್ಲವೂ ಮುಗಿದಮೇಲೆ ಚಂದ್ರಶೇಖರನು ತನ್ನ ನೂತನ ಪತ್ನಿಯೊಡನೆ ಕರವೀರಪುರಕ್ಕೆ ಹೊರಟನು.

೭೨-೭೩. ಮದುವೆಯ ಕಾಲದಲ್ಲಿ ಕಕುತ್ಸ್ಥರಾಜನು ಇಪ್ಪತ್ತೆರಡುಸಾವಿರ ದಾಸಿಯರನ್ನೂ, ಅರವತ್ತುಸಾವಿರ ಹಾಲು ಕರೆಯುವ ಹಸುಗಳನ್ನೂ, ದಾಸಿಯರ ಅಷ್ಟೇ ಮಂದಿ ಸೇವಕರನ್ನೂ ತನ್ನ ಮಗಳಿಗೆ ಬಳುವಳಿಯಾಗಿ ಕೊಟ್ಟನು.

ಅಪರಾ ಯಾ ನಿಜಾ ಪುತ್ರೀ ಕಕುತ್ಸ್ಥಸ್ಯಾಸ್ಯ ಭೂಪತೇಃ ।
ನಾಮ್ನಾ ಚಿತ್ರಾಂಗದಾ ಖ್ಯಾತಾ ರೂಪೈಸ್ತಾರಾವತೀ ಸಮಾ ॥ ೭೪ ॥

ದಾಸೀನಾಮಧಿಪಾ ಭೂತ್ವಾ ಸ್ವಯಂ ಚಾನುಯಯೌ ತದಾ ।
ತಾರಾವತೀಂ ಭೂಪಸುತಾಂ ಜ್ಯೇಷ್ಠಾಂ ಸ್ವಾಂ ಭಗಿನೀಂ ಶುಭಾಂ ॥ ೭೫ ॥

ತಾನ್ದಾಸಾನ್ಸಸಮಾದಾಯ ಕಕುತ್ಸ್ಥತನಯೋ ಮಹಾನ್ ।
ಜ್ಯೇಷ್ಠೋ ವಿಶ್ವಾವಸುರ್ನಾಮ ಗಚ್ಛಂತಂ ಚಂದ್ರಶೇಖರಂ ॥ ೭೬ ॥

ತಾರಾವತ್ಯಾಚ ಸಹಿತಂ ಸ್ಯಂದನೇನಾಶುಗಾಮಿನಾ ।
ಧೀಮಾನನುಯಯೌ ಪಶ್ಚಾತ್ಕರವೀರಪುರಂ ಪ್ರತಿ ॥ ೭೭ ॥

ತಾರಾವತ್ಯಾ ಸಮಂ ರಾಜಾ ಪೌಷ್ಯಜಶ್ಚಂದ್ರಶೇಖರಃ ।
ಕರವೀರಪುರೇ ರಮ್ಯೇ ರೇಮೇ ನೃಪತಿಶೇಖರಃ ॥ ೭೮ ॥

ಇತಿ ಸ್ವಯಂ ಮಹಾದೇವೋ ಮಾನುಷೀಂ ಯೋನಿಮಾಶ್ರಿತಃ ।
ಪಾರ್ವತೀಚ ಸ್ವಯಂ ಜಾತಾ ನರಯೋನಿಮನಿಂದಿತಾ ॥ ೭೯ ॥

೭೪-೭೭. ಅಲ್ಲದೆ ಆ ಕಕುತ್ಸ್ಥರಾಜನಿಗೆ ತಾರಾವತಿಯಂತೆ ಸುಂದರಿಯಾದ "ಚಿತ್ರಾಂಗದಾ" ಎಂಬ ಇನ್ನೊಬ್ಬ ಪುತ್ರಿ ಇದ್ದಳು. ಅವಳೂ ಸಹ ಆ ಬಳುವಳಿಯಾಗಿ ಕೊಟ್ಟ ದಾಸಿಯರಿಗೆಲ್ಲಾ ಒಡತಿಯಾಗಿ, ತನ್ನ ಅಕ್ಕನಾದ ತಾರಾವತಿಯೊಡನೆ ಹೊರಟಳು. ಕಕುತ್ಸ್ಥರಾಜನ ಹಿರಿಯ ಮಗನಾದ ವಿಶ್ವಾವಸು ಎಂಬುವನು ಬಳುವಳಿಯಾಗಿ ಕೊಟ್ಟ ಆ ಸೇವಕರನ್ನೆಲ್ಲಾ ಕರೆದುಕೊಂಡು, ತಾರಾವತಿಯೊಡನೆ ಕರವೀರಪುರಕ್ಕೆ ಹೋಗುತ್ತಲಿರುವ ಚಂದ್ರಶೇಖರನನ್ನು ಶೀಘ್ರಗಾಮಿಯಾದ ರಥದಿಂದ ಅನುಸರಿಸಿ ಹೊರಟನು.

೭೮. ಈರೀತಿ ಪೌಷ್ಯರಾಜನ ಪುತ್ರನಾದ ಆ ಚಂದ್ರಶೇಖರರಾಜನು ತನ್ನ ರಾಜಧಾನಿಯಾದ ಕರವೀರಪುರಕ್ಕೆ ಹೋಗಿ, ಮನೋಹರವಾದ ಆ ನಗರದಲ್ಲಿ ತಾರಾವತಿಯೊಡನೆ ಸಂತೋಷವಾಗಿ ವಿಹರಿಸುತ್ತಿದ್ದನು.

೭೯. ಹೀಗೆ ಮಹಾದೇವನೇ ತಾನಾಗಿ ಮನುಷ್ಯರೂಪದಿಂದ ಭೂಮಿಯಲ್ಲಿ ಅವತರಿಸಿದನು. ಸಾಧ್ವಿಯಾದ ಪಾರ್ವತಿಯೂ ಸಹ ತಾನಾಗಿಯೇ ಮನುಷ್ಯಸ್ತ್ರೀರೂಪದಿಂದ ಭೂಲೋಕದಲ್ಲಿ ಜನಿಸಿ ಚಂದ್ರಶೇಖರನ ಪತ್ನಿಯಾದಳು.

ಯಥಾ ಭೃಂಗೀ ಮಹಾಕಾಲ ಏತಯೋರಭವತ್ಸುತಃ ।
ತಥಾ ತ್ವಂ ಶೃಣು ರಾಜೇಂದ್ರ ಕಥಯಾಮಿ ಸಮುದ್ಭವಂ ॥ ೮೦ ॥

॥ ಇತಿ ಶ್ರೀ ಕಾಲಿಕಾಪುರಾಣೇ ಪಂಚಾಶತ್ತಮೋಧ್ಯಾಯಃ ॥

---

೮೦. ಅಲ್ಲದೇ ಭೃಂಗಿ ಮತ್ತು ಮಹಾಕಾಲರು ಈ ಚಂದ್ರಶೇಖರತಾರಾವತಿಯರ ಪುತ್ರರಾಗಿ ಜನಿಸಿದರು. ಅವರು ಹೇಗೆ ಜನಿಸಿದರೆಂಬುದನ್ನು ಹೇಳುವೆನು. ಎಲೈ ಸಗರರಾಜೇಂದ್ರನೇ ! ಸಾವಧಾನದಿಂದ ಆ ವೃತ್ತಾಂತವನ್ನು ಕೇಳು.

ಇಲ್ಲಿಗೆ ಐವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ

ಶ್ರೀ ಕಾಲಿಕಾಪುರಾಣೇ ಏಕಪಂಚಾಶತ್ತಮೋಽಧ್ಯಾಯಃ

॥ ಮಾರ್ಕಂಡೇಯ ಉವಾಚ ॥

ಅಥ ಕಾಲೇ ವ್ಯತೀತೇ ತು ಕಕುತ್ಸ್ಥತನಯಾ ಸತೀ ।
ವಿಧಾತುಮಾರ್ತವಂ ಸ್ನಾನಂ ಯೋಷಿದ್ಭಿಃ ಪರಿವಾರಿತಾ ॥ ೧ ॥

ಶೀತಾಮಲಜಲಾಂ ಹೃದ್ಯಾಂ ನದೀಂ ಪ್ರಾಪ್ತಾ ದೃಷದ್ವತೀಂ ।
ಪ್ರಭಿನ್ನಾಂಜನಸಂಕಾಶಾಂ ಕಲುಷಧ್ವಂಸಕೋವಿದಾಂ ॥ ೨ ॥

ಕೃತಸ್ನಾನಾಮನುತ್ತೀರ್ಣಾಮರ್ಧಮಗ್ನಾಂ ಮಹಾಸತೀಂ ।
ದದೃಶೇ ಸ್ವರ್ಣಗೌರಾಂಗೀಂ ಕಾಪೋತೋ ಮುನಿಸತ್ತಮಃ ॥ ೩ ॥

॥ ಐವತ್ತೊಂದನೆಯ ಅಧ್ಯಾಯವು ॥

೧—೩. ಆಮೇಲೆ ಕೆಲವುಕಾಲ ಕಳೆಯಲು, ಸಾಧ್ವಿಯಾದ ತಾರಾವತಿಯು ಋತುಸ್ನಾನವನ್ನು ಮಾಡಲು ಸಖಿಯರಿಂದೊಡಗೂಡಿ ದೃಷದ್ವತೀನದಿಗೆ ಹೋದಳು. ಆ ನದಿಯ ಉದಕವು ಶೀತಲವಾಗಿಯೂ, ನಿರ್ಮಲವಾಗಿಯೂ, ಕಾಡಿಗೆಯಂತೆ ಕಪ್ಪಾಗಿಯೂ ಇದ್ದಿತು. ಈ ನದಿಯಲ್ಲಿ ಸ್ನಾನಮಾಡಿದವರ ಸಕಲ ಪಾಪಗಳೂ ಪರಿಹಾರವಾಗುವುವು. ಇಂತಹ ಪವಿತ್ರವಾದ ನದಿಯಲ್ಲಿ ತಾರಾವತಿಯು ಸ್ನಾನಮಾಡುತ್ತಲಿದ್ದಳು. ಜಲದಲ್ಲಿ ಮುಳುಗಿ ಸ್ನಾನಮಾಡುತ್ತಲಿರುವಾಗ ಅವಳ ಶರೀರವು ಚಿನ್ನದಂತೆ ಗೌರವರ್ಣದಿಂದ ಸುಂದರವಾಗಿ ಕಾಣುತ್ತಲಿದ್ದಿತು. ಸ್ನಾನಮಾಡಿ ದಡಕ್ಕೆ ಬರುವಷ್ಟರಲ್ಲಿಯೇ ಅರ್ಧ ನಗ್ನವಾಗಿದ್ದ ಆ ಮಹಾಪತಿವ್ರತೆಯ ಸುಂದರಾಕೃತಿಯನ್ನು ಅಲ್ಲಿಯೇ ಇದ್ದ ಕಾಪೋತನೆಂಬ ಮುನಿಶ್ರೇಷ್ಠನು ನೋಡಿದನು.

ಕಾಪೋತಂ ವಪುರಾಸ್ಥಾಯ ಪ್ರಾಣಿನಾಂ ವಧಶಂಕಯಾ ।
ವಿಚಚಾರ ಯತಃ ಪೂರ್ವಂ ಕಾಪೋತಸ್ತೇನ ಸಃಸ್ಮೃತಃ ॥ ೪ ॥

ತಾಂ ದೃಷ್ಟ್ವಾ ಹೇಮಗರ್ಭಾಭಾಂ ಜಂದ್ರಿಕಾಂ ಶಾರದೀಮಿವ ।
ಕಾಪೋತಃ ಕಾಮಯಾಮಾಸ ಕಾಮಬಾಣಾರ್ದಿತೋ ಭೃಶಂ ॥ ೫ ॥

ಕಾಮಾಗ್ನಿಪರಿತಪ್ತಃ ಸ ಕಕುತ್ಸ್ಥತನಯಾಂ ಮುನಿಃ ।
ಅಭಿಗಮ್ಯಾಽಥ ಕಲ್ಯಾಣೀಮಿದಂ ವಚನಮಬ್ರವೀತ್ ॥ ೬ ॥

ಕಾ ತ್ವಂ ಕಸ್ಯಾಸಿ ವನಿತಾ ಪುತ್ರೀ ವಾ ಕಸ್ಯ ಸುಂದರಿ ।
ಕಸ್ಮಾತ್ತ್ವಮಾಗತಾ ವಾ ತ್ವಮುಷಾಂಶು ತಟಿನೀಜಲಂ ॥ ೭ ॥

ರೂಪಂ ತೇ ಸೌಮ್ಯಮಾಹ್ಲಾದಿ ಪೂರ್ಣಚಂದ್ರನಿಭಂ ಮುಖಂ ।
ತಿಲಪುಷ್ಪಪ್ರತೀಕಾಶಂ ನಾಸಿಕಾಯುಗಳಂ ತವ ॥ ೮ ॥

---

೪. ಹಿಂದೆ ಆ ಮುನಿಯು ಪ್ರಾಣಿಗಳನ್ನು ವಧಿಸಲಿಚ್ಛೆಯಿಂದ ಕಪೋತ ಶರೀರವನ್ನು ಧರಿಸಿ ಸಂಚರಿಸುತ್ತಿದ್ದುದರಿಂದ ಅವನಿಗೆ ಕಾಪೋತನೆಂಬ ಪೆಸರು ಬಂದಿದ್ದಿತು.

೫. ಚಿನ್ನದ ಪುತ್ಥಳಿಯಂತೆಯೂ, ಶರತ್ಕಾಲದ ಜಂದ್ರಿಕೆಯಂತೆಯೂ ಇರುವ ಆ ತಾರಾವತಿಯನ್ನು ನೋಡಿ ಮನ್ಮಥವಿಕಾರಪರವಶನಾಗಿ, ಆ ಕಾಪೋತನು ಆ ರಾಜ ಪುತ್ರಿಯನ್ನು ಕಾಮಿಸಿದನು.

೬—೧೧. ಕಾಮಾಗ್ನಿಯಿಂದ ಪರಿತಪ್ತನಾಗಿ ಆ ಮುನಿಯು ಮಂಗಳರೂಪ ವಾದ ತಾರಾವತಿಯ ಬಳಿಗೆ ಬಂದು ಅವಳನ್ನು ಕುರಿತು ಎಲೌ ಸುಂದರಿ! ನೀನಾರು? ಯಾವ ಪುರುಷನ ವನಿತೆಯು? ಯಾರ ಮಗಳು? ಏಕಾಂತವಾಗಿ ಈ ನದಿಗೆ ನೀನೇಕೆ ಬಂದಿರುವೆ? ನಿನ್ನ ರೂಪವು ಸುಂದರವಾಗಿಯೂ, ನೋಡಲು ಆಹ್ಲಾದಕರ ವಾಗಿಯೂ ಇರುವುದು. ಮುಖವು ಪೂರ್ಣಚಂದ್ರನಂತೆ ಬಹು ಮನೋಹರವಾಗಿ ರುವುದು. ನಿನ್ನ ನಾಸಿಕೆಯು ತಿಲಪುಷ್ಪದಂತೆ ಶೋಭಿಸುತ್ತಿರುವುದು. ನಿನ್ನ ಕಣ್ಣು ಗಳು ಗಾಳಿಯಿಂದ ಚಂಚಲವಾದ ಕನ್ನೈದಿಲೆಯಂತೆ ಒಪ್ಪುತ್ತಿರುವುವು. ನಿನ್ನ ತೋಳುಗಳು ವರ್ತುಲವಾಗಿಯೂ, ತಾವರೆ ದಂಟಿನಂತೆ ಮೃದುವೂ, ನೀಳವೂ, ಮನೋಹರವೂ ಆಗಿರುವುವು. ತೊಡೆಗಳು ಆನೆಯ ಸೊಂಡಿಲಿನಂತೆ ಇರುವುವು.

ವಾತಕಂಪಿತನೀಲಾಬ್ಜಸದೃಶೇ ಲೋಚನೇ ತವ ।
ಬಾಹೂ ಮನೋಹರೌ ವೃತ್ತೌ ಮೃಣಾಲಮೃದುಲಾಯತೌ ॥ ೯ ॥

ಊರೂ ಗಜಕರಪ್ರಖ್ಯೌ ಮಧ್ಯಂ ವೇದಿವಿಲಗ್ನಕಂ ।
ಈದೃಶೇನ ತು ರೂಪೇಣ ನ ತ್ವಂ ಮಾನುಷಭಾಮಿನೀ ॥ ೧೦ ॥

ದೇವೀ ವಾ ದಾನವೀ ವಾ ತ್ವಮಪ್ಸರೋ ಗುಣಶಾಲಿನೀ ।
ಅಥವಾ ಭಾಗ್ಯಭೋಗಾಯ ಶ್ರೀಸ್ತ್ವಂ ನಾರೀತ್ವಮಾಗತಾ ॥ ೧೧ ॥

ಅಪರ್ಣಾ ವಾ ಶಚೀ ವಾ ತ್ವಂ ತನ್ಮೇ ವದ ಮನೋಹರೇ ।

॥ ಔರ್ವ ಉವಾಚ ॥

ಇತಿ ವಾಕ್ಯಂ ಮುನೇಃ ಶ್ರುತ್ವಾ ಜಲಾದುತ್ತೀರ್ಯ ಭಾಮಿನೀ ॥ ೧೨ ॥

ಪ್ರಣಮ್ಯ ತಂ ಮುನಿಂ ನಮ್ರಾ ವಚನಂ ಚೇದಮಬ್ರವೀತ್ ।
ಅಹಂ ತಾರಾವತೀ ನಾಮ್ನಾ ಕಕುತ್ಸ್ಥಸ್ಯ ಸುತಾ ಸತೀ ॥ ೧೩ ॥

ನಡುವು ವೇದಿಕೆಯಂತೆ ಕೃಶವಾಗಿರುವುದು. ಇಂತಹ ರೂಪವುಳ್ಳ ನೀನು ಮನುಷ್ಯ ಸ್ತ್ರೀಯಲ್ಲ. ದೇವಸ್ತ್ರೀಯೋ ಅಸುರಸ್ತ್ರೀಯೋ ಅಥವಾ ಅಪ್ಸರೆಯೋ ಆಗಿರಬೇಕು. ಅಥವಾ ಭಾಗ್ಯವನ್ನು ಭೋಗಿಸಲು ಸ್ತ್ರೀರೂಪವನ್ನು ಧರಿಸಿಬಂದ ಲಕ್ಷ್ಮಿಯೇ ನೀನಾಗಿರಬೇಕು. ಅಥವಾ ನೀನು ಪಾರ್ವತಿಯೋ ಶಚೀದೇವಿಯೋ ಆಗಿರಬೇಕು. ಎಲೌ ! ಮನೋಹರೆ! ನೀನಾರು ಎಂಬುದನ್ನು ನನಗೆ ಹೇಳು ಎಂದು ಕೇಳಿದನು.

೧೨. ಈರೀತಿಯಾದ ಮುನಿಯ ಮಾತನ್ನು ಕೇಳಿ ನೀರಿನಿಂದ ಮೇಲಕ್ಕೆ ಬಂದು ಆ ತಾರಾವತಿಯು ವಿನಯದಿಂದ ಮುನಿಯನ್ನು ನಮಸ್ಕರಿಸಿ ಹೀಗೆ ಹೇಳಿದಳು

೧೩-೧೪. ಓ ಮುನಿಯೇ ! ನಾನು ತಾರಾವತಿಯೆಂಬುವಳು, ಕಕುತ್ಸ್ಥ ರಾಜನ ಪುತ್ರಿಯು ಮತ್ತು ನನ್ನನ್ನು ಚಂದ್ರಶೇಖರರಾಜನ ಪತ್ನಿಯೆಂದು ತಿಳಿ. ನಾನು ದೇವಸ್ತ್ರೀಯೂ ಅಲ್ಲ, ಗಂಧರ್ವ, ಯಕ್ಷ, ರಾಕ್ಷಸ ಸ್ತ್ರೀಯೂ ಅಲ್ಲ. ನಾನು ಮನುಷ್ಯ

ಚಂದ್ರಶೇಖರಭೂಪಸ್ಯ ಭಾರ್ಯಾ ಜಾನೀಹಿ ಮಾಂ ಮುನೇ ।
ನಾಹಂ ದೇವೀ ನ ಗಂಧರ್ವೀ ನ ಯಕ್ಷೀ ನ ಚ ರಾಕ್ಷಸೀ ॥ ೧೪ ॥

ಮಾನುಷ್ಯಹಂ ನೃಪಸುತಾ ಚಾರಿತ್ರವ್ರತಧಾರಿಣೀ ।

॥ ಕಾಪೋತ ಉವಾಚ ॥

ತ್ವಾಂ ದೃಷ್ಟ್ವಾ ಮಾಂ ಸ್ವಯಂ ಕಾಮಃ ಸಂಗತಃ ಸಂಗಮಾಯತೇ ॥ ೧೫ ॥

ಪೀಡಿತಶ್ಚೇತಿ ತೇನಾಹಂ ತ್ವಯಾ ಶಕ್ತ್ಯಾ ಸಮುಕ್ಷಯಾ ।
ಸ್ಮರಸಾಗರಕಲ್ಲೋಲಪತಿತಂ ಮಾಂ ನಿರಾಕುಲಂ ॥ ೧೬ ॥

ತ್ವದೂರುತರಿಣಾ ತ್ರಾಹಿ ತೂರ್ಣಂ ತ್ವಂ ಮೃದುಭಾಷಿಣಿ ।
ಪುತ್ತಃ ಪುತ್ರದ್ವಯಂ ಚಾರುರೂಪಲಕ್ಷಣಸಂಯುತಂ ॥ ೧೭ ॥

ಭವಿಷ್ಯತಿ ಮಹಾಭಾಗೇ ಬಲವೀರ್ಯಯುತಂ ಮಹತ್ ।
ಕಾಪೋತಸ್ಯ ವಚಃ ಶ್ರುತ್ವಾ ಭಯದುಃಖಸಮಾಕುಲಾ ॥ ೧೮ ॥

ಸ್ತ್ರೀಯು, ರಾಜಪುತ್ರಿಯು, ಸದಾಚಾರಸಚ್ಚರಿತ್ರೆಗಳಿಂದ ಕೂಡಿದ ಮನುಷ್ಯ ಮಾತ್ರಳು.

೧೫—೧೭. ಕಾಪೋತಮುನಿಯು ಹೇಳಿದನು:—ನಿನ್ನನ್ನು ನೋಡಿದೊಡನೆ ತಾನಾಗಿಯೇ ಕಾಮವಿಕಾರವುಂಟಾಗಿರುವುದು. ಪ್ರತ್ಯಕ್ಷಶಕ್ತಿರೂಪಳಾದ ನಿನ್ನ ಸಲುವಾಗಿ ಆ ಕಾಮನು ನನ್ನನ್ನು ಪೀಡಿಸುತ್ತಲಿರುವನು. ಎಲೌ ಮೃದುಭಾಷಿಣಿ! ಮನ್ಮಥ ಸಾಗರದ ತರಂಗಗಳಲ್ಲಿ ಬಿದ್ದಿರುವ ನನ್ನನ್ನು, ನಿನ್ನ ಊರುಗಳೆಂಬ ನೌಕೆಯಿಂದ ಯಾವ ತೊಂದರೆಯೂ ಇಲ್ಲದಂತೆ ಕೂಡಲೇ ರಕ್ಷಿಸುವವಳಾಗು. ಎಲೌ ಭಾಗ್ಯಶಾಲಿನಿ! ನನ್ನಿಂದ ಸುಂದರರೂ, ರೂಪಲಕ್ಷಣಸಂಪನ್ನರೂ, ಪರಾಕ್ರಮಶಾಲಿಗಳೂ ಆದ ಪುತ್ರರೀರ್ವರು ನಿನಗೆ ಜನಿಸುವರು.

೧೮-೧೯. ಕಾಪೋತಮುನಿಯ ಈರೀತಿಯಾದ ಮಾತುಗಳನ್ನು ಕೇಳಿ ತಾರಾವತಿಯು ಭಯದುಃಖಗಳಿಂದ ವ್ಯಾಕುಲಚಿತ್ತಳಾಗಿ ಆ ಮುನಿಯನ್ನು ಕುರಿತು ಗದ್ಗದಸ್ವರದಿಂದ ಓ ಮುನಿಯೇ! ನೀನು ಹೇಳುವ ಬೇರೆ ಯಾವ ಮಾತನ್ನಾದರೂ

ಜಗಾದ ಗದ್ಗದಂ ವಾಕ್ಯಂ ವಾಗ್ಮಿನ್ಯಥ ಕಕುತ್ಸ್ಥಜಾ ।
ವಾಕ್ಯಮನ್ಯನ್ಮಯಾ ಕಾರ್ಯಂ ನ ಕಾರ್ಯಮತಿನಿಂದಿತಂ ॥ ೧೯ ॥

ತಸ್ಮಾನ್ಮಾ ವದ ಮಾಮಿತ್ಥಂ ಪ್ರಣಮ್ಯ ತ್ವಾಂ ಪ್ರಸಾದಯೇ ।
ತವಾಪಿ ನೈತ್ಯದ್ಯೋಗಂ ಸ್ಯಾನ್ಮನೇರಿಹ ತಪೋಧನ ॥ ೨೦ ॥

ತಪಃಕ್ಷಯಕರಂ ಗರ್ಹ್ಯಂ ಸತೀತ್ವಭ್ರಂಶಕಂ ಮಮ ।

॥ ಕಾಪೋತ ಉವಾಚ ॥

ತಪೋ ವ್ಯಯೋ ವಾ ಚಾನ್ಯಬ್ವಾ ದೂಷಣಂ ತನ್ಮಮಾಸ್ತ್ವಿಹ ॥ ೨೧ ॥

ತಥಾಪಿ ತ್ವಾಮಹಂ ತ್ಯಕ್ತುಂ ನೇಚ್ಛಾಮಿ ಸುರತೌ ಶುಭೇ ।
ಅವಶ್ಯಂ ಮಮ ಕಾಮೋಭ್ಯಸ್ಯಾಣಂ ಕರ್ತುಮಿಹಾರ್ಹಸಿ ॥ ೨೨ ॥

ಅನ್ಯಥಾ ಕಾಮದಗ್ಧೋಽಹಂ ತ್ವಯಾ ತ್ಯಕ್ತೋ ಮನೋಹರೇ ।
ಭವತೀಂ ಚ ಕರಿಷ್ಯಾಮಿ ಶಾಪದಗ್ಧಾಂ ಸಬಾಂಧವಾಂ ॥ ೨೩ ॥

ನಡೆಯಿಸಿಕೊಡುವೆನು. ಅತಿ ನೀಚವಾದ ಈ ಕಾರ್ಯವನ್ನು ನಡೆಸಲಾರೆನು. ಆದುದ ರಿಂದ ಈರೀತಿಯಾಗಿ ನನಗೆ ಹೇಳಬೇಡ, ನಿನ್ನನ್ನು ನಮಸ್ಕರಿಸಿ ಕೇಳಿಕೊಳ್ಳುವೆನು.

೨೦. ಓ ತಪಸ್ವಿಯೇ! ಮುನಿಯಾದ ನಿನಗೆ ಈ ಕಾರ್ಯವು ಯೋಗ್ಯವಾದು ದಲ್ಲ. ನಿಂದ್ಯವಾದ ಈ ಕಾರ್ಯವು ನನ್ನ ಪಾತಿವ್ರತ್ಯವನ್ನು ಹಾಳುಮಾಡುವುದಲ್ಲದೆ ನಿನ್ನ ತಪಸ್ಸಿನ ಕ್ಷಯಕ್ಕೂ ಕಾರಣವಾಗುವುದು ಎಂದು ವಿನಯದಿಂದ ಪ್ರಾರ್ಥಿಸಿದಳು.

೨೧-೨೩. ಕಾಪೋತಮುನಿಯು ಹೇಳಿದನು:—ಎಲೌ ಮಂಗಳಾಂಗಿ! ನನ್ನ ತಪಸ್ಸು ಕೆಟ್ಟುಹೋದರೂ ಹೋಗಲಿ. ಮತ್ತಾವ ದೋಷಬಂದರೂ ಬರಲಿ. ಏನೇ ಆಗಲಿ ನಿನ್ನೊಡನೆ ಸುರತವನ್ನು ಅನುಭವಿಸದೆ ಬಿಡಲಾರೆನು. ಎಲೌ ಮನೋಹರೆ! ಈ ಕಾಮದಿಂದ ನನ್ನನ್ನು ನೀನು ರಕ್ಷಿಸಲೇಬೇಕು. ಹಾಗಲ್ಲದೆ ನೀನು ನನ್ನನ್ನು ತ್ಯಜಿಸಿದರೆ, ಆಗ ಕಾಮದಗ್ಧನಾಗಿ ನಿನ್ನನ್ನು ಬಂಧುಗಳ ಸಹಿತವಾಗಿ ಸುಟ್ಟುಹೋಗು ವಂತೆ ಶಪಿಸುವೆನು.

ತತಸ್ತದ್ವಚನಂ ಶ್ರುತ್ವಾ ದೇವೀ ತಾರಾವತೀ ತದಾ।
ಋಷಿಶಾಪಭಯಾತ್ಸಾಧ್ವೀ ನ ಕಿಂಚಿಚ್ಚೋತ್ತರಂ ದದೌ ॥ ೨೪ ॥

ಸಂಭಾಷಯೇಽಹಂ ಸ್ವಸಖೀರಿಹ ತಿಷ್ಠ ಮಹಾಮುನೇ।
ಏವಮುಕ್ತ್ವಾ ತದಾ ದೇವೀ ವಾಸೀಸಾಂ ಮಧ್ಯಮಾಗತಾ ॥ ೨೫ ॥

ಚಿತ್ರಾಂಗದಾಂ ಸಮಾಹೂಯ ವಚನಂ ಚೇದಮಬ್ರವೀತ್।
ಚಿತ್ರಾಂಗದೇ ಮುನಿರಸೌ ಮಾಂ ವೈ ಕಾಮಯತೇ ಭೃಶಂ ॥ ೨೬ ॥

ಕಿಂ ಕರಿಷ್ಯೇ ಸತೀಭಾವಾನ್ನ ಭ್ರಷ್ಟಾ ಸ್ಯಾಮಹಂ ಕಥಂ।
ಪತಿಂ ಬಂಧೂಂಶ್ಚ ಕಾಪ್ಯೋತಃ ಸದ್ಯಃ ಶಾಪಾಗ್ನಿನಾ ದಹೇತ್ ॥ ೨೭ ॥

ನಾಹಂ ಮುನಿಂ ಕಾಮಯೇ ಚೇತ್ಸಂಶಯೇ ಪತಿತಾ ತ್ವಹಂ।
ತತಶ್ಚಿತ್ರಾಂಗದಾ ಪ್ರಾಪ ಮಾ ಭೈಸ್ತ್ವಂ ಸತ್ಯಭಾಷಿಣಿ ॥ ೨೮ ॥

೨೪–೨೫. ಸಾಧ್ವಿಯಾದ ಆ ತಾರಾವತೀದೇವಿಯು ಆ ಮುನಿಯ ಮಾತನ್ನು ಕೇಳಿ, ಋಷಿಶಾಪಕ್ಕೆ ಹೆದರಿ, ಆಗ ಏನೊಂದು ನಿರ್ದಿಷ್ಟವಾದ ಉತ್ತರವನ್ನೂ ಆ ಮುನಿಗೆ ಕೊಡಲಿಲ್ಲ. ಆದರೂ ಓ ಮಹಾಮುನಿಯೇ! ಸಖಿಯರೊಡನೆ ಮಾತನಾಡಿ ಬರುವೆನು. ನೀನು ಇಲ್ಲಿಯೇ ಇರು ಎಂದು ಆ ಮುನಿಗೆ ಹೇಳಿ ಸಖಿಯರಿರುವಲ್ಲಿಗೆ ಬಂದಳು

೨೬. ಅಲ್ಲಿ ತನ್ನ ಸಖಿಯೂ, ತಂಗಿಯೂ ಆದ ಚಿತ್ರಾಂಗದೆಯನ್ನು ಕರೆದು, ಎಲೌ ಚಿತ್ರಾಂಗದೆ! ಈ ಕಾಪ್ಯೋತಮುನಿಯು ನನ್ನನ್ನು ವಿಪರೀತವಾಗಿ ಕಾಮಿಸುತ್ತಲಿರುವನು.

೨೭. ಪಾತಿವ್ರತ್ಯಕ್ಕೆ ಭಂಗಬರದಂತೆ ಈಗ ನಾನೇನು ಮಾಡಲಿ? ನಾನು ಆ ಮುನಿಯೊಡನೆ ಸೇರದಿದ್ದರೆ ನನ್ನ ಪತಿಯನ್ನೂ, ಬಂಧುಗಳನ್ನೂ ಸಹ ಆ ಕಾಪ್ಯೋತನು ಶಾಪದಿಂದ ಸುಟ್ಟುಹಾಕುವನು. ಹೀಗೆ ನಾನು ಉಭಯಸಂಕಟದಲ್ಲಿ ಸಿಕ್ಕಿಬಿದ್ದಿರುವೆನು ಎಂದು ಕಂಬನಿಗರೆದಳು.

೨೮—೩೧. ಚಿತ್ರಾಂಗದೆಯು ಅವಳನ್ನು ಸಂತೈಸಿ, ಎಲೌ ಸತ್ಯವಾದಿನಿ! ಹೆದರಬೇಡ. ನೀನು ಈ ಸಂಕಟದಿಂದ ಬಿಡುಗಡೆಯನ್ನು ಹೊಂದುವಂತೆ ಒಂದು

ತತ್ರೋಪಾಯಮಹಂ ವಕ್ಷ್ಯೇ ಯತ್ಕೃತ್ವಾ ತ್ವಂ ಪ್ರಮೋಕ್ಷ್ಯಸೇ ।
ನ ಜಹಾತಿ ಮುನಿಶ್ಚೇತ್ತ್ವಾಂ ದಾಸೀಮೇಕಾಂ ಮನೋಹರಾಂ ॥ ೨೯ ॥

ಸುಭೂಷಣೈರ್ಭೂಷಯಿತ್ವಾ ಮುನಯೇ ತ್ವಂ ನಿಯೋಜಯ ।
ಕಾಮಾತುರೋ ಮುನಿರ್ಮೋಹಾತ್ಕೃಪಣೋ ಜ್ಞಾಸ್ಯತೇ ನ ಹಿ ॥ ೩೦ ॥

ದಾಸೀಂ ತ್ವದ್ಭೂಷಣಾಚ್ಛನ್ನಾಂ ಜ್ಯೋತ್ಸ್ನಾಚ್ಛನ್ನಾಂ ಮೃಗೀಮಿವ ।
ಏವಂ ಕುರು ಮಹಾಭಾಗೇ ಮಾ ತ್ವಂ ಚಿಂತಾಂ ಗಮಃ ಶುಭೇ ॥ ೩೧ ॥

ತ್ವಂ ಚೇತ್ಸತೀತಿ ನಿಯತಂ ನ ಜ್ಞಾಸ್ಯತಿ ತದಾ ಮುನಿಃ ।
ತತಸ್ತಾರಾವತೀ ಪ್ರಾಹ ತಾಂ ರೂಪಗುಣಶಾಲಿನೀಂ ॥ ೩೨ ॥

ಚಿತ್ರಾಂಗದಾಂ ಭೂಪಪುತ್ರೀಂ ತಪ್ಪತ್ನಿಸಯಸೂನೃತಾಂ ।
ತ್ವಮೇವ ಗಚ್ಛ ಭಗಿನಿ ಕಾಪೋತಾಖ್ಯಮುನಿಂದಿತೇ ॥ ೩೩ ॥

ಮದ್ಭೂಷಣೈರ್ಭೂಷಯಿತ್ವಾ ಸ್ವಶರೀರಂ ಮನಸ್ವಿನಿ ।
ಅನ್ಯಾಂ ಪ್ರಸ್ಥಾಪಿತಾಂ ವಿಪ್ರಃ ಸಂಬುಧ್ಯ ಕ್ರೋಧವಹ್ನಿನಾ ॥ ೩೪ ॥

ಉಪಾಯವನ್ನು ಹೇಳುವೆನು. ಮುನಿಯು ನಿನ್ನನ್ನು ಬಲಾತ್ಕರಿಸುವುದು ನಿಶ್ಚಯವಾದರೆ ಆಗ ಸುಂದರಿಯಾದ ಓರ್ವ ದಾಸಿಯನ್ನು ನಿನ್ನ ಆಭರಣಗಳಿಂದ ನಿನ್ನಂತೆಯೇ ಅಲಂಕರಿಸಿ ಆ ಮುನಿಯ ಬಳಿಗೆ ಕಳುಹಿಸು. ಕಾಮಾತುರನೂ, ದೀನನೂ ಆದ ಆ ಮುನಿಯು ನಿನ್ನ ಆಭರಣಗಳಿಂದ ಅಲಂಕೃತಳಾಗಿ ನಿನ್ನಂತೆ ಕಾಣುತ್ತಲಿರುವ ದಾಸಿಯನ್ನು, ಚಂದ್ರಿಕೆಯಿಂದಾವೃತವಾದ ಹೆಣ್ಣುಜಿಂಕೆಯಂತೆ ಮೋಹಪರವಶನಾದುದರಿಂದ ತಿಳಿಯಲಾರನು. ಎಲೌ ಭಾಗ್ಯವತಿಯೇ! ನಾನು ಹೇಳಿದಂತೆ ಮಾಡು. ಸುಮ್ಮನೆ ಚಿಂತೆಯನ್ನು ಮಾಡಬೇಡ. ಹೀಗೆ ಮಾಡಿದರೆ, ಆಗ ಮುನಿಯು ನಿನ್ನನ್ನು ಪತಿವ್ರತೆಯೆಂದು ತಿಳಿಯುವುದಿಲ್ಲ ಎಂದು ಹೇಳಿದಳು.

೩೨—೩೫. ಅನಂತರ ತಾರಾವತಿಯು, ರೂಪವತಿಯೂ, ಗುಣವತಿಯೂ, ವಿನೀತಳೂ, ಪ್ರಿಯವಾದ ಮಾತುಗಳನ್ನಾಡುತ್ತಿರುವಳೂ, ರಾಜಪುತ್ರಿಯೂ ಆದ ಚಿತ್ರಾಂಗದೆಯನ್ನು ಕುರಿತು, ನೀನು ಬಹು ಬುದ್ಧಿಶಾಲಿಯು. ನೀನೇ ನನ್ನ ಆಭರಣಗಳಿಂದ ನಿನ್ನ ಶರೀರವನ್ನಲಂಕರಿಸಿಕೊಂಡು ಆ ಮುನಿಯ ಬಳಿಗೆ ಹೋಗಬಹುದಲ್ಲಾ? ಎಲೌ ಸುಂದರಿ! ಬೇರೆ ದಾಸಿಯನ್ನು ಕಳುಹಿಸಿದರೆ ಆ ಮುನಿಯು ತಿಳಿದು ಕೋಪಗೊಂಡು ನನ್ನ ಕುಲವನ್ನೇ ಶಾಪದಿಂದ ದಹಿಸಿಯಾನು. ಆದಕಾರಣ ನೀನೆ ಹೋಗು.

ಧಕ್ಷ್ಯತ್ಯವಶ್ಯಂ ಸಕುಲಾಂ ಮಾಂ ತಸ್ಮಾದ್ಗಚ್ಛ ಸುಂದರಿ ।
ತ್ವಂ ಪುತ್ರಮಾ ಸರ್ವಗುಣೈಃ ಸರ್ವಭೂಷಣಭೂಷಿತಾ ॥ ೩೫ ॥

ಮುನಿಂ ಸಂಗಮಯಸ್ವಾದ್ಯ ರಕ್ಷ ಮಾಂ ಸಕುಲಾಂ ಶುಭೇ ।
ತತಸ್ತಸ್ಯಾ ವಚಃ ಶ್ರುತ್ವಾ ವಿನಯಂ ಚ ಸಕಾತರಂ ॥ ೩೬ ॥

ತೂಷ್ಣೀಂ ಭೂತ್ವಾ ಕ್ಷಣಂ ತಸ್ಥೌ ನಾತಿಹೃಷ್ಟಮನಾ ಇವ ।
ಜಗಾದ ಚ ಮಹಾಭಾಗಾಂ ಚಿತ್ರಾಂಗದಾಂ ಕಕುತ್ಸ್ಥಜಾಂ ॥ ೩೭ ॥

ಕರಿಷ್ಯೇ ವಚನಂ ತೇಽದ್ಯ ಸಮಯೇ ಮಾಂ ಸ್ಮರಿಷ್ಯಸಿ ।
ಮದರ್ಥೇ ಪಿತರಂ ಚೇಮಂ ಭೂಪಂ ಚ ಚಂದ್ರಶೇಖರಂ ॥ ೩೮ ॥

ಆಶ್ವಾಸ್ಯಿಷ್ಯಸಿ ತಥಾ ಸಮಸ್ತಂ ಚ ಸಖೀಗಣಂ ।
ಏವಮುಕ್ತ್ವಾ ಭೂಷಣಾನಿ ತಾರಾವತ್ಯಾಃ ಪಿಧಾಯ ಸಾ ॥ ೩೯ ॥

ಚಿತ್ರಾಂಗದಾ ಜಗಾಮಾಶು ಮುನೇಃ ಕಾಮೋತ್ಸವಾಯ ಚ ।
ತಾರಾವತೀ ತದಾ ದೀನಾ ವಸ್ತ್ರಾಲಂಕಾರವರ್ಜಿತಾ ॥ ೪೦ ॥

ಎಲ್ಲಾ ವಿಷಯಗಳಲ್ಲಿಯೂ ನೀನು ನನ್ನಂತೆಯೇ ಇರುವೆ. ಇಂತಹ ನೀನು ನನ್ನ ಆಭರಣಗಳನ್ನು ಧರಿಸಿ ಆ ಮುನಿಯೊಡನೆ ಸೇರಿ ನನ್ನನ್ನೂ, ನನ್ನ ಕುಲವನ್ನೂ ರಕ್ಷಿಸುವವಳಾಗು ಎಂದು ಹೇಳಿದಳು.

೩೬—೩೯. ಭಯದಿಂದಲೂ, ವಿನಯಭಾವದಿಂದಲೂ, ತಾರಾವತಿಯು ತನ್ನನ್ನು ಈರೀತಿ ಕೇಳಿಕೊಳ್ಳುತ್ತಿರುವುದನ್ನು ತಿಳಿದು, ಚಿತ್ರಾಂಗದೆಯು ಸ್ವಲ್ಪವೊತ್ತು ಏನೂ ತೋರದೆ ಸುಮ್ಮನಿದ್ದಳು. ಬಳಿಕ ಮನಸ್ಸಿನಲ್ಲಿ ನಿರ್ಧಾರವನ್ನು ಮಾಡಿ ಆ ತಾರಾವತಿಯನ್ನು ಕುರಿತು, ಎಲೌ ಸಹೋದರಿ! ನಿನ್ನ ಮಾತಿನಂತೆ ನಡೆಯುವೆನು. ಸಮಯದಲ್ಲಿ ನನ್ನನ್ನು ಸ್ಮರಿಸುತ್ತಲಿರು. ನನಗಾಗಿ ನನ್ನ ತಂದೆಯನ್ನೂ, ಚಂದ್ರಶೇಖರರಾಜನನ್ನೂ, ಮತ್ತು ಸಖಿಯರೆಲ್ಲರನ್ನೂ, ಸಮಾಧಾನಗೊಳಿಸು ಎಂದು ಹೇಳಿ ಆ ಚಿತ್ರಾಂಗದೆಯು ತಾರಾವತಿಯ ಆಭರಣಗಳನ್ನು ತೊಟ್ಟುಗೊಂಡು ಸುರತಕ್ರೀಡೆಗಾಗಿ ಮುನಿಯ ಬಳಿಗೆ ತೆರಳಿದಳು.

೪೦. ಆಗ ತಾರಾವತಿಯು ತುಂಬಾ ಮುಖಿತಳಾಗಿ, ವಸ್ತ್ರಾಲಂಕಾರಗಳನ್ನು ತ್ಯಜಿಸಿ ದಾಸಿಯರ ಮಧ್ಯದಲ್ಲಿ ಸೇರಿ, ಪ್ರಿಯಕರವಾದ ಆ ಚಿತ್ರಾಂಗದೆಯನ್ನು ಕುರಿತು ತುಂಬಾ ಚಿಂತಿಸುತ್ತಿದ್ದಳು.

ವಾಸೀಮಧ್ಯಗತಾ ಭೂತ್ವಾ ತಾಮೇವಾನುಯಯೌ ಪ್ರಿಯಾಂ ।
ತಾಮಾಯಾಂತೀಂ ತತೋ ದೃಷ್ಟ್ವಾ ಕಾಪೋತಃ ಕಾಮಮೋಹಿತಃ ॥ ೪೧ ॥

ಮುನೀನಾಂ ಪರಜಾಯಾಸು ಸಸ್ಮಾರ ಸಂಗಮಂ ತದಾ ।
ಪ್ರಮ್ಲೋಚಾ ಕಾಮಿತಾ ಪೂರ್ವಂ ವಿತಂಡಸ್ಯ ಸುತೇನ ವೈ ॥ ೪೨ ॥

ಯಥಾ ವಾ ಕಾಮಿತಾ ಪದ್ಮಾ ಭರದ್ವಾಜೇನ ಧೀಮತಾ ।
ತಥಾಹಂ ಕಾಮಯಿಷ್ಯಾಮಿ ಸಾಂಪ್ರತಂ ಚಿರವರ್ಣಿನೀಂ ॥ ೪೩ ॥

ಪಶ್ಚಾತ್ತಪೋಬಲಾತ್ತಪ್ತಪ್ಪಾಪಾಪಾದ್ವಿಮೋಕ್ಷಯೇ ।
ಇತಿ ಚಿಂತಯನ್ತಸ್ಯ ತದಾ ಚಿತ್ರಾಂಗಬಾ ಶುಭಾ ॥ ೪೪ ॥

ಸಮೇತ್ಯ ತಂ ಮುನಿಂ ಲಜ್ಜಾಯುಕ್ತಾ ಚೈವಾಪ ಕಿಂಚಿ ನ ।
ತಾಮುಸಾದ್ಯ ಮಹಾಭಾಗಃ ಕಾಪೋತೋ ಮುನಿಸತ್ತಮಃ ॥ ೪೫ ॥

---

೪೧. ಇತ್ತ ತನ್ನ ಬಳಿಗೆ ಬರುತ್ತಿರುವ ಆ ಚಿತ್ರಾಂಗದೆಯನ್ನು ನೋಡಿ, ಕಾಮಮೋಹಿತನಾದ ಕಾಪೋತಮುನಿಯು, ಹಿಂದೆ ಮುನಿಗಳು ಮಾಡಿದ ಪರಸ್ತ್ರೀ ಸಂಗವಿಚಾರಗಳನ್ನು ಒಂದೊಂದಾಗಿ ಸ್ಮರಿಸಿಕೊಂಡನು.

೪೨–೪೩. ಹಿಂದೆ ವಿತಂಡಮುನಿಯ ಪುತ್ರನು ಪ್ರಮ್ಲೋಚಾ ಎಂಬ ಪರಸ್ತ್ರೀಯನ್ನು ಕಾಮಿಸಿದನು. ಬುದ್ಧಿಶಾಲಿಯಾದ ಭರದ್ವಾಜಮುನಿಯೂ ಸಹ ಪದ್ಮಾ ಎಂಬ ಸ್ತ್ರೀಯನ್ನು ಕಾಮಿಸಿರುವನು. ಅದರಂತೆ ನಾನೂ ಸಹ ಈಗ ಈ ಉತ್ತಮ ಸ್ತ್ರೀಯನ್ನು ಕಾಮಿಸುವೆನು. ಆಮೇಲೆ ಪರಸ್ತ್ರೀಸಂಗದಿಂದ ಉಂಟಾದ ಪಾಪವನ್ನು ತಪೋಬಲದಿಂದ ಹೋಗಲಾಡಿಸಿಕೊಳ್ಳುವೆನು.

೪೪. ಹೀಗೆ ಚಿಂತಿಸುತ್ತಲಿರುವ ಆ ಮುನಿಯ ಬಳಿಗೆ ಮನೋಹರಳಾದ ಚಿತ್ರಾಂಗದೆಯು ಬಂದು ಲಜ್ಜಾಯುಕ್ತಳಾಗಿ ಏನನ್ನೂ ಹೇಳದೆ ಸುಮ್ಮನೆ ನಿಂತುಕೊಂಡಳು.

೪೫. ಆ ಚಿತ್ರಾಂಗದೆಯು ತನ್ನ ವಶವರ್ತಿಯಾದುದನ್ನು ಕಂಡು, ಮಹಾಭಾಗ್ಯನಾದ ಕಾಪೋತಮುನಿಯು ಶೃಂಗಾರಕ್ಕೆ ಯೋಗ್ಯವಾದ ವೇಷವನ್ನು ಧರಿಸಲು, ಮನ್ಮಥನನ್ನು ಮನಸ್ಸಿನಲ್ಲಿಯೇ ಸ್ಮರಿಸಿದನು.

ಶೃಂಗಾರವೇಷಭಾನಾಯ ಮದನಂ ಮನಸಾಽಸ್ಮರತ್ ।
ಸ್ಮೃತಮಾತ್ರೋಽಥ ಮದನಃ ಸ್ವಯಮೇತ್ಯ ಮಹಾಮುನಿಂ ॥ ೪೬ ॥

ಗಂಧಮಾಲ್ಯೈಃ ಸುವಾಸೋಭಿರಭ್ಯವಾಸಾತಿಹರ್ಷಿತಃ ।
ತೇನಾಧಿವಾಸಿತೋ ವಿಪ್ರಃ ಕಾಪ್ಯೋತಶ್ಚಾತುರೂಪಧೃಕ್ ॥ ೪೭ ॥

ಜಜ್ವಾಲ ತೇಜಸಾ ಚಾಪಿ ದ್ವಿತೀಯ ಇವ ಭಾಸ್ಕರಃ ।
ಮುನೋಽಪರಂ ತಥಾ ದೃಷ್ಟ್ವಾ ಕಾಪ್ಯೋತಂ ಮದನೋಪಮಂ ॥ ೪೮ ॥

ತಾರಾವತೀಮೃತೇ ಸರ್ವಾಃ ಸಕಾಮಾಶ್ಚಾಭವನ್ ಸ್ತ್ರಿಯಃ ।
ತಾರಾವತೀ ಮುನಿಂ ದೃಷ್ಟ್ವಾ ಸುಂದರಂ ಮದನೋಪಮಂ ॥ ೪೯ ॥

ವಿಸ್ಮಯಂ ಪರಮಂ ಪ್ರಾಪ್ತಾ ಮುನಿಂ ಕಾಮಮಮನ್ಯತ ।
ಅಥ ಚಿತ್ರಾಂಗದಾಂ ವಿಪ್ರಃ ಕಾಮುಕಃ ಕಾಮಸಂಗಮೇ ॥ ೫೦ ॥

ತಯಾ ನಿಯೋಜಯಾಮಾಸ ಸುಪ್ರೀತಶ್ಚಾಭವತ್ ಕ್ಷಣಾತ್ ।
ತತಸ್ತಸ್ಯಾಂ ಸಮುತ್ಪನ್ನಂ ಸದ್ಯೋಜಾತಂ ಸುತದ್ವಯಂ ॥ ೫೧ ॥

---

೪೬. ಸ್ಮರಿಸಿದೊಡನೆಯೇ ಮನ್ಮಥನು ಆ ಮುನಿಯ ಬಳಿಗೆ ಬಂದು, ಸಂತೋಷದಿಂದ ಗಂಧ, ಹಾರ, ಒಳ್ಳೆಯ ವಸ್ತ್ರ ಇವುಗಳಿಂದ ಆ ಮುನಿಯನ್ನು ತಾನೇ ಅಲಂಕರಿಸಿದನು.

೪೭-೪೮. ಮನ್ಮಥನಿಂದ ಅಲಂಕರಿಸಲ್ಪಟ್ಟ ಆ ಬ್ರಾಹ್ಮಣ ಮುನಿಯು ಸುಂದರವಾದ ರೂಪದಿಂದಲೂ, ತೇಜಸ್ಸಿನಿಂದಲೂ, ಎರಡನೆಯ ಸೂರ್ಯನಂತೆ ಪ್ರಕಾಶಿಸಿದನು. ಮನ್ಮಥನಂತೆ ಸುಂದರಾಕಾರನಾದ ಆ ಕಾಪ್ಯೋತಮುನಿಯನ್ನು ನೋಡಿ ತಾರಾವತಿಯ ಹೊರತು ಮಿಕ್ಕೆಲ್ಲಾ ಸ್ತ್ರೀಯರೂ ಕಾಮವಿಕಾರವುಳ್ಳವರಾದರು.

೪೯. ಮನ್ಮಥನಂತೆ ಸುಂದರನಾದ ಆ ಮುನಿಯನ್ನು ನೋಡಿ ತಾರಾವತಿಯು ತುಂಬಾ ಆಶ್ಚರ್ಯಗೊಂಡಳು. ಅವನನ್ನು ಸಾಕ್ಷಾತ್ ಮನ್ಮಥನೆಂತಲೇ ತಿಳಿದಳು.

೫೦. ಅನಂತರ ಕಾಮುಕನಾದ ಆ ಮುನಿಯು ಚಿತ್ರಾಂಗದೆಯೊಡನೆ ಕಾಮಕ್ರೀಡೆಯಲ್ಲಿ ಆಸಕ್ತನಾಗಿದ್ದು ಸ್ವಲ್ಪಕಾಲದಮೇಲೆ ತೃಪ್ತಿಯನ್ನೈದಿದನು.

೫೧—೫೩. ಆ ಕೂಡಲೇ ಚಿತ್ರಾಂಗದೆಯಲ್ಲಿ ದೇವಕುಮಾರರಂತೆ ಸುಂದರರಾಗಿಯೂ, ಸೂರ್ಯನಂತೆ ತೇಜಸ್ವಿಗಳೂ ಆದ ಪುತ್ರದ್ವಯರು ಜನಿಸಿದರು. ಆಗ ಆ

ದೇವಗರ್ಭೋಪಮಂ ದೀಪ್ತಂ ಜ್ವಲನಾರ್ಕಸಮಪ್ರಭಂ ।
ಜಾತೇ ಸುತದ್ವಯೇ ತಾಂ ತು ಮುನಿಃ ಸಂಮೃಜ್ಯ ಪಾಣಿನಾ ॥ ೫೨ ॥

ನಿನಾಯ ಪೂರ್ವವದ್ಭಾವಂ ವಚನಂ ಚೇದಮಬ್ರವೀತ್ ।
ಮತ್ಸಂಗಮೇ ಕಿಯತ್ಕಾಲಂ ಪ್ರಿಯೇ ತಿಷ್ಠ ಶುಭಾನನೇ ॥ ೫೩ ॥

ಮಮೇಚ್ಛಯಾ ಯಾಸ್ಯಸಿ ತ್ವಂ ಭಯಂ ತೇ ನಾಸ್ತಿ ರಾಜತಃ ।
ಏವಮಸ್ತ್ವಿತಿ ಸಾ ಪ್ರಾಹ ಋಷಿಂ ಶಾಪಭಯಾತ್ಸತೀ ॥ ೫೪ ॥

ತತೋ ವಿಸರ್ಜಯಾಮಾಸ ಮುನಿರನ್ಯಾಶ್ಚ ಯೋಷಿತಃ ।
ತತಸ್ತಾ ರಾವತೀ ದೇವೀ ದಾಸೀಭಿಃ ಪರಿವಾರಿತಾ ॥ ೫೫ ॥

ಭಗಿನೀಮನುಶೋಚಂತೀ ಜಗಾಮ ಭವನಂ ನಿಜಂ ।
ಗತ್ವಾ ತಂ ಸರ್ವವೃತ್ತಾಂತಂ ಕಾಪೋತಕೃತಮದ್ಭುತಂ ॥ ೫೬ ॥

ಮುನಿಯು ಚಿತ್ರಾಂಗದೆಯನ್ನು ಕೈಯಿಂದ ನೇವರಿಸಿ, ಮೊದಲಿನಂತೆ ವಿಶ್ವಾಸವನ್ನು ಮಾಡಿ, ಅವಳನ್ನು ಕುರಿತು, ಎಲೌ ಪ್ರಿಯೆ ! ಸುಂದರಾನನೆಯಾದ ನೀನು ಇನ್ನೆಷ್ಟು ಕಾಲ ನನ್ನೊಡನೆ ಇರಲು ಸಾಧ್ಯ ? ನನ್ನ ಅನುಮತಿಯಿಂದ ನೀನು ಈಗ ಹೊರಡ ಬಹುದು. ನಿನ್ನ ಪತಿಯಾದ ರಾಜನಿಂದ ನಿನಗೆ ಯಾವ ಭಯವೂ ಬರಲಾರದು ಎಂದು ಹೇಳಿದನು.

೫೪. ಶಾಪಭಯದಿಂದ ಹಾಗೆಯೇ ಆಗಲೆಂದು ಸಾಧ್ವಿಯಾದ ಆ ಚಿತ್ರಾಂಗದೆಯು ಮುನಿಗೆ ಹೇಳಿದಳು. ಮುನಿಯು ಅವಳನ್ನೂ ಮಿಕ್ಕ ಸ್ತ್ರೀಯರನ್ನೂ ಕಳುಹಿಸಿದನು.

೫೫-೫೬. ಆ ತಾರಾವತಿದೇವಿಯು ದಾಸಿಯರೊಡನೆ ಕೂಡಿಕೊಂಡು ತಂಗಿಯಾದ ಚಿತ್ರಾಂಗದೆಯ ವಿಷಯದಲ್ಲಿ ತುಂಬಾ ಶೋಕಿಸುತ್ತಾ ತನ್ನ ಅರಮನೆಗೆ ಹೋಗಿ ಅಲ್ಲಿ ಬ್ರಹ್ಮಾವರ್ತದೇಶದೊಡೆಯನಾದ ತನ್ನ ಪತಿ ಚಂದ್ರಶೇಖರನಿಗೆ ಕಾಪೋತ ಮುನಿಯ ಈ ಅದ್ಭುತವಾದ ವೃತ್ತಾಂತವನ್ನು ಅರುಹಿದಳು.

ಬ್ರಹ್ಮಾವರ್ತಾಧಿಪಾಯಾಶು ಶಶಂಸಾಥ ಕಕುತ್ಸ್ಥಜಾ ।
ಸ ಶ್ರುತ್ವಾ ನೃಪಶಾರ್ದೂಲಃ ಕ್ಷಣಮಾತ್ರಂ ವಿಚಿಂತ್ಯ ಚ ॥ ೫೭ ॥

ಚಿತ್ರಾಂಗದಾಯಾಃ ಸಾಹಾಯ್ಯಂ ಕಾಪ್ಯೋತಾನುಮತೇಕರೋತ್ ।
ಕಾಪ್ಯೋತೋಽಪಿ ತದಾ ತಸ್ಯಾಂ ಜಾತಯೋಸ್ಸುತಯೋಸ್ತಯೋಃ ॥ ೫೮ ॥

ಯಥೋಕ್ತೇನಾಥ ವಿಧಿನಾ ಸಂಸ್ಕಾರಮಕರೋತ್ತಯಾ ।

॥ ಸಗರ ಉವಾಚ ॥

ಚಿತ್ರಾಂಗದಾ ಕಥಂ ಪುತ್ರೀ ಕಕುತ್ಸ್ಥಸ್ಯಾಭವತ್ತದಾ ॥ ೫೯ ॥

ತದಹಂ ಶ್ರೋತುಮಿಚ್ಛಾಮಿ ಕಥಯಸ್ವ ದ್ವಿಜೋತ್ತಮ ।

॥ ಔರ್ವ ಉವಾಚ ॥

ಏಕದಾ ತು ಕಕುತ್ಸ್ಥೋಽಸೌ ಹಿಮವಂತಂ ಮಹಾಗಿರಿಂ ॥ ೬೦ ॥

---

೫೭. ತಾರಾವತಿಯು ಹೇಳಿದುದನ್ನು ಕೇಳಿ ರಾಜಶ್ರೇಷ್ಠನಾದ ಚಂದ್ರಶೇಖರ ಮಹಾರಾಜನು ಸ್ವಲ್ಪಹೊತ್ತು ಹಾಗೆಯೇ ಆಲೋಚಿಸಿ, ಕಾಪ್ಯೋತಮುನಿಯ ಅನುಮತಿಯಂತೆ ಆ ಚಿತ್ರಾಂಗದೆಗೆ ಸಹಾಯವನ್ನು ಮಾಡಿದನು.

೫೮. ಕಾಪ್ಯೋತಮುನಿಯೂ ಸಹ ಚಿತ್ರಾಂಗದೆಯಲ್ಲಿ ಹುಟ್ಟಿದ ಆ ಪುತ್ರರೀರ್ವರಿಗೆ ಶಾಸ್ತ್ರವಿಧಿಯಂತೆ ಕಾಲಕ್ಕೆ ಯೋಗ್ಯವಾದ ಸಂಸ್ಕಾರಗಳನ್ನು ಮಾಡಿದನು.

೫೯. ಸಗರರಾಜನು ಹೇಳಿದನು:—ಎಲೈ ಬ್ರಾಹ್ಮಣೋತ್ತಮನೇ! ಚಿತ್ರಾಂಗದೆಯು ಕಕುತ್ಸ್ಥರಾಜನ ಪುತ್ರಿಯಾಗಿ ಹೇಗೆ ಜನಿಸಿದಳು? ಈ ವಿಷಯವನ್ನು ನಾನು ತಿಳಿಯಲಿಚ್ಛಿಸುವೆನು, ಅದನ್ನು ಈಗ ಹೇಳು.

೬೦-೬೧. ಔರ್ವಮುನಿ ಇಂತೆಂದನು:—ಒಂದು ದಿನ ಆ ಕಕುತ್ಸ್ಥರಾಜನು, ಹಿಮಾಲಯಪರ್ವತಕ್ಕೆ ಬೇಟೆಯಾಡಲು ಹೋದನು. ಅಲ್ಲಿ ಅನೇಕ ಮೃಗಗಳನ್ನು ಅವನು ಸಂಹರಿಸಿ ಬಳಿಕ ವಿಶ್ರಾಂತಿಗಾಗಿ ಒಂದು ತಪ್ಪಲ್ಲಲ್ಲಿ ಕುಳಿತಿರುವಾಗ ಸ್ವರ್ಗ

ಮೃಗಯಾಯೈ ಜಗಮಾಶು ಮೃಗಾಶ್ಚಾಪಿ ನಿಪಾತಿತಾಃ ।
ಲಂಬಂತೀಂ ಸುರಲೋಕಾತ್ತು ಭೂಮಿಂ ಪ್ರತಿ ತದೋರ್ವಶೀಂ ॥ ೬೧ ॥

ವಿಶ್ರಾಮಾಯೋಪವಿಷ್ಟಸ್ತು ಸಾನೌ ವೇಶ್ಯಾಂ ದದರ್ಶ ಹ ।
ತಾಮಾಸಾದ್ಯ ಮಹಾರಾಜಃ ಕಾಮಬಾಣಪ್ರಪೀಡಿತಃ ॥ ೬೨ ॥

ಅವತೀರ್ಣಾಂ ಗಿರೌ ಶಶ್ವದಂಗಸಂಗಮಯಾಚತ ।
ಸಾ ಜ್ಞಾತ್ವಾ ನೃಪಶಾರ್ದೂಲಂ ಕಕುತ್ಸ್ಥಂ ಶಕ್ರಸನ್ನಿಭಂ ॥ ೬೩ ॥

ಊರ್ವಶೀ ರಮಯಾಮಾಸ ಗಿರಿಕುಂಜೇ ಯಥೇಪ್ಸಿತಂ ।
ತತೋ ರಾಜ್ಞಃ ಕಕುತ್ಸ್ಥಸ್ಯ ಸ್ವರ್ವೇಶ್ಯಾಯಾಂ ತದಾ ಸುತಾ ॥ ೬೪ ॥

ಅಭವನ್ನೃಪಶಾರ್ದೂಲಾತ್ಸದ್ಯೋ ಜಾತಾ ಮನೋಹರಾ ।
ಅಥ ಕಾಮೇನ ಸಂತುಷ್ಟಂ ಕಕುತ್ಸ್ಥಂ ಸಾ ತದೋರ್ವಶೀ ॥ ೬೫ ॥

ಲೋಕದಿಂದ ಭೂಮಿಗೆ ಇಳಿದುಬರುತ್ತಿರುವ ಊರ್ವಶಿಯೆಂಬ ಓರ್ವ ಅಪ್ಸರೆಯನ್ನು ನೋಡಿದನು.

೬೨. ಬೆಟ್ಟದ ತಪ್ಪಲಿನಲ್ಲಿ ಇಳಿದಿರುವ ಆ ಊರ್ವಶಿಯನ್ನು ನೋಡಿ ರಾಜನು ಕಾಮಪೀಡಿತನಾಗಿ, ಅವಳ ಬಳಿಗೆ ಹೋಗಿ ಅವಳ ಅಂಗಸಂಗದ ಸೌಖ್ಯವನ್ನು ಯಾಚಿಸಿದನು.

೬೩. ಆಗ ಊರ್ವಶಿಯು, ಅವನು ಇಂದ್ರಸಮಾನನೂ, ರಾಜೋತ್ತಮನೂ ಆದ ಕಕುತ್ಸ್ಥರಾಜನೆಂದು ತಿಳಿದು, ಅವನೊಡನೆ ಆ ಗಿರಿಯ ಲತಾಗೃಹದಲ್ಲಿ ಯಥೇಚ್ಛೆಯಾಗಿ ಕ್ರೀಡಿಸಿದಳು.

೬೪. ಬಳಿಕ ಆ ಕಕುತ್ಸ್ಥರಾಜನಿಗೆ ಅಪ್ಸರೆಯಾದ ಊರ್ವಶಿಯಲ್ಲಿ ಸುಂದರಿಯಾದ ಓರ್ವ ಪುತ್ರಿಯು ಆ ಕೂಡಲೇ ಜನಿಸಿದಳು.

೬೫. ರಾಜನು ಕಾಮಕ್ರೀಡೆಯಿಂದ ಸಂತುಷ್ಟನಾದಮೇಲೆ, ಉತ್ತಮ ಸ್ತ್ರೀಯಾದ ಆ ಊರ್ವಶಿಯು ತಾನು ಹೋಗಲು ಅವನ ಅನುಮತಿಯನ್ನು ಕೇಳಿದಳು.

ಯಥೇಷ್ಟದೇಶಂ ವಿಜ್ಞಾಪ್ಯ ಗಂತುಮೈಚ್ಛದನಿಂದಿತಾ ।
ತಾಮಾಹ ರಾಜಾ ತನಯಾಂ ಪರಿತ್ಯಜ್ಯ ಕಥಂ ಶುಭೇ ॥ ೬೬ ॥

ಗಂತುಮಿಚ್ಛಸಿ ಚಾರ್ವಂಗಿ ಸುತಾಮೇನಾಂ ತು ಪಾಲಯ ।
ಸಾ ಪ್ರಾಹಾಹಂ ಸ್ವರ್ಗಣಿಕಾ ಮಯಿ ಕಸ್ಯ ನ ಚಾಭವತ್ ॥ ೬೭ ॥

ತನಯಸ್ತನಯಾ ವಾಪಿ ಸದ್ಯೋ ಜಾತಾ ನೃಪಾತ್ಮಜಾ ।
ಸ್ವತೇಜಸಾ ಶರೀರಸ್ಯ ವಿಕಾರೋ ಮೇ ನ ವಿದ್ಯತೇ ॥ ೬೮ ॥

ಸುತಾಶ್ಚಾಪಿ ನ ಪಾಲ್ಯಂತೇ ವೇಶ್ಯಾಭಾವಾತ್ಸ್ವಭಾವತಃ ।
ದಯಾಸ್ತಿ ಯದಿ ತೇ ಪುತ್ರ್ಯಾಂ ನೀತ್ವೈನಾಂ ವರ್ಧಯ ಸ್ವಯಂ ॥ ೬೯ ॥

ಗಂತುಂ ಮಾಮನುಜಾನೀಹಿ ಸತ್ಯಮೇತದ್ಬ್ರವೀಮಿ ತೇ ।
ಇತ್ಯುಕ್ತ್ವಾ ಸಾ ಜಗಾಮಾಶು ಯಥೇಷ್ಟಂ ಸೋರ್ವಶೀ ನೃಪಃ ॥ ೭೦ ॥

ಪುತ್ರೀಂ ತಾಂ ಸಮುಪಾದಾಯ ನಗರಂ ಸ್ವಂ ವಿವೇಶ ಹ ।
ತಸ್ಯಾಃ ಚಿತ್ರಾಂಗದಾ ನಾಮ ಸ ಚಕಾರ ನೃಪಃ ಸ್ವಯಂ ॥ ೭೧ ॥

---

೬೬. ಆಗ ರಾಜನು ಊರ್ವಶಿಯನ್ನು ಕುರಿತು :—ಎಲೌ ಮಂಗಳಾಂಗಿ! ಈ ನಿನ್ನ ಪುತ್ರಿಯನ್ನು ತ್ಯಜಿಸಿ ಎಲ್ಲಿಗೆ ಹೋಗಬೇಕೆಂದಿರುವೆ? ಸುಂದರಾಂಗಿಯಾದ ನೀನು ಇಲ್ಲಿಯೇ ಇದ್ದು ಈ ಪುತ್ರಿಯನ್ನು ಸಲಹು ಎಂದು ಹೇಳಿದನು.

೬೭—೭೦. ಆಗ ಆ ಊರ್ವಶಿಯು, ರಾಜನೇ, ನಾನು ಸ್ವರ್ಗಲೋಕದ ವೇಶ್ಯೆಯು. ನನ್ನಲ್ಲಿ ಜನಿಸಿದ ರಾಜಪುತ್ರಿಯಾಗಲೀ, ರಾಜಪುತ್ರನಾಗಲೀ ಯಾರು ನನ್ನ ಬಳಿ ಇರುವುದಿಲ್ಲ. ನನ್ನ ತೇಜಸ್ಸಿನ ಬಲದಿಂದ ಶರೀರಕ್ಕೆ ಯಾವ ವಿಕಾರವೂ ಆಗುವುದಿಲ್ಲ. ವೇಶ್ಯೆಯ ಸ್ವಭಾವದಂತೆ ಮಕ್ಕಳನ್ನೂ ನಾನು ಸಲಹುವುದಿಲ್ಲ. ನಿನ್ನ ಮಗಳಲ್ಲಿ ನಿನಗೆ ದಯೆ ಇದ್ದರೆ, ಈ ಪುತ್ರಿಯನ್ನು ಕರೆದುಕೊಂಡುಹೋಗಿ ನೀನೇ ಸಲಹುವವನಾಗು. ಈಗ ನಾನು ಹೊರಡುವುದಕ್ಕೆ ಅನುಮತಿಯನ್ನು ಕೊಡು. ನಿನಗೆ ಹೇಳುತ್ತಿರುವ ಈ ಮಾತು ನಿಜವೆಂದು ತಿಳಿ ಎಂದು ಹೇಳಿ, ಆ ಊರ್ವಶಿಯು ತಡ ಕೂಡಲೇ ತನಗೆ ಬೇಕಾದೆಡೆಗೆ ಹೊರಟುಹೋದಳು. ಕಕುತ್ಸ್ಥರಾಜನೂ ಸಹ ಪುತ್ರಿಯನ್ನು ಕರೆದುಕೊಂಡು ತನ್ನ ನಗರವನ್ನು ಪ್ರವೇಶಿಸಿದನು.

೭೧—೭೩. ಆ ಪುತ್ರಿಗೆ ರಾಜನು ಚಿತ್ರಾಂಗದೆಯೆಂದು ಹೆಸರಿಟ್ಟನು. ತನ್ನ ರಾಣಿಯಾದ ಮನೋನ್ಮಥಿನೀದೇವಿಗೆ ಮನೋಹರಳಾದ ಆ ಪುತ್ರಿಯನ್ನು ಕೊಟ್ಟು

ಮನೋನ್ಮಥಿನ್ಯೈ ಚಾದಾತ್ತಾಂ ಭಾರ್ಯಾಯೈ ಪುತ್ರಿಕಾಂ ಶುಭಾಂ ।
ಇದಂ ಚ ವಚನಂ ಪ್ರೋಚೇ ತದಾ ದೇವೀಂ ನೃಪೋತ್ತಮಃ ॥ ೭೨ ॥

ದೇವಿ ಪುತ್ರೀ ಮಮೇಯಂ ತ್ವಮೇನಾಂ ಪಾಲಯ ಸದ್ಗುಣಾಂ ।
ಮಯಾ ನೀತಾಂ ಶೈಲಜಾತಾಂ ಮಾ ಹೇಲಾಂ ಕರ್ತುಮರ್ಹಸಿ ॥ ೭೩ ॥

ಇತ್ಯುಕ್ತ್ವಾ ರಾಜಪುತ್ರೀ ಸಾ ಪಾಲನೇ ಚಾಕರೋನ್ಮತಿಂ ।
ಭರ್ತುರಾಜ್ಞಾಂ ಪುರಸ್ಕೃತ್ಯ ನಾನ್ಯತ್ಕಿಂಚಿದುವಾಚ ಹ ॥ ೭೪ ॥

ಸಾ ಚೈಕದಾ ಬಾಲ್ಯಭಾವಾದಷ್ಟಾವಕ್ರಂ ಮಹಾಮುನಿಂ ।
ವ್ರಜಂತಂ ಬಿಭ್ಮಮೇವಾಶು ಜಹಾಸೋಪಜಹಾಸ ಚ ॥ ೭೫ ॥

ಸ ಚುಕೋಪ ಮುನಿಸ್ತಸ್ಯೈ ಶಾಪಂ ಪರಮದಾರುಣಂ ।
ದದೌ ದಾಸೀ ಸ್ವವಂಶಸ್ಯ ಭವಿತೇತಿ ಕಕುತ್ಸ್ಥಜೇ ॥ ೭೬ ॥

ದಾಸೀ ಭೂತ್ವಾ ಸ್ವವಂಶಸ್ಯ ದ್ಯನೂಢೈವ ಸುತದ್ವಯಂ ।
ಜನಯಿಷ್ಯಸಿ ಪಾಪಿಷ್ಠೇ ತತೋ ಭದ್ರಮವಾಪ್ಸ್ಯಸಿ ॥ ೭೭ ॥

ಎಲೌ ದೇವಿ! ಇವಳು ನನ್ನ ಪುತ್ರಿಯು. ಒಳ್ಳೇ ಗುಣವತಿಯಾದ ಇವಳನ್ನು ಸಲಹು. ಪರ್ವತದಲ್ಲಿ ಜನಿಸಿದ ಇವಳನ್ನು ನಾನು ಕರೆದುಕೊಂಡು ಬಂದಿರುವೆನು. ಇವಳಲ್ಲಿ ಅನಾದರವನ್ನು ಮಾಡಬೇಡ ಎಂದು ಹೇಳಿದನು.

೭೪. ಹೀಗೆ ರಾಜನು ಹೇಳಲು, ರಾಜಪುತ್ರಿಯಾದ ಆ ಮನೋನ್ಮಥಿನಿಯು ಪತಿಯನ್ನು ಆಜ್ಞೆಯನ್ನು ಗೌರವಿಸಿ, ಮತ್ತೇನನ್ನೂ ಹೇಳದೆ ಮಗುವನ್ನು ಪ್ರೀತಿಯಿಂದ ಸಲಹುತ್ತಿದ್ದಳು.

೭೫. ಹೀಗಿರಲೊಂದುದಿನ ಆ ಚಿತ್ರಾಂಗದೆಯು ವಕ್ರನಾಗಿ ಹೋಗುತ್ತಲಿರುವ ಅಷ್ಟಾವಕ್ರನೆಂಬ ಮಹಾಮುನಿಯನ್ನು ಹುಡುಗತನದಿಂದ ನೋಡಿ ತುಂಬಾ ಹಾಸ್ಯ ಮಾಡಿದಳು.

೭೬-೭೭. ಆಗ ಮುನಿಯು ಕೋಪಗೊಂಡು, ಎಲೈ ಕಕುತ್ಸ್ಥಪುತ್ರಿ! ನೀನು ತುಂಬಾ ಪಾಪಿಷ್ಠಳು, ನಿನ್ನ ಈ ದುರ್ವರ್ತನೆಯಿಂದ ನಿನ್ನ ಕುಲಕ್ಕೇನೆ ದಾಸಿಯಾಗುವೆಯಲ್ಲದೆ ಹೀಗೆ ದಾಸಿಯಾಗಿ ಮದುವೆಯಿಲ್ಲದೇನೆ ಎರಡು ಮಕ್ಕಳನ್ನು ಹಡೆಯುವೆ. ಅನಂತರ ನಿನಗೆ ಒಳ್ಳೆಯದಾಗುವುದು ಎಂದು ಕ್ರೂರವಾಗಿ ಶಪಿಸಿದನು.

ಏವಂ ಕಕುತ್ಸ್ಥತನಯಾ ಜಾತಾ ಚಿತ್ರಾಂಗದಾ ನೃಪ ।
ದಾಸೀ ಚ ಭೂತಾ ಸಾ ತೇನ ತಾರಾವತ್ಯಾ ನಿವಾಸಿತಾ ॥ ೭೮ ॥

ಅನೂಢಾಪ್ಯಲಭತ್ಪುತ್ರಯುಗ್ಮಂ ಮುನಿವರಾಚ್ಛುಭಾ ।
ತೌ ಚ ಪುತ್ರೌ ಮಹಾಭಾಗೌ ಮಹಾಕಾರ್ಯಂ ಕರಿಷ್ಯತಃ ॥ ೭೯ ॥

ಇತಿ ತೇ ಕಥಿತಂ ರಾಜನ್ ಯಥಾ ಚಿತ್ರಾಂಗದಾಭವತ್ ।
ಕಕುತ್ಸ್ಥಸ್ಯ ಸುತಾ ಸಾಧ್ವೀ ಪ್ರಸ್ತುತಂ ಶೃಣು ಸಾಂಪ್ರತಂ ॥ ೮೦ ॥

॥ ಇತಿ ಶ್ರೀ ಕಾಲಿಕಾಪುರಾಣೇ ಏಕಪಂಚಾಶತ್ತಮೋಽಧ್ಯಾಯಃ ॥

---

೭೮. ಎಲೈ ಸಗರರಾಜನೇ ! ಹೀಗೆ ಚಿತ್ರಾಂಗದೆಯು ಕಕುತ್ಸ್ಥರಾಜನ ಪುತ್ರಿಯಾಗಿ ಜನಿಸಿದಳು. ತನ್ನ ವಂಶಕ್ಕೆ ದಾಸಿಯಾಗಿ ತಾರಾವತಿಯೊಡನೆ ಅವಳ ಪತಿಯ ಅರಮನೆಗೆ ಬಂದಳು.

೭೯. ಮದುವೆಯಾಗದೇ ಇದ್ದರೂ ಮನೋಹರಳಾದ ಆ ಚಿತ್ರಾಂಗದೆಯು ಕಾಪೋತಮುನಿಯಿಂದ ಪುತ್ರರೀರ್ವರನ್ನು ಪಡೆದಳು. ಮಹಾಭಾಗರಾದ ಆ ಪುತ್ರರು ಮುಂದೆ ಮಹಾಕಾರ್ಯವನ್ನು ಮಾಡುವವರಾಗುವರು.

೮೦. ಎಲೈ ಸಗರರಾಜನೇ ! ಹೀಗೆ ಸಾಧ್ವಿಯಾದ ಚಿತ್ರಾಂಗದೆಯು ಕಕುತ್ಸ್ಥರಾಜನ ಪುತ್ರಿಯಾಗಿ ಹೇಗೆ ಜನಿಸಿದಳೆಂಬುದನ್ನು ನಿನಗೆ ಹೇಳಿರುವೆನು. ಇನ್ನು ಪ್ರಕೃತ ಕಥಾಸಂದರ್ಭವನ್ನು ಹೇಳುವೆನು ಕೇಳು.

ಇಲ್ಲಿಗೆ ಐವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥ

ಶ್ರೀ ಕಾಲಿಕಾಪುರಾಣೇ ದ್ವಿಪಂಚಾಶತ್ತಮೋಽಧ್ಯಾಯಃ

॥ ಔರ್ವ ಉವಾಚ ॥

ಅಥ ಕಾಲೇ ವ್ಯತೀತೇ ತು ಪುನಸ್ತಾರಾವತೀ ಶುಭಾ ।
ಆರ್ತವಂ ವಿಹಿತಂ ಸ್ನಾನಂ ನದೀಂ ಸ್ಮಾಸ್ತಾ ದೃಷದ್ವತೀಂ ॥ ೧ ॥

ದಾಸೀಸಹಸ್ರೈಃ ಸಂಯುಕ್ತಾ ನಾನಾಲಂಕಾರಮಂಡಿತಾ ।
ರಂಭಾದಿಭಿರ್ಯಥೇಂದ್ರಾಣೀ ತಥಾ ಸಾ ಪ್ರತ್ಯದೃಶ್ಯತ ॥ ೨ ॥

ಸಾಽವತೀರ್ಣಾ ಜಲೇ ದೇವೀ ಗೌರಾಂಗೀ ತಟೆದುಜ್ಜ್ವಲಾ ।
ನದೀಮುಜ್ಜ್ವಲಯಾಮಾಸ ಭಿನ್ನಾಂಜನಸಮಾಂಭಸಂ ॥ ೩ ॥

॥ ಐವತ್ತೆರಡನೆಯ ಅಧ್ಯಾಯವು ॥

೧. ಔರ್ವಮುನಿಯು ಹೇಳಿದನು:—ಕೆಲವುಕಾಲ ಕಳೆಯಲು, ಮನೋಹರಳಾದ ತಾರಾವತಿಯು ಇನ್ನೊಮ್ಮೆ ಋತುಸ್ನಾನವನ್ನು ಮಾಡಲು ದೃಷದ್ವತೀ ನದಿಗೆ ತೆರಳಿದಳು.

೨. ಸಾವಿರಾರು ದಾಸಿಯರಿಂದ ಕೂಡಿ ಅನೇಕ ಅಲಂಕಾರಗಳಿಂದ ಶೋಭಿಸುತ್ತಿದ್ದ ತಾರಾವತಿಯು ಆಗ, ರಂಭೆಯೇ ಮೊದಲಾದ ಅಪ್ಸರೆಯರಿಂದ ಕೂಡಿದ ಶಚಿಯಂತೆ ರಾರಾಜಿಸುತ್ತಿದ್ದಳು.

೩. ಚಿನ್ನದಂತೆ ಗೌರವರ್ಣದ ಶರೀರಕಾಂತಿಯಿಂದ ವಿದ್ಯುತ್ತಿನಂತೆ ಪ್ರಕಾಶಿಸುತ್ತಿದ್ದ ತಾರಾವತಿಯು, ಕಾಡಿಗೆಯಂತೆ ಕಪ್ಪಾದ ಆ ನದಿಯ ಜಲದಲ್ಲಿಳಿದು ತನ್ನ ದೇಹಪ್ರಭೆಯಿಂದ ಅದನ್ನು ಪ್ರಕಾಶಗೊಳಿಸಿದಳು.

ಸ್ಥಲೀಂ ಕಾಚಮಯೀಂ ಸ್ವಚ್ಛಾಂ ಕಾಂಚನೀ ಪ್ರತಿಮಾ ಯಥಾ ।
ಸ್ವಭಾಸಾ ಜ್ವಲಯಾಮಾಸ ಪ್ರತಿಬಿಂಬೇನ ಸಾ ತಯಾ ॥ ೪ ॥

ಅಥ ತಾಂ ಪುನರೇವಾಽಥ ಕಾಪೋತೋ ಮುನಿಸತ್ತಮಃ ।
ಆನಾಭಿಮಗ್ನಾಂ ತೋಯೇಽಸ್ಮೈ ದರ್ದದರ್ಶ ಸುಮನೋಹರಾಂ ॥ ೫ ॥

ದೃಷ್ಟ್ವಾ ತಾಮಥ ಪಪ್ರಚ್ಛ ತದಾ ಚಿತ್ರಾಂಗದಾಂ ಮುನಿಃ ।
ಕೇಯಂ ಜಲೇ ದೃಷದ್ವತ್ಯಾ ಅವತೀರ್ಣಾ ಸಖೀಶತೈಃ ॥ ೬ ॥

ಶ್ರಿಯಾ ಜ್ವಲಂತೀ ಶ್ರೀತುಲ್ಯಾ ಕಿಮುಪರ್ಣಾ ಗಿರೇಃ ಸುತಾ ।
ಅತೀವ ಭ್ರಾಜತೇ ರೂಪೈರ್ನ ಸಂಸ್ತೌಷಿ ಚ ತಾಂ ಕಿಮು ॥ ೭ ॥

ಅಥ ತಸ್ಯ ವಚಃ ಶ್ರುತ್ವಾ ಮುನೇಶ್ಚಿತ್ರಾಂಗದಾ ತದಾ ।
ಋಷಿಶಾಪಭಯಾತ್ಸಾಧ್ವೀ ಸಂಸ್ತೌಮೀತಿ ತದಾಽಬ್ರವೀತ್ ॥ ೮ ॥

---

೪. ನಿರ್ಮಲವೂ, ಅಭ್ರಕ (ಕಾಗೆಬಂಗಾರ) ಮಯವೂ ಆದ ಸ್ಥಳವನ್ನು, ಸುವರ್ಣಪ್ರತಿಮೆಯು ತನ್ನ ಕಾಂತಿಯಂದ ಪ್ರತಿಬಿಂಬಿಸಿ ಪ್ರಕಾಶಗೊಳಿಸುವಂತೆ, ಆ ತಾರಾವತಿಯೂ ಸಹ ತನ್ನ ದೇಹಕಾಂತಿಯಿಂದ ಆ ನದಿಯ ಜಲವನ್ನು ಉಜ್ವಲ ಗೊಳಿಸಿದಳು.

೫—೭. ಆಮೇಲೆ ಅಲ್ಲಿದ್ದ ಕಾಪೋತಮುನೀಂದ್ರನು ನಾಭಿಯವರೆಗೆ ನದೀ ಜಲವಲ್ಲಿ ಇಳಿದು ಸ್ನಾನಮಾಡುತ್ತಿರುವ ಮನೋಹರಳಾದ ತಾರಾವತಿಯನ್ನು ನೋಡಿ ಚಿತ್ರಾಂಗದೆಯನ್ನು ಕುರಿತು, ದೃಷದ್ವತೀ ನದೀಜಲದಲ್ಲಿಳಿದಿರುವ, ನೂರಾರು ಸಖಿಯರಿಂದ ಪರಿವೃತಳಾದ ಈ ಸ್ತ್ರೀಯು ಯಾವಳು ? ಶರೀರಕಾಂತಿಯಿಂದ ಲಕ್ಷ್ಮಿಯಂತೆ ಪ್ರಕಾಶಿಸುತ್ತಿರುವ ಇವಳು ಗಿರಿಪುತ್ರಿಯಾದ ಅಪರ್ಣಾದೇವಿಯೇ ? ಸೌಂದರ್ಯದಿಂದ ತುಂಬಾ ರಾರಾಜಿಸುತ್ತಿರುವ ಈ ಸ್ತ್ರೀಯಳ ವೃತ್ತಾಂತವನ್ನು ನನಗೆ ನೀನು ಹೇಳುವುದಿಲ್ಲವೇ ? ಎಂದು ಕೇಳಿದನು.

೮. ಅನಂತರ ಆ ಮುನಿಯ ಮಾತನ್ನು ಕೇಳಿ ಚಿತ್ರಾಂಗದೆಯು ಆಗ ಶಾಪ ಭಯದಿಂದ ಹೆದರಿ, ಸಾಧ್ವಿಯಾದ ತಾರಾವತಿಯ ಸದಾಚಾರವನ್ನು ಹೇಳುವೆನೆಂದು ಹೀಗೆ ಜೋಳಿದಳು.

ಇಯಂ ತಾರಾವತೀ ನಾಮ ಕಕುತ್ಸ್ಥಸ್ಯ ಸುತಾ ಸತೀ ।
ಚಂದ್ರಶೇಖರಭೂಪಾಲಭಾರ್ಯಾತಿಪ್ರಿಯಯಿತಾ ಶುಭಾ ॥ ೯ ॥

ವಿಷಾ ತ್ವಯಾ ಕಾಮಿತಾ ತು ಕಾಮಾರ್ಥಂ ಪೂರ್ವತೋ ಮುನೆ ।
ಸ್ವಾಲಂಕಾರೈರಲಂಕೃತ್ಯ ಮಾಂ ದತ್ವಾ ತೇ ಗೃಹಂ ಗತಾ ॥ ೧೦ ॥

ಸೇಯಂ ಪುನರ್ನದೀಂ ಸ್ನಾತುಂ ಭಗಿನೀ ಮೇ ಸಮಾಗತಾ ।
ಜ್ಯೇಷ್ಠಾಂ ತಾಂ ತು ಮುನೇ ವಕ್ತುಂ ನ ತೇ ಕಿಂಚಿಚ್ಚ ಯುಜ್ಯತೇ ॥ ೧೧ ॥

ತ್ವಮತ್ರ ತಿಷ್ಠ ವಿಪೇಂದ್ರ ಜ್ಯೇಷ್ಠಾಂ ತಾಂ ಭಗಿನೀಂ ಪ್ರಿಯಾಂ ।
ಸಮಾಭಾಷ್ಯ ಸಮೇಷ್ಯೇ ತ್ವಾಮನುಜಾನಾಸಿ ಚೇದ್ಗತೌ ॥ ೧೨ ॥

ಇತಿ ಶ್ರುತ್ವಾ ವಚಸ್ತಸ್ಯಾ ಮುನಿಃ ಸ್ನೇಹೇನ ವಂಚನಾಂ ।
ತಾರಾವತ್ಯಾ ಕೃತಾಂ ಪೂರ್ವಂ ಮುನಿಸ್ತಸ್ಯೈ ಜುಗೋಪ ಹ ॥ ೧೩ ॥

ಇಯಂ ಪಾಪೀಯಸೀ ರಾಮಾ ವಂಚನಾಮುಕರೋನ್ಮಯಿ ।
ತಸ್ಯಾಃ ಸಂಕಾಲನಂ ಚಾಹಂ ಕರಿಷ್ಯಾಮ್ಯದ್ಯ ನಿಶ್ಚಿತಂ ॥ ೧೪ ॥

೯—೧೨. ಈ ಸ್ತ್ರೀಯು ಕಕುತ್ಸ್ಥರಾಜನ ಮಗಳಾದ ತಾರಾವತಿಯೆಂಬು ವಳು. ಈ ಶೋಭನಾಂಗಿಯು ಚಂದ್ರಶೇಖರರಾಜನ ಪ್ರಿಯಮಡದಿಯು. ಈ ತಾರಾ ವತಿಯನ್ನು ನೀನು ಹಿಂದೆಯೇ ಕಾಮಿಸಿದ್ದೆ. ಆಗ ಇವಳು ತನ್ನ ಆಭರಣಗಳಿಂದ ನನ್ನನ್ನು ಅಲಂಕರಿಸಿ ನಿನ್ನ ಬಳಿಗೆ ಕಳುಹಿ ತಾನು ಮನೆಗೆ ಹೋದಳು. ಈ ತಾರಾ ವತಿಯು ನನಗೆ ಅಕ್ಕನಾಗಬೇಕು. ಇಂದು ತಿರುಗಿ ನದೀಸ್ನಾನಕ್ಕಾಗಿ ಬಂದಿರುವಳು. ಓ ಮುನಿಯೇ ! ಇವಳ ವಿಷಯದಲ್ಲಿ ನೀನು ಏನನ್ನೂ ಹೇಳಬಾರದು. ಓ ದ್ವಿಜೇಂ ದ್ರನೆ! ನೀನಿಲ್ಲಿಯೇ ಇರು. ನೀನು ಅನುಮತಿಯಿತ್ತರೆ, ಪ್ರೀತಿಪಾತ್ರಳಾದ ನನ್ನ ಅಕ್ಕನ ಬಳಿಗೆ ಹೋಗಿ ಅವಳನ್ನು ಮಾತನಾಡಿಸಿಕೊಂಡುಬರುವೆನು ಎಂದು ಹೇಳಿದಳು.

೧೩. ಹೀಗೆ ತಾರಾವತಿಯು ಮಾಡಿದ ವಂಚನೆಯನ್ನು ಚಿತ್ರಾಂಗದೆಯು ಮುನಿಗೆ ಪ್ರೀತಿಯಮಾತುಗಳಿಂದ ತಿಳಿಸಲು, ಆ ಮುನಿಯು ತಾರಾವತಿಯ ಮೇಲೆ ತುಂಬಾ ಕೋಪಗೊಂಡು ಹೀಗೆ ಹೇಳಿದನು.

೧೪—೨೦. ಪಾಪಿಷ್ಠಳಾದ ಈ ಸ್ತ್ರೀಯು ನನ್ನಲ್ಲಿ ವಂಚನೆಯನ್ನಾಚರಿ ರುವಳು. ಅವಳು ಮಾಡಿದ ಈ ವಂಚನೆಗೆ ಸರಿಯಾದ ಶಿಕ್ಷೆಯನ್ನು ಖಂಡಿತವಾಗಿ

ಇತ್ಯುಕ್ತ್ವಾ ಸ ತಯಾ ಸಾರ್ಧಂ ಮುನಿಶ್ಚಿತ್ರಾಂಗದಾಖ್ಯಯಾ ।
ಜಗಾಮ ಯತ್ರ ಸಾ ದೇವೀ ಸ್ಥಿತಾ ತಾರಾವತೀ ಶುಭಾ ॥ ೧೫ ॥

ಗತ್ವಾ ತಾಂ ತು ಸಮಾಸಾದ್ಯ ಕಾಪೋತೋ ಮುನಿಸತ್ತಮಃ ।
ಇದಂ ತಾರಾವತೀಂ ಪ್ರಾಹ ಕುಪಿತಃ ಪ್ರಹಸನ್ನಿವ ॥ ೧೬ ॥

ಕಾಮಾರ್ಥಂ ಪ್ರಾರ್ಥಿತಾ ಪೂರ್ವಂ ತ್ವಂ ಮಯಾ ಭದ್ಮನಾ ತ್ವಯಾ ।
ವಂಚಿತೋಽಸ್ಮಿ ಮುರಾಧರ್ಷೇ ಫಲಂ ತಸ್ಯ ಸಮಾಪ್ನುಹಿ ॥ ೧೭ ॥

ಮಮಾಪಿ ಪುರತಃ ಪಾಪೇ ತ್ವಂ ಸತೀತಿ ವಿಕತ್ಥಸೇ ।
ಸತೀತ್ವಭ್ರಂಶಕಂ ಮಾಂ ತ್ವಂ ನೈವಂ ಕಾಮಿತವತ್ಯಸಿ ॥ ೧೮ ॥

ತಸ್ಮಾದ್ವೀಭತ್ಸವೇಷಸ್ತ್ವಾಂ ಕಪಾಲೀ ಪಲಿತೋ ಜರಃ ।
ವಿರೂಪೋ ಧನಹೀನಶ್ಚ ಕಾಮಯಿಷ್ಯತಿ ವೈ ಜಡಾತ್ ॥ ೧೯ ॥

ಸದ್ಯೋಜಾತಂ ಪುತ್ರಯುಗಂ ಸಶ್ರೀಕಂ ವಾನರಾನನಂ ।
ಭವಿಷ್ಯತಿ ಚ ತೇ ಪಾಪೇ ತ್ವೇಕಾಬ್ದಾಭ್ಯಂತರೇಽಧುನಾ ॥ ೨೦ ॥

ಈಗ ವಿಧಿಸುವೆನು ಎಂದು ಹೇಳಿ, ಆ ಮುನಿಯು ಚಿತ್ರಾಂಗದೆಯೊಡನೆ ಶುಭ್ರಾಂಗಿಯಾದ ತಾರಾವತಿಯ ಬಳಿಗೆ ಹೋಗಿ, ಕೋಪಗೊಂಡಿದ್ದರೂ ಹಾಸ್ಯಮಾಡುವವನಂತೆ ಆ ತಾರಾವತಿಯನ್ನು ಕುರಿತು ನಾನು ಹಿಂದೆ ಕಾಮಕ್ರೀಡೆಗಾಗಿ ನಿನ್ನ ಪ್ರಾರ್ಥಿಸಿದರೆ ಆಗ ನೀನು ಕಪಟದಿಂದ ನನ್ನನ್ನು ವಂಚಿಸಿದೆ. ಎಲೌ ಮುಷ್ಟಳೇ ! ಆ ನಿನ್ನ ವಂಚನೆಗೆ ಈಗ ಫಲವನ್ನನುಭವಿಸು. ಎಲೌ ಪಾಪಿಷ್ಠಳೇ ! ಸನ್ನಿದುರಿನಲ್ಲಿಯೂ ನೀನು ಪತಿವ್ರತೆಯೆಂದು ಅಹಂಕಾರಪಟ್ಟು ಆಡಂಬರವನ್ನು ತೋರಿಸಿದೆ. ಪಾತಿವ್ರತ್ಯ ನಾಶವಾಗುವುದೆಂದು ಆಗ ನನ್ನನ್ನು ನೀನು ಕಾಮಿಸಲಿಲ್ಲ. ಆದುದರಿಂದ ವಿಕಾರವಾದ ವೇಷವುಳ್ಳವನೂ, ಅಶುಚಿಯಾದ ನರಶಿರಸ್ಸನ್ನು ಧರಿಸಿರುವವನೂ, ಜಟಾಭಸ್ಮಲೇಪದಿಂದ ಅಸಹ್ಯವಾದ ವಿಕಾರರೂಪವುಳ್ಳವನೂ, ದರಿದ್ರನೂ ಆದ ಹರನು ನಿನ್ನನ್ನು ಬಲಾತ್ಕಾರವಾಗಿ ಕಾಮಿಸುವನು. ಎಲೌ ಪಾಪಿಯೇ ! ಇನ್ನೊಂದುವರ್ಷವಾಗುವುದರೊಳಗೆ ನಿನಗೆ ಕಪಿಮುಖವುಳ್ಳವರಾದ ಪುತ್ರರೀರ್ವರು ಜನಿಸುವರು ಎಂದು ಕೋಪದಿಂದ ನುಡಿದನು.

ಏತಚ್ಛ್ರುತ್ವಾ ಮುನೇರ್ವಾಕ್ಯಂ ಪ್ರಾಪ ತಾರಾವತೀ ಮುನಿಂ ।
ಕೋಪಾದ್ಭಯಾಚ್ಚ ಸಾ ದೇವೀ ಸ್ಫುರದೋಷ್ಠಪುಟಾ ತದಾ ॥ ೨೧ ॥

ಯದಿ ಸಾ ಪೂಜಯಿತ್ವಾ ತು ಚಂಡಿಕಾಂ ಪ್ರಾಪ ಮಾಂ ಪ್ರಸೂಃ ।
ಯದ್ಯಹಂ ವ್ರತಿನೀ ನಿತ್ಯಂ ಭೂಪತೌ ಚಂದ್ರಶೇಖರೇ ॥ ೨೨ ॥

ಕಕುತ್ಸ್ಥಸ್ಯ ಸುತಾ ಸತ್ಯಂ ಯದ್ಯಹಂ ದ್ವಿಜಸತ್ತಮ ।
ತೇನ ಸತ್ಯೇನ ಮೇ ದೇವಾನ್ನಾನ್ಯೋ ಮಾಂ ಕಾಮಯಿಷ್ಯತಿ ॥ ೨೩ ॥

ಯದಿ ಸತ್ಯಂ ಮಹಾದೇವೋ ನಿತ್ಯಮಾರಾಧ್ಯತೇ ಮಯಾ ।
ತೇನ ಸತ್ಯೇನ ಮೇ ದೇವಾಚ್ಚಾರಾಧ್ಯಾಚ್ಚಂದ್ರಶೇಖರಾತ್ ॥ ೨೪ ॥

ಸಪ್ನೇಽಪಿ ಮುನಿಶಾರ್ದೂಲ ನಾನ್ಯೋ ಮಾಂ ಕಾಮಯಿಷ್ಯತಿ ।
ಇತ್ಯುಕ್ತ್ವಾ ಸಾ ಮುನಿಂ ನತ್ವಾ ಸ್ವಾಮಿನ್ಯಸ್ತಮಾನಸಾ ॥ ೨೫ ॥

ಯಯೌ ತಾರಾವತೀ ದೇವೀ ಸ್ವಸ್ಥಾನಮಿತಿ ಭಾಮಿನೀ ।
ತಸ್ಯಾಂ ಗತಾಯಾಂ ದೇವ್ಯಾಂ ತು ಚಿಂತಯಾಮಾಸ ತಾಂ ಮುನಿಃ ॥ ೨೬ ॥

೨೧—೨೫. ಕಾಪೋತಮುನಿಯು ಆಡಿದ ಆ ನಿಷ್ಠುರವಾಕ್ಯವನ್ನು ಕೇಳಿ ತಾರಾವತೀದೇವಿಯು ಕೋಪದಿಂದಲೂ, ಭಯದಿಂದಲೂ, ತುಟಿಗಳು ಅದುರುತ್ತಿರಲು ಆ ಮುನಿಯನ್ನು ಕುರಿತು ಎಲ್ಲೆ ಮುನೀಂದ್ರನೇ! ನನ್ನ ಮಾತೆಯು ಚಂಡಿಯನ್ನು ಪೂಜಿಸಿ ನನ್ನ ಪಡೆದುದು ನಿಜವಾದರೆ ಮತ್ತು ನನ್ನ ಪತಿಯಾದ ಚಂದ್ರಶೇಖರರಾಜನಲ್ಲಿ ಸದಾ ನಾನು ನಿಜವಾಗಿ ಪಾತಿವ್ರತ್ಯವುಳ್ಳವಳಾದರೆ ಮತ್ತು ನಾನು ನಿಜವಾಗಿ ಕಕುತ್ಸ್ಥನ ಪುತ್ರಿಯೂ ಆಗಿದ್ದರೆ, ಈ ಎಲ್ಲ ಸತ್ಯದಿಂದ ನನ್ನ ಪತಿದೇವನು ಹೊರತು ಇನ್ನಾವನೂ ನನ್ನನ್ನು ಕಾಮಿಸಲಾರನು. ಓ ಮುನಿಶ್ರೇಷ್ಠನೇ! ನಾನು ನಿತ್ಯವೂ ಶಂಕರನನ್ನು ಸತ್ಯವಾಗಿ ಆರಾಧಿಸುತ್ತಿರುವುದಾದರೆ, ಆ ಸತ್ಯದಿಂದ ನಾನು ಆರಾಧಿಸುವ ಚಂದ್ರಶೇಖರನು ಹೊರತು ಇನ್ನಾವನೂ ಸ್ವಪ್ನದಲ್ಲಿಯೂ ಸಹ ನನ್ನನ್ನು ಕಾಮಿಸಲಾರನು ಎಂದು ಹೇಳಿ ಆ ತಾರಾವತೀದೇವಿಯು ಮುನಿಗೆ ನಮಸ್ಕರಿಸಿ, ತನ್ನ ಪತಿಯಲ್ಲೇ ತಲ್ಲೀನವಾದ ಮನಸ್ಸುಳ್ಳವಳಾಗಿ ತನ್ನ ಅಂತಃಪುರಕ್ಕೆ ತೆರಳಿದಳು.

೨೬—೨೮. ತಾರಾವತಿಯು ಹೊರಟುಹೋದೊಡನೆಯೇ ಅವಳ ವಿಷಯದಲ್ಲಿ ಮುನಿಯು ಹೀಗೆ ಚಿಂತಿಸಿದನು:—ಈ ತಾರಾವತಿಯು ನನ್ನೆದುರಿನಲ್ಲಿಯೇ

ಮಮೈವ ಪುರತಶ್ಚೈಷಾ ನಿರ್ಭಿತಾತಿ ಪ್ರಗಲ್ಭತೇ ।
ಅತ್ರಾಂತರ್ವಿನಿಗೂಢಂ ತು ಬೀಜಂ ಶುದ್ಧಂ ಭವಿಷ್ಯತಿ ॥ ೨೭ ॥

ಏವಂ ವಿಚಿಂತ್ಯ ಸ ಮುನಿರ್ಧ್ಯಾನಸಂಯುಕ್ತಮಾನಸಃ ।
ದಿವ್ಯಜ್ಞಾನಪರೋ ಭೂತ್ವಾ ಸರ್ವವೃತ್ತಾಂತಮಾಪದೇ ॥ ೨೮ ॥

ಯಥಾ ಭೃಂಗಿಮಹಾಕಾಲೌ ದೇವ್ಯಾ ಶಪ್ತೌ ಸುತಾವ್ರಭೌ ।
ಪ್ರತಿಶಾಪಂ ಯಥಾ ತೌ ತು ದದತುಃ ಪಾರ್ವತೀಂ ಪರಂ ॥ ೨೯ ॥

ಯಥಾವತೀರ್ಣೌ ಮಾನುಷ್ಯಯೋನೌ ತೌ ತು ಯಥರ್ಷತಃ ।
ಚಿತ್ರಾಂಗದಾ ಯಥಾ ಜಾತಾ ಯವರ್ಷಂ ದೇವಕನ್ಯಕಾ ॥ ೩೦ ॥

ದಿವ್ಯಜ್ಞಾನೇನ ತಜ್ಜ್ಞಾತ್ವಾ ಮುನಿಃ ಕಿಂಚನ ನಾಕರೋತ್ ।
ಚಿತ್ರಾಂಗದಾಮಾದರೇಣ ಸಮಾದಾಯ ಮುನಿಸ್ತತಃ ॥ ೩೧ ॥

ಯಾವ ಹೆದರಿಕೆಯೂ ಇಲ್ಲದೆ ಧೈರ್ಯದಿಂದ ಮಾತನಾಡುವಳು. ಇದರಲ್ಲಿ ಗೂಢವಾದ ಯಾವುದೋ ಒಂದು ಕಾರಣವಿರಲೇಬೇಕು ಎಂದು ಆಲೋಚಿಸಿ, ಆ ಮುನಿಯು ಧ್ಯಾನಮಗ್ನನಾಗಿ ದಿವ್ಯದೃಷ್ಟಿಯಿಂದ ಸಕಲ ವೃತ್ತಾಂತವನ್ನೂ ತಿಳಿದವನಾದನು.

೨೯-೩೦. ಶಂಕರಪುತ್ರರಾದ ಭೃಂಗಿ ಮತ್ತು ಮಹಾಕಾಲರು ದೇವಿಯಿಂದ ಶಾಪಹೊಂದಿದನ್ನೂ, ತಿರುಗಿ ಆ ಭೃಂಗಿಮಹಾಕಾಲರು ಶಂಕರಪಾರ್ವತಿಯರನ್ನು ಪ್ರತಿಯಾಗಿ ಶಪಿಸಿದುದನ್ನೂ, ಶಂಕರಪಾರ್ವತಿಯರು ಮನುಷ್ಯರಾಗಿ ಏತಕ್ಕೆ ಅವತರಿಸಿದರೆಂಬುದನ್ನೂ, ಚಿತ್ರಾಂಗದೆಯು ದೇವಸ್ತ್ರೀಯಾದ ಊರ್ವಶಿಯಲ್ಲಿ ಕಕುತ್ಸ್ಥನಿಂದ ಜನಿಸಿದುದನ್ನೂ ಅವಳು ಜನಿಸುವುದಕ್ಕೆ ಕಾರಣವನ್ನೂ ಸಹ ಆ ಮುನಿಯು ದಿವ್ಯ ಧ್ಯಾನದಿಂದ ತಿಳಿದನು.

೩೧. ಇದೆಲ್ಲವನ್ನೂ ಜ್ಞಾನದೃಷ್ಟಿಯಿಂದ ತಿಳಿದು, ಆ ಕಾಪ್ಯೋತಮುನಿಯು ತಾರಾವತಿಯ ವಿಷಯದಲ್ಲಿ ಮತ್ತೇನನ್ನೂ ಮಾಡಲಿಲ್ಲ. ಅನಂತರ ಚಿತ್ರಾಂಗದೆಯನ್ನು ಆದರದಿಂದ ಕರೆದುಕೊಂಡು ತನ್ನ ಆಶ್ರಮಕ್ಕೆ ತೆರಳಿ ಅಲ್ಲಿ ಅವಳನ್ನು ತುಂಬಾ ಪ್ರೀತಿಯಿಂದ ಗೌರವಿಸಿದನು.

ಸ್ವಸ್ಥಾನಂ ಗತವಾನ್ ವಿಪ್ರಃ ಪೂಜಯಾಮಾಸ ತಾಂ ಮುನಿಃ
ತಾರಾವತೀ ಚ ತತ್ಸರ್ವಂ ಜಗದ್ರಶೇಖರಭೂಪತೇಃ ॥ ೩೨ ॥

ವೃತ್ತಾಂತಂ ಮುನಿಶಾಪಸ್ಯ ಕಥಯಾಮಾಸ ಭಾಮಿನೀ ।
ತತ್ಸರ್ವಂ ಪೌಷ್ಯಜೋ ರಾಜಾ ಸ್ವಗತಂ ಚಿಂತಯಾ ಯುತಃ ॥ ೩೩ ॥

ಆಶ್ವಾಸ್ಯ ದಯಿತಾಂ ಭಾರ್ಯಾಂ ಮಾ ಭೈರ್ದೇವೀತಿ ಸೋಽಚಿರಾತ್ ।
ಸತತಂ ಸೇವಯಾ ಪತ್ಯುರ್ಧರ್ಮಾರ್ಥಪರಿಸೇವನೈಃ ॥ ೩೪ ॥

ವರ್ಜನಾದಪ್ರಶಸ್ತಾನಾಂ ಮುನಿಶಾಪೋಽಪನೀಯತೇ ।
ತಸ್ಮಾತ್ತ್ವಂ ದೇವಿ ಸುಭಗೇ ಚಾರಿತ್ರ್ಯವ್ರತಧಾರಿಣೀ ॥ ೩೫ ॥

ಕಲ್ಯಾಣಭಾಗಿನೀ ನಿತ್ಯಂ ನಾಪದಂ ಸಮವಾಪ್ಸ್ಯಸಿ ।
ಏವಮುಕ್ತ್ವಾ ಸ ರಾಜಾ ತು ಕರವೀರಪುರಾಧಿಪಃ ॥ ೩೬ ॥

---

೩೨. ಇತ್ತ ತಾರಾವತಿಯೂ ಸಹ ತನಗೆ ಮುನಿಯು ಶಾಪವನ್ನು ಕೊಟ್ಟ ವೃತ್ತಾಂತವನ್ನೆಲ್ಲಾ ಪತಿಯಾದ ಚಂದ್ರಶೇಖರರಾಜನಿಗೆ ತಿಳಿಸಿದಳು.

೩೩—೩೫. ಪೌಷ್ಯರಾಜಕುಮಾರನಾದ ಆ ಚಂದ್ರಶೇಖರನು ನಡೆದ ಸಮಾಚಾರವನ್ನೆಲ್ಲಾ ಕೇಳಿ ತನ್ನ ಮನಸ್ಸಿನಲ್ಲಿಯೇ ಚಿಂತಿಸುತ್ತಾ, ತನ್ನ ಪ್ರಿಯಭಾರ್ಯೆಯಾದ ತಾರಾವತಿಯನ್ನು ಸಮಾಧಾನಗೊಳಿಸಿ, ಎಲೌ ದೇವಿ! ನೀನು ಭಯಪಡಬೇಡ. ಪತಿಯನ್ನು ಸದಾ ಸೇವಿಸುವುದರಿಂದಲೂ, ಧರ್ಮಾಚರಣೆಯಿಂದಲೂ, ದುಷ್ಟರ ಸಹವಾಸವನ್ನು ಬಿಡುವುದರಿಂದಲೂ ಸಹ ಮುನಿಶಾಪವು ಹೋಗುವುದು. ಎಲೌ ಪೂಜ್ಯಳೇ! ನೀನು ಧರ್ಮಾಚರಣೆ, ಪಾತಿವ್ರತ್ಯ ಇವುಗಳಿಂದ ಸದಾ ಕೂಡಿರುವೆ. ಅದರಿಂದ ಮಂಗಳಭಾಗಿಯಾದ ನಿನಗೆ ಆಪತ್ತಿಂದಿಗೂ ಉಂಟಾಗದು ಎಂದು ಹೇಳಿ ಸಂತೈಸಿದನು.

೩೬. ಹೀಗೆ ಹೇಳಿ ಕರವೀರಪುರಕ್ಕೆ ರಾಜನಾದ ಆ ಚಂದ್ರಶೇಖರರಾಜನು ಮುಂದೆ ಮೇಘಮಂಡಲವನ್ನು ಸ್ಪರ್ಶಿಸುವಷ್ಟು ಎತ್ತರವಾದೊಂದು ಅರಮನೆಯನ್ನು ಕಟ್ಟಿಸಿದನು.

ಪ್ರಾಸಾದಂ ಕಾರಯಾಮಾಸ ಉಚ್ಚೈರಭ್ರಾಂಶಕೈಂ ಬಹು ।
ಉಚ್ಚೈಶ್ಚತುಃಶತಂ ವ್ಯಾಮಂ ತ್ರಿಂಶದ್ಯೋಜನವಿಸ್ತೃತಂ ॥ ೩೭ ॥

ರತ್ನಸ್ಫಟಿಕಭೂಮ್ಯಂತಃಖಚಿತಂ ರತ್ನಕರ್ಬುರೈಃ ।
ವೈಡೂರ್ಯಪಟಲೈಃ ಶುಭ್ರೈಶ್ಚಾದಿತಂ ಸುಮನೋಹರೈಃ ॥ ೩೮ ॥

ಸ್ವರ್ಣರತ್ನತುಲಾಸ್ತಂಭಂ ವಿಶ್ವಕರ್ಮವಿನಿರ್ಮಿತಂ ।
ರಕ್ಷಾರ್ಥಂ ಕಾರಯಾಮಾಸ ತಾರಾವತ್ಯಾಃ ಪ್ರಿಯಂಕರಂ ॥ ೩೯ ॥

ರತ್ನಸೋಪಾನಸಂಯುಕ್ತಂ ವೈಡೂರ್ಯವಲಭೀಯುತಂ ।
ಸೌವರ್ಣನೀಪಸಂಬಂಧಂ ಸುಧರ್ಮಸದೃಶಂ ಗುಣೈಃ ॥ ೪೦ ॥

ತಸ್ಯಾಂ ಸಮಸ್ತಭೋಗ್ಯಾನಿ ಸ್ವಾದೂನಿ ಚ ಮೃದೂನಿ ಚ ।
ಆಪ್ತೈರಾಸಾದಯಾಮಾಸ ಪುರುಷೈಶ್ಚಂದ್ರಶೇಖರಃ ॥ ೪೧ ॥

ತತಸ್ತಾರಾವತೀಂ ದೇವೀಮಾದಾಯ ಚಂದ್ರಶೇಖರಃ ।
ನಿತ್ಯಂ ಪ್ರಾಸಾದಪೃಷ್ಠಂ ತಮಾರುಹ್ಯ ರಮತೇ ನೃಪಃ ॥ ೪೨ ॥

೩೭-೪೧. ಆ ಪ್ರಾಸಾದವು ನಾಲ್ಕುನೂರು ಯೋಜನ ಎತ್ತರವಾದುದು. ಮೂವತ್ತುಯೋಜನ ಅಗಲವಾದುದು. ರತ್ನ ಸುವರ್ಣಗಳಿಂದಲೂ, ಸ್ಫಟಿಕಶಿಲೆಯಿಂದಲೂ ಮನೋಹರವಾಗಿ ನಿರ್ಮಿತವಾಗಿದ್ದಿತು. ಆ ಅರಮನೆಯು ಸ್ವಚ್ಛವಾದ ವೈಢೂರ್ಯದ ಪಲಗೆಗಳಿಂದಲೂ, ಚಿನ್ನದ ತೊಲೆಗಳಿಂದಲೂ, ರತ್ನದ ಸ್ತಂಭಗಳಿಂದಲೂ ಅತಿ ಮನೋಹರವಾಗಿ ದೇವಶಿಲ್ಪಿಯಾದ ವಿಶ್ವಕರ್ಮನಿಂದಲೇ ರಚಿತವಾಗಿದ್ದಿತು. ರತ್ನಮಯವಾದ ಮೆಟ್ಟಲುಗಳು, ವೈಢೂರ್ಯ ಮೇಲುಕಟ್ಟುಗಳು, ಸ್ವರ್ಣ ನೀಪಗಳು ಇವುಗಳಿಂದ ಕಂಗೊಳಿಸುತ್ತಿರುವ ಆ ಅರಮನೆಯು ಇಂದ್ರನ ಸುಧರ್ಮಾ ಎಂಬ ಅರಮನೆಯನ್ನು ಸೌಂದರ್ಯದಲ್ಲಿ ಸರಿಗಟ್ಟುತ್ತಿತ್ತು. ತಾರಾವತಿಯ ರಕ್ಷಣೆಗಾಗಿ ನಿರ್ಮಿಸಿದ ಇಂತಹ ಭವ್ಯಪ್ರಾಸಾದದಲ್ಲಿ ಆ ಚಂದ್ರಶೇಖರರಾಜನು ಅನೇಕ ಭೋಗವಸ್ತುಗಳನ್ನೂ, ರುಚಿಕರಗಳಾದ ಭಕ್ಷ್ಯಭೋಜ್ಯಾದಿಗಳನ್ನೂ, ಮೃದುವಾದ ಆಸನಾದಿಗಳನ್ನೂ ತನ್ನ ಆಪ್ತಸೇವಕರಿಂದ ತರಿಸಿ ಇರಿಸಿದನು.

೪೨. ಅನಂತರ ಆ ಚಂದ್ರಶೇಖರರಾಜನು ತನ್ನ ಪತ್ನಿ ತಾರಾವತೀದೇವಿಯನ್ನು ಕರೆದುಕೊಂಡು ಆ ಅರಮನೆಯ ಉಪ್ಪರಿಗೆಯನ್ನೇರಿ ನಿತ್ಯವೂ ಅಲ್ಲಿ ಅವಳೊಡನೆ ವಿಹರಿಸುತ್ತಿದ್ದನು.

ಏವಂ ಸಂವತ್ಸರಂ ಯಾವದನ್ಯೈರಪ್ರಾಪ್ಯವೇಶ್ಮನಿ ।
ಆಪ್ತೈರಧಿಷ್ಠಿತಾದ್ವಾರಿ ತಾಂ ದೇವೀಂ ಸಮರಕ್ಷತ ॥ ೪೩ ॥

ಏಕದಾ ತು ವಿಮಾನೇನ ಕರವೀರಾಧಿಪೇನ ತು ।
ಉಚ್ಚೈಃ ಪ್ರಾಸಾದಮಾರುಹ್ಯ ಸ್ಥಿತಾ ತಾರಾವತೀ ಸದಾ ॥ ೪೪ ॥

ಚಿಂತಯಂತೀ ನೃಪಂ ತಂ ತು ಪತಿತಂ ಚಂದ್ರಶೇಖರಂ ।
ತತ್ಪದೇ ನ್ಯಸ್ತಮನಸಾ ಸಾವಿತ್ರೀವ ಪತಿವ್ರತಾ ॥ ೪೫ ॥

ಆರಾಧ್ಯ ಚ ಮಹಾದೇವಂ ಪಾರ್ವತೀಸಹಿತಂ ತದಾ ।
ಇಷ್ಟಾಂ ದೇವೀಂ ಚ ಸಾ ದೇವೀ ಚಿಂತಯಂತೀ ಸ್ಮ ಸಂಸ್ಥಿತಾ ॥ ೪೬ ॥

ತತ್ರ ಸಾ ಚಿಂತಯಂತೀ ತು ತ್ರ್ಯಂಬಕಂ ಚಂದ್ರಶೇಖರಂ ।
ವಿವೇದ ಭೇದಂ ನ ತಯೋಶ್ಚಂದ್ರಶೇಖರಯೋರ್ದಯೋಃ ॥ ೪೭ ॥

ಏವಂ ಪ್ರಾಸಾದಪೃಷ್ಠೇ ತು ಸ್ಥಿತಾ ತಾರಾವತೀ ಸತೀ ।
ಸುಧರ್ಮಾಮಧ್ಯಗಾ ದೇವೀ ಶಕ್ರಶ್ರೀರಿವ ಭೂಷಿತಾ ॥ ೪೮ ॥

---

೪೩. ಹೀಗೆ ಒಂದು ಸಂವತ್ಸರಕಾಲ ಯಾರೂ ಪ್ರವೇಶಿಸಲಸಾಧ್ಯವಾದ ಆ ಅರಮನೆಯಲ್ಲಿ ತಾರಾವತಿಯನ್ನಿರಿಸಿ ಬಾಗಿಲಲ್ಲಿ ಆಪ್ತಪುರುಷರನ್ನು ರಕ್ಷಣೆಗಾಗಿ ನಿಯಮಿಸಿ ಆ ದೇವಿಯನ್ನು ರಕ್ಷಿಸಿದನು.

೪೪-೪೫. ಒಂದು ದಿನ ತಾರಾವತಿಯು ತನ್ನ ಪತಿಯಾದ ಚಂದ್ರಶೇಖರನೊಡನೆ ವಿಮಾನದಿಂದ ಆ ಅರಮನೆಯ ಮಹಡಿಯನ್ನು ಏರಿ, ತನ್ನ ಪ್ರಿಯಪತಿಯಾದ ಚಂದ್ರಶೇಖರನನ್ನು ಚಿಂತಿಸುತ್ತಾ ಪತಿವ್ರತೆಯಾದ ಸಾವಿತ್ರಿಯಂತೆ ಪತಿಯಲ್ಲಿಯೇ ಲಲ್ಲೀನವಾದ ಮನಸ್ಸುಳ್ಳವಳಾಗಿದ್ದಳು.

೪೬-೪೭. ಅನಂತರ ಪಾರ್ವತೀಸಹಿತನಾದ ಮಹಾದೇವನನ್ನು ಆರಾಧಿಸಿ ತನ್ನ ಇಷ್ಟದೇವತೆಯಾದ ಪಾರ್ವತೀದೇವಿಯನ್ನು ಚಿಂತಿಸುತ್ತಿರುವಲ್ಲಿ, ತನ್ನ ಪತಿಯಾದ ಚಂದ್ರಶೇಖರರಾಜನಿಗೂ, ದೇವದೇವನಾದ ಚಂದ್ರಶೇಖರನಿಗೂ (ಮಹೇಶ್ವರ) ಪರಸ್ಪರಭೇದವೇ ತಿಳಿಯಲಿಲ್ಲವು. ಅವರಿಬ್ಬರೂ ಒಂದೇ ಎಂದು ತಿಳಿದಳು.

೪೮. ಆ ಅರಮನೆಯ ಮಹಡಿಯಲ್ಲಿರುವ ಆ ತಾರಾವತೀದೇವಿಯು, ಸುಧರ್ಮ್ಮ ವೆಂಬ ಅರಮನೆಯ ಮಧ್ಯದಲ್ಲಿ ರಾಜಿಸುವ ಇಂದ್ರನ ರಾಜ್ಯಲಕ್ಷ್ಮಿಯಂತೆ ರಾರಾಜಿಸುತ್ತಿದ್ದಳು.

ಅಥೋಮಯಾ ಸಮಂ ದೇವೋ ವಿಯತಂ ಚಂದ್ರಶೇಖರಃ ।
ಆಜಗಾಮ ತದಾ ಗರ್ಜ್ಜನ್ ಪ್ರಾಸಾದಂ ಪ್ರತಿ ತಂ ನೃಪ ॥ ೪೯ ॥

ದದೃಶೇ ಸೂತ್ತರಂತೀ ಸಾ ಉಮಾಯಾಃ ಸದೃಶೀ ಗುಣೈಃ ।
ಸರ್ವಲಕ್ಷಣಸಂಪೂರ್ಣಾ ಮಾಧವಸ್ಯೇವ ಮಾಧವೀ ॥ ೫೦ ॥

ತಾಂ ದೃಷ್ಟ್ವಾ ನಗದದ್ದೇವೀಂ ಗೌರೀಂ ವೃಷಭಕೇತನಃ ।
ಸ್ಮಿತಪ್ರಸನ್ನವದನಃ ಪ್ರಹಸನ್ನಿವ ಭಾಮಿನೀಂ ॥ ೫೧ ॥

॥ ಈಶ್ವರ ಉವಾಚ ॥

ಇಯಂ ತೇ ಮಾನುಷೀ ಮೂರ್ತಿಃ ಪ್ರಿಯೇ ತಾರಾವತೀತಿ ಯಾ ।
ಭೃಂಗೀಮಹಾಕಾಲಯೋಸ್ತೇ ಜನ್ಮನೇ ವಿಹಿತಾ ಸ್ವಯಂ ॥ ೫೨ ॥

ತ್ವತ್ತೋ ಹ್ಯನನ್ಯಕಾಂತೋ ಽಹಂ ನಾನ್ಯಾಂ ಗಂತುಮಿಹೋತ್ಸಹೇ ।
ತ್ವಮಿದಾನೀಂ ಸ್ವಯಂ ಚಾಸ್ಯಾಂ ಮೂರ್ತ್ಯಾಂ ಪ್ರವಿಶ ಭಾಮಿನಿ ॥ ೫೩ ॥

೪೯-೫೦. ಎಲೈ ರಾಜನೇ! ಅನಂತರ ಆ ಪ್ರಾಸಾದಕ್ಕೆ ಪಾರ್ವತೀಪರನೇ ಶ್ವರನು ಆಕಾಶಮಾರ್ಗದಿಂದ ಇಳಿದುಬರುತ್ತಾ ಗುಣಗಳಿಂದ ಪಾರ್ವತಿಯಂತೆಯೇ ಇರತಕ್ಕವಳೂ, ಸಕಲ ಲಕ್ಷಣಗಳಿಂದ ಶೋಭಿಸುವವಳೂ, ವಿಷ್ಣುವಿನ ಸಮೀಪದಲ್ಲಿರುವ ಸಾಕ್ಷಾತ್ ಲಕ್ಷ್ಮಿಯಂತೆ ಇದ್ದ ತಾರಾವತಿಯನ್ನು ನೋಡಿದರು.

೫೧. ಆ ತಾರಾವತಿಯನ್ನು ನೋಡಿ ನಂದಿವಾಹನನಾದ ಶಂಕರನು ಮಂದ ಹಾಸದಿಂದ ಗೌರೀದೇವಿಯನ್ನು ಕುರಿತು ಹೀಗೆ ಹೇಳಿದನು.

೫೨-೫೩. ಈಶ್ವರನು ಹೇಳುತ್ತಾನೆ:—ಎಲೌ ಪ್ರಿಯೇ! ಈ ತಾರಾವತಿಯು ನಿನ್ನ ಮನುಷ್ಯರೂಪದ ಅವತಾರವು. ಭೃಂಗಿ ಮತ್ತು ಮಹಾಕಾಲರು ಮನುಷ್ಯರಾಗಿ ಜನಿಸುವುದಕ್ಕಾಗಿ ಈ ತಾರಾವತಿಯು ಜನಿಸಿರುವಳು. ಎಲೌ ಪಾರ್ವತಿ! ನನಗೆ ನೀನೊರ್ವಳೇ ಕಾಂತೆಯು. ಇನ್ನಾವಳಲ್ಲೂ ನಾನು ಸೇರುವವನಲ್ಲ. ಆದಕಾರಣ ನೀನು ಈಗ ಈ ತಾರಾವತೀಮೂರ್ತಿಯಲ್ಲಿ ಪ್ರವೇಶಿಸು. ಅನಂತರ ಮಹಾಕಾಲನನ್ನೂ, ಭೃಂಗಿಯನ್ನೂ ಉತ್ಪಾದಿಸುವೆನು.

ತತಃ ಉತ್ಪಾದಯಿಷ್ಯಾಮಿ ಮಹಾಕಾಲಂ ಚ ಭೃಂಗಿಣಂ ।

॥ ದೇವ್ಯುವಾಚ ॥

ಮಮೈವ ಮಾನುಷೀ ಮೂರ್ತಿರಸ್ಯಾಂ ವೃಷಭಕೇತನ ॥ ೫೪ ॥

ವಿಶಾಮಿ ತೇಽತ್ರ ವಚನಾದುತ್ಪಾದಯ ಸುತದ್ವಯಂ ।
ಮಮ ಭೃಂಗಿಮಹಾಕಾಲಕಾಪೋತಾನಾಂ ಚ ಶಾಪತಃ ॥ ೫೫ ॥

ಏವಂ ಮೋಕ್ಷೋ ಭವೇದ್ಭರ್ಗ ತಸ್ಮಾತ್ತ್ವಂ ಕುರು ಮತ್ಪ್ರಿಯಂ ।

॥ ಔರ್ವ ಉವಾಚ ॥

ಪ್ರವಿವೇಶ ತತೋ ದೇವೀ ಸ್ವಯಂ ತಾರಾವತೀತನೌ ॥ ೫೬ ॥

ಮಹಾದೇವೋಽಪಿ ತಸ್ಯಾಂ ತು ಕಾಮಾರ್ಥಂ ಸಮುಪಸ್ಥಿತಃ ।
ತತಃ ಸಾಽಪರ್ಣಯಾ ವಿಷ್ಟಾ ದೇವೀ ತಾರಾವತೀ ಸತೀ ॥ ೫೭ ॥

೫೪-೫೫. ಪಾರ್ವತಿಯು ಹೇಳಿದಳು:–ಓ ಶಂಕರನೇ! ಈ ತಾರಾವತಿಯು ನೀನು ಹೇಳಿದಂತೆ ನನ್ನ ಮನುಷ್ಯಮೂರ್ತಿಯು. ನಿನ್ನ ಮಾತಿನಂತೆ ಈ ಮೂರ್ತಿಯಲ್ಲಿ ನಾನು ಪ್ರವೇಶಿಸುವೆನು. ಆಗ ಪುತ್ರರೀರ್ವರನ್ನು ಉತ್ಪಾದನೆಮಾಡು. ಅದರಿಂದ ಭೃಂಗಿ, ಮಹಾಕಾಲ, ಕಾಪೋತಮುನಿ ಇವರುಗಳು ನನಗೆ ಕೊಟ್ಟ ಶಾಪವು ನಿವೃತ್ತವಾಗುವುದು. ಓ ಶಂಕರನೇ! ನನ್ನ ಹಿತವಾದ ಈ ಕಾರ್ಯವನ್ನು ನೀನು ಅವಶ್ಯವಾಗಿ ಮಾಡುವವನಾಗು.

೫೬. ಅನಂತರ ಪಾರ್ವತಿಯು ತಾನು ತಾರಾವತಿಯ ಶರೀರದಲ್ಲಿ ಪ್ರವೇಶಿಸಿದಳು. ಆಗ ಮಹಾದೇವನು ಆ ತಾರಾವತಿಯಲ್ಲಿ ಕಾಮಕ್ರೀಡೆಗಾಗಿ ಸಿದ್ಧನಾದನು.

೫೭. ಆಗ ಪಾರ್ವತಿಯಿಂದ ಪ್ರವಿಷ್ಟಳಾದ ಆ ಸಾಧ್ವಿಯಾದ ತಾರಾವತೀ ದೇವಿಯು ಕಾಮಾಸಕ್ತನಾದ ಮಹಾದೇವನನ್ನು ತಾನಾಗಿಯೇ ಸಂತೋಷದಿಂದ ಸೇರಿದವಳಾದಳು.

ಕಾಮುಯಾನಂ ಮಹಾದೇವಂ ಸ್ವಯಮೇವಾಭಜನ್ಮುದಾ ।
ತಸ್ಮಿನ್ ಕಾಲೇಽಭವದ್ಭರ್ಗಃ ಕಪಾಲೀ ಚಾಸ್ಥಿಮಾಲ್ಯಧೃಕ್ ॥ ೫೮ ॥

ಬೀಭತ್ಸವೇಷೋ ದುರ್ಗಂಧಃ ಪಲಿತೋತಿವಿರೂಪಧೃಕ್
ಕಾಮಾವಸಾನೇ ತಸ್ಯಾಂ ತು ಸದ್ಯೋಜಾತಂ ಸುತದ್ವಯಂ ॥ ೫೯ ॥

ಅಭವನ್ನೃಪಶಾರ್ದೂಲ ತಥಾ ಶಾಖಾಮೃಗಾನನಂ ।
ತದ್ದೇಹಾನ್ನಿಃಸೃತಾಪರ್ಣಾ ಜಾತಯೋಽಃ ಸುತಯೋಸ್ತಯೋಃ ॥ ೬೦ ॥

ಮೋಹಯಿತ್ವಾ ಯಥಾತ್ಮಾನಂ ನ ಜಾನಾತಿ ಕಕುತ್ಸ್ಥಜಾ ।
ಅಹಂ ಗೌರೀ ತಥಾ ಭರ್ಗೋ ಭಾವೇನ ಮಾನುಷೇಣ ತು ॥ ೬೧ ॥

ಅಥ ತಾರಾವತೀ ದೇವೀ ಸುತೌ ದೃಷ್ಟ್ವಾ ಕ್ಷಿತಿ ಸ್ಥಿತೌ ।
ಪಾತಿವ್ರತ್ಯಾತ್ಪರಿಭ್ರಷ್ಟಾಮಾತ್ಮಾನಂ ವೀಕ್ಷ್ಯ ಭಾಮಿನೀ ॥ ೬೨ ॥

ತಥಾ ಬೀಭತ್ಸವೇಷಂ ಚ ಹರಂ ದೃಷ್ಟ್ವಾಽಗ್ರತಃ ಸ್ಥಿತಂ ।
ಮುನಿಶಾಪಂ ತದಾ ಮೇನೇ ಪ್ರಾಪ್ತಂ ಕಾಲಾಂತಕೋಪಮಂ ॥ ೬೩ ॥

---

೫೮. ಆ ಕಾಲದಲ್ಲಿ ಶಂಕರನು ತನ್ನ ಕೈಗಳಲ್ಲಿ ಕಪಾಲವನ್ನು ಧರಿಸಿದ್ದನು, ಎಲುಬಿನ ಮಾಲೆಯಿಂದ ಜುಗುಪ್ಸೆಯನ್ನುಂಟುಮಾಡುವ ಅಸಹ್ಯವೇಷವುಳ್ಳವನೂ, ದುರ್ವಾಸನೆಯುಳ್ಳವನೂ, ನರೆತಕೂದಲುಗಳಿಂದ ವಿಕಾರವಾದ ರೂಪವುಳ್ಳವನೂ ಆಗಿದ್ದನು.

೫೯. ರತಿಕ್ರೀಡೆಯು ಮುಗಿಯೊಡನೆಯೇ ಆ ತಾರಾವತಿಯಲ್ಲಿ ಕಪಿಯಂತೆ ಮುಖವುಳ್ಳ ಪುತ್ರರೀರ್ವರು ಜನಿಸಿದರು.

೬೦-೬೧. ಆ ಪುತ್ರರು ಜನಿಸಿದೊಡನೆಯೇ ತಾರಾವತಿಯ ಶರೀರದಿಂದ ಪಾರ್ವತಿಯು ಹೊರಟುಹೋದಳು. ಹೋಗುವಾಗ ಆ ತಾರಾವತಿಯು ತಾನು ಪಾರ್ವತಿಯ ಮನುಷ್ಯ ಅವತಾರವೆಂದೂ, ಚಂದ್ರಶೇಖರನು ಶಂಕರನ ಮನುಷ್ಯಾವತಾರವೆಂದೂ ತಿಳಿಯದಂತೆ ಅವಳನ್ನು ಮೋಹಗೊಳಿಸಿದನು.

೬೨-೬೩. ಅನಂತರ ತಾರಾವತೀದೇವಿಯು ಭೂಮಿಯಮೇಲಿರುವ ಆ ಪುತ್ರರೀರ್ವರನ್ನೂ, ಪಾತಿವ್ರತ್ಯದಿಂದ ಹೀನಳಾದ ತನ್ನನ್ನೂ, ಮತ್ತು ಎದುರಿನಲ್ಲಿರುವ ವಿಕಾರ

ಇತಿ ಶೋಕೇನಿಮೂಢಾ ಚ ನಿನಿಂದ ಚ ಸತೀವ್ರತಂ ।
ಇದಂ ಚೋವಾಚ ತಂ ವೀಕ್ಷ್ಯ ಮಹಾದೇವಂ ತ್ರಿಶೂಲಿನಂ ॥ ೬೪ ॥

ಮುನಿವ್ರತಾದಪಿ ವರಂ ನಾರೀಣಾಂ ಚ ಸತೀವ್ರತಂ ।
ಇತಿ ಸ್ಮ ಸತತಂ ಧೀರಾ ವ್ಯಾಹರಂತಿ ಪುರಾವಿದಃ ॥ ೬೫ ॥

ನ ತತ್ಸತ್ಯಮಹಂ ಮನ್ಯೇ ಯತ್ಪ್ರವೃತ್ತಂ ಮಮೇದೃಶಂ ।
ಇತ್ಯುಕ್ತ್ವಾ ಸಾ ತದಾ ದೇವೀ ಶುಶೋಚ ಮುಮೋಹ ಚ ॥ ೬೬ ॥

ತಾಮಾಹಾಥ ಮಹಾದೇವೋ ಮಾಕಾರ್ಷೀಸ್ತ್ವಂ ವರಾನನೇ ।
ಶೋಕಂ ಸತೀವ್ರತಂ ಚಾಪಿ ಮಾ ನಿಂದ ತ್ವಂ ಸುಚೇತನೇ ॥ ೬೭ ॥

ಕಾಪೋತೇನ ಯದಾ ಶಪ್ತಾ ತ್ವಂ ತದೈವ ತದಗ್ರತಃ ।
ಉಕ್ತವತ್ಯಸಿ ದೀರ್ಘಾಕ್ಷಿ ಯತ್ತದ್ಭೂತಂ ತನ್ನಾಧುನಾ ॥ ೬೮ ॥

ವಾದ ವೇಷವುಳ್ಳ ಹರಸನ್ನೂ ನೋಡಿ, ಇದು ಕಾಪೋತಮುನಿಯ ಭಯಂಕರವಾದ ಶಾಪದ ಫಲವೆಂದು ತಿಳಿದಳು.

೬೪. ಅವಳು ತುಂಬಾ ದುಃಖಗೊಂಡು ಪಾತಿವ್ರತ್ಯವನ್ನು ನಿಂದಿಸಿದಳು. ಮತ್ತು ಎದುರಿಗಿರುವ ತ್ರಿಶೂಲಧಾರಿಯಾದ ಶಂಕರನನ್ನು ಕುರಿತು ಹೀಗೆ ಹೇಳಿದಳು.

೬೫. ಮುನಿಗಳ ವ್ರತ (ತಪಸ್ಸು) ಗಳಿಗಿಂತಲೂ, ಪತಿವ್ರತೆಯ ವ್ರತವು ಶ್ರೇಷ್ಠವಾದುದೆಂದು ಸಕಲವನ್ನೂ ತಿಳಿದ ಪಂಡಿತರು ಹೇಳುವರು. ಆದರೆ ಪತಿವ್ರತೆಯಾದ ನನಗೆ ಈ ಅವಸ್ಥೆಯು ಪ್ರಾಪ್ತವಾದುದರಿಂದ ನಾನು ಜ್ಞಾನಿಗಳ ಆ ಮಾತನ್ನು ನಿಜವೆಂದು ನಂಬುವುದಿಲ್ಲ.

೬೬-೬೧. ಹೀಗೆ ಹೇಳಿ ಆ ತಾರಾವತಿಯು ಆಗ ತುಂಬಾ ದುಃಖಗೊಂಡಳು. ಮತ್ತು ಆ ದುಃಖದಿಂದ ಅವಳ ವಿವೇಚನೆಯು ನಷ್ಟವಾಯಿತು. ಆಗ ಮಹಾದೇವನು ಅವಳನ್ನು ಕುರಿತು ಎಲೌ ತಾರಾವತಿ ! ನೀನು ದುಃಖಿಸಬೇಡ ಮತ್ತು ಪಾತಿವ್ರತ್ಯವನ್ನು ನಿಂದಿಸಲೂ ಬೇಡ. ಎಲೌ ವಿಶಾಲಾಕ್ಷಿ ! ಕಾಪೋತಮುನಿಯು ನಿನ್ನನ್ನು ಶಪಿಸಿದಾಗ ನೀನು ಅವನೆದುರಿನಲ್ಲಿ ಏನು ಹೇಳಿದ್ದೆಯೋ ಅದರಂತೆಯೇ ಈಗ ನಡೆದಿರುವುದು. ನಾನು (ತಾರಾವತಿಯು) ನಿತ್ಯವೂ ಮಹಾದೇವನನ್ನು ಸತ್ಯವಾಗಿಯೂ

ಯದಿ ಸತ್ಯಂ ಮಹಾದೇವೋ ನಿತ್ಯಮಾರಾಧ್ಯತೇ ಮಯಾ ।
ತೇನ ಸತ್ಯೇನ ಮೇ ದೇವಾದಾರಾಧ್ಯಾಚ್ಚಂದ್ರಶೇಖರಾತ್ ॥ ೬೯ ॥

ಸ್ವಪ್ನೇಽಪಿ ಮುನಿಶಾರ್ದೂಲ ನಾನ್ಯೋ ಮಾಂ ಕಾಮಯಿಷ್ಯತಿ ।
ಸೋಽಹಮೇವ ಮಹಾದೇವ ಆರಾಧ್ಯಶ್ಚಂದ್ರಶೇಖರಃ ॥ ೭೦ ॥

ತ್ವಂ ಮಯಾ ಕಾಮಿತಾ ಚಾಪಿ ಮಾ ಕಾರ್ಷೀಃ ಶೋಕಮಂಗನೇ ।
ಇತ್ಯುಕ್ತ್ವಾ ಸ ಮಹಾದೇವಃ ತತ್ರೈವಾಂತರಧೀಯತ ॥ ೭೧ ॥

ಮಾಯಯಾ ಮೋಹಿತಾ ದೇವೀ ತತ್ರ ತಾರಾವತೀ ಸತೀ ।
ಭೂಮೌ ಮಲಿನವೇಷೇಣ ಮನ್ಯುನಾ ಸಮುಪಾವಿಶತ್ ॥ ೭೨ ॥

ಸುತೌ ಚ ಪತಿತೌ ಭೂಮೌ ಸಾ ದೇವೀ ನಾಸಭಾಜಯತ್ ।
ಭರ್ತುರಾಗಮನಂ ಶಶ್ವತ್ಕಾಂಕ್ಷಂತೀ ಭರ್ಗಭಾಷಿತಂ ॥ ೭೩ ॥

ನರರಾಜಗೃಹೇ ಚಾಪಿ ಮುಕ್ತಕೇಶೀ ತಥಾ ಸ್ಥಿತಾ ।
ಅಥ ಕ್ಷಣಾನ್ಮಹಾಭಾಗಃ ಸ ರಾಜಾ ಚಂದ್ರಶೇಖರಃ ॥ ೭೪ ॥

ಆರಾಧಿಸಿರುವೆನಾದರೆ, ಆ ಸತ್ಯದಿಂದ ನನ್ನ ಆರಾಧ್ಯದೇವನಾದ ಚಂದ್ರಶೇಖರನ ಹೊರತು ಇನ್ನಾವನೂ ಸ್ವಪ್ನದಲ್ಲಿಯೂ ನನ್ನನ್ನು ಕಾಮಿಸಲಾರನು ಎಂದು ಆಗ ನೀನು ಹೇಳಿದ್ದೆಯಲ್ಲವೇ? ನೀನು ಆರಾಧಿಸುವ ಆ ಚಂದ್ರಶೇಖರನೇ ನಾನಾಗಿರುವೆನು. ನಿನ್ನ ಮಾತಿನಂತೆ ನಿನ್ನನ್ನು ನಾನು ಕಾಮಿಸಿದೆನು. ಆದಕಾರಣ ಎಲೌ ವನಿತೆ! ಶೋಕ ಮಾಡಬೇಡ ಎಂದು ಹೇಳಿ ಆ ಶಂಕರನು ಅಲ್ಲಿಯೇ ಅಂತರ್ಧಾನನಾದನು.

೭೨. ಸಾಧ್ವಿಯಾದ ತಾರಾವತೀದೇವಿಯು ಮಾಯೆಯಿಂದ ಮೋಹಿತಳಾದುದರಿಂದ ತುಂಬಾ ದುಃಖಗೊಂಡವಳಾಗಿ ಮಲಿನವಾದ ವೇಷದಿಂದಲೇ ಅಲ್ಲಿ ಭೂಮಿಯಲ್ಲಿ ಕುಳಿತಳು.

೭೩-೭೪. ಭೂಮಿಯಲ್ಲಿ ಬಿದ್ದಿರುವ ಆ ಪುತ್ರರೀರ್ವರನ್ನು ಆ ದೇವಿಯು ಆದರಿಸಲೇ ಇಲ್ಲ. ಶಂಕರನ ಮಾತನ್ನು ಸ್ಮರಿಸುತ್ತಾ ತನ್ನ ಪತಿಯ ಆಗಮನವನ್ನೇ ನಿರೀಕ್ಷಿಸುತ್ತಿದ್ದಳು. ತಲೆಯು ಕೆದರಿಹೋಗಿ, ಶರೀರವು ಮಲಿನವಾಗಿ, ದುಃಖದಿಂದ ಆ ಸಾಧ್ವಿಯು ಆ ರಾಜಗೃಹದಲ್ಲಿ ತನ್ನ ಪತಿಯಾಗಮನವನ್ನು ನಿರೀಕ್ಷಿಸುತ್ತಿದ್ದಳು. ಕ್ಷಣ

ಪ್ರಾಸಾದಪೃಷ್ಠಮಾಗಚ್ಛದ್ದೃಷ್ಟ್ವಾ ತಾರಾವತೀಂ ತದಾ ।
ಸ ತಂ ಪ್ರಾಸಾದಮಾರುಹ್ಯ ಜಾಯಾಂ ತಾರಾವತೀಂ ತದಾ ॥ ೭೫ ॥

ದದರ್ಶ ಪತಿತಾಂ ಭೂಮೌ ಮುಕ್ತಕೇಶೀಂ ನಿರುತ್ಸವಾಂ ।
ಶ್ಯಾಮಾನನಾಂ ಶ್ವಸಂತೀಂ ಚ ಸತ್ಯಗರ್ಹಣತತ್ಪರಾಂ ॥ ೭೬ ॥

ಸುತೌ ಚ ಪತಿತೌ ಭೂಮೌ ಸೂರ್ಯಾಚಂದ್ರಮಸೌ ಯಥಾ ।
ವಾನರಾಸ್ಯೌ ಸ ದದೃಶೇ ಪದಕ್ಷ್ಣೋಭಂ ವೃಷಸ್ಯ ಚ ॥ ೭೭ ॥

ಇತಿ ಸರ್ವಮವೇಕ್ಷ್ಯಾಥ ಸ ರಾಜಾ ಚಂದ್ರಶೇಖರಃ ।
ಭೀತಶ್ಚ ವಿಸ್ಮಿತಶ್ಚೈವ ಭಾರ್ಯಾಂ ಪಪ್ರಚ್ಛ ಸಂಭ್ರಮಾತ್ ॥ ೭೮ ॥

ಕಿಂ ಕಿಂ ತಾರಾವತಿ ತವ ಪ್ರವೃತ್ತಂ ನಿರ್ಜನೇ ಗೃಹೇ ।
ಕೋ ವಾ ಧರ್ಷಿತವಾನಾಂಸ್ತ್ವಾಂ ಹಿ ಶಿವಃ ಸಿಂಹವಧೂಮಿವ ॥ ೭೯ ॥

ಲ್ಲಿಯೇ ಅವಳ ಪತಿಯಾದ ಚಂದ್ರಶೇಖರರಾಜನು ತಾರಾವತಿಯನ್ನು ನೋಡಲು ಆ ಅರಮನೆಯ ಮಹಡಿಗೆ ಬಂದು ದುಃಖಿಸುತ್ತಿರುವ ತನ್ನ ಪತ್ನಿಯನ್ನು ನೋಡಿದನು. ಆ ತಾರಾವತಿಯ ಸುಂದರವಾದ ಕೇಶಪಾಶವು ಕೆದರಿಹೋಗಿದ್ದಿತು. ಮುಖವು ಕಾಂತಿಯಿಲ್ಲದೆ ಕಂಗೆಟ್ಟಿದ್ದಿತು. ಆಗಾಗ ದೀರ್ಘವಾದ ನಿಟ್ಟುಸುರನ್ನು ಬಿಡುತ್ತಿದ್ದಳು. ಸತ್ಯವಲ್ಲಿ ನಂಬಿಕೆಯೇ ಹೋಗಿ ಅದನ್ನು ನಿಂದಿಸುತ್ತಿದ್ದಳು. ಈ ರೀತಿ ಭೂಮಿಯಲ್ಲಿ ಬಿದ್ದು ದುಃಖಿಸುತ್ತಿರುವ ತಾರಾವತಿಯನ್ನೂ, ಸಮೀಪದಲ್ಲಿ ಸೂರ್ಯಚಂದ್ರರಂತೆ ಅತಿ ತೇಜಸ್ವಿಗಳೂ, ಕಪಿಯಂತೆ ಮುಖವುಳ್ಳವರೂ ಆದ ಈರ್ವರು ಪುತ್ರರನ್ನೂ, ಹಾಗೆಯೇ ಶಂಕರನ ವಾಹನವಾದ ನಂದಿಯ ಹೆಜ್ಜೆಯ ಗುರುತುಗಳನ್ನೂ ನೋಡಿ ಭಯಾಶ್ಚರ್ಯಗಳಿಂದ ಚಕಿತನಾದನು. ಹೀಗೆ ಅದೆಲ್ಲವನ್ನೂ ನೋಡಿ ಆ ಚಂದ್ರಶೇಖರರಾಜನು ಭಯ ಮತ್ತು ಆಶ್ಚರ್ಯಗಳುಳ್ಳವನಾದನು.

೭೯. ಬಳಿಕ ತನ್ನ ಪತ್ನಿಯನ್ನು ಕುರಿತು, ಎಲೌ ತಾರಾವತಿ! ನಿನಗೆ ಈ ನಿರ್ಜನವಾದ ಅರಮನೆಯಲ್ಲಿ ಅದೇನಾಯಿತು? ಸಿಂಹವಧುವನ್ನು ನರಿಯು ಕೆಣಕಿದಂತೆ ಅದಾವನು ನಿನ್ನನ್ನು ಬಲಾತ್ಕರಿಸಿದನು?

ಕಸ್ಯ ವಾ ಪೃಥಕಾವೇತೌ ಪ್ರೋದ್ದೀಪ್ತೌ ವಾನರಾನನೌ ।
ತನ್ಮೇ ದ್ರುತಂ ಸಮಾಚಕ್ಷ್ವ ಕೋ ವಾ ತ್ವಾಂ ಕಾಮಿತೋ ಪರಃ ॥ ೬೦ ॥

॥ ಔರ್ವ ಉವಾಚ ॥

ವಿವಮುಕ್ತಾ ತು ಭೂಪೇನ ತದಾ ತಾರಾವತೀ ಸತೀ ।
ವೃತ್ತಾಂತಂ ಕಥಯಾಮಾಸ ಸಕಲಂ ಚಂದ್ರಶೇಖರೇ ॥ ೬೧ ॥

ಯಥಾ ಸಮಾಗತೋ ಭರ್ಗ ಉತ್ತರಂ ಚ ಯಥೋಕ್ತವಾನ್ ।
ತತ್ಸರ್ವಂ ಕಥಯಾಮಾಸ ಬಾಷ್ಪಕಂಠಾ ಸಗದ್ಗದಾ ॥ ೬೨ ॥

ತಸ್ಯಾಸ್ತದ್ವಚನಂ ಶ್ರುತ್ವಾ ಚಿಂತಯಂಶ್ಚಂದ್ರಶೇಖರಃ ।
ಕಿಂ ವೃತ್ತಮಿತಿ ವಿಜ್ಞಾತುಂ ಭೂತಲೇ ಸಮುಪಾವಿಶತ್ ॥ ೬೩ ॥

ಸ್ವಗತಂ ಚಿಂತಯನ್ ರಾಜಾ ಚಕಾರೇಮಾಂ ವಿಚಾರಣಾಂ ।
ಅನನ್ಯಕಾಂತೋ ಗಿರಿಶಃ ಸ ನಾನ್ಯಾಂ ಪಾರ್ವತೀಮೃತೇ ॥ ೬೪ ॥

೬೦, ತೇಜಸ್ವಿಗಳಾದರೂ ಕಪಿಮುಖದಿಂದಿರುವ ಈ ಬಾಲಕರು ಯಾರ ಪುತ್ರರು? ನನ್ನ ಹೊರತು ಅದಾರು ನಿನ್ನ ಕಾಮಿಸಿದವನು? ಇದೆಲ್ಲವನ್ನೂ ಜಾಗ್ರತೆ ಹೇಳುವವಳಾಗು.

೬೧-೬೨. ಔರ್ವಮುನಿಯು ಹೇಳಿದನು:—ಹೀಗೆ ರಾಜನು ಕೇಳಲು, ಆಗ ಸತಿಯಾದ ತಾರಾವತಿಯು ಆ ಚಂದ್ರಶೇಖರರಾಜನನ್ನು ಕುರಿತು, ಶಂಕರನು ಬಂದುದನ್ನೂ, ಅವನು ತನಗೆ ಹೇಳಿದ ಉತ್ತರವನ್ನೂ ಸಹ ಆ ತಾರಾವತಿಯು, ಕಂಬನಿದುಂಬಿ ದುಃಖದಿಂದ ಕಂಠವು ಬಿಗಿದುಬರುತ್ತಿರಲು ಕುಗ್ಗಿದ ಧ್ವನಿಯಿಂದ ನಡೆದ ಸಕಲ ವೃತ್ತಾಂತವನ್ನೂ ಹೇಳಿದಳು.

೬೩-೬೪. ತಾರಾವತಿಯು ಹೇಳಿದ ಆ ಮಾತುಗಳನ್ನು ಕೇಳಿ ಚಂದ್ರಶೇಖರ ರಾಜನು ಚಿಂತಿಸುತ್ತಾ ನಿಜವಾಗಿ ನಡೆದ ಸಮಾಚಾರವೇನೆಂಬುದನ್ನು ತಿಳಿಯಲು, ಭೂಮಿಯಲ್ಲಿ ಕುಳಿತು ತನ್ನಲ್ಲಿಯೇ ಆಲೋಚಿಸುತ್ತಾ ಹೀಗೆ ವಿಮರ್ಶಿಸಿದನು. ಶಂಕರನಿಗೆ ಪಾರ್ವತಿಯೊಬ್ಬಳೇ ಕಾಂತೆಯು. ಅವನು ಪಾರ್ವತಿಯನ್ನು ಹೊರತು ಇನ್ನಾವಳನ್ನೂ ಕಾಮಿಸುವುದಿಲ್ಲ. ಆದುದರಿಂದ ಈಗ ತಾರಾವತಿಯನ್ನು ಕಾಮಿಸಿದವನು

ಕಾಮುಯಿಷ್ಯತಿ ತಸ್ಮಾತ್ಸ ನ ಭರ್ಗಃ ಪರಮೇಶ್ವರಃ ।
ಋಷಿಶಾಪೋ ಹಿ ಬಲವಾಂಸ್ತಚ್ಚಾಪಾದೇವ ರಾಕ್ಷಸಃ ॥ ೮೫ ॥

ಕೋಽಪಿ ಮಾಯಾಬಲೋಽಪೇತಃ ಶಂಕರಚ್ಛದ್ಮನಾ ಗತಃ ।
ಏಷಾ ಸತೀ ಪ್ರಿಯಾ ಭಾರ್ಯಾ ರಾಕ್ಷಸೇನಾಪಿ ದೂಷಿತಾ ॥ ೮೬ ॥

ಕಥಂ ಚೇಯಂ ಮಯಾ ಗ್ರಾಹ್ಯಾ ಪೂರ್ವವತ್ಸರ್ವಕರ್ಮಸು ।
ಏತೌ ಚ ತನಯೌ ತಸ್ಯ ಸದ್ಯೋಜಾತೌ ಚ ರಾಕ್ಷಸೌ ॥ ೮೭ ॥

ಅನ್ಯಥಾ ವಾ ಕಥಂಭೂತೌ ಶಾಖಾಮೃಗಮುಖೌ ಸುತೌ ।
ಏವಂ ಚಿಂತಯತಸ್ತಸ್ಯ ದೇವೌಘವಿನಿಯೋಜಿತಾ ॥ ೮೮ ॥

ಸರಸ್ವತೀ ವಿಯತ್ಸ್ಥಾ ತು ರಾಜಾನಮಿತಿ ಚಾಬ್ರವೀತ್ ।
ನ ತ್ವಯಾ ಸಂಶಯಃ ಕಾರ್ಯಸ್ತಾರಾವತ್ಯಾಂ ನೃಪೋತ್ತಮ ॥ ೮೯ ॥

ಸತ್ಯಮೇವ ಮಹಾದೇವೋ ಭಾರ್ಯಾಂ ತವ ಸಮೇಯಿವಾನ್ ।
ಏತೌ ಚ ತನಯೌ ತಸ್ಯ ರಾಜಂಸ್ತ್ವಂ ಪರಿಪಾಲಯ ॥ ೯೦ ॥

ಶಂಕರನಲ್ಲ. ಋಷಿಯ ಶಾಪವು ಬಲವಾದುದು. ಆ ಶಾಪದ ಬಲದಿಂದಲೇ ಯಾವನೋ ಓರ್ವ ಮಾಯಾಬಲವುಳ್ಳ ರಾಕ್ಷಸನು ಕಪಟಶಂಕರವೇಷವನ್ನು ಧರಿಸಿ ಬಂದಿರಬಹುದು. ಪತಿವ್ರತೆಯಾದ ಈ ನನ್ನ ಪ್ರಿಯಭಾರ್ಯೆಯು ನೀಚನಾದ ರಾಕ್ಷಸನಿಂದ ದೂಷಿತಳಾಗಿರುವಳು. ಇಂಥವಳನ್ನು ಮೊದಲಿನಂತೆ ಎಲ್ಲಾ ಕರ್ಮಗಳಲ್ಲಿ ನಾನು ಹೇಗೆ ಸ್ವೀಕರಿಸಲಿ ? ಈ ಬಾಲಕರು ಆ ರಾಕ್ಷಸನಿಂದ ಜನಿಸಿದ ರಾಕ್ಷಸ ಕುಮಾರರು. ಹಾಗಿಲ್ಲದಿದ್ದರೆ ಇವರು ಕಪಿಯಂತೆ ಮುಖವುಳ್ಳವರಾಗಲು ಕಾರಣವೇನು ?

೮೮—೯೧. ಹೀಗೆ ಆ ಚಂದ್ರಶೇಖರನು ಚಿಂತಿಸುತ್ತಿರಲು, ದೇವತೆಗಳಿಂದ ಪ್ರೇರಿಸಲ್ಪಟ್ಟು ಸರಸ್ವತಿಯು ಆಕಾಶದಲ್ಲಿ ಬಂದು ನಿಂತು, ಆ ರಾಜನನ್ನು ಕುರಿತು ಎಲೈ ರಾಜೇಂದ್ರನೇ ! ತಾರಾವತಿಯು ಹೇಳಿದ ವಿಷಯದಲ್ಲಿ ನೀನು ಸಂಶಯಗೊಳ್ಳಬೇಡ. ಸತ್ಯವಾಗಿಯೂ ನಿನ್ನ ಪತ್ನಿಯನ್ನು ಶಂಕರನು ಕಾಮಿಸಿರುವನು. ಈ ಬಾಲಕರು ಆ ಶಂಕರನ ಪುತ್ರರು. ಎಲೈ ರಾಜನೇ ! ಇವರನ್ನು ನೀನು ಪಾಲಿಸು.

ಯೋಽನ್ಯಸ್ತೇ ಸಂಶಯೋಽತ್ರಾಸ್ತಿ ನಾರದಸ್ತಂ ವಿನೇಷ್ಯತಿ ।
ಇತ್ಯುಕ್ತ್ವಾ ವಿರರಾಮಾಶು ವಾಗ್ದೇವೀ ಪ್ರಿಯವಾದಿನೀ ॥ ೮೦ ॥

ಜಾತಸಂಪ್ರತ್ಯಯೋ ರಾಜಾ ಭಾರ್ಯಾಮಾಶ್ವಾಸಯತ್ತದಾ ।
ಸುತೌ ತು ದೇವದೇವಸ್ಯ ಸಂಸ್ಕೃತ್ಯ ವಿಧಿನಾ ತದಾ ॥ ೮೨ ॥

ಪಾಲಯಾಮಾಸ ನೃಪತಿರಕಾಂಕ್ಷನ್ನಾರದಾಗಮಂ ।
ಅಥಾಜಗಾಮ ದೇವರ್ಷಿರ್ನಾರದಸ್ತಸ್ಯ ಮಂದಿರಂ ॥ ೮೩ ॥

ಪೂಜಾಭಿರ್ಬಹುಭಿಸ್ತಂ ತು ಪ್ರತ್ಯಗೃಹ್ಣಾತ್ಸ ಭೂಪತಿಃ ।
ಪೂಜಯಿತ್ವಾ ಯಥಾನ್ಯಾಯಂ ತಾರಾವತ್ಯಾ ಸಮಂ ನೃಪಃ ॥ ೮೪ ॥

ಉಚ್ಚೈಃ ಪ್ರಾಸಾದಮತುಲಂ ಸುರೇಶಭವನೋಪಮಂ ।
ಆರೋಹಯಾಮಾಸ ತದಾ ತಂ ಮುನಿಂ ಚಂದ್ರಶೇಖರಃ ॥ ೮೫ ॥

ತತ್ರೋಪಾಂಶು ತದಾ ರಾಜಾ ಸಭಾರ್ಯಶ್ಚಂದ್ರಶೇಖರಃ
ಪೂರ್ವಪ್ರವೃತ್ತವೃತ್ತಾಂತಮಪೃಚ್ಛಚ್ಚಂದ್ರಶೇಖರಃ ॥ ೮೬ ॥

ನಿನಗೆ ಇನ್ನಾವ ಸಂಶಯವಿದ್ದರೂ ಅದನ್ನು ನಾರದಮುನಿಯು ಪರಿಹರಿಸುವನು ಎಂದು ಪ್ರಿಯವಾದ ವಾಕ್ಯಗಳಿಂದ ಹೇಳಿ ಸುಮ್ಮನಾದಳು.

೮೨. ವಾಗ್ದೇವಿಯ ಮಾತಿನಿಂದ ರಾಜನಿಗೆ ನಂಬಿಕೆಯು ಹುಟ್ಟಿ, ತನ್ನ ಪತ್ನಿಯನ್ನು ಸಂತೈಸಿದನು. ಆ ಬಾಲಕರನ್ನೂ ಸಹ ಜಾತಕರ್ಮಾದಿಗಳಿಂದ ಸಂಸ್ಕರಿಸಿ ಸಲಹುತ್ತಾ ನಾರದಮುನಿಯ ಆಗಮನವನ್ನೇ ನಿರೀಕ್ಷಿಸುತ್ತಿದ್ದನು.

೮೩—೮೫. ಆ ಮೇಲೊಂದುದಿನ ದೇವಮುನಿಯಾದ ನಾರದನು ಆ ರಾಜನ ಅರಮನೆಗೆ ಬರಲು ಚಂದ್ರಶೇಖರರಾಜನು ತಾರಾವತಿಯೊಡನೆ ಅನೇಕಬಗೆಯ ಪೂಜೆಗಳಿಂದ ಆ ಮುನಿಯನ್ನು ವಿಧಿಯಂತೆ ಪೂಜಿಸಿ, ಆ ಮುನಿಯನ್ನು ತುಂಬಾ ಉನ್ನತವೂ, ಇಂದ್ರಭವನದಂತೆ ಪ್ರಕಾಶಿಸುವುದೂ ಆದ ತನ್ನ ಹೊಸ ಅರಮನೆಯ ಮೇಲ್ಮಹಡಿಗೆ ಕರೆದೊಯ್ದನು.

೮೬. ಅಲ್ಲಿ ಏಕಾಂತವಾಗಿ ಆ ಚಂದ್ರಶೇಖರರಾಜನು ತನ್ನ ಪತ್ನಿಯೊಡನೆ ನಾರದಮುನಿಯನ್ನು ಕುರಿತು ಹಿಂದೆ ನಡೆದ ವೃತ್ತಾಂತ ವಿಚಾರವಾಗಿ ಹೀಗೆ ಪ್ರಶ್ನಿಸಿದನು.

ಪೂತೋಽಸ್ಮ್ಯನುಗೃಹೀತೋಽಸ್ಮಿ ಭವತಾ ಬ್ರಹ್ಮಸೂನುನಾ ।
ಅಂತರ್ಬಹಿಶ್ಚ ವಿಪ್ರೇಂದ್ರ ತುಂಗಪ್ರಾಸಾದಗಾಮಿನಾ ॥ ೯೭ ॥

ತ್ವದನ್ಯಃ ಸಂಶಯಸ್ಯಾಸ್ಯ ಛೇತ್ತಾ ನೈವಾಸ್ತಿ ಕುತ್ರಚಿತ್ ।
ನಿಕಂ ಮೇ ಸಂಶಯಂ ಬ್ರಹ್ಮನ್ ಛೇತ್ತುಮರ್ಹಸಿ ಹೃದ್ಗತಂ ॥ ೯೮ ॥

ಋಷಿಶಾಪೇನ ಭಾರ್ಯೇಯಂ ಮಮ ತಾರಾವತೀ ಸತೀ ।
ಬೀಭತ್ಸವೇಷಾಕೃತಿನಾ ಧರ್ಷಿತಾ ಕೃತ್ತಿವಾಸಸಾ ॥ ೯೯ ॥

ತಸ್ಯಾತ್ಮಜೌ ಸಮುತ್ಪನ್ನೌ ಸದ್ಯೋಜಾತಾವಿಮೌ ಪುನಃ ।
ತತ್ರ ಮೇ ಸಂಶಯಃ ಶಶ್ವನ್ನಿತ್ಯಂ ಚಿತ್ತೇ ಪ್ರವರ್ತತೆ ॥ ೧೦೦ ॥

ಅನನ್ಯಕಾಂತೋ ಗಿರಿಶೋ ಗಿರಿಜಾಂ ಪಾರ್ವತೀಮ್ಯತೇ ।
ಕಥಂ ಸಂಗಮಯಾಮಾಸ ಮಾನುಷೀಂ ಹೀನಜನ್ಮಜಾಂ ॥ ೧೦೧ ॥

ಕಥಮುತ್ಪಾದಯಾಮಾಸ ಮನುಷ್ಯಾ ತನಯೌ ಸ್ವಕೌ ।
ಏತತ್ಸರ್ವಂ ಸಮಾಚಕ್ಷ್ವ ಯದಿ ಗುಹ್ಯಂ ನ ತೇ ಭವೇತ್ ॥ ೧೦೨ ॥

೯೭-೯೮. ಓ ವಿಪ್ರೋತ್ತಮನೇ! ಈ ನನ್ನ ಅರಮನೆಗೆ ಬ್ರಹ್ಮಪುತ್ರನಾದ ನಿನ್ನ ಆಗಮನದಿಂದ ಬಾಹ್ಯಾಂತರಗಳಲ್ಲಿ ನಾನು ಪರಿಶುದ್ಧನಾಗಿ ಅನುಗೃಹೀತ ನಾದೆನು. ಓ ಬ್ರಾಹ್ಮಣನೇ! ನನ್ನ ಮನಸ್ಸಿನಲ್ಲಿ ಒಂದು ಸಂಶಯನಿರುವುದು. ಆ ಸಂಶಯವನ್ನು ನೀನೇ ಹೋಗಲಾಡಿಸಬೇಕು. ನಿನ್ನ ಹೊರತು ಇನ್ನಾರೂ ಆ ಸಂಶ ಯವನ್ನು ಹೋಗಲಾಡಿಸಲು ಸಮರ್ಥರಲ್ಲ.

೯೯—೧೦೨. ಋಷಿಯಿಂದ ಶಪಿಸಲ್ಪಟ್ಟ ಸಾಧ್ವಿಯಾದ ಈ ನನ್ನ ಪತ್ನಿಯು ವಿಕಾರವಾದ ವೇಷ ಮತ್ತು ಆಕಾರವನ್ನು ಧರಿಸಿದ ಶಂಕರನಿಂದ ಕಾಮಿಸಲ್ಪಟ್ಟಳು. ಆಗ ಶಂಕರನಿಗೆ ಆ ಕೂಡಲೇ ಈ ಪುತ್ರರೀರ್ವರು ಜನಿಸಿದರು. ಈ ವಿಷಯದಲ್ಲಿ ನನ್ನ ಮನಸ್ಸಿನಲ್ಲೊಂದು ಸಂಶಯವು ಉಂಟಾಗಿ ಅದು ಸದಾ ಕೊರಯುತ್ತಿರುವುದು. ಶಂಕರನು ಪರ್ವತಪುತ್ರಿಯಾದ ಗಿರಿಜೆಯನ್ನು ಹೊರತು ಇನ್ನಾವ ಸ್ತ್ರೀಯಳನ್ನೂ ಕಾಮಿಸುವವನಲ್ಲವಷ್ಟೆ. ಹೀಗಿದ್ದು ಅವನು ನೀಚವಾದ ಮನುಷ್ಯಜಾತಿಯಲ್ಲಿ ಜನಿಸಿದ ಈ ಮನುಷ್ಯಸ್ತ್ರೀಯೊಡನೆ ಸೇರಿದ ಬಗೆಯೆಂತು? ತನ್ನ ಪುತ್ರರನ್ನು ಆ ಶಂಕರನು ಮನುಷ್ಯಯೋನಿಯಲ್ಲಿ ಹೇಗೆ ಉತ್ಪಾಸಿದನು? ಇದೆಲ್ಲವನ್ನೂ ರಹಸ್ಯವಲ್ಲದಿದ್ದರೆ ನನಗೆ ಹೇಳುವವನಾಗು.

॥ ಔರ್ವ ಉವಾಚ ॥

ಇತಿ ಪೃಷ್ಟಃ ಸ ತು ಮುನಿಃ ಚಂದ್ರಶೇಖರಭೂಭೃತಾ ।
ಕಥಯಾಮಾಸ ತತ್ಸರ್ವಂ ನಾರದೋ ಮುನಿಸತ್ತಮಃ ॥ ೧೦೩ ॥

ಯಥಾ ಭೃಂಗಿಮಹಾಕಾಲೌ ಸಮುತ್ಪನ್ನೌ ಪುರಾತನೌ ।
ಯಥಾ ಶಪ್ತೌ ಚ ಪಾರ್ವತ್ಯಾ ತೌ ಚೋದಾಹರತಾಂ ಯಥಾ ॥ ೧೦೪ ॥

ಯಥಾ ಪೌಷ್ಯಸುತೋ ಜಾತೋ ಭಗ್ನಃ ಸ ಚಂದ್ರಶೇಖರಃ ।
ತಾರಾವತೀ ಕಕುತ್ಸ್ಥಸ್ಯ ಗೃಹೇ ಗೌರೀ ಯಥಾಽಭವತ್ ॥ ೧೦೫ ॥

ತತ್ಸರ್ವಂ ಕಥಯಾಮಾಸ ನಾರದಶ್ಚಂದ್ರಶೇಖರೇ ।
ಇದಂ ಚ ಪ.ಮಾಖ್ಯಾನಂ ಕಥಯಾಮಾಸ ನಾರದಃ ॥ ೧೦೬ ॥

॥ ನಾರದ ಉವಾಚ ॥

ವ್ಯಾಜಹಾರ ಯದಾಽಪರ್ಣಾಂ ಕಾಲೀತಿ ವೃಷವಾಹನಃ ।
ತದೋಮಾ ತಪಸೇ ಯಾತಾ ವಪುರ್ಗೌರತ್ವಕಾಂಕ್ಷಯಾ ॥ ೧೦೭ ॥

---

೧೦೩. ಹೀಗೆ ಚಂದ್ರಶೇಖರರಾಜನು ಪ್ರಶ್ನಿಸಲು ನಾರದಮುನಿಶ್ರೇಷ್ಠನು ಅದೆಲ್ಲವನ್ನೂ ಆ ರಾಜನಿಗೆ ಹೇಳಿದನು.

೧೦೪-೧೦೫. ಪುರಾತನರಾದ ಭೃಂಗಿ ಮತ್ತು ಮಹಾಕಾಲರು ಹೇಗೆ ಜನಿಸಿದರೆಂಬ ವಿಷಯವನ್ನೂ, ಅವರನ್ನು ಪಾರ್ವತಿಯು ಹಿಂದೆ ಶಪಿಸಿದುದನ್ನೂ, ತಿರುಗಿ ಅವರು ಪಾರ್ವತಿಗೆ ಪ್ರತಿಶಾಪವನ್ನು ಕೊಟ್ಟುದುದನ್ನೂ, ನಂತರ ಶಂಕರನು ಪೌಷ್ಯ ರಾಜಪುತ್ರನಾದ ಚಂದ್ರಶೇಖರವಾಗಿ ಜನಿಸಿದುದನ್ನೂ, ಕಕುತ್ಸ್ಥರಾಜನ ಮನೆಯಲ್ಲಿ ಪಾರ್ವತಿಯು ತಾರಾವತಿಯಾಗಿ ಜನಿಸಿದುದನ್ನೂ ಹೇಳಿದನು.

೧೦೬. ಅದೆಲ್ಲವನ್ನೂ ಹೇಳಿ ನಾರದಮುನಿಯು ಚಂದ್ರಶೇಖರರಾಜನಿಗೆ ಉತ್ಕೃಷ್ಟವಾದ ಒಂದು ಆಖ್ಯಾನವನ್ನೂ ಹೇಳಿದನು.

೧೦೭. ನಾರದಮುನಿಯು ಹೇಳಿದನು:—ಹಿಂದೆ ಶಂಕರನೊಮ್ಮೆ ಪಾರ್ವತಿಯನ್ನು ಕಾಳಿ (ಕಪ್ಪುಬಣ್ಣವುಳ್ಳವಳು) ಎಂದು ಸಂಬೋಧಿಸಿದನು. ಆಗ ಪಾರ್ವತಿಯು ಕೋಪಗೊಂಡು ತನ್ನ ಶರೀರವು ಗೌರವರ್ಣವಾಗಬೇಕೆಂಬ ಅಪೇಕ್ಷೆಯಿಂದ ತಪಸ್ಸಿಗೆ ಹೊರಟಳು.

ಅಮುರ್ಷಯುಕ್ತಾ ವಚನಾಚ್ಛಂಕರಸ್ಯ ಗಿರೇಃ ಸುತಾ ।
ವಿನೀಯಮಾನಾ ಭರ್ಗೇಣ ಸಾನುಂ ಹಿಮವತೋ ಗಿರೇಃ ॥ ೧೦೪ ॥

ತಸ್ಯಾಂ ಗತಯಾಂ ಪಾರ್ವತ್ಯಾಂ ಶಂಕರೋ ವಿರಹಾರ್ದಿತಃ ।
ಕೈಲಾಸಾದ್ರಿಂ ಪರಿತ್ಯಜ್ಯ ಮೇರುಪೃಷ್ಠಂ ತದಾ ಯಯೌ ॥ ೧೦೯ ॥

ತತ್ರಾಪಿ ಶರ್ಮ ನೋ ಲೇಭೇ ಪಾರ್ವತ್ಯಾ ಚ ವಿನಾಕೃತಃ ।
ಮೋಹಿತಃ ಕಾಮದೇವೇನ ತಥಾ ವೈ ಯೋಗನಿದ್ರಯಾ ॥ ೧೧೦ ॥

ಅಥೈಕದಾ ಮೇರುಪೃಷ್ಠೇ ಚರಂತೀಂ ಸುಮನೋಹರಾಂ ।
ಸಾವಿತ್ರೀಂ ದದೃಶೇ ಶಂಭುಃ ಪಾರ್ವತ್ಯಾ ಸದೃಶೀಂ ಗುಣೈಃ ॥ ೧೧೧ ॥

ತಾಂ ದೃಷ್ಟ್ವಾ ಮದನಾವಿಷ್ಟಃ ಪಾರ್ವತೀವಿರಹಾರ್ದಿತಃ ।
ಅವಿದ್ಯಯಾ ಸಮಾವಿಷ್ಟೋ ಬಭೂವ ಪ್ರಾಕೃತೋ ಯಥಾ ॥ ೧೧೨ ॥

೧೦೪-೧೦೯. ಶಂಕರನ ಮಾತಿನಿಂದ ಕೋಪಿಸಿಕೊಂಡ ಆ ಪಾರ್ವತಿಯು, ಶಂಕರನು ಎಷ್ಟುಹೇಳಿದರೂ ಶಾಂತಳಾಗದೆ ತಪಸ್ಸಿಗಾಗಿ ಹಿಮಾಲಯದ ತಪ್ಪಲಿಗೆ ತೆರಳಲು, ಶಂಕರನು ಅವಳ ವಿಯೋಗದಿಂದ ದುಃಖಿತನಾಗಿ ಕೈಲಾಸವನ್ನು ಬಿಟ್ಟು ಮೇರುಪರ್ವತದ ತಪ್ಪಲಿಗೆ ಹೋದನು.

೧೧೦. ಅಲ್ಲಿಯೂ ಸಹ ಪಾರ್ವತೀ ವಿರಹದಿಂದ ಶಂಕರನು ದುಃಖಿತನಾಗಿ ಮನ್ಮಥನಿಂದಲೂ, ವಿಷ್ಣುಮಾಯೆಯಿಂದಲೂ ಮೋಹಗೊಳಿಸಲ್ಪಟ್ಟು ಸುಖವನ್ನು ಪಡೆಯಲಿಲ್ಲ.

೧೧೧-೧೧೨. ಆಮೇಲೊಂದುದಿನ ಆ ಮೇರುಪರ್ವತದ ತಪ್ಪಲಲ್ಲಿ ಪಾರ್ವತಿಯಂತೆ ಸೌಂದರ್ಯ ಮತ್ತು ರೂಪಗಳುಳ್ಳವಳೂ, ಮನೋಹರಳೂ ಆದ ಸಾವಿತ್ರಿಯು ಅಲ್ಲಿ ಸಂಚರಿಸುತ್ತಿರುವುದನ್ನು ಆ ಶಂಕರನು ನೋಡಿ, ಪಾರ್ವತೀ ವಿರಹದಿಂದ ದುಃಖಿತನೂ, ವಿಷ್ಣುಮಾಯೆಯಿಂದ ಮೋಹಿತನೂ ಆಗಿ, ಸಾಮಾನ್ಯ ಮನುಷ್ಯನಂತೆ ಮನ್ಮಥ ವಿಕಾರವುಳ್ಳವನಾದನು.

ಅಥ ತಾಂ ಪಾರ್ವತೀಭ್ರಾಂತ್ಯಾ ಚರಂತೀಮನ್ವಧಾವತ ।
ಏಹಿ ಮಾಂ ಪಾರ್ವತಿ ಶುಭೇ ಭವದ್ವಿರಹಪೀಡಿತಂ ॥ ೧೧೩ ॥

ಪ್ರಹರತ್ಯೇಷ ಮಾಂ ಕಾಮಃ ಪೂರ್ವವೈರಮನುಸ್ಮರ್ಯ ।
ಮಮ ತತ್ರ ಪ್ರತೀಕಾರಂ ಕುರು ಸಂಪ್ರತಿ ವಲ್ಲಭೇ ॥ ೧೧೪ ॥

ಇತ್ಯುಕ್ತ್ವಾ ವಿಮುಖೀಂ ಯಾಂತೀಂ ಸಾವಿತ್ರೀಂ ವೃಷಭಧ್ವಜಃ ।
ಸ್ಕಂಧೇ ಹಸ್ತೇನ ಪಸ್ಪರ್ಶ ಸಾ ಚುಕೋಪ ತತೋ ಭೃಶಂ ॥ ೧೧೫ ॥

ಅಥ ಸಾ ಸಂಮುಖೀ ಭೂತ್ವಾ ಸಾವಿತ್ರ್ಯತಿಪತಿವ್ರತಾ ।
ಇದಮಾಹ ಮಹಾದೇವಂ ಗರ್ಹಯಂತೀ ವೃಷಧ್ವಜಂ ॥ ೧೧೬ ॥

ಕಿಂ ತ್ವಂ ಪಶುಪತೇ ಮೂರ್ಖ ಮಾನುಷಃ ಪ್ರಾಕೃತೋ ಯಥಾ ।
ನಿರಸ್ಯ ಕಲಹೈರ್ಭಾರ್ಯಾಮನುನೇತುಮಿಹಾರ್ಹಸಿ ॥ ೧೧೭ ॥

ವಿಮೂಢಚೇತನಃ ಕಾಮೈರ್ನಸಂಸ್ತೌಷಿ ಪರಸ್ತ್ರಿಯಂ
ಅಸಂಸ್ತುತ್ವಾಪಿ ಸಂಸ್ಪ್ರಷ್ಟುಂ ಮಾದೃಶೀಂ ಯುಜ್ಯತೇ ತವ ॥ ೧೧೮ ॥

೧೧೩—೧೧೫. ಆಮೇಲೆ ಶಂಕರನು ಆ ಸಾವಿತ್ರಿಯನ್ನು ಪಾರ್ವತಿಯೆಂಬ ಭ್ರಾಂತಿಯಿಂದ ಅನುಸರಿಸಿಹೋಗಿ ಹೀಗೆ ಹೇಳಿದನು. ಎಲೌ ಪಾರ್ವತಿಯೇ! ನಿನ್ನ ವಿರಹದಿಂದ ದುಃಖಿತನಾದ ನನ್ನಲ್ಲಿ ಬಾ. ನಾನು ತುಂಬಾ ದುಃಖಪಡುತ್ತಿರುವೆನು. ನನ್ನ ಸಮೀಪಕ್ಕೆ ಬಂದು ನನ್ನನ್ನು ಸಂತೋಷಗೊಳಿಸು. ಹಿಂದಿನ ದ್ವೇಷವನ್ನು ಸ್ಮರಿಸಿ ಈ ಮನ್ಮಥನು ನನ್ನನ್ನು ಈಗ ಪ್ರಹರಿಸುತ್ತಲಿರುವನು. ಎಲೌ ಪ್ರಿಯೇ! ನೀನು ಬಂದು ಸೇರಿ ಆ ಮನ್ಮಥನಿಗೆ ಪ್ರತೀಕಾರವನ್ನು ಮಾಡುವವಳಾಗು ಎಂದು ಹೇಳಿ ವಿಮುಖಳಾಗಿ ಹೋಗುತ್ತಲಿರುವ ಆ ಸಾವಿತ್ರಿಯ ಹೆಗಲಿನ ಮೇಲೆ ಶಂಕರನು ತನ್ನ ಕೈಯ್ಯನ್ನಿಟ್ಟನು.

೧೧೬—೧೧೮. ಇವನ್ನು ಕಂಡು ಮಹಾಪತಿವ್ರತೆಯಾದ ಆ ಸಾವಿತ್ರಿಯು ಕುಪಿತಳಾಗಿ ಶಂಕರನಿಗೆ ಎದುರಾಗಿ ನಿಂತು, ಅವನನ್ನು ನಿಂದಿಸುತ್ತಾ ಎಲ್ಲೈ ಪಶುಪತಿ! ಮೂರ್ಖನೂ, ಅನಾಗರಿಕನೂ ಆದ ಮನುಷ್ಯನಂತೆ ನೀನು ನಿನ್ನ ಹೆಂಡತಿಯನ್ನು ಜಗಳವಾಡಿ ಹೊರದೂಡಿ, ಇಲ್ಲಿ ನನ್ನ ಬಳಿ ಬಂದು ಅನುನಯ ಮಾಡುವೆಯಾ? ಕಾಮದಿಂದ ಮೂಢನಾಗಿ ನಾನು ಪರಸ್ತ್ರೀಯೆಂಬುದೂ ನಿನಗೆ ತಿಳಿಯಲಿಲ್ಲವೇ?

ಕಿಮುಪಂ ಪಾರ್ವತೀ ಮೂಢ ಯೇನ ಮುತ್ಸ್ಕಂಧದೇಶತಃ ।
ಹಸ್ತಂ ದಾಸ್ಯಸಿ ವಿಜ್ಞಾಯ ಸಾವಿತ್ರೀಂ ವಿದ್ಧಿ ಮಾಂ ಸತೀಂ ॥ ೧೧೯ ॥

ಯಸ್ಮಾನ್ಮಾನುಷವನ್ಮಾಂ ತ್ವಮಾನುಜಾನಾಸಿ ಬರ್ಬರ ।
ತಸ್ಮಾತ್ತ್ವಂ ಮಾನುಷೀಯೋನ್ಯಾಂ ಸುರತಂ ಸಂವಿಧಾಸ್ಯಸಿ ॥ ೧೨೦ ॥

ಗೌರೀಮೃತೇ ನಾನ್ಯಕಾಂತಸ್ತ್ವಮನ್ಯಾಂ ತು ಸಮಿಹಸೇ ।
ತಸ್ಯೈ ತತ್ಫಲಿತಂ ಭರ್ಗ ಗಚ್ಛ ಮಾಂ ತ್ವಂ ಪರಿತ್ಯಜ ॥ ೧೨೧ ॥

ಇತ್ಯುಕ್ತ್ವಾ ಸಾ ಗತಾ ದೇವೀ ಸ್ವಮಾಶ್ರಮಪದಂ ಸತೀ ।
ಲಜ್ಜಾವಿಸ್ಮಯಸಂಯುಕ್ತೋ ಹರೋಪ್ಯಾಯಾನ್ನಿಜಾಶ್ರಮಂ
॥ ೧೨೨ ॥

ಅತೋಽಯಂ ಮಾನುಷೀಯೋನೌ ಸುರತಂ ಶಂಕರೋಽಕರೋತ್ ।
ತಸ್ಮಾನ್ನಿಃಸಂಶಯಂ ರಾಜನ್ನಿಮಾಂ ತಾರಾವತೀಂ ಸತೀಂ ॥ ೧೨೩ ॥

ಹಾಗೆ ತಿಳಿಯದೇ ಇದ್ದರೂ ನನ್ನಂಥ ಪತಿವ್ರತೆಯನ್ನು ನೀನು ಮುಟ್ಟುವುದು ಯೋಗ್ಯವೇ ? ಎಲೈ ಮೂಢನೇ ! ನಾನು ಪಾರ್ವತಿಯೆಂದು ತಿಳಿದು ನನ್ನ ಭುಜದ ಮೇಲೆ ಕೈಯನ್ನಿಟ್ಟಿಯಷ್ಟೆ. ಆದರೆ ನಾನು ಪಾರ್ವತಿಯೇನೂ ಅಲ್ಲ ನೋಡು. ನಾನು ಪತಿವ್ರತೆಯಾದ ಸಾವಿತ್ರಿಯೆಂದು ತಿಳಿ. ಎಲೈ ಮೂರ್ಖ ! ನೀಚಮನುಷ್ಯನಂತೆ ನನ್ನನ್ನು ನಿನ್ನ ಪತ್ನಿಯೆಂದು ಭ್ರಾಂತಿಗೊಂಡು ಆಚರಿಸಿದುದರಿಂದ ನೀನು ಮನುಷ್ಯ ಸ್ತ್ರೀಯಲ್ಲಿ ಕಾಮಕ್ರೀಡೆಯನ್ನು ಆಚರಿಸುವಂತಾಗಲಿ. ಪಾರ್ವತಿಯೋರ್ವಳೇ ನಿನಗೆ ಕಾಂತೆಯು. ಆದರೂ ನೀನು ಈಗ ನನ್ನನ್ನು ಬಯಸುತ್ತಿರುವೆ. ಈ ನಿನ್ನ ಬಯಕೆಗೆ ಇದೇ ತಕ್ಕ ಫಲವು. ನನ್ನನ್ನು ಬಿಟ್ಟು ಹೊರಟುಹೋಗು ಎಂದು ಕೋಪದಿಂದ ಹೇಳಿ ಸಾಧ್ವಿಯಾದ ಆ ಸಾವಿತ್ರೀದೇವಿಯು ತನ್ನ ಆಶ್ರಮಕ್ಕೆ ತೆರಳಿದಳು. ಲಜ್ಜೆ ಆಶ್ಚರ್ಯ ಇವುಗಳಿಂದ ಕೂಡಿ ಶಂಕರನೂ ಸಹ ತನ್ನ ಆಶ್ರಮಕ್ಕೆ ಬಂದನು.

೧೨೩. ಆದುದರಿಂದ ಆ ಶಂಕರನು ಮನುಷ್ಯಸ್ತ್ರೀಯಳಾದ ತಾರಾವತಿಯಲ್ಲಿ ಕಾಮಕ್ರೀಡೆಯನ್ನು ಮಾಡಿರುವನು. ಆದಕಾರಣ ಎಲೈ ರಾಜನೇ ! ಸಂಶಯವನ್ನು ಬಿಟ್ಟು, ಪತಿವ್ರತೆಯಾದ ಈ ತಾರಾವತಿಯಲ್ಲಿ ದಯೆಯುಳ್ಳವನಾಗು. ಶಂಕರಪುತ್ರರಾದ ಈ ಬಾಲಕರನ್ನೂ ಸಲಹು.

ದಯಸ್ವ ತನಯಾವೇತೌ ಭರ್ಗಸ್ಯ ಪರಿಪಾಲಯ ।

॥ ಔರ್ವ ಉವಾಚ ॥

ತತಃ ಸ ರಾಜಾ ಶ್ರುತ್ವೈವ ನಾರದಸ್ಯ ಮುಖಾತ್ತದಾ ॥ ೧೨೪ ॥

ಆತ್ಮನಃ ಶಂಭುರೂಪತ್ವಂ ಗೌರೀ ತಾರಾವತೀತಿ ಚ ।
ಮನುಷ್ಯಯೋನಾವುತ್ಪನ್ನಾವಮಾವೃಷಭಕೇತನೌ ॥ ೧೨೫ ॥

ಶ್ರುತ್ವಾ ಹಿ ಹರ್ಷಿತೋ ರಾಜಾ ವಿಸ್ಮಿತೋ ನಾರದಂ ಪುನಃ ।
ಪಪ್ರಚ್ಛ ಮುನಿಶಾರ್ದೂಲಂ ವಿಜ್ಞಾತುಮಿತಿಚಾತ್ಮನಃ ॥ ೧೨೬ ॥

ಶಂಕರತ್ವಂ ಚ ಗೌರೀತ್ವಂ ತಾರಾವತ್ಯಾಃ ಸಮುಕ್ಷತಃ ।
ಯಥಾಹಂ ತನ್ನ ಪಶ್ಯಾಮಿ ತನ್ಮಾಂ ಜ್ಞಾಪಯ ನಿಶ್ಚಿತಂ ॥ ೧೨೭ ॥

॥ ನಾರದ ಉವಾಚ ॥

ಅಂಕೇ ತಾರಾವತೀಂ ಕೃತ್ವಾ ಅಕ್ಷಿಣೀ ತ್ವಂ ನಿಮೀಲಯ ।
ಕ್ಷಣಂ ತಾರಾವತೀ ಚಾಪಿ ನಿಮೀಲಯತು ಚಕ್ಷುಷೀ ॥ ೧೨೮ ॥

೧೨೪—೧೨೭. ಔರ್ವಮುನಿಯು ಹೇಳಿದನು:—ಹೀಗೆ ನಾರದಮುನಿಯ ಮಾತಿನಿಂದ ತಾನೂ, ತಾರಾವತಿಯೂ ಸಹ ಮನುಷ್ಯರೂಪದಿಂದ ಜನಿಸಿದ ಶಂಕರ ಪಾರ್ವತಿಯರೆಂದು ತಿಳಿದು, ಆಶ್ಚರ್ಯಪಟ್ಟು, ತುಂಬಾ ಹರ್ಷಗೊಂಡನು. ಅನಂತರ ಅವನು ತನ್ನ ಮತ್ತು ತಾರಾವತಿಯ ನಿಜವಾದ ರೂಪವನ್ನು ತಿಳಿಯಲೋಸುಗ ಮುನಿ ಶ್ರೇಷ್ಠನಾದ ನಾರದನನ್ನು ಕುರಿತು, ಓ ಮುನಿಯೇ! ನಾನೂ, ತಾರಾವತಿಯೂ ಶಂಕರಪಾರ್ವತಿಯರ ರೂಪಗಳೆಂಬುದನ್ನು ನಾನು ಪ್ರತ್ಯಕ್ಷವಾಗಿ ತಿಳಿದಿಲ್ಲ. ಅದನ್ನು ನಾನು ಪ್ರತ್ಯಕ್ಷತಃ ನಿಶ್ಚಯವಾಗಿ ತಿಳಿಯುವಂತೆ ಅನುಗ್ರಹಿಸು ಎಂದು ಕೇಳಿದನು.

೧೨೮–೧೨೯. ನಾರದಮುನಿಯು ಹೇಳಿದನು:—ಎಲೈ ರಾಜನೇ! ತಾರಾವತಿಯನ್ನು ನಿನ್ನ ತೊಡೆಯಮೇಲೆ ಕೂರಿಸಿಕೊಂಡು, ನಿನ್ನ ಕಣ್ಣುಗಳನ್ನು ಮುಚ್ಚಿಕೊ. ತಾರಾವತಿಯೂ ಸ್ವಲ್ಪಹೊತ್ತು ತನ್ನ ಕಣ್ಣುಗಳನ್ನು ಮುಚ್ಚಿಕೊಳ್ಳಲಿ. ಹಾಗೆ ಕಣ್ಣು

ನಿಮೀಲ್ಯ ಪಶ್ಚಾದ್ಯಾಚೇಂದ್ರ ಉನ್ಮೀಲಯ ತತೋ ದ್ರುತಂ ।
ತತಸ್ತೇ ಶಾಂಭವಂ ಜ್ಞಾನಂ ರೂಪಂ ಚಾಪಿ ಭವಿಷ್ಯತಿ ॥ ೧೨೯ ॥

ಇತ್ಯುಕ್ತೋ ನಾರದೇನಾಥ ಸ ರಾಜಾ ಚಂದ್ರಶೇಖರಃ ।
ವಾಮೇನ ಪಾಣಿನಾ ಧೃತ್ವಾ ದೇವೀಂ ತಾರಾವತೀಂ ಸತೀಂ ॥ ೧೩೦ ॥

ಚಕ್ಷುಷೀ ಚ ತಯಾ ಸಾರ್ಧಂ ನಿಮೀಲ್ಯೋನ್ಮೀಲ್ಯ ತತ್ಕ್ಷಣಾತ್ ।
ತನ್ನಿಮೀಲನಕಾಲೇ ತು ತಸ್ಯಾಭೂಚ್ಚಂಭುರೂಪತಾ ॥ ೧೩೧ ॥

ಗೌರೀರೂಪಾಭವದ್ದೇವೀ ತತಸ್ತಾರಾವತೀ ಸತೀ ।
ಅಹಂ ಶಂಭುರಹಂ ಗೌರೀತಿ ವಿಜ್ಞಾನಂ ತಯೋರಭೂತ್ ॥ ೧೩೨ ॥

ತತಃ ಪ್ರೋವಾಚ ತಂ ಶಂಭುಂ ನಾರದಃ ಪ್ರಹಸನ್ನಿವ ।
ಶಂಭುಃ ಸಾಕ್ಷಾದ್ಭವಾನ್ ಗೌರೀ ದೇವೀ ತಾರಾವತೀ ಸ್ವಯಂ ॥ ೧೩೩ ॥

ಪ್ರತ್ಯಕ್ಷಂ ತೇ ಮಹಾಭಾಗ ಸಂಪಶ್ಯಾತ್ಮಾನಮಾತ್ಮನಾ ।
ತತೋ ರಾಜಾ ಭವತ್ವೇವಮಿತ್ಯುಕ್ತ್ವಾಽಥ ಸ್ವಕಾಂ ತನುಂ ॥ ೧೩೪ ॥

ಗಳನ್ನು ಸ್ವಲ್ಪ ಮುಚ್ಚಿ ಆ ಕೂಡಲೇ ತೆರೆದರೆ, ಆಗ ನಿನಗೆ ಶಂಕರನ ಜ್ಞಾನವೂ, ಶಂಕರನ ರೂಪವೂ ಉಂಟಾಗುವುವು.

೧೩೦—೧೩೨. ಹೀಗೆ ನಾರದಮುನಿಯು ಹೇಳಲು, ಆ ಚಂದ್ರಶೇಖರ ರಾಜನು ಎಡಗೈಯಿಂದ ಸಾಧ್ವಿಯಾದ ತಾರಾವತಿಯನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅವಳೊಡನೆ ಕಣ್ಣುಗಳನ್ನು ಸ್ವಲ್ಪ ಮುಚ್ಚಿ ತೆರೆದನು. ತೆರದೊಡನೆ ಅವನು ಶಂಕರರೂಪನಾದನು. ಸತಿಯಾದ ತಾರಾವತಿಯೂ ಸಹ ಪಾರ್ವತಿಯ ರೂಪವುಳ್ಳವಳಾದಳು. ನಾನು ಶಂಕರನು, ನಾನು ಗೌರಿಯು ಎಂಬ ಜ್ಞಾನವು ಆ ಚಂದ್ರಶೇಖರತಾರಾವತಿಯರಿಗೆ ಆಗ ಉದಯಿಸಿತು.

೧೩೩. ಆಗ ನಾರದಮುನಿಯು ಶಂಕರರೂಪನಾದ ಅವನನ್ನು ಕುರಿತು ಮಂದಹಾಸದಿಂದ, ಎಲೈ ಚಂದ್ರಶೇಖರರಾಜನೇ! ನೀನು ಸಾಕ್ಷಾತ್ ಶಂಕರನು. ತಾರಾವತೀದೇವಿಯು ಗೌರೀದೇವಿಯು. ಎಲೈ ಭಾಗ್ಯಶಾಲಿಯೇ! ನಿನ್ನ ಸ್ವರೂಪವನ್ನು ಪ್ರತ್ಯಕ್ಷವಾಗಿ ನೋಡಿಕೋ ಎಂದು ನುಡಿದನು.

೧೩೪—೧೩೬. ಅನಂತರ ರಾಜನು ಹಾಗೆಯೇ ಆಗಲೆಂದು ಹೇಳಿ, ತನ್ನ ಶರೀರವನ್ನೂ, ತನ್ನ ತೊಡೆಯ ಮೇಲೆ ಕುಳಿತಿರುವ ತಾರಾವತಿಯನ್ನೂ ನೋಡಿ

ವ್ಯಾಘ್ರಚರ್ಮಪರೀಧಾನಂ ದಶಭಿರ್ಬಾಹುಭಿರ್ಯುತಂ ।
ತ್ರಿಶೂಲಖಟ್ವಾಂಗಧರಂ ಶಕ್ತ್ಯಾದಿಧೃತಹಸ್ತಕಂ ॥ ೧೩೫ ॥

ವೃಷಭೋಪರಿಸಂಸ್ಥಂ ತು ಜಟಾಜೂಟವಿಭೂಷಿತಂ ।
ತಾರಾಂ ಚ ವಿದ್ಯುದ್ಗೌರಾಂಗೀಂ ಪದ್ಮಹಸ್ತಾಂ ಶುಭಾನನಾಂ ॥ ೧೩೬ ॥

ವೀಕ್ಷ್ಯ ಸಂಪ್ರತ್ಯಯಂ ಪ್ರಾಪ ಜ್ಞಾನೇನಾಪಿ ತದಾತ್ಮನಿ ।
ತತಸ್ತು ನಾರದಃ ಪ್ರಾಹ ಶೃಣು ರಾಜನ್ವಚೋ ಮಮ ॥ ೧೩೭ ॥

ನೃಯೋನೌ ವೈಷ್ಣವೀ ಮಾಯಾ ಯುವಾಂ ಪೂರ್ವಮಮೋಹಯತ್ ।
ತೇನ ತೇನ ಶರೀರೇಣ ಶಂಭುತ್ವಂ ನೇಕ್ಷಿತಂ ತ್ವಯಾ ॥ ೧೩೮ ॥

ಅಧುನಾ ದರ್ಶಿತಾ ತೇಽದ್ಯ ಶಂಭುನಾ ಶಂಭುರೂಪತಾ ।
ನಿಮೀಲ್ಯ ನಯನದ್ವಂದ್ವಂ ಪುನಸ್ತ್ವಂ ಯಾಹಿ ಮರ್ತ್ಯತಾಂ ॥ ೧೩೯ ॥

ದನು. ಆಗ ಅವನ ಶರೀರವು ವ್ಯಾಘ್ರಚರ್ಮದಿಂದ ಪರಿಚ್ಛಿನ್ನವಾಗಿದ್ದಿತು. ಹತ್ತು ಬಾಹುಗಳೂ, ಅವುಗಳಲ್ಲಿ ತ್ರಿಶೂಲ, ಖಟ್ವಾಂಗ, ಶಕ್ತ್ಯಾಯುಧ ಮೊದಲಾದವುಗಳೂ ಇದ್ದವು. ಶಿರಸ್ಸಿನಲ್ಲಿ ಬೆಳಗುತ್ತಿರುವ ಜಟಾಸಮೂಹದಿಂದ ಶೋಭಿಸುತ್ತಾ ವೃಷಭ ವನ್ನೇರಿ ಕುಳಿತಿರುವ ತನ್ನನ್ನು ನೋಡಿದನು. ಹಾಗೆಯೇ ತಾರಾವತಿಯೂ ವಿದ್ಯುತ್ತಿ ನಂತೆ ಅತಿ ಪ್ರಕಾಶಮಾನವಾದ ಗೌರವರ್ಣದ ಶರೀರಕಾಂತಿಯಿಂದ ಬೆಳಗುತ್ತಿರುವ ಪಾರ್ವತಿಯಾಗಿದ್ದಳು. ಕೈಯ್ಯಲ್ಲಿ ಕಮಲವನ್ನು ಧರಿಸಿ ಸುಂದರವಾದ ಮುಖದಿಂದ ಅತಿ ಮನೋಹರವಾಗಿದ್ದಳು. ಈರೀತಿಯಾಗಿರುವ ಪಾರ್ವತಿಯನ್ನೂ ಪ್ರತ್ಯಕ್ಷವಾಗಿ ನೋಡಿ ತಾವು ಸಾಕ್ಷಾತ್ ಪಾರ್ವತೀಪರಮೇಶ್ವರರೆಂಬ ವಿಚಾರದಲ್ಲಿ ದೃಢವಿಶ್ವಾಸ ವುಳ್ಳವನಾದರು.

೧೩೭—೧೪೦. ಅನಂತರ ನಾರದಮುನಿಯು ಪುನಃ ಅವನನ್ನು ಕುರಿತು ಎಲೈ ರಾಜನೇ! ನನ್ನ ಮಾತನ್ನು ಕೇಳುವವನಾಗು. ಮನುಷ್ಯರೂಪದಿಂದ ಇರು ವಾಗ ನಿಮ್ಮನ್ನು ವಿಷ್ಣುಮಾಯೆಯು ಮೋಹಗೊಳಿಸಿದ್ದಳು. ಆದುದರಿಂದ ಆ ಮನುಷ್ಯಶರೀರದಲ್ಲಿ ನಿನ್ನ ಶಂಕರಸ್ವರೂಪವನ್ನು ನೀನು ನೋಡಲಾರದವನಾಗಿದ್ದೆ. ಈಗ ಈ ಶಂಕರಶರೀರದಿಂದಲೇ ಶಂಕರಸ್ವರೂಪವು ನಿನಗೆ ತೋರಿಸಲ್ಪಟ್ಟಿತು. ಏರುಗಿ ನೀನು ಕಣ್ಣುಗಳನ್ನು ಮುಚ್ಚಿ, ಮನುಷ್ಯರೂಪವನ್ನು ಹೊಂದು. ಆ ರೂಪದಿಂದಲೇ

ಆಸಾದ್ಯ ಮಾನುಷಂ ಭಾವಮಾದೇಹಾಂತಂ ಸ್ಥಿರೋ ಭವ ।
ತಥಾ ತಾರಾವತೀ ದೇವೀ ತೂರ್ಣಂ ಭವತು ಮಾನುಷೀ ॥ ೧೪೦ ॥

॥ ಔರ್ವ ಉವಾಚ ॥

ಆತ್ಮನೋ ದೇವರೂಪತ್ವಂ ಜ್ಞಾತ್ವಾ ದೃಷ್ಟ್ವಾಥ ಚಕ್ಷುಷಾ ।
ಜಾತಸಂಪ್ರತ್ಯಯೋ ರಾಜಾ ನ್ಯಮೀಲಯತ ಲೋಚನೇ ॥ ೧೪೧ ॥

ತತಸ್ತಾರಾವತೀ ದೇವೀ ನ್ಯಮೀಲಯತ ಚಕ್ಷುಷೀ ।
ಪುನಸ್ತೌ ಮಾನವೌ ಜಾತೌ ಮಹಿಷೀ ನೃಪತಿಸ್ತಥಾ ॥ ೧೪೨ ॥

ಉನ್ಮೀಲ್ಯ ತೌ ತು ನೇತ್ರಾಣಿ ಮಾನುಷತ್ವಂ ತದಾತ್ಮನೋಃ ।
ದೃಷ್ಟ್ವಾ ಆವಾಂ ತಥಾ ಮರ್ತ್ಯಾವಿತಿ ಜ್ಞಾನಂ ತಯೋರಭೂತ್ ॥ ೧೪೩ ॥

ತತೋ ವಿಮೋಹಿತೌ ತೌ ತು ದಂಪತೀ ವಿಷ್ಣುಮಾಯಯಾ ।
ಅಹಂ ರಾಜಾ ಚ ಮಹಿಷೀ ಅಹಮಿತ್ಯಭವನ್ಮತಿಃ ॥ ೧೪೪ ॥

ಯಾವಜ್ಜೀವವೂ ಸ್ಥಿರವಾಗಿರು. ಹಾಗೆಯೇ ತಾರಾವತೀದೇವಿಯು ಕಣ್ಣುಗಳನ್ನು ಮುಚ್ಚಿಕೊಂಡು ಮನುಷ್ಯರೂಪವುಳ್ಳವಳಾಗಲಿ ಎಂದು ಹೇಳಿದನು.

೧೪೧-೧೪೨. ಔರ್ವಮುನಿಯು ಹೇಳಿದನು:-ಚಂದ್ರಶೇಖರರಾಜನು, ತಾನು ಮಹಾದೇವರೂಪನೆಂಬುದನ್ನು ತಿಳಿದು ಪ್ರತ್ಯಕ್ಷವಾಗಿಯೂ ನೋಡಿ, ದೃಢವಾದ ನಿಶ್ಚಯವುಳ್ಳವನಾದನು- ಬಳಿಕ ಕಣ್ಣುಗಳನ್ನು ಮುಚ್ಚಿದನು. ತಾರಾವತಿಯೂ ತನ್ನ ಕಣ್ಣುಗಳನ್ನು ಮುಚ್ಚಿಕೊಂಡಳು. ಕೂಡಲೇ ಅವರು ರಾಜಾ ಮತ್ತು ರಾಣಿಯ ರೂಪವಾದ ಮನುಷ್ಯಭಾವವನ್ನು ಹೊಂದಿದರು.

೧೪೩. ತಿರುಗಿ ಕಣ್ಣುಗಳನ್ನು ತೆರೆದಾಗ ಆ ಚಂದ್ರಶೇಖರತಾರಾವತಿಯರು ತಮ್ಮ ಪೂರ್ವದ ಮನುಷ್ಯರೂಪವನ್ನು ನೋಡಿದರು ಮತ್ತು ತಾವು ಮನುಷ್ಯರೆಂಬ ಜ್ಞಾನವುಳ್ಳವರಾದರು.

೧೪೪. ಅಲ್ಲದೆ ಅವರು ವಿಷ್ಣುಮಾಯೆಯಿಂದ ತಿರುಗಿ ಮೋಹಗೊಳಿಸಲ್ಪಟ್ಟು ತಾನು ಚಂದ್ರಶೇಖರರಾಜನು, ತಾನು ರಾಣಿಯಾದ ತಾರಾವತಿಯು ಎಂಬ ಬುದ್ಧಿಯುಳ್ಳವರಾದರು.

ತಸ್ಯಾಂ ಸುತೌ ತು ಜಾಯಾಯಾಂ ದೇವಾಂಶಾವಿತಿ ತನ್ಮತೀ ।
ಆವಾಂ ಸ್ಥಿತೌ ಕಲಾ ಮೂರ್ಧ್ನಿ ಅಭೂತಾಂ ಜಾತಚಿಹ್ನಿತೌ ॥ ೧೪೫ ॥

ತತಃ ಸ ರಾಜಾ ನ್ಯಗದತ್ತಂ ಮುನಿಂ ನಾರದಂ ಮುದಾ ।
ಸತ್ಯಮೇತತ್ತ್ವಯಾ ಪ್ರೋಕ್ತಂ ಕರಿಷ್ಯೇ ವಚನಂ ತವ ॥ ೧೪೬ ॥

ಪಾಲಯಿಷ್ಯೇ ಶಂಭುಪುತ್ರೌ ಸತ್ಯಲಭ್ಯೇ ಸದೈವ ಹಿ ।
ಕಿಂ ತ್ವೇತೌ ಮುನಿಶಾರ್ದೂಲ ತ್ವಂ ಸಂಸ್ಕುರು ಯಥಾವಿಧಿ ॥ ೧೪೭ ॥

॥ ಔರ್ವ ಉವಾಚ ॥

ತತಸ್ತಯೋರ್ನಾಮ ಚಕ್ರೇ ನಾರದೋ ವಚನಾನ್ನೃಪ ।
ಜ್ಯೇಷ್ಠೋ ಭೈರವನಾಮಾಭೂದ್ಭೀರೋಃ ಪುತ್ರೋ ಭಯಂಕರಃ ॥ ೧೪೯ ॥

ವೇತಾಲಸದೃಶಃ ಕೃಷ್ಣೋ ವೇತಾಲೋಽಭೂತ್ತಥಾಪರಃ ।
ಇತಿ ಚಕ್ರೇ ತಯೋರ್ನಾಮ ದೇವರ್ಷಿರ್ಬ್ರಹ್ಮಣಃ ಸುತಃ ॥ ೧೫೦ ॥

---

೧೪೫. ಅಲ್ಲವೆ ಆ ಪುತ್ರರೀರ್ವರು ತಾರಾವತಿಯಲ್ಲಿ ದೇವಾಂಶದಿಂದ ಜನಿಸಿರುವರು. ಆದುದರಿಂದಲೇ ಅವರ ಶಿರಸ್ಸಿನಲ್ಲಿ ಚಂದ್ರಕಲೆ ಇರುವುದು ಎಂದೂ ತಿಳಿದರು.

೧೪೬-೧೪೭. ಅನಂತರ ಚಂದ್ರಶೇಖರನು ನಾರದಮುನಿಯನ್ನು ಕುರಿತು ಸಂತೋಷದಿಂದ, ಓ ಮುನಿಯೇ ! ನೀನು ಹೇಳಿದುದೆಲ್ಲವೂ ನಿಜವು. ನಿನ್ನ ಮಾತಿನಂತೆ ಈ ಶಂಕರಪುತ್ರರನ್ನು ಅವಶ್ಯವಾಗಿ ಸಲಹುವೆನು. ಆದರೆ ನೀನು ಇವರಿಗೆ ಯಥಾವಿಧಿಯಾಗಿ ಸಂಸ್ಕಾರವನ್ನು ಮಾಡುವವನಾಗು ಎಂದು ಹೇಳಿದನು.

೧೪೮—೧೫೦. ಔರ್ವಮುನಿಯು ಹೇಳಿದನು :-ಅನಂತರ ನಾರದಮುನಿಯು ಚಂದ್ರಶೇಖರರಾಜನ ಮಾತಿನಂತೆ ಆ ಶಂಕರ ಪುತ್ರರೀರ್ವರಿಗೆ ನಾಮಕರಣವನ್ನು ಮಾಡಿದನು. ಪೆದರಿಕೊಳ್ಳುವವರಿಗೆ ಭಯಂಕರನಾಗಿ ಕಾಣುವ ಹಿರಿಯ ಕುಮಾರನಿಗೆ ಭೈರವನೆಂಬ ಹೆಸರನ್ನೂ, ವೇತಾಲದಂತೆ ಕಪ್ಪುಬಣ್ಣವುಳ್ಳ ಎರಡನೆಯ ಕುಮಾರನಿಗೆ ವೇತಾಲನೆಂದೂ ಹೆಸರಿಟ್ಟನು. ಹೀಗೆ ದೇವಮುನಿಯೂ, ಬ್ರಹ್ಮಪುತ್ರನೂ ಆದ

ಅನ್ಯಾಂಶ್ಚ ಸರ್ವಾನ್ಸಂಸ್ಕಾರಾನ್ಕಾರಯೋ ಮುನಿಸತ್ತಮಃ ।
ಚಕಾರ ಕ್ರಮಶೋ ವಾಕ್ಯಾಚ್ಚಂದ್ರಶೇಖರಭೂಭೃತಃ ॥ ೧೫೦ ॥

ಏವಂ ಸರ್ವಾನ್ಸಂಶಯಾಂಸ್ತು ಸಂಛಿದ್ಯ ಮುನಿಸತ್ತಮಃ ।
ಸಂಸ್ಕೃತ್ಯ ಭರ್ಗತನಯೌ ವಿಸೃಷ್ಟಸ್ತೇನ ಭೂಭೃತಾ ॥ ೧೫೧ ॥

ಯಾಯಾವಾಕಾಶಮಾರ್ಗೇಣ ನಾಕಪೃಷ್ಠಂ ಸ ನಾರದಃ ।
ನಾರದೇ ತು ಗತೇ ರಾಜಾ ಮುದಿತಶ್ಚಂದ್ರಶೇಖರಃ ॥ ೧೫೨ ॥

ತಾರಾವತ್ಯಾ ಸಮಂ ರೇಮೇ ಕರವೀರಾಹ್ವಯೇ ಪುರೇ ।
ಶಂಭೋರಂಶೋಽಹಮಿತ್ಯೇವಂ ಗೌರ್ಯಾಸ್ತಾರಾವತೀತಿ ಚ ॥ ೧೫೩ ॥

ಜಾತಶ್ರದ್ಧಸ್ತದಾ ರಾಜಾ ಶಶಾಸ ಸುಚಿರಂ ಕ್ಷಿತಿಂ ।
ತನಯೌ ಚ ಹರಸ್ಯಾಥ ತದಾ ವೇತಾಲಭೈರವೌ ॥ ೧೫೪ ॥

ನಾರದನು ಆ ಬಾಲಕರಿಗೆ ಯಥಾವಿಧಿಯಾಗಿ ನಾಮಕರಣಮಾಡಿ ಮಿಕ್ಕ ಎಲ್ಲಾ ಸಂಸ್ಕಾರಗಳನ್ನೂ ಕ್ರಮವಾಗಿ ಮಾಡಿದನು.

೧೫೦. ಹೀಗೆ ನಾರದಮುನಿಶ್ರೇಷ್ಠನು ಚಂದ್ರಶೇಖರನ ಸಂಶಯಗಳನ್ನು ಹೋಗಲಾಡಿಸಿ, ಶಂಕರಪುತ್ರರಿಗೆ ಸಂಸ್ಕಾರಗಳನ್ನೂ ಮಾಡಿ, ಆ ರಾಜನಿಂದ ಬೀಳ್ಕೊಂಡು ಆಕಾಶಮಾರ್ಗದಿಂದ ಸ್ವರ್ಗಕ್ಕೆ ಹೊರಟುಹೋದನು.

೧೫೨-೧೫೩. ನಾರದಮುನಿಯು ಹೊರಟುಹೋದಮೇಲೆ ಆ ಚಂದ್ರಶೇಖರ ರಾಜನು ತನ್ನ ರಾಜಧಾನಿಯಾದ ಆ ಕರವೀರಪುರದಲ್ಲಿ ತಾರಾವತಿಯೊಡನೆ ಸಂತೋಷದಿಂದ ವಿಹರಿಸುತ್ತಾ ತಾನು ಶಂಕರನ ಅಂಶವೆಂದೂ, ತಾರಾವತಿಯು ಗೌರಿಯ ಅಂಶವೆಂದೂ ನಿಶ್ಚಯವಾಗಿ ತಿಳಿದು ಬಹಳಕಾಲ ಭೂಮಿಯನ್ನು ಆಳುತ್ತಿದ್ದನು.

೧೫೪. ಶಂಕರಪುತ್ರರಾದ ವೇತಾಲಭೈರವರು ಶರದೃತುವಿನ ಶುಕ್ಲಪಕ್ಷದ ಚಂದ್ರನಂತೆ ದಿನದಿನವೂ ಬೆಳೆಯುತ್ತಿದ್ದರು.

ವವೃಧಾತೇ ಮಹಾತ್ಮಾನೌ ಶರಚ್ಚಂದ್ರಾವಿವೋದ್ಯತೌ ।
ಚಂದ್ರಶೇಖರಭೂಪಸ್ಯ ತಾರಾವತ್ಯಾಂ ನೃಪೋತ್ತಮ ॥ ೧೫೫ ॥

ತ್ರಯಃ ಪುತ್ರಾ ಮಹಾವೀರ್ಯಾ ರೂಪಸಂಪತ್ಸಮನ್ವಿತಾಃ ।
ಜ್ಯೇಷ್ಠಸ್ತತ್ರೋಪರಿಚರೋ ದಮನೋಽಲರ್ಕ ಏವ ಚ ॥ ೧೫೬ ॥

ವೇತಾಲಭೈರವಾಭ್ಯಾಂ ತು ಜ್ಯಾಯಾಂಸಸ್ತೇಽಭವಂಸ್ತ್ರಯಃ ।
ಏವಮೇತೇ ತ್ರಯಃ ಪುತ್ರಾಶ್ಚಂದ್ರಶೇಖರಭೂಭೃತಃ ॥ ೧೫೭ ॥

ವೇತಾಲಭೈರವೌ ಚಾಪಿ ಸದ್ಯೋ ಜಾತೌ ಹರಾತ್ಮಜೌ ।
ಸಮಾನಭೋಗಾ ವವೃಧುಃ ಚಂದ್ರಶೇಖರಭೂಭೃತಃ ॥ ೧೫೮ ॥

ಪಾಲಿತಾಸ್ತು ಸಭಾರ್ಯೇಣ ಸಮಾನಾಸನವಾಹನಾಃ ॥ ೧೫೯ ॥

೧೫೫-೧೫೬. ಎಲೈ ರಾಜಶ್ರೇಷ್ಠನೇ ! ಚಂದ್ರಶೇಖರರಾಜನಿಗೆ ತಾರಾವತಿಯಲ್ಲಿ ರೂಪಸೌಂದರ್ಯಗಳಿಂದ ಶೋಭಿಸುವವರೂ, ಮಹಾಬಲಶಾಲಿಗಳೂ ಆದ ಬೇರೆ ಮೂವರು ಪುತ್ರರು ಜನಿಸಿದ್ದರು. ಅವರಲ್ಲಿ ಉಪಚರನೆಂಬುವನು ಹಿರಿಯವನು. ದಮನ ಮತ್ತು ಅಲರ್ಕ ಎಂಬುವರು ಅವನಿಗಿಂತ ಕಿರಿಯವರು. ಆದರೆ ಅವರು ಮೂವರೂ ವೇತಾಲ ಭೈರವರಿಗಿಂತಲೂ ಹಿರಿಯರು.

೧೫೭. ಹೀಗೆ ಚಂದ್ರಶೇಖರರಾಜನ ಈ ಮೂವರು ಪುತ್ರರೂ, ರತಿಕ್ರೀಡೆಯ ಮರುಕ್ಷಣದಲ್ಲಿಯೇ ಜನಿಸಿದ ಶಂಕರಪುತ್ರರಾದ ವೇತಾಲ ಭೈರವರೂ ಸಹ ಸಮಾನವಾದ ಭೋಗವುಳ್ಳವರಾಗಿ ಬೆಳೆಯುತ್ತಿದ್ದರು.

೧೫೮-೧೫೯. ಚಂದ್ರಶೇಖರರಾಜನೂ, ಅವನ ಪತ್ನಿಯೂ ತಮ್ಮ ಈ ಐವರು ಮಕ್ಕಳಲ್ಲಿ ತಾರತಮ್ಯವಿಡದೆ ಆಸನ, ವಾಹನ, ಭೋಜನ ಮೊದಲಾದ ಉಪಚಾರಗಳಲ್ಲಿ ಎಲ್ಲರನ್ನೂ ಒಂದೇಸಮನಾಗಿ ಕಾಣುತ್ತಾ ಅವರನ್ನು ಪ್ರೀತಿಯಿಂದ ಸಲಹುತ್ತಿದ್ದರು.

ಇತಿ ಪಂಚಸುತಾ ಮಹಾಬಲಾಃ ।
ಪಂಚಭೂತಸದೃಶಾಃ ಕೃತಾ ವಿಧೇಃ ॥
ವವೃಧಿರೇ ಪ್ರಥಮಂ ಸಕಲಂ ಜಗತ್
ಸಮತೀತ್ಯ ಮುದಾ ಬಲದರ್ಪಿತಾಃ ॥ ೧೬೦ ॥

॥ ಇತಿ ಶ್ರೀಕಾಲಿಕಾಪುರಾಣೇ ದ್ವಿಪಂಚಾಶತ್ತಮೋಽಧ್ಯಾಯಃ ॥

---

೧೬೦. ಹೀಗೆ ಬ್ರಹ್ಮನಿಂದ ಸೃಷ್ಟವಾದ ಪಂಚಭೂತಗಳಂತಿರುವ ಆ ಐದು ಜನ ಮಹಾಬಲಶಾಲಿಗಳಾದ ಕುಮಾರರು ಬಾಲ್ಯದಲ್ಲಿಯೇ ಬಲದಿಂದ ಕೊಬ್ಬಿ ಜಗತ್ತೆಲ್ಲವನ್ನೂ ಅತಿಕ್ರಮಿಸಿ ಬೆಳೆದರು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಐವತ್ತೆರಡನೆಯ ಅಧ್ಯಾಯವು ಮುಗಿದುದು.

Printed by G. BASAPPA, Proprietor,
SREE BASAVESWARA ELECTRIC PRESS,
Devaraj Market Buildings, MYSORE.